ನವೋದಯ ಸಂದರ್ಭ

ಬೇಂದ್ರೆ - ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು

ಸಾಹಿತ್ಯ ಮತ್ತು ಪರಿಸರವನ್ನು ಕುರಿತ ಅಂತರ್ ಶಿಸ್ತೀಯ ಅಧ್ಯಯನ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಅಧ್ಯಯನ ಮಹಾಪ್ರಬಂಧ

ಸಂಶೋಧನಾ ಅಭ್ಯರ್ಥಿ
ಸಂಗೀತ .ಪಿ

ಮಾರ್ಗದರ್ಶಕ
ಡಾ. ಕೆ.ಸಿ. ಶಿವಾರೆಡ್ಡಿ

ಭಾಷಾಂತರ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬

೨೦೦೮

280

ನವೋದಯ ಸಂದರ್ಭ

ಬೇಂದ್ರೆ - ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು

ಸಾಹಿತ್ಯ ಮತ್ತು ಪರಿಸರವನ್ನು ಕುರಿತ ಅಂತರ್ ಶಿಸ್ತೀಯ ಅಧ್ಯಯನ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಅಧ್ಯಯನ ಮಹಾಪ್ರಬಂಧ

ಸಂಶೋಧನಾ ಅಭ್ಯರ್ಥಿ

ಸಂಗೀತ .ಪಿ

ಮಾರ್ಗದರ್ಶಕ

ಡಾ. ಕೆ.ಸಿ. ಶಿವಾರೆಡ್ಡಿ

ಭಾಷಾಂತರ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

೨೦೦೮

ಅರಣ್ಯವೆಂದರೆ ವಿಶಿಷ್ಟ ಜೀವಕೋಶ. ಅದು ತನಗಾಗಿ ಏನನ್ನೂ ಬೇಡದೆ, ಬೇಡಿ ಬಂದ ಎಲ್ಲರಿಗೂ ತನ್ನ ಅಸ್ತಿತ್ವವನ್ನೇ ಧಾರೆಯೆರೆಯುತ್ತದೆ. ಎಲ್ಲ ಜೀವಿಗಳಿಗೂ ಆಶ್ರಯ ನೀಡುತ್ತದೆ. ತನ್ನನ್ನು ಕಡಿಯಲು ಕೊಡಲಿ ತಂದವನಿಗೂ ನೆರಳು ನೀಡುತ್ತದೆ.

– ಗೌತಮ ಬುದ್ಧ

ಈ ಭೂಮಿಯ ಮೇಲೆ ಬದುಕಿರುವ ಪ್ರತಿಯೊಬ್ಬರಿಗೂ ಅಗತ್ಯವಾದದ್ದನ್ನು ಪ್ರಕೃತಿ ಕೊಡಬಲ್ಲುದು; ಆದರೆ ನಮ್ಮ ದುರಾಸೆಗಳನ್ನೆಲ್ಲ ಅದು ಪೂರೈಸಲಾರದು.

– ಮಹಾತ್ಮ ಗಾಂಧೀಜಿ

ದೃಢೀಕರಣ ಪತ್ರ

ಸಂಗೀತ ಪಿ. ಅವರು "**ನವೋದಯ ಸಂದರ್ಭ : ಬೇಂದ್ರೆ - ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು**" ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಈ ನಿಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ದಿನಾಂಕ : 9/7/08
ಸ್ಥಳ : ಕುಪ್ಪಳಿ

ಡಾ. ಕೆ.ಸಿ. ಶಿವಾರೆಡ್ಡಿ
ಕುವೆಂಪು ಕನ್ನಡ ಅಧ್ಯಯನ ಕೇಂದ್ರ
ಕುಪ್ಪಳಿ, ತೀರ್ಥಹಳ್ಳಿ ತಾಲ್ಲೂಕು
ಶಿವಮೊಗ್ಗ ಜಿಲ್ಲೆ

ಪ್ರಮಾಣ ಪತ್ರ

"ನವೋದಯ ಸಂದರ್ಭ : ಬೇಂದ್ರೆ - ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷೆ ಮತ್ತು ಸಾಹಿತ್ಯ ನಿಕಾಯಕ್ಕೆ ಸಲ್ಲಿಸಲು ಡಾ. ಕೆ.ಸಿ. ಶಿವಾರೆಡ್ಡಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಅಥವಾ ಇತರ ಉದ್ದೇಶಗಳಿಗಾಗಲೀ ಬಳಸಿಕೊಂಡಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಗೀತ .ಪಿ
ಸಂಶೋಧನಾ ಅಭ್ಯರ್ಥಿ
D/o. ಎಂ. ಪಿಳ್ಳಪ್ಪ
ಕಮ್ಮವಾರಪೇಟೆ, ಹೊಸಕೋಟೆ - ೫೬೨೧೧೪
ಬೆಂಗಳೂರು ಗ್ರಾಮಾಂತರ ಜಿಲ್ಲೆ

ಪರಿವಿಡಿ

ಅಧ್ಯಾಯ – ೧

ನವೋದಯ ಸಂದರ್ಭ :
ಬೇಂದ್ರೆ - ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು

೧. ಪ್ರವೇಶ, ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ
೨. ಪ್ರಕೃತಿ - ಪರಿಸರ ಅರ್ಥವ್ಯಾಪ್ತಿ

ನೋಡ ಸುಮ್ಮನೆ ನೋಡ ಮಾತಿಲ್ಲದೆಯೆ ನೋಡ
ಈ ದೃಶ್ಯ ಮಾಧುರ್ಯದಿದಿರಿನಲಿ ಕರ್ಕಶಂ
ಕವಿಯ ವಾಣಿಯು ಕೂಡ !
ನೋಡು ಸುಮ್ಮನೆ ನೋಡು ದೃಶ್ಯದಲಿ ತಲ್ಲೀನನಪ್ಪನ್ನೆಗಂ ನೋಡು !
ಅದರೊಳೊಂದಾಗುವುದೆ ಪರಮ ರಸಿಕತೆ ! ಅದಕೆ
ಮಿಗಿಲಿಹ ರಸಾನಂದ ಮತ್ತೆ ಬೇರೊಂದಿಲ್ಲ

– ಕುವೆಂಪು

ನವೋದಯ ಸಂದರ್ಭ :
ಬೇಂದ್ರೆ - ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು

೧. ಪ್ರವೇಶ, ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ರಾಷ್ಟ್ರ - ರಾಷ್ಟ್ರಗಳ ನಡುವಿನ ಯುದ್ಧಗಳು, ಭಯೋತ್ಪಾದನಾ ಚಟುವಟಿಕೆಗಳು, ಧಾರ್ಮಿಕ ಕಲಹಗಳಿಂದ ಏರ್ಪಡುವ ಕ್ರೌರ್ಯ, ಹಿಂಸೆಗಳು, ಪರಿಸರ ಸಮಸ್ಯೆಗಳು ಜಗತ್ತಿನಾದ್ಯಂತ ಉಲ್ಬಣಗೊಳ್ಳುತ್ತಿವೆ. ಪರಿಸರ ಸಮಸ್ಯೆ ಮಿಕ್ಕೆಲ್ಲಾ ಸಮಸ್ಯೆಗಳಿಗಿಂತ ಮಾರಕವಾಗಿ ಪರಿಣಮಿಸುತ್ತಿದೆ. ಇದು ಜಾಗತಿಕ ಮಟ್ಟದ ಜ್ವಲಂತ ಸಮಸ್ಯೆಯಾಗಿ ಪರಿಣಮಿಸಿದೆ. ಅಖಂಡ ಜೀವ ಸಮೃದ್ಧತೆಯನ್ನು ತನ್ನ ಹೊಟ್ಟೆಯಲ್ಲಿಟ್ಟುಕೊಂಡಿರುವ ಭೂಮಿ ದಿನೇ - ದಿನೇ ಬಿಸಿಯಾಗುತ್ತಿದೆ. ಗಾಳಿ, ನೆಲ, ಜಲಗಳ ಮಾಲಿನ್ಯದಿಂದ ಇಡೀ ಜಗತ್ತು ದುರಂತದ ಕಡೆಗೆ ಚಲಿಸುತ್ತಿದೆಯೋ ಎಂಬಂತಾಗಿದೆ.

ಸುಂದರವೂ, ಜೀವ ವೈವಿಧ್ಯತೆಯ ಆಗರವೂ ಆಗಿದ್ದ ಭೂಮಿ ಅತಿಯಾದ ಜನಸಂಖ್ಯಾ ಸ್ಫೋಟದಿಂದ ತನ್ನೆಲ್ಲಾ ಚೈತನ್ಯಶೀಲತೆಯನ್ನು ಕಳೆದುಕೊಳ್ಳುತ್ತಿದೆ. ಹಾಗಾಗಿ ಇಡೀ ಭೂಮಂಡಲದ ಮೇಲಿನ ಭೌತಿಕ ಹಾಗೂ ಜೈವಿಕ ಜಗತ್ತಿಗೆ ಅಳಿವು - ಉಳಿವಿನ ಪ್ರಶ್ನೆ ಎದುರಾಗಿದೆ. ಆದುದರಿಂದ ಜಗತ್ತಿನಾದ್ಯಂತ ಪರಿಸರ ಆಂದೋಲನ, ಅಧ್ಯಯನಗಳು ಬಿರುಸಾಗಿ ನಡೆಯುತ್ತಿವೆ. ಇದರ ಪರಿಣಾಮವಾಗಿ ಪರಿಸರವನ್ನು ಕುರಿತ ನಿಘಂಟುಗಳು, ಪುಸ್ತಕಗಳು, ಅಪಾರ ಪ್ರಮಾಣದಲ್ಲಿ ಪ್ರಕಟವಾಗುತ್ತಿವೆ. ಜೊತೆಗೆ ಎಲ್ಲಾ ಮಟ್ಟದಲ್ಲಿ ಪರಿಸರವನ್ನು ಕುರಿತು ಜನಜಾಗೃತಿಯನ್ನು ಉಂಟು ಮಾಡಲು ಆಯಾ ರಾಷ್ಟ್ರಗಳು ಅನೇಕ ಯೋಜನೆಗಳನ್ನು ರೂಪಿಸುತ್ತಿವೆ. ವಿಶ್ವ ವಿದ್ಯಾಲಯಗಳ ಮಟ್ಟಗಳಲ್ಲಿ ಗಂಭೀರ ಅಧ್ಯಯನಗಳು ನಡೆಯುತ್ತಿವೆ. ಶಾಲಾ ಕಾಲೇಜುಗಳ ಪಠ್ಯಗಳಲ್ಲಿ ಪರಿಸರವನ್ನು ಕುರಿತ ಪಾಠಗಳು ಸೇರ್ಪಡೆಗೊಳ್ಳುತ್ತಿವೆ. ಹಾಗೆಯೇ ಸಾರ್ವಜನಿಕ ಸ್ಥಳಗಳು, ನಿಲ್ದಾಣಗಳು, ವಾಹನಗಳು, ರಸ್ತೆಗಳ ಬದಿಗಳಲ್ಲಿ ಪರಿಸರ ಜಾಗೃತಿಯನ್ನು ಕುರಿತ ಸೂಕ್ತಿ, ಸಂದೇಶ, ಸೂಚನೆಗಳುಳ್ಳ ಸಾಹಿತ್ಯವನ್ನು ಪ್ರಕಟಿಸಿ ಅರಿವನ್ನು ಮೂಡಿಸಲಾಗುತ್ತಿದೆ. ಹಾಗಾಗಿ ಪರಿಸರ ಅಧ್ಯಯನಗಳು ಮುಂಚೂಣಿಗೆ ಬರುತ್ತಿವೆ. ಬೇರೆ - ಬೇರೆ ಜ್ಞಾನ ಶಾಖೆಗಳಿಗೂ ಈ ಅಧ್ಯಯನ ವಿಸ್ತರಿಸುತ್ತಿದೆ. ಸಾಹಿತ್ಯ ಮತ್ತು ಪರಿಸರ ಸಂಬಂಧಗಳನ್ನು ಕುರಿತ ಅಧ್ಯಯನವು ತುಂಬಾ ಮಹತ್ವವನ್ನು ಪಡೆದುಕೊಂಡು ಸಾಹಿತ್ಯ ಕೃತಿಗಳಲ್ಲಿ ಚಿಂತಿತವಾಗಿರುವ ಪರಿಸರ ತತ್ವವನ್ನು ಗುರುತಿಸಿಕೊಳ್ಳುವ ಪ್ರಯತ್ನಗಳು ಚುರುಕುಗೊಳ್ಳುತ್ತಿವೆ.

ಜಾಗತಿಕ ಮಟ್ಟದಲ್ಲಿ ಪರಿಸರ ಕಾಳಜಿಗಳು ಒಂದು ಅಧ್ಯಯನ ಶಿಸ್ತಾಗಿ ರೂಪುಗೊಳ್ಳುವುದಕ್ಕೂ ಮೊದಲು ಪರಿಸರ ಚಿಂತನೆ ಕನ್ನಡ ಸಾಹಿತ್ಯದ ಕೇಂದ್ರ ಆಯಾಮವಾಗಿ ಅಭಿವ್ಯಕ್ತಿಯ ವಸ್ತುವಾಗಿತ್ತು. ನವೋದಯ ಮತ್ತು

ಆನಂತರದ ಸಾಹಿತ್ಯವನ್ನು ನೋಡಿದಾಗ ಇದು ನಮ್ಮ ಗಮನಕ್ಕೆ ಬರುತ್ತದೆ. ಆದರೂ ಪರಿಸರವು ಮುಖ್ಯ ಸಮಸ್ಯೆಯಾಗಿ ಇಂದು ಕಾಣುತ್ತಿರುವಂತೆ ಮತ್ತೆಂದೂ ಕಾಣಿಸಿರಲಿಲ್ಲವೆಂಬುದನ್ನು ಚರಿತ್ರೆ ತಿಳಿಸುತ್ತದೆ. ಆದ್ದರಿಂದ ಪರಿಸರ ಚಿಂತನೆ ಈ ಹೊತ್ತು ಜಗತ್ತಿನ ಅಧ್ಯಯನದ ಪ್ರಮುಖ ವಲಯವಾಗಿದೆ. ಹಾಗಾಗಿ ಕನ್ನಡ ಪರಿಸರದಲ್ಲಿಯೂ ಸ್ಥಳೀಯ ಸಂವೇದನೆ ಚಿಂತಿಸಿದ ಪರಿಸರ ಚಿಂತನೆಯ ಮಾದರಿಗಳನ್ನು, ಆಶಯಗಳನ್ನು ಶೋಧಿಸಿಕೊಳ್ಳುವುದು ಈ ಅಧ್ಯಯನದ ಮುಖ್ಯ ಆಶಯ. ಇದು ಪರಿಸರ ಕಾಳಜಿಗಳಿಂದ ಅಧ್ಯಯನದೆಡೆಗೆ ಸಾಗುವ ಪ್ರಕ್ರಿಯೆಯಾಗಿದೆ.

ನವೋದಯ ಸಾಹಿತ್ಯ ಪರಿಸರದ ಮೇಲಿನ ಪ್ರೀತಿಯಿಂದ ಬೆಸೆದುಕೊಂಡಿದೆ ಎಂಬುದು ಮೇಲುನೋಟಕ್ಕೆ ಕಾಣುವ ಸಂಗತಿ. ಪರಿಸರದ ಪ್ರೀತಿ ಬದುಕಿನಲ್ಲಿ ತನ್ಮಯತೆ ಮತ್ತು ಪ್ರತಿರೋಧದ ಶಕ್ತಿಯನ್ನು ಒದಗಿಸಿಕೊಡುತ್ತದೆ. ಪರಿಸರವು ನವೋದಯ ಕವಿಗಳಿಗೆ ರೂಪಕಗಳ, ಪ್ರತಿಮೆಗಳ ಆಗರವಾಗಿದೆ. ಮೂಲತಃ ಇಕಾಲಜಿಯ ಬೇರುಗಳನ್ನು ರೊಮ್ಯಾಂಟಿಕ್ ಪರಿಕಲ್ಪನೆಯಲ್ಲಿ ಮತ್ತು ರೊಮ್ಯಾಂಟಿಕ್ ಧೋರಣೆಯ ಸಾಹಿತ್ಯ ಕೃತಿಗಳಲ್ಲಿ ಕಾಣಬಹುದಾಗಿದೆ. ಪರಿಸರವನ್ನು ಮೂಲವಾಗಿಟ್ಟುಕೊಂಡು ನವೋದಯ ಸಾಹಿತ್ಯ ಸಮಕಾಲೀನ ಬದುಕಿನ ಸ್ಥಿತಿಗತಿಗಳ ಬಗ್ಗೆ ಅಭಿವ್ಯಕ್ತಿಸುತ್ತದೆ. ಹಾಗೆಯೇ ನವೋದಯ ಕಾವ್ಯ ಪರಿಸರವನ್ನು ಎತ್ತಿ ಹಿಡಿದಿದೆ. ಪರಿಸರದ ಮೂಲಕವೇ ಅಭಿವ್ಯಕ್ತಗೊಳ್ಳುವ ನವೋದಯ ಸಾಹಿತ್ಯ ಕೇವಲ ಮಾತಿನ ಅಭಿವ್ಯಕ್ತಿಯಾಗಿರದೆ ಮನುಷ್ಯ ಮತ್ತು ಪರಿಸರ ಪ್ರಪಂಚದೊಂದಿಗಿನ ಭಾವನಾತ್ಮಕ ಹಾಗೂ ಸಂಘರ್ಷದ ಸಂವಹನವಾಗಿದೆ. ಈ ನಿಲುವುಗಳನ್ನು ನಾನು ಅಧ್ಯಯನಕ್ಕೆ ಆರಿಸಿಕೊಂಡಿರುವ ಬೇಂದ್ರೆ, ಕುವೆಂಪು ಅವರ ಕಾವ್ಯದ ಕೇಂದ್ರ ಧೋರಣೆಗಳಲ್ಲಿ ಕಾಣುತ್ತೇನೆ.

ಈ ಅಧ್ಯಯನವು ಬೇಂದ್ರೆ ಮತ್ತು ಕುವೆಂಪು ಅವರು ಪರಿಸರ, ಅಭಿವೃದ್ಧಿ, ಕೈಗಾರಿಕೀಕರಣ, ನಗರೀಕರಣ, ಯುದ್ಧ, ಜನಸಂಖ್ಯಾ ಸ್ಫೋಟ, ಕೃಷಿ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಪ್ರಕ್ರಿಯೆಯನ್ನು ಪ್ರಸ್ತುತಪಡಿಸುತ್ತದೆ. ಹಾಗೆಯೇ ಈ ಎರಡೂ ಪ್ರತಿಭೆಗಳ ಸಂವೇದನೆಗೆ ಒದಗಿಬಂದ ಭಾರತೀಯ ಹಾಗೂ ಜಾಗತಿಕ ಮಟ್ಟದ ಪ್ರೇರಣೆ, ಪ್ರಭಾವಗಳನ್ನು ಈ ಅಧ್ಯಯನ ಒಳಗು ಮಾಡಿಕೊಳ್ಳುತ್ತದೆ. ನವೋದಯದ ಆನಂತರದ ಬಹುಮುಖ್ಯ ಸಾಂಸ್ಕೃತಿಕ ಸಂವೇದನೆಗಳು ಪರಿಸರವನ್ನು ಕುರಿತು ಚಿಂತಿಸಿದ ಮಾದರಿಗಳನ್ನು ಅಧ್ಯಯನಕ್ಕೆ ಒಳಪಡಿಸುತ್ತದೆ. ಅಲ್ಲದೆ ಈ ಅಧ್ಯಯನ ಪರಿಸರವನ್ನು ಕುರಿತ ಹೋರಾಟದ ಕಥೆಯನ್ನಾಗಲೀ, ಪರಿಸರ ನಾಶದ ಅಂಕಿ ಸಂಖ್ಯೆಗಳನ್ನಾಗಲೀ ಕ್ರೋಢೀಕರಿಸುವುದರಲ್ಲಿ ತೊಡಗುವ ಉದ್ದೇಶದಿಂದ ಕೂಡಿಲ್ಲ. ಅಂದರೆ ಈ ಅಧ್ಯಯನವು ವಸಾಹತುಶಾಹಿ ಸಂಸ್ಕೃತಿಯ ಸಂದರ್ಭದಲ್ಲಿ ಆಧುನಿಕ ಅಭಿವೃದ್ಧಿ ಹಾಗೂ ಪ್ರಗತಿಯ ಪರಿಕಲ್ಪನೆಗಳಿಗೆ ಆ ಕಾಲದ ಸಾಹಿತ್ಯಕ ಸಂವೇದನೆ ಚಿಂತಿಸಿದ ಬಗೆಗಳನ್ನು ಕಂಡುಕೊಳ್ಳುವುದಾಗಿದೆ.

ಮನುಷ್ಯ ತನ್ನ ಪ್ರಗತಿಯ ನೆಪದಲ್ಲಿ ಪರಿಸರವನ್ನು ಬಹುವಾಗಿ ಆಘಾತಕ್ಕೆ ಗುರಿಪಡಿಸಿದ ಬಗೆಗೆ ಕುವೆಂಪು, ಬೇಂದ್ರೆ ಅವರ ಸಂವೇದನೆಗಳು ತೀವ್ರವಾಗಿ ಚಿಂತಿಸಿರುವುದನ್ನು ಈ ಅಧ್ಯಯನದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗುವುದು. ಆಧುನಿಕ ಮಹಾಯುದ್ಧಗಳಿಂದ ಪರಿಸರ ಆಘಾತಗೊಂಡದ್ದರ ಬಗ್ಗೆಯೂ ಇವರ ಕೃತಿಗಳು ಚಿಂತಿಸುತ್ತವೆ. ಪುರಾಣ ಪ್ರತಿಮೆಗಳ ನಿರ್ಮಾಣದಲ್ಲಿಯೂ ಪರಿಸರ ಕಾಳಜಿಗಳ ವಿಚಾರಧಾರೆ ಮೈಪಡೆಯುವುದನ್ನು ಈ ಅಧ್ಯಯನದಲ್ಲಿ ಪರಿಶೀಲಿಸಲಾಗುತ್ತದೆ.

ಕೈಗಾರಿಕೀಕರಣದಿಂದ ಎದುರಾದ ಪರಿಸರ ಮಾಲಿನ್ಯದ ವಿರುದ್ಧವಾಗಿ ಹುಟ್ಟಿಕೊಂಡ ಪರಿಸರ ಚಿಂತನೆ ಕಾಲಕ್ರಮದಲ್ಲಿ ಒಂದು ಸಾಂಸ್ಕೃತಿಕ ಪ್ರತಿಕ್ರಿಯೆಯಾಗಿ ನಿರಂತರವಾಗಿ ಬೆಳೆದುಕೊಂಡು ಬರುತ್ತಿದೆ. ನಾಗರೀಕತೆಯ ಬೆನ್ನುಹತ್ತಿದ ಮನುಷ್ಯನ ಮೆಟೀರಿಯಲಿಸ್ಟಿಕ್ ಅಥವಾ ಪದಾರ್ಥ ವ್ಯಾಮೋಹದ ಧೋರಣೆಯಿಂದಾಗಿ ಪರಿಸರವನ್ನು ಮನುಷ್ಯ ಅತಿಯಾಗಿ ಬಳಸಿದ್ದರಿಂದ ಎದುರಾದ ಸಮಸ್ಯೆಗಳು ಕಾಲದಿಂದ ಕಾಲಕ್ಕೆ ಅಧಿಕವಾಗುತ್ತಿವೆ. ಹಾಗಾಗಿ ಪರಿಸರದ ಸಮಸ್ಯೆಗಳು ಜೀವ ಸಂಕುಲಕ್ಕೆ ಮಾರಕವಾಗುವ ಸಂಕೀರ್ಣತೆಯ ಕಡೆಗೆ ಚಲಿಸುತ್ತಿವೆ.

ಬೇಂದ್ರೆಯವರ 'ಚಿಗರಿಗಂಗಳ ಚೆಲುವಿ', 'ಮನುವಿನ ಮಕ್ಕಳು', 'ಮೊದಲಗಿತ್ತಿ', 'ಓ ತಾಯಿ ಮಾಯಿ'. ಅಂಥ ಕವನಗಳಲ್ಲಿ ಇಂತಹ ಚಿಂತನೆ ಪ್ರತಿಪಾದಿತವಾಗಿರುವುದು ಮೇಲುನೋಟಕ್ಕೆ ಕಾಣುವ ವಿಚಾರವಾಗಿದೆ. ತಾಯಿಯಾದ ವಸುಂಧರೆಯನ್ನು ಮನುಕುಲ ಹಿಂಸೆಗೆ ಗುರಿಪಡಿಸುವ ನೆಲೆ ಬೇಂದ್ರೆಯವರ ಕಾವ್ಯದಲ್ಲಿ ಮತ್ತೆ ಮತ್ತೆ ಮೈಪಡೆಯುವ ರೂಪಕವಾಗಿ ಕಾಣಿಸಿಕೊಳ್ಳುತ್ತದೆ. ಹಾಗೆಯೇ ಶ್ರಾವಣದ ಕವನಗಳು, ಬೆಳಗನ್ನು ಕುರಿತ ಕವನಗಳು, ಪ್ರಕೃತಿಯನ್ನು ಕುರಿತ ತನ್ಮಯತೆ, ಸೃಷ್ಟಿಯ ಬಗೆಗಿನ ಸಂಭ್ರಮಗಳು ವಿಶಿಷ್ಟ ನಿಲುವನ್ನು ಪ್ರಕಟಿಸುತ್ತವೆ.

ವಸಾಹತು ಸಂದರ್ಭದಲ್ಲಿ ಪರಿಸರ ಚಿಂತನೆ ಹಾಗೂ ಪರಿಸರದಲ್ಲಿನ ತನ್ಮಯತೆ ಬೇಂದ್ರೆ ಮತ್ತು ಕುವೆಂಪು ಅವರ ಕಾವ್ಯದ ಕೇಂದ್ರ ವಸ್ತುಗಳಾಗಿ ಚಿಂತನೆಗೊಳಗಾಗುವ ಪ್ರಕ್ರಿಯೆಯ ಹಿಂದೆ ಪಾಶ್ಚಾತ್ಯ ರೊಮ್ಯಾಂಟಿಕ್ ಕಾವ್ಯದ ಪ್ರಭಾವವಿದ್ದು ಅದನ್ನು ಸ್ಥಳೀಯಗೊಳಿಸಿಕೊಳ್ಳುವ ಪರಿ ಈ ಇಬ್ಬರು ಕವಿಗಳಲ್ಲಿ ವಿಸ್ಮಯಕರವಾಗಿ ಪ್ರಕಟವಾಗುತ್ತದೆ. ಸೂರ್ಯೋದಯ, ಸೂರ್ಯಾಸ್ತಮ, ಪಂಚಭೂತಗಳ ಪ್ರತೀಕಗಳು - ಪ್ರಕೃತಿ ಆರಾಧನೆಯ ಮೂಲಕ ಆಧುನಿಕ ನಾಗರೀಕತೆಯ ಕ್ರೌರ್ಯಕ್ಕೆ ಹೇಗೆ ಪ್ರತಿರೋಧದ ರೂಪಕಗಳಾಗಿ ಬೇಂದ್ರೆ ಮತ್ತು ಕುವೆಂಪು ಅವರ ಕಾವ್ಯದಲ್ಲಿ ಮುಖಾಮುಖಿಯಾಗುತ್ತವೆ ಎಂಬುದನ್ನು ಈ ಅಧ್ಯಯನ ಗಮನಿಸುತ್ತದೆ.

ಕುವೆಂಪು ಅವರ 'ಹಾಳೂರು' ಕವಿತೆ ಆಧುನಿಕ ನಗರೀಕರಣದಿಂದ ಪರಿಸರದ ಕೇಂದ್ರ ನಾಡಿಗಳಾದ ಹಳ್ಳಿಗಳು ವಿನಾಶದ ಅಂಚನ್ನು ಮುಟ್ಟುವ ವಿವರಗಳನ್ನು ದಾಖಲಿಸುತ್ತದೆ. ನಗರದ ವಿಕೃತ ಸಂಸ್ಕೃತಿಗೆ ಯುವ ಪೀಳಿಗೆ ಬಲಿಯಾಗುವ ವಿಚಾರವನ್ನು ಪ್ರಕಟಿಸುತ್ತದೆ. ಈ ತಾತ್ವಿಕತೆಯನ್ನುಳ್ಳ ನವೋದಯ ಸಂವೇದನೆಯ ಬಹುಪಾಲು ನಾಯಕರೆಲ್ಲರೂ ತಮ್ಮ ಸ್ಥಳೀಯ ಪರಿಸರದಿಂದ ದೂರವಾಗಿ ಅದರ ನೆನಪಿನಲ್ಲಿಯೇ ಬದುಕುವವರು. ಹಾಗಾಗಿ ಇಲ್ಲಿ ಪರಿಸರವೆಂದರೆ ಗಿಡ, ಬಳ್ಳಿ, ಪ್ರಾಣಿ, ಪಕ್ಷಿ, ನಗರಗಳು ಮಾತ್ರವಲ್ಲದೆ ಸಮಷ್ಟಿ ಬದುಕೇ ಸಂಕೀರ್ಣಗೊಂಡು ಪರಿಸರ ವ್ಯಾಖ್ಯೆಗೆ ಒಳಗಾಗುತ್ತದೆ. 'ಬಾರೊ ಸಾಧನಕೇರಿಗೆ', 'ಹೋಗುವೆನು ನಾ', 'ಇಂತಹ ಸುಂದರ ಪ್ರಾತಃ ಕಾಲದಿ', 'ದೇವರು ರುಜು ಮಾಡಿದನು', 'ಪಕ್ಷಿ', 'ಹಸಿರು', 'ಗಗನಗುರು', 'ಸಣ್ಣ ಸೋಮವಾರ', 'ಸಖೀಗೀತ', 'ತುಂಬಿತ್ತು ಹಾಲಗೇರಿ', 'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು', 'ಶ್ರೀ ರಾಮಾಯಣ ದರ್ಶನಂ' ಇಂಥ ಕೃತಿಗಳಲ್ಲಿ ತಾವು ಬಿಟ್ಟು ಬಂದ ಪರಿಸರದ ನೆನಪಿನ ಕಥನವನ್ನೇ ಕಟ್ಟಲಾಗಿದೆ. ಪ್ರಕೃತಿಯನ್ನೇ ದೈವವೆಂದು ತಿಳಿದು, ಇಂಥ ಕಥನಗಳಿಂದಲೇ ಒಂದು ಕಾಲದ ಸಾಂಸ್ಕೃತಿಕ ಚರಿತ್ರೆಯ ವಿಭಿನ್ನ ನೆಲೆಗಳನ್ನು ದಾಖಲಿಸಿದರು.

ಆಧುನಿಕ ನಾಗರಿಕತೆಯ ಬಗೆಗೆ ಈ ಬಗೆಯ ಆಕರ್ಷಣೆ ಅವರ ಕೃತಿಗಳಲ್ಲಿ ಪ್ರಕಟವಾಗುವ ವಿಚಾರವು ಭಾರತೀಯ ಸಂದರ್ಭದಲ್ಲಿ ನೈಜವಾಗಿಯೇ ಕಾಣಿಸುತ್ತದೆ. ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳಂತೆ ಕನ್ನಡ ನವೋದಯದ ಕವಿಗಳಾದ ಬೇಂದ್ರೆ, ಕುವೆಂಪು ಈ ವಿಚಾರದಲ್ಲಿ ಭಿನ್ನವಾಗಿರುವ ಸಂಗತಿಯನ್ನು ಮರೆಯುವಂತಿಲ್ಲ. ಆಂಗ್ಲ ಕಾವ್ಯದ ಸಂವೇದನೆಗಿಂತ ಕನ್ನಡ ಕಾವ್ಯ ಸಂವೇದನೆ ಭಿನ್ನವಾಗುವುದು ಇಂಥ ಸಂಗತಿಗಳಿಂದಲೇ. ಬ್ರಿಟಿಷ್

ವಸಾಹತುಶಾಹಿ ಸಾಮ್ರಾಜ್ಯ ಸ್ಥಾಪನೆಯಿಂದ ಭಾರತೀಯ ಬದುಕಿನಲ್ಲಿ ಆದ ಬದಲಾವಣೆಯೇ ಇಂಥ ಭಿನ್ನತೆಗಳಿಗೆ ಮುಖ್ಯ ಕಾರಣ ಎಂಬುದನ್ನು ಮರೆಯುವಂತಿಲ್ಲ. ಬ್ರಿಟಿಷ್ ವಸಾಹತುಶಾಹಿ ಸಂಸ್ಕೃತಿಯ ಸಂಪರ್ಕದಿಂದ ಎದುರಾದ ಸಾಂಸ್ಕೃತಿಕ ಸಂಘರ್ಷವು ಭಾರತೀಯ ಬದುಕಿನಲ್ಲಿ ಒಂದು ಹೊಸ ದಿಶೆಯನ್ನು ಉಂಟು ಮಾಡಿದ ಫಲವಾಗಿ ಹೊಸ ಎಚ್ಚರದ ವಿಚಾರಗಳು ಪ್ರಾಪ್ತವಾದದ್ದರಿಂದ ಪೂರ್ವ ಮತ್ತು ಪಶ್ಚಿಮಗಳ ವಿಚಾರಧಾರೆಗಳನ್ನು ಕನ್ನಡ ಸಂವೇದನೆ ಸ್ವೀಕರಿಸಿದ ನೆಲೆ ಅಧ್ಯಯನಕ್ಕೆ ಒಳಪಡಿಸಬೇಕಾದ ಮುಖ್ಯ ಸಂಗತಿಯಾಗಿದೆ. ಪರಿಸರವನ್ನು ಕುರಿತ ಪಾಶ್ಚಾತ್ಯ ಸಂಸ್ಕೃತಿಯ ವಿಚಾರಧಾರೆಯನ್ನು ಕನ್ನಡದ ಈ ಎರಡೂ ಪ್ರತಿಭೆಗಳು ಸ್ವೀಕರಿಸಿದ ಹಾಗೂ ನಿರಾಕರಿಸಿದ ನೆಲೆಗಳು ಯಾವ ಬಗೆಯವು ಎಂಬುದನ್ನು ಈ ಅಧ್ಯಯನ ಶೋಧಿಸುತ್ತದೆ.

ಇದೇ ಸಂದರ್ಭದಲ್ಲಿ ಈ ಅಧ್ಯಯನ ವ್ಯಾಪ್ತಿಯಲ್ಲಿ ನಮಗೆ ಎದುರಾಗುವುದು ಆಧುನಿಕ ಅಭಿವೃದ್ಧಿಯ ಪರಿಕಲ್ಪನೆಗಳು. ಆಧುನಿಕ ಅಭಿವೃದ್ಧಿ ಪರಿಕಲ್ಪನೆ ಎನ್ನುವುದು ವಸಾಹತುಶಾಹಿಯ ಕೂಸು. ಅದು ಇಂದು ಬೃಹತ್ ಆಗಿ ಅನೇಕ ಶಾಖೆಗಳಿಗೆ ವಿಸ್ತರಿಸಿ ಸ್ಥಳೀಯ ಸಮಾಜದ ಸಹಜ ಗುಣಗಳನ್ನೇ ಹತ್ತಿಕ್ಕಿದೆ. ಜಾಗತಿಕ ಮಾದರಿಯ ಅಭಿವೃದ್ಧಿ ಪರಿಕಲ್ಪನೆಗಳು ನಮ್ಮಂತಹ ಸಂಸ್ಕೃತಿಗೆ ಆರಂಭದಲ್ಲಿ ಆಕರ್ಷಕವಾಗಿ ಕಂಡರೂ ಅದರ ಕೆಟ್ಟ ಪರಿಣಾಮಗಳು ನಮ್ಮ ಮುಂದಿವೆ. ಬೃಹತ್ ಕೈಗಾರಿಕೀಕರಣ, ಕೃಷಿ ಕ್ಷೇತ್ರದ ಮೇಲೆ ನಡೆಸಿದ ಪ್ರಯೋಗಗಳು ಆಯಾ ಕ್ಷೇತ್ರಗಳನ್ನು ಬಂಜೆಗೊಳಿಸಿವೆ. ಸರ್ವರ ಅಭಿವೃದ್ಧಿಯ ಪರಿಕಲ್ಪನೆ ಇಂದು ಹುಸಿಯಾಗಿದೆ. ಅಭಿವೃದ್ಧಿಯೇ ಒಂದು ಸಮಸ್ಯೆಯಾಗಿರುವ ಸಂದರ್ಭ ನಮ್ಮದಾಗಿದೆ. ಈ ಹಿನ್ನೆಲೆಯಲ್ಲಿ ವಸಾಹತುಶಾಹಿ ಸಂಸ್ಕೃತಿಯ ಅಭಿವೃದ್ಧಿ ಪರಿಕಲ್ಪನೆಯನ್ನು ನವೋದಯ ಸಾಹಿತ್ಯ ಸಂವೇದನೆ ಸ್ವೀಕರಿಸಿದ, ಪ್ರತಿಕ್ರಿಯಿಸಿದ ಬಗೆಯನ್ನು ಇಲ್ಲಿ ಅಧ್ಯಯನಕ್ಕೆ ಗುರಿಪಡಿಸಲಾಗುವುದು.

ಭಾರತದ ಸಂದರ್ಭದಲ್ಲಿ ಸಾಹಿತ್ಯ ಕೃತಿಗಳಲ್ಲಿ ಪರಿಸರವನ್ನು ಕುರಿತು ಚಿಂತಿಸಿದವರಲ್ಲಿ ಠಾಕೂರರು ಮೊದಲಿಗರು. ಠಾಕೂರರ ಕೃತಿಗಳನ್ನು ನವೋದಯದ ಸಂದರ್ಭದಲ್ಲಿಯೇ ಕನ್ನಡಕ್ಕೆ ಹಲವರು ಅನುವಾದಿಸಿದ್ದಾರೆ. ಮನುಷ್ಯನ ಬದುಕಿನ ಏಳುಬೀಳುಗಳ ಕಥನಕ್ಕೆ ಪ್ರಕೃತಿ ಸಂಕೇತವಾಗಿ ಅಭಿವ್ಯಕ್ತವಾಗುವ ಬಗೆಯನ್ನು ಆ ಕಾಲದ ವಿಮರ್ಶೆ ಮುಖ್ಯವಾಗಿ ಗ್ರಹಿಸಿದಂತೆ ಕಾಣುತ್ತದೆ. ಇಂದು ಮನುಷ್ಯ ಪರಿಸರದ ಕೇಂದ್ರವಾಗಿಲ್ಲದೆ, ಅವನೂ ಒಂದು ಅಂಗವೆಂಬಂತೆ ಅರ್ಥೈಸಿಕೊಳ್ಳುತ್ತಿರುವ ಸಂದರ್ಭದಲ್ಲಿ ನಾವಿದ್ದೇವೆ. ಹಾಗೆಯೇ ಪರಿಸರದ ವ್ಯಾಖ್ಯೆಯೂ ವಿಸ್ತಾರಗೊಂಡು ಸಂಕೀರ್ಣವಾಗಿದೆ.

ಪರಿಸರವನ್ನು ಕುರಿತ ಚಿಂತನೆ ಕನ್ನಡ ನವೋದಯ ಸಾಹಿತ್ಯದ ಕೇಂದ್ರ ಪ್ರತೀಕ. ಇದನ್ನು ಅಧ್ಯಯನ ಮಾಡುವುದರಿಂದ ಆಧುನಿಕ ಸಾಹಿತ್ಯದ ಮನೋಭೂಮಿಕೆಯನ್ನು ತಿಳಿಯಬಹುದೆಂದು ಈ ಅಧ್ಯಯನ ಭಾವಿಸುತ್ತದೆ. ಪರಿಸರ ಮುಖ್ಯ ಸಮಸ್ಯೆಯಾಗಿ ಸಾಂಸ್ಕೃತಿಕ ಅಧ್ಯಯನವಾಗಿ ರೂಪುಗೊಂಡದ್ದು ಕಳೆದ ಶತಮಾನದ ಅರವತ್ತರ ದಶಕದಿಂದಲೇ. ಆದ್ದರಿಂದ ಈ ಅಧ್ಯಯನದ ಮುಖ್ಯ ನೆಲೆಯಾಗಿ ಬೇಂದ್ರೆ, ಕುವೆಂಪು ಅವರ ಸಾಹಿತ್ಯವನ್ನು ಪರಿಶೀಲನೆಗೆ ಒಳಪಡಿಸುವುದು ಸರಿಯೆಂದು ಕಾಣುತ್ತದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿ ಬೇಂದ್ರೆ, ಕುವೆಂಪು ಅವರ ಕೃತಿಗಳನ್ನು ಕೇಂದ್ರ ಮಾಡಿಕೊಂಡು ಪರಿಸರದ ಧೋರಣೆಗಳನ್ನು ವಿಶ್ಲೇಷಿಸುವುದಾಗಿದೆ. ಅಭಿಜಾತ ಪ್ರತಿಭೆಗಳ ಸಾಹಿತ್ಯಕ್ಕೆ ಪರಂಪರೆಯಿಂದ ಒದಗಿ ಬಂದ ಪ್ರೇರಣೆ - ಪ್ರಭಾವಗಳನ್ನು ಶೋಧಿಸಿಕೊಳ್ಳುವುದು ಕೂಡ ಈ ಅಧ್ಯಯನದ ವ್ಯಾಪ್ತಿಗೆ ಸೇರುತ್ತದೆ. ಇದೇ ಈ

ಅಧ್ಯಯನದ ಮಿತಿಯೂ ಆಗಿದೆ. ಕೇವಲ ಒಂದು ಕಾಲದ ಇಬ್ಬರ ಕೃತಿಗಳನ್ನು ಮಾತ್ರ ಅಧ್ಯಯನಕ್ಕೆ ಗುರಿಪಡಿಸುವುದರಿಂದ ಅನೇಕರ ಸಾಹಿತ್ಯ ಕೃತಿಗಳು ಹೊರಗುಳಿದರೂ, ಇದೇ ಬಗೆಯ ಅಧ್ಯಯನ ಮಾದರಿಗಳನ್ನು ಅಳವಡಿಸಿ ಅಧ್ಯಯನ ಮಾಡಬಹುದೆಂದು ತಿಳಿದು ಈ ಮಿತಿಯನ್ನು ಹಾಕಿಕೊಳ್ಳಲಾಗಿದೆ.

೨. ಪ್ರಕೃತಿ - ಪರಿಸರ ಅರ್ಥವ್ಯಾಪ್ತಿ :

ಪರಿಸರವನ್ನು ಕುರಿತ ಚಿಂತನೆ ಇತ್ತೀಚಿನದಲ್ಲ. ೫ನೇ ಶತಮಾನದಿಂದ ಪ್ರಸ್ತುತ ಸಂದರ್ಭದವರೆಗೂ ಪ್ರಕೃತಿ ಪರಿಕಲ್ಪನೆಯ ಚರ್ಚೆ ಅನೇಕ ನೆಲೆಗಳಲ್ಲಿ ನಡೆಯುತ್ತಿದೆ. ಈ ಚರ್ಚೆ ವಿಭಿನ್ನ ಸಂದರ್ಭಗಳಲ್ಲಿ ವಿಭಿನ್ನ ಅರ್ಥಗಳನ್ನು ಕೊಡುತ್ತಾ ಹೋಗುತ್ತದೆ. ಆರಂಭದಲ್ಲಿ ಪರಿಸರ ಎಂದರೇನು? ಎಂಬ ಪ್ರಶ್ನೆಯೊಂದಿಗೆ ಇದರ ಚರ್ಚೆ, ವ್ಯಾಖ್ಯಾನ, ವಾಗ್ವಾದಗಳು ಆರಂಭವಾದವು. ಆದರೆ ಇಂದು ಈ ಪ್ರಶ್ನೆ ಸಾಕಷ್ಟು ರೂಪ, ಆಕಾರಗಳನ್ನು ಪಡೆದುಕೊಂಡು ಹೊಸತೊಂದು ಜ್ಞಾನಶಾಖೆಯಾಗಿ ಬದಲಾಗಿದೆ. ಹಾಗಾಗಿ ಎಲ್ಲಾ ಸಂದರ್ಭಗಳಲ್ಲೂ ಪರಿಸರ ಅಥವಾ ಪ್ರಕೃತಿಯನ್ನು ಯಾವ ನಿರ್ದಿಷ್ಟ ಅರ್ಥದಲ್ಲಿ ವ್ಯಾಖ್ಯಾನಿಸುತ್ತಾರೆ ಎಂದು ತಿಳಿಯುವುದು ಸೂಕ್ತವಾಗಿದೆ. ಒಟ್ಟಾರೆಯಾಗಿ ಪರಿಸರ ಎನ್ನುವುದು ಪ್ರಾಕೃತಿಕ ವ್ಯಾಪಾರಗಳು ನಿರಂತರವಾಗಿ ನಡೆಯುವ ಪ್ರಕ್ರಿಯೆಯನ್ನು ವಿವರಿಸುವುದಾಗಿದೆ.

ಜಾಗತಿಕ ಮಟ್ಟದಲ್ಲಿ ಪರಿಸರ ಅಥವಾ ಇಕಾಲಜಿಯೆನ್ನುವ ಪರಿಕಲ್ಪನೆಯನ್ನು ಕುರಿತಂತೆ ಅನೇಕ ಅರ್ಥಗಳು ರೂಪುಗೊಂಡಿವೆ. ಜಗತ್ತಿನ ಶ್ರೇಷ್ಠ ಚಿಂತಕರು, ಪರಿಸರ ವಿಜ್ಞಾನವನ್ನು ಕುರಿತ ಅನೇಕ ಕೃತಿಗಳು, ನಿಘಂಟುಗಳು ಇಕಾಲಜಿಯೆನ್ನುವ ಶಬ್ದಕ್ಕಿರುವ ಅರ್ಥ, ಆಕಾರ, ವಿಸ್ತಾರ, ವ್ಯಾಪ್ತಿಗಳನ್ನು ಚರ್ಚಿಸಿದ್ದಾರೆ. 'ಇಕಾಲಜಿ' ಎನ್ನುವ ಪರಿಕಲ್ಪನೆ ಪ್ರಸ್ತುತ ಸಂದರ್ಭದ ಬಹು ಪ್ರಮುಖ ಅಧ್ಯಯನ ವಲಯವಾಗಿದೆ. ಆದ್ದರಿಂದ ಈ ಶಬ್ದದ ಉಗಮ ಮತ್ತು ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವುದರ ಅಗತ್ಯವೂ ನಮ್ಮ ಮುಂದಿದೆ. ಜರ್ಮನಿಯ ಜೀವ ವಿಜ್ಞಾನಿ ಎರ್ನೆಸ್ಟ್ ಹೆಕಲ್ ೧೮೭೦ರಲ್ಲಿ ಇಕಾಲಜಿ ಪದವನ್ನು ಬಳಕೆಗೆ ತಂದರು. 'ಇಕೊ' ಎನ್ನುವುದು 'ಇಕೋಸ್' ಎನ್ನುವ ಗ್ರೀಕ್ ಪದದಿಂದ ಬಂದಿದ್ದು. ಎಂದರೆ ಕುಟುಂಬ, ಮನೆತನ ಎಂಬ ಅರ್ಥವನ್ನು ಕೊಡುತ್ತದೆ. ಕೊನೆಯ ಶಬ್ದವಾದ 'ಲೊಜಿ' ಎನ್ನುವುದು 'ಲೊಗೋಸ್' ಎನ್ನುವ ಪದದಿಂದ ಬಂದಿದ್ದು ಕ್ರಮವಾದ ವ್ಯವಸ್ಥಿತವಾದ ಅಧ್ಯಯನ ಎಂಬ ಅರ್ಥವನ್ನು ಕೊಡುತ್ತದೆ. ಇಕಾಲಜಿ ಅಥವಾ ಹೆಕೆಲ್ಸ್ ಒಕೊಲಜಿ ಎನ್ನುವುದು ಹದಿನೆಂಟನೆಯ ಶತಮಾನದಲ್ಲಿ 'ಜೀವಿಸುವ ಸ್ಥಳ' ಎಂಬುದರಿಂದ ಬೆಳಕಿಗೆ ಬಂದಿತು. ಸಸ್ಯಗಳ ಪ್ರಾಣಿಗಳ ಮತ್ತು ಅವು ಜೀವಿಸುವ ಸ್ಥಳಗಳ ನಡುವಿನ ಸಂಬಂಧದ ಅಧ್ಯಯನವಾಗಿ ಇಕಾಲಜಿಯನ್ನು ಗುರುತಿಸಬಹುದಾಗಿದೆ. ಇಕಾಲಜಿಯಂತೆಯೇ 'ಎನ್ವಿರಾನ್‌ಮೆಂಟ್' ಎಂಬುದು ಕೂಡ ಹತ್ತೊಂಬತ್ತನೇ ಶತಮಾನದ ಆರಂಭದ ದಶಕಗಳಲ್ಲಿ ಬಳಕೆಗೆ ಬಂದಿತು. ಇದು ಸುತ್ತಮುತ್ತ, ಪರಿಸರ ಎನ್ನುವ ಅರ್ಥದಲ್ಲಿ ಬಳಕೆಯಾಗುತ್ತಿದೆ.

ಇಕಾಲಜಿ, ಪರಿಸರ, ಪ್ರಕೃತಿಯೆನ್ನುವ ಶಬ್ದಗಳು ಕೆಲ ನಿರ್ದಿಷ್ಟ ಅರ್ಥದಲ್ಲಿ ಬಳಕೆಯಾಗುವುದರ ಜೊತೆಗೆ ಇನ್ನೂ ಹಲವು ಬಗೆಯ ಅರ್ಥಗಳನ್ನು ತಮ್ಮ ಸುತ್ತ ಹೆಣೆದುಕೊಂಡಿವೆ. ಹಾಗಾಗಿ ಈ ಶಬ್ದಗಳಿಗಿರುವ ವಿವಿಧಾರ್ಥಗಳನ್ನು ಕಂಡುಕೊಳ್ಳುವುದರಿಂದ ಇವುಗಳ ಅರ್ಥವ್ಯಾಪ್ತಿ ಮತ್ತಷ್ಟು ಸ್ಪಷ್ಟವಾಗುತ್ತಾ ಹೋಗುತ್ತದೆ. ನಿಸರ್ಗ, ಸೃಷ್ಟಿ, ಸುತ್ತಮುತ್ತ, ಆವರಣ, ಸನ್ನಿವೇಶ, ಸಮೀಪ, ನೆರೆಹೊರೆ, ಹುಟ್ಟು, ಮೂಲ - ಹೀಗೆ ಅನೇಕ ಪದಗಳು ಪ್ರಕೃತಿ ಅಥವಾ ಪರಿಸರಕ್ಕೆ ಸಮನಾರ್ಥಕಗಳಾಗಿವೆ. ಅಧ್ಯಯನದ ಸಂದರ್ಭದಲ್ಲಿ ಇಕಾಲಜಿಯ

ವ್ಯಾಖ್ಯೆ ಮತ್ತು ಅರ್ಥವನ್ನು ತಿಳಿಯುವುದಕ್ಕಾಗಿ ದಿ ರ್‍ಯಾನ್‌ಡಮ್ ಹೌಸ್ ಕಾಲೇಜ್ ಡಿಕ್ಶ್ನರಿ (೧೯೬೮), ಇಕಾಲಜಿ : ದಿ ಲಿಂಕ್ ಬಿಟ್ವೀನ್ ದಿ ನ್ಯಾಚುರಲ್ ಅಂಡ್ ಸೋಶಿಯಲ್ ಸೈನ್ಸ್‌ಸ್ (೧೯೭೮), ಡಿಕ್ಶ್ನರಿ ಆಫ್ ಬಯಾಲಜಿ (೧೯೮೦), ಡಿಕ್ಶ್ನರಿ ಆಫ್ ಫಿಲಾಸಫಿ (೧೯೮೪), ಡಿಕ್ಶ್ನರಿ ಆಫ್ ಇಕಾಲಜಿ ಅಂಡ್ ಪ್ಲ್ಯಾಂಟ್ ಲೈಫ್ (೧೯೯೫) ನಂತಹ ಮಹತ್ವದ ಕೃತಿಗಳನ್ನು ಪರಿಶೀಲಿಸಿದೆ. ಈ ಎಲ್ಲಾ ಕೃತಿಗಳಲ್ಲಿ ಇಕಾಲಜಿ ಎನ್ನುವುದನ್ನು ಸಸ್ಯಶಾಸ್ತ್ರ ಮತ್ತು ಜೀವಶಾಸ್ತ್ರದ ಭಾಗವಾಗಿ ಗುರುತಿಸಿ ಜೀವಿಗಳು ಮತ್ತು ಅವು ಜೀವಿಸುವ ಪರಿಸರಕ್ಕಿರುವ ಸಂಬಂಧವನ್ನು ಅಧ್ಯಯನ ಮಾಡುವ ಜ್ಞಾನಶಾಖೆಯಾಗಿ ಬಳಕೆ ಮಾಡಿದ್ದಾರೆ. ಈ ಕೃತಿಗಳಲ್ಲಿರುವ ಇಕಾಲಜಿಯ ವ್ಯಾಖ್ಯೆಗಳು ಸರಿಸುಮಾರಾಗಿ ಒಂದೇ ಅರ್ಥವನ್ನು ಕೊಡುತ್ತವೆ. ಆದ್ದರಿಂದ ಇವುಗಳಿಗಿಂತ ಭಿನ್ನವಾದ, ವಿಶಿಷ್ಟವಾದ ಒಂದೆರಡು ವ್ಯಾಖ್ಯೆಗಳನ್ನು ಇಲ್ಲಿ ಪ್ರಸ್ತಾಪಿಸಿ ಇನ್ನುಳಿದ ಎಲ್ಲಾ ವ್ಯಾಖ್ಯೆಗಳನ್ನು ಅನುಬಂಧ ಒಂದರಲ್ಲಿ ಕೊಡಲಾಗಿದೆ.

> ವ್ಯಾಪಕಾರ್ಥದಲ್ಲಿ ಪರಿಸರವೆಂದರೆ ಭೂಮಿ, ನೀರು, ಹವಾಮಾನಗಳನ್ನೊಳಗೊಂಡ ಭೌತಿಕ ಅಥವಾ ಬಾಹ್ಯ ಪರಿಸರವಷ್ಟೇ ಅಲ್ಲ; ದೇಹದೊಳಗಿನ ಆಂತರಿಕ ಪರಿಸರವನ್ನೂ ಮನುಷ್ಯನನ್ನು ಒಳಗೊಂಡಿರುವ ಸಾಮಾಜಿಕ ಪರಿಸರವನ್ನೂ ಸೇರಿಸಬಹುದು. ದೇಹದ ಕೋಶಿಕೆಗಳಿರುವ ಅಂತರ್ಕೋಶಿಕಾ ದ್ರವದ ಮಾಧ್ಯಮವನ್ನು ಆಂತರಿಕ ಪರಿಸರ ಎನ್ನುವುದುಂಟು. ಜೀವಿಗಳಿಗೂ ಪರಿಸರಕ್ಕೂ ಇರುವ ಸಂಬಂಧದ ಅಧ್ಯಯನವೇ ಪರಿಸರ ವಿಜ್ಞಾನ. ಒಂದು ಜೀವಿಯ ಪರಿಸರ ಎಂದರೆ ಕೇವಲ ನೆಲ, ಜಲ, ಮಳೆ, ಗಾಳಿ, ಮಣ್ಣು, ಉಷ್ಣತೆಗಳಷ್ಟೇ ಅಲ್ಲ. ಅದೇ ಪ್ರದೇಶದಲ್ಲಿ ಬಾಳುವ ಇತರ ಜೀವಿಗಳೂ ಅದಕ್ಕೆ ಸೇರುತ್ತವೆ.[೧]
>
> ಇಕಾಲಜಿ ಶಬ್ದಕ್ಕೆ ಪರ್ಯಾಯವಾಗಿ ಪರಿಸರ ವಿಜ್ಞಾನ ಎಂದು ಬಳಸುತ್ತಾರೆ. 'ಜೀವಿ ವ್ಯವಸ್ಥೆ' ಎಂಬ ಬಳಕೆಯೂ ಇದೆ. ಗ್ರೀಕ್ ಮೂಲ ಐಕೋಸ್ ಎಂಬ ಶಬ್ದದಿಂದ ಬಂದಿರುವ ಪದ ಮನೆ ಎಂಬ ಅರ್ಥವನ್ನು ಕೊಡುತ್ತದೆ. ಒಂದು ಮನೆಯ ಒಟ್ಟು ಚಟುವಟಿಕೆಗಳಂತೆ ವಿಶ್ವದ ಜೈವಿಕ ಚಟುವಟಿಕೆಗಳನ್ನು ಈ ಪದ ಪ್ರತಿನಿಧಿಸುತ್ತದೆ. ಇಕಾಲಜಿಯು ಕ್ರಮೇಣ ಒಂದು ನಿರ್ದಿಷ್ಟ ಪರಿಸರದಲ್ಲಿ ಬದುಕುವ ಜೀವಿಗಳ ನಡುವಿನ ಪರಸ್ಪರ ಸಂಬಂಧಗಳಿಂದ ಉಂಟಾದ ಜೀವ ವ್ಯವಸ್ಥೆ ಹಾಗೂ ಆ ಪರಿಸರದ ಭೌತಿಕ ಅಂಶಗಳು (ಮಣ್ಣು, ಗಾಳಿ, ನೀರು, ನೆರಳು, ಬೆಳಕು ಇತ್ಯಾದಿ) ಜೈವಿಕ ವ್ಯವಸ್ಥೆಯ ಮೇಲೆ ಬೀರುವ ಒಟ್ಟು ಪರಿಣಾಮದ ಸ್ವರೂಪವನ್ನು ಅಧ್ಯಯನ ಮಾಡುವ ವಿಜ್ಞಾನವಾಗಿ ರೂಪುಗೊಂಡಿತು. ಜಗತ್ತಿನ ಸಮಸ್ತ ಜೈವಿಕ ರಾಶಿಯನ್ನು ಒಂದು ಎಳೆಯಲ್ಲಿ ಬಂಧಿಸಿದೆ ಇಕಾಲಜಿ ಎಂಬ ಪದ. ಜೀವಿಯು ಹುಟ್ಟಿನಿಂದ ಸಾಯುವವರೆಗೆ ನಡೆಸುವ ಎಲ್ಲಾ ಕಾರ್ಯಗಳೂ ಇಕಾಲಜಿ ಅಧ್ಯಯನಕ್ಕೆ ಯೋಗ್ಯವಾಗಿವೆ. ಇಕಾಲಜಿ ಪ್ರತಿಯೊಬ್ಬರಿಗೂ ಸಂಬಂಧಿಸಿದ ವಿಜ್ಞಾನವಾಗಿದೆ. ಜೈವಿಕ ಬದುಕಿನ ಸಹಜ ವ್ಯಾಪಾರಗಳೇ ಇಕಾಲಜಿ. ಇಕಾಲಜಿ ಕೇವಲ ಮಾಲಿನ್ಯ ಕುರಿತ ವಿಜ್ಞಾನವಲ್ಲ; ಪರಿಸರವನ್ನು ಕುರಿತ ಕಾಳಜಿ ಮಾತ್ರವಲ್ಲ ಅಥವಾ ಮಸುಕಾದ ಮನುಕುಲದ ದುರಂತ ಭವಿಷ್ಯವನ್ನು ಹೇಳುವ ಹಕ್ಕಿ

ಶಕುನವೂ ಅಲ್ಲ. ಅದು ಅನೇಕ ಮೂಲಭೂತ ಮತ್ತು ಅನ್ವಯಿಕ ಶಿಸ್ತುಗಳನ್ನೊಳಗೊಂಡ ಸಂಕೀರ್ಣ ಅಧ್ಯಯನ. ಇಕಾಲಜಿ ಅಧ್ಯಯನದ ಕೇಂದ್ರ ವಸ್ತುವೇ ಜೀವಿಗಳು ಮತ್ತು ಅವುಗಳ ಪಾರಸ್ಪರಿಕ ಸಂಬಂಧ. ಈ ಸಂಬಂಧದಿಂದ ಉಂಟಾದ ಜೀವಜಾಲವನ್ನು ಅರಿತಾಗ ಮಾತ್ರ ಇಕಾಲಜಿ ಹೆಚ್ಚು ಸ್ಪಷ್ಟವಾಗುತ್ತದೆ. ಚಾರ್ಲ್ಸ್ ಡಾರ್ವಿನ್‌ನ ವಿಕಾಸವಾದದ ಚಿಂತನೆಗಳಲ್ಲಿಯೇ ಇಕಾಲಜಿಯ ಬೇರುಗಳು ಅಡಗಿರುವುದು ಕಾಣುತ್ತದೆ. ಡಾರ್ವಿನ್ ಚಿಂತನೆಗಳು ಜೀವ ಜಾಲವನ್ನು ಅಥವಾ ಇಕಾಲಜಿಯನ್ನು ನಿರ್ದೇಶಿಸುವ ಸೂತ್ರಗಳಂತೆ ಆಗಿವೆ.[೨]

ಈ ಎರಡೂ ವ್ಯಾಖ್ಯೆಗಳು 'ಇಕಾಲಜಿ' ಎಂದರೇನು? ಅದು ಯಾವುದರ ಅಧ್ಯಯನವಾಗಿದೆ? ಏನನ್ನು ಒಳಗೊಂಡಿದೆ? ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸುತ್ತಾ ಪರಿಕಲ್ಪನೆಗೆ ಒಂದು ಸ್ಪಷ್ಟ ಸ್ವರೂಪವನ್ನು ರೂಪಿಸುತ್ತಿವೆ. ಆದರೆ ಈ ಪರಿಕಲ್ಪನೆ ಇಷ್ಟಕ್ಕೇ ನಿಲ್ಲದೆ ಮತ್ತೂ ವಿಸ್ತಾರಗೊಂಡಿತು. ಪರಿಸರ ಆಂದೋಲನಗಳು, ಚಳವಳಿಗಳು ಜಗತ್ತಿನಾದ್ಯಂತ ವ್ಯಾಪಕವಾಗಿ ನೆಲೆಗೊಳ್ಳುತ್ತಿದ್ದ ಸಂದರ್ಭದಲ್ಲಿ ಇದರ ಮಹತ್ತು ಬೃಹತ್ತುಗಳು ಮತ್ತಷ್ಟು ಹೆಚ್ಚಿದವು. ೧೯೫೦ರ ದಶಕದಿಂದೀಚೆಗೆ ಪರಿಸರಕ್ಕೆ ಸಂಬಂಧಿಸಿದ ಹಾಗೂ ವೈಜ್ಞಾನಿಕ ಅರ್ಥದಲ್ಲಿ ಬಳಸುತ್ತಿರುವ ಹೊಸ ಪರಿಕಲ್ಪನೆಗಳು ಸೃಷ್ಟಿಯಾದವು. ಎಕೊಟೋನ್, ಎಕೊಟೈಪ್, ಎಕೊಸ್ಪೀಶಿಸ್, ಎಕೊಕ್ರೈಸಿಸ್, ಎಕೊಕ್ಯಾಟಸ್ಟ್ರೊಫಿ, ಎಕೊಪಾಲಿಟಿಕ್ಸ್ ಮತ್ತು ಎಕೊ ಆಕ್ಟಿವಿಸ್ಟ್ ಅಂತಹ ಪರಿಕಲ್ಪನೆಗಳು ಪರಿಸರ ಮಾಲಿನ್ಯ ಹಾಗೂ ಪರಿಸರಕ್ಕಾಗುವ ಆಘಾತಗಳಿಗೆ ಪ್ರತಿಕ್ರಿಯಿಸಿದವು. ಈ ತೆರನಾದ ಪ್ರತಿಕ್ರಿಯೆಗಳಿಂದ ೧೯೭೦ರ ದಶಕದಲ್ಲಿ ಪರಿಸರ ಎನ್ನುವ ಶಬ್ದಕ್ಕಿದ್ದ ಸೀಮಿತಾರ್ಥ ಬೆಳವಣಿಗೆಯನ್ನು ಕಂಡಿತು.

ಪರಿಸರವೆನ್ನುವುದು ಯಾವುದೋ ಒಂದು ಕೇಂದ್ರ ಬಿಂದುವಿನಿಂದ ಆರಂಭವಾಗಿ ಸಮಗ್ರತೆಯನ್ನು ಪಡೆದುಕೊಂಡ ಪ್ರಮುಖ ಶಿಸ್ತಾಗಿ ಭೌತಿಕ, ಜೈವಿಕ ಮತ್ತು ಸಮಾಜ ವಿಜ್ಞಾನಗಳ ಜೊತೆ ಸಂಬಂಧವನ್ನು ಕಲ್ಪಿಸಿಕೊಂಡಿತು. ಅಂತೆಯೇ ಪರಿಸರದ ಮುಖೇನ ಅರ್ಥಶಾಸ್ತ್ರ, ರಾಜಕೀಯ ಮತ್ತು ಸಮಾಜದ ತಾತ್ವಿಕತೆಗಳು ಮರು ವಿಶ್ಲೇಷಣೆಗೆ ಗುರಿಯಾದವು. ವಿಜ್ಞಾನದಲ್ಲಿ ಹೇಗೆಯೋ ಹಾಗೆ ಸಾಹಿತ್ಯಕ ವಲಯದಲ್ಲಿಯೂ ಕೂಡ ಪರಿಸರ ಹೊಸಹಾದಿಯನ್ನು ಹಿಡಿಯಿತು. ಹೊಸ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಟ್ಟಿತು. ಸೃಷ್ಟಿಕ್ರಿಯೆಯ ಸಮಗ್ರತೆಯನ್ನು ಅಭಿವ್ಯಕ್ತಿಸುವ ಮಾಧ್ಯಮವಾಗಿ ಪರಿಸರ ವಿಶಿಷ್ಟವಾಯಿತು. ಇಂಥ ಸಮಗ್ರತೆಯನ್ನು, ಜೀವ ವೈವಿಧ್ಯತೆಯನ್ನು, ಸಮಷ್ಟಿ ಬದುಕನ್ನು ಪ್ರತಿನಿಧಿಸುವ ಪರಿಸರ ಅಥವಾ ಪ್ರಕೃತಿಯನ್ನು ಅರ್ಥೈಸಿಕೊಳ್ಳುವುದಕ್ಕೆ ಕುವೆಂಪು ಅವರು ಪ್ರಕೃತಿಯನ್ನು ಕುರಿತಂತೆ ರೂಪಿಸಿರುವ ವ್ಯಾಖ್ಯಾನವನ್ನು ಇಲ್ಲಿ ಗಮನಿಸುವುದು ಅತಿಮುಖ್ಯವೆನಿಸುತ್ತದೆ.

ಪ್ರಕೃತಿ ಎಂಬ ಪದದಲ್ಲಿ ನಮ್ಮ ಸುತ್ತಮುತ್ತ ಇರುವ ಮತ್ತು ತನಗೆ ತಾನೆ ಆಗಿರುವ ಎಲ್ಲ ವಸ್ತು ಸಮೂಹಗಳೂ ಸೇರುತ್ತವೆ. ಆದರೆ ಬಳಕೆಯಲ್ಲಿ ಆ ಮಾತಿಗೆ ವಿಶೇಷವಾಗಿ ಇಂದ್ರಿಯ ಗೋಚರವಾದ ಸುಂದರ ನಿಸರ್ಗ ಎಂಬರ್ಥವಿರುತ್ತದೆ ಎಂದರೆ ಕಾಡು ಬೆಟ್ಟ ಹೊಳೆ ಕೆರೆ ಗದ್ದೆ ಹೊಲ ಬಯಲು ಮಲೆ ಬಾನು ಬೆಳಗು ಬೈಗು ಇರುಳು ಚುಕ್ಕಿ ಹಕ್ಕಿ ಮಿಗ ಮುಗಿಲು ಕಡಲು ನೇಸರು ತಿಂಗಳು ಮಳೆ ಗುಡುಗು ಮಿಂಚು ಗಾಳಿ ಬಿಸಿಲು ತಳಿರು ಹೂವು ಇತ್ಯಾದಿ ಇತ್ಯಾದಿ...[೩]

> ಸಾಮಾನ್ಯವಾಗಿ ಸಾಹಿತ್ಯದಲ್ಲಿ 'ಪ್ರಕೃತಿ' ಎಂದರೆ ವ್ಯಕ್ತ ಪ್ರಕೃತಿ - ಕಣ್ಣಿಗೆ ತೋರುವ ಬಾಹ್ಯ ಪ್ರಕೃತಿ ಎಂಬರ್ಥವಿದೆ. ಪರ್ವತಶೃಂಗಗಳಿಂದ ಹರಿದು ಬರುವ ತಿಳಿನೀರಿನ ತರಂಗಿಣಿಗಳೂ, ಮನೋರಂಜಕವಾದ ಹಸುರು ಪತ್ರಗಳಿಂದ ಆಚ್ಛಾದಿತವಾದ ರಮ್ಯ ಅರಣ್ಯಗಳೂ, ವಿಶ್ವಮಾತೆಯ ಕಂಗಳ ನೀಲಕಾಂತಿಯೊ ಎಂಬಂತೆ ತೋರುವ ಆಕಾಶವೂ, ಜಲಧಿಯ ಮಹಾತರಂಗಗಳಂತೆ ದಿಗಂತಪರ್ಯಂತ ಪಸರಿಸಿರುವ ಗಿರಿಗಳೂ, ಉದಯಿಸುತ್ತಿರುವ ರವಿಯ ಕಿರಣಗಳನ್ನು ಪ್ರತಿಬಿಂಬಿಸಿ ನಲಿಯುವ ಸರೋವರಗಳೂ, ಮನಸ್ಸನ್ನು ಮೋಹಗೊಳಿಸುವ ಹಸುರಾದ ಪೈರುಗಳಿಂದ ತುಂಬಿದ ಹೊಲಗದ್ದೆಗಳೂ, ಮೃದುಮಧುರವಾದ ಗಾಯನದಿಂದ ಕಠಿನ ಹೃದಯಗಳನ್ನು ಕೂಡ ಕರಗಿಸುವ ವಿಹಂಗಗಳೂ, ಅಡವಿ ಹೊಲಗದ್ದೆಗಳಲ್ಲಿ ಸ್ವೇಚ್ಛೆಯಾಗಿ ತಿರುಗಾಡುವ ಜಿಂಕೆ ನವಿಲು ಮೊದಲಾದ ಜೀವಜಂತುಗಳೂ - ಇವೇ ಮೊದಲಾದುವುಗಳ ಸಮುದಾಯಕ್ಕೆ 'ಪ್ರಕೃತಿ' ಎಂದರ್ಥ. ಇವುಗಳ ಪೃಥಕ್ತ್ವಕ್ಕೆ ಪ್ರಕೃತಿ ಎಂದರ್ಥವಲ್ಲ; ಇವುಗಳ ಏಕತ್ವಕ್ಕೆ (ಸಮಷ್ಟಿ) ಪ್ರಕೃತಿ ಎಂದರ್ಥ.[೪]

ವಿಜ್ಞಾನ ಇಕಾಲಜಿಯನ್ನು ಸಸ್ಯ ಸಂಕುಲ ಹಾಗೂ ಪ್ರಾಣಿ ಸಂಕುಲ ತಮ್ಮ ಸುತ್ತಣ ಪರಿಸರದೊಂದಿಗೆ ಪಡೆದಿರುವ ಸ್ನೇಹ ಸಂಬಂಧಗಳ ಅಧ್ಯಯನವಾಗಿ ಗುರುತಿಸಿದರೆ ಸಾಹಿತ್ಯ ಪ್ರಕೃತಿಯನ್ನು ತನ್ನ ವಿಶಾಲ ಭೂಮಿಕೆಯಲ್ಲಿ ಅಡಗಿಸಿಕೊಂಡಿದೆ ಎಂಬುದಕ್ಕೆ ಕುವೆಂಪು ಅವರ ಈ ಮೇಲಿನ ಎರಡು ವ್ಯಾಖ್ಯೆಗಳನ್ನು ಗಮನಿಸಬಹುದು. ನಿಖರತೆ, ಸ್ಪಷ್ಟತೆಗಳು ವಿಜ್ಞಾನದ ಭಾಗವಾಗಿ ಕಂಡುಬಂದರೆ ಪರಿಸರದ ರಮ್ಯತೆಯ ವಿವರಣೆ ಹಾಗೂ ತಾತ್ವಿಕತೆಗಳು ಸಾಹಿತ್ಯದ ಭಾಗವಾಗಿ ಗೋಚರಿಸುತ್ತವೆ. ಇಷ್ಟೇ ಅಲ್ಲದೆ ಪರಿಸರವೆನ್ನುವುದು ಕುವೆಂಪು ಅವರ ಸಮಗ್ರ ಸಾಹಿತ್ಯದ ಕೇಂದ್ರ ಪ್ರಜ್ಞೆಯಾಗಿದೆ. ಈ ಮೂಲಕವೇ ಹೊಸ ದರ್ಶನಗಳು ಹಾಗೂ ಹೊಸ ಒಳನೋಟಗಳು ಅಭಿವ್ಯಕ್ತಗೊಳ್ಳುತ್ತವೆ. ಹಾಗಾಗಿ ಪರಿಸರವೆನ್ನುವುದು ಏಕಕಾಲಕ್ಕೆ ಎರಡು ವಿಭಿನ್ನ ಕ್ಷೇತ್ರಗಳಲ್ಲಿ ವ್ಯವಹರಿಸುತ್ತಿದೆ.

ಪ್ರಸ್ತುತ ಸಂದರ್ಭದಲ್ಲಿ ಇಕಾಲಜಿಯನ್ನು ಕುರಿತಂತೆ ಮತ್ತೂ ವ್ಯಾಪಕವಾದ ಚರ್ಚೆ ಆರಂಭವಾಗಿದೆ. ಇದು ಅಷ್ಟೇ ಅವಶ್ಯಕವೂ ಆಗಿದೆ. ಕೈಗಾರಿಕೀಕರಣ, ನಗರೀಕರಣ ಹಾಗೂ ಅಭಿವೃದ್ಧಿ ಪ್ರಕ್ರಿಯೆಗಳಿಂದ ಇಡೀ ವಿಶ್ವ ಹೇಗೆ ವಿನಾಶದ ಅಂಚನ್ನು ಮುಟ್ಟಿದೆ ಎಂಬ ಸತ್ಯಾಂಶವು ಗೋಚರವಾದ ನಂತರ ಇದರ ವ್ಯಾಪ್ತಿ ಮತ್ತಷ್ಟು ವಿಸ್ತಾರವಾಯಿತು. ಅಂತೆಯೇ ಪ್ರಕೃತಿಯ ಮೇಲೆ ಮಾನವ ನಡೆಸುತ್ತಿರುವ ನಿರಂತರ ದಾಳಿಯಿಂದಾಗಿ ಪರಿಸರ ಚಿಂತನೆ ಜಗತ್ತಿನಾದ್ಯಂತ ಇಂದು ಹೆಚ್ಚೆಚ್ಚು ಚರ್ಚೆಗೊಳ್ಳುತ್ತಿದೆ.

ಬೇಂದ್ರೆ ಮತ್ತು ಕುವೆಂಪು ಅವರು ಪರಿಸರ ಪ್ರಶ್ನೆಯನ್ನು ತಮ್ಮ ಕೃತಿಗಳಲ್ಲಿ ಕೇಂದ್ರವನ್ನಾಗಿಸಿಕೊಂಡಿದ್ದಾರೆ. ಇವರ ಕೃತಿಗಳಲ್ಲಿ ಮತ್ತೆ ಮತ್ತೆ ಎದುರಾಗುವ ಪರಿಸರದ ವಿವರಗಳು, ವೈವಿಧ್ಯತೆಗಳು ನನಗೆ ಆಶ್ಚರ್ಯ ಮತ್ತು ಕುತೂಹಲವನ್ನು ಹುಟ್ಟಿಸಿವೆ. ಇವೇ ಈ ಅಧ್ಯಯನಕ್ಕೆ ಮುಖ್ಯ ಪ್ರೇರಕಗಳು. ಇವುಗಳ ಶೋಧವೇ ಈ ಅಧ್ಯಯನದ ಮುಖ್ಯ ಧ್ಯೇಯ.

ಈ ಅಧ್ಯಯನದಲ್ಲಿನ ವಿಚಾರಗಳಿಗೆ ಮತ್ತು ತಾತ್ವಿಕತೆಗಳಿಗೆ ಭಾರತೀಯ ಹಾಗೂ ಜಾಗತಿಕ ಮೂಲಗಳ ಆಕರಗಳಿಂದ ಪ್ರೇರಣೆ ಪಡೆದಿದ್ದೇನೆ. ಕಾಳಿದಾಸ, ಗಾಂಧಿ, ಠಾಕೂರ್, ಉಮರ್‌ಖಯ್ಯಾಂ, ರಸ್ಕಿನ್, ಎಮರ್‌ಸನ್,

ಥೋರೊ, ವರ್ಡ್ಸ್‌ವರ್ತ್ ಮೊದಲಾದ ಲೇಖಕರಿಂದಲೂ, ಅವರನ್ನು ಕುರಿತು ಅಧ್ಯಯನ ನಡೆಸಿರುವ ಹಲವು ವಿಮರ್ಶಕರ ಒಳನೋಟಗಳು ನನ್ನನ್ನು ಪ್ರೇರೇಪಿಸಿವೆ ಮತ್ತು ಮುನ್ನಡೆಸಿವೆ. ಪರಿಸರ ವಿಜ್ಞಾನ ಎಂ.ಎಸ್ಸಿ ಪದವಿಗಾಗಿ ನಾನು ಓದಿದ ಪಠ್ಯಗಳು, ಸಂಪ್ರಬಂಧ ರಚನೆ ಈ ಮಹಾ ಪ್ರಬಂಧಕ್ಕೆ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಅಧ್ಯಯನಕ್ಕೆ ಅನ್ಯ ಜ್ಞಾನ ಶಿಸ್ತಿನ ಬೆಂಬಲವನ್ನು ಹೆಚ್ಚಿಸಿವೆ.

ಈ ಅಧ್ಯಯನ ಕನ್ನಡ ನವೋದಯ ಸಂದರ್ಭದಲ್ಲಿ ಕುವೆಂಪು ಬೇಂದ್ರೆಯವರು ಅಭಿವ್ಯಕ್ತಿಸಿದ ಪರಿಸರ ಕಾಳಜಿಯನ್ನು ಕುರಿತದ್ದು. ಆದರೂ ಪೂರಕವಾಗಿ ಜಾಗತಿಕ ಹಾಗೂ ಭಾರತೀಯ ಪರಿಸರ ಇತಿಹಾಸ ಮತ್ತು ಕಾಳಜಿಯ ಕೃತಿಗಳ ಚಾರಿತ್ರಿಕ ಮಹತ್ವವನ್ನು ಗಮನಿಸುತ್ತದೆ. ಜೊತೆಗೆ ಆಧುನಿಕ ಸಂದರ್ಭದಲ್ಲಿ ನಡೆಯುತ್ತಿರುವ ಪರಿಸರ ಅಧ್ಯಯನಗಳನ್ನು ಗಮನಕ್ಕೆ ತೆಗೆದುಕೊಂಡಿದೆ. ಆ ಹಿನ್ನೆಲೆಯಲ್ಲಿ ಅಧ್ಯಯನವನ್ನು ಪ್ರಸ್ತುತಪಡಿಸುತ್ತದೆ. ಹಾಗಾಗಿ ಇದು ಕುವೆಂಪು ಬೇಂದ್ರೆ ಅವರ ಪರಿಸರ ಕಾಳಜಿಯ ಮೂಲ, ಉದ್ದೇಶ, ಧೋರಣೆ, ಅಭಿವ್ಯಕ್ತಿಯ ಅನನ್ಯತೆಗಳ ಶೋಧದ ವಿಶ್ಲೇಷಣೆಯನ್ನು ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡಿದೆ.

ಮತ್ತೊಂದು ಉದ್ದೇಶವೆಂದರೆ ಈ ಅಧ್ಯಯನ ಪರಿಸರ ಎಂದರೇನು? ಪರಿಸರದ ವ್ಯಾಖ್ಯೆ, ಜಾಗತಿಕ - ಭಾರತೀಯ ಪರಿಸರ ಚಿಂತನೆಯ ಸ್ಥೂಲ ಪರಿಚಯ, ಪರಿಸರ ಅಧ್ಯಯನಗಳು ಅಥವಾ ಹಸಿರು ಅಧ್ಯಯನಗಳ ಮಹತ್ವವನ್ನು ಕುರಿತು ಚಿಂತಿಸುತ್ತದೆ. ಆದಾಗ್ಯೂ ಇಲ್ಲಿ ಬೇಂದ್ರೆ ಕುವೆಂಪು ಅವರ ಪರಿಸರ ಕಾಳಜಿಗಳು ಮತ್ತು ಅವರ ಕೃತಿಗಳ ತಾತ್ವಿಕ ನೆಲೆಗಟ್ಟಿನ ಶೋಧಕ್ಕೆ ಹೆಚ್ಚು ಒತ್ತನ್ನು ಕೊಡಲಾಗಿದೆ. ಹಾಗೆಯೇ ಡೀಪ್ ಇಕಾಲಜಿಯ ಜೀವಕೇಂದ್ರಿತ ತತ್ವಗಳು ಈ ಲೇಖಕರಲ್ಲಿ ಮೈ ಪಡೆದಿರುವ ಬಗೆಯನ್ನು ಈ ಅಧ್ಯಯನ ಒಳಗು ಮಾಡಿಕೊಳ್ಳುತ್ತದೆ. ಆ ಮೂಲಕ ಕನ್ನಡದ ಪರಿಸರ ಮತ್ತು ಸಾಹಿತ್ಯದ ನಡುವಣ ಸಂಬಂಧವನ್ನು ಶೋಧಿಸಿಕೊಳ್ಳುವುದು.

ಹಾಗೆಯೇ ಕನ್ನಡದಲ್ಲಿ ಪರಿಸರ ವಿಮರ್ಶೆ ಅಥವಾ ಹಸಿರು ಅಧ್ಯಯನದ ತಾತ್ವಿಕತೆಯನ್ನು ಕಟ್ಟಿಕೊಳ್ಳುವುದು ಮತ್ತು ದಾಖಲಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಹಾಗಾಗಿ ಇದು ಅಂತರ್‌ಶಿಸ್ತೀಯ ಅಧ್ಯಯನ.

ಸಾಹಿತ್ಯವನ್ನು ಅಧ್ಯಯನಗಳು ಆಯಾ ಕಾಲದ ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕಾಭಿವೃದ್ಧಿಗಳ ಹಿನ್ನೆಲೆಯಲ್ಲಿ ಅರ್ಥೈಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಇಂದು ಜಾಗತಿಕ ಮಟ್ಟದಲ್ಲಿ ಪರಿಸರ ಸಮಸ್ಯೆಗಳು ಉಲ್ಬಣಗೊಳ್ಳುತ್ತಿರುವ ಸನ್ನಿವೇಶ ಇದಾಗಿದೆ. ಹಾಗಾಗಿ ಸಾಹಿತ್ಯವನ್ನು ಪರಿಸರ ಕೇಂದ್ರಿತ ನೆಲೆಯಲ್ಲಿ ಅರ್ಥೈಸುವ ಪ್ರಕ್ರಿಯೆಯು ಜಗತ್ತಿನಾದ್ಯಂತ ಕಾಣಿಸುತ್ತಿದೆ. ಕೈಗಾರಿಕೀಕರಣದಿಂದ ನಿರ್ಮಾಣವಾದ ನಗರೀಕರಣ, ಯಾಂತ್ರಿಕ ಬದುಕು ಹಾಗೂ ಪ್ರಕೃತಿಯಿಂದ ದೂರವಾದ ಮನುಷ್ಯನ ಅಖಂಡ ಬದುಕನ್ನು ಪಾಶ್ಚಾತ್ಯ ಹಾಗೂ ಪೌರಾತ್ಯ ಸಂದರ್ಭಗಳಲ್ಲಿ ಮುಖಾಮುಖಿಯಾಗಿಸಿದಂತೆ ಪ್ರಸ್ತುತ ಜಾಗತೀಕರಣ ಹಾಗೂ ನವವಸಾಹತುಶಾಹಿ ಸಂದರ್ಭದ ಸಾಹಿತ್ಯ ಸೃಷ್ಟಿ ಮತ್ತು ಸಾಹಿತ್ಯ ಕುರಿತ ಅಧ್ಯಯನ ಪರಿಸರ ಕೇಂದ್ರಿತ ನೆಲೆಯಲ್ಲಿ ಈ ಅಧ್ಯಯನದಲ್ಲಿ ಚಿಂತಿತಗೊಳ್ಳುತ್ತದೆ.

ಪರಿಸರ ಎಂದರೇನು, ಪರಿಸರ ವಿಮರ್ಶೆಯ ವಿವಿಧ ಅಧ್ಯಯನ ಮಾದರಿಗಳಾವುವು ಆ ಮಾದರಿಗಳಲ್ಲಿ ಸಾಹಿತ್ಯ ಕೃತಿಗಳ ವಿಶ್ಲೇಷಣೆಯ ಉದ್ದೇಶಗಳನ್ನು ಈ ಅಧ್ಯಯನ ಒಳಗೊಂಡಿದೆ. ಇದು ಸಾಹಿತ್ಯ ಕೃತಿಗಳಲ್ಲಿ

ಪರಿಸರದ ಪ್ರತಿನಿಧೀಕರಣವನ್ನು ಕುರಿತ ಅಧ್ಯಯನವೇ ಹೊರತು ಪ್ರಾಯೋಗಿಕ ಅಧ್ಯಯನವಲ್ಲ. ಮುಖ್ಯವಾಗಿ ಇದು ಪರಿಸರಕೇಂದ್ರಿತ ಅಧ್ಯಯನ. ಪೂರ್ಣದೃಷ್ಟಿ ಅಥವಾ ಸಂಶ್ಲೇಷಣೆಯ ಅಧ್ಯಯನ.

ಅಡಿಟಿಪ್ಪಣಿ

೧. ನಿರಂಜನ (ಪ್ರ.ಸಂ.) ; ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ, ಸಂಪುಟ - ೨, ಜೀವಜಗತ್ತು, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ೧೯೭೧, ಪು. ೩೨೫-೩೨೬.

೨. ಪುಟ್ಟಸ್ವಾಮಿ ಕೆ., ಬಿ.ಎಸ್. ಕೃಪಾಕರ ಮತ್ತು ಕೆ. ಸೇನಾನಿ; ಜೀವಜಾಲ, ಹಸಿರು ಪ್ರಕಾಶನ, ಬೆಂಗಳೂರು, ೨೦೦೧, ಮುನ್ನುಡಿ.

೩. ಶಿವಾರೆಡ್ಡಿ ಕೆ.ಸಿ. (ಸಂ.) ; ಕುವೆಂಪು ಸಮಗ್ರ ಗದ್ಯ ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೩, ಪು. ೨೮೭

೪. - ಅದೇ -, ಪು. ೫೭೩

ಅಧ್ಯಾಯ – ೨

ಪರಿಸರ ವಿಮರ್ಶೆ ಅಥವಾ ಹಸಿರು ಅಧ್ಯಯನಗಳು

೧. ಪರಿಸರ ವಿಮರ್ಶೆಯ ಹಿನ್ನೆಲೆ - ಮುನ್ನೆಲೆ :
೨. ಪರಿಸರವಾದಿ ವಿಮರ್ಶಕರು
೩. ಡೀಪ್ ಇಕಾಲಜಿ ಎಂದರೇನು
೪. ಡೀಪ್ ಇಕಾಲಜಿಯ ಪರಿಸರ ಕೇಂದ್ರಿತ ನೆಲೆಗಳು
೫. ಪರಿಸರ ಕೇಂದ್ರಿತ ಚಿಂತನೆಗೆ ತೊಡಕಾಗಿರುವ ಕೈಗಾರಿಕೀಕರಣ ಪ್ರಕ್ರಿಯೆ
೬. ಪ್ರಗತಿ ಪಥದಿಂದ ಡೀಪ್ ಇಕಾಲಜಿಯೆಡೆಗೆ
೭. ಡೀಪ್ ಇಕಾಲಜಿಯ ಧ್ಯೇಯೋದ್ದೇಶಗಳು
೮. ಪರಿಸರ ವಿಜ್ಞಾನೀಯ ದೃಷ್ಟಿ ಅಥವಾ ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡಿರುವ ಚರಾಚರಾ ಜಗತ್ತಿನ ಸಮಗ್ರ ದೃಷ್ಟಿ
೯. ಪರಿಸರ ಸ್ತ್ರೀವಾದ ಮತ್ತು ಇಕೊಲಾಜಿಸಮ್
೧೦. ಕನ್ನಡ ವಿಮರ್ಶಾ ವಿವೇಕ ಮತ್ತು ಪರಿಸರ ವಿಮರ್ಶೆ

ಮಲೆಯ ಹಸಿರೆ ಹಸಿರು
ಏನು ರಾನು - ಕಾನು?
ಗಂಗೆಯ ಬಸಿರು
ತಣ್ಣಗಿರಲಿ.

– ಅಂಬಿಕಾತನಯದತ್ತ

ಪರಿಸರ ವಿಮರ್ಶೆ ಅಥವಾ ಹಸಿರು ಅಧ್ಯಯನಗಳು

೧. ಪರಿಸರ ವಿಮರ್ಶೆಯ ಹಿನ್ನೆಲೆ - ಮುನ್ನೆಲೆ :

ಪರಿಸರ ವಿಮರ್ಶೆ ಸಾಹಿತ್ಯ ವಿಮರ್ಶೆಯ ಒಂದು ಬಗೆ. ಕೆಲವು ಬಾರಿ ಪರಿಸರ ವಿಮರ್ಶೆಯನ್ನು ಹಸಿರು ವಿಮರ್ಶೆ ಎಂದು ಕರೆಯಲಾಗಿದೆ. ಹಸಿರು ವಿಮರ್ಶೆ ಸಾಹಿತ್ಯ ಮತ್ತು ಪರಿಸರದ ನಡುವಿನ ಸಂಬಂಧದ ಬಗ್ಗೆ ಹೆಚ್ಚಿನ ಒತ್ತನ್ನು ಕೊಡುತ್ತದೆ. ಇಕಾಲಜಿ, ನೈಸರ್ಗಿಕ ಇತಿಹಾಸ ಹಾಗೂ ಪರಿಸರವನ್ನು ಕುರಿತ ಅಧ್ಯಯನಗಳನ್ನು ಪರಿಸರ ವಿಮರ್ಶೆ ತನ್ನ ಭಾಗವಾಗಿಸಿಕೊಂಡಿದೆ. 'ಇಕೊಕ್ರಿಟಿಸಿಸಂ' ಅಥವಾ ಪರಿಸರ ವಿಮರ್ಶೆ ಎನ್ನುವುದು ಸಾಹಿತ್ಯಕ್ಕೂ ಭೌತಿಕ ಜಗತ್ತಿಗೂ ಇರುವ ಸಂಬಂಧದ ಅಧ್ಯಯನವಾಗಿದೆ. ಹಾಗೆಯೇ ಮಾನವ ಸಮುದಾಯ ಪ್ರಕೃತಿಯೊಂದಿಗೆ ಉಳಿಸಿಕೊಂಡಿರುವ ಆತ್ಮೀಯ ಸ್ನೇಹ ಸಂಬಂಧಗಳನ್ನು ಪರಿಶೀಲಿಸುತ್ತದೆ. ಪರಿಸರ ವಿಮರ್ಶೆ ಪ್ರಕೃತಿಯನ್ನು ಕುರಿತ ರಚನೆಗಳ ಅಧ್ಯಯನವೂ ಆಗಿದೆ.

ಇಕೊಕ್ರಿಟಿಸಿಸಂ ಅಥವಾ ಗ್ರೀನ್ ಕ್ರಿಟಿಸಿಸಂ ಎನ್ನುವ ಪರಿಕಲ್ಪನೆ ಅಮೇರಿಕದಲ್ಲಿ ೧೯೮೦ರ ದಶಕದಲ್ಲಿ ಹಾಗೂ ಬ್ರಿಟನ್ನಿನಲ್ಲಿ ೧೯೯೦ರ ದಶಕದ ಪ್ರಾರಂಭದಲ್ಲಿ ಬಳಕೆಗೆ ಬಂದಿತು. ಈ ಪರಿಕಲ್ಪನೆ ಇನ್ನೂ ಪ್ರಾದುರ್ಭಾವ ಸ್ಥಿತಿಯಲ್ಲಿರುವುದರಿಂದ ಇದರ ಈವರೆಗಿನ ಸಾಂಸ್ಥಿಕ ಚರಿತ್ರೆಯನ್ನು ಹೇಳಿ ಮುಂದುವರಿಯುವುದು ಸೂಕ್ತವೆನಿಸುತ್ತದೆ. ಅಮೇರಿಕದ ಚೆರಿಲ್ ಗ್ಲಾಟ್‌ಫಾಲ್‌ಟಿಯನ್ನು ಇದರ ಸಂಸ್ಥಾಪಕಿಯೆಂದು ಒಪ್ಪಿಕೊಳ್ಳಲಾಗಿದೆ. ತುಂಬ ಉಪಯುಕ್ತವೂ ಖಚಿತವೂ ಆದ ವಿಚಾರಗಳನ್ನು ಒಳಗೊಂಡಂತಹ ಪ್ರಬಂಧಗಳ ಸಂಕಲನ - The Eco criticism Reader : Landmarks in literary Ecology - university of Georgia press - 1996) ವನ್ನು ಹೆರಾಲ್ಡ್ ಫ್ರಾಂ ಜೊತೆ ಸಹಸಂಪಾದನೆ ಮಾಡಿದ್ದವಳು ಈಕೆ. 1992ರಲ್ಲಿ ASLE - The Association for the Study of Literature and environment ನ ಸಹ ಸ್ಥಾಪಕಿಯಾದಳು. ಇದನ್ನು ಅಝ್‌ಲೀ ಎಂದು ಉಚ್ಚರಿಸಬಹುದು. ಅಝ್‌ಲೀ ತನ್ನದೇ ಆದ ಗೃಹ ಪತ್ರಿಕೆಯೊಂದನ್ನು ಹೊರಡಿಸುತ್ತದೆ. ಅದರ ಹೆಸರು ಇಝ್‌ಲೀ (Inter disciplinary studies in literature and environment) ಇದು ೧೯೯೩ರಲ್ಲಿ ಆರಂಭವಾದ ಪತ್ರಿಕೆ. ಹಾಗಾಗಿ ೧೯೯೦ರ ದಶಕದ ಆದಿಯಲ್ಲೇ ಅಮೇರಿಕನ್ ಇಕೊಕ್ರಿಟಿಸಿಸಂ ಎನ್ನುವುದು ಬಹಳ ಸಮೃದ್ಧವಾಗಿ ಬೆಳೆದ ಅಕಾಡೆಮಿಕ್ ಚಳವಳಿಯಾಗಿ ನಳನಳಿಸುತ್ತ, ಅದು ಅಧಿಕೃತ ಸಾಂಸ್ಥಿಕ ಸ್ವರೂಪವನ್ನು ಹೊಂದುವ, ತುಂಬ ನಿರ್ದಿಷ್ಟವಾದ ಜರ್ನಲ್‌ಗಳನ್ನು ಹೊರತರುವ ಕೆಲಸಕ್ಕೆ ಮೊದಲಿಟ್ಟಿತ್ತು. ಆದರೆ ಅವು ಕೂಡ ಅಕಾಡೆಮಿಕ್ ಸ್ವರೂಪದಲ್ಲಿಯೇ ರೂಪುಗೊಂಡಂತಹವು. ಲಭ್ಯವಿರುವ ಬಹಳಷ್ಟು ವಾಚಿಕೆಗಳು ಮತ್ತು ಸಾಹಿತ್ಯ ಸಿದ್ಧಾಂತ ಪ್ರವೇಶಿಕೆಗಳಿಗಿಂತ, ಇಕೊಕ್ರಿಟಿಸಿಸಂ ಅನ್ನು ಮೊದಲು ಪ್ರಸ್ತಾಪಿಸಿದ್ದು ಈ ಪುಸ್ತಕವೆ. ಈ ಚಳವಳಿಗೆ ಈತನಕ ಸ್ಪಷ್ಟವಾದ ಬಹುಶ್ರುತ ನಂಬಿಕೆಗಳಾಗಲಿ, ತತ್ವಗಳಾಗಲಿ, ಮಾರ್ಗ ಅಥವಾ

ವಿಧಾನಗಳಾಗಲಿ ಇಲ್ಲ. ಆದರೆ ಅಮೆರಿಕದಲ್ಲಿ ಪಶ್ಚಿಮದ ವಿಶ್ವವಿದ್ಯಾಲಯಗಳಲ್ಲಿ ಇಕೊಕ್ರಿಟಿಸಿಸಂ ಪ್ರಬಲವಾಗಿದೆ.

ಇಕೊಕ್ರಿಟಿಸಿಸಂ ಒಂದು ಚಿಂತನೆಯ ವಿಚಾರವಾಗಿ ಹೊರಬಿದ್ದಿದ್ದು ೧೯೭೦ರ ದಶಕದ ಕೊನೆಯಲ್ಲಿ. WLA (The Western Literature Association) ಎಂಬ ಪಶ್ಚಿಮ ಅಮೇರಿಕದ ಸಾಹಿತ್ಯದಲ್ಲಿ ಆಸಕ್ತಿಯುಳ್ಳ ಸಂಸ್ಥೆಯ ಸಭೆಯೊಂದರಲ್ಲಿ. ಇಕೊಕ್ರಿಟಿಸಿಸಂ ಎನ್ನುವ ಪದದ ಹುಟ್ಟನ್ನು ವಿಲಿಯಂ ರ್‍ಯೂಕರ್ಟ್ ೧೯೭೮ರಲ್ಲಿ ಬರೆದ ನಿಬಂಧ - Literature and Ecology : An experiment in Ecocriticismದಲ್ಲಿ ಹುಡುಕಿ ತೆಗೆಯುತ್ತಾರೆ. ಸಾಹಿತ್ಯ ವಿಮರ್ಶೆಯಲ್ಲಿ ಇದಕ್ಕೆ ಸಂವಾದಿಯಾದ ಪದ 'ಇಕಾಲಜಿ'ಯನ್ನು ಮೊದಲು ಬಳಸಿದವರು ಅಮೇರಿಕದ ಪ್ರಮುಖ ಪರಿಸರ ವಿಮರ್ಶಕ ಕಾರ್ಲ್ ಕ್ರೂಬರ್. ಅವರ ಲೇಖನ 'Home at Grasmere : Ecological Holiness' PMLA ಜರ್ನಲ್‌ನಲ್ಲಿ (ಸಂ. ೮೯, ೧೯೭೪, ಪುಟ ೧೩೨-೧೪೧ರಲ್ಲಿ) ಪ್ರಕಟವಾಯಿತು. ಮೈಖೇಲ್ ಪಿ ಬ್ರಾಂಚ್ ಇಕೊಕ್ರಿಟಿಸಿಸಂ ಎಂದರೆ ಏನು ಎಂಬ ಏಕರೂಪಿ ಶೀರ್ಷಿಕೆಯ ಅಭಿಪ್ರಾಯ ಸೂಚಕ ಮಂಡನೆಗಳಿಗೆ ಪ್ರಸ್ತಾವನೆಯನ್ನು ಒದಗಿಸುತ್ತಾರೆ. ೧೯೮೯ರಲ್ಲಿ ನಡೆದ WLA (Coeur d' alene, USA - A town in the northern panhandle of Idaho; popular Resort area) ಸಮ್ಮೇಳನದಲ್ಲಿ, ಅಲ್ಲಿಯವರೆಗೂ ಸುಷುಪ್ತಿಯಲ್ಲಿದ್ದ ಇಕೊಕ್ರಿಟಿಸಿಸಂ ಮತ್ತು ಇಕಾಲಜಿ ಎಂಬ ಎರಡೂ ಪರಿಭಾಷೆಗಳು (ಬ್ರಾಂಚ್ ಹೇಳುವಂತೆ ಅವು ವಿಮರ್ಶೆಯ ಪರಿಭಾಷೆಗಳು) ಮೊದಲ ಬಾರಿಗೆ ಬಹಿರಂಗವಾಗಿ ಮತ್ತು ಜಾಗೃತವಾಗಿ ಪ್ರಸ್ತಾಪಿಸಲ್ಪಟ್ಟವು. ಅಲ್ಲಿ ಆ ಪರಿಭಾಷೆಯನ್ನು ಪುನರುಜ್ಜೀವನಗೊಳಿಸಿದ್ದು ಆಗ ಪದವೀಧರ ವಿದ್ಯಾರ್ಥಿನಿಯಾಗಿದ್ದ ಚೆರಿಲ್ ಗ್ಲಾಟ್‌ಫಾಲ್‌ಟಿ. ಅಷ್ಟೇ ಅಲ್ಲ, ಆ ಪರಿಭಾಷೆಯನ್ನು ಹಿಂದೆ ಪರಿಸರ ಸಾಹಿತ್ಯವೆಂದು ತಿಳಿದಿದ್ದ ವಿಸ್ತೃತ ಸಾಹಿತ್ಯ ಪ್ರಕಾರಕ್ಕೆ ಅನ್ವಯಿಸಬೇಕೆಂದು ಚೆರಿಲ್ ಗ್ಲಾಟ್‌ಪಾಲ್‌ಟಿ ಒತ್ತಾಯಿಸಿದಳು ಕೂಡ.

ಪ್ರಸ್ತುತ ಅಮೆರಿಕದಲ್ಲಿ ಅಸ್ತಿತ್ವದಲ್ಲಿ ಇರುವಂತಹ ಇಕೊಕ್ರಿಟಿಸಿಸಂ ಪರಿಕಲ್ಪನೆ ತನ್ನ ಸಾಹಿತ್ಯಕ ನಿಲುವನ್ನು ಸ್ಥಾಪಿಸಿಕೊಂಡಿದ್ದು ೧೯ನೇ ಶತಮಾನದ ಮೂವರು ಲೇಖಕರಿಂದ. ಆ ಮೂವರೂ ಪ್ರಕೃತಿ, ಜೀವನಶಕ್ತಿ ಮತ್ತು ಅಂದಿನ ಅಮೆರಿಕದ ರುದ್ರರಮಣೀಯತೆಯನ್ನು ಆರಾಧಿಸಿದವರು. ಇವರೆಂದರೆ, ರಾಲ್ಫ್ ವಾಲ್ಡೊ ಎಮರ್ಸನ್ (೧೮೦೩-೧೮೮೨), ಮಾರ್ಗರೆಟ್ ಫುಲ್ಲರ್ (೧೮೧೦-೧೮೫೦), ಮತ್ತು ಹೆನ್ರಿ ಡೇವಿಡ್ ಥೋರೋ (೧೮೧೭-೧೮೬೨) ಈ ಮೂವರೂ, ಒಟ್ಟಿಗೆ, ಟ್ರಾನ್ಸೆಂಡೆನ್ಷಿಯಲಿಸ್ಟ್ ಎಂದು ಖ್ಯಾತರಾದ ನ್ಯೂ ಇಂಗ್ಲೆಂಡ್‌ನ ಲೇಖಕರು, ಪ್ರಬಂಧಕಾರರು ಮತ್ತು ತತ್ವಜ್ಞಾನಿಗಳು. ಯೂರೋಪಿನ ಮಾದರಿಗಳಿಂದ ಸಾಂಸ್ಕೃತಿಕ ಬಿಡುಗಡೆ ಪಡೆಯಲು ನಡೆದ ಮೊದಲ ಸಾಹಿತ್ಯ ಚಳುವಳಿ ಇದು. ಲಾರ್ಜುರ್ ಝಿಪ್‌ನ ಸಂಪಾದಕತ್ವದಲ್ಲಿ ಪೆಂಗ್ವಿನ್ ಪ್ರಕಾಶನ ೧೯೮೨ರಲ್ಲಿ ಹೊರತಂದ ರಾಲ್ಫ್ ವಾಲ್ಡೊ ಎಮರ್ಸನ್‌ನ ಆಯ್ದ ಪ್ರಬಂಧಗಳ ಪುಸ್ತಕದಲ್ಲಿ, ಎಮರ್ಸನ್ ೧೮೩೬ರಲ್ಲಿ ಅನಾಮಿಕವಾಗಿ ಪ್ರಕಟಿಸಿದ ಕಿರುಹೊತ್ತಿಗೆ ನೇಚರ್ ಕೂಡ ಸೇರಿದೆ. ಇದು ಆತನ ಧ್ಯಾನಸ್ಥ ಕೃತಿ ; ಸ್ವಾಧ್ಯಾಯ ಮೂಲದ್ದು, ತಾತ್ವಿಕವಾದದ್ದಲ್ಲ. ಇದು ಪ್ರಾಕೃತಿಕ ಜಗತ್ತು ಆತನ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ಹಲವೆಡೆ ನೇರವಾದ, ಶಕ್ತಿಯುತವಾದ ನಾಟಕೀಯತೆಯಿಂದ ಸಮೃದ್ಧಗೊಳಿಸಿ ಬರೆದ ಕೃತಿ.

ಫುಲ್ಲರ್‌ಳ ಮೊದಲ ಪುಸ್ತಕ Summer on the lakes, during 1843 ಎಂಬುದು The portable margaret fuller, viking / penguin, 1994 ಎಂಬ ಗ್ರಂಥದಲ್ಲಿ ಸೇರಿದೆ. ತುಂಬ ಸತ್ವಪೂರ್ಣ ಬರಹವಿದು. ಆಕೆ ಮುಖ್ಯವಾಗಿ ಅಮೇರಿಕದ ಭೂದೃಶ್ಯ ವೈಭವವನ್ನು ಇದರಲ್ಲಿ ದಾಖಲಿಸಿದ್ದಾಳೆ.

ಥೋರೋನ ವಾಲ್ಡೆನ್ (Walden, Oxford university press, worlds classics, 1999) ಅವನು ೧೮೪೫ರಿಂದ ಎರಡು ವರ್ಷಗಳ ಕಾಲ ವಾಲ್ಡೆನ್ ಕೊಳದ ತಟಿಯಲ್ಲಿ ಗುಡಿಸಲು ಹಾಕಿಕೊಂಡು ಕಳೆದಿದ್ದ ಕಾಲದ ವೃತ್ತಾಂತ. ವಾಲ್ಡೆನ್ ಕೊಳ ಅವನ ಸ್ವಂತ ಊರು ಮ್ಯಾಸಚೂಸೆಟ್ಸ್‌ನ ಕಾನ್ಕರ್ಡ್‌ಗೆ ಕೆಲವು ಮೈಲಿ ದೂರದಲ್ಲಿತ್ತು. ಪ್ರಾಯಶಃ ಅದು ನಾಗರಿಕ ಬದುಕಿನಿಂದ ಓಡಿಹೋಗಿ ಪ್ರಕೃತಿಗೆ ಮರಳಿ ಹೊಸ ಮನುಷ್ಯನಾಗುವುದನ್ನು ಬಯಸುವ ಮನಸ್ಸಿನ ಉತ್ಕೃಷ್ಟ ಮಾದರಿ. ಓದುಗರ ಮೇಲೆ ತೀವ್ರವಾದ ಪ್ರಭಾವ ಬೀರಿದ ಕೃತಿ ಇದು. ಈ ಮೂರೂ ಪುಸ್ತಕಗಳನ್ನು ಅಮೇರಿಕದ ಪರಿಸರಕೇಂದ್ರಿತ ಸಾಹಿತ್ಯದ ನೆಲೆಗಟ್ಟು ಎಂದು ಭಾವಿಸಲಾಗುತ್ತದೆ.

ಇದಕ್ಕೆ ಹೋಲಿಸಿದರೆ ಬ್ರಿಟನ್ನಿನ ಇಕೊಕ್ರಿಟಿಸಿಸಂ ಅಥವಾ ಹಸಿರು ಓದಿನ ಹುಟ್ಟನ್ನು ೧೮೨೦ರ ದಶಕದ ಬ್ರಿಟಿಷ್ ರೊಮ್ಯಾಂಟಿಸಿಸಂಗೆ ಥಳುಕು ಹಾಕಬಹುದೇ ವಿನಃ ೧೮೪೦ರ ದಶಕದ ಅಮೇರಿಕದ ಅತೀಂದ್ರಿಯ ತತ್ತ್ವಶಾಸ್ತ್ರಕ್ಕಲ್ಲ. ಬ್ರಿಟಿಷ್ ಕಡೆಯ ಇಕೊಕ್ರಿಟಿಸಿಸಂನ ನಿರ್ಮಾತೃ ಜೊನಾಥನ್ ಬೇಟ್. ಈತ ರೊಮ್ಯಾಂಟಿಕ್ ಇಕಾಲಜಿ : ವರ್ಡ್ಸ್‌ವರ್ತ್ ಅಂಡ್ ದಿ ಎನ್ವಿರಾನ್‌ಮೆಂಟಲ್ ಟ್ರೆಡಿಷನ್ - ರೂಟ್‌ಲೆಡ್ಜ್, ೧೯೯೧ ಕೃತಿಯ ಲೇಖಕ. ಬ್ರಿಟಿಷ್ ಪರಿಸರವಾದಿ ವಿಮರ್ಶಕರು ತಮ್ಮ ಹಲವಾರು ಆಲೋಚನೆಗಳು ರೇಮಾಂಡ್ ವಿಲಿಯಂಸ್‌ನ The country and the city (chatto and windus, 1973) ಕೃತಿಯಲ್ಲಿ ಇಕೊಕ್ರಿಟಿಸಿಸಂ ಎಂಬ ಮಾತು ಹುಟ್ಟುವ ಮೊದಲೇ ಬಿಂಬಿತವಾಗಿದ್ದವು ಎನ್ನುತ್ತಾರೆ. ಇಕೊಕ್ರಿಟಿಸಿಸಂಗೆ ಬ್ರಿಟನ್ನಿನಲ್ಲಿ ಇದ್ದ ಮೂಲಸೌಲಭ್ಯಗಳು ಅಮೇರಿಕದಲ್ಲಿ ಇದ್ದಿದ್ದಕ್ಕಿಂತ ಕಡಿಮೆ.

ರಾಷ್ಟ್ರಗಳ ಮಟ್ಟದಲ್ಲಿ ನಿರ್ದಿಷ್ಟವೂ ಭಿನ್ನವೂ ಆದ ಎರಡು ಪರಿಸರವಾದಿ ಮಾರ್ಗಗಳು ಅಸ್ತಿತ್ವದಲ್ಲಿವೆ. ಬ್ರಿಟಿಷ್ ಸಾಂಸ್ಕೃತಿಕ ಉಪಭೋಗವಾದವೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಘಟನೆಗಳೆಲ್ಲವನ್ನು ಚರಿತ್ರೆಯೇ ನಿರ್ಧರಿಸುವುದೆಂಬ ಅಮೇರಿಕದ ನವಚರಿತಾವಾದವೂ ಅವುಗಳ ಮಾರ್ಗ ಮತ್ತು ಧ್ಯೇಯವನ್ನು ಕುರಿತಂತೆ ಬಹಳ ಸ್ಪಷ್ಟವಾದ ಸಂಬಂಧ ಹೊಂದಿವೆ. ಆದರೆ ತಮ್ಮ ಒತ್ತು ಹಾಗೂ ಹುಟ್ಟಿನ ವಿಚಾರದಲ್ಲಿ ಅವು ಭಿನ್ನವಾಗುತ್ತವೆ. ಅಮೆರಿಕನ್ನರ ಆಯ್ಕೆ ಇಕೊಕ್ರಿಟಿಸಿಸಂ ಎಂಬ ಪರಿಭಾಷೆ. ಹಸಿರು ಓದು ಎನ್ನುವ ಪರಿಭಾಷೆ ಬ್ರಿಟನ್ನಿನಲ್ಲಿ ಹೆಚ್ಚು ಪ್ರಚಲಿತವಾಗಿದೆ. ಅಮೆರಿಕನ್ನರ ಬರವಣಿಗೆಯು ಉತ್ಸವದ ದಾರಿ ಹಿಡಿಯುವುದನ್ನು ಕಾಣಬಹುದು. ಎಷ್ಟೆಂದರೆ ಒಮ್ಮೊಮ್ಮೆ ಎಡಪಂಥೀಯರ ವಿರೋಧಿಗಳು ಮಾಡುವ 'ಮರವ ತಬ್ಬುವ ಜನ' ಎಂಬ ವ್ಯಾಖ್ಯಾನದಂತೆ. ಅದೇ ಬ್ರಿಟಿಷ್ ಮಾದರಿಯು ಬೆದರಿಸುವ ಹಾದಿ ಹಿಡಿಯುತ್ತದೆ. ಅದು ಸರ್ಕಾರದ ಕೈಗಾರಿಕೆಯ, ವಾಣಿಜ್ಯೀಕರಣದ ಮತ್ತು ನವವಸಾಹತುಶಾಹಿಗಳಿಂದ ಪರಿಸರದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಕೆ ಕೊಡುತ್ತದೆ. ಉದಾಹರಣೆಗೆ ಬೇಟ್‌ರ ಇತ್ತೀಚಿನ ಪುಸ್ತಕ The Song of the Earth (Picador 2000), ವಸಾಹತೀಕರಣವೂ, ಅರಣ್ಯನಾಶವೂ ಬಹಳ ಸಲ ಕೈಕೈ ಹಿಡಿದು ಸಾಗುತ್ತವೆ ಎಂದು ವಾದಿಸುತ್ತದೆ.

೨. ಪರಿಸರವಾದಿ ವಿಮರ್ಶಕರು

ಪರಿಸರವಾದಿ ಅಥವಾ ಪರಿಸರ ವಿಮರ್ಶಕರು ಪರಿಸರ ವಿಮರ್ಶೆ ಅಥವಾ ಹಸಿರು ವಿಮರ್ಶೆಯನ್ನು ಕುರಿತಂತೆ ತಮ್ಮದೇ ಆದ ನಿಲುವುಗಳನ್ನು ವ್ಯಕ್ತಪಡಿಸುತ್ತಾರೆ.

೧. ಪರಿಸರವಾದಿ ವಿಮರ್ಶಕರು ಸಾಹಿತ್ಯ ಕೃತಿಗಳನ್ನು ಪರಿಸರ ಕೇಂದ್ರಿತ ದೃಷ್ಟಿಕೋನದಿಂದ, ನೈಸರ್ಗಿಕ ಪರಿಸರವನ್ನು ಪ್ರತಿನಿಧಿಸುವತ್ತ ವಿಶೇಷ ಗಮನವಿಟ್ಟು, ಪುನರ್ ವ್ಯಾಸಂಗ ಮಾಡುತ್ತಾರೆ.

೨. ಪರಿಸರಕೇಂದ್ರಿತ ಪರಿಕಲ್ಪನೆಗಳ ಶ್ರೇಣಿಯನ್ನೇ ಅವರು ವಿಸ್ತರಿಸುತ್ತಾರೆ. ಅಂದರೆ ಪರಿಸರದಲ್ಲಿ ಲಭ್ಯವಿಲ್ಲದ ಪರಿಸರದಾಚೆಗಿನದನ್ನು ವಿಸ್ತರಿಸುತ್ತಾರೆ. ಅಂದರೆ ವೃದ್ಧಿ ಮತ್ತು ಚೈತನ್ಯ, ಸಮತೋಲನ ಮತ್ತು ಅಸಮತೋಲನ, ಸಹಬಾಳ್ವೆ ಮತ್ತು ಪರಸ್ಪರತೆ, ಶಕ್ತಿಮೂಲಗಳನ್ನು ಹಾಗು ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವಲ್ಲಿನ ಮನುಷ್ಯ ಧಾರಣ ಶಕ್ತಿ ಮತ್ತು ಅಸಾಮರ್ಥ್ಯ ಮುಂತಾದವುಗಳನ್ನು ಬಳಸಿ ಅನ್ವಯಗೊಳಿಸುತ್ತಾರೆ.

೩. ನಿಸರ್ಗವನ್ನು ತಮ್ಮ ಕೃತಿಗಳಿಗೆ ಮುನ್ನೆಲೆಯಾಗಿಸಿಕೊಂಡ ಅಮೆರಿಕದ ಅತೀಂದ್ರಿಯ ತತ್ತ್ವಜ್ಞಾನಿಗಳು ಮತ್ತು ಬ್ರಿಟಿಷ್ ರೊಮ್ಯಾಂಟಿಕ್ ಪರಿಸರವಾದಿಗಳು, ಜಾನ್ ಕ್ಲೇರ್‌ರ ಕಾವ್ಯ, ಥಾಮಸ್ ಹಾರ್ಡಿಯ ಕೃತಿಗಳು ಹಾಗು ಇಪ್ಪತ್ತನೇ ಶತಮಾನದ ಪೂರ್ವಾರ್ಧದ ಜಾರ್ಜಿಯನ್ ಕವಿಗಳಿಗೆ ವಿಧಿಬದ್ಧ ಪ್ರಾಮುಖ್ಯತೆಯನ್ನು ನೀಡಿದರು.

೪. ಪ್ರಸ್ತುತವೂ, ವಸ್ತುನಿಷ್ಠವೂ ಆದ ಸಾಹಿತ್ಯಸೃಷ್ಟಿಯ ಮೇಲೆ ಒತ್ತುಕೊಟ್ಟು, ಅದರಲ್ಲೂ ಮುಖ್ಯವಾಗಿ ಸ್ವಾಭಾವಿಕವಾದ ಭೂಮಿಯ ಲಕ್ಷಣವನ್ನು ಕುರಿತ ಪ್ರಬಂಧಗಳು, ಪ್ರವಾಸ ಕಥನಗಳು, ನೆನಪಿನ ಚಿತ್ರಗಳು ಮತ್ತು ಪ್ರಾದೇಶಿಕ ಸಾಹಿತ್ಯ ಕೃತಿಗಳಿಗೆ ಒತ್ತುಕೊಟ್ಟು ಸಾಹಿತ್ಯ ವಿಮರ್ಶನ ಚಟುವಟಿಕೆಗಳ ಪರಿಧಿಯನ್ನು ವಿಸ್ತರಿಸುತ್ತಾರೆ.

೫. ಅವರು ಸಾಹಿತ್ಯದ ಪ್ರಧಾನ ಸಿದ್ಧಾಂತಗಳ ಸಾಮಾಜಿಕ Constructivism ಮತ್ತು ಭಾಷಿಕ determinismಗಳಿಗೆ ಬೆನ್ನು ತಿರುವಿ (ಬಾಹ್ಯ ಜಗತ್ತಿನ ಭಾಷಿಕ ಹಾಗೂ ಸಾಮಾಜಿಕ Constructivismಗೆ ಅವರು ಕೊಡುವ ಮಹತ್ವ ಸೇರಿದಂತೆ) ಅವುಗಳ ಬದಲಿಗೆ ಸೂಕ್ಷ್ಮಾವಲೋಕನ, ಸಾಮೂಹಿಕವಾದ ನೈತಿಕ ಜವಾಬ್ದಾರಿ ಮತ್ತು ನಮ್ಮನ್ನು ಮೀರಿದ ನಮ್ಮಾಚೆಗಿನ ವಿಶ್ವಕ್ಕಿರುವ ಹಕ್ಕಿಗೆ ಬೆಲೆ ಕೊಡುವುದೇ ಮೊದಲಾದ ಪರಿಸರ ಕೇಂದ್ರಿತ ಮೌಲ್ಯಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ.

ಇಕೊಕ್ರಿಟಿಸಿಸಂ ಎನ್ನುವುದು ಪರಿಸರ ಸಂಬಂಧಿತ ಸಾಹಿತ್ಯವನ್ನು ಕುರಿತ ಅಧ್ಯಯನವಾಗಿದೆ. ಇಕೊಕ್ರಿಟಿಸಿಸಂಗೆ ಸಂಬಂಧಿಸಿದ ಅನೇಕ ಉದಾಹರಣೆಗಳು ೧೯೭೦ರ ಕಾಲಘಟ್ಟದಲ್ಲಿ ಬಂದ ಸಾಹಿತ್ಯ ಕೃತಿಗಳಲ್ಲಿ ಕಾಣಬಹುದಾಗಿದೆ. ೧೯೭೦ ಹಾಗೂ ೧೯೮೦ರ ನಡುವೆ ಬಂದ ಪರಿಸರ ವಿಮರ್ಶೆಗೆ ಸಂಬಂಧಿಸಿದ ಕೃತಿಗಳು ಮುಖ್ಯವಾಗಿ ಭೂಪ್ರದೇಶ, ಪ್ರಾಣಿ ಸಂಪತ್ತು ಹಾಗು ಸ್ತ್ರೀ ಸಮುದಾಯ ಪ್ರಕೃತಿಯೊಂದಿಗೆ ಉಳಿಸಿಕೊಂಡಿರುವ ಸಂಬಂಧವನ್ನು ಕುರಿತಂತೆ ಚರ್ಚೆ ಮಾಡುತ್ತವೆ. ಅಂತೆಯೇ ಇವು ಸಮಕಾಲೀನ ಪರಿಸರ ವಿಮರ್ಶೆಯ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿವೆ.

ಪಾಶ್ಚಾತ್ಯ ಪ್ರಾಚೀನ ಸಾಹಿತ್ಯದ ಅನೇಕ ಲೇಖಕರ ಬರವಣಿಗೆಗಳಲ್ಲಿ ಪ್ರಕೃತಿ ಬಹುಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಚೈನೀಸ್, ಗ್ರೀಕ್ಸ್, ಜಪಾನೀಸ್, ಇಂಡಿಯನ್ಸ್, ರೋಮನ್ಸ್‌ರಲ್ಲಿ ಪ್ರಕೃತಿ ಕೇಂದ್ರಿತ ಬರವಣಿಗೆ ಒಂದು ಪ್ರಕಾರವಾಗಿ ಬಳಕೆಯಾಗಿದೆ. ಅಮೆರಿಕದ ಮತ್ತು ಯುರೋಪಿಯನ್ ಪರಿಸರ ಕೇಂದ್ರಿತ ಬರವಣಿಗೆ ೧೮೫೦ರಲ್ಲಿ ರಚಿತವಾದ ಹೆನ್ರಿ ಡೇವಿಡ್ ಥೋರೋನ ವಾಲ್ಡೆನ್ ಕೃತಿಯನ್ನು ನೆನಪಿಗೆ ತರುತ್ತದೆ.

ಸಾಮಾನ್ಯವಾಗಿ ಪರಿಸರ ವಿಮರ್ಶಕರು ಪ್ರಕೃತಿ ಸಂಬಂಧಿತ ತಾತ್ವಿಕತೆಯಲ್ಲಿ ತೊಡಗಿರುತ್ತಾರೆ. ಇವರು ಡೀಪ್ ಇಕಾಲಜಿ ಮತ್ತು ಪರಿಸರ ಸ್ತ್ರೀವಾದ (Ecofeminism)ಗಳಲ್ಲಿ ಹೆಚ್ಚಿನ ಆಸಕ್ತಿಯನ್ನಿಟ್ಟುಕೊಂಡಿದ್ದಾರೆ. ಡೀಪ್ ಇಕಾಲಜಿ ಪಾಶ್ಚಾತ್ಯ ವಿಚಾರಧಾರೆಗಳಲ್ಲಿ ಬರುವ ಪರಿಸರ ಸಮಸ್ಯೆಗಳನ್ನು ಚರ್ಚಿಸುತ್ತದೆ. ಪ್ರಕೃತಿಗೆ ಮರಳುವ ಚಿಂತನೆಯನ್ನು ಮುಂದಿಡುತ್ತದೆ. ಪ್ರಕೃತಿಯ ಭಾಗವಾಗಬೇಕೆಂದು ಕರೆಕೊಡುತ್ತದೆ. ಆದರೆ ಪರಿಸರ ಸ್ತ್ರೀವಾದಿಗಳು ಪರಿಸರ ವಿಮರ್ಶೆಯನ್ನು ಸ್ತ್ರೀವಾದದ ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಡೀಪ್ ಇಕಾಲಜಿಸ್ಟ್‌ಗಳಂತೆಯೇ ಪರಿಸರ ಸ್ತ್ರೀವಾದಿಗಳು ಮಾನವನ ಅತಿಯಾಸೆಯಿಂದ ಪರಿಸರಕ್ಕೆ ಆಗುತ್ತಿರುವ ಮಾರಕ ಪರಿಣಾಮಗಳ ಬಗೆಗೆ ತೀವ್ರವಾಗಿ ಚಿಂತಿಸುತ್ತಾರೆ. ಅಂತೆಯೇ ಪುರುಷ ಕೇಂದ್ರಿತ ಸಮುದಾಯ ದಬ್ಬಾಳಿಕೆಯಿಂದ, ಕ್ರೌರ್ಯಗಳಿಂದ ಕೂಡಿದ ಸಂಸ್ಕೃತಿಗಳನ್ನು ನಿರ್ಮಿಸಿಕೊಂಡು ಹೆಣ್ಣು ಮತ್ತು ಪ್ರಕೃತಿಯನ್ನು ಸಮಾನವಾಗಿ ಶೋಷಿಸುತ್ತಿದೆ ಎಂದು ಪರಿಸರ ಸ್ತ್ರೀವಾದಿಗಳು ತಮ್ಮ ನಿಲುವನ್ನು ವ್ಯಕ್ತಪಡಿಸುತ್ತಾರೆ.

ಪರಿಸರ ವಿಮರ್ಶಕರು ಪ್ರಕೃತಿ ಅಥವಾ ಪರಿಸರದ ಬಗೆಗೆ ಜಾಗೃತಿಯನ್ನು ಮೂಡಿಸುತ್ತಲೇ ಭೂ ಸಂಪನ್ಮೂಲಗಳ ಮೌಲ್ಯಗಳ ಬಗೆಗೆ ಮನವರಿಕೆ ಮಾಡಿಕೊಡುತ್ತಾರೆ. Aldo Leopoldರ Land Ethic ಪರಿಕಲ್ಪನೆ ಪ್ರಕೃತಿ ಸಮುದಾಯದ ಒಂದು ಭಾಗವಾಗಿದೆ ಹೊರತು, ವಸ್ತುವಾಗಿಲ್ಲ ಎಂದು ಹೇಳುತ್ತದೆ. ಈ ಪರಿಕಲ್ಪನೆ ವಿಮರ್ಶಕರನ್ನು ಬಹಳಷ್ಟು ಪ್ರಭಾವಿಸಿದೆ. ವಿಮರ್ಶಕರಿಗೆ ವಿಜ್ಞಾನ ತಂತ್ರಜ್ಞಾನ ಪರಿಸರ ವಿರೋಧಿಯಾಗಿ ಕಂಡುಬರುತ್ತದೆ. ಅತಿವೇಗದ ಪರಿಸರ ನಾಶಕ್ಕೆ ಮೂಲಕಾರಣ ಪ್ರಗತಿಯ ಪಥದಲ್ಲಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳು.

ಪ್ರಕೃತಿಯನ್ನು ಕುರಿತ ಬರವಣಿಗೆಗಳನ್ನು ಕ್ಲಾಸಿಕ್‌ಗಳನ್ನಾಗಿ ಗುರುತಿಸಲು ಪರಿಸರ ವಿಮರ್ಶಕರು 'ಹಸಿರು ನಿಯಮ'ವನ್ನು ಆರಂಭಿಸಲಿದ್ದಾರೆ. ಪರಿಸರ ದೃಷ್ಟಿಕೋನದಿಂದ ವಿಭಿನ್ನ ಪಠ್ಯಗಳನ್ನು ಓದಲು ಇದು ಸಹಕಾರಿಯಾಗುತ್ತದೆ. ಈ ನಿಯಮ ನಿಸರ್ಗ ಸೌಂದರ್ಯವನ್ನು ಗ್ರಹಿಸಲು ಹೆಚ್ಚು ಸಹಾಯ ಮಾಡುತ್ತದೆ. 'ಹಸಿರು ನಿಯಮ'ಗಳನ್ನು ರೂಪಿಸಲು ಪರಿಸರ ವಿಮರ್ಶಕರು ೧೯ ಮತ್ತು ೨೦ನೇ ಶತಮಾನಗಳಲ್ಲಿ ಅಮೆರಿಕಾದಲ್ಲಿ ಸೃಷ್ಟಿಯಾದ ಪ್ರಕೃತಿ ಬರವಣಿಗೆಗಳನ್ನು ಪರಿಶೀಲಿಸಿದ್ದಾರೆ. ಇದಕ್ಕೂ ಹಿಂದೆ ಅಂದರೆ ಪುನರುಜ್ಜೀವನ ಸಂದರ್ಭದಲ್ಲಿ ಕಾಣಿಸಿಕೊಂಡ ಹಸಿರು ಬರವಣಿಗೆಗಳು ಗ್ರಾಮೀಣ ಪರಿಸರವನ್ನು ವಸ್ತುವನ್ನಾಗಿಟ್ಟುಕೊಂಡಿದ್ದವು. ಪ್ರಕೃತಿಯನ್ನು ದೈವತ್ವಕ್ಕೇರಿಸಿರುವ ಪರಿಯನ್ನು ಈ ಬರವಣಿಗೆಗಳಲ್ಲಿ ಕಾಣಬಹುದಾಗಿದೆ. ಇಂಥ ಬರವಣಿಗೆಗಳು ಕೈಗಾರಿಕಾ ಕ್ರಾಂತಿಯ ಕಾಲಘಟ್ಟದಲ್ಲಿ ರೂಪುಗೊಂಡವು. ಪರಿಸರ ವಿಮರ್ಶೆಯ ಕುರುಹುಗಳು ಅಮೆರಿಕದಲ್ಲಿ ಆರಂಭವಾದ ಕಾರಣ ಅಮೆರಿಕದ ಪ್ರಕೃತಿ ಬರವಣಿಗೆಗಳಿಗೆ ಹೆಚ್ಚಿನ ಒತ್ತನ್ನು ಕೊಡಲಾಯಿತು. ಅಂದಿನಿಂದ ಪರಿಸರ ವಿಮರ್ಶೆ ಒಂದು ಅಧ್ಯಯನ ಶಿಸ್ತಾಗಿ ರೂಪುಗೊಳ್ಳತೊಡಗಿತು. ಈ ಸಂದರ್ಭದಲ್ಲಿ ಬಂದ ಥೋರೋನ 'ವಾಲ್ಡೆನ್' ಕೃತಿ ಪರಿಸರ ಸ್ನೇಹಿ ಬದುಕನ್ನು ಪ್ರಸ್ತುತಪಡಿಸುತ್ತದೆ. ಅಲ್ಲಿಂದ ಪರಿಸರ ಕೇಂದ್ರಿತ ಬರವಣಿಗೆ ಒಂದು ಪ್ರಕಾರವಾಗಿಯೂ ಕಂಡುಬಂದಿತು.

೩. ಡೀಪ್ ಇಕಾಲಜಿ ಎಂದರೇನು

ಡೀಪ್ ಇಕಾಲಜಿಯೆನ್ನುವುದು ಪರಿಸರ ಪರವಾದ ಚಿಂತನೆ. ತಾತ್ತ್ವಿಕವಾಗಿ, ವೈಜ್ಞಾನಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ೧೯೬೦ರ ದಶಕಗಳಲ್ಲಿ ಆರಂಭವಾಗಿದ್ದ ಪರಿಸರ ಕ್ರಾಂತಿಯ ಕಾಲಘಟ್ಟದಲ್ಲಿ ಇದು ಅಸ್ತಿತ್ವಕ್ಕೆ ಬಂದಿತು. ಈ ಚಿಂತನೆಯು ಪರಿಸರದ ಸ್ಥಿತಿಗತಿಗಳ ಬಗ್ಗೆ ಆಳವಾಗಿ ಚಿಂತಿಸುತ್ತಾ ಪರಿಸರ ಸಂರಕ್ಷಣೆಗಾಗಿ ಉಳಿವಿಗಾಗಿ ಪ್ರಯತ್ನಿಸುತ್ತದೆ. ನಾಗರೀಕ ಮನಸ್ಥಿತಿಗಳ ಅಭಿವೃದ್ಧಿ ಪ್ರಕ್ರಿಯೆಯನ್ನು ವಿಮರ್ಶಿಸುತ್ತಾ, ಅದರಿಂದ ಪರಿಸರಕ್ಕಾಗುತ್ತಿರುವ ಅನ್ಯಾಯಗಳನ್ನು ಖಂಡಿಸುತ್ತಾ, ಆಧುನಿಕ ಸಮಾಜ ರೂಪಿಸಿಕೊಂಡಿರುವ ಪ್ರಗತಿ ಧೋರಣೆಯನ್ನು ತೀವ್ರವಾಗಿ ಪ್ರಶ್ನಿಸುತ್ತದೆ. ಹಾಗಾಗಿ ಡೀಪ್ ಇಕಾಲಜಿ ಜೀವನಶೈಲಿಗಳಲ್ಲಿ ಮತ್ತು ಮೌಲ್ಯಗಳಲ್ಲಿ ಬದಲಾವಣೆ ತರುವುದರತ್ತ ಹೊರಟಿದೆ. ಮಾನವ ಕೇಂದ್ರಿತ ಪರಿಸರದಿಂದ ಪರಿಸರ ಕೇಂದ್ರಿತ ನೆಲೆಗೆ ಡೀಪ್ ಇಕಾಲಜಿ ಬದಲಾಗುತ್ತಿದೆ.

೪. ಡೀಪ್ ಇಕಾಲಜಿಯ ಪರಿಸರ ಕೇಂದ್ರಿತ ನೆಲೆಗಳು

ಡೀಪ್ ಇಕಾಲಜಿ ಚಿಂತನೆಯ ತಾತ್ವಿಕತೆಯನ್ನು ಹೆನ್ರಿ ಡೇವಿಡ್ ಥೋರೊ, ಜಾನ್‌ಮ್ಯೂರ್, ಡಿ.ಎಚ್. ಲಾರೆನ್ಸ್, ರಾಬಿನ್‌ಸನ್ ಜೆಫರ್ಸ್, ಆಲ್ಡ್ಸ್ ಹಕ್ಸ್‌ಲೇ - ಅಂಥವರ ಪರಿಸರ ಕೇಂದ್ರಿತ ಸಾಮಾಜಿಕ ವಿಮರ್ಶೆಯಲ್ಲಿ ಕಾಣಬಹುದಾಗಿದೆ. ಇಂಥ ಪ್ರಭಾವೀಯುತ ಪ್ರಾಕೃತಿಕ ಹಾಗೂ ಸಾಮಾಜಿಕ ವಿಮರ್ಶೆ ಜಾರ್ಜ್ ಆರ್‌ವೆಲ್ ಹಾಗೂ ಥಿಯೋಡರ್ ರಾಸ್‌ಜಾಕ್‌ರ ಬರವಣಿಗೆಗಳ ಮೂಲಕ ಬೆಳಕಿಗೆ ಬಂದಿತು. ಸಮಕಾಲೀನ ಪ್ರಾಕೃತಿಕ ಪ್ರಜ್ಞೆ ಹಾಗೂ ಆಳವಾದ ಪರಿಸರ ಚಳುವಳಿಯ ಮೂಲವನ್ನು ಪರಿಸರ ಕೇಂದ್ರಿತ ಧರ್ಮಗಳಲ್ಲಿ ಹಾಗೂ ವಿಶ್ವದಾದ್ಯಂತ ವಾಸವಿರುವ ಆದಿವಾಸಿಗಳ ಜೀವನಶೈಲಿಗಳಲ್ಲಿ ಗುರುತಿಸಬಹುದಾಗಿದೆ. ಹಾಗೆಯೇ ಹತ್ತೊಂಬತ್ತನೇ ಶತಮಾನದಲ್ಲಿ ಕಂಡು ಬಂದ ರೊಮ್ಯಾಂಟಿಕ್ ನೇಚರ್ ಓರಿಯೆಂಟೆಡ್ ಚಳವಳಿಯಲ್ಲಿಯೂ ಡೀಪ್ ಇಕಾಲಜಿಯ ನೆಲೆಯನ್ನು ಗಮನಿಸಬಹುದಾಗಿದೆ.

ಡೀಪ್ ಇಕಾಲಜಿ ಚಿಂತನೆಯ ಹುಟ್ಟಿನಿಂದ ಪರಿಸರವೆನ್ನುವುದು ವಿಜ್ಞಾನವಾಗಿ ರೂಪುಗೊಂಡಿತು. ಆಲ್ಡೊ ಲಿಯೊಪಾಲ್ಡ್, ರಾಖೆಲ್ ಕಾರ್ಸನ್ ಹಾಗೂ ಇನ್ನಿತರ ಪರಿಸರ ಚಿಂತಕರ ಮುಖೇನ ಪರಿಸರ ದೃಷ್ಟಿಕೋನ ಅಥವಾ 'ಇಕಾಲಜಿಕಲ್ ಪರ್ಸ್‌ಪೆಕ್ಟೀವ್' ಎನ್ನುವುದು ಅಸ್ತಿತ್ವಕ್ಕೆ ಬಂದಿತು. ೧೯೬೦ರ ಕಾಲಘಟ್ಟದಲ್ಲಿ ಆರಂಭಗೊಂಡ ಪರಿಸರ ಚಳವಳಿಗೆ ಆಲ್ಡೊಲಿಯೋಪಾಲ್ಡ್‌ರ ಪರಿಸರ ಕೇಂದ್ರಿತ ಕೃತಿ 'ಲ್ಯಾಂಡ್ ಎಥಿಕ್' ಮೂಲವಾಯಿತು. ೧೯೬೨ರಲ್ಲಿ ಪ್ರಕಟವಾದ ರಾಖೆಲ್ ಕಾರ್ಸನ್‌ರ 'ಸೈಲೆಂಟ್ ಸ್ಪ್ರಿಂಗ್' ಕೃತಿ ಕೂಡ ಅಷ್ಟೇ ಮುಖ್ಯವಾಯಿತು. ಆಧುನಿಕ ತಂತ್ರಜ್ಞಾನದ ಬೆಳವಣಿಗೆಯ ಫಲವಾಗಿ ಬಳಕೆಗೆ ಬಂದ ಕೀಟನಾಶಕಗಳು ಪರಿಸರದ ಮೇಲೆ ಬೀರಿದ ದುಷ್ಪರಿಣಾಮದ ಸಮಗ್ರ ಚಿತ್ರಣವನ್ನು 'ಸೈಲೆಂಟ್ ಸ್ಪ್ರಿಂಗ್' ಕೃತಿ ಕಟ್ಟಿಕೊಡುತ್ತದೆ. ಹಾಗಾಗಿ ರಾಖೆಲ್ ಕಾರ್ಸನ್ 'ಸೈಲೆಂಟ್ ಸ್ಪ್ರಿಂಗ್' ಕೃತಿಯಲ್ಲಿ ಪಾಶ್ಚಿಮಾತ್ಯ ಸಮಾಜಕ್ಕಿರುವ ಗುರಿಗಳನ್ನು ಪ್ರಶ್ನಿಸತೊಡಗುತ್ತಾಳೆ. ಮಾನವ ಇಡೀ ಭೂಮಂಡಲವನ್ನು ಆಕ್ರಮಿಸಿಕೊಳ್ಳಲು ಹವಣಿಸುತ್ತಿರುವ ರೀತಿಯನ್ನು ಸ್ಪಷ್ಟಪಡಿಸುತ್ತಾಳೆ. ಪಾಶ್ಚಾತ್ಯ ಸಂಸ್ಕೃತಿ ರೂಢಿಸಿಕೊಂಡಿರುವ ಮಾನವ ಕೇಂದ್ರಿತ ಧೋರಣೆ ಹಾಗೂ ದೃಷ್ಟಿಕೋನವನ್ನು ಪ್ರಶ್ನಿಸುತ್ತಾಳೆ.

ಪರಿಸರ ಸಮಸ್ಯೆಗಳು ಹುಟ್ಟಿಕೊಂಡಿರುವುದೇ ಮಾನವ ಕೇಂದ್ರಿತ ವಿಚಾರ ಸರಣಿಗಳಿಂದ. ಮಾನವ ತಾನು ಎಲ್ಲಕ್ಕಿಂತ ಮತ್ತು ಎಲ್ಲರಿಗಿಂತ ಮೇಲು ಎಂದು ಭಾವಿಸಿ ಇಡೀ ಪರಿಸರವನ್ನು ಹಾಳು ಮಾಡಲು ತೊಡಗಿದ್ದಾನೆ. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರದ ಕಡೆಗೆ ಸದಾ ವೈರುಧ್ಯದ ಭಾವನೆಯನ್ನು ತಳೆದಿದೆ. ಇದರಿಂದ ಮಾನವ ಕೇಂದ್ರಶಕ್ತಿಯಾಗಿ ಗೋಚರಿಸುತ್ತಾನೆ. ಸೈಂಟ್ ಫ್ರಾನ್ಸಿಸ್, ಡೇವಿಡ್ ಬ್ರೋವರ್ ಅಂಥ ಪರಿಸರ ಚಿಂತಕರು ಎಲ್ಲಾ ಜೀವ ಸಂಕುಲಗಳು ಸಮಾನ ಎಂದು ಹೇಳುತ್ತಿದ್ದರೂ, ಪ್ರಸ್ತುತದಲ್ಲಿ ಈ ಮಾತು ಅರ್ಥವಿಲ್ಲದ ಮಾತಾಗಿ ಕಾಣಿಸುತ್ತಿದೆ. ಎರಡನೇ ಮಹಾಯುದ್ಧದ ನಂತರ ಪರಿಸರದಲ್ಲಾದ ಪಲ್ಲಟ, ತೀವ್ರವಾದ ನಗರೀಕರಣ, ಕೈಗಾರಿಕೀಕರಣದ ಪ್ರಕ್ರಿಯೆಗಳು ಮಾನವ ಕೇಂದ್ರಿತ ನೆಲೆಯನ್ನು ಸ್ಪಷ್ಟಪಡಿಸುತ್ತಿವೆ. ಹೀಗೆ ಪರಿಸರಕ್ಕೆ ತೀವ್ರವಾದ ಆಘಾತವುಂಟಾದಾಗ 'ಡೀಪ್ ಇಕಾಲಜಿ' ಅಂತಹ ಪರಿಕಲ್ಪನೆ ಬೆಳವಣಿಗೆಯನ್ನು ಕಂಡಿತು.

೧೯೭೮ರಲ್ಲಿ ಅರ್ನೆ ನೇಸ್ ಎನ್ನುವ ತತ್ವಜ್ಞಾನಿ ಓಸ್ಲೊ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರ ಮತ್ತು ಪರಿಸರ ಶಾಸ್ತ್ರವನ್ನು ಕುರಿತಂತೆ ಭಾಷಣ ಮಾಡುತ್ತಾರೆ. ಅಂತೆಯೇ ೧೯೭೨ರಲ್ಲಿ ಬುಚಾರೆಸ್ಟ್‌ನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಎರಡು ಬಗೆಯ ಪರಿಸರ ಚಳವಳಿಗಳಿರುವುದನ್ನು ಗುರುತಿಸುತ್ತಾರೆ. ಇವು ಸರಿಸುಮಾರಾಗಿ ೧೯೭೦ರ ದಶಕದಲ್ಲಿ ಹುಟ್ಟಿಕೊಂಡವು ಎಂದು ಹೇಳುತ್ತಾರೆ. ಮೊದಲನೆಯದು ಶಾಲೊ ಇಕಾಲಜಿ, ಎರಡನೆಯದು ಡೀಪ್ ಇಕಾಲಜಿ. ಶಾಲೊ ಇಕಾಲಜಿ ಎನ್ನುವುದು ಮಾನವ ಕೇಂದ್ರಿತವಾದ, ತಂತ್ರಜ್ಞಾನ ಕೇಂದ್ರಿತವಾದ ಪರಿಸರ ಚಳವಳಿ. ಇದು ಮೂಲತಃ ಪರಿಸರ ಮಲಿನತೆಯ, ನೈಸರ್ಗಿಕ ಸಂಪನ್ಮೂಲಗಳು ಸಂಪೂರ್ಣ ನಾಶವಾದ ಮಾನವ ಕೇಂದ್ರಿತ ಪರಿಸರ. ಡೀಪ್ ಇಕಾಲಜಿ ಎನ್ನುವುದು ಪರಿಸರ ಕೇಂದ್ರಿತವಾದ, ಆಳವಾದ ಮತ್ತು ಬಹುವಿಸ್ತೀರ್ಣದ ಪರಿಸರ ಚಳವಳಿ. ಹೀಗೆ ಆರ್ನೆ ನೇಸ್ ಅವರು ೧೯೭೨ರಲ್ಲಿ ಡೀಪ್ ಇಕಾಲಜಿಯೆನ್ನುವ ಪರಿಕಲ್ಪನೆಯನ್ನು ಮೊದಲ ಬಾರಿಗೆ ಬಳಕೆಗೆ ತಂದರು. ಪ್ರಸ್ತುತ ಸಂದರ್ಭದವರೆಗೂ ಇದು ಹೊಸ ಅರ್ಥಗಳನ್ನು ಪಡೆದುಕೊಳ್ಳುತ್ತಿದೆ. ೧೯೭೦ರಲ್ಲಿ ಆರಂಭವಾದ ಡೀಪ್ ಇಕಾಲಜಿ ಚಿಂತನೆಯ ಸ್ಥಿತಿಗತಿಗಳ ಬಗ್ಗೆ ಗಾರಿ ಸಿಂಡರ್ ಎನ್ನುವ ಕವಿ ಹಾಗೂ ಪ್ರಬಂಧಕಾರ ಸಾಕಷ್ಟು ಚರ್ಚಿಸಿದ್ದಾರೆ. ೧೯೮೦ರವರೆಗೆ ಶಾಲೊ ಹಾಗೂ ಡೀಪ್ ಇಕಾಲಜಿಯ ಬಗ್ಗೆ ಅಷ್ಟಾಗಿ ಚರ್ಚೆಗಳು ಆಗುತ್ತಿರಲಿಲ್ಲ. ಆದರೆ ಪರಿಸರವಾದಿಗಳ ಹಾಗೂ ತತ್ವಜ್ಞಾನಿಗಳ ನಡುವೆ ಈ ಪರಿಕಲ್ಪನೆ ಹೆಚ್ಚಿನ ಚರ್ಚೆಗೊಳಪಟ್ಟು ಮಹತ್ವವನ್ನು ಪಡೆದುಕೊಂಡಿತು. ೧೯೮೫ರಲ್ಲಿ ಪ್ರಕಟವಾದ ಬಿಲ್ ದೇವಾಲ್ ಮತ್ತು ಜಾರ್ಜ್ ಸೆಶನ್ಸ್ ಅವರ ಡೀಪ್ ಇಕಾಲಜಿ ಕೃತಿಯಿಂದ ಜಗತ್ತಿನೆಲ್ಲೆಡೆ ಡೀಪ್ ಇಕಾಲಜಿ ಪರಿಕಲ್ಪನೆಯ ಬಗೆಗೆ ಅರಿವು ಉಂಟಾಯಿತು. ಅಂತೆಯೇ ಅರ್ಥ್‌ಫಸ್ಟ್ ಅಥವಾ ಭೂಮಿ ಮೊದಲು ಎನ್ನುವ ಗುಂಪಿನಿಂದ ಕೂಡ ಈ ಪರಿಕಲ್ಪನೆಗೆ ಹೆಚ್ಚಿನ ಮಹತ್ವ ಪ್ರಾಪ್ತವಾಯಿತು.

೫. ಪರಿಸರ ಕೇಂದ್ರಿತ ಚಿಂತನೆಗೆ ತೊಡಕಾಗಿರುವ ಕೈಗಾರಿಕೀಕರಣ ಪ್ರಕ್ರಿಯೆ

ಥಾಮಸ್ ಬೆರ್ರಿ ಎನ್ನುವ ಪರಿಸರ ತತ್ವಶಾಸ್ತ್ರಜ್ಞ ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗುತ್ತಿರುವ ಕೈಗಾರಿಕೆಗಳು ಸಮಕಾಲೀನ ಸಂದರ್ಭದ ಪರಿಸರದ ಸ್ಥಿತಿಗತಿಗಳನ್ನು ಪಲ್ಲಟಗೊಳಿಸುತ್ತಿವೆ ಎನ್ನುತ್ತಾರೆ. ಹಾಗೆಯೇ ಒಟ್ಟು ಸಮಾಜ ಮಾನವ ಕೇಂದ್ರಿತ ನೆಲೆಯಿಂದ ಪರಿಸರ ಕೇಂದ್ರಿತ ನೆಲೆಗೆ ತಲುಪಬೇಕೆಂಬ ಅಗತ್ಯತೆಯನ್ನು ಕೂಡ ಅಷ್ಟೇ ಗಾಢವಾಗಿ ಹೇಳಿದ್ದಾರೆ. ಬೆರ್ರಿ ಅವರ ದೃಷ್ಟಿಯಲ್ಲಿ ಪರಿಸರ ಕೇಂದ್ರಿಕತೆ ಎನ್ನುವುದು ಎಲ್ಲಾ ಜೀವ ಸಂಕುಲಗಳು ಒಟ್ಟಾಗಿ ಜೀವಿಸುವುದರಿಂದ ಉದ್ಭವಿಸುವ ವಾಸ್ತವವಾಗಿದೆ. ಇದು ಅಷ್ಟೇ ಶ್ರೇಷ್ಠವಾದ

ಮೌಲ್ಯವಾಗಿದೆ. ಆದರೆ ಕಳೆದ ನೂರು ವರ್ಷಗಳಿಂದ ಕೈಗಾರಿಕಾ ಸಮಾಜ ಇಡೀ ವಿಶ್ವವನ್ನು ತನ್ನ ಕಬಂದಬಾಹುಗಳಲ್ಲಿ ಸುತ್ತುವರಿದಿದೆ. ಪರಿಸರ ಪ್ರಕ್ರಿಯೆಗಳಿಗೆ ಸಾಕಷ್ಟು ಹೊಡೆತಗಳನ್ನು ತಂದು ತನ್ನ ಕಾರ್ಯವನ್ನು ಸಾಧಿಸಿಕೊಳ್ಳುತ್ತಿದೆ. ಜೀವವೈವಿಧ್ಯತೆಗೆ ಮಾರಕವಾಗಿ ಪರಿಣಮಿಸಿದೆ. ಸಮಾಜದ ಹಿತಕ್ಕಾಗಿ ಹಾಗು ಲಾಭವನ್ನು ಗಳಿಸುವ ಹುನ್ನಾರದಲ್ಲಿ ಕೈಗಾರಿಕೀಕರಣ ಎಲ್ಲಾ ಪರಿಸರ ವ್ಯವಸ್ಥೆಗಳನ್ನು ಮತ್ತು ಜೀವ ಸಂಕುಲಗಳನ್ನು ತನ್ನ ವಶಕ್ಕೆ ತಂದುಕೊಳ್ಳುತ್ತಿದೆ. ಹವಾಮಾನದ ಏರಿಳಿತಗಳಿಗೆ ಹಾದಿಯಾಗಿ ಕೈಗಾರಿಕೆಗಳು ಒಟ್ಟು ಜೀವವ್ಯವಸ್ಥೆಯನ್ನು ಅವ್ಯವಸ್ಥಗೊಳಿಸುತ್ತಿವೆ. ಹೀಗೆ ಪರಿಸರಕ್ಕೆ ಒದಗಿರುವ ಎಲ್ಲ ಬಗೆಯ ಸಮಸ್ಯೆಗಳಿಗೆ ಕೈಗಾರಿಕೀಕರಣ ಪ್ರಕ್ರಿಯೆಯೇ ಮೂಲವಾಗಿದೆ. ಆದರೆ ಮತ್ತೊಂದೆಡೆ ಮಾನವ ವಿಸ್ಮಯ ವಿಶ್ವ, ಮಾಯಾ ನಗರಗಳನ್ನು ಸೃಷ್ಟಿಸುವ ನೆಪದಲ್ಲಿ ಭೂಮಿಯೆಂಬ ಗ್ರಹವನ್ನು ಸಂಪನ್ಮೂಲಗಳ ಆಗರವಾಗಿ ಮಾಡಿಕೊಂಡು ತನ್ನ ಅಗತ್ಯಕ್ಕೆ ತಕ್ಕಂತೆ ಅವುಗಳನ್ನು ಬಳಸುತ್ತಿದ್ದಾನೆ. ಇದರಿಂದ ಇಡೀ ಭೂಮಿ ನಿಷ್ಪ್ರಯೋಜಕವಾಗಿದೆ.

ಮಾನವ ಸಮುದಾಯ ವಿಶ್ವದಲ್ಲಿ ಕೈಗಾರಿಕೆಗಳ ಮತ್ತು ಕೈಗಾರಿಕೀಕರಣದ ಮೇಲಾಟವನ್ನು ಕಡಿಮೆ ಮಾಡಲು ಮತ್ತು ಜೀವನ ಶೈಲಿಗಳಲ್ಲಿ ಬದಲಾವಣೆಯನ್ನು ತರಲು ಸಾಕಷ್ಟು ಶ್ರಮವಹಿಸಬೇಕಾಗಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಹಾಗು ಪರಿಸರದಲ್ಲಿ ಆಗುತ್ತಿರುವ ಈ ಬಗೆಯ ವ್ಯತ್ಯಾಸಗಳಿಂದ ಕೈಗಾರಿಕೀಕರಣ ಪ್ರಕ್ರಿಯೆ ಹಾಗೂ ಪರಿಸರದ ನಡುವೆ ನಿರಂತರ ವಾಗ್ವಾದಗಳು ನಡೆಯುತ್ತಿವೆ. ಇದು ಒಂದು ರೀತಿಯಲ್ಲಿ ೨೦ನೇ ಶತಮಾನದ ಮಾನವನ ಕೇಂದ್ರಸ್ಥಿತಿಯೂ ಹೌದು. ಪರಿಸರದ ಕೇಂದ್ರ ಸ್ಥಿತಿಯೂ ಹೌದು. ಇಂಥ ಬಿಕ್ಕಟ್ಟನ್ನು ಕಡಿಮೆ ಮಾಡಲು ಮಾನವನ ಹಲವು ಪೀಳಿಗೆಗಳು ಭಾಗಿಯಾಗಬೇಕಾಗಿದೆ. ಹಾಗೆಯೇ ಪರಿಸರ ಅನುಭವಿಸುತ್ತಿರುವ ತೀವ್ರ ಸ್ವರೂಪದ ಸಮಸ್ಯೆಗಳಿಗೆ ಮೂಲ ಕಾರಣ ಅತಿ ಹೆಚ್ಚು ಪ್ರಮಾಣದ ಜನಸಂಖ್ಯೆ. ಇದು ನಿರ್ದಿಷ್ಟವಾಗಿ ಕಡಿಮೆಯಾಗಬೇಕಾಗಿದೆ.

೬. ಪ್ರಗತಿ ಪಥದಿಂದ ಡೀಪ್ ಇಕಾಲಜಿಯೆಡೆಗೆ

ಭೌತವಿಜ್ಞಾನಿ ಫ್ರಿಜೊ ಕಾಪ್ರಾ ಅವರು ಪರಿಸರ ತತ್ವಶಾಸ್ತ್ರಜ್ಞ ಥಾಮಸ್ ಬೆರ್ರಿ ಅವರ ವಿಚಾರಗಳನ್ನು ಒಪ್ಪಿಕೊಂಡು ಸಮಕಾಲೀನ ಸಂದರ್ಭದ ಪರಿಸರ ಸಮಸ್ಯೆಗಳನ್ನು ಹಾಗು ಸಾಮಾಜಿಕ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳಬೇಕಾದರೆ ವೈಜ್ಞಾನಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ನೆಲೆಯಿಂದ ಡೀಪ್ ಇಕಾಲಜಿಯ ಪರಿಸರಕ್ಕೆ ಬದಲಾಗಬೇಕಾಗಿದೆ ಎಂದು ಕರೆಕೊಡುತ್ತಾರೆ. ೧೭ನೇ ಶತಮಾನದಲ್ಲಿ ರೂಪುಗೊಂಡ ಕಾರ್ಟೇಶಿಯನ್ ಯಂತ್ರ ಮಾದರಿಯಿಂದ ಉದ್ಭವವಾದ ಸಮಸ್ಯೆಗಳ ಬಗ್ಗೆಯೂ ಹೆಚ್ಚಿನ ಬೆಳಕನ್ನು ಚೆಲ್ಲುತ್ತಾರೆ. ವೈಜ್ಞಾನಿಕ ಹಾಗೂ ಆರ್ಥಿಕ ಬದಲಾವಣೆಗಳ ಬಗ್ಗೆಯೂ ಹೆಚ್ಚಿನ ಒತ್ತನ್ನು ಕೊಡುತ್ತಾರೆ. ಆದರೆ ಡೀಪ್ ಇಕಾಲಜಿ ಚಿಂತನೆಯ ಮೂಲ ನೆಲೆಗಳನ್ನು ರೂಢಿಸಿಕೊಳ್ಳಬೇಕಾಗಿರುವ ಜವಾಬ್ದಾರಿ ಮಾನವನ ಮೇಲಿದೆ. ಆತ ತೀವ್ರವಾದ, ಆತಂಕಕಾರಿಯಾದ ಪ್ರಗತಿಪಥವನ್ನು ತ್ಯಜಿಸಿ ಪರಿಸರದ ಸುಗಮವಾದ, ಸುರಕ್ಷಿತವಾದ ಹಾದಿಯನ್ನು ಹಿಡಿಯಬೇಕಾಗಿದೆ. ಸರಳತೆ ಎನ್ನುವುದು ಡೀಪ್ ಇಕಾಲಜಿಯ ಮುಖ್ಯ ವಿಚಾರಧಾರೆಗಳಿಗೆ ಪೀಠಿಕೆಯಂತಿದೆ. ಅತಿಭೋಗ, ಅತಿಯಾಸೆಗಳನ್ನು ತೊರೆದು ಬದುಕಿನಲ್ಲಿ ಸರಳತೆಯನ್ನು ಅಳವಡಿಸಿಕೊಂಡರೆ ಪರಿಸರ ಸಮತೋಲನಸ್ಥಿತಿಯಲ್ಲಿರುತ್ತದೆ. ಇಲ್ಲವಾದರೆ ಮಾನವ ಮತ್ತೂ ಹೆಚ್ಚಿನ ಸಮಸ್ಯೆಗಳನ್ನು ಅನುಭವಿಸಬೇಕಾಗುತ್ತದೆ.

೭. ಡೀಪ್ ಇಕಾಲಜಿಯ ಧ್ಯೇಯೋದ್ದೇಶಗಳು

ಡೀಪ್ ಇಕಾಲಜಿಯೆನ್ನುವುದು ಮನುಕುಲವನ್ನು ಸೂಕ್ತ ಮತ್ತು ಸರಿಯಾದ ಹಾದಿಯಲ್ಲಿ ಕರೆದೊಯ್ಯುವಂತಹದ್ದು. ಆದರೆ ಇದು ಮಾನವನನ್ನು ಕೇಂದ್ರ ಸ್ಥಾನದಲ್ಲಿಡುವುದಿಲ್ಲ. ಬದಲಾಗಿ ಪರಿಸರವನ್ನು ಮುನ್ನೆಲೆಯಾಗಿಟ್ಟುಕೊಂಡಿರುತ್ತದೆ. ಹಾಗಾಗಿ ಮನುಷ್ಯ ಪರಿಸರದ ಒಂದು ಭಾಗವಾಗಿ ಕಾರ್ಯ ನಿರ್ವಹಿಸಬೇಕೇ ಹೊರತು ಆತ ಅಂತಿಮವೂ ಅಲ್ಲ ಮುಖ್ಯವೂ ಅಲ್ಲ. ಡೀಪ್ ಇಕಾಲಜಿ ಭೂಮಿಯ ಮೇಲಿನ ಎಲ್ಲಾ ಜೀವಸಂಕುಲಗಳು ಮತ್ತು ಮಾನವನಿಗೆ ಸಮಾನವಾದ ಸ್ಥಾನಮಾನಗಳಿವೆ ಎಂಬ ವಾಸ್ತವವನ್ನು ಹೊರಗೆಡಹುತ್ತದೆ. ಆದರೆ ಮಾನವ ತನ್ನ ಮನಸೋ ಇಚ್ಛೆ ಪ್ರಾಕೃತಿಕ ಸಂಪತ್ತನ್ನು ಕಬಳಿಸುತ್ತಿದ್ದಾನೆ. ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದುಕೊಂಡು ತನಗೆ ಬೇಕಾದ ರೀತಿಯಲ್ಲಿ ಉಲ್ಲಾಸಕರ ಜೀವನವನ್ನು ನಡೆಸುತ್ತಿದ್ದಾನೆ. ಇಂಥ ಮಾನವ ಕೇಂದ್ರಿಕತೆ ಸಂಪೂರ್ಣವಾಗಿ ತೊಲಗಬೇಕು ಎಂಬುದು ಡೀಪ್ ಇಕಾಲಜಿಯ ಮಹದಾಸೆ.

ಜೀವವೈವಿಧ್ಯತೆಯ ರಕ್ಷಣೆಗೆ ಮುಂದಾಗಿ, ಅವುಗಳ ಸಂತತಿಗಳನ್ನು ರಕ್ಷಿಸಬೇಕು. ಈ ಎಲ್ಲಾ ಜೀವಸಂಕುಲಗಳು ನಿರಾತಂಕವಾಗಿ ಬಾಳುವಂತೆ ಆಗಬೇಕು. ಭೂಭಾಗದ ಸಾಕಷ್ಟು ಪ್ರದೇಶಗಳನ್ನು ಕೈಗಾರಿಕಾ ಚಟುವಟಿಕೆಗಳಿಂದ ಮುಕ್ತಗೊಳಿಸಬೇಕೆಂದು ಡೀಪ್ ಇಕಾಲಜಿ ಪ್ರಯತ್ನಿಸುತ್ತಿದೆ.

ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಹಾಗೂ ಅವುಗಳ ಪ್ರಮಾಣವನ್ನು ಕಡಿಮೆ ಮಾಡಲು ಮನುಷ್ಯನಿಗೆ ಯಾವುದೇ ಹಕ್ಕಿಲ್ಲ ಎಂದು ಡೀಪ್ ಇಕಾಲಜಿ ವಾದಿಸುತ್ತದೆ.

ಡೀಪ್ ಇಕಾಲಜಿ ಚಿಂತನೆಗೆ ಅತಿ ಹೆಚ್ಚು ಪ್ರಮಾಣದ ಜನಸಂಖ್ಯೆ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಈ ಸಂಖ್ಯೆ ಗಣನೀಯವಾಗಿ ಕ್ಷೀಣಿಸಬೇಕು ಎಂದು ಡೀಪ್ ಇಕಾಲಜಿ ಬಯಸುತ್ತದೆ.

ಮಾನವ ಸಮುದಾಯ ತನ್ನ ಏಳ್ಗೆ ಹಾಗೂ ಅಭಿವೃದ್ಧಿಗೆ ಹೇಗೆ ಶ್ರಮವಹಿಸುತ್ತದೆಯೊ ಹಾಗೆಯೇ ಪ್ರತಿಯೊಬ್ಬ ಮಾನವನು ಕೂಡ ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಯಲ್ಲಿ ಭಾಗಿಯಾಗಬೇಕೆಂದು ಡೀಪ್ ಇಕಾಲಜಿ ಕರೆಕೊಡುತ್ತದೆ. ಸರಳತೆ ಮತ್ತು ಸರಳ ಜೀವನವನ್ನು ಪ್ರತಿಪಾದಿಸುತ್ತದೆ. ಆದರೆ ಮಾನವನ ಆಸೆಗಳ ಸರಮಾಲೆಗೆ ಕೊನೆಯೇ ಇಲ್ಲದಂತಾಗಿದೆ. ಡೀಪ್ ಇಕಾಲಜಿ ಇಡೀ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳು ಆಗಬೇಕು ಎಂದು ಬಯಸುತ್ತದೆ. ಭೂಮಿಯನ್ನು ವಿನಾಶದ ಅಂಚಿನಿಂದ ತಪ್ಪಿಸಲು ಪ್ರಯತ್ನಿಸುತ್ತದೆ. ಹೀಗೆ ಡೀಪ್ ಇಕಾಲಜಿಯೆನ್ನುವುದು ತಾತ್ವಿಕವಾಗಿ ಹಾಗು ಸಾಮಾಜಿಕವಾಗಿ ಹೆಚ್ಚು ಕ್ರಿಯಾತ್ಮಕವಾಗಿದ್ದು ಅಷ್ಟೇ ಮಹತ್ವವನ್ನು ಪಡೆದುಕೊಂಡಿದೆ.

ಪರಿಸರ ಮನಃಶಾಸ್ತ್ರ ಅಥವಾ ಇಕೊಸೈಕಾಲಜಿ ಎನ್ನುವುದು ಡೀಪ್ ಇಕಾಲಜಿಯ ಚಿಂತಕರಿಗೆ ಹಾಗೂ ತತ್ವಜ್ಞಾನಿಗಳಿಗೆ ಬಹುಮುಖ್ಯ ವಲಯವಾಗಿದೆ. ಪ್ರಕೃತಿಯೊಂದಿಗಿನ ಮಾನವ ಸಂಬಂಧಗಳು ಯಾವ ನೆಲೆಯಲ್ಲಿರುತ್ತವೆ ಎಂಬುದನ್ನು ಇಕೊಸೈಕಾಲಜಿ ಗುರುತಿಸುತ್ತದೆ. ಈ ತೆರನಾದ ಸಂಬಂಧಗಳನ್ನು ಜಾನ್‌ಮ್ಯೂರ್ ಹಾಗೂ ಥೋರೊ ಅವರ ಬರವಣಿಗೆಗಳಲ್ಲಿ ಗುರುತಿಸಬಹುದಾಗಿದೆ. ಅಂತೆಯೇ ಆದಿವಾಸಿಗಳ ಜೀವನಶೈಲಿಗಳಲ್ಲಿ ಕಾಣಬಹುದಾಗಿದೆ. ಥಿಯೋಡರ್ ರಾಸ್‌ಜಾಕ್ ತಮ್ಮ ಕೃತಿ 'ದಿ ವಾಯ್ಸ್ ಆಫ್ ದಿ ಅರ್ಥ್'ನಲ್ಲಿ ಪರಿಸರ ಮನಃಶಾಸ್ತ್ರ ಅಥವಾ ಇಕೊಸೈಕಾಲಜಿ ಎಂಬ ಪರಿಕಲ್ಪನೆಯನ್ನು ವ್ಯಾಖ್ಯಾನಿಸಿದ್ದಾರೆ. ಇದು ಇಕೊ ಸೈಕಾಲಜಿಯಲ್ಲಿ

ಆಸಕ್ತಿಯುಳ್ಳ ಮನಶ್ಶಾಸ್ತ್ರೀಯ ವಿದ್ವಾಂಸರಿಗೆ ಬಹುಮುಖ್ಯವಾದುದಾಗಿದೆ. ಮನುಷ್ಯನ ಮನಸ್ಸು ಪರಿಸರದ ನೆಲೆಯಲ್ಲಿ ಅಪ್ರಜ್ಞಾವಸ್ಥೆಯಲ್ಲಿರುತ್ತದೆ ಎಂದು ಥಿಯೋಡರ್ ರಾಸ್‌ಜಾಕ್ ಅಭಿಪ್ರಾಯಪಡುತ್ತಾರೆ. ಕೈಗಾರಿಕಾ ಸಮಾಜದಲ್ಲಿ ತಲೆದೋರಿರುವ ಹುಚ್ಚುತನವೇ ಇದಕ್ಕೆ ಪ್ರಧಾನ ಕಾರಣವಾಗಿದೆ. ಚೆಲ್ಲಿಸ್ ಗ್ಲೆಂಡಿನ್ನಿಂಗ್ ಎನ್ನುವವರು ಕೈಗಾರಿಕಾ ಸಮಾಜವನ್ನು ಪರಿಸರ ಮನಃಶಾಸ್ತ್ರದ ನೆಲೆಯಲ್ಲಿ ವಿಶ್ಲೇಷಿಸಲು ಹೊರಡುತ್ತಾರೆ. ಆಧುನಿಕ ತಂತ್ರಜ್ಞಾನದಿಂದ ಕೂಡಿದ ಕೈಗಾರಿಕಾ ಸಮಾಜದಲ್ಲಿ ಎಲ್ಲರೂ ಪ್ರಕೃತಿಯಿಂದ ಬೇರ್ಪಟ್ಟಿದ್ದಾರೆ ಎಂದು ಹೇಳುತ್ತಾ ಇದನ್ನು 'ಒರಿಜಿನಲ್ ಟ್ರೋಮ' ಎಂಬ ಪದದಿಂದ ಗುರುತಿಸಿದ್ದಾರೆ. ಈ ದೂರ ಅಥವಾ ಅಂತರದಿಂದ ಆಧುನಿಕ ಕೈಗಾರಿಕಾ ಸಮಾಜದಲ್ಲಿರುವ ಮಾನವರಿಗೆ ಮೂಲಭೂತ ಅವಶ್ಯಕತೆಗಳನ್ನು ನೀಗಿಸಿಕೊಳ್ಳಲು ಕಷ್ಟವಾಗುತ್ತದೆ. ಹೆಚ್ಚನ್ನು ಪಡೆಯಬೇಕು, ಹೆಚ್ಚು ಅಭಿವೃದ್ಧಿಗೊಳ್ಳಬೇಕು ಎಂಬ ತೀವ್ರವಾದ ಆಸೆಯಲ್ಲಿ ಎಲ್ಲರೂ ತಂತ್ರಜ್ಞಾನಕ್ಕೆ ವಶರಾಗುತ್ತಿದ್ದೇವೆ ಎನ್ನುತ್ತಾ, ಇದನ್ನು ಇಂಗ್ಲೀಷಿನಲ್ಲಿ 'ಟೆಕ್ನೋ ಅಡಿಕ್ಶನ್' ಎಂದು ಕರೆದಿದ್ದಾರೆ. ಆದರೆ ತಂತ್ರಜ್ಞಾನದ ಕಡೆ ಮುಖ ಮಾಡಿರುವ ಸಮಾಜಕ್ಕೆ ಪ್ರಕೃತಿಯೊಂದಿಗಿನ ಒಡನಾಟ ಅವಶ್ಯಕವಾಗಿದೆ.

ಇಕೊ ಸೈಕಾಲಜಿ ಪರಿಕಲ್ಪನೆಯ ಮೇಲೆ ಆಸಕ್ತಿ ಹುಟ್ಟಿಕೊಂಡದ್ದು ಹಾಗು ಪ್ರಕೃತಿಯೊಂದಿಗಿನ ಒಡನಾಟ, ಸ್ನೇಹ ಸಂಬಂಧಗಳು ಆರಂಭವಾದದ್ದು ಥೋರೊ ಅವರ ಹೇಳಿಕೆಯಾದ 'ವಿಶ್ವವನ್ನು ರಕ್ಷಿಸುವುದಾದರೆ ಅರಣ್ಯದಲ್ಲಿ ವಾಸಿಸಬೇಕು' ಎಂಬುದರಿಂದ. ಪಾಲ್ ಷೆಪರ್ಡ್, ಗಾರಿ ಸಿಂಡರ್ ಅವರ ಬರವಣಿಗೆಗಳಲ್ಲಿ ಇದರ ಪ್ರಸ್ತಾಪವನ್ನು ಗಮನಿಸಬಹುದಾಗಿದೆ. ರೂಸೋ, ಥೋರೊ, ಮ್ಯೂರ್, ಹಕ್ಸ್‌ಲೀ, ಆರ್‌ವೆಲ್ ಮೊದಲಾದ ಚಿಂತಕರ ಬರವಣಿಗೆಗಳಲ್ಲಿ ವೈಲ್ಡ್‌ನೆಸ್ ಎಂಬ ಪದ ಅನೇಕ ಅರ್ಥಗಳನ್ನು ಪಡೆದುಕೊಂಡಿದೆ. ಇದು ಡೀಪ್ ಇಕಾಲಜಿ ಪರಿಕಲ್ಪನೆಗೆ ಹತ್ತಿರವಾಗಿದೆ. ಆದರೆ ಮಾನವನ ಪ್ರಗತಿ ಧೋರಣೆಗಳು ಇಡೀ ಪರಿಸರವನ್ನು ಹಾಗೂ ಭೂ ಭಾಗದ ಅರಣ್ಯಗಳನ್ನು ನಾಶಪಡಿಸುತ್ತಿವೆ. ಇದರಿಂದ ಪ್ರತಿಯೊಬ್ಬ ಮಾನವನಿಗೂ ಅವಶ್ಯಕವಾಗಿ ಬೇಕಾಗಿರುವ ಮಾನವೀಯತೆಯನ್ನು ಕಳೆದುಕೊಳ್ಳುತ್ತಿದ್ದೇವೆ. ನಾವು ಪರಿಪೂರ್ಣ ಮಾನವರಾಗಬೇಕಾದರೆ ಪ್ರಕೃತಿಯೊಂದಿಗೆ ಸ್ನೇಹವನ್ನುಳಿಸಿಕೊಂಡಿರಬೇಕು. ಸಸ್ಯ ಸಂಕುಲ, ಪ್ರಾಣಿ ಸಂಕುಲ, ಪರಿಸರ ವ್ಯವಸ್ಥೆಗಳು ಹಾಗು ಆದಿಕಾಲದ ಪ್ರಕೃತಿ ಆಚರಣೆಗಳ ಬಗ್ಗೆ ಪ್ರೀತಿ, ಗೌರವವನ್ನು ಉಳಿಸಿಕೊಂಡಿರಬೇಕು. ಗಾರಿ ಸಿಂಡರ್ಸ್‌ರ 'ದಿ ಪ್ರ್ಯಾಕ್ಟೀಸ್ ಆಫ್ ದಿ ವೈಲ್ಡ್' ಕೃತಿ ಇಂತಹ ಪರಿಸರಕ್ಕೆ ಮರಳುವ ಬಗೆಯನ್ನು ಕಟ್ಟಿಕೊಡುತ್ತದೆ. ಇದು ಆಧುನಿಕ ಮನಸ್ಥಿತಿಗಳಿಗೆ ಅವಶ್ಯಕವೂ ಆಗಿದೆ.

ಭೂಮಿಯಲ್ಲಿ ಮಾನವನ ಸೃಷ್ಟಿಯೇ ಒಂದು ಮಹತ್ತರವಾದ ಬೆಳವಣಿಗೆ. ಇನ್ನುಳಿದ ಎಲ್ಲಾ ಜೀವ ಸಂಕುಲಗಳಿಗಿಂತ ಮಾನವನು ವಿಶೇಷವಾಗಿ ಉತ್ತಮ ಸ್ಥಾನವನ್ನು ಗಳಿಸಿಕೊಂಡಿದ್ದಾನೆ. ತನಗೆ ಅಗತ್ಯವಿರುವ ಎಲ್ಲಾ ಮೂಲಭೂತ ಅವಶ್ಯಕತೆಗಳನ್ನು ಪಡೆದುಕೊಂಡಿದ್ದಾನೆ. ಮಾತು ಮತ್ತು ಚಿಂತನಾಶಕ್ತಿಯಿಂದ ಈತ ಎಲ್ಲಾ ಜೀವಿಗಳಿಗಿಂತ ಭಿನ್ನನಾಗಿದ್ದಾನೆ. ಆತನಲ್ಲಿರುವ ಸೌಂದರ್ಯಪ್ರಜ್ಞೆ, ಭಾವನಾತ್ಮಕ ಸ್ಪಂದನ ಮತ್ತು ನೈತಿಕ ನಿರ್ಣಯಗಳು ಮಾನವನನ್ನು ಮತ್ತೂ ವಿಶೇಷ ಸ್ಥಾನದಲ್ಲಿರಿಸಿವೆ. ಒಂದು ಸುಸಂಸ್ಕೃತ ಪರಿಸರವನ್ನು ನಿರ್ಮಿಸಿಕೊಳ್ಳುವುದಕ್ಕೆ ಇವು ಸಹಾಯ ಮಾಡಿವೆ. ಸಾಂಸ್ಕೃತಿಕವಾಗಿ ಈತ ಎಷ್ಟೇ ವಿಸ್ತರಿಸಿಕೊಂಡರು ಭೌತಿಕವಾಗಿ ಮತ್ತು ಮಾನಸಿಕವಾಗಿ ಈತನಿಗೆ ಸಹಾಯ ದೊರೆಯುವುದು ಪ್ರಾಕೃತಿಕ ಶಕ್ತಿಗಳಿಂದಲೇ. ಆರಂಭದಲ್ಲಿ ಮಾನವ

ಸಮುದಾಯ ಎಲ್ಲಾ ಜೀವಸಂಕುಲಗಳ ಜೊತೆ ಸಂಬಂಧವನ್ನು ಪಡೆದುಕೊಂಡಿತ್ತು. ಆದರೆ ನಾಗರೀಕತೆಗಳು ಬೆಳೆಯುತ್ತಾ ಹೋದಂತೆ ಮಾನವ ಪ್ರಕೃತಿಯೊಂದಿಗಿನ ತನ್ನ ಸ್ನೇಹ ಸಂಬಂಧಗಳನ್ನು ಕಡಿತಗೊಳಿಸಿದ. ಶ್ರೇಷ್ಠ ಹಾಗೂ ಸುಶಿಕ್ಷಿತ ನಾಗರೀಕತೆಗಳು ಬೆಳೆಯುತ್ತಾ ಹೋದಂತೆ ಮಾನವ ಹೆಚ್ಚೆಚ್ಚು ಅಭಿವೃದ್ಧಿ ಹೊಂದಿದ. ವಿಸ್ತಾರವಾದ ಮತ್ತು ಶಕ್ತಿಯುತವಾದ ಸಮಾಜಗಳನ್ನು ನಿರ್ಮಿಸುವುದರ ಮೂಲಕ ಅಪಾರ ಜೀವವೈವಿಧ್ಯತೆಯನ್ನು ನಾಶಗೊಳಿಸಿದ. ಪರಿಸರ ಪ್ರಪಂಚದ ನಡುವಿನ ಅಂತರ ಹೆಚ್ಚಾಯಿತು. ಮಾನವನ ಹೊಸ ಹೊಸ ಚಿಂತನೆಗಳು ಇತರ ಜೀವ ಸಂಕುಲಗಳ ಬದುಕನ್ನು ಕಡೆಗಣಿಸಿದವು. ಇಂತಹ ಅಸ್ತವ್ಯಸ್ತ ಸಂಬಂಧದಿಂದ ಮಾನವ ಭೂಮಿಯೊಂದಿಗೆ ಸೌಹಾರ್ದಯುತವಾಗಿ ಬಾಳಲು ಸಾಧ್ಯವಾಗದೆ ಹೋಯಿತು.

ಕೈಗಾರಿಕೀಕರಣ ಪ್ರಕ್ರಿಯೆಯಿಂದ ವಿಷಯುಕ್ತ ಕೀಟನಾಶಕಗಳು ಭೂಮಿಯ ಗರ್ಭವನ್ನು ಸೇರಿ ಗಾಳಿ, ನೀರು ಮತ್ತು ಮಣ್ಣನ್ನು ಕಲುಷಿತಗೊಳಿಸುತ್ತಿವೆ. ಅಸಂಖ್ಯ ಬಗೆಯ ಜೀವಸಂಕುಲಗಳ ನೆಲೆಗಳನ್ನು ಅಪಾಯಕ್ಕೀಡು ಮಾಡಿವೆ. ಇಂತಹ ಅಸಂಖ್ಯ ಸಮಸ್ಯೆಗಳಿಂದ ಇಡೀ ವಿಶ್ವವೇ ದುರಂತದಲ್ಲಿದೆ. ಈ ಸಮಸ್ಯೆಗಳಿಂದ ಹೊರಬರಲು ಮಾನವನಿಗೂ ಸಾಧ್ಯವಾಗುತ್ತಿಲ್ಲ. ಭೂಮಿಯ ಉಳಿವಿನಿಂದ ಮನುಷ್ಯನ ಉಳಿವು ಎಂಬ ಸತ್ಯವನ್ನು ಮಾನವ ಮರೆತು ಹೋಗಿದ್ದಾನೆ. ಆದ್ದರಿಂದ ಮಾನವ ಕೇಂದ್ರಿತ ನೆಲೆಯಿಂದ ಪರಿಸರ ಕೇಂದ್ರಿತ ನೆಲೆಗೆ ಬರುವ ತುರ್ತಿನ ಪರಿಸ್ಥಿತಿ ನಮ್ಮ ಮುಂದಿದೆ. ಹೀಗಾದಲ್ಲಿ ಡೀಪ್ ಇಕಾಲಜಿ ಚಿಂತನೆ ಮತ್ತಷ್ಟು ವ್ಯಾಪಕವಾಗಿ ವಿಸ್ತರಿಸುತ್ತದೆ.

೮. ಪರಿಸರ ವಿಜ್ಞಾನೀಯ ದೃಷ್ಟಿ ಅಥವಾ ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡಿರುವ ಚರಾಚರಾ ಜಗತ್ತಿನ ಸಮಗ್ರ ದೃಷ್ಟಿ

ಭೌತವಿಜ್ಞಾನಿಯಾದ ಫ್ರಿಜೋಕಾಪ್ರಾ ಡೇಕಾರ್ಟೆ ಮತ್ತು ನ್ಯೂಟನ್‌ನ ಯಾಂತ್ರಿಕ ದೃಷ್ಟಿಕೋನಕ್ಕೆ ಮುಖಾಮುಖಿಯಾಗಿ ಪರಿಸರ ವಿಜ್ಞಾನೀಯ ದೃಷ್ಟಿಕೋನದ ಚಿಂತನೆಯ ಶೋಧವನ್ನು ನಡೆಸಿದರು. ಈ ಚಿಂತನೆಯು ಪೂರ್ವದ ಅನುಭಾವಿಗಳ ಚಿಂತನೆಗೆ ಹತ್ತಿರವಾದ ಅಖಂಡ ದೃಷ್ಟಿಯ ಅಂದರೆ "ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡಿರುವ ಚರಾಚರ ಜಗತ್ತಿನ ಸಮಗ್ರ ದೃಷ್ಟಿ." ಇದು ಭೌತವಿಜ್ಞಾನಿಗಳು ಈ ಶತಮಾನದ ಆದಿಯಲ್ಲಿ ಕಂಡುಕೊಂಡ ಸತ್ಯದ ಅಪೂರ್ವ ಹಾಗೂ ಅನಿರೀಕ್ಷಿತ ದರ್ಶನ. ಇದರಿಂದಾಗಿ ವಿಜ್ಞಾನದ ಮೂಲಭೂತ ಪರಿಕಲ್ಪನೆ, ಅದರ ಭಾಷೆ ಹಾಗೂ ವಿಜ್ಞಾನದ ಯೋಚನೆಯ ಕ್ರಮಗಳೇ ಬದಲಾದವು.

ಪಶ್ಚಿಮದ ಕಾರ್ಟೀಸಿಯನ್ ದೃಷ್ಟಿಕೋನ ಎಲ್ಲ ಜ್ಞಾನಶಾಖೆಗಳ ಮೇಲೆ ತನ್ನ ಹಿಡಿತವನ್ನು ಸಾಧಿಸಿತು. ಈ ಯಾಂತ್ರಿಕ ದೃಷ್ಟಿಕೋನವು ಎಲ್ಲವನ್ನು ವಿಭಜಿಸಿ ನೋಡುವ ದಾರಿಗಳನ್ನೇ ಸೃಷ್ಟಿಸಿತು. ಇದರಿಂದಾಗಿ ಪ್ರಪಂಚದ ಎಲ್ಲೆಡೆಯ ರಾಷ್ಟ್ರಗಳು, ಸಮಾಜಗಳು ಹಲವಾರು ಬಿಕ್ಕಟ್ಟುಗಳನ್ನು, ಸಮಸ್ಯೆಗಳನ್ನು ಎದುರಿಸುತ್ತಿವೆ. ಪೂರ್ವದ ಅನುಭಾವಿಗಳ ಚಿಂತನೆಯಾದ ಎಲ್ಲವೂ ಒಂದಕ್ಕೊಂದು ಸಂಬಂಧಿಸಿಕೊಂಡಿರುವ ವಿಶ್ವದಲ್ಲಿ ಈ ಬಗೆಯ ಹೆಜ್ಜೆಗಳನ್ನು ಇಟ್ಟದ್ದರಿಂದಲೇ ಇಂಥ ಗೊಂದಲದ ಸನ್ನಿವೇಶಗಳು ನಿರ್ಮಾಣವಾದುವೆಂಬ ಅರಿವು ಭೌತವಿಜ್ಞಾನಿಗಳ, ಸಮಾಜ ಶಾಸ್ತ್ರಜ್ಞರ, ಸಾಂಸ್ಕೃತಿಕ ಚಿಂತಕರ ಅನುಭವಕ್ಕೆ ಬರತೊಡಗಿತು. ಹಾಗಾಗಿ ಯಾವುದೇ ಚಿಂತನೆಯನ್ನು ಸಮರ್ಥವಾಗಿ ವಿವರಿಸಬೇಕಾದರೆ ನಮಗೆ ಪರಿಸರ ವಿಜ್ಞಾನೀಯ ದೃಷ್ಟಿಕೋನ ಅಗತ್ಯವೆಂಬ ಅರಿವು ಇಂದು ಎಲ್ಲೆಡೆ ಕಾಣುತ್ತಿದೆ. ಅಂದರೆ ಸತ್ಯವನ್ನು ಗ್ರಹಿಸುವ ದೃಷ್ಟಿಕೋನವು (ಕಾರ್ಟೀಸಿಯನ್) ಯಾಂತ್ರಿಕತೆಯಿಂದ ಸಮಗ್ರತೆಯೆಡೆಗೆ ಚಲಿಸುತ್ತಿರುವುದು ಎಲ್ಲ ಕ್ಷೇತ್ರಗಳಲ್ಲೂ ವ್ಯಕ್ತವಾಗುತ್ತಿದೆ, ಮಾತ್ರವಲ್ಲ

ಈ ಚಿಂತನೆಯು ಎಲ್ಲ ಚಿಂತನೆಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತಿರುವ ಕಾಲವಾಗಿದೆ. ಈ ಹೊಸ ಪರಿಕಲ್ಪನೆ ಹಿಂದಿನ ಅನುಭಾವಿ ಪರಂಪರೆಗಳ ಅದರಲ್ಲೂ ಭಾರತೀಯ ಆಧ್ಯಾತ್ಮ ದರ್ಶನದ ಸಂವಾದಿಯಾಗಿ ವಿಕಸನಗೊಳ್ಳುತ್ತಿರುವುದಾಗಿದೆ.

ಕಾರ್ಟೀಸಿಯನ್ ದೃಷ್ಟಿಕೋನವು ಎಲ್ಲವನ್ನು ಅಂಶ ಅಂಶಗಳಾಗಿ ವಿಭಜಿಸಿ ನೋಡುವ ಯೋಚನಾಕ್ರಮವನ್ನು ಶಿಕ್ಷಣದಲ್ಲಿ ಪ್ರಮುಖ ಲಕ್ಷಣವನ್ನಾಗಿಸಿತು. ಎಲ್ಲಾ ಸಂಕೀರ್ಣ ಸಂಗತಿಗಳನ್ನು ಬೇರೆ ಬೇರೆ ಭಾಗಗಳಾಗಿ ವಿಂಗಡಿಸಿ, ಸಂಕೋಚಗೊಳಿಸಿ ಮಾತ್ರ ಅರಿಯಲು ಸಾಧ್ಯವೆಂಬ ಗಾಢ ನಂಬಿಕೆಯನ್ನು ಹುಟ್ಟು ಹಾಕಿತು. ವಸ್ತುಗಳನ್ನು ಅಥವಾ ವಿಷಯಗಳನ್ನು ಖಂಡ ಖಂಡಗಳಾಗಿ ಇಳಿಸಿ ನೋಡುವ ಮನೋಭಾವವನ್ನು ಮುಂದೆ ವಿಜ್ಞಾನದ ಅಭ್ಯಾಸ ಕ್ರಮದಲ್ಲಿ ಸಾರ್ವತ್ರಿಕವಾಗಿ ಬೆಳೆಸಿಕೊಳ್ಳಲಾಯಿತು. ಡೆಕಾರ್ಟೆಯ ಈ ಅಧ್ಯಯನ ಮಾದರಿಯನ್ನು ನ್ಯೂಟನ್ ತನ್ನ ಗಣಿತ ಸಿದ್ಧಾಂತದ ಮೂಲಕ ಮತ್ತಷ್ಟು ಸ್ಪಷ್ಟವಾಗಿ ಭದ್ರಪಡಿಸಿದ. ಡೆಕಾರ್ಟೆ ಮತ್ತು ನ್ಯೂಟನ್ ಪ್ರತಿಪಾದಿಸಿದ (ಕಾರ್ಟೀಸಿಯನ್ - ಯಾಂತ್ರಿಕ ದೃಷ್ಟಿಕೋನ, ಪಶ್ಚಿಮದ ದೃಷ್ಟಿಕೋನ, ವಿಶ್ಲೇಷಣಾತ್ಮಕ ದೃಷ್ಟಿಕೋನ) ಅನೇಕ ಶತಮಾನಗಳ ಬೌದ್ಧಿಕ ಜಗತ್ತನ್ನೇ ಪ್ರಭಾವಿಸಿತು. ಎಲ್ಲಾ ಜ್ಞಾನಶಾಖೆಗಳ ಮೇಲೆ ತನ್ನ ಹಿಡಿತವನ್ನು ದೀರ್ಘಕಾಲ ಸಾಧಿಸಿತು. ವಿಜ್ಞಾನ ಮತ್ತು ಸಮಾಜಶಾಸ್ತ್ರಗಳ ಸಿದ್ಧಾಂತಗಳು ಇದರ ನೆಲಗಟ್ಟಿನ ಮೇಲೆಯೇ ರೂಪುಗೊಂಡವು. ಈ ವಿಶ್ಲೇಷಣಾತ್ಮಕ ದೃಷ್ಟಿಕೋನಕ್ಕೆ ಮುಖಾಮುಖಿಯಾಗಿ ಪೌರಸ್ತ್ಯ ದೃಷ್ಟಿಯನ್ನು (ಜೈವಿಕ ದೃಷ್ಟಿ, ಸಮಗ್ರ ದೃಷ್ಟಿ ಅಥವಾ ಪರಿಸರ ವಿಜ್ಞಾನೀಯ ದೃಷ್ಟಿ, ಅನುಭಾವಿಗಳ ದೃಷ್ಟಿ) ಈ ಶತಮಾನದಲ್ಲಿ ಶೋಧಿಸಿಕೊಳ್ಳಲಾಯಿತು. ಪೂರ್ವದ ತಿಳುವಳಿಕೆ ಮತ್ತು ಪಶ್ಚಿಮದ ವಿಜ್ಞಾನಿಗಳ ಸಂಯೋಗದಿಂದ ವಿಶ್ವದೃಷ್ಟಿಯೊಂದು ಶೋಧಿತವಾಯಿತು. 'ಸಮಗ್ರ ವಿಶ್ವವು ಅಭೇದ್ಯ ಸತ್ಯವಾಗಿದೆ ಮತ್ತು ಏಕಕಾಲದಲ್ಲಿ ನಿರಂತರ ಚಲನಶೀಲವೂ, ಜೀವಂತವೂ, ಜೈವಿಕವೂ, ಆಧ್ಯಾತ್ಮಿಕವೂ ಮತ್ತು ಭೌತಶಾಸ್ತ್ರವೂ ಆಗಿದೆ ಎನ್ನುವ ದೃಷ್ಟಿ ಅನುಭಾವಿಗಳಿಗಿತ್ತು'[೧] ಎಂಬ ಅರಿವಿನಿಂದ ಪರಿಸರ ವಿಜ್ಞಾನೀಯ ದೃಷ್ಟಿಯ ಶೋಧವನ್ನು ಫ್ರಿಜೋ ಕಾಪ್ರಾ ಮುಂದಿಡುತ್ತಾರೆ.

೧೯೨೦ರ ದಶಕದಲ್ಲಿ ಪರಮಾಣು ವಿಜ್ಞಾನದ ಸೈದ್ಧಾಂತಿಕ ನೆಲೆಗಟ್ಟಾದ 'ಕ್ವಾಂಟಮ್ ಸಿದ್ಧಾಂತ'ದ ಮಂಡನೆಯ ಪರಿಣಾಮವಾಗಿ ಅನಿರೀಕ್ಷಿತ ರೀತಿಯಲ್ಲಿ ಭೌತಪ್ರಪಂಚದ ಬಗ್ಗೆ ಇದ್ದ ಯಾಂತ್ರಿಕ ದೃಷ್ಟಿಯ ಪರಿಕಲ್ಪನೆ ಬದಲಾಯಿತು. 'ಪರಮಾಣು ವಿಜ್ಞಾನವು ವಿಶ್ವದ ಮೂಲಭೂತ ಏಕತೆಯನ್ನು ತೋರಿಸುತ್ತದೆ; ಮತ್ತು ಈ ವಿಶ್ವವನ್ನು ಸ್ವತಂತ್ರವಾದ ಅಸ್ತಿತ್ವವುಳ್ಳ ಅತಿಸೂಕ್ಷ್ಮ ಘಟಕಗಳಾಗಿ ವಿಭಜಿಸಲು ಬರುವುದಿಲ್ಲ ಎಂಬುದನ್ನೂ ಸ್ಪಷ್ಟಪಡಿಸುತ್ತದೆ. ನಾವು ಭೌತವಸ್ತುವಿನ ಅಂತಃಪ್ರಪಂಚವನ್ನು ಭೇದಿಸಿಕೊಂಡು ಹೋದಂತೆ ಪ್ರತ್ಯಪ್ರತ್ಯೇಕವಾದ ಘಟಕಗಳನ್ನು ಪ್ರಕೃತಿಯು ತೋರಿಸುವುದಿಲ್ಲ; ಅದರ ಬದಲು, ಸಂಯುಕ್ತ ಅಖಂಡತೆ (Unitied whole)ಯ ವಿಭಿನ್ನ ಭಾಗಗಳ ಮಧ್ಯೆ ಇರುವ ಸಂಬಂಧಗಳ ಒಂದು ಸಂಕೀರ್ಣ ಜಾಲದಂತೆ ತನಗೆ ತಾನೇ ಕಾಣಿಸಿಕೊಳ್ಳುತ್ತದೆ'[೨] ಎಂಬ ವಿಚಾರವನ್ನು ಕಾಪ್ರಾ ಮಂಡಿಸುತ್ತಾರೆ.

ಕ್ವಾಂಟಮ್ ಸಿದ್ಧಾಂತದ ಮೂಲ ಪ್ರವರ್ತಕ ವೆರ್ನರ್ ಹೈಸನ್‌ಬರ್ಗ್, ಶ್ರೀ ಅರವಿಂದರು, ಹೆನ್ರಿ ಸ್ಟ್ಯಾಪ್, ನಾಗಾರ್ಜುನ, ಜಾಪಾನೀ ವಿದ್ವಾಂಸ ಡಿ.ಟಿ. ಸುಜಕಿ, ಆನಂದ ಕುಮಾರಸ್ವಾಮಿ - ಈ ವಿಜ್ಞಾನಿಗಳ ಮತ್ತು ಅನುಭಾವಿಗಳ ಚಿಂತನೆಯು ಆಶ್ಚರ್ಯಕರ ರೀತಿಯಲ್ಲಿ ಒಂದೇ ಬಗೆಯಲ್ಲಿ ಸಾಗುವುದನ್ನು ಕಾಪ್ರಾ ಗುರುತಿಸುತ್ತಾರೆ.

ಈ ಚಿಂತನೆಯನ್ನು ಆನಂದ ಕುಮಾರಸ್ವಾಮಿಯು ಶಿವನ ವಿಶ್ವನರ್ತನದ (The cosmic Dance) ರೂಪಕದೊಂದಿಗೆ ವಿವರಿಸಲು ಪ್ರಯತ್ನಿಸುತ್ತಾರೆ. ಅಂದರೆ 'ಶಿವನ ಈ ನರ್ತನವು ಆಧುನಿಕ ಭೌತವಿಜ್ಞಾನಿಗೆ ಪರಮಾಣುವಿನ ಅಂತಃಕಣಗಳ ನರ್ತನವಾಗಿದೆ. ಹಿಂದೂ ಪುರಾಣಗಳಲ್ಲಿ ಉಲ್ಲೇಖಿಸಿರುವಂತೆ, ಇದು ಎಲ್ಲಾ ಅಸ್ತಿತ್ವಗಳಿಗೆ, ಸ್ವಾಭಾವಿಕ ಸಂಗತಿಗಳಿಗೆ ಮೂಲವಾದ ಸಮಗ್ರ ವಿಶ್ವದ ಸೃಷ್ಟಿ - ವಿನಾಶಗಳನ್ನು ಒಳಗೊಳ್ಳುವ ಅಖಂಡ ನರ್ತನವಾಗಿದೆ. ವಿಶ್ವನರ್ತನದ ಈ ರೂಪಕವು ಪ್ರಾಚೀನ ಪುರಾಣ, ಧಾರ್ಮಿಕ ಕಲೆ ಮತ್ತು ಆಧುನಿಕ ಭೌತವಿಜ್ಞಾನಗಳನ್ನು ಏಕೀಕರಿಸುತ್ತದೆ. ಕುಮಾರಸ್ವಾಮಿಯು ಹೇಳುವಂತೆ, ನಿಜಕ್ಕೂ 'ಇದು ಕಾವ್ಯ, ವಿಜ್ಞಾನ ಕೂಡ.'[೩]

ಆಧುನಿಕ ಭೌತವಿಜ್ಞಾನದ ದೃಷ್ಟಿಯು ಅಖಂಡವಾಗಿ, ಪರಿಸರ ವಿಜ್ಞಾನೀಯವಾಗಿ ಅಧ್ಯಯನಕ್ಕೆ ತೊಡಗುತ್ತದೆ. ಇದನ್ನು ಕಾಪ್ರಾ ಬದುಕಿನ ವ್ಯವಸ್ಥಾದೃಷ್ಟಿ (Systems view of life) ಎಂದು ಕರೆಯುತ್ತಾರೆ. ಈ ಬಗೆಯ ಚಿಂತನೆಯನ್ನು ಕುವೆಂಪು ಅವರ ಪೂರ್ಣದೃಷ್ಟಿ ಹಾಗೂ ಅನಿಕೇತನ ಪ್ರಜ್ಞೆ ಮತ್ತು ವಿಶ್ವಮಾನವ ಪರಿಕಲ್ಪನೆಗಳಲ್ಲಿ ಕಾಣಬಹುದಾಗಿದೆ. ಹಾಗೆಯೇ ತೇಜಸ್ವಿಯವರ ಸಂಶ್ಲೇಷಣಾ ಅಧ್ಯಯನ ವಿಧಾನದ ಹಿಂದೆ ಈ ಎಲ್ಲ ತತ್ವವು ಮೊಳಕೆಯೊಡೆಯುತ್ತಿರುವುದನ್ನು ಕಾಣಬಹುದು. ಕಾಪ್ರಾನ ಪ್ರಕಾರ ವ್ಯವಸ್ಥಾದೃಷ್ಟಿಯೆಂದರೆ 'ಅದೊಂದು ವಿಶಿಷ್ಟವಾದ ದಾರಿ; ಒಂದು ಭಾಷೆ, ಅಥವಾ ಒಂದು ದೃಷ್ಟಿಕೋನ ಮಾತ್ರ.' ಕಾಪ್ರಾನ ಮಾತನ್ನೇ ಇಲ್ಲಿ ಉಲ್ಲೇಖಿಸುವುದು ಸೂಕ್ತವೆಂದು ಕಾಣುತ್ತದೆ.

> ಈ ವ್ಯವಸ್ಥಾದೃಷ್ಟಿಯು ಜಗತ್ತನ್ನು ಪರಸ್ಪರ ಸಂಬಂಧಗಳಾಗಿ, ಅಖಂಡ ಸಂಯೋಜನೆಯಾಗಿ ಗ್ರಹಿಸುತ್ತದೆ. ವ್ಯವಸ್ಥೆಯು ಅಖಂಡವಾಗಿ ಸಂಯೋಜನೆಯಾಗಿರುವುದರಿಂದ ಅದರ ಲಕ್ಷಣಗಳನ್ನು ಸಣ್ಣಸಣ್ಣ ಘಟಕಗಳ ಲಕ್ಷಣಗಳ ಮಟ್ಟಕ್ಕೆ ಇಳಿಸಲು ಬರುವುದಿಲ್ಲ. ವ್ಯವಸ್ಥಾ ದೃಷ್ಟಿಯು ಈ ವಿಶ್ವದ ರಚನೆಯಲ್ಲಿ ಒಳಗೊಂಡ ಮೂಲಭೂತ ಪದಾರ್ಥ ಅಥವಾ ಘಟಕಗಳಿಗೆ ಒತ್ತುಕೊಡುವ ಬದಲು ಸಮಗ್ರ ಸಂಘಟನೆಯ ಮೂಲತತ್ವಗಳಿಗೆ ಮಹತ್ವ ಕೊಡುತ್ತದೆ. ಇಂಥ ಸಂಘಟನೆಗಳಿಗೆ ಪ್ರಕೃತಿಯಲ್ಲಿ ಹೇರಳವಾದ ಉದಾಹರಣೆಗಳು ಸಿಗುತ್ತವೆ. ಅತಿಸೂಕ್ಷ್ಮ ಬ್ಯಾಕ್ಟೀರಿಯಾಗಳಿಂದ ಹಿಡಿದು ಸಮಸ್ತ ಸಸ್ಯ, ಪ್ರಾಣಿ, ಮನುಷ್ಯ ಮುಂತಾದ ಪ್ರತಿಯೊಂದು ಜೈವಿಕ ಪ್ರಬೇಧವೂ ಅಖಂಡವಾಗಿ ಸಂಯೋಜಿಸಲ್ಪಟ್ಟಿವೆ ; ಮತ್ತು ಆದ್ದರಿಂದಲೇ ಇದೊಂದು ಜೀವಂತ ವ್ಯವಸ್ಥೆಯಾಗಿದೆ. ಜೀವಕೋಶಗಳು ಜೀವಂತ ವ್ಯವಸ್ಥೆಗಳಾಗಿವೆ ; ಹಾಗೆಯೇ, ವಿಭಿನ್ನ ಅಂಗಾಂಶಗಳು, ದೇಹದ ವಿಭಿನ್ನ ಅವಯವಗಳು ಮತ್ತು ಅತ್ಯಂತ ಸಂಕೀರ್ಣವಾದ ಮನುಷ್ಯನ ಮಿದುಳು ಕೂಡ. ಆದರೆ ವ್ಯವಸ್ಥೆಯು ಪ್ರತ್ಯಪ್ರತ್ಯೇಕ ಜೀವಿಗಳಿಗೆ ಮತ್ತು ಅವುಗಳ ವಿಭಿನ್ನ ಭಾಗಗಳಿಗಷ್ಟೇ ಸೀಮಿತವಾಗಿಲ್ಲ. ಈ ಅಖಂಡತೆಯು ನಮಗೆ ಕುಟುಂಬ ಸಮುದಾಯಗಳಂತಹ ಸಮಾಜ ವ್ಯವಸ್ಥೆಗಳಲ್ಲಿ ಮತ್ತು ಪರಸ್ಪರ ಪ್ರಭಾವ ಬೀರುತ್ತ ಇರುವ ಅಸಂಖ್ಯ ಜಡ - ಚೇತನ ಪದಾರ್ಥಗಳನ್ನೊಳಗೊಂಡ ಒಟ್ಟು ಪರಿಸರ ವ್ಯವಸ್ಥೆಯಲ್ಲೂ ಕಾಣುತ್ತದೆ.[೪]

'ಕಾಪ್ರಾನ ಪ್ರಕಾರ ವ್ಯವಸ್ಥಾದೃಷ್ಟಿಯೆಂದರೆ ಪರಿಸರ ವಿಜ್ಞಾನೀಯವಾಗಿದೆ. ಯಾವಾಗ ವ್ಯಕ್ತಿಯು ತಾನು ಸಮಗ್ರ ವಿಶ್ವಕ್ಕೆ ಸಂಬಂಧಿಸಿದವನೆಂದೆಣಿಸುತ್ತಾ ಆ ಮೂಲಕ ಮನುಷ್ಯ ಚೇತನ (Spirit)ವನ್ನು ತಿಳಿಯುತ್ತಾನೋ, ಆಗ ಆತನಿಗೆ ಪರಿಸರ ವಿಜ್ಞಾನೀಯ ಎಚ್ಚರವು ನಿಜಕ್ಕೂ ಆಧ್ಯಾತ್ಮ ಮೂಲವಾದದ್ದು ಎಂಬ ಸ್ಪಷ್ಟ ಅರಿವು ಮೂಡುತ್ತದೆ'[೫] ಎಂಬ ಕಾಪ್ರಾನ ಚಿಂತನೆಯು ಬೇಂದ್ರೆ ಮತ್ತು ಕುವೆಂಪು ಅವರ ಕಾವ್ಯಾಧ್ಯಯನಕ್ಕೆ ಒಂದು ತಳಪಾಯವನ್ನೇ ನಿರ್ಮಿಸಿ ಬಿಡುತ್ತದೆ. ಕಾಪ್ರಾನ ಪರಿಸರ ವಿಜ್ಞಾನೀಯ ಧೋರಣೆ, ದೃಷ್ಟಿಗಳು ಈ ಎರಡೂ ಲೇಖಕರ ಕಾವ್ಯ ಚಿಂತನೆಯ ಮೂಲಧಾತುಗಳಾಗಿ ಕೆಲಸ ಮಾಡಿರುವುದನ್ನು ಕಾಣಬಹುದಾಗಿದೆ. ಅದರಲ್ಲಿಯೂ ಕುವೆಂಪು ಅವರ ಸಾಹಿತ್ಯವು ಏಕಕಾಲಕ್ಕೆ ಪರಿಸರ ವಿಜ್ಞಾನೀಯವೂ, ಆಧ್ಯಾತ್ಮಿಕವೂ ಆಗುತ್ತಲೇ ಪೂರ್ವ ಮತ್ತು ಪಶ್ಚಿಮದ ಜ್ಞಾನ ಮತ್ತು ವಿಜ್ಞಾನಗಳ ಸಂಯೋಗದ ಸಂಲಗ್ನ ದೃಷ್ಟಿಯನ್ನು ಮೇಳೈಸಿಕೊಂಡಿದೆ.

ಈ ದೃಷ್ಟಿಕೋನವು ಅಖಂಡ ವಿಶ್ವದ ಸಂಕೀರ್ಣತೆಗಳನ್ನು ಅರಿಯಲು ಹೇಗೆ ಸಹಾಯಕವೊ ಹಾಗೆ ನಮ್ಮ ಕಾಲದ ಅತಿ ಸಂಕೀರ್ಣ ವ್ಯಕ್ತಿತ್ವದ ಪ್ರತಿಭೆಯಾದ ಕುವೆಂಪು ಅವರ ಪ್ರಜ್ಞೆಯನ್ನು ಅಧ್ಯಯನ ಮಾಡಲು ಹೆಚ್ಚು ಸಮರ್ಪಕವೆಂದು ತಮ್ಮ 'ಅಣ್ಣನ ನೆನಪು' ಕೃತಿಯ ಆರಂಭದಲ್ಲಿ ತೇಜಸ್ವಿಯವರು ಸೂಚಿಸುತ್ತಾರೆ. 'ಒಂದರೊಳಗೊಂದನ್ನು ಮಿಳಿತಗೊಳಿಸಿ ಸಂಯೋಜಿಸಿ ಒಟ್ಟು ಮಾಡಿ ಒಟ್ಟಂದದಲ್ಲಿ ಅರ್ಥಮಾಡಿಕೊಳ್ಳುವುದು. ಮನಸ್ಸು ಅಥವಾ ಅರಿವು ವಾಸ್ತವವನ್ನು ತಟಸ್ಥವಾಗಿ ಪೃಥಃಕರಿಸುವ ನಿರ್ಜೀವ ಕನ್ನಡಿಯಂತಲ್ಲ. ಇಂದ್ರಿಯಗಳ ನೂರಾರು ಮಾರ್ಗಗಳ ಮುಖಾಂತರ ನಿರಂತರವಾಗಿ ಮನಸ್ಸಿಗೆ ರವಾನಿಸಲ್ಪಡುವ ತುಣುಕುಗಳನ್ನು ಸಂಯೋಜಿಸುತ್ತಾ, ನಮ್ಮೊಳಗಿನ ವಿಶ್ವವನ್ನು ವಿಸ್ತರಿಸುತ್ತಾ, ಪುನರ್ರೂಪಿಸುತ್ತಾ ಹೋಗುತ್ತದೆ'

> ..... ವಿಶ್ಲೇಷಿಸುತ್ತ ವಿಭಜಿಸುತ್ತ ಬಹುದೂರ ಬಂದಿರುವ ನಮ್ಮ ವೈಜ್ಞಾನಿಕ ನಾಗರೀಕತೆಗೆ ಇಂದು ಪರಿಸರ ವಿಜ್ಞಾನ ಅಥವಾ ಇಕಾಲಜಿ ಸತ್ಯದ ಹೊಸಹೊಸ ಆವಿಷ್ಕಾರಗಳನ್ನು ಅರಿವಿನ ಸಂಶ್ಲೇಷಿತ ರೂಪಗಳನ್ನು ತೋರಿಸುತ್ತ ಇದೆ.
>
> ..... ಸಮಗ್ರತೆಯಲ್ಲಿ ಇಡೀ ಮನುಕುಲದ ಹಣೆಬರಹವನ್ನಾಗಿ ನೋಡಿದಾಗ ನಮಗೆ ಹೊಳೆಯುವ ಸತ್ಯಗಳು ಅದರ ಪ್ರತ್ಯೇಕತೆಯಲ್ಲಿ ಅನ್ನಿಸುವುದೇ ಇಲ್ಲ. ಅಖಂಡ ಸತ್ಯ, ಪೂರ್ಣದೃಷ್ಟಿ, ಅನೇಕತೆಯಲ್ಲಿ ಏಕತೆ ಮುಂತಾದ ಮಾತುಗಳನ್ನು ನಾವು ಆಗಾಗ್ಗೆ ಕೇಳುತ್ತ ಮತ್ತು ಹೇಳುತ್ತಾ ಇರುತ್ತೇವೆ'[೬]

ಎಂಬ ತೇಜಸ್ವಿಯವರ ಈ ಮಾತುಗಳು ಪರಿಸರ ವಿಜ್ಞಾನೀಯ ದೃಷ್ಟಿಕೋನದಿಂದಲೇ ಮೈಪಡೆದಂತಹವು. ಕುವೆಂಪು ಅವರ ಸಂಕೀರ್ಣ ವ್ಯಕ್ತಿತ್ವದಂತೆಯೇ ಸಂಕೀರ್ಣ ಸಾಹಿತ್ಯಕ ಧೋರಣೆಗಳ ಅಧ್ಯಯನಕ್ಕೆ ಸಂಶ್ಲೇಷಣಾತ್ಮಕ ವಿಧಾನವೇ ಸಮಂಜಸವೆಂಬುದನ್ನು ಪ್ರಸ್ತುತ ಸಂದರ್ಭದ ವಿಮರ್ಶಾ ವಿವೇಕ ಮೈಗೂಡಿಸಿಕೊಳ್ಳಬೇಕಾಗಿದೆ ಎಂದು ತಿಳಿಯುತ್ತೇನೆ.

ಹಲವಾರು ದಶಕಗಳ ಕಾಲ 'ಕಾನೂರು ಹೆಗ್ಗಡಿತಿ'ಯಂಥ ಕೃತಿಯನ್ನು ವಿಭಜಿಸಿ, ವಿಶ್ಲೇಷಿಸಿ ಅಧ್ಯಯನ ಮಾಡಿದ್ದರಿಂದ ಆ ಕೃತಿಯ ಜೀವಧಾತುಗಳನ್ನು ಹಿಡಿಯಲಾಗದ ವಿಮರ್ಶೆ ಪ್ರಕಟವಾಗಿರುವುದಕ್ಕೆ ಕನ್ನಡ ವಿಮರ್ಶೆಯಲ್ಲಿ ಹಲವಾರು ದಾಖಲೆಗಳಿವೆ. ಫ್ರಿಜೋ ಕಾಪ್ರಾನ ಓದಿನ ನಂತರ 'ಕಾನೂರು ಹೆಗ್ಗಡಿತಿ'ಯನ್ನು

ನಾಡಿನ ಹೆಸರಾಂತ ಚಿಂತಕ ಕೆ.ವಿ. ಸುಬ್ಬಣ್ಣನವರು ಓದಿದಾಗ ತೆರೆದುಕೊಂಡ ಹೊಸ ದಿಕ್ಕನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆಂದು ಕಾಣುತ್ತದೆ.

ಈ ಸುಮಾರು ಒಂದೂವರೆ ಶತಮಾನದ ಇಂಡಿಯಾದ ನಮ್ಮ ಅವಸ್ಥೆ ಅಂಥದು. ಪೂರ್ವ-ಪಶ್ಚಿಮ, ಆಧ್ಯಾತ್ಮ - ವಿಜ್ಞಾನ ಇತ್ಯಾದಿಗಳ ಮಧ್ಯೆ ತುಯ್ತ, ತತ್ತರಿಕೆ ; ಸಮತೋಲ ಸಾಧಿಸಲು ಹೆಣಗಿದಷ್ಟೂ ಹೆಚ್ಚುವ ತತ್ತರಿಕೆ. ನೆನೆದಾಗ ಕುವೆಂಪು ಅವರ 'ಕಾನೂರು ಹೆಗ್ಗಡಿತಿ'ಯ ಹೂವಯ್ಯ ನನಗೆ ಮತ್ತೆ ಮತ್ತೆ ನೆನಪಾಗುತ್ತಾನೆ. ವೇದ ಉಪನಿಷತ್‌ಗಳಿಂದ ಮೊದಲಾಗಿ ಆಧುನಿಕ ವೈಜ್ಞಾನಿಕತೆ ವೈಚಾರಿಕತೆ ಸಮಾನತೆಯ ರಾಜಕೀಯ ತತ್ತ್ವಗಳು ಇವೆಲ್ಲವುಗಳಿಂದ ಘನಸತ್ತ್ವಗಳನ್ನು ಸೆಳೆದು ಅವೆಲ್ಲವನ್ನೂ ಒಟ್ಟಯಿಸಿ ಅಪ್ಪಿ ಅಮರಿಕೊಳ್ಳುವೆನೆಂಬ ದೈತ್ಯಾಕಾಂಕ್ಷೆಯ ಅಂಥ ಹೆಣಗಾಟದಲ್ಲಿ ವಿರೂಪಗೊಳ್ಳುವ ಕುರೂಪಗೊಳ್ಳುವ ಹಾಸ್ಯಾಸ್ಪದನಾಗುವ, ಆದರೆ ಈ ಯಾವುದಕ್ಕೂ ಅಂಜದೆ ಪರಿವೆಯೇ ಇಲ್ಲದೆ ಹೆಣಗಾಡುವ ಹೂವಯ್ಯ ನಮ್ಮ ಇಂಡಿಯಾದ ಇಡಿ ಪ್ರತಿಮೆ.[೭]

ಇಂಥ ಅಖಂಡ ದೃಷ್ಟಿಯ ವಿಮರ್ಶಾ ವಿವೇಕದ ಉತ್ತಮ ಉದಾಹರಣೆ ಇದು. ಆದರೆ ವಿಶ್ಲೇಷಣಾತ್ಮಕ ವಿಮರ್ಶೆಯಿಂದ ಎದುರಾಗಬಹುದಾದ ಅಧ್ಯಯನದ ಮಿತಿಗಳಿಗೆ ಅನೇಕ ಉದಾಹರಣೆಗಳನ್ನು ಚಂದ್ರಶೇಖರ ನಂಗಲಿ ಅವರಿಗೆ ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರು ಬರೆದಿರುವ ಪತ್ರ (೧೧.೩.೨೦೦೭)ದಲ್ಲಿ ಕಾಣಬಹುದಾಗಿದೆ. ಇಂಥ ವಿಮರ್ಶೆ ಇಡಬೇಕಾದ ಹೊಸ ಹೆಜ್ಜೆಗಳನ್ನು ಶೋಧಿಸಿಕೊಳ್ಳಲು ತೇಜಸ್ವಿ ಸೂಚಿಸಿರುವ ಸಂಗತಿಗಳಲ್ಲಿ ಪರಿಸರ ದೃಷ್ಟಿಯೇ ಕೆಲಸ ಮಾಡಿದೆ ಎಂದು ತಿಳಿಯುತ್ತೇನೆ.

೯. ಪರಿಸರ ಸ್ತ್ರೀವಾದ ಮತ್ತು ಇಕೊಲಾಜಿಸಮ್

ಪರಿಸರ ಸ್ತ್ರೀವಾದ ಖ್ಯಾತಿಗೆ ಬಂದದ್ದು ಮತ್ತೆ ಮತ್ತೆ ನಡೆದ ಪರಿಸರ ದುರಂತಗಳಿಗೆ ಕಾರಣವಾಗಿದ್ದ ಪರಿಸರ ವಿನಾಶದ ವಿಚಾರದಲ್ಲಿ ನಡೆದ ಹಲವಾರು ಪ್ರತಿಭಟನೆಗಳು ಮತ್ತು ಚಟುವಟಿಕೆಗಳಿಂದಾಗಿ. ಆಂಗ್‌ಹರ್ಸ್ಟ್‌ನಲ್ಲಿ ನಡೆದ ಆ ಸಮಾವೇಶದಲ್ಲಿ ಸ್ತ್ರೀವಾದ, ಮಿಲಿಟರೀಕರಣ, ಚಿಕಿತ್ಸೆ ಮತ್ತು ಪರಿಸರಗಳ ನಡುವಣ ಸಂಬಂಧಗಳನ್ನು ಅನಾವರಣಗೊಳಿಸುವ ಚರ್ಚೆಗಳಾದವು. ಸಮಾವೇಶದ ಆಯೋಜಕರಲ್ಲಿ ಒಬ್ಬರಾದ ನೇಸ್ಟ್ರಾ ಕಿಂಗ್ "ಇಕೊಫೆಮಿನಿಸಂ ಎಂದರೆ ಸಿದ್ಧಾಂತ ಮತ್ತು ಅನುಷ್ಠಾನಗಳು ಪರಸ್ಪರ ಸಂಪರ್ಕ ಹೊಂದಿರಬೇಕು ಮತ್ತು ಸಮಗ್ರವಾಗಿರಬೇಕು ಎಂದು. ಇದು ಬದುಕಿರುವ ಎಲ್ಲ ಜೀವಿಗಳ ವಿಶೇಷ ಶಕ್ತಿ ಮತ್ತು ಸಮಗ್ರತೆಯನ್ನು ಪ್ರತಿಪಾದಿಸುತ್ತದೆ. ನಮಗೆ ಸಮುದಾಯದ ನೀರಿನ ಅಗತ್ಯದ ಜೊತೆಗೇ ಬಸವನಹುಳ ತಿನ್ನುವ ಹಕ್ಕಿಯೂ ಬೇಕು. ಟುನಾ ಮೀನಿನ ಮೇಲೆ ಆಸೆಯೂ ಬೇಕು, ಡಾಲ್ಫಿನ್‌ಗಳೂ ಬೇಕು. ನಾವು ಹೆಣ್ಣೆಂದು ಗುರುತಿಸಿಕೊಂಡ ಚಳುವಳಿಗಾರರು. ಈ ವಿನಾಶದ ಯುಗದಲ್ಲಿ ನಮಗೆ ವಿಶೇಷ ಕರ್ತವ್ಯಗಳು ಇವೆ ಎಂದು ನಾವು ನಂಬುತ್ತೇವೆ. ಕಾರ್ಪೊರೇಟ್ ದಳಪತಿಗಳು ಭೂಮಿಯನ್ನು, ಅವಳ ಸಮಸ್ತವನ್ನು ನುಂಗಿಹಾಕುತ್ತಿದ್ದಾರೆ. ಮಿಲಿಟರಿಗಳು ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸಿ ಜೀವಜಾಲವನ್ನು ಹೊಸಕಿಹಾಕುವರೆಂಬ ಭಯ ಭೂತಾಕಾರವಾಗಿ ಎದುರು ನಿಂತಿದೆ. ಇವನ್ನು ಸ್ತ್ರೀ ಸಂಕಟಗಳು ಎಂದು ನಾವು ಭಾವಿಸುತ್ತೇವೆ. ಪ್ರಚಲಿತ ಪೌರುಷೇಯ ಮನಃಸ್ಥಿತಿ ನಮಗೆ ನಮ್ಮ ದೇಹದ ಮೇಲೆ, ನಮ್ಮ ಲೈಂಗಿಕ ಜೀವನದ ಮೇಲೆ ಇರುವ ಹಕ್ಕನ್ನು ಕಬಳಿಸುವುದು. ದಮನದ ಹಲವು ವ್ಯವಸ್ಥೆಗಳನ್ನು, ಪ್ರಭುತ್ವದ ಶಕ್ತಿಯನ್ನು ಬಳಸಿಕೊಂಡು ಅದು ತನ್ನ ಉದ್ದೇಶವನ್ನು ಸಾಧಿಸುವ ನೆಲೆಗಳನ್ನು ಕುರಿತು ಪರಿಸರ ಸ್ತ್ರೀವಾದ ಚಿಂತಿಸುತ್ತದೆ ಎನ್ನುತ್ತಾರೆ.

"ಎಲ್ಲೆಲ್ಲಿ ಮಹಿಳೆಯರು ಪರಿಸರ ವಿನಾಶವನ್ನು ಅಥವಾ ಜೀವರಾಶಿಗಳನ್ನು ಹೊಸಕಿಹಾಕುವ ಪರಮಾಣು ಬಳಕೆಯನ್ನು ಮುಂಗಾಣುವರೋ ಅಲ್ಲೆಲ್ಲ ಮಹಿಳೆಯರ, ಪರಿಸರದ, ಅನ್ಯಮನುಷ್ಯರ ಮೇಲಿನ ಹಿಂಸೆಗೂ ಪುರುಷ ಶ್ರೇಷ್ಠತೆಯ ನಂಬಿಕೆಗೂ ಇರುವ ಸಂಬಂಧ ಅವರ ಅರಿವಿಗೆ ಬರುತ್ತದೆ. ಮತ್ತು ಪುರುಷಪ್ರಾಧಾನ್ಯವನ್ನು ತಿರಸ್ಕರಿಸಿದಾಗಷ್ಟೇ ನಾವು ಮುಂದಿನ ಜನಾಂಗಗಳಿಗೆ, ಇಲ್ಲಿನ ಜೀವಜಾಲಕ್ಕೆ ಮತ್ತು ಈ ಭೂಮಿಗೆ ನಿಷ್ಠರಾಗಿದ್ದೇವೆ ಎಂಬ ಭಾವಸಿದ್ಧಿಯಾಗುವುದು. ನಮಗೆ ಇದರ ಆಳವಾದ ಹಾಗೂ ನಿರ್ದಿಷ್ಟವಾದ ತಿಳುವಳಿಕೆ ಇದೆ. ಇದು ಹೆಣ್ಣಾಗಿ ನಮಗಿರುವ ಅನುಭವಗಳು ಹಾಗೂ ಸ್ವಭಾವಗಳಿಂದ ಲಭ್ಯವಾದ ತಿಳುವಳಿಕೆ" - ಎಂದು ಬರೆದರು.

ಪರಿಸರ, ಶಾಂತಿ, ಸ್ತ್ರೀವಾದ ಮತ್ತು ಮುಖ್ಯವಾಗಿ ಸ್ವಾಸ್ಥ್ಯ ಹೀಗೆ ಬೇರೆ ಬೇರೆ ಚಳುವಳಿಗಳಲ್ಲಿದ್ದ ಮಹಿಳೆಯರು ಎಲ್ಲದರಲ್ಲೂ ಇರುವ ಅಂತರ್ - ಅವಲಂಬನೆ ಮತ್ತು ಸಂಸರ್ಗಗಳನ್ನು ಕಂಡುಕೊಂಡರು. ಅಷ್ಟೇ ಅಲ್ಲ, ನಾವು ಯಾವುದನ್ನು ಬದುಕಿನ ಆಧ್ಯಾತ್ಮಿಕ ಆಯಾಮವೆಂದು ಕರೆಯುತ್ತೇವೆಯೋ ಅದನ್ನು ಕೂಡ ಕಂಡುಕೊಂಡರು. ಅಂತರ್-ಸಂಸರ್ಗಗಳನ್ನೇ ಹಲವು ಸಲ ಆಧ್ಯಾತ್ಮಿಕತೆಯೆಂದು ಕರೆಯುವುದುಂಟು ಎಂದು ಭಾವಿಸುತ್ತದೆ.

ಮಹಿಳೆಯರನ್ನು ಹಾಗೂ ಪರಿಸರವನ್ನು ಪುರುಷಮೂಲ ವಿನಾಶಕಾರಿ ಹಿಡಿತದಿಂದ ವಿಮುಕ್ತಿಗೊಳಿಸುವ, ಪುನಶ್ಚೇತನಗೊಳಿಸುವ ಸಾಧನವಾಗಿ ಈ ವಿವೇಕವನ್ನು ಕಂಡದ್ದು, ಅದನ್ನು ಮರಳಿ ಪಡೆಯುವ ಹಂಬಲವು ಅವರನ್ನು ಆಧ್ಯಾತ್ಮದ ಕಡೆಗೆ ಒಯ್ಯಿತು ಎನ್ನಬಹುದು.

'ಇಕೊಲಾಜಿಸಿಮ್' ಎನ್ನುವುದು ಹೊಸ ಅಧ್ಯಯನ ಪರಿಕಲ್ಪನೆ. ಹಸಿರು ರಾಜಕೀಯ ಚಿಂತನೆಗಳಿಂದ ಹುಟ್ಟಿಕೊಂಡ ಚಿಂತನಾ ಕ್ರಮವಿದು. ಸಮಸ್ತ ಸೃಷ್ಟಿಯೊಂದಿಗಿನ ಮನುಷ್ಯ ಸಂಬಂಧಗಳನ್ನು ಕೇಂದ್ರಿಕರಿಸಿಕೊಂಡು ರೂಪುಗೊಂಡ ನೈತಿಕ, ರಾಜಕೀಯ, ಆರ್ಥಿಕ ಹಾಗೂ ವೈಜ್ಞಾನಿಕ ಆಗುಹೋಗುಗಳ ಮೇಲಿನ ಆಸಕ್ತಿಯಿಂದ ಈ ಪರಿಕಲ್ಪನೆ ಬೆಳೆಯುತ್ತಿದೆ. ಇದು ಹಲವು ಅನ್ಯಜ್ಞಾನ ಶಿಸ್ತುಗಳೊಂದಿಗೆ ಸಂಬಂಧವನ್ನು ಇರಿಸಿಕೊಂಡು ವಿಕಸನಗೊಳ್ಳುತ್ತಿದೆ.

೧೦. ಕನ್ನಡ ವಿಮರ್ಶಾ ವಿವೇಕ ಮತ್ತು ಪರಿಸರ ವಿಮರ್ಶೆ

ಜಾಗತಿಕ ಮಟ್ಟದಲ್ಲಿ ಪರಿಸರ ವಿಮರ್ಶೆಯು ಒಂದು ಅಧ್ಯಯನ ಶಿಸ್ತಾಗಿ ರೂಪಗೊಳ್ಳುವುದಕ್ಕಿಂತ ನಾಲ್ಕು ದಶಕಗಳ ಹಿಂದೆಯೇ ಕನ್ನಡ ವಿಮರ್ಶಾ ವಿವೇಕವು ಅಂಥ ವಿಮರ್ಶಾ ಕ್ರಮವೊಂದನ್ನು ಕಟ್ಟಿಕೊಳ್ಳುವ ಪ್ರಯತ್ನವನ್ನು ಮಾಡಿದೆ. ಈ ಪ್ರಯತ್ನ ನಿಜಕ್ಕೂ ಕುತೂಹಲ ಹುಟ್ಟಿಸುತ್ತದೆ. ಏಕೆಂದರೆ ಜಗತ್ತಿನಾದ್ಯಂತ ಇಂದು ಎದುರಾಗಿರುವ ಪರಿಸರ ಸಮಸ್ಯೆಗಳ ವಿರಾಟ್ ದರ್ಶನದ ಪ್ರತಿಫಲವಾಗಿ ರೂಪುಗೊಳ್ಳುತ್ತಿರುವ ಪರಿಸರ ಕಾಳಜಿಗಳು ಸಾಹಿತ್ಯವನ್ನು ಕುರಿತ ಪರಿಸರ ವಿಮರ್ಶೆಗೆ ಕಾರಣವಾಗಿವೆ. ಆದರೆ ಪ್ರಸ್ತುತ ಸಂದರ್ಭದಲ್ಲಿನ ಪರಿಸರ ಬಿಕ್ಕಟ್ಟುಗಳು ಈ ಪ್ರಮಾಣದಲ್ಲಿ ಕಾಣಿಸದಿದ್ದ ಕಾಲದಲ್ಲಿಯೇ ಕನ್ನಡ ವಿಮರ್ಶಾ ವಿವೇಕ ಪರಿಸರ ವಿಮರ್ಶೆಯ ಮೊದಲ ಹೆಜ್ಜೆಗಳನ್ನು ಇಟ್ಟಿರುವುದು ಅಂಥ ಸಂವೇದನೆಯ ಅನನ್ಯತೆಯಾಗಿದೆ. ಕುವೆಂಪು, ಕಡೆಂಗೋಡ್ಲು ಶಂಕರಭಟ್ಟ, ಚೆನ್ನವೀರ ಕಣವಿ ಮೊದಲಾದವರು ಸಾಹಿತ್ಯ ಕೃತಿಗಳಲ್ಲಿನ ಪರಿಸರವನ್ನು ಕುರಿತು

ಲೇಖನಗಳನ್ನು ಬರೆದಿದ್ದಾರೆ. ಈ ಲೇಖನಗಳಲ್ಲಿ ಪರಿಸರ ಮತ್ತು ಮನುಷ್ಯ ಸಂಬಂಧಗಳು, ಪರಿಸರ ಮತ್ತು ಆಧ್ಯಾತ್ಮದ ನೆಲೆಗಳನ್ನು ಕುರಿತ ಚಿಂತನೆ ಅಭಿವ್ಯಕ್ತಗೊಂಡಿದೆ. ಈ ಅಭಿವ್ಯಕ್ತಿ ಈ ಕಾಲದ ಹಸಿರು ವಿಮರ್ಶೆಯ ನೆಲೆಗಟ್ಟಿನಲ್ಲಿ ಚಿಂತಿತವಾಗಿಲ್ಲದಿದ್ದರೂ ಅಂಥ ಪ್ರಯತ್ನವೊಂದಕ್ಕೆ ಸ್ಪಂದಿಸಿದ ನಿರಂತರತೆ ಕನ್ನಡ ವಿಮರ್ಶೆಯಲ್ಲಿ ಮೈಪಡೆದಿರುವುದು ಸ್ವಾಗತಾರ್ಹವಾಗಿದೆ. ಕುವೆಂಪು, ಬೇಂದ್ರೆ, ಕಾರಂತ, ತೇಜಸ್ವಿ ಮುಂತಾದ ಆಧುನಿಕ ಲೇಖಕರನ್ನು ಒಳಗೊಂಡಂತೆ ಹಸಿರು ಓದಿನ ಹಲವು ವಿಮರ್ಶೆಗಳು ಕನ್ನಡದಲ್ಲಿ ಈಗಾಗಲೇ ಸೃಷ್ಟಿಯಾಗಿವೆ.

'ಹಸಿರು ಓದು' ಎಂಬ ಪರಿಸರ ಕೇಂದ್ರಿತ ವಿಮರ್ಶಾ ಪರಿಕಲ್ಪನೆ ೯೦ರ ದಶಕದಲ್ಲಿ ಮೊದಲಿಗೆ ಕಿ.ರಂ. ನಾಗರಾಜ ಅವರ ಭಾಷಣಗಳ ಮೂಲಕ ಕನ್ನಡ ವಿಮರ್ಶಾ ಪರಿಸರದಲ್ಲಿ ಮೊದಲಿಗೆ ಕೇಳಿಬಂತು. ಕನ್ನಡ ವಿಮರ್ಶೆ ಈ ಪರಿಕಲ್ಪನೆಯನ್ನು ತನ್ನದೇ ನೆಲೆಗಳಲ್ಲಿ ಗ್ರಹಿಸಿಕೊಂಡು ವಿಕಾಸಗೊಂಡಿರುವುದನ್ನು ಕಾಣಬಹುದಾಗಿದೆ.

ಅಡಿಟಿಪ್ಪಣಿ

೧. ಫ್ರಿಜೋ ಕಾಪ್ರಾ ; ಸತ್ಯದ ನವದರ್ಶನ, (ಅನು) ನಿ. ಮುರಾರಿ ಬಲ್ಲಾಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩, ಪು.೭.

೨. - ಅದೇ -, ಪು.೯.

೩. - ಅದೇ -, ಪು.೧೭.

೪. - ಅದೇ -, ಪು.೨೧.

೫. - ಅದೇ -, ಪು.೩೧.

೬. ಪೂರ್ಣಚಂದ್ರ ತೇಜಸ್ವಿ ಕೆ.ಪಿ. ; ಅಣ್ಣನ ನೆನಪು, ಪುಸ್ತಕ ಪ್ರಕಾಶನ, ಮೈಸೂರು, ೧೯೯೯, ಪು. ೨-೩.

೭. ಫ್ರಿಜೋ ಕಾಪ್ರಾ ; ಸತ್ಯದ ನವದರ್ಶನ, (ಅನು) ನಿ. ಮುರಾರಿ ಬಲ್ಲಾಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩, ಪು. ೬೭ - ೬೮.

ಅಧ್ಯಾಯ – ೩

ಬೇಂದ್ರೆ ಕಾವ್ಯ : ಪರಿಸರ

ಹುಲ್ಲೆಲಾ
ಸ್ಥಿರಜಲಾ
ಚಿಕ್ಕೆಲ್ಲಾ ಮುಗಿಲೆಲ್ಲಾ
ಕುಣಿತಿಲ್ದ ಜಗ ಇಲ್ಲಾ ಕುಣಿ.....

ನೆಲ ಮುಗಿಲನಪ್ಪಿತು
ಚೆಲುವಾಗಿ ಒಪ್ಪಿತು
ಸಾವೊಮ್ಮೆ ತಪ್ಪಿತು । ಕುಣಿ.....

– ಅಂಬಿಕಾತನಯದತ್ತ

ಬೇಂದ್ರೆ ಕಾವ್ಯ : ಪರಿಸರ

೧. ಪ್ರವೇಶ

> 'ಮುಂದುವರಿದ ದೇಶಗಳಲ್ಲಿನ ಪ್ರಗತಿಯಿಂದಾಗಿ ಅಲ್ಲಿನ ವ್ಯಕ್ತಿ, ಪ್ರಕೃತಿಯಿಂದ ಬೇರ್ಪಟ್ಟಿದ್ದಾನೆ ಮತ್ತು ಆತ ತನ್ನ ಸುತ್ತಣ ವಾತಾವರಣದಿಂದ ಅಥವಾ ಸ್ವಂತಕ್ಕೂ ನೆಮ್ಮದಿಯಿಂದಿಲ್ಲ.'[೧]

ಇಂದಿರಾಗಾಂಧಿ ಅವರ ಈ ಚಿಂತನೆಯನ್ನು ಇಂದಿನ ಜಾಗತೀಕರಣದ ಸಂದರ್ಭದಲ್ಲಿ ವಿವೇಚಿಸಿದಾಗ ಈ ಮಾತು ಜಗತ್ತಿನ ಮುಂದುವರಿದ, ಮುಂದುವರಿಯುತ್ತಿರುವ ಎಲ್ಲ ರಾಷ್ಟ್ರಗಳ ಹಣೆಬರಹವನ್ನೇ ಹೇಳುತ್ತದೆ. ಅಂದರೆ ಅಭಿವೃದ್ಧಿಯ ಹೆಸರಿನಲ್ಲಿ ನೆಲ, ಜಲ, ಗಾಳಿಯನ್ನು ಮಲಿನಗೊಳಿಸಿದ ಮನುಷ್ಯನ ಪಾಶವೀಕೃತ್ಯಗಳು ಅಖಂಡ ಚರಾಚರ ಪರಿಸರವನ್ನು ದುರಂತಕ್ಕೆ ಈಡುಮಾಡಿವೆ. ಸಸ್ಯ, ಪ್ರಾಣಿ, ಪಕ್ಷಿ, ಜಲಚರಗಳು, ಕೀಟ, ಪಾಚಿ, ಕಣ್ಣಿಗೆ ಕಾಣುವ ಕಾಣದಿರುವ ಎಲ್ಲ ಜೀವಿಗಳು ಅವಸಾನದ ಕಡೆ ಮುಖಮಾಡಿರುವುದನ್ನು ವಿಶ್ವಪರಿಸರ ಸಮೀಕ್ಷೆಗಳು ದೃಢಪಡಿಸಿವೆ.

> ಇವತ್ತು ನಾವು ಪ್ರಕೃತಿಯನ್ನು ಕೆಡಿಸುತ್ತಿರುವ ರೀತಿ, ಪ್ರಮಾಣ ವಿಪರೀತ ಹೆಚ್ಚಾಗಿದೆ ; ಅದರಿಂದ ತಟ್ಟುವ ಹಾನಿ ನಮಗೆ ಮಾತ್ರವಲ್ಲ, ನಮ್ಮ ನೆರೆಯ ದೇಶಗಳಿಗೂ ಹಬ್ಬುವಂಥದು. ಒಂದೊಂದು ರಾಷ್ಟ್ರವೂ ತನ್ನ ಅಭಿವೃದ್ಧಿಯ ಸಲುವಾಗಿ ಸಂಕುಚಿತ ದೃಷ್ಟಿಯನ್ನು ತಾಳಿದಷ್ಟೂ, ರಾಷ್ಟ್ರ ರಾಷ್ಟ್ರಗಳ ನಡುವಣ ಆರ್ಥಿಕ ಪ್ರತಿಕ್ರಿಯೆ ಬೆಳೆಯುತ್ತಾ ಹೋಗುತ್ತದೆ. ಅದು ಅವರವರ ರಾಷ್ಟ್ರದ ಗಡಿಯ ಹೊರಗೂ ಪರಿಣಾಮ ಬೀರುತ್ತದೆ. ಅರ್ಥ ನೀತಿಗೂ, ಪರಿಸರಕ್ಕೂ ತೀರ ಹತ್ತಿರದ ಸಂಬಂಧವಿದೆ. ಇವತ್ತು ಜಗತ್ತಿನ ಅನೇಕ ವಲಯಗಳಲ್ಲಿ ಉಂಟಾಗಿರುವ ಹಾನಿಯ ರೂಪ ತಿರುಗಿ ಸರಿಪಡಿಸಲು ಬರಲಾರದಂಥದು. ಅದರಿಂದ ಮಾನವ ಕುಲದ ಪರಿಸರ ಎಂಬುದು, ಅವನ ಪಾಲಿನ ಅಭಿವೃದ್ಧಿಯ ಹಂಬಲದ ತಳಪಾಯವನ್ನು ಅಭದ್ರಗೊಳಿಸುವಂಥದಾಗಿದೆ.

> ..... ಪ್ರಕೃತಿಯೇನೋ ಸಂಪನ್ನವಾಗಿದೆ. ಆದರೆ ಅದು ಅಷ್ಟೇ ದುರ್ಬಲವಾಗಿದೆ ; ಅದರ ಅಂಶಗಳ ಪರಸ್ಪರ ಹೊಂದಿಕೆ ಸೂಕ್ಷ್ಮವಾಗಿದೆ. ಅವುಗಳ ಇತಿಮಿತಿಗಳನ್ನು ನಾವು ತಿಳಿಯದೆ ಹೋದಲ್ಲಿ, ಯಾವತ್ತು ಜೀವನ ವ್ಯವಸ್ಥೆಯ ಸಂಬದ್ಧತೆಗೆ ಅಪಾಯ ತಟ್ಟೀತು.[೨]

ಎಂಬ ವಿವೇಕದ ಮಾತುಗಳು ಅರಣ್ಯರೋದನವಾಗಿವೆಯೇ ಹೊರತು ಯಾವ ಜವಾಬ್ದಾರಿಯುತ ವ್ಯಕ್ತಿ, ಸರ್ಕಾರ ಹಾಗೂ ಸಮುದಾಯದ ಕಿವಿಗೂ ಬೀಳದಂತಿವೆ. ವಿದೇಶಿ ಬಂಡವಾಳಗಳ ಹಾಗೂ ವಿಶ್ವ ಬ್ಯಾಂಕ್ ನೀಡುವ ದೈನೇಸಿ ಸಾಲಗಳಿಂದಲೇ ಅಭಿವೃದ್ಧಿಯ ಬೆನ್ನು ಹತ್ತಿರುವ ಇಂದಿನ ಮನುಷ್ಯನ ಚಟುವಟಿಕೆಗಳು ಅಖಂಡ ಪರಿಸರವನ್ನು ವಿನಾಶದ ಕಡೆ ಕೊಂಡೊಯ್ಯುತ್ತಿರುವುದಕ್ಕೆ ಸಾಕ್ಷಿಯಾಗಿ ಲಕ್ಷಾಂತರ ಪುಟಗಳ ಸಾಹಿತ್ಯ ಪ್ರಕಟಗೊಂಡಿದೆ. ಆದರೂ ಮನುಷ್ಯ ಪರಿಸರಕ್ಕೆ ಎದುರಾಗಿರುವ ಆತಂಕಗಳ ಬಗ್ಗೆ ಗಮನಕೊಡದೆ, ಅಭಿವೃದ್ಧಿಯ ನೆಪಗಳಲ್ಲಿ ಪರಿಸರದ ಎಲ್ಲ ನೆಲೆಗಳ ಮೇಲೆ ಅತ್ಯಾಚಾರ ನಡೆಸುತ್ತಿದ್ದಾನೆ. ಅಂಥ ಅತ್ಯಾಚಾರದಿಂದ ಸಮಷ್ಟಿ ಪರಿಸರವೇ ತನ್ನ ಸಂಬಂಧಾಂತರಗಳಿಂದ ಛಿದ್ರಗೊಂಡಿದೆ.

ಇಂಥ ಸಂದರ್ಭದಲ್ಲಿ ಬೇಂದ್ರೆ - ಕುವೆಂಪು ಅಂಥವರ ಕಾವ್ಯ ಅಭಿವ್ಯಕ್ತಿಸಿದ ಪರಿಸರ ವೈವಿಧ್ಯಗಳು, ಚಿತ್ರಗಳು, ಪರಿಸರವನ್ನು ಆಸ್ವಾದಿಸಿದ ರೀತಿನೀತಿಗಳು, ತನ್ಮಯತೆಗಳು, ಪರಿಸರ ಹಾಗೂ ಮನುಷ್ಯ ಸಂಬಂಧಗಳನ್ನು ಕುರಿತು ಚಿಂತಿಸಿದ ಚಿಂತನೆಗಳು ಮಹತ್ವವಾಗಿ ಕಾಣಿಸುತ್ತವೆ.

೨. ಕೊಳೆಯ ತೊಳೆವವರು ಇಲ್ಲ ಬಾ

ಕೋಟ್ಯಾಂತರ ವರ್ಷಗಳಲ್ಲಿ ಆವಿರ್ಭವಗೊಂಡಿರುವ ಪರಿಸರ ಜೀವವೈವಿಧ್ಯವನ್ನು, ಭೌಗೋಳಿಕ ಪರಿಸರವನ್ನು, ಸುಂದರವಾದ ಹಾಗೂ ರೌದ್ರವಾದ ವಿಸ್ಮಯಗಳ ಲೋಕವನ್ನೇ ಕೊಟ್ಟಿದೆ. ಇಂಥ ಸಮೃದ್ಧಿ ಹಾಗೂ ಜೀವ ವೈವಿಧ್ಯತೆಯನ್ನು ಕಂಡ ಯಾರು ತಾನೆ ಅದಕ್ಕೆ ಮಾರುಹೋಗಿಲ್ಲ. ಹಾಗಾಗಿಯೇ 'ಆನಂದಮಯ ಈ ಜಗ ಹೃದಯ', 'ಸೂರ್ಯೋದಯ ಚಂದ್ರೋದಯ ದೇವರ ದಯೆ'ಯಾಗಿ ಕಂಡಿದೆ. ಬೇಂದ್ರೆಯವರು ಸೂರ್ಯೋದಯವನ್ನು ಕುರಿತು ಬರೆದ ಕವನಗಳು, ಗಂಗೆಯನ್ನು ಕುರಿತು ಬರೆದಿರುವ ಕಾವ್ಯ, ಶ್ರಾವಣ ಪದ್ಯಗಳು ಹಾಗೂ ಸ್ಥಳೀಯ ಪರಿಸರ ಕಾಳಜಿಯುಳ್ಳ ಕವಿತೆಗಳನ್ನು ಈ ಹಿನ್ನೆಲೆಯಲ್ಲಿ ಓದಿದಾಗ ಅವರ ಕಾವ್ಯದಲ್ಲಿನ ಪರಿಸರ ಶ್ರದ್ಧೆ ಕಾಣಿಸದಿರದು. ಅಂತೆಯೇ ಮನುಷ್ಯನು ಪರಿಸರವನ್ನು ಮಲಿನಗೊಳಿಸಿರುವುದನ್ನು ನೋಡಿ ನೋವಾಗದಿರದು.

ವಸಾಹತುಶಾಹಿ ಸಂಸ್ಕೃತಿಯ ಅನುಕರಣೆಯ ಫಲವಾಗಿ ಭಾರತವನ್ನು ಪ್ರವೇಶಿಸಿದ ಕೈಗಾರಿಕೀಕರಣದಿಂದಾಗಿ ಪರಿಸರ ಮಾಲಿನ್ಯ ದಿನೇದಿನೇ ಅಧಿಕವಾಯಿತು. ಇಡೀ ಭೂಮಿ ಜೀವಸಮುದಾಯದ ಉಳಿವಿಗೆ ಅನರ್ಹವಾಯಿತು. ಅಸಂಖ್ಯ ಜೀವ ಸಂಕುಲಗಳನ್ನು ಹೊಂದಿರುವ ಭೂಮಿ ರೋಗಗ್ರಸ್ಥವಾಯಿತು. ಇಂಥ ರೋಗಗ್ರಸ್ಥ ಮಾಲಿನ್ಯದಿಂದ ಅನೇಕ ಜೀವ ಸಂಕುಲಗಳು ನಾಶವಾದವು. ಕೆಲವು ಅವಸಾನದ ಅಂಚನ್ನು ತಲುಪಿದವು. ನಿಸರ್ಗವನ್ನೇ ತೀವ್ರವಾಗಿ ಅವಲಂಬಿಸಿದ ಮನುಷ್ಯನ ಬದುಕು ತನ್ನ ಪಾಪದಿಂದಲೇ ಅನೇಕ ಸಮಸ್ಯೆಗಳಿಗೆ ಗುರಿಯಾಯಿತು. ನೆಲ, ಜಲ, ಗಾಳಿಯನ್ನು ಹದಗೆಡಿಸಿದ ಮನುಷ್ಯ ತನ್ನ ಆತ್ಮಹತ್ಯೆಗೆ ತಾನೆ ಹೊಣೆಗಾರನಾದನು.

ಜನಸಂಖ್ಯಾ ಸ್ಫೋಟದ ಜೊತೆಜೊತೆಯಲ್ಲಿಯೇ ಮನುಷ್ಯನ ನಿಸರ್ಗಾವಲಂಬಿ ಬದುಕು ಮಿತಿಮೀರಿತು. ಸಂಪನ್ಮೂಲಗಳ ಹೇರಳ ಬಳಕೆಯಿಂದಾಗಿ ತನ್ನ ಹಾಗೂ ಮುಂದಿನ ಪೀಳಿಗೆಯ ಭವಿಷ್ಯವನ್ನು ಪ್ರಶ್ನಿಸುವಂತಾಯಿತು. ಪ್ರಸ್ತುತ ಜಾಗತೀಕರಣದ ಅಭಿವೃದ್ಧಿಯ ಅಬ್ಬರದಲ್ಲಿ ತೀವ್ರಗತಿ ಪಡೆದಿರುವ ಪದಾರ್ಥ ವ್ಯಾಮೋಹ, ಅದರ ಸೃಷ್ಟಿಗಾಗಿ ಹೊಸ ಹೊಸ ಕೈಗಾರಿಕೆಗಳ ಸ್ಥಾಪನೆ, ಕೈಗಾರಿಕೆಗಳ ಕಚ್ಚಾ ಮಾಲುಗಳಿಗಾಗಿ

ಗಣಿಗಾರಿಕೆ, ಅರಣ್ಯಗಳ ಮೇಲಿನ ಒತ್ತಡ ಹಾಗೂ ಕೃಷಿಯ ಮೇಲಿನ ಒತ್ತಡಗಳು ಅಧಿಕವಾಗಿವೆ. ಇಂಥ ಒತ್ತಡಗಳ ಜೊತೆಯಲ್ಲಿಯೇ ಆಧುನಿಕ ತಂತ್ರಜ್ಞಾನ ಹಾಗೂ ಸಂಚಾರಿ ಸೌಲಭ್ಯಗಳಿಂದಾಗಿ ಇಡೀ ಜಗತ್ತು ಒಂದು ಗ್ರಾಮದಂತೆ ರೂಪುಗೊಂಡಿದೆ. ಈ ಗ್ರಾಮಕ್ಕೆ ಯಾವ ನೈತಿಕ ಕಾಳಜಿಗಳೂ ಇಲ್ಲ. ಇದು ರಕ್ತಬೀಜಾಸುರನ ನಗರಮುಖಿ ಸಂತಾನ ಫಲ. ಹಾಗಾಗಿ ಈ ನಗರಮುಖಿ ರಾಕ್ಷಸ ಹಸಿವು ಮೈಲುಗಳಗಟ್ಟಲೆ ನಗರ ಬೆಳವಣಿಗೆಗೆ ಕಾರಣವಾಗಿ ನೂರಾರು ಕಿಲೋಮೀಟರು ಉದ್ದಗಲಗಳ ಗ್ರಾಮೀಣ ಬದುಕನ್ನು ತನ್ನ ಪೈಶಾಚಿಕ ಹೊಟ್ಟೆಗೆ ಆಹುತಿಯನ್ನಾಗಿ ಮಾಡಿಕೊಂಡಿದೆ. ಈ ತೀವ್ರಗತಿಯ ನಗರಗಳ ಬೆಳವಣಿಗೆಯಿಂದಾಗಿ ಹಳ್ಳ, ಕೆರೆ, ತೊರೆ, ಹೊಳೆ, ನದಿ, ಸರೋವರ, ಸಮುದ್ರಗಳು ಮಾಲಿನ್ಯ ಕಾರಕಗಳಾಗಿ, ಚರಂಡಿಗಳಾಗಿ ಮಾರ್ಪಟ್ಟಿವೆ.

> ಮಾಲಿನ್ಯವೆಂದರೆ ಮರೆಯಲ್ಲಿ ಹೊಂಚು ಹಾಕಿ ಕುಳಿತ ಹುಲಿಯಂತೆ. ಯಾವ ಕ್ಷಣದಲ್ಲಾದರೂ ಅದು ನಮ್ಮ ಮೈಮೇಲೆರಗಿ ಸರ್ವನಾಶಕ್ಕೆ ಕಾರಣವಾಗಬಹುದು. ನಮ್ಮ ತಲೆಯ ಮೇಲೆ ತೂಗುತ್ತಿರುವ ಕತ್ತಿ ಅದು. ಇಡೀ ಮಾನವ ಜನಾಂಗವೇ ಮಾಲಿನ್ಯವೆಂಬ ಪಿಸ್ತೂಲನ್ನು ತಲೆಗೆ ಒತ್ತಿ ಹಿಡಿದು ಆತ್ಮಹತ್ಯೆಗೆ ಸಿದ್ಧವಾಗಿ ನಿಂತಂತಿದೆ.
>
> ಮಲಿನ ವಸ್ತುಗಳನ್ನು ನೀರಿಗೆ, ನೆಲಕ್ಕೆ, ಗಾಳಿಗೆ ಸುರಿಯುತ್ತ ನಾವು ಈ ಮೂರನ್ನೂ ನಂಜುಗುಡ್ಡೆಯನ್ನಾಗಿ ಮಾಡಿದ್ದೇವೆ. 'ಮಹಾಜೀವ ಸರಪಳಿ' ಎಂದೇ ಕರೆಸಿಕೊಂಡ ಸಂಕೀರ್ಣ ಜೈವಿಕ ವ್ಯವಸ್ಥೆಯಲ್ಲಿ ನಮ್ಮ ಸ್ಥಾನವನ್ನೇ ಅಭದ್ರಗೊಳಿಸುವಷ್ಟರ ಮಟ್ಟಿಗೆ ನಾವು ನೈಸರ್ಗಿಕ ಸಮುದಾಯವನ್ನು ಬುಡಮೇಲು ಮಾಡಲು ಹೊರಟಿದ್ದೇವೆ. ಇಡೀ ಮಾನವ ಸಂಕುಲವನ್ನೇ ಧ್ವಂಸ ಮಾಡುವಂತೆ ಭೂಮಿಯ, ಸಾಗರದ ಹಾಗೂ ವಾಯುಮಂಡಲದ ಸೂಕ್ಷ್ಮ ಸಮತೋಲ ಸ್ವಲ್ಪದರಲ್ಲೇ ಬಿಗಡಾಯಿಸಬಹುದು. ನಮ್ಮನ್ನು ನಾವು ಉಳಿಸಿಕೊಳ್ಳಬೇಕಾದರೆ ಪರಿಸರವನ್ನು ಸಂರಕ್ಷಿಸಿಕೊಳ್ಳಲೇಬೇಕಾದ ಅಂತಿಮ ಘಟ್ಟಕ್ಕೆ ನಾವು ತಲುಪಿದ್ದೇವೆ.[೩]

ಇಂಥ ಸರ್ವನಾಶಕ್ಕೆ ಕಾರಣವಾಗಿರುವ ಮನುಷ್ಯನ ಚಟುವಟಿಕೆಗಳಿಗೆ ಕಡಿವಾಣ ಹಾಕದಿದ್ದರೆ ಇಡೀ ಭೂಮಿಯೇ ಅವಸಾನದೆಡೆಗೆ ಚಲಿಸುತ್ತದೆಂಬುದು ದಾರ್ಶನಿಕರ, ಪರಿಸರ ವಿಜ್ಞಾನಿಗಳ, ಕವಿ-ಲೇಖಕ ಹಾಗೂ ಶ್ರೀ ಸಾಮಾನ್ಯರ ವಿವೇಕಯುತ ಕಳಕಳಿ. ಇಂಥ ಕಳಕಳಿ ಬೇಂದ್ರೆಯವರ ನೆಲ ಮತ್ತು ಜಲವನ್ನು ಕುರಿತ ಕಾವ್ಯದಲ್ಲಿ ಚಿಂತಿತವಾಗಿದೆ. ಮುಖ್ಯವಾಗಿ 'ಗಂಗಾವತರಣ' ಹಾಗೂ 'ಸೂರ್ಯಪಾನ' ಸಂಕಲನದ ಹಲವು ಕವನಗಳಲ್ಲಿ ಜಲವನ್ನು ಕುರಿತ ಚಿಂತನೆ ಮಡುಗಟ್ಟಿದೆ. 'ಗಂಗಾವತರಣ' ಸಂಕಲನದ ಆರಂಭದ ಪದ್ಯ 'ಗಂಗಾಷ್ಟಕ'ವು ಕಾಶಿ, ಹರಿದ್ವಾರ, ಋಷಿಕೇಶಗಳಲ್ಲಿ ಗಂಗೆಯ ವೈಭವವನ್ನು ಅನುಭವಿಸಿದ ಮೇಲೆ ಬಂದ ಉದ್ಗಾರ' ಎಂದು ಬೇಂದ್ರೆಯವರು ತಮ್ಮ ಭಾವಸಂದರ್ಭದಲ್ಲಿ ಸೂಚಿಸಿದ್ದಾರೆ. ಪಂಚಮಹಾಭೂತಗಳ ಉಪಾಸನೆ ಇವರ ಕಾವ್ಯದ ಮುಖ್ಯ ನೆಲೆ. "ಗಂಗಾವತರಣ"ದ ಹಿನ್ನುಡಿಯಲ್ಲಿ ಸಂ.ವಾ.ದ.ಕರು ಪ್ರಸ್ತಾಪಿಸಿರುವ ಬೇಂದ್ರೆಯವರ ಆತ್ಮೀಯತೆ, ಪೃಥ್ವಿ, ಆಪ್, ತೇಜ, ವಾಯು, ಆಕಾಶ - ಇವು ಕಾವ್ಯದಲ್ಲಿ ವ್ಯಕ್ತವಾಗುತ್ತದೆ ಎಂಬ ಮಾತು ನೆನಪಾಗುತ್ತದೆ. ಜಗನ್ನಾಥ ಪಂಡಿತನ 'ಗಂಗಾಲಹರಿ'ಯಿಂದ ಪ್ರೇರಣೆ ಪಡೆದ ಈ ಕವಿತೆಯಲ್ಲಿ ಗಂಗೆಯ ಪುರಾಣ ಚಿತ್ರ ಹಾಗೂ ಕಾಲಕಾಲಕ್ಕೆ ಅನೇಕ ಕವಿಗಳು ಗಂಗೆಯನ್ನು ಕುರಿತು ಕಾವ್ಯ ಕಟ್ಟಿದ ನೆನಪಿನ ಚಿತ್ರಗಳನ್ನು ಕಾಣುತ್ತೇವೆ.

ನಿನ್ನ ಕಂಡವರೆಲ್ಲ ಹಾಡಕಟ್ಟದೆ ಇಲ್ಲ ; ನಿನ್ನ ಹೆಸರವಕೆ ಬಂತು ;
ಶಿವನ ತಲೆ ಕಟ್ಟಲಾರದ ಹೊಳೆಯ ಸರಿದೊರೆಯ ಹಾಡ ಕಟ್ಟುವದದೆಂತು?
ನಿನ್ನಂಥ ಪುಣ್ಯವಂತಿಯ ಕಂಡು ಮೌನದಿಂದಿಹುದೊಂದು ಪಾಪವೆಂದು,
ಬಾಯಿ ತೆರೆದೆನು :ಬಂದ ಸ್ವಚ್ಛಂದ ಗೀತವೇ ಸಂತಾಪ ಹರಿಸಲೆಂದು.[೪]

ಈ ಮೇಲಿನ ಕಾವ್ಯಭಾಗ ನಿರಂತರವಾಗಿ ಸೃಷ್ಟಿಯಾದ ಗಂಗಾಷ್ಟಕಗಳ ನೆನಪು. ಹಾಗೆಯೇ ಗಂಗಾ ನದಿಯ ಶಕ್ತಿ ಸಾಮರ್ಥ್ಯಗಳಿಗೆ ಸಮನಾದ ಹಾಡು ಕಟ್ಟಲು ಸಾಧ್ಯವೆ ಎಂಬ ಪ್ರಶ್ನೆಯಿಂದಲೇ ಪಾಪಗಳ ತೊಳೆವ ಪುಣ್ಯವಂತಿಯಾದ ಗಂಗೆಯ ಕಂಡು ಮೌನದಿಂದಿರುವುದು ಪಾಪವೆಂದು ತಿಳಿದ ಸಂವೇದನೆಯ ಸೊಲ್ಲಾಗಿ ಬಂದ ಸ್ವಚ್ಛಂದ ಗೀತ ಇದಾಗಿದೆ. ಈ ಸ್ವಚ್ಛಂದ ಗೀತದಲ್ಲಿ ಭಾರತದ ಸ್ವರಾಜ್ಯ ಸಾಮ್ರಾಜ್ಯಗಳ ನೆನಪು ನುಸುಳುತ್ತದೆ. ಭೂಮಿತಾಯಿಯ ಕಾಟಕ್ಕಾಗಿ ಇಳೆಗೆ ಇಳಿದಂಥ ಗಂಗೆ ಹಡೆದವ್ವನಂತೆ ಸಲಹಿದ್ದಾಳೆ.

ಕೂಸ ಅಳುವನು ಕೇಳಿ, ತೀರಿಹೋಗಿಹ ತಾಯಿ ಬಂದಳೆಂಬಂತೆ ಭರದಿ
ಸ್ವರ್ಗವಾಸವ ತೊರೆದು ಬಂದೆ ನೀ ಭವಬಂಧನಿರ್ಭೀತಳೆಂಬ ತೆರದಿ.
ಶ್ರೀ ಮುಕ್ತಿದಾತೆ ನೀ, ಶಿವಶಿರೋಮಣಿಭೂತೆ, ಯಾವ ಕಡೆಗಿದ್ದರೇನು?
ಹುಟ್ಟಿದ್ದೆ, ಹರಿದಿದ್ದೆ, ಕಡಲ ಕಡೆ ಮುಟ್ಟಿದ್ದೆ - ಅದೆ ಮುಕ್ತಿ ಕ್ಷೇತ್ರ ತಾನು!

* * *

ನೆಲ ಮುಗಿಲುಗಳು ಇರುವವರೆಗೆ ಗಂಗೆಯು ಉಂಟು, ಉಂಟವಳ ಧವಲಮೂರ್ತಿ.
ಶ್ರೀ ಭಗೀರಥ ಸಾರ್ವಭೌಮ ನಿನ್ನದು ಒಂದೇ ನಿಜವಾದ ಅಮರ ಕೀರ್ತಿ.[೫]

ಗಂಗೆಯನ್ನು ಭೂಮಿಗೆ ಕರೆತಂದ ಭಗೀರಥನ ಪುರಾಣವು ಈ ಮೇಲಿನ ಉದ್ಧರಣೆಯಲ್ಲಿ ಅಂತರ್ಗತವಾಗಿದೆ. ಮುನಿಯ ಶಾಪದಿಂದ ಸತ್ತ ಸಗರ ಪುತ್ರನ ಜೀವೋದ್ಧಾರಕ್ಕಾಗಿ ಸ್ವರ್ಗವಾಸದ ಗಂಗೆಯನ್ನು ಭೂಮಿಗೆ ಕರೆತಂದು ನೆಲದ ಶಾಪವನ್ನು ಮುಕ್ತಿಗೊಳಿಸಿ ಪವಿತ್ರ ಕ್ಷೇತ್ರವನ್ನಾಗಿ ಮಾಡಿದ ಗಂಗಾಮಾತೆಯ ಶಾಶ್ವತತೆಯನ್ನು ಕವಿ ಇಲ್ಲಿ ದಾಖಲಿಸುತ್ತಾರೆ. 'ಎಲ್ಲಿಹುದಯೋಧ್ಯೆ? ಎಲ್ಲಿಹುದು ದ್ವಾರಾವತಿಯು? ಎಲ್ಲಿ ಗೋಕುಲವದೀಗ? ರಾಮಕೃಷ್ಣರ ಕೀರ್ತಿ ನಾಮಶೇಷವು ತಾನೆ, ಕಾಲವಶವೆಲ್ಲ ಬೇಗ' ಎಂಬ ಮಾತಿನಲ್ಲಿ ಮಾನವ ಸೃಷ್ಟಿಯ ರಾಜ್ಯ ಸಾಮ್ರಾಜ್ಯಗಳು ಕಾಲವಶವಾದರೂ ನೆಲಮುಗಿಲುಗಳು ಇರುವವರೆಗೆ ಗಂಗೆಯು ಉಂಟು. ಆ ಗಂಗೆಯನ್ನು ಕರೆತಂದ ಭಗೀರಥನ ಕೀರ್ತಿಯು ಅಮರವೆಂಬ ವಿಚಾರ ಇಲ್ಲಿ ಪ್ರಕಟವಾಗುತ್ತದೆ. ಅನಾದಿಯಿಂದ ಇಂದಿಗೂ ಭಾರತೀಯ ಸಾಹಿತ್ಯ ಸಂಸ್ಕೃತಿಯಲ್ಲಿ ನಿರಂತರವಾಗಿ ಹರಿಯುತ್ತಿರುವ ಗಂಗೆ ತನ್ನ ಮಾತೃಹೃದಯದಿಂದ ಸಕಲ ಜೀವರಾಶಿಗಳನ್ನು ಪೋಷಿಸುವ ವಿಚಾರವನ್ನು ಕವಿ ಬೇಂದ್ರೆಯವರು ತಮ್ಮ 'ಗಂಗಾಷ್ಟಕ' ಕವನದಲ್ಲಿ ಕಟ್ಟಿದ್ದಾರೆ.

ಈ ಮೊದಲೇ ಪ್ರಸ್ತಾಪಿಸಿದಂತೆ ಮಾನವನ ಸ್ವಾರ್ಥ ಪೈಶಾಚಿಕ ಕೃತ್ಯಗಳಿಂದ ಸಗರ ಪುತ್ರನಂತೆ ಶಾಪಗ್ರಸ್ಥಗೊಂಡಿರುವ ಭೂಮಾತೆಯ ಗೋಳಿನ ಶಮನಕ್ಕಾಗಿ ಭಗೀರಥ ಮತ್ತೊಮ್ಮೆ ಗಂಗೆಯನ್ನು ಸ್ವರ್ಗದಿಂದ ಕರೆತರಬೇಕಾದ ತುರ್ತು ಪರಿಸ್ಥಿತಿ ಪುರಾಣ ಕಾಲಕ್ಕಿಂತ ಪ್ರಸ್ತುತ ಸಂದರ್ಭದಲ್ಲಿ ಹೆಚ್ಚು ಅನಿವಾರ್ಯವಾಗಿದೆ. ಆದರೂ ಹಾಗೆ ಕರೆತರುವ ಗಂಗೆಯು ಮಾನವನ ಅಮಾನುಷ ಕೃತ್ಯಗಳಿಂದಾಗಿ ಮಲಿನಗೊಂಡಿದ್ದಾಳೆಂಬ ವಿಚಾರವನ್ನು ಮರೆಯುವಂತಿಲ್ಲ. ಗಂಗಾನದಿಯು ಭಾರತೀಯ ಭಾವಕೋಶಗಳಲ್ಲಿ ರೂಪುಗೊಂಡಿರುವ ಭಾವಚಿತ್ರ

ಗಂಗಾವತರಣದ್ವಾದರೆ, ಪ್ರಸ್ತುತ ಮಾನವ ಸಮುದಾಯ, ಗಂಗಾನದಿಯನ್ನು ಕಲುಷಿತಗೊಳಿಸಿರುವ ದೃಢ ವಾಸ್ತವ ಚಿತ್ರ ಕೆಳಗಿನ ಉಲ್ಲೇಖದಲ್ಲಿ ಧುತ್ತನೆ ಕಣ್ಮುಂದೆ ನಿಲ್ಲುತ್ತದೆ.

> ಉತ್ತರ ಭಾರತದಲ್ಲಿ, ಹಿಮಾಲಯ ಶಿಖರ ಶ್ರೇಣಿಯಿಂದ ಉಗಮವಾಗಿ ಬರುವ ಗಂಗೆಯು ಅಲಹಾಬಾದ್, ಕಾನ್‌ಪುರ, ಲಕ್ನೋ, ವಾರಣಾಸಿ, ಮೊಂಘೇರ್, ಸುಲ್ತಾನ್‌ಗಂಜ್, ಭಾಗಲ್ಪುರ್, ಫರಾಕ್ಕಾ ಮತ್ತು ನದಿಯಾ ಮೂಲಕ ಹರಿಯುತ್ತ ಕೋಟ್ಯಾಂತರ ಲೀಟರ್ ಅಶುದ್ಧ ಚರಂಡಿ ನೀರನ್ನು ತನ್ನ ಒಡಲಲ್ಲಿ ಸೇರಿಸಿಕೊಳ್ಳುತ್ತದೆ. ಅದರ ಪ್ರವಾಹದ ಗುಂಟ ಲಕ್ಷಾಂತರ ಜನರು ತೀರ್ಥಸ್ನಾನ ಮಾಡುತ್ತಾರೆ ; ಮನುಷ್ಯ ಹೆಣಗಳೂ, ಇತರ ಪ್ರಾಣಿಗಳ ಕಳೇಬರಗಳೂ ಅಲ್ಲಲ್ಲಿ ನೀರಲ್ಲಿ ತೇಲುವುದು ಸಾಮಾನ್ಯ ದೃಶ್ಯವಾಗಿದೆ. ಪ್ರತಿವರ್ಷ ೩೦,೦೦೦ ಹೆಣಗಳನ್ನು ಗಂಗೆಯ ತೀರದಲ್ಲಿ ಸುಡಲಾಗುತ್ತದೆ. ಅವುಗಳ ಬೂದಿ ಹಾಗೂ ಅರೆಬೆಂದ ಹೆಣಗಳ ಪಳೆಯುಳಿಕೆಗಳೆಲ್ಲ ಸೇರಿ ಗಂಗಾನದಿ ಒಂದು ದೊಡ್ಡ ಚರಂಡಿಯೇ ಆಗಿದೆ.[೬]

ಇದು ಕೇವಲ ಗಂಗಾ ನದಿಯ ಕಥೆ ಮಾತ್ರವಲ್ಲದೆ ಭಾರತದ ಸಂಸ್ಕೃತಿ ಮತ್ತು ನಾಗರೀಕತೆಗಳ ಉಗಮಕ್ಕೆ ಕಾರಣವಾದ ಕಾವೇರಿ, ಯಮುನೆ, ಕೃಷ್ಣ, ಗೋದಾವರಿ, ಸಿಂಧು ಮೊದಲಾದ ಎಲ್ಲ ಜಲತಾಣಗಳ ಕಥೆಯೂ ಆಗಿದೆ ಎಂಬುದನ್ನು ಮರೆಯುವಂತಿಲ್ಲ. ನೆಲ, ಜಲ ಕಾಡುಗಳ ಬಗೆಗೆ ಪೂರ್ವಿಕರಲ್ಲಿದ್ದ ಪೂಜ್ಯ ಭಾವನೆಯಾಗಲೀ ಮಧುರ ಬಾಂಧವ್ಯಗಳಾಗಲೀ ಇಲ್ಲದ ಮಾನವ ಸಮುದಾಯ ತನ್ನ ಆಧುನಿಕ ಮೌಢ್ಯಗಳಿಂದ ತನ್ನ ಜೀವನಾಡಿಗಳನ್ನು ಕಲುಷಿತಗೊಳಿಸಿಕೊಂಡು ಅಖಂಡ ಜೀವರಾಶಿಗೆ ಮಾರಕವಾಗಿ ಪರಿಣಮಿಸಿದೆ. ಇಂಥ ದುರಂತಕ್ಕೆ ಬೇಂದ್ರೆಯವರ ಈ ಬಗೆಯ ಕವನಗಳು ಹೊಸ ಎಚ್ಚರವನ್ನು ಮೂಡಿಸಲು ಸಫಲವಾಗುತ್ತದೆಂದು ಭಾವಿಸಬಹುದು.

ಬೇಂದ್ರೆಯವರ 'ಗಂಗಾವತರಣ' ಕವಿತೆಯು ಭೂಮಿಯ ಮೇಲಿನ ಭೀಕರ ಬರಗಾಲದ ರೌದ್ರಾವಸ್ಥೆಯನ್ನು ಕಂಡ ಸಂವೇದನೆಯಲ್ಲಿ ಉಗಮಗೊಂಡ ಕವನ. ನೆಲದ ಮೇಲಿನ ಮನುಕುಲ ಅನ್ನಕ್ಕಾಗಿ ಪರಿತಪಿಸಿದ ಕಾಲದಲ್ಲಿ ಅವ್ಯಾಜ ಕರುಣೆಯಿಂದ ಗಂಗೆಯನ್ನು ಮೊರೆಹೊಕ್ಕ ಕವನವು ಇದಾಗಿದೆ. ನಲವತ್ತರ ದಶಕದಲ್ಲಿ ಬಂಗಾಲದ ಭಯಾನಕ ಬರಗಾಲದ ಚಿತ್ರಗಳ ನೆನಪು ಮತ್ತು ಗಂಗಾನದಿಯ ಉದ್ದಕ್ಕೂ ಅಸಂಖ್ಯ ಜನಸಮೂಹ ಹಾಗೂ ಜೀವ ಸಂಕುಲಗಳು ಹಸಿವಿನಿಂದ ಸತ್ತ ಹಿನ್ನೆಲೆ ಈ ಕವಿತೆಯ ಹಿಂದಿನ ಪ್ರೇರಣೆ. ಬರಗಾಲದ ರೌದ್ರಾವತಾರದಿಂದ ಎದುರಾದ ಜೀವಸಮೂಹದ ಹಸಿವಿನ ದಾಹಕ್ಕೆ 'ಅವ್ಯಾಜ ಕರುಣೆಯ ನಿರಂತರ ಅವತಾರ' ಶಕ್ತಿಯಾದ ಗಂಗಾಮಾತೆಯನ್ನು ಭೂಮಿಗೆ ಆಹ್ವಾನಿಸುವ ಕವನ ಇದಾಗಿದೆ. ಗಂಗೆ ಈ ಅವ್ಯಾಜ ಕರುಣೆಯಿಂದ ಭೂಮಿಗಿಳಿದು ದಿಗ್‌ದಿಗಂತಗಳಲ್ಲಿ ಹಣಿಸಿ ಬಂದು ಅಖಂಡ ಚರಾಚರಗಳಿಗೆ ಅನ್ನವನ್ನು ಕರುಣಿಸುತ್ತಾಳೆ.

'ಸ್ವರ್ಗತೊರೆದು ಬಾ, ಬಯಲ ಜರೆದು ಬಾ, ನೆಲದಿ ಹರಿದು ಬಾ' ಎಂಬ ಸಾಲುಗಳಲ್ಲಿ ದೇವಲೋಕದ ಸಮೃದ್ಧತೆಯಂತೆಯೇ ಭೂಮಿತಾಯಿಯ ನೆಲದಲ್ಲಿಯೂ ಸಮೃದ್ಧತೆ ಉಂಟುಮಾಡಬೇಕೆಂಬ ಅಭೀಪ್ಸೆ ವ್ಯಕ್ತವಾಗುತ್ತದೆ. ಭೂಮಿಯ ಮೇಲಿನ ಜೀವ ಸಮೃದ್ಧತೆಗೆ ಹಾಗೂ ಕಾವ್ಯ ಸೃಷ್ಟಿಯ, ನುಡಿಯ ಸಸಿಗೆ ನೀರೆರೆದು ಸಮೃದ್ಧಗೊಳಿಸಲು ಕವಿ ಗಂಗೆಯನ್ನು ಆಹ್ವಾನಿಸುತ್ತಾರೆ. ಎದೆಯ ನೆಲೆ ಮತ್ತು ಜೀವಜಲಗಳು ಸಮೃದ್ಧಗೊಂಡು ಸತ್ತ ಜನರನ್ನು ಎತ್ತಬೇಕೆಂಬ ಪ್ರಾರ್ಥನೆ ಇಲ್ಲಿದೆ.

ಕೊಳೆಯ ತೊಳೆವವರು ಇಲ್ಲ ಬಾ
ಬೇರೆ ಶಕ್ತಿಗಳು ಹೊಲ್ಲ ಬಾ
ಹೀಗೆ ಮಾಡದಿರು, ಅಲ್ಲ ಬಾ
ನಾಡಿ ನಾಡಿಯನು ತುತ್ತ ಬಾ
ನಮ್ಮ ನಾಡನ್ನೇ ಸುತ್ತ ಬಾ
ಸತ್ತ ಜನರನ್ನು ಎತ್ತ ಬಾ

*   *   *

ಹರಣ ಹೊಸದಾಗೆ ಹೊಳೆದು ಬಾ
ಬಾಳು ಬೆಳಕಾಗೆ ಬೆಳೆದು ಬಾ
ಮೈ ತಳೆದು ಬಾ
ಕೈ ತೊಳೆದು ಬಾ
ಇಳೆಗಿಳಿದು ಬಾ ತಾಯೀ
ಇಳಿದು ಬಾ ತಾಯಿ
ಇಳಿದು ಬಾ[೭]

ಪ್ರಕೃತಿಯ ವಿಕೋಪವಾದ ಬರಗಾಲದ ಸಾವು ನೋವುಗಳಿಂದ ತತ್ತರಿಸಿದ ಜೀವ ಸಮೂಹಕ್ಕೆ ಆಸರೆಯಾಗುವ, ಹರಣವನ್ನು ಹೊಸದಾಗಿ ದಯಪಾಲಿಸುವ, ಬಾಳಿಗೆ ಬೆಳಕಾಗುವ ಹಾಗೆ ಗಂಗೆ ಭೂಮಿಗೆ ಅವತರಿಸಬೇಕೆಂಬ ಪ್ರಾರ್ಥನೆ ಈ ಮೇಲಿನ ಕವನದಲ್ಲಿ ಪ್ರಕಟವಾಗುತ್ತದೆ.

ಗಂಗಾವತರಣದಿಂದ ಪ್ರಕೃತಿಯ ಅಖಂಡತೆಯಲ್ಲಿ ಸಮೃದ್ಧತೆ ಮೈಪಡೆದಂತೆಯೇ ಎದೆಎದೆಗಳಲ್ಲಿ ನುಡಿಯ ಸಸಿ ಮೊಳೆದು ಕಾವ್ಯಸೃಷ್ಟಿಯ ಚೈತನ್ಯ ಎಲ್ಲ ಕಡೆ ನೆಲಸುವಂತೆ ಆಗಬೇಕೆಂಬ ನಿವೇದನೆಯು ಈ ಕವಿತೆಯ ಆಶಯವಾಗಿದೆ. ಹಾಗೆಯೇ ಭೂಮಿಯ ಮೇಲಿನ ಮನುಷ್ಯನ ಸ್ವಯಂಕೃತ ಅಪರಾಧಗಳಿಂದ ನಿರ್ಮಿತವಾದ ಮಲಿನಾವಸ್ಥೆಗಳನ್ನು ತೊಳೆಯುವ ಶಕ್ತಿಯಾಗಿಯೂ ಅವತರಿಸಬೇಕೆಂಬ ಪ್ರಾರ್ಥನೆ ಇಲ್ಲಿದೆ.

"ಗಂಗಾವತರಣ" ಸಂಕಲನದ ಮೊದಲ ಹಾಗೂ ಕೊನೆಯ ಪ್ರಾರ್ಥನಾ ಗೀತೆಗಳು ಅಖಂಡ ಜಗತ್ತಿನ ಲೇಸನ್ನೇ ಬಯಸುವ ಹಾಗೂ ಅಖಂಡ ಜೀವ ಸಮೂಹ ಕೂಡಿ ಬಾಳುವ ಸಂಕಲ್ಪ ಹೊತ್ತ ಪ್ರಾರ್ಥನೆಗಳು.

ಲೇಸೆ ಕೇಳಿಸಲಿ ಕಿವಿಗೆ, ನಾಲಗೆಗೆ ಲೇಸೆ ನುಡಿದು ಬರಲಿ
ಲೇಸೆ ಕಾಣಿಸಲಿ ಕಣ್ಗೆ, ಜಗದೊಳಗೆ ಲೇಸೆ ಹಬ್ಬುತಿರಲಿ
ಲೇಸೆ ಕೈಗಳಿಂದಾಗುತಿರಲಿ, ತಾ ಬರಲಿ ಲೇಸೆ ನಡೆದು
ಲೇಸನುಂಡು, ಲೇಸುಸಿರಿ, ಇಲ್ಲಿರಲಿ ಲೇಸೆ ಮೈಯ ಪಡೆದು

*   *   *

ಕೂಡಿ ಓದಿ ಕೂಡಾಡಿ ಕೂಡಿ ಅರಿಯೋಣ ಕೂಡಿ ಕೂಡಿ
ಕೂಡಿ ತಿಂದು ಕೂಡುಂಡು ಕುಡಿದು ದುಡಿಯೋಣ ಕೂಡಿ ಕೂಡಿ

ಕೂಡಿ ನಡೆದು ಒಡಗೂಡಿ ಪಡೆದು ನುಡಿ ಹೇಳಿ ಕೇಳಿ ಕೂಡಿ
ಕೂಡಿ ಬೆಳೆದು ಬೆಳಗೋಣ ದೇವರೊಲು ಕೂಡಿ ಕೂಡಿ ಕೂಡಿ.[೮]

ಈ ಮೇಲಿನ ಪ್ರಾರ್ಥನೆಗಳು ಮನುಷ್ಯನ ಪಂಚೇಂದ್ರಿಯಗಳು ಜಗತ್ತಿನಲ್ಲಿ ಒಳಿತನ್ನೆ ಬಯಸಬೇಕೆಂಬ ಜೀವನ ದರ್ಶನವನ್ನು ಪ್ರಕಟಿಸುತ್ತವೆ. ಈ ದರ್ಶನದಲ್ಲಿ ಉಪನಿಷತ್ತುಗಳ ದಾರ್ಶನಿಕತೆಯೇ ಮಡುಗಟ್ಟಿದೆ. ಜಗತ್ತಿನ ಎಲ್ಲ ಹಂತಗಳಲ್ಲಿ ಒಳಿತಿನ ಮೈ ಪಡೆಯಬೇಕೆಂಬ ಪ್ರಾರ್ಥನೆ ಇಲ್ಲಿ ಕಾಣಿಸುತ್ತದೆ. ಹಾಗೆಯೇ ಜೀವ ಸಮುದಾಯದಲ್ಲಿ ಪರಸ್ಪರ ಕೂಡಿ ಬಾಳುವ ಸೌಹಾರ್ದ ಪರಿಸರವೊಂದು ನಿರ್ಮಾಣಗೊಳ್ಳಬೇಕೆಂಬ ಆಶಯವಿರುವ ಈ ಪ್ರಾರ್ಥನೆಗಳಲ್ಲಿ ಬೇಂದ್ರೆಯವರ ಪ್ರಕೃತಿ ಅಥವಾ ಪರಿಸರ ಕಾಳಜಿಗಳನ್ನು ಕಾಣಬಹುದಾಗಿದೆ.

'ಸಮೃದ್ಧ', 'ಸೌಭಾಗ್ಯ', 'ಸಕಲ', 'ವಸುಧಾ', 'ಕಿಮಪಿ ತತ್', 'ನೀರು', 'ನೀರಾವರಿ', 'ಹೊಳೆಯ ಹರಿವು', ತುಂಬಿ ಬಾರೆ - ಯಂಥ ಕವನಗಳಲ್ಲಿ ಗಂಗೆಯ ಅವತಾರದಿಂದ ಭೂಮಿಯ ಮೇಲಾದ ಜೀವದಾನದ ಸಮೃದ್ಧತೆಯ ನೆಲೆಗಳನ್ನು ಗುರುತಿಸಬಹುದಾಗಿದೆ. ಈ ಕವಿತೆಗಳಲ್ಲಿ 'ಜಗನ್ನಾಥ ಪಂಢಿತರ ಭಕ್ತಿ ವಾತ್ಸಲ್ಯ ಗೀತವಾದ 'ಗಂಗಾಲಹರಿ'ಯ ಮೊದಲ ಚರಣ 'ಸಮೃದ್ಧಂ ಸೌಭಾಗ್ಯಂ ಸಕಲ ವಸುಧಾಯಾಃ ಕಿಮಪಿತತ್' ಎಂಬುದರ ಪದಪದವನ್ನು ಸ್ಮರಿಸಿ ಗಂಗೆಯ ವಿಭೂತಿಮತ್ತ್ವವನ್ನು ಬಣ್ಣಿಸಿದೆ.'[೯] ಎಂದು ಬೇಂದ್ರೆಯವರು ತಮ್ಮ ಭಾವಸಂದರ್ಭದಲ್ಲಿ ಸೂಚಿಸಿದ್ದಾರೆ.

'ಸಮೃದ್ಧ' ಕವಿತೆ ನೆಲ ಮತ್ತು ಜಲಗಳ ಸಂಲಗ್ನದಿಂದ ಸಕಲ ಜೀವ ಸಮುದಾಯದ ಬದುಕು ಸಮೃದ್ಧಗೊಳ್ಳುವ ವಿಚಾರವನ್ನು ಪ್ರಕಟಿಸುತ್ತದೆ. 'ತುಂಬಿ ತುಂಬೌ ಗಂಗೆ ಲೋಕಲೋಪವ ತುಂಬು, ಜಗದಂತರಾಳದಲಿ ನೀನೆ ಪೂರ್ಣಾತ್ ಪೂರ್ಣ ಜೀವದಾನದ ದೀಕ್ಷೆ ತೊಟ್ಟ'ರುವ 'ಗಂಗಾ'ದೇವಿಯೆಂಬ ಈ ಎರಡೇ ವರ್ಣಗಳ ಮಿಡಿತವೇ ಉಸಿಕಿನ ಬಯಲಲ್ಲಿ. ಬಂಜೆ ನೆಲದಲ್ಲಿ ಮಿಂಚಿನ ಸ್ವರ್ಣದಂತೆ ಜೀವ ಸಮೃದ್ಧತೆ ಮೈಪಡೆಯುವುದನ್ನು ಇಲ್ಲಿ ಕಾಣುತ್ತೇವೆ.

ಜಗದ ಸೌಭಾಗ್ಯಕ್ಕೆ ನೀನೊಬ್ಬಳೇ ಸಾಕು.
ಉತ್ತಮರ ಬೆಳೆಬರಲು ಬೀಜ - ಮನು ಬರಬೇಕು.[೧೦]

'ಸೌಭಾಗ್ಯ', 'ಸಕಲ' ಕವನಗಳಲ್ಲಿ ಭೂವಸುಂಧರೆಗೆ ಎದುರಾಗಿರುವ ಭೀತಿ ಹಾಗೂ ಆತಂಕಗಳ ಚಿತ್ರಗಳನ್ನು ಕಾಣುತ್ತೇವೆ. ಗೋಲ ಭೂಮಿಯು ವಿಕಲ ಹಾಗೂ ಕಟುಕ ಬುದ್ಧಿಗೆ ಬಲಿಯಾಗಿ ನಿರ್ಮಾಣವಾಗಿರುವ ಭೀತಿಯ ಚಿತ್ರಗಳು ಈ ಎರಡೂ ಕವನಗಳಲ್ಲಿ ಕಾಣಿಸುತ್ತವೆ.

'ವಸುಧಾ' ಕವಿತೆ ನೀರು ಮತ್ತು ನೆಲದ ಸಂಬಂಧಗಳನ್ನು ಕುರಿತದ್ದು.

ನೆಲಕೆ ನೀರೇ ಗತಿಯು ; ನೆಲ ನೀರಿಗಾಧಾರ.
ಮಣ್ಣು ನೆಲದಲ್ಲಿ ಭವ ಬರಲು ಮಾಸುವದೆ ಗುಣ?
ನೀರೆ ಮಡಿ ; ಅದರಲ್ಲಿ ದೋಷ ಕಂಡವ ಪಿಸುಣ.
ಇಬ್ಬರೀ ಜತೆ ಸಖ್ಯ ವತ್ಸಲತೆಯಾ ಹಾರ.
ನೆಲ ಒಂದು ಜಲ ಒಂದು, ಬೆಳಕು ಗಾಳಿಯು ಒಂದು

ಬಾನೊಂದು ತಾನೊಂದು, ಮಡಕೆ ಹುಟ್ಟಾ ಒಡಕು.
ಒಡಲೊಡವೆಗಳ ತೊಡಕು ಜಗಕೆ ಮೂಡಿದೆ ಕೆಡಕು.
ನಿನ್ನಂತೆ ಪರರಾತ್ಮ ಕಂಡು ಘನತೆಯ ಹೊಂದು -
ನೀರು ನೆಲಗಳ ಕರುಳ ಬಳ್ಳಿ ಹರಿದೀತೆಂದು
ಈ ಉಸಿರು ಕಂಡೀತು ಒಂದೆ ಬೆಳಕನ್ನೆಂದು.[೧೧]

ಈ ಮೇಲಿನ ಉಲ್ಲೇಖದ ಕಾವ್ಯಭಾಗದಲ್ಲಿ ನೀರು ನೆಲಗಳ ಕರುಳಬಳ್ಳಿಯ ಸಂಬಂಧವನ್ನೇ ಕಾಣುತ್ತೇವೆ. ವಾಮನ ಬೇಂದ್ರೆಯವರು ಬೇಂದ್ರೆಯವರ ಕಾವ್ಯದಲ್ಲಿನ ನೆಲ ಜಲಗಳ ಸಂಬಂಧವನ್ನು ಕುರಿತು ಚಿಂತಿಸಿರುವ ಮಾತುಗಳನ್ನು ಇಲ್ಲಿ ಉದ್ಧರಿಸುವುದು ಸೂಕ್ತವೆಂದು ತೋರುತ್ತದೆ.

> ಅನೇಕ ಜಲ ಪ್ರಳಯಗಳಾದರೂ ಭೂಮಿ ಉಳಿದುಕೊಂಡು ನವಸೃಷ್ಟಿಗೆ ಕಾರಣವಾಗಿದೆ. ಮನುಷ್ಯನ ಜೀವನ =ದೈವ, ಐದೂ ಮಹಾಭೂತಗಳ ಅರ್ಥವನ್ನು ಹೃದಯದಲ್ಲಿ ಮಾಡಿಕೊಳ್ಳುವುದರ ಮೇಲೆ ಅವಲಂಬಿಸಿದೆ. ಪುರುಷನ ವೀರ್ಯ ಸ್ತ್ರೀಯ ಗರ್ಭದಲ್ಲಿ ನೀರು ಕಟ್ಟಿ = ನಿರ್ಮಿಸಿ, ಗರ್ಭವನ್ನು ಬೆಳೆಸುತ್ತದೆ, ತೇಲಿಸುತ್ತದೆ. ಆಪ್ ಎಂಬ ತತ್ತ್ವ ಭೂಮಿಯ ಗರ್ಭದಲ್ಲಿ - ಅಂತರಾಳದಲ್ಲಿ ಸೃಷ್ಟಿಯಾಗುವಂತೆ, ಆಕಾಶದಲ್ಲಿಯೂ ಮಳೆ ಮೋಡವಾಗುವ ರೂಪತಾಳುತ್ತದೆ. ಪೃಥ್ವಿ ಮತ್ತು ಆಕಾಶ ಸಂಬಂಧ ಸೂತ್ರ - ಆಪ್. ಇಳೆ ಮತ್ತು ಮಳೆ ಸಹಕರಿಸದಿದ್ದರೆ ಅನ್ನ ನಿರ್ಮಿತಿ ಇಲ್ಲ. "ಆಪೋಜ್ಯೋತಿ ರಸೋಮೃತಂ" ಎಂಬ ವೈದಿಕ ಮಂತ್ರದ ಅಂತರಾರ್ಥವನ್ನು ಬೇಂದ್ರೆ ಜಲಕವನಗಳು ವರ್ಣಿಸುತ್ತವೆ.[೧೨]

'ನೀರು' ಕವನ ಬೇಂದ್ರೆ ಅವರ ಜಲತತ್ತ್ವವನ್ನು ಚಿಂತಿಸುತ್ತದೆ. 'ಸೃಷ್ಟಿಗೆ ಆಧಾರ ನೀರಂತೆ. ಸೃಷ್ಟಿಯಲ್ಲಿ ಹರಿದಾಡುವ ನೀರು ತನ್ನ ಲೀಲಾವಿಲಾಸದಲ್ಲಿ ಅದನ್ನು ವಿವಿಧ ವೈಚಿತ್ರ್ಯದಿಂದ ವ್ಯಂಜಿಸುತ್ತದೆ. ಆ ಸಾತ್ವಿಕ ಭಾವದಲ್ಲಿ ನವಕಂಪನವಿದೆ' ಎಂದು ಬೇಂದ್ರೆ ಸೂಚಿಸುತ್ತಾರೆ. 'ನೀರು' ಕವಿತೆಯಲ್ಲಿ ನೀರಿನ ಅನಾದಿ ಕಾಲದ 'ಲೀಲಾವಿಲಾಸ'ವನ್ನೇ, ಬೇಂದ್ರೆ ಅವರು ಕಟ್ಟಿದ್ದಾರೆ. ಸೃಷ್ಟಿಯ ಚರಾಚರಗಳ ಜೀವನಾಡಿಯಾದ ನೀರಿನ ಚಲನಶೀಲತೆಯ ಕಥನವೂ ಇದಾಗಿದೆ.

ಮೋಡ ಎರೆವುದು ಮಲೆಯ ತಲೆಯಲಿ, ಬೆಟ್ಟ ಸುರಿವುದು ಕೊಳ್ಳಕೆ,
ಕೊಳ್ಳ ತೊರೆವುದು ನದಿಗೆ, ಎಲ್ಲವು ಮತ್ತೆ ಕಡಲಿನ ಹಳ್ಳಕೆ,
ಸೂರ್ಯರಶ್ಮಿಯ ಸೇರಿ ಸೇರುವದಣ್ಣ ಬಾನಿನ ಏರಿಗೆ,
ನೆಲವೆ ನೀರಡಿಸಿರಲು ಕರೆವುದು ಗಿಡಮರದ ತಾಯ್ಬೇರಿಗೆ
ಜನ್ಮಮರಣದ ಚಕ್ರದಂತಿದೆ ವಕ್ರಮಾರ್ಗವು ನೀರಿಗೆ
ಬೇಕು ಈ ಅಭಿಸರಣದಂದದ ಅಧಃಪತನವು ಯಾರಿಗೆ?[೧೩]

ಈ ಮೇಲಿನ ಕವಿತೆಯ ಸಾಲುಗಳಲ್ಲಿ ನೀರಿನ ಋತು ಚಕ್ರವನ್ನೇ ಕಾಣಬಹುದು. ಹಾಗೆಯೇ ಅಖಂಡ ವಿಶ್ವದಲ್ಲಿ ಹಸಿರನ್ನು, ಸಮೃದ್ಧತೆಯನ್ನು, ಜೀವ ಚೈತನ್ಯವನ್ನು ತುಂಬುವ ನೀರಿನ ಆದಿ - ಅನಾದಿ ಕಾಲಗಳ

ನವಕಥನ ಈ ಕವಿತೆಯಲ್ಲಿ ವ್ಯಂಜಕಗೊಂಡಿದೆ. ಜಗದ ಜೀವ ಜಾಲದ ಸೌಭಾಗ್ಯಕ್ಕೆ ಕಾರಣವಾದ ಗಂಗೆಯನ್ನು ಹಾಗೂ ಜಲತಾಣಗಳನ್ನು ಮಲಿನಗೊಳಿಸುತ್ತಿರುವ ಈ ಸಂದರ್ಭದಲ್ಲಿ ಇಂಥ ಕವಿತೆಗಳ ಓದು ಪ್ರಸ್ತುತವೆನಿಸುತ್ತದೆ. ಅಂಥ ಓದಿನಿಂದ ಜೀವಚೈತನ್ಯಕ್ಕೆ ಅಗತ್ಯವಾದ ನೀರನ್ನು ಹಾಗೂ ಜಲತಾಣಗಳನ್ನು ಕಲುಷಿತಗೊಳಿಸಬಾರದೆಂಬ ವಿವೇಕ, ಪ್ರಜ್ಞೆ ಮಾನವ ಸಮುದಾಯದಲ್ಲಿ ಕೊಂಚವಾದರೂ ಎಚ್ಚರಗೊಂಡರೆ ಬೇಂದ್ರೆ ಕಟ್ಟಿದ ಕಾವ್ಯ ಕೃತಾರ್ಥಗೊಂಡಂತೆ.

> "ಈ ಪೃಥ್ವಿಯನ್ನು ನಮ್ಮ ತಾತ ಮುತ್ತಾತಂದಿರಿಂದ ನಾವು ವಂಶಪಾರಂಪರ್ಯವಾಗಿ ಪಡೆದಿದ್ದೇವೆ. ನಮ್ಮ ಮಕ್ಕಳು ಮೊಮ್ಮಕ್ಕಳಿಗೆಂದು ನಾವಿದನ್ನು ಕಲುಷಿತಗೊಳಿಸಿಟ್ಟು ಹೋಗಬಾರದು..."[೧೪]

ಎಂಬ ಮಾತು ಅನೇಕ ಗ್ರಂಥಗಳಲ್ಲಿ ಹಾಗೂ ಸಾರ್ವಜನಿಕ ಫಲಕಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ.

ಭೂಮಿಯ ಮೇಲಿನ ನೈಸರ್ಗಿಕ ಸಂಪತ್ತಿಗೆ ಒಂದು ಮಿತಿಯಿದೆ. ಹಾಗೆಯೇ ಜೀವ ಸಂಕುಲಗಳಿಗೂ ಒಂದು ಮಿತಿಯಿದೆಯೆಂಬ ಅರಿವಿನಿಂದ ಪ್ರತಿಯೊಬ್ಬ ವ್ಯಕ್ತಿ, ಪ್ರತಿಯೊಂದು ಸಮುದಾಯ, ಸರ್ಕಾರ ಹಾಗೂ ರಾಷ್ಟ್ರಗಳು ವರ್ತಿಸಬೇಕಾದ ಪರಿಸರ ದಾರ್ಶನಿಕತೆಯನ್ನು ಈ ಮೇಲಿನ ಉದ್ಧರಣೆ ಪ್ರಕಟಿಸುತ್ತದೆ. ಸಸ್ಯ ಸಂಕುಲ, ಪ್ರಾಣಿ ಸಂಕುಲಗಳ ಜೀವ ವಿಕಾಸದ ಅನೇಕ ಶತಮಾನಗಳ ನಂತರ ಮಾನವ ಸಮುದಾಯದ ಉಗಮವಾಯಿತು. ಆದರೂ ಮಾನವ ಕೇವಲ ಕೆಲವೇ ದಶಕಗಳ ಅವಧಿಯಲ್ಲಿ ಜಗತ್ತಿನ ಜೀವ ಸಂಪತ್ತನ್ನು, ಖನಿಜ ಸಂಪತ್ತನ್ನು ಹಾಗೂ ಜಲ ಸಂಪತ್ತುಗಳನ್ನು ಕೊಳ್ಳೆ ಹೊಡೆದು ಮುಗಿಸುತ್ತಿದ್ದಾನೆ. ಇಂಥ ತೀವ್ರತೆಗೆ ಮಾನವ ಸಮುದಾಯದ ಅವಿವೇಕಿತನ ಮಾತ್ರ ಕಾರಣವಲ್ಲ. ಈ ಮೂಲಕ ಮನುಷ್ಯ ತನ್ನ ಭವಿಷ್ಯದ ಬದುಕಿಗೆ ತಾನೆ ಮೃತ್ಯುವಾಗುತ್ತಿದ್ದಾನೆ. ಶಿವರಾಮಕಾರಂತರ ಈ ಕೆಳಗಿನ ಮಾತುಗಳು ಸ್ವಾರ್ಥಿಮಾನವ ಪರಿಸರದ ಮೇಲೆ ನಿರಂತರವಾಗಿ ನಡೆಸುತ್ತಾ ಬಂದ ವಿಕೃತ ಚಟುವಟಿಕೆಗಳ ಕಥನವನ್ನೇ ತೆರೆದಿಡುತ್ತದೆ.

> ನಾಗರಿಕ ಮನುಷ್ಯನೆನಿಸಿಕೊಂಡು ಊರುಕೇರಿಗಳನ್ನು ಕಟ್ಟಿ, ನೆಲದಲ್ಲಿ ಮನುಷ್ಯ ಯಜಮಾನಿಕೆ ನಡೆಯಿಸಿದ. ಯಾವತ್ತು ಜೀವಜಂತುಗಳ ಮೇಲೂ ತನ್ನ ಯಜಮಾನಿಕೆಯನ್ನು ಹೊರಿಸತೊಡಗಿದ. ಅದರಿಂದಾಗಿ ಜಗತ್ತಿನ ಜೀವ ಸಂಕುಲಕ್ಕೆ ಮನುಷ್ಯ ಕುಲದಂತಹ ಹಗೆ ಇನ್ನೊಂದಿರಲಾರದು - ಎನಿಸುವ ಕಾಲ ಬಂತು. ಹಿಂದಣ ಯುಗಮಾನಗಳಲ್ಲಿ ವಿವಿಧ ಜೀವ ಜಾತಿಗಳೊಳಗೆ ಯಾವೊಂದು ಸಮತೋಲ ಆಗಾಗ ಸ್ಥಾಪನೆಗೊಳ್ಳುತ್ತ ಬಂದಿತ್ತೋ ಅದೇನೇ, ನಾಗರಿಕ ಮಾನವನ ಬೆಳವಣಿಗೆಯಿಂದಾಗಿ ತೀರ ತಲೆಕೆಳಗಾಗುವ ಪರಿಸ್ಥಿತಿ ಕಾಣಿಸಿಕೊಂಡಿತು. ಇದೊಂದು ತೀರ ದಾರುಣ ಇತಿಹಾಸ.
>
> ತಾನಿರುವ ಜಗತ್ತನ್ನು, ಆ ಜಗತ್ತಿನಲ್ಲಿರುವ ಜೀವಕೋಟಿಯನ್ನು ಬುದ್ಧಿ ಜೀವಿಯಾದ ಮನುಷ್ಯ ಕೇವಲ ತನ್ನ ಮತ್ತು ತನ್ನವರ ಸ್ವಾರ್ಥಕ್ಕೆ ಬೆಳೆಯಿಸಿಕೊಂಡದ್ದನ್ನು ಕಾಣುತ್ತೇವೆ. ಈ ನೆಲ, ಜಲ ಮತ್ತು ಅದರಲ್ಲಿರುವ ಯಾವತ್ತುಸೊತ್ತುಗಳು ತನ್ನ ಸಲುವಾಗಿಯೇ ಇವೆ - ಎಂದು ಆತ ತಿಳಿಯತೊಡಗಿದ. ಅದೇ ರೀತಿ ಯಾವ ಹಂಗೂ ಇಲ್ಲದೆ ಬದುಕತೊಡಗಿದ್ದಾನೆ. ಆತ ಕಟ್ಟಿಕೊಂಡ ದೇವರುಗಳು, ಆ ದೇವರುಗಳೇ ಅವನಿಗೆ

ಹೇಳಿದರೆಂಬ ಮಾತುಗಳು, ಕೇವಲ ಮನುಷ್ಯ ಪಾರಮ್ಯವನ್ನು ಸಾರಿವೆ. ನಮ್ಮ ಈ ಭೂಮಿಯ ಮೇಲೆ ಜೀವಕೋಟಿ ಕಾಣಿಸಿದ ಮೂರು ಬಿಲಿಯ ವರ್ಷಗಳ ಕಾಲ ಜೀವಕೋಟಿಗಳು ಅನುಭವಿಸದಿದ್ದ ಗಂಡಾಂತರಗಳನ್ನು ಮಾನವನ ಉದಯದಿಂದ ಅನುಭವಿಸಬೇಕಾಗಿ ಬಂದಿದೆ. ಆದರೆ 'ಬುದ್ಧಿಜೀವಿ'ಎನಿಸಿಕೊಂಡ ಮನುಷ್ಯ ತನ್ನ ಕಣ್ಣನ್ನು ಇನ್ನೂ ಸಂಪೂರ್ಣ ತೆರೆದಿಲ್ಲ. ಆತ ತನ್ನ ಇಂದಿನ ಸ್ವಾರ್ಥಕ್ಕಾಗಿ ತನ್ನ ಇಂದನ್ನೂ, ನಾಳೆಯನ್ನೂ, ತನ್ನ ಜನಗಳನ್ನೂ ಬಲಿಕೊಡುತ್ತಲೇ ಬಂದಿದ್ದಾನೆ.[೧೫]

ನಮ್ಮ ಮಕ್ಕಳು ಮೊಮ್ಮಕ್ಕಳು ನೆಮ್ಮದಿಯಿಂದ ಬದುಕು ನಡೆಸಲು ಸ್ವಾರ್ಥಿ ಮಾನವನ ಈ ಎಲ್ಲ ಅಕೃತ್ಯಗಳನ್ನು ವಿವೇಚನೆಯಿಂದ ಸರಿಪಡಿಸಬೇಕಾದ ಜರೂರು, ತುರ್ತು ಇಂದು ಅತ್ಯಗತ್ಯವಾಗಿದೆ. ಹಾಗಾಗಿ ಜಗತ್ತಿನೆಲ್ಲೆಡೆ ಪರಿಸರ ಅಧ್ಯಯನಗಳು ಅಧಿಕಗೊಳ್ಳುತ್ತಿವೆ. ಎಲ್ಲ ಕಾಲದ ಸಂವೇದನೆ ಪುರಾಣ, ಧಾರ್ಮಿಕ ಹಾಗೂ ಸಾಹಿತ್ಯ ಕೃತಿಗಳಲ್ಲಿ ಪರಿಸರವನ್ನು ಕುರಿತು ಧ್ಯಾನಿಸಿರುವ ನೆಲೆಗಳ ಅಧ್ಯಯನವು ಗಾಢವಾಗಿ ನಡೆಯುತ್ತಿದೆ. ಭವಿಷ್ಯದಲ್ಲಿ ಮುಂದಿನ ಪೀಳಿಗೆಗಾಗಿ ಶುದ್ಧ ನೀರು, ನೀಲಾಕಾಶ, ಹಸಿರು ಭೂಮಿಯನ್ನು ಬಿಟ್ಟು ಹೋಗಬೇಕಾದ ಕರ್ತವ್ಯ ನಮ್ಮದಾಗಿದೆ. ಆದ್ದರಿಂದ ಪರಿಸರ ಸಂರಕ್ಷಣೆಯ ಬಗೆಗೆ ಮಾನವ ಪೀಳಿಗೆಯನ್ನು ಎಚ್ಚರಗೊಳಿಸಲು ಜಗತ್ತಿನಾದ್ಯಂತ ಅನೇಕ ಚಟುವಟಿಕೆಗಳು ನಡೆಯುತ್ತಿವೆ.

೩. ಇಳೆಯೆಂದರೆ ಬರಿಮಣ್ಣಲ್ಲ

ಜಲತಾಣಗಳ ಮೇಲೆ ಮಾನವನ ಅನ್ಯಾಕ್ರಮಣದಂತೆಯೇ ಭೂಮಿ ತಾಯಿಯ ಮೇಲೆ ನಡೆಸಿದ ಕ್ರೌರ್ಯಾವಸ್ಥೆಗಳ ಚಿಂತನೆಯು ಬೇಂದ್ರೆ ಕಾವ್ಯದ ಮುಖ್ಯ ನೆಲೆಯಾಗಿದೆ. ಬೇಂದ್ರೆಯವರ 'ಚಿಗರಿಗಂಗಳ ಚೆಲುವಿ' ಕವಿತೆ ಇಂಥ ಮನುಷ್ಯನ ಕ್ರೌರ್ಯಾವಸ್ಥೆಗಳ ಕಥನ. ಇದು ಪರಿಸರ ಅಧ್ಯಯನದ ದೃಷ್ಟಿಯಿಂದ ಹಲವು ಅರ್ಥಗಳನ್ನು ವ್ಯಂಜಿಸುತ್ತದೆ. ಇದು ಏಕಕಾಲಕ್ಕೆ ಮನುಷ್ಯ, ಪುರುಷ ಹಾಗೂ ಸ್ತ್ರೀ ಶೋಷಣೆಯಾಗಿ ಮನುಷ್ಯ ಹಾಗೂ ಪ್ರಕೃತಿಯನ್ನೇ ಶೋಷಿಸುವ ಮುಖಗಳನ್ನು ಧ್ವನಿಸುತ್ತದೆ. 'ಚಿಗರಿಗಂಗಳ ಚೆಲುವಿ' ಕವಿತೆ ಪಕ್ಷಿ ಪಶು, ಮಾನವ ಎಲ್ಲರನ್ನೂ ಜೀವವೆಂದು ಬಗೆಯದೆ ಜಡಾನ್ನವನ್ನಾಗಿ ಮಾಡಿ ಹಿಂಸೆಗೊಳಿಸುವ ಯುಗಯುಗದ ಗೋಳನ್ನು ಪರಿಚಯಿಸುತ್ತದೆ. ತಾನೂ ಕೂಡ ಒಡವೆ ಅಲ್ಲ ಮಗನೆ! ನಾನು ಉಸಿರಿದ್ದೊಡಲು ಎಂದು ಸಾರುತ್ತಾಳೆ. ಪೃಥ್ವಿ ಜೀವಕೋಟಿಯ ತಾಯಿ! ಅದನ್ನು ಹಿಗ್ಗಾಮುಗ್ಗಾ ಎಳೆದು ಹಂಚಬಾರದಾಗಿ ಪೃಥ್ವಿಯೆ ಸಾರಿದರೂ ಕೇಳುವವರು ಯಾರು?[೧೬] ಎಂದು ಬೇಂದ್ರೆಯವರು ಈ ಕವಿತೆಯ ಭಾವಸಂದರ್ಭವನ್ನು ಸೂಚಿಸಿದ್ದಾರೆ.

ಭೂಮಿಯನ್ನು ಮಾನವ ಸಮುದಾಯ ಕಚ್ಚಾವಸ್ತುವೆಂದು ಬಗೆದು ನಿರಂತರವಾಗಿ ಶೋಷಿಸಿದ ಹಿಂಸೆಯ ಕಥನ ಈ ಕವನದುದ್ದಕ್ಕೂ ವ್ಯಾಪಿಸಿದೆ. 'ಚಿಗರಿಗಂಗಳ ಚೆಲುವಿ'ಯಾದ ಭೂಮಿತಾಯಿ ಮನುಷ್ಯನ ಹಿಂಸಾಕೃತ್ಯಗಳಿಂದ ತನ್ನ ನೆಮ್ಮದಿ, ನಿಗೂಢತೆ, ಪ್ರಶಾಂತತೆ ಹಾಗೂ ಪಾವಿತ್ರ್ಯವನ್ನು ಕಳೆದುಕೊಂಡು ಹಲವು ತಲ್ಲಣಗಳಿಗೆ ಒಳಗಾದ ಚಿತ್ರಗಳನ್ನು ಇಲ್ಲಿ ಕಾಣುತ್ತೇವೆ. ಸಚರಾಚರಗಳ ಮೇಲೆ ನಡೆಸಿದ ಬೇಟೆಯಿಂದಾಗಿ ಭೂಮಿಯ ಮೇಲಿನ ಅಖಂಡ ಜೀವ ಸಂಕುಲಗಳು, ಗಿಡ, ಮರ, ಸಸ್ಯ, ಹೊಳಿ, ಹಳ್ಳ, ದಿನ್ನಿ, ಮದ್ದಿ, ಗುಡ್ಡಗಳೆಲ್ಲವೂ ತನ್ನ ಸಂಬಂಧಾಂತರಗಳಿಂದ ದೂರವಾಗಿ, ಚೆದುರಿ ಬೆದರಿನಿಂತ ಪ್ರಪಂಚವನ್ನು ಇಲ್ಲಿ ನೋಡುತ್ತೇವೆ.

ಆಳುಗಳ ಹೋರಾಟ
ಆಳುವವರಿಗೆ ಆಟ
ಗಾಳಕ್ಕ ಸಿಕ್ಕ ಮೀನದ ಗೋಳಾಟೊ
ಗೆಣೆಯಾ ಗೋಳಾಟೋ
ಗೆದ್ದವರ ಇದ್ದವರ ಹಾರಾಟ ;
ಅರೆಸತ್ತ ಜೀವಾ ಕೊಳೆತಾsವೊ
ಹುಳತಾsವೋ
ಅಳತಾsವೋ
ಹಸುಗೂಸು ತಿರುಗಿ ಹೊಟ್ಯಾಗ ಹುಗಿಧ್ಹಾಂಗ[೭೩]

ಆಳುಗಳ ಹೋರಾಟದಿಂದ ಹಾಗೂ ಗಾಳಕ್ಕೆ ಸಿಕ್ಕ ಮೀನದ ಗೋಳಾಟದ ಹಾಗೆ ಭೂಮಿತಾಯಿಯ ಸಮಷ್ಠಿ ಬದುಕು ಅರೆಸತ್ತ ಜೀವದಂತಾಗಿದೆ. 'ಹಸುಗೂಸು ತಿರುಗಿ ಹೊಟ್ಯಾಗ ಹುಗಿಧ್ಹಾಂಗೆ' ದೀನಾವಸ್ಥೆ ನಿರ್ಮಾಣವಾಗಿದೆ. ಹಾಗೆಯೇ ಉಕ್ಕುಕ್ಕುವ ದುಃಖವನ್ನು ಒಳಗೆ ಒತ್ತಿ 'ನಿಂತ ನೆಲವೆಂದು ಕಡಿಲಾsಕೊ, ಬಡಿಲಾsಕೊ, ಒಡಿಲಾsಕೋ, ಒಡವ್ಯಲ್ಲೋ ಮಗನೇ ಉಸಿರಿದ್ದೊಡಲಂತಾsಳೋ' ಎಂಬ ಗೋಳಿನ ದನಿಯಲ್ಲಿ ಮಾನವ ನಿರ್ಮಿತ ಹಿಂಸೆಯ ಅನಾದಿ ಕಾಲದ ನೋವು ಮಡುಗಟ್ಟಿದೆ.

ಆಧುನಿಕ ಅಭಿವೃದ್ಧಿಯ ಯೋಜನೆಗಳಾದ ಗಣಿಗಾರಿಕೆ, ಕೃಷಿ, ನಗರ ನಿರ್ಮಾಣ, ಕೈಗಾರಿಕೀಕರಣ, ವಿದ್ಯುತ್ ಸ್ಥಾವರಗಳ ಸ್ಥಾಪನೆ, ಅಣೆಕಟ್ಟುಗಳ ನಿರ್ಮಾಣ, ತನ್ನ ಮೋಜಿಗಾಗಿ ಅರಣ್ಯದ ಸಂಪನ್ಮೂಲಗಳ ಹಾಗೂ ವನ್ಯ ಮೃಗಗಳ ಮೇಲಿನ ಬೇಟೆ ಮೊದಲಾದ ಚಟುವಟಿಕೆಗಳಿಂದ ಭೂಮಿ ನಿರಂತರ ಶೋಷಣೆಗೆ ಒಳಗಾಗುತ್ತಿದೆ. ಅಂದರೆ ಶತಮಾನಗಳಿಂದ ಪರಿಸರದ ಒಂದು ಅಂಗವೇ ಆಗಿರುವ ಮಾನವ ಭೂಮಿಯ ಮೇಲಿನ ಜೈವಿಕ ಸಂಪತ್ತನ್ನು, ಖನಿಜ ಸಂಪತ್ತನ್ನು ಲೂಟಿ ಮಾಡಿ ತನ್ನ ಅವಿವೇಕಿತನದಿಂದ ಭವಿಷ್ಯದ ಕರಾಳ ಪರಿಸರದ ನಿರ್ಮಾಣಕ್ಕೆ ಕಾರಣವಾಗುತ್ತಿರುವುದನ್ನು ಇಂಥ ಕವಿತೆ ಧ್ವನಿಸುತ್ತದೆ.

ಇಳೆಯೆಂದರೆ ಬರಿ ಮಣ್ಣಲ್ಲ
ನಮಗೋ ನೋಡುವ ಕಣ್ಣಿಲ್ಲ
ಏಸು ತಿಂದರೂ ತೀರದಿದೆ
ಏಸು ತುಂಬಿಯೂ ಮೀರದಿದೆ
ಅಮೃತವೆಂಬುದು ಅನಂತವೆಂಬುದು ಕಾಲಲ್ಲೇ ಇಲ್ಲೇ
ಮೈಯೊಳು ಮಲಗಿದ ಆ ಆಳೆದ್ದರೆ ಬಾನೆ ಮನೆಯಲ್ಲೇ
ಈ ನೆಲಕೆಲ್ಲಾ ನೀರೇ ಮೇರೆ
ನೀರುಗಾಳಿಗಳ ಹಾದಿಯೆ ಬೇರೆ.

ಹಾಗಾಗಿಯೇ ಬೇಂದ್ರೆಯವರಿಗೆ "ಇಳೆ' ಎಂದರೆ ಬರಿ ಮಣ್ಣಲ್ಲ. ಅದೊಂದು ಅಖಂಡ ಪರಿಸರ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿನ 'ಅಣ್ಣ ತಮ್ಮದಿರು ತಮ್ಮ ತಮ್ಮೊಳಗೆ ಕಾದಾಡಲು ಬೇಕೆ? ನಲುಮೆಯ ನೀರನು ಕಣ್ಣೀರೆನ್ನುತ

ಚೆಲ್ಲಾಡುವಿರೇಕೆ?' ಎಂಬ ಪ್ರಶ್ನೆಗಳಿಂದ ಮನುಷ್ಯ ಹಾಗೂ ಸಕಲ ಜೀವ ಜಗತ್ತಿನ ಸೌಹಾರ್ದ ಬದುಕಿನ ಪರಿಸರ ನಿರ್ಮಿತಿಯ ಅಗತ್ಯತೆಯನ್ನು ಚಿಂತಿಸುತ್ತಾರೆ. ಅವರೇ ಹೇಳುವಂತೆ 'ಒಂದೇ ತಾಯಿಯ ಮಕ್ಕಳಾಗಿರುವ ಜನತೆಯಲ್ಲಿ ರಕ್ತದ ಓಕುಳಿಯಾಡುವ ಬುದ್ಧಿ ಎಂದು ಬದಲಾದೀತು ಎಂಬ ಪ್ರತೀಕ್ಷೆ ಇಲ್ಲಿದೆ. ಇಳಾತನಯರಲ್ಲಿ ಇಳೆಯ ಸದ್ಗುಣಗಳ ಅಭಿವೃದ್ಧಿಯಾಗಬೇಕಾಗಿದೆ' ಎಂಬುದು ಬೇಂದ್ರೆಯವರ ಜೀವಕೇಂದ್ರಿತ ಚಿಂತನೆ.

ಅಣ್ಣತಮ್ಮದಿರು ತಮ್ಮತಮ್ಮೊಳಗೆ ಕಾದಾಡಲು ಬೇಕೆ?
ನಲುಮೆಯ ನೀರನು ಕೆನ್ನೀರೆನ್ನುತ ಚೆಲ್ಲಾಡುವಿರೇಕೆ?
ಮಣ್ಣಲಿ ನೀರಲಿ ಸೂರ್ಯನ ಕಿರಣ
ಚಿತ್ರಿತವಾಗಲಿ ಅಪಾರವರಣ
ಬಾನುಲಿಯಲಿ ಮಾತಾಡುವ ಬನ್ನಿ ಗಾಳಿದೇರನೇರಿ
ಈ ರಸ ಮೀರಿ ಆ ರಸವೇರಿ ರಸರಸಿಕರು ಸೇರಿ.
ಅಕಾಂಡ ತಾಂಡವವೇತಕ್ಕೆ
ಲಾಸ್ಯವೆ ಸಾಕು ಈತಕ್ಕೆ
ನಂದಾದೀಪದ ನಡೆಮಾಡಗಳೇ ಸಂಚರಿಸುವ ಹಾಗೆ
ಜೀವ ಜೀವಗಳ ಕಾರ್ತಿಕೋತ್ಸವವು ಮೊದಲಾಗಲಿ ಮೇಗೆ.
ಋತುಗಳು ನಡೆಸಲಿ ರಿಂಗಣಗುಣಿತ
ಜೀವ ನುಡಿಸುತಿರೆ ವೀಣಾಕ್ವಣಿತ
ಮಾಲೆಯು ಕೊರಳಿಗೆ ಜೋತಿರುವಂತೆ ಹೃದಯಕೆ ಬಂದಾತು
ಸುಗ್ಗಿಯು ನೆಲವನೆ ಸುತ್ತುತ್ತಿರಲಿ ಮಧುಲೀಲೆಗೆ ಸೋತು.[೮]

ಈ ಮೇಲಿನ ಉದ್ಧರಣೆಯಲ್ಲಿ ಬೇಂದ್ರೆಯವರ ಜೀವ ಸಾಮರಸ್ಯದ ಬದುಕನ್ನು ಕಾಣುತ್ತೇವೆ. ಅಖಂಡ ಜೀವ ಸಮೂಹ ತಮ್ಮ ತಮ್ಮೊಳಗಿನ ಕಾದಾಟ ಹಾಗೂ ಸಂಘರ್ಷದ ಚಿತ್ರವನ್ನು ಇಲ್ಲಿ ಕಾಣುತ್ತೇವೆ. ಒಲುಮೆಯ ಬದುಕನ್ನು ಕೆನ್ನೀರಿನ ಚೆಲ್ಲಾಟವನ್ನಾಗಿ ಮಾಡುವ ಹಿಂಸೆಯ ನೆಲೆಯನ್ನು ಈ ಕವಿತೆ ಪ್ರಶ್ನಿಸುತ್ತದೆ. ಜೀವಜೀವಗಳೊಳಗಿನ ಕಾರ್ತಿಕೋತ್ಸವ ಹಾಗೂ ನಂದಾದೀಪದ ಪರಿಸರ ನಿರ್ಮಾಣವಾಗಬೇಕೆಂದು ಈ ಕವಿತೆ ಆಶಿಸುತ್ತದೆ. ಸುಗ್ಗಿಯು ಸಮಷ್ಠಿ ಭೂಮಿಯನ್ನು ಸುತ್ತುವರೆಯಬೇಕೆಂಬ ಚಿಂತನೆ ಇಲ್ಲಿದೆ. 'ಒಂದೆ ತಾಯಿಯ ಮಕ್ಕಳು' ಕವಿತೆಯಲ್ಲಿಯೂ ಜೀವ ಸಾಮರಸ್ಯದ ಚಿಂತನೆಯೇ ಮುಂದುವರೆದಿದೆ. ಈ ಕೆಳಗಿನ ಕಾವ್ಯಭಾಗ ಭೂಮಿಯ ಮೇಲಿನ ಎಲ್ಲ ಜೀವಗಳು ಒಂದೇ ತಾಯಿಯ ಮಕ್ಕಳೆಂಬ ಭಾವವನ್ನು ಧ್ವನಿಸುತ್ತದೆ.

ಬಣ್ಣ ಬಣ್ಣದ ಜನರು ನಾವಿಂದೊಂದುಗೂಡಲು ಬಂದೆವು
ಮಣ್ಣ ಭೇದವನೆಣಿಸದೇ ಒಂದೆದೆಯ ಬಲವನು ತಂದೆವು
ತಾಯಿನೆಲವೇ ಅನ್ನವೆಂದೇ ನಿನ್ನ ಮೈಯ್ಯನ್ನುಂಡೆವು
ತಾಯಿ ಮೊಲೆವಾಲೆಂತು ತೊರೆವುದೊ ಅಂತು ಸೆಲೆಗಳ ಕಂಡೆವು
ಅದಕೆ ಜೀವನವೆಂದೆವು

ಅದುವು ಇರದಿರೆ ಬೆಂದೆವು.
ಪ್ರಾಣದೀಪವು ಬೆಳಗಲೆಂದೇ ಪ್ರಾಣವಾಯುವ ಕುಡಿದೆವು
ತ್ರಾಣ ಬೇಡುವ ಬಳ್ಳಿಯಂದದಿ ಬೆಳಕಿನತ್ತಲೆ ನಡೆದೆವು.[೧೯]

ಸಾಮರಸ್ಯದ ಬದುಕನ್ನು ನಡೆಸಲು ಬಂದ ಜೀವ ಸಮುದಾಯದಲ್ಲಿ ಉಂಟಾದ ಬಿರುಕುಗಳ ಕಥನವನ್ನು ಈ ಮೇಲಿನ ಕಾವ್ಯಭಾಗದಲ್ಲಿ ಕಾಣುತ್ತೇವೆ. ಇದಕ್ಕೆ ವಿರುದ್ಧವಾದ ಚಿತ್ರವೊಂದು ಮುಂದಿನ ಕವಿತೆಯ ಭಾಗದಲ್ಲಿ ಎದುರಾಗುತ್ತದೆ.

ಮನೀಮುರಕರ ತಳೀ ಹೋಗಿ
ಬಾಳೇ ಮತಿವಂತರದಾಗಿ
ಸಂಸಾರದs ಕತೀ ಆಗ್ಲಿ
ಸತಿಪತಿ ಸಮರಸಾ.[೨೦]

ಜೀವ ಜೀವಗಳ ನಡುವೆ 'ಸತಿಪತಿ ಸಮರಸ' ಸಂಬಂಧ ಬೆಳೆಯಬೇಕೆಂಬುದು ಅವರ ಕಾವ್ಯದ ಆಶಯ. ಇಂತಹ ಆಶಯಕ್ಕೆ ಧಕ್ಕೆ ಆಗಬಾರದೆಂಬ ವಿಚಾರವು ಇಲ್ಲಿದೆ.

ಹೃದಯದ ಮಾತು ಹೃದಯಕ ಬಿಚ್ಚಿ
ಇದ್ದ ದೇವರಿಗೆ ದೀಪಾ ಹಚ್ಚಿ
ಕಂಡು ಹಿಡಿಯೋಣ ಕಣ್ಣು ಮುಚ್ಚಿ
ಜೀವದ ಒಳಕೀಲಾ.[೨೧]

ಇಂಥ ಅನೇಕ ಕವಿತೆಗಳಲ್ಲಿ ಜೀವದ ಒಳಕೀಲಿಗಳ ಶೋಧನೆ ನಡೆದಿದೆ. ಈ ಒಳಕೀಲಿಗಳು ವಿಶ್ವ ಸಾಮರಸ್ಯವನ್ನು ಸಾರುವಂತಾಗಬೇಕಾಗಿದೆ. ಈ ಬಗೆಯ ಸಾಮರಸ್ಯದ ಬದುಕಿನಲ್ಲಿ ಬೇಂದ್ರೆಯವರ ಪರಿಸರ ಚಿಂತನೆಯನ್ನು ಶೋಧಿಸಿಕೊಳ್ಳಬಹುದಾಗಿದೆ.

೪. ಅನ್ನ – ಹಸಿವು : ಪರಿಸರ

ಅನ್ನದ ಸಮಸ್ಯೆಯನ್ನು ಕುರಿತು ಬೇಂದ್ರೆಯವರಷ್ಟು ಆಳವಾಗಿ ಚಿಂತಿಸಿದ ಕವಿಗಳು ಕನ್ನಡದಲ್ಲಿ ವಿರಳವೆಂದೇ ಹೇಳಬಹುದು. ಬೇಂದ್ರೆ 'ಬಡತನವು ಸಾಹಿತ್ಯದ ವಸ್ತು ಏಕಾಗಿದೆ' ಎಂದು ಚಿಂತಿಸಿದರು. ಬಾಲ್ಯದಿಂದಲೇ ಬೆನ್ನುಹತ್ತಿದ ಬಡತನದ ಪರಿಣಾಮವಾಗಿಯೊ ಏನೊ ಅನ್ನದ ಸಮಸ್ಯೆ ಬೇಂದ್ರೆಯವರನ್ನು ಮತ್ತೆ ಮತ್ತೆ ಚಿಂತಿಸುವಂತೆ ಮಾಡಿದೆ. ಹಾಗಾಗಿ ಅನ್ನ, ಹಸಿವುಗಳು ಬೇಂದ್ರೆ ಸಾಹಿತ್ಯದ ಪ್ರಮುಖ ವಸ್ತುಗಳಂತೆ ಕಾಣುತ್ತವೆ. ಈ ಚಿಂತನೆ ದೇಹದ ಹೊಟ್ಟೆಯ ಹಸಿವಿನ ಪ್ರಶ್ನೆಗೆ ಮಾತ್ರ ಸೀಮಿತಗೊಳ್ಳದೆ ಜೀವಿಯ ಮನೋಕೋಶದ ಹಸಿವಿನ ಪ್ರಶ್ನೆಯನ್ನೂ ಧ್ಯಾನಿಸುತ್ತದೆ. 'ಮಾನವನ ಜ್ಞಾನದ ಎತ್ತರ, ಧರ್ಮದ ಒರೆ, ಕಾಮದ ಆಳ, ಅನ್ನದ ಅಳತೆ ಮತ್ತೊಮ್ಮೆ ನಿರ್ಣಯವಾಗಬೇಕಾಗಿದೆ. ಈ ಸಮಸ್ಯೆಗೆ ಉತ್ತರವನ್ನು ಮನೆಮನೆಯಲ್ಲಿಯೂ, ಮನಮನದಲ್ಲಿಯೂ ಹುಡುಕುವ ಪ್ರಯತ್ನಗಳಾಗ'ಬೇಕೆನ್ನುತ್ತಾರೆ.

ಅನ್ನವು ದೇಶದ ಪ್ರಥಮ ಸಮಸ್ಯೆಯೆಂಬುದರಲ್ಲಿ ಸಂದೇಹವಿಲ್ಲವೆನ್ನುತ್ತಾರೆ. ಅನ್ನದ ಅರ್ಥವು ವ್ಯಾಪಕವಾಗಿದೆ ಎನ್ನುತ್ತಾರೆ ಬೇಂದ್ರೆ. ಅನ್ನದ ಸಮಸ್ಯೆಯನ್ನು ಇದ್ದವರು ಮಹತ್ವದಲ್ಲವೆಂಬ ಹುಂಬುಗುತ್ತಿಗೆಯ ನ್ಯಾಯಕ್ಕೆ ಬಂದಿರುವುದರಿಂದ ಅನ್ನದ ಸಮಸ್ಯೆಗೆ ಪರಿಹಾರಗಳನ್ನು ಹುಡುಕುವ ವ್ಯರ್ಥ ಪ್ರಯಾಸದಲ್ಲಿ ಕಾಲಕಳೆಯಬೇಕಾಗಿದೆ. ಅನ್ನದ ಸಮಸ್ಯೆಯು ವಿಕ್ರಮನ ಬೇತಾಳದಂತೆ ಮೊದಲಿದ್ದ ಸ್ಥಳದಲ್ಲಿಯೇ ತೂಗಾಡುತ್ತಿದೆ ಎನ್ನುತ್ತಾರೆ. ಕೆಲವೊಮ್ಮೆ ಬೇತಾಳನಂತೆ ಅದು ಸ್ಥಳಬಿಟ್ಟು ಕದಲಿ ಸ್ವಲ್ಪ ದೂರ ಬಂದರೂ ಅದು ಕೊನೆಮುಟ್ಟದೆ ಮತ್ತೆ ಇದ್ದಲ್ಲಿಯೇ ಹಿಂತಿರುಗುವುದರಿಂದ ಅನ್ನದ ಸಮಸ್ಯೆ ಹಾಗೆಯೇ ಉಳಿದಿದೆಯೆಂದು ಬೇಂದ್ರೆಯವರು ಅಭಿಪ್ರಾಯಪಡುತ್ತಾರೆ.

ಅನ್ನದ ಅವ್ಯವಸ್ಥೆಯ ಮೂಲಕವೇ ಮನುಷ್ಯನಿಗೆ ದೀನಾವಸ್ಥೆ ಒದಗಿದೆ ಎಂಬ ವಿಚಾರವನ್ನು ಹೇಳಿದರೆ ದೇವರಿಗಿಂತ ಪ್ರಸಾದದ ಮಹತ್ವವೇ ಹೆಚ್ಚಾಗಿಬಿಟ್ಟಿತಲ್ಲ ಎಂಬ ಅಪಹಾಸ್ಯಕ್ಕೆ ಒಳಗಾಗುತ್ತೇವೆನ್ನುತ್ತಾರೆ. ಎಲ್ಲ ಸಂಸ್ಕೃತಿ ನಾಗರೀಕತೆಗಳ ವೈಭವಗಳ ಕಾಲದಲ್ಲಿ ಸಮೃದ್ಧಿ ಇತ್ತು, ಅನ್ನಕ್ಕೆ ಬೆಲೆಯಿತ್ತು, ಅನ್ನಕ್ಕೆ ಪಾವಿತ್ರ್ಯವಿತ್ತು, ಅನ್ನಕ್ಕೆ ದೇವತ್ವವಿದ್ದರೂ ಈ ಸಮಸ್ಯೆಯು ಭೂಮಂಡಲವನ್ನು ವ್ಯಾಪಿಸಿದೆ ಎನ್ನುತ್ತಾರೆ. ಹಾಗೆಯೇ ಈ ಸಮಸ್ಯೆ ಯುಗಯುಗಗಳು ಕಳೆದರೂ ಸಮಸ್ಯೆಯಾಗಿಯೇ ಉಳಿದಿದೆ. ಅಂತೆಯೇ ಅನ್ನದ ಸಮಸ್ಯೆಯು ನಿರಂತರವಾಗಿ ಉತ್ತರವನ್ನು ಬೇಡುತ್ತದೆಂದು ಭಾವಿಸುತ್ತಾರೆ. ಇನ್ನೂ ಮುಂದುವರೆದು ಅನ್ನದ ಅರ್ಥವನ್ನು ಈ ಕೆಳಕಂಡಂತೆ ಶೋಧಿಸಲು ತೊಡಗುತ್ತಾರೆ.

> ಪ್ರಾಣಿಯು ಪ್ರಾಣ ಉಳಿಯಲೆಂದು ಹಸಿವೆಯ ಹೊಟ್ಟೆ ಉರಿಯನ್ನು ತಣಿಸಲಾಗಿ ಏನೇನನ್ನು ತಿನ್ನುವದೊ, ಉಣ್ಣುವದೊ, ಸೇವಿಸುವದೊ, ಅದೆಲ್ಲವೂ ಅನ್ನ. ನೆಲವೆಲ್ಲವೂ ಅನ್ನ. ಮಣ್ಣು ಹುಳು - ಹುಪ್ಪಡಿಯ ಅನ್ನ. ಹುಳು - ಹುಪ್ಪಡಿ ಹಕ್ಕಿಪಕ್ಕಿಗಳ ಅನ್ನ. ಈ ಹಕ್ಕಿಪಕ್ಕಿ ಮನುಷ್ಯಾದಿ ಪ್ರಾಣಿಗಳ ಅನ್ನ, ವನಸ್ಪತಿಗಳ ಸೃಷ್ಟಿಯು ಮಣ್ಣು - ನೀರು ಗಾಳಿ - ಬೆಳಕನ್ನು ಉಂಡು ಬೆಳೆಯುತ್ತಿದೆ. ಈ ವನಸ್ಪತಿಯೆ ಕ್ರಿಮಿಕೀಟಕ ಮೊದಲುಗೊಂಡು ಮಾನವನವರೆಗೂ ಆಹಾರವಾಗಿದೆ. ಹಿಂಸ್ರ - ಪಶುಗಳು ಒಂದನ್ನೊಂದು, ಹಸಿವೆಯ ಉನ್ಮತ್ತತೆಯಲ್ಲಿ ಮಾನವನನ್ನೂ ತಿನ್ನುವದುಂಟು. ಮಾನವನಿಗೆ ಆಹಾರವಾಗದ ಪ್ರಾಣಿಯೆ ಇಲ್ಲ ; ಪದಾರ್ಥವೂ ಇಲ್ಲ. ಹಸಿದಾಗ ಕಲ್ಲನ್ನೂ ತಿಂದು ಕರಗಿಸಬಲ್ಲ. ಹಸಿವೆಯ ರಾಕ್ಷಸವೂ ಅವನಲ್ಲಿ 'ಹಸಿನಾತ' ಎಂದು ಕೂಗುವಾಗ ಮನುಷ್ಯನನ್ನೇ ತಿನ್ನಲು ಮನುಷ್ಯನು ಹೇಸಿಲ್ಲ.
>
> ..... ಪಾರ್ಥಿವ ಅನ್ನವಷ್ಟೆ ಅನ್ನವಲ್ಲ. ನೀರಿಲ್ಲದೆ ಮನುಷ್ಯನು ಬಾಳಲಾರನು. ಬೆಳಕಿಲ್ಲದಿದ್ದರೆ ಬಾಡಿಹೋಗುವನು. ಗಾಳಿಯಿಲ್ಲದಿದ್ದರೆ ಉಸಿರಡಗಿ ಹೋಗುವನು. ನಿಜವಾಗಿಯೂ ಮನುಷ್ಯನು ಕ್ಷಣಕ್ಷಣಕ್ಕೂ ಬಾಳುವದು ಈ ನಾಲ್ಕರಿಂದಲೂ ಅಹುದು. ಗಾಳಿ - ಬೆಳಕು - ನೀರು ಇವೂ ಅನ್ನಗಳೇ. ನಮ್ಮ ಬಾಳು - ಸಾವುಗಳೆರಡೂ ಈ ಮಹಾಭೂತಗಳ ಅಧೀನವಾಗಿವೆ. ಹೀಗಿದ್ದರೂ ಭೂಮಿತಾಯಿಯೆ ಮಾನವನ ಅನ್ನದ ಅಕ್ಷಯ ನಿಧಿಯಾಗಿದೆ, ಎಂಬುದು ತೀರ ಪ್ರತ್ಯಕ್ಷವಾದ ಮಾತು. ಆದರೆ ಈ ಪ್ರತ್ಯಕ್ಷ

ಮಾತೂ ಇನ್ನೂ ಸಾಕಷ್ಟು ಪ್ರಮಾಣಕ್ಕೆ ಬರದಿದ್ದುದರಿಂದಲೇ ಅನ್ನವು ಮಾನವನ ಪ್ರಾಣದೊಡನೆ ಚೆಕ್ಕಿನಾಟವನ್ನಾಡುತ್ತದೆ. ಭೂಮಿತಾಯಿಯು ಅಖಂಡವಾಗಿ ಮಾನವ ಕುಟುಂಬದ ಅನ್ನಕೋಶಗೃಹವಾಗದವರೆಗೆ ಅನ್ನ ಸಮಸ್ಯೆಯು ಬಿಡಿಸಬರದ ಗಂಟು;[೨೨]

ಈ ಮೇಲಿನ ಅನ್ನದ ಅರ್ಥವು ಅಖಂಡ ಜೀವರಾಶಿಯ "ಆಹಾರ ಸರಪಳಿ"ಯ ವಿರಾಟ್ ದರ್ಶನದಂತಿದೆ. ಹಾಗೆಯೇ ಬೇಂದ್ರೆಯವರ ಶೋಧಿತ ಪರಿಸರ ವ್ಯಾಖ್ಯೆ ಇದಾಗಿದೆ. ಅಖಂಡ ಜೀವಸಮುದಾಯಕ್ಕೆ ಅನ್ನದಂತೆ ನೀರು, ಬೆಳಕು, ಗಾಳಿ - ಇವುಗಳು ಅನ್ನವೇ ಆಗಿವೆ. ಆದ್ದರಿಂದ ಜೀವಿ ಈ ಮಹಾಭೂತಗಳ ಅಧೀನವಾಗಿದೆ. ಭೂಮಿತಾಯಿಯು ಮಾನವನ ಅನ್ನದ ಅಕ್ಷಯ ನಿಧಿಯಾಗಿದ್ದರು ಅನ್ನವು ಮಾನವನ ಪ್ರಾಣದೊಡನೆ ಚೆಕ್ಕಿನಾಟವಾಡುತ್ತಿದೆ. ಹಾಗಾಗಿ ಅನ್ನದ ಸಮಸ್ಯೆಯು ಬಿಡಿಸಬಾರದ ಗಂಟಾಗಿದೆ ಎನ್ನುತ್ತಾರೆ. ಅನ್ನದ ನಿಧಿಯಾದ ಭೂಮಿಯನ್ನು ಪಾದಾಕ್ರಾಂತ ಮಾಡುವ ಕೆಲ ಮಾನವರಿಂದ ಉಳಿದ ಮಾನವರು ಅರಣ್ಯಕರಾಗಬೇಕಾಗಿದೆ ಎಂದು, ಮಾನವನ ಅನ್ನದಿಂದ ಅವನ ಮನವನ್ನೂ ಅಳೆಯಬೇಕಿದೆ ಎನ್ನುತ್ತಾರೆ. ಜನರ ಮೈಗಳನ್ನು ಆಳಿ ಅನ್ನವನ್ನು ಅಧೀನದಲ್ಲಿಟ್ಟುಕೊಳ್ಳುವ ಶಕ್ತಿ ಮದೋನ್ಮತ್ತರು ಹವಣಿಸುವುದುಂಟು. ಈ ಮದೋನ್ಮತ್ತರ ಅಧೀನದಲ್ಲಿ ಅನ್ನವಿರುವವರೆಗೂ ಅನ್ನದ ಇನ್ನೊಂದು ಕಗ್ಗಂಟು ಬಿಡಿಸಲಾಗದೆಂಬುದು ಅವರ ದೃಢವಾದ ನಂಬಿಕೆ.

ಬೇಂದ್ರೆಯವರ ಅನ್ನ ಹಸಿವುಗಳ ಈ ಚಿಂತನೆ ಬಡವರ ಬಲ್ಲಿದರ ಬದುಕಿನ ದೃಢ ವಾಸ್ತವಗಳನ್ನು ಪ್ರಕಟಿಸುತ್ತದೆ. ಹಾಗೆಯೇ ಇವರ ನಡುವಿನ ಅಂತರಗಳನ್ನು ಸೂಚಿಸುತ್ತದೆ. ಬೇಂದ್ರೆ ಇನ್ನೂ ಮುಂದುವರೆದು ಧನವೆಂದರೆ ಹೊನ್ನಷ್ಟೇ ಅಲ್ಲ ಹೊಲವಷ್ಟೇ ಅಲ್ಲ ಧನವೆಂದರೆ ಅನ್ನವು, ಧನವೆಂದರೆ ಸ್ಥಿರಚರ ಆಸ್ತಿಯು, ಅನ್ನದ ಪೆಟ್ಟಿಗೆಯ ಕೀಲಿಯನ್ನು ತೆಗೆಯುವ ಕೀಲಿಯು ಧನವು ಎನ್ನುತ್ತಾರೆ. ಅನ್ನವನ್ನು ಮುಚ್ಚಿಡುವ ಧನವಂತರ ಮೇಲಾಟದಿಂದ ನಿಸರ್ಗದ ಮೇಲಾಗುವ ಒತ್ತಡವನ್ನು ಬೇಂದ್ರೆಯವರ ಈ ಚಿಂತನೆ ಧ್ವನಿಸುತ್ತದೆ. ಅನ್ನ ಧನಗಳ ಸಂಗ್ರಹವೆಂದರೆ ಪ್ರಕೃತಿಯ ಮೇಲಿನ ಹೊರೆಯೆಂದೇ ಅರ್ಥ.

ಬೇಂದ್ರೆ ಅನ್ನವನ್ನು ಕುರಿತು ಹಲವಾರು ಕವನಗಳನ್ನು ರಚಿಸಿದ್ದಾರೆ. 'ತುತ್ತಿನ ಚೀಲ', 'ಅನ್ನಾವತಾರ', 'ಅನ್ನಯಜ್ಞ', 'ಅನ್ನಬಕಾಸುರ ರಾಜ್ಯದಲ್ಲಿ', 'ಅನ್ನಬೇಕು', 'ಮನುವಿನ ಮಕ್ಕಳು', 'ಕೆಲಸವಿಲ್ಲದವರ ಹಾಡು', 'ಯೌವನದ ಕನಸು', 'ಕುರುಡು ಕಾಂಚಾಣ', 'ನಾಳಿನ ಕನಸು', 'ದುಡ್ಡು - ದುಡಿತ', 'ಕಾಂಚಾಣ ಭಿಕ್ಷಾ', 'ದುಡ್ಡಿನ ಕಥಿ' - ಹೀಗೆ ಇನ್ನೂ ಅನೇಕ ಕವಿತೆಗಳನ್ನು ಹೆಸರಿಸಬಹುದು.

ಬೇಂದ್ರೆಯವರು 'ತುತ್ತಿನ ಚೀಲ' ಕವಿತೆಯನ್ನು ಕುರಿತಂತೆ 'ಅನ್ನ ದೊರೆಯದ್ದಕ್ಕಾಗಿ ಹೊಟ್ಟೆ ಉರಿಯುತ್ತಿರುವವರೆಗೆ ಈ ಹಾಡು ತಪ್ಪಿಲ್ಲ' ಎಂದು ಭಾವ ಸಂದರ್ಭದಲ್ಲಿ ಸೂಚಿಸಿದ್ದಾರೆ. ಭೂಮಿ ಅನ್ನದ ಕಣಜವಾಗಿದ್ದರೂ ಅದು ಕೆಲವೇ ಜನರ ಸ್ವತ್ತಾಗಿದ್ದರಿಂದ ತುತ್ತಿನ ಚೀಲದ 'ಒಳಗಿನ ಒಳಗಿನ ಒಳದನಿಯೊಂದು' ಈ ಕವಿತೆಯನ್ನು ಹಾಡುತ್ತದೆ. 'ತಿತ್ತಿರಿ ತುಂಬಿದೆ ಕೂಳಿನ ಕೋಟೆ, ಕಿಕ್ಕಿರಿ ತುಂಬಿದೆ ಭೂಮಿಯ ಕಣಜ' - ಈ ಮಾತುಗಳು ಭೂಮಿಯ ಮೇಲಿನ ಅನ್ನದ ಸಮೃದ್ಧತೆಯನ್ನೇ ಧ್ವನಿಸುತ್ತವೆ. ಇಂಥ ಸಮೃದ್ಧತೆಯಲ್ಲಿ ಅನ್ನ ಭೂಮಿಯ ಮೇಲೆ ಲಭ್ಯವಿದ್ದರೂ ಅದು ಎಲ್ಲರಿಗೂ ಸಮನಾಗಿ ದೊರೆಯದ ಕಾರಣ ಈ ಬಗೆಯ ನೋವಿನ ಕಾವ್ಯ ಮೈಪಡೆದಿದೆ. ಇಲ್ಲಿ ದೈವುಳ್ಳವರೆಂದರೆ ಪದಾರ್ಥವುಳ್ಳವರು, ಅನ್ನವುಳ್ಳವರು, ಹಣವುಳ್ಳವರು. ಅಂದರೆ

ಪರಿಸರದಲ್ಲಿನ ಸಂಪನ್ಮೂಲಗಳು ಕೆಲವೇ ಜನರ ಸ್ವತ್ತಾಗುವುದೆಂದರ್ಥ. ಈ ಕವಿತೆ ಮೇಲುನೋಟಕ್ಕೆ ಮಾನವ ಸಮುದಾಯದ ಸಾಮಾಜಿಕ ಶೋಷಣೆಗೆ ಒಳಗಾದವರ ಬಡತನದ ಸ್ಥಿತಿಗತಿಗಳ ನೋವನ್ನು ಪ್ರಕಟಿಸುತ್ತದೆ. ಅಂದರೆ ಅಖಂಡ ಪರಿಸರದ ಅನ್ನದ ಸಮಸ್ಯೆಯೊಂದನ್ನು ಮತ್ತು ತನ್ನೊಳಗಿನ ಸಮಸ್ಯೆಯೊಂದನ್ನು ಚಿಂತಿಸುತ್ತದೆ ಎಂದು ಕಾಣುತ್ತದೆ. ಕೆ.ಸಿ. ಶಿವಾರೆಡ್ಡಿ ಅವರು ವಿಶ್ಲೇಷಿಸಿರುವಂತೆ

> ದೇವರು - ಧರ್ಮಗಳ ಸ್ಥಾನವನ್ನು 'ಪರಿಸರ' ಹಾಗೂ 'ಅನ್ನ' ಪಡೆದುಕೊಂಡಿವೆ. ಬೇಂದ್ರೆಯವರ ಅಸಂಖ್ಯ ಕವನಗಳಲ್ಲಿ ಇವೇ ಮೂಲಭಿತ್ತಿಯಾಗಿವೆ. ಇದು ಕೇವಲ ಮನುಷ್ಯನ ಅನ್ನಮಾತ್ರವಾಗದೆ ಒಟ್ಟು ಜೀವ ಸಂಕುಲದ ಅನ್ನದ ಸಮಸ್ಯೆಯನ್ನು ಕುರಿತದ್ದಾಗಿದೆ.
>
> ...... ಹಾಗೆಯೇ ದೇವರು - ಧರ್ಮ ಮೊದಲಾದ ಅರ್ಥಹೀನ ಆಚಾರ-ವಿಚಾರಗಳಿಗಿಂತ ಬೇಂದ್ರೆಯವರಿಗೆ ಮುಖ್ಯವಾಗಿ ಕಾಣುವುದು ಬದುಕಿನ ಶ್ರದ್ಧೆ ಹಾಗೂ ಒಟ್ಟು ಪರಿಸರದ ಬಗೆಗಿನ ಮಾನವೀಯತೆ.[೨೩]

'ತುತ್ತಿನ ಚೀಲ'ದ ಬದುಕು ಮೃಗೀಯವಾದ ಅನುಭವದ್ದು. ಮೃಗೀಯವಾದದ್ದು ಎಂದರೆ ಒಂದನ್ನೊಂದು ಕೊಂದು ಬದುಕುವುದು. ಬೇಂದ್ರೆಯವರ ಮಾತಿನಲ್ಲಿ ಹೇಳುವುದಾದರೆ ಅದು 'ಬದುಕಿನ ಯುದ್ಧ.' ಈ ಯುದ್ಧ ಜೀವಜೀವಗಳಲ್ಲಿಯೇ ರಣರಂಗಕ್ಕೆ ಎಡೆಮಾಡಿಕೊಡುವಂಥದ್ದು. ಇದೇ ಪ್ರಾಣಿ ಜೀವನದ ಸಾರ ಸರ್ವಸ್ವವೆನ್ನುತ್ತಾರೆ ಬೇಂದ್ರೆ. ಇಂಥ ಪ್ರಾಣಿ ಜೀವನದ ವೈಷಮ್ಯ ತಪ್ಪಿ ಸಮತೂಕದ ಜೀವನವು ಬರಬೇಕೆಂದರೆ ನಾವು ಜೀವಗಳೆಂಬ ಎಚ್ಚರದಲ್ಲಿ ಬಾಳಬೇಕೆಂಬುದು ಅವರ ಜೀವಕೇಂದ್ರಿತ ದೃಷ್ಟಿ. ಅಂಥ ದೃಷ್ಟಿಯನ್ನು ಸಾಹಿತ್ಯವೆಂಬ ಸಂಜೀವನ ವಿದ್ಯೆಯು ಮೇಲಕ್ಕೆತ್ತಲು ಹವಣಿಸುತ್ತದೆನ್ನುತ್ತಾರೆ. ಹಾಗಾಗಿ

> ಒಂದನ್ನೊಂದು ತಿಂದು ಬದುಕುವುದು ಬದುಕಲ್ಲ, ಸಾವು ; ಒಂದನ್ನೊಂದು ತಿಳಿದು ಬದುಕುವದು ಬಾಳು ; ಎಂದು ಸಾಹಿತ್ಯ ಸಾರುತ್ತದೆ. ಪ್ರಾಣಿಗಳಂತೆ ಬದುಕಬೇಡಿರಿ, ಜೀವಗಳಂತೆ ಬಾಳಿರಿ; ಪ್ರಾಣ ಹಿಂಡಿ ಜೀವ ತಿನ್ನಬೇಡಿ; ಜೀವಕ್ಕೆ ಜೀವಕೊಟ್ಟು ಜೀವಿಸಿರಿ ; ಇದು ಸಾಹಿತ್ಯದ ಧ್ವನಿ.[೨೪]

ಅಖಂಡ ಜೀವ ಸಮೂಹವು ಕೂಡಿ ಬಾಳುವ ಪರಿಸರವೊಂದನ್ನು ಬೇಂದ್ರೆ ಅನೇಕ ಕವನಗಳಲ್ಲಿ ಕಟ್ಟುತ್ತಾರೆ. 'ನಾಲ್ಕು ಹೊಟ್ಟೆಯ ತುಂಬ ಅನ್ನಬೇಕು. ಹೊಲವೆಲ್ಲ ಹುಲಸಿರಲಿ ಎನ್ನಬೇಕು..... ಸಹಯೋಗ, ಸಹಭೋಗ, ಸಹದ ಸಾಹಿತ್ಯ, ಬಾಳೋಣ ಬೆಳೆಯೋಣ ನೀವು ನಾವುಗಳು' - ಈ ಸಾಲುಗಳು ಅಖಂಡ ಜೀವ ಸಮೂಹದ ಸಹಯೋಗ ಬೆಳವಣಿಗೆಯನ್ನೇ ಚಿಂತಿಸುತ್ತವೆ.

'ಅನ್ನಾವತಾರ' - 'ಅನ್ನದ ವಿಚಾರದಲ್ಲಿ ಮಾನವನಿಗಿದ್ದ ದುರ್ಬುದ್ಧಿ ಅವನ ಮನೋದೌರ್ಬಲ್ಯದ ಪರಮಾವಧಿ'ಯನ್ನು ಕುರಿತದ್ದಾದರೆ 'ಅನ್ನ ಯಜ್ಞ' ಅನ್ನದ ಸ್ವಾತಂತ್ರ್ಯವನ್ನು ಕುರಿತದ್ದಾಗಿದೆ. ಮನುಷ್ಯನ ಹಣದ ಹುಚ್ಚಿನಿಂದ ಭೂಮಿಯ ಮೇಲೆ ಸಮೃದ್ಧವಾದ ಕಾಳು ಇದ್ದರೂ ಕೂಳಿಲ್ಲದಂಥ ಪರಿಸರ ನಿರ್ಮಾಣವಾಗಿದೆ. ಹಣದ ಹುಚ್ಚಿನಿಂದ ಮನುಷ್ಯನಲ್ಲಿ ನಿರ್ಮಾಣವಾಗಿರುವ ಮರ್ಕಟ ಬುದ್ಧಿಯನ್ನು 'ಅನ್ನಯಜ್ಞ' ಕವಿತೆ

ಮಾರ್ಮಿಕವಾಗಿ ವಿಡಂಬಿಸುತ್ತದೆ. ಎಲ್ಲವೂ ತನ್ನ ಸುತ್ತಮುತ್ತಲೆ ಇದ್ದರೂ ಏನೂ ಇಲ್ಲದಂಥ ನಿರ್ಗತಿಕ ಸ್ಥಿತಿ ಸೃಷ್ಟಿಯಾಗಿರುವುದು ಬದುಕಿನ ಪರಮ ಕ್ರೌರ್ಯವೇ ಆಗಿದೆ. ಮುಂಬರುವ ಸಾವನ್ನು ನೆನೆದು ಹೆಚ್ಚಿಗೆ ತಿನ್ನುವ ಕೆಲವೇ ಜನರ ಹೊಟ್ಟೆ ಕಿಚ್ಚಿನಿಂದ ಅನ್ನದ ಅಭಾವವುಂಟಾಗಿದೆ ಎಂಬುದು ಬೇಂದ್ರೆಯವರ ಚಿಂತನೆಯಾಗಿದೆ. ಮನುಷ್ಯನ ಅನಾದಿ ಕಾಲದ ಇಂಥ ಪೈಶಾಚಿಕ ಹಸಿವು ಮಾನವ ಸಮುದಾಯದ ಅನ್ನದ ಸಮಸ್ಯೆಗೆ ಮಾತ್ರ ಕಾರಣವಾಗದೆ ಅಖಂಡ ಜೀವಕೋಟಿಯ 'ಆಹಾರ ಸರಪಳಿ'ಯ ಕೊಂಡಿಗಳಿಗೆ ಧಕ್ಕೆಯುಂಟು ಮಾಡಿರುವುದನ್ನು ಅನೇಕ ಪರಿಸರ ಅಧ್ಯಯನಗಳು ರುಜುವಾತುಪಡಿಸಿವೆ. ಈ ಮುಂದೆ ಪ್ರಸ್ತಾಪಿಸಿದ ಬೇಂದ್ರೆ ಶೋಧಿತ 'ಆಹಾರ ಸರಪಳಿ'ಯು ಮಾನವನ ಅತಿಯಾದ ಉಪಭೋಗದಿಂದಾಗಿ ಕೊಂಡಿಕೊಂಡಿಗಳಾಗಿ ಕಡಿದುಹೋಗಿದೆ. ಹಾಗಾಗಿ ಅನೇಕ ಜೀವ ಪ್ರಬೇಧಗಳು ಎನ್‌ಡೇಂಜರ್ಡ್ ಹಂತವನ್ನು ತಲುಪಿವೆ.

ಅನ್ನ ಬಕಾಸುರನಾದ ಮಾನವ ಎಲ್ಲವನ್ನೂ ಅನ್ನ ಚಿನ್ನಗಳನ್ನಾಗಿ ಪರಿವರ್ತಿಸಿದ್ದರಿಂದ ಜೀವ ಸಮುದಾಯಗಳ ಪರಸ್ಪರ ಸಂಬಂಧಾಂತರಗಳು ಕಡಿದು ಹೋಗಿದ್ದಕ್ಕೆ ಪರಿಸರ ಚರಿತ್ರೆಯಲ್ಲಿ ಅನೇಕ ಉದಾಹರಣೆಗಳು ಲಭ್ಯವಿವೆ.

ಒಗೆತನ ಹಗೆತನ ಬಾಳುವದೆಂತು?
ಹೆತ್ತವರೂ ಅದ ಹೆರಲಿಲ್ಲ.
ಹುಡುಗರಿಗೂ ಅದು ಬರಲಿಲ್ಲ.[೨೫]

ಜೀವ ಸಮುದಾಯಗಳ ನಡುವೆ ನಿರಂತರವಾಗಿ ಒಗೆತನ ಹಗೆತನಗಳನ್ನೇ ಕಂಡ ಹೆತ್ತವರಿಂದ ಹುಡುಗರಿಗೂ ಅದು ಬಂದ ಕಾರಣ ಜೀವ ಸಮುದಾಯದ ಸಹಯೋಗ, ಸಹಭೋಗಗಳು ಇಲ್ಲವಾದವು. 'ಬಾಳೋಣ ಬೆಳೆಯೋಣ ನೀವು ನಾವು' ಎಂಬ ಕಾಪ್ರ ಹೇಳುವ ಪರಿಸರ ವಿಜ್ಞಾನೀಯ ದೃಷ್ಟಿಕೋನ ಇಲ್ಲವಾದದ್ದನ್ನು ಕುರಿತ ತಿಳುವಳಿಕೆ ಇಂಥ ಕವಿತೆಗಳಲ್ಲಿದೆ.

೫. ಯುದ್ಧ ಮತ್ತು ಪರಿಸರ

ಯುದ್ಧವು ಪರಿಸರಕ್ಕೆ ಒದಗಿದ ಒಂದು ಮಹಾಪೀಡೆ. ಅದು ಮನುಷ್ಯ ಪ್ರೇರಕವಾದುದು. ಮನುಷ್ಯನ ಸ್ವಾರ್ಥದ ಬೀಜ ಯುದ್ಧ. ಪರಮ ಘೋರವಾದ ಯುದ್ಧಕ್ಕೆ ಆಸೆಯೇ ಮೂಲ. ಈ ಆಸೆಯೇ ಎಲ್ಲ ಯುದ್ಧಗಳ ಕಾರಣೀಭೂತ. ಭೂಮಿಯ ಮೇಲಿನ ಸಕಲ ಜೀವ ಜಗತ್ತುಗಳು ಸಾಮರಸ್ಯದಿಂದ ಬದುಕಬೇಕೆಂಬುದು ಪರಿಸರದ ಧರ್ಮ. ಅಂದರೆ ಅಖಂಡ ಜೀವ ಜಗತ್ತು ಒಂದುಗೂಡಿರುವುದೆಂದೇ ಅರ್ಥ. ಬೇಂದ್ರೆಯವರು ಹೇಳುವಂತೆ ಒಂದುಗೂಡಿರಬೇಕೆಂಬ ಬುದ್ಧಿಯೇ ಧರ್ಮದ ಮರ್ಮ.

ಒಳ್ಳೆಯ ಮನಸ್ಸಿನಿಂದ ಹೊಂದುಗೂಡಿರುವದೆ ಧರ್ಮ.
ವೈಮನಸಿನಿಂದ ಬೇರೆ ಬೇರೆಯಾಗುವದೇ ಅಧರ್ಮ.[೨೬]

ಧರ್ಮದಿಂದ ಬಾಳಬೇಕಾದ ಮನುಷ್ಯ ಭೂಮಿ, ಒಡೆತನ, ಚಿನ್ನ, ಧರ್ಮ, ಅಧಿಕಾರ, ಹೆಣ್ಣು, ಹೊನ್ನು, ಮಣ್ಣು ಮೊದಲಾದವುಗಳಿಗಾಗಿ ಇಟ್ಟ ಅಧರ್ಮದ ಹೆಜ್ಜೆಗಳೇ ಯುದ್ಧಗಳಿಗೆ ಕಾರಣವಾದದ್ದನ್ನು ಚರಿತ್ರೆ ಸ್ಪಷ್ಟಪಡಿಸುತ್ತದೆ.

'ಧರ್ಮ' ಎಂದೊಡನೆ ಕೆಲವರಿಗೆ ಭಯದಿಂದ ಮೈಗೆ ಮುಳ್ಳು ಬರುವವು. ಧರ್ಮದ ಹೆಸರಿನಿಂದ ಭೂದೇವಿಗೆ ರಕ್ತದ ಅಭಿಷೇಕವಾಗಿದೆ. ಧಾರ್ಮಿಕರಿಗೆ ಕ್ರೂರತನದಲ್ಲಿಯೂ ನಿರ್ದಯತೆಯಲ್ಲಿಯೂ ಇರುವಷ್ಟು ಧೈರ್ಯ - ನಿಷ್ಠೆಗಳು ಕಳ್ಳಕಾಕರಿಗೂ ಇರುವುದಿಲ್ಲ. ಧರ್ಮವು ಯುದ್ಧದ ತಾಯಿ ; ಜಗಳದ ಬೀಜ. ದೇವಾಸುರ ಸಂಗ್ರಾಮಗಳಾಗಲಿ, ಯುರೋಪದ ಕ್ರೂಸೇಡ್ ಯುದ್ಧಗಳಾಗಲಿ, ಹಿಂದೂ ಮುಸಲ್ಮಾನ್ ಜಗಳಗಳಾಗಲಿ ಧರ್ಮದ ಬಾಲ ಹಿಡಿದು ಬಡಿದಾಡುವವು.[೨೭]

ಈ ಉಲ್ಲೇಖದಲ್ಲಿ ಬೇಂದ್ರೆಯವರು ಧಾರ್ಮಿಕ ಕಾರಣಗಳಿಂದ ಆಗುವ ಯುದ್ಧದ ಚಿಂತನೆಯನ್ನು ನಡೆಸುತ್ತಾರೆ. ಆದರೂ ಮನುಷ್ಯನ ಸ್ವಾರ್ಥ ಹಾಗೂ ಲೋಭಗಳಿಂದಾಗಿ ಭೂದೇವಿಗೆ ನಿರಂತರವಾಗಿ ರಕ್ತಾಭಿಷೇಕಗೊಳಿಸಿದ ಯುದ್ಧದಾಹಿ ಮನೋನೆಲೆಗಳು ಇಲ್ಲಿ ಪ್ರಕಟವಾಗಿವೆ.

ಆಧುನಿಕ ಯುದ್ಧಗಳಲ್ಲಿ ಅಣ್ವಸ್ತ್ರಗಳನ್ನು ಬಳಸುವುದರಿಂದ ಎದುರಾಗುವ ಸಮಸ್ಯೆಗಳೇ ತುಂಬಾ ಭೀಕರವಾದವು. ಈ ಅಣ್ವಸ್ತ್ರಗಳನ್ನು ಬಳಸುವ ಯುದ್ಧಗಳಿಂದ ಇಡೀ ಮನುಕುಲ ನಿರ್ನಾಮವಾಗುವುದಲ್ಲದೆ ಅಖಂಡ ಜೀವ ಸಂಕುಲಗಳು ನಾಶವಾಗುತ್ತವೆ. ನೆಲ, ಜಲ, ಗಾಳಿಯ ಮಲಿನತೆ ಅಧಿಕಗೊಂಡು ಭೂಮಿಯ ಮೇಲಿನ ಜೀವವೈವಿಧ್ಯವೇ ಸರ್ವನಾಶವಾಗುವ ಸನ್ನಿವೇಶದಲ್ಲಿ ನಾವಿದ್ದೇವೆ. ಮೊದಲ ಮತ್ತು ಎರಡನೇ ಮಹಾಯುದ್ಧಗಳು ಅಣುಬಾಂಬುಗಳ ಬಳಕೆಯಿಂದ ಆಗಬಹುದಾದ ಅನರ್ಥಗಳ ಮರಣ ಶಾಸನವನ್ನು ಈಗಾಗಲೇ ಬರೆದಿವೆ. ಆದರೂ ಧರ್ಮ, ಗಡಿ ವಿವಾದಗಳು, ಸಾಮ್ರಾಜ್ಯ ವಿಸ್ತರಣೆ ಮೊದಲಾದ ಆಮಿಷಗಳಿಂದ ಎಲ್ಲ ರಾಷ್ಟ್ರಗಳು ಯುದ್ಧದಾಹದ ಹಸಿವಿನಿಂದ ತುಡಿಯುತ್ತಿವೆ. ಅದಕ್ಕೆ ಬೇಕಾದ ಸೈನ್ಯ, ಶಸ್ತ್ರಾಸ್ತ್ರ, ಸಾಮಾನು ಸರಂಜಾಮನ್ನು ಒಟ್ಟುಮಾಡಿ ಯುದ್ಧಕ್ಕಾಗಿ ಭೂಮಿಯ ಮೇಲಿನ ಎಲ್ಲ ರಾಷ್ಟ್ರಗಳು ಕಾದು ಕುಳಿತ ಸನ್ನಿವೇಶವೂ ಇದಾಗಿದೆ. ಆಧುನಿಕ ಅಣ್ವಸ್ತ್ರಗಳ ತಯಾರಿಕೆ, ಪರಮಾಣು ಬಾಂಬುಗಳ ಸ್ಫೋಟದ ಪರೀಕ್ಷೆ, ಸಮುದ್ರದಲ್ಲಿ ಬಾರಿ ಪ್ರಮಾಣದ ಅಣ್ವಸ್ತ್ರಗಳನ್ನು ವಿಸರ್ಜಿಸುವುದು ಅವಗಡನೆಗಳಿಂದ ಆಗುವ ಸ್ಫೋಟಕ ಹಾಗೂ ವಿಕರಣಗಳ ಸೋರಿಕೆಗಳಿಂದಾಗಿ ಭೂಮಿಯ ಮೇಲಿನ ಬಹುಪಾಲು ಮಾನವ ಸಮುದಾಯ ಹಾಗೂ ಜೀವ ಸಮುದಾಯಗಳು ವಾಸಿಯಾಗದ ಅನೇಕ ರೋಗರುಜಿನಗಳಿಗೆ ಗುರಿಯಾಗಿವೆ. ಜೀವ ಜಗತ್ತಿನ ಅಮೂಲ್ಯ ಸಸ್ಯ ಸಂಪತ್ತು, ಪ್ರಾಣಿ ಸಂಪತ್ತು, ಪಕ್ಷಿ ಸಂಪತ್ತು, ಮಾನವ ಸಮುದಾಯ ಹಾಗೂ ಭೌತಿಕ ಪರಿಸರದ ಮೇಲೆ ಆಧುನಿಕ ಯುದ್ಧಗಳು ಭೀಕರ ಪರಿಣಾಮವನ್ನು ಬೀರುತ್ತವೆಂಬ ವಿಚಾರ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ಎರಡನೇ ಮಹಾಯುದ್ಧ ಕಾಲದಲ್ಲಿ ಬೇಂದ್ರೆಯವರು ಬರೆದ 'ಯುದ್ಧ ಬಂತು ಮನೆಯವರೆಗೆ' ಎಂಬ ಕವಿತೆಯು ನೆನಪಾಗುತ್ತದೆ. 'ಯುದ್ಧ ಬಂತು ಮನೆಯವರೆಗೆ' ಎಂಬ ಕವಿತೆಯ ಶೀರ್ಷಿಕೆಯೇ ಪ್ರತಿಯೊಂದು ಜೀವಿಯ ಸಾವಿನ ಸನಿಹವನ್ನು ಹಾಗೂ ಅನಿವಾರ್ಯತೆಯನ್ನು ಪ್ರಕಟಿಸುತ್ತದೆ.

ಯುದ್ಧ ಬಂತು ಮನೆಯವರೆಗೆ
ಬನ್ನಿ ಒಂದಾಗಿರಿ
ಒಳಜಗಳವ ಕ್ಷಣವೆ ನಿಲಿಸಿ
ನಮ್ಮ ಜನವ ಒಲಿದು ಒಲಿಸಿ

ತಾಯಿನೆಲಕೆ ಸೇವೆ ಸಲಿಸಿ

ನಿಮ್ಮ ಹಗೆಯ ತಾಗಿರಿ.[೨೮]

ಮನುಷ್ಯ ಮನುಷ್ಯರ ನಡುವಿನ ಒಳಜಗಳಗಳನ್ನು ತಕ್ಷಣವೇ ನಿಲ್ಲಿಸಿ ಪರಸ್ಪರ ಒಲಿದು ಬಾಳಬೇಕೆಂಬ ವಿಚಾರ ಇಲ್ಲಿ ಕಾಣಿಸುತ್ತದೆ. ತಾಯಿ ನೆಲಕ್ಕೆ ಸೇವೆ ಸಲ್ಲಿಸುವುದರ ಮೂಲಕ ಯುದ್ಧದಾಹವನ್ನು ನೀಗಬೇಕೆಂಬ ಅಂಶ ಈ ಉಲ್ಲೇಖದಲ್ಲಿ ಪ್ರಕಟವಾಗುತ್ತದೆ. ಮಹಾ ಪ್ರಳಯವನ್ನೇ ತರುವ ಯುದ್ಧಗಳು ಮರೆಯಾಗಿ ಭೂಮಿಯಲ್ಲಿ ಸ್ವರ್ಗವು ನೆಲೆಗೊಳ್ಳಬೇಕೆಂಬುದು ಈ ಕವಿತೆಯ ಆಶಯ. ಅಧರ್ಮದ ಹಾದಿಯಾದ ಯುದ್ಧದ ಮಾರ್ಗಗಳನ್ನು ತ್ಯಜಿಸಿ ಒಲವಿನೊಲವನ್ನು ಬೆಳೆಸಿಕೊಳ್ಳಬೇಕೆಂಬ ಬಯಕೆಯಲ್ಲಿ ಬೇಂದ್ರೆಯವರ ಯುದ್ಧವಿರೋಧಿ ನಿಲುವುಗಳು ವ್ಯಕ್ತವಾಗುತ್ತವೆ. ಒಲವಿನ ಕವಿ ಒಲವನ್ನೇ ಕುರಿತು ಇಲ್ಲಿ ಬರೆದಿದ್ದಾರೆ. ಯುದ್ಧ ತ್ಯಜಿಸಿ, ಜನರನ್ನೆಲ್ಲ ಒಲಿಸಿ ಬಾಳನ್ನು ಕಟ್ಟುವುದೆಂದರೆ ಈ ನೆಲದ ಪರಿಸರದ ವಿನಾಶಗಳನ್ನು ತಡೆಗಟ್ಟುವುದು ಎಂದೇ ಅರ್ಥ. ಭೂಮಿಯ ಮೇಲೆ ಮಹಾಪ್ರಳಯವನ್ನು ಉಂಟುಮಾಡುವುದು ಮತ್ತು ಸ್ವರ್ಗವನ್ನು ಸೃಷ್ಟಿಸುವುದು ಇವುಗಳಲ್ಲಿ ಬೇಂದ್ರೆ ಸರ್ವಜೀವ ಹಿತವಾದ ಸಗ್ಗ ಸ್ಥಿತಿಯನ್ನೇ ಪ್ರತಿಪಾದಿಸುತ್ತಾರೆ.

ಮಾನವ ಸಮುದಾಯ ಧರ್ಮ ವಿರುದ್ಧವಾದ ಅರ್ಥ ಕಾಮಗಳಲ್ಲಿ ಆಸಕ್ತರಾಗಿ ತಾವೂ ಬಲಿಯಾಗುತ್ತಲೇ ಸಮಷ್ಟಿ ಜೀವ ಸಮೂಹವನ್ನು ಬಲಿಕೊಡಲು ಹೊರಟ ಚಿತ್ರಗಳು 'ಯಮದೇವನ ಒಕ್ಕಲು' ಕವಿತೆಯಲ್ಲಿ ಕಂಡು ಬರುತ್ತವೆ. ಹಾಗೆಯೇ 'ನರಬಲಿ' ಕವಿತೆಯು ಯುದ್ಧ ವಿರೋಧಿ ನಿಲುವಿನದು. ಬ್ರಿಟಿಷ್ ಸಾಮ್ರಾಜ್ಯಶಾಹಿ ಶಕ್ತಿಗಳು ನಿರ್ಮಿಸಿದ ಬಂಧನ ಹಾಗೂ ದಾಸ್ಯದ ಬಿಡುಗಡೆಯನ್ನು ಬಯಸುವ ಈ ಕವಿತೆ ಎಲ್ಲ ಮಟ್ಟದ ಕ್ರೌರ್ಯದಿಂದ ಮುಕ್ತಗೊಳ್ಳಬೇಕಾದ ಆಶಯವನ್ನು ವ್ಯಕ್ತಪಡಿಸುತ್ತದೆ.

> 'ನರಬಲಿ' ಕವಿತೆ ಸಾಮ್ರಾಜ್ಯಶಾಹಿಗಳು ಸೃಷ್ಟಿಸುತ್ತಿರುವ ಯುದ್ಧದ ಅನರ್ಥಗಳನ್ನು ವಿಡಂಬಿಸುವುದರೊಂದಿಗೆ, ಯುದ್ಧದಿಂದ ಎದುರಾಗುವ ಎಲ್ಲ ಮಟ್ಟದ ನೋವುಗಳನ್ನು ಅದರ ಭೀಕರ ಪರಿಣಾಮಗಳನ್ನು ಅದಕ್ಕೆ ಕಾರಣವಾಗುವ ಶಕ್ತಿಗಳನ್ನು ವಿಮರ್ಶೆಗೆ ಗುರಿಪಡಿಸಿದೆ. ಸಾಮ್ರಾಜ್ಯಶಾಹಿಗಳ ದುರಾಸೆಗಳಿಂದ ಎದುರಾಗುವ ಯುದ್ಧಗಳು ತರುವ ಅನರ್ಥಗಳಿಗೆ 'ನರಬಲಿ'
>
> ಕವನ ಮರು ವ್ಯಾಖ್ಯಾನವೊಂದನ್ನು ಕಾಣಿಸುತ್ತದೆ. ಯುದ್ಧವು ಕೆಲವೇ ಮನುಷ್ಯರ ಭೋಗ, ಅಧಿಕಾರ ಲಾಲಸೆಗಳಿಂದ ಎದುರಾಗುವುದು. ಅಂಥ ಯುದ್ಧಗಳಿಂದ ಜನಸಾಮಾನ್ಯರು ಹಾಗೂ ಸಮಷ್ಟಿ ಪರಿಸರವೂ ಅನಿವಾರ್ಯವಾಗಿ ದುರಂತಕ್ಕೆ ಈಡಾಗುವುದು ಅತ್ಯಂತ ಅಮಾನವೀಯ. ಮೊದಲನೇ ಮಹಾಯುದ್ಧದ ಭೀಕರ ಪರಿಣಾಮಗಳನ್ನು ಕಂಡ ಬೇಂದ್ರೆಯವರ ಸಂವೇದನೆ 'ನರಬಲಿ' ಕವಿತೆಯಲ್ಲಿ ಯುದ್ಧ ವಿರೋಧಿ ವ್ಯಾಖ್ಯೆಯೊಂದನ್ನು ಮುಖಾಮುಖಿಯಾಗಿಸುತ್ತದೆ.[೨೯]

ಈ ಮೇಲಿನ ಉಲ್ಲೇಖದಲ್ಲಿ ಕೆ.ಸಿ. ಶಿವಾರೆಡ್ಡಿಯವರು ಮಾನವ ಪರಿಸರ ಹಾಗೂ ಸಮಷ್ಟಿ ಪರಿಸರ ಯುದ್ಧಗಳಿಂದ ಅನಿವಾರ್ಯವಾಗಿ ದುರಂತಕ್ಕೀಡಾಗುವ ಅಮಾನವೀಯ ನೆಲೆಯನ್ನು ಗುರುತಿಸಿದ್ದಾರೆ. 'ಆರುವೆ ಎಂದು? ಎಂದು ಆರುವೆ? ನೆಲದಗಲಕೆ ಮುಗಿಲುದ್ದಕ್ಕೆ ಹೊತ್ತಿಹ ಎಲೆಲೆ ಬಂಜೆ ಬೆಂಕಿ!' ಯಂಥ ಪ್ರಶ್ನೆಗಳು

ಯುದ್ಧದ ಅನರ್ಥ ಹಾಗೂ ವಿನಾಶದ ಕಥನವನ್ನೇ ಧ್ವನಿಸುತ್ತವೆ. ಮನುಷ್ಯ ಮನುಷ್ಯರ ನಡುವಿನ ಕದನಗಳು ಕೇವಲ ಮನುಷ್ಯರಿಗೆ ಮಾತ್ರ ಮಾರಕವಲ್ಲ. ಅವು ಇಡೀ ಪರಿಸರದಲ್ಲಿ ಪ್ರಳಯವನ್ನು ಉಂಟು ಮಾಡುತ್ತವೆ. ಮನುಷ್ಯನ ವರ್ತನೆ ವಿನಾಶಕಾರಿ ಆಗದೆ ಇರುವುದೇ ಪರಿಸರ ಪ್ರೇಮಿ ವರ್ತನೆಯಾಗಿದೆ. ಇದರ ಮೂಲ ಇರುವುದು ಬೇಂದ್ರೆಯವರ ಒಲವಿನ ಪ್ರತಿಪಾದನೆಯಲ್ಲಿ. ಒಲವೆಂದರೆ ಬರಿ ಮನುಷ್ಯರ ನಡುವಿನ ಪ್ರೀತಿ ಪ್ರೇಮ ಮಾತ್ರ ಅಲ್ಲ. ಈ ಭೂಮಿ, ನೀರು, ಗಾಳಿ, ಗಿಡ ಮರ ಕಲ್ಲು ಮಣ್ಣುಗಳೆಲ್ಲವನ್ನೂ ಒಲವಿಂದ ಕಾಣುವ ಸಸ್ಯರೂಪಿ ಬದುಕಿನ ನಿರ್ಮಾಣದ ಕನಸು ಅದು.

'ಸಿಟ್ಟು - ಸಾಂತಿ' ಕವಿತೆ ಈ ಮೇಲಿನ ಚಿಂತನೆಗೆ ಪೂರಕವೂ, ಭಿನ್ನವೂ ಆದ ವಿಚಾರವನ್ನುಳ್ಳದ್ದು. ಬೇಂದ್ರೆಯವರೇ ತಮ್ಮ ಭಾವ ಸಂದರ್ಭದಲ್ಲಿ ಈ ಕವಿತೆಯ ಆಶಯವನ್ನು ಸೂಚಿಸಿದ್ದಾರೆ.

> ಜಗತ್ತು ಬೇಡುತ್ತಿದೆ ಶಾಂತಿಯನ್ನು ಜಗತ್ತಿನ ನಿಯಂತಾರರು (ನಿಯಂತ್ರಣಕಾರರು) ಅದಕ್ಕೆ ಕೊಡುತ್ತಾರೆ ಸಾಂತಿಯನ್ನು. ರಣದ ಕೊನೆಗೆ ಬರುತ್ತದೆ ಹೆಣದ ಶಾಂತಿ. ಕಾಮಕ್ರೋಧಾವಿಷ್ಟರಾದವರು ರಾಜ್ಯಾಧಿಕಾರಕ್ಕೆ ಅಪಾತ್ರರಾಗುತ್ತಾರೆ. ನಿಷ್ಕರುಣಿಗಳು, ಲೋಭಿಗಳು ಜಗತ್ತಿನ ಪಾಲನೆ ಪೋಷಣೆಗಳನ್ನು ಮಾಡಲಾರರು.[೩೦]

ಸುಲಭವಾಗಿ ಅರ್ಥಕ್ಕೆ ಸಿಗಲಾರದ ಈ ಕವಿತೆ ಹಿಂಸೆ - ಅಹಿಂಸೆಗಳನ್ನು ಮುಖಾಮುಖಿಯಾಗಿಸಿದಂತೆ ತೋರುತ್ತದೆ. 'ಹಿಂಸೆಯಿಂದ ಗೆದ್ದ ಯಾವ ರಾಜ್ಯವೂ ಸಾಮಾನ್ಯರ, ದೀನ ಹೀನರ ಹಿತವನ್ನು ಸಾಧಿಸಲಾರದು. ಹಿಂಸೆಯನ್ನು ಮಾಡಿ ರಾಜ್ಯವನ್ನು ಗೆದ್ದರೆ ಆದಾದರೂ ಯಾರಿಗೋ ಆಗುವದು. ದುರ್ಬಲರಾದ ಹೀನದೀನರ ಸಂರಕ್ಷಣೆಯು ಅದರಿಂದಾಗಲಾರದು' ಎಂಬ ಚಿಂತನೆಯಲ್ಲಿ ಬೇಂದ್ರೆಯವರ ಪರಿಸರ ಸ್ನೇಹಿ ಹಾಗೂ ಯುದ್ಧ ರಹಿತ ಸಮಾಜದ ಹುಡುಕಾಟವನ್ನು ಕಾಣುತ್ತೇವೆ. ಹಾಗೆಯೇ 'ದೇಹ ಪೋಷಣೆಯಲ್ಲಿಯೂ, ಪಶು ಮೃಗ ಕೀಟಕಾದಿಗಳಿಂದ ಸ್ವಸಂರಕ್ಷಣ ಮಾಡಿಕೊಳ್ಳುವುದರಲ್ಲಿಯೂ ಸ್ವಲ್ಪ ಹಿಂಸೆಯು ಅನಿವಾರ್ಯವಾದರೂ ಅಹಿಂಸೆಯೆ ಜೀವನದ ಗುರಿ, ಪ್ರಪಂಚದ ಆಧಾರ, ಧರ್ಮದ ತಿರುಳು ಎಂಬುದನ್ನು ನಾವು ಮರೆಯಲಾಗದು' ಎಂಬ ವಿಚಾರದಲ್ಲಿಯೂ ಯುದ್ಧ ರಹಿತ ಸಮಾಜದ ಆಶಯವನ್ನೇ ಕಾಣುತ್ತೇವೆ.

೬. ವಸಾಹತುಶಾಹಿ ಮತ್ತು ಪರಿಸರ

ವಸಾಹತುಶಾಹಿ ಸಂಸ್ಕೃತಿಯು ತನ್ನ ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನು ತಾನು ಗೆದ್ದ ರಾಷ್ಟ್ರಗಳಿಂದ ಪೂರೈಸಿಕೊಳ್ಳಲು ಹೂಡಿದ ಹುನ್ನಾರಗಳಿಂದಾಗಿ ಎದುರಾದ ಸ್ಥಳೀಯ ಅನ್ನದ ಸಮಸ್ಯೆಯನ್ನು ಹಾಗೂ ಪರಿಸರದ ಮೇಲಿನ ಒತ್ತಡವನ್ನು 'ಕೆಲಸವಿಲ್ಲದವರ ಹಾಡು' ಕವಿತೆ ಆಳದಲ್ಲಿ ಚಿಂತಿಸುತ್ತದೆ. ಭಾರತದಲ್ಲಿ ರೈತಾಪಿ ಜನಗಳು ಅನ್ನ ಬೆಳೆಯುತ್ತಿದ್ದ ಜಾಗದಲ್ಲಿ ಹತ್ತಿ, ನಾರು ಮೊದಲಾದ ಬೆಳೆಗಳನ್ನು ಬೆಳೆಯಬೇಕಾದ ಒತ್ತಡವನ್ನು ಈ ಸಂಸ್ಕೃತಿ ನಿರ್ಮಾಣ ಮಾಡಿದ ಚರಿತ್ರೆಯು ಇಲ್ಲಿ ನೆನಪಾಗುತ್ತದೆ. ಅಂತೆಯೇ ಭಾರತದ ರೈತರ ಹೊಲಗಳಲ್ಲಿ ವೈವಿಧ್ಯಮಯವಾಗಿ ಆಹಾರ ಪದಾರ್ಥಗಳನ್ನು ಬೆಳೆಯುತ್ತಿದ್ದ ಕೃಷಿಯನ್ನು ಹಿಂದೆ ಸರಿಸಿ ಏಕರೂಪಿ ವಾಣಿಜ್ಯ ಬೆಳೆಗಳನ್ನು ಬೆಳೆಯಲು ನಿರ್ಮಾಣವಾದ ಪರಿಸರವೂ ಇಲ್ಲಿ ಕಾಣುತ್ತದೆ. ಹಣದ ಆಸೆಗಾಗಿ ವಿಸ್ತಾರವಾದ ಭೂಮಿಯನ್ನು ವ್ಯವಸಾಯಕ್ಕಾಗಿ ಪರಿವರ್ತಿಸಿದರೂ ಆಹಾರದ ಕೊರತೆ ಉಂಟಾಗಿ ರೈತಾಪಿ

ಜೀವನ ಸಂಕಷ್ಟಕ್ಕೆ ಒಳಗಾಗಿದೆ. ಮೂವತ್ತರ ದಶಕದಲ್ಲಿ ಪಶ್ಚಿಮ ಬಂಗಾಳದಲ್ಲಿ ಕಾಣಿಸಿಕೊಂಡ ಕ್ಷಾಮದಲ್ಲಿ ಲಕ್ಷಾಂತರ ಜನರು ಆಹಾರದ ಕೊರತೆಯಿಂದಾಗಿ ಅಸುನೀಗಿದ್ದನ್ನು ಚರಿತ್ರೆ ದಾಖಲಿಸುತ್ತದೆ. ಅಂದರೆ ವಾಣಿಜ್ಯ ಬೆಳೆಗಳ ವಿಸ್ತರಣೆಯಿಂದಾಗಿ ಆಹಾರ ಉತ್ಪಾದನೆ ಕುಂಠಿತಗೊಂಡು ಸ್ಥಳೀಯ ಬದುಕಿನ ನೆಮ್ಮದಿಗೆ ಬಿದ್ದ ಕೊಡಲಿಯ ಪೆಟ್ಟನ್ನು ಈ ಕವಿತೆ ನೆನಪಿಸುತ್ತದೆ.

ದೇವರ ಕಾಟವೊ ಮಾನವರಾಟವೊ
ಹತ್ತಿ ಬಿತ್ತಿ ಬೆಳಕೊಂಡೆವು ಹಾಳು
ತಿನ್ನಲು ಬೆಳೆಯದು ತುಸು ಕಡಿಕಾಳು
ಬಕ್ಕರಿಸುವದೋ ಹೆಂಟೆಯ ಕೂಳು?
ಬತ್ತಿತು ಅನ್ನ ಹೊತ್ತಿತು ಚಿನ್ನ
ಚಂಚಲ ಲಕ್ಷ್ಮಿಯ ಕಟಾಕ್ಷದನ್ನ
ಹುಟ್ಟಿದ ಕೂಡಲೆ ಹಾರಿತೊ ಅಣ್ಣ.
ಮಾನವಮೂರ್ತಿ ಮತಿಸಂಪನ್ನ
ಹೊಟ್ಟೆಗೆ ಹಾಕಿದೆ ಚಿನ್ನದ ಕನ್ನ
ಹುಟ್ಟಿತಲ್ಲಿಯೇ ಹೊಟ್ಟೆಯ ಬನ್ನ
ಚಿನ್ನದ ಭಸ್ಮಾಸುರನ ಹರಕೆಯಿರೆ
ತತ್‌ಕ್ಷಣ ಬರುವುದು ಸಾವಿಗೆ ಅಕ್ಕರೆ
ಮಿಡಾಸ ಕೈಯನು ಹಚ್ಚಿದನೆಮಗೋ
ಎಡೆಮಾಡಿದನೊ ನಿವೇದಿಸಿ ಯಮಗೋ
ಅನ್ನಪೂರ್ಣೆಗಿದು ಪೂರ್ಣಾಹುತಿಯೋ
ಜೀವದ ಗತಿ ಹತಿಯಿಲ್ಲದ ಮೃತಿಯೋ?
ಅನ್ನಃ ಅನ್ನಃ! ಕಡಿ ಹೊನ್ನನ್ನ.[೩೧]

ವಸಾಹತುಶಾಹಿ ಸಂಸ್ಕೃತಿಯ ಇಂಥ ಅಕೃತ್ಯಗಳು ಬಿತ್ತಿದ ಹಣದ ದಾಹದ ಬೀಜಗಳು ಅಂದಿನಿಂದ ಇಂದಿನವರೆಗೂ ಭಾರತದ ಕೃಷಿ ಪರಿಸರದಲ್ಲಿ ತನ್ನ ಮೇಲಾಟವನ್ನು ನಡೆಸಿವೆ. ಹಾಗಾಗಿ ವಿಶಾಲ ಭಾರತದ ವೈವಿಧ್ಯಮಯ ಕೃಷಿ, ಆಹಾರ ಪದ್ಧತಿ, ಬದುಕಿನ ಶೈಲಿ ಹಾಗೂ ಮನೋಧರ್ಮಗಳಲ್ಲಿ ಹಣದ ಹುಚ್ಚಿನ ಬೀಜಗಳು ನಾಟಿದವು. ಜಾಗತೀಕರಣದ ಸಂದರ್ಭದಲ್ಲಿ ಈ ಹುಚ್ಚು ತನ್ನ ರಾಕ್ಷಸೀ ಕಬಂಧಗಳಿಂದ ಇಡೀ ಜಗತ್ತಿಗೆ ವ್ಯಾಪಿಸಿದೆ. ಎಲ್ಲ ಕಡೆಯೂ ಬೃಹತ್ ನಗರಗಳ ವಿಸ್ತರಣೆ ಹಾಗೂ ಕೈಗಾರಿಕಾ ಎಸ್ಟೇಟ್‌ಗಳ ನಿರ್ಮಾಣದಿಂದಾಗಿ ಕೃಷಿ ಚಟುವಟಿಕೆಗಳು ಅಸ್ತವ್ಯಸ್ತಗೊಂಡಿವೆ. ಕೃಷಿಗಾಗಿ ಅರಣ್ಯಗಳ ಮೇಲೆ ಒತ್ತಡವು ಅಧಿಕಗೊಂಡಿದೆ. ಈ ಹಿಂದೆ ವಸಾಹತುಕಾಲದಲ್ಲಿ ಬ್ರಿಟಿಷ್ ಕೈಗಾರಿಕೆಗಳ ದಾಹಕ್ಕಾಗಿ ಬಲಿಯಾಗುತ್ತಿದ್ದ ಹೊಲಗದ್ದೆಗಳು ಇಂದು ಜಾಗತಿಕ ರಾಷ್ಟ್ರಗಳ ಹಸಿವಿನ ದಾಹವನ್ನು ಹಿಂಗಿಸುವಲ್ಲಿ ನಿಸ್ಸಾರಗೊಂಡು ಬಂಜೆಗೊಂಡಿವೆ. 'ದೇವರ ಕಾಟವೊ ಮಾನವರಾಟವೊ ಹತ್ತಿ ಬಿತ್ತಿ ಬೆಳಕೊಂಡೆವು ಹಾಳು' ಎಂಬುದು ಇಂದಿಗೂ

ತಪ್ಪಿಲ್ಲ. ಹಾಗಾಗಿ ಜಗತ್ತಿನಾದ್ಯಂತ ಉಲ್ಬಣಿಸುತ್ತಿರುವ ಜನಸಂಖ್ಯೆಯ ಹಸಿವನ್ನು ನೀಗಲಾರದ ಸ್ಥಿತಿ ನಿರ್ಮಾಣಗೊಂಡಿದೆ. ಆದ್ದರಿಂದ ದಿನಬಳಕೆಯ ಆಹಾರದ ಬೆಳೆಗಳ ಕೊರತೆಯುಂಟಾಗಿ ಅವುಗಳ ಬೆಲೆ ಉಲ್ಬಣಿಸಿವೆ. ನಗರಗಳ ಬೆಳವಣಿಗೆ, ಉದ್ಯೋಗಾವಕಾಶಗಳ ಆಕರ್ಷಣೆ ಹಾಗೂ ಲಾಭದಾಯಕವಲ್ಲದ ಕೃಷಿ ಚಟುವಟಿಕೆಗಳ ಕಷ್ಟನಷ್ಟಗಳು ಗ್ರಾಮೀಣ ಜನರನ್ನು ನಗರಗಳ ಕಡೆಗೆ ಗುಳೆ ಎಬ್ಬಿಸಿವೆ. ಇಂಥ ಅನೇಕ ಕಾರಣಗಳಿಂದಾಗಿ ಭಾರತದ ನೆಮ್ಮದಿಯು ವಿಷಮಾವಸ್ಥೆಯ ಕಡೆಗೆ ಮುಖಮಾಡಿದೆ.

ಆದರಿನ್ನು ತಿನ್ನುವದೇನನ್ನ?
ಅನ್ನವೆಲ್ಲವೂ ಆಯಿತು ಚಿನ್ನ!
ನಾನೇ ನನ್ನನು ತಿನ್ನುವ ಅನ್ನ!
ತಿನ್ನಲಿ ಏನು ನಾ ನನ್ನನ್ನ?
ಅನ್ನs ಅನ್ನs ಅನ್ನs ಅನ್ನs.[೩೨]

ಎಂಬ ಉದ್ಗಾರ ಪ್ರಶ್ನೆಗಳು ಮಾನವ ಸಮುದಾಯದಲ್ಲಿ ಮಾತ್ರವಲ್ಲದೆ ಜೀವ ಸಮೂಹದಲ್ಲಿನ ಪ್ರಶ್ನೆಯೂ ಆಗಿದೆ. ಸುಖ ಸಾಮ್ರಾಜ್ಯದ ಕನಸಿಗನಾದ ಮಾನವನ ಅಟ್ಟ ಮುರಿಯುವ ಕುಣಿತದ ಪರಿಣಾಮವಿದು. ಕಟ್ಟಿದ ಜಗವನು ಕೆಡಿಸಿದ ಕೃತ್ಯವಿದು. ಪ್ರಳಯ ಕಾಳದ ಪರಿಸ್ಥಿತಿಯಿದು. ವಸಾಹತುಶಾಹಿ ಸಂಸ್ಕೃತಿಯು ತಲೆಯಲ್ಲಿ ಮಾಟದ ಮುಳ್ಳನು ಚುಚ್ಚಿ ಹಣದಾಸೆಯನ್ನು ಹಚ್ಚಿದ ಪರಿಣಾಮವಾಗಿ ಅಂದಿನಿಂದ ಇಂದಿನವರೆಗೂ "ಅನ್ನs ಅನ್ನ!" ಎಲ್ಲಿದೆ ಅನ್ನ? ಎಲ್ಲವು ಚಿನ್ನ ಎಂಬ ಹಾಡನ್ನು ಕೇಳಲೇಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ.

ಭೂ ವೈಕುಂಠ, ಭೂ ಕೈಲಾಸ ಎಂಬ ಮಾತುಗಳಿಗೆ ಅರ್ಥವೇ ಇಲ್ಲದಂತಾಗಿದೆ. ಅನ್ನದ ಮೇಲಿನ ಹಿಡಿತದಿಂದಾಗಿ ನಿರ್ಮಾಣವಾಗಿರುವ ಪರಿಸರವು ಇಲ್ಲವಾಗಬೇಕೆಂಬುದು ಇಂಥ ಕವಿತೆಗಳ ಹಿಂದಿನ ಬೇಂದ್ರೆಯವರ ಚಿಂತನೆಯಾಗಿದೆ. 'ಅನ್ನದ ಮೇಲೆ ಅನ್ಯರ ಅಧಿಕಾರ ಬೇಡ ; ಅನ್ನವು ಸ್ವತಂತ್ರವಾಗಲಿ' ಎಂಬ ಬೀಜರೂಪದ ಇಂಥ ದಾರ್ಶನಿಕತೆ ಎಲ್ಲ ಜೀವಿಗಳ ಅನ್ನ ಸ್ವಾತಂತ್ರ್ಯದ ಹಕ್ಕನ್ನು ಪ್ರತಿಷ್ಠಾಪಿಸುತ್ತದೆ. ಇದು ಬೇಂದ್ರೆ ಚಿಂತಿತ ಪರಿಸರ ಚಿಂತನೆಯ ನೆಲೆಯಾಗಿದೆ.

೭. ಸ್ಥಳೀಯತೆ ಮತ್ತು ಸಖೀಗೀತ

"ಸಖೀಗೀತ" ಖಂಡಕಾವ್ಯದಲ್ಲಿ ಬೇಂದ್ರೆಯವರು ಸಾಧನಕೇರಿಯ ಸಮೃದ್ಧ ನಿಸರ್ಗ ಚಿತ್ರಗಳನ್ನು ದಟ್ಟವಾದ ವಿವರಗಳೊಂದಿಗೆ ಚಿತ್ರಿಸಿದ್ದಾರೆ. ಮಲೆನಾಡ ಸೆರಗಿನ ನೆರೆಗಿದ್ದ ಮನೆ, ಅಲ್ಲಿದ್ದ ಸಂಪಿಗೆ, ಪಾರಿಜಾತ, ಮಲ್ಲಿಗೆ, ಮುಗಿಲ ಮಲ್ಲಿಗೆ, ಮಾವು, ತೆಂಗು, ಹಲಸು, ನಿಂಬೆ, ಹೊಂಗೆಯ ಸಾಲುಗಳು, ಮನೆಯ ಮುಂದೆಯೇ ಇದ್ದ ಕೆರೆಯ ಚಿತ್ರ, ಕೆರೆಯ ಪಕ್ಕವೇ ಇದ್ದ ಗುಡ್ಡ, ವೃಕ್ಷ ವಾಟಿಕೆಗಳನ್ನು ಬಳಸಿ ಹೋಗಲು ಇದ್ದ ಹಾದಿಬೀದಿಗಳು, ತೋಪು-ತೋಟಗಳು, ಜೋಳದ ಹೊಲ, ಭತ್ತದ ಗದ್ದೆಯ ದೃಶ್ಯಗಳು "ಸಖೀಗೀತ"ದಲ್ಲಿ ದಾಖಲಾಗಿವೆ. ಅಂದರೆ ಋತುಗಳ ಏರಿಳಿತ, ಕಾಳ ರಿಂಗಣ ಗುಣಿತ ಹಾಗೂ ಬಿಡಿಬಿಡಿಸಿ ಬರೆದಂತ ನಿಸರ್ಗ ಚಿತ್ರಗಳು ಈ ಖಂಡ ಕಾವ್ಯವನ್ನು ಮುನ್ನಡೆಸಿವೆ. "ಸಖೀಗೀತ"ದ ಅಂಬಿಕಾತನಯನ ನಂಬಿಕೆಯ ಹಾಡಿನ ನಿಸರ್ಗ ಸುಗ್ಗಿಯ ಇಂಥ ಚೈತನ್ಯ ಚಿತ್ರಗಳು ಕುಣಿಯ ಹಚ್ಚುತ್ತವೆ. ಗೆಳೆಯ ದಂಪತಿಗಳ ದುಃಖ ದುಗುಡಗಳ ಜೊತೆಜೊತೆಯಲ್ಲಿಯೇ ಪೂರಕವಾಗಿ ಚಲಿಸುತ್ತವೆ.

'ಬಾರೊ ಸಾಧನಕೇರಿಗೆ' ಕವಿತೆ ಬೇಂದ್ರೆಯವರ 'ಶ್ರೀಮಾತಾ' ಮನೆಯ ಸುತ್ತಲಿನ ನಿಸರ್ಗವನ್ನು ಕುರಿತದ್ದು. 'ನಂದನದ ತುಣಕೊಂದು ಬಿದ್ದಿದೆ, ನೋಟ ಸೇರದು ಯಾರಿಗೆ?' ಎಂಬ ಪ್ರಶ್ನೆಯಿಂದಲೇ ಸಾಧನಕೇರಿಯ ಹಸಿರು ಹಾಗೂ ಹಸಿರಿನ ಸಮೃದ್ಧತೆಯನ್ನು ಅಭಿವ್ಯಕ್ತಿಸುತ್ತಾರೆ. ಸ್ಥಳೀಯ ಪರಿಸರದ ಬಗೆಗಿನ ಅಗಾಧ ಸೆಳೆತ ಈ ಬಗೆಯ ಕಾವ್ಯದಲ್ಲಿ ಸಾಂದ್ರಗೊಂಡಿದೆ. ಕುವೆಂಪು ಅವರ 'ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ; ಮಲೆಯ ನಾಡಿಗೆ, ಮಳೆಯ ಬೀಡಿಗೆ, ಸಿರಿಯ ಚೆಲುವಿನ ರೂಢಿಗೆ' ಎಂಬ ಸ್ಥಳೀಯ ನಿಸರ್ಗದ ಸೆಳೆತ ಇಲ್ಲಿ ನೆನಪಾಗುತ್ತದೆ. ಬೇಂದ್ರೆಯವರ ಮಾತಿನಲ್ಲಿ ಹೇಳುವುದಾದರೆ 'ನೆಲದ ಬದುಕು, ನೆಲದ ಬಾಳು' ಇಂಥಲ್ಲಿ ಮುಖ್ಯವಾಗುತ್ತದೆ. ಸ್ಥಳೀಯ ಪರಿಸರದ ಬದುಕಿನ ಸಂಬಂಧಗಳು ಹಾಗೂ ಸ್ಥಳೀಯತೆಯಲ್ಲಿಯೇ ವಿಶ್ವವನ್ನು ಕಾಣುವ ಪ್ರಜ್ಞೆಯೊಂದು ಈ ಬಗೆಯ ಕೃತಿಗಳಲ್ಲಿ ಅಭಿವ್ಯಕ್ತಗೊಳ್ಳುತ್ತದೆ. 'ಭೂಮಂಡಲದ ಬಾಂಧವ್ಯದ ಸದ್ಭಾವದ ಸುಮತಿ'ಯು ಇಂಥ ಕವಿತೆಗಳ ಹಿಂದಿದೆ. 'ಭೂಮಿತಾಯ್ ಒಡಮುರಿದು ಎದ್ದಳೊ, ಶ್ರಾವಣದ ಸಿರಿ ಬರಲಿದೆ' ಎಂಬ ಮಾತಿನಲ್ಲಿಯೂ ಸಾಧನಕೇರಿಯ ನಿಸರ್ಗ ಸೌಂದರ್ಯ ಪ್ರಕಟವಾಗುತ್ತದೆ. ಆ ಸೌಂದರ್ಯ ಯಕ್ಷಿ ಮಾಡಿದ ಮಾಟದಂತೆ ಮಾಂತ್ರಿಕವಾದುದು. ಅಂಥ ನೈಸರ್ಗಿಕ ಮಾಂತ್ರಿಕತೆ ಗಿಡದ ಪೊದರೊಳು ಹಾಡನ್ನು ಸೃಷ್ಟಿಸಿ ಬದುಕಿನ ದುಃಖ ದುಮ್ಮಾನಗಳನ್ನು ದೂರಮಾಡುವ ಚೈತನ್ಯಶೀಲತೆಯನ್ನು ಪಡೆಯುತ್ತದೆ. 'ಹೇಳು ಗೆಳೆಯಾ ಬೇರೆ ಎಲ್ಲೀ, ತರದ ನೋಟವ ನೋಡಿದೆ?' ಎಂಬ ಪ್ರಶ್ನೆಯಲ್ಲಿ ಸಾಧನಕೇರಿಯ ಪ್ರಕೃತಿ ಸಮೃದ್ಧತೆ ಹಾಗೂ ಸೌಂದರ್ಯಕ್ಕೆ ಸಾಟಿಯಾಗುವ ಚಿತ್ರಗಳು ಮತ್ತೆಲ್ಲಿಯೂ ಇಲ್ಲವೆಂಬ ಧ್ವನಿ ಪ್ರಕಟವಾಗುತ್ತದೆ.

'ಮಲೆನಾಡ ಸೆರಗು', 'ಧಾರವಾಡದ ತಾಯಿ', 'ಧಾರವಾಡ', 'ತುಂಬಿತ್ತು ಹಾಲಗೇರಿ', 'ಸಣ್ಣ ಸೋಮವಾರ', 'ಜೋಗಿ', 'ನಾವು ಬರತೇವಿನ್ನ' ಕವನಗಳಲ್ಲಿ ಸ್ಥಳೀಯ ಪ್ರಕೃತಿಯ ಸೌಂದರ್ಯ ಹಾಗೂ ರೌದ್ರಾನುಭವದ ಚಿತ್ರಗಳು ರೂಪ ತಾಳುತ್ತವೆ.

'ಸಣ್ಣ ಸೋಮವಾರ' ಕವಿತೆ ತನ್ನ ಬಾಲ್ಯದ ನೆನಪಿನಿಂದಲೇ ಹೊಮ್ಮಿ ಉಕ್ಕಂದಗೊಂಡ ಕಾವ್ಯ. 'ನೆನಪಿನ ಓರಿಯೊಳಗ ಮಿಣುಕ್ತಾವ ಎಣ್ಣೀ ದೀಪ ಎಲ್ಲೆ! ಹೋದಾವೊ ಗೆಳೆಯಾ ಆ ಕಾಲ' ಎಂಬುದು ಗಾಢ, ದಟ್ಟ, ಸಮೃದ್ಧ, ಸ್ಮೃತಿಯಿಂದ ಅಭಿವ್ಯಕ್ತಗೊಂಡ ಕಾವ್ಯ. 'ಶ್ರಾವಣದ ಸೋಮವಾರ ಮತ್ತು ಶಿವರಾತ್ರಿಯಂದು ಧಾರವಾಡದ ಸೋಮೇಶ್ವರ ದೇವಸ್ಥಾನಕ್ಕೆ ಹೋಗಿ ಬರುವ ಉಕ್ಕಂದದ ಬಾಲ್ಯದ ನೆನಪು ಒಮ್ಮೆಲೆ ಹೊಮ್ಮಿ ಬಂದ ಹಾಡು' ಎಂದು ಭಾವಸಂದರ್ಭ ಸೂಚಿಸುತ್ತದೆ. ಈ ಕವನದ ನಡಿಗೆ ಸಹೃದಯನಲ್ಲಿ ಶ್ರಾವಣದ ಚೈತನ್ಯಯುಕ್ತ ಸಂಭ್ರಮಗಳನ್ನು ತುಂಬಿಸುತ್ತದೆ. ಚೈತನ್ಯಶೀಲ ಬಾಲ್ಯದ ಭಾವಕೋಶಗಳಲ್ಲಿ ಮಡುಗಟ್ಟಿ ನಿಂತ ನಿಸರ್ಗದ ವಿವಿಧ ಚಿತ್ರಗಳು, ಆಟ ಚೆಲ್ಲಾಟಗಳು, ಸೋಮೇಶ್ವರ ಗುಡಿಗೆ ಹೊರಟ ದಾರಿಯ ಉದ್ದಕ್ಕೂ ಕಾಣುತ್ತಿದ್ದ ಶ್ರಾವಣದ ವೈಭವ ಸಹೃದಯನ ಭಾವಕೋಶವನ್ನೇ ಬೆಳಗಿಬಿಡುತ್ತದೆ. 'ಅಲ್ಲಾ ದೂರಾ ಅಲ್ಲಾ ಸನಿ' ಎಂಬಂಥ ಅನುಭವ ಸಹೃದಯನನ್ನು ಮುತ್ತಿ ಬಿಡುತ್ತದೆ. ಈ ಅನುಭವದ ಮುಂದೆ ಮಾನವ ಸಮುದಾಯದ ಜಂಭಗಿಂಭಗಳು ಸೋರಿಹೋಗುತ್ತವೆ. ಬೇಂದ್ರೆ ಕಾವ್ಯದ ಜೀವನಾಡಿಯಾದ ಶಾಲ್ಮಲಿ ನದಿಯಂತೂ ಸದ್ದಿಲ್ಲದ ಗತ್ತಿನಲ್ಲಿ ಹೃದಯಾಂತರಾಳವನ್ನೇ ಹೊಕ್ಕಿ ಬಿಡುತ್ತದೆ. 'ಶಾಲ್ಮಲಿ ಸಣ್ಣ ಬಾಲಿ' ಆದರೂ ಬೇಂದ್ರೆ ಕಾವ್ಯವನ್ನು ಪೋಷಿಸಿದ ಜೀವನದಿ. ಈ ಎಲ್ಲ ಅನುಭವಗಳು ನೆನಪಿನ ಓರಿಯೊಳಗ ಮಿಣುಕುವ ಎಣ್ಣೀ ದೀಪದ ಬೆಳಕಿನಲ್ಲಿ ಸಾಕಾರಗೊಳ್ಳುತ್ತಾ ಹೋಗುತ್ತವೆ.

ಸೋಮೇಶ್ವರ ಗುಡಿಯ ಅಕ್ಕಪಕ್ಕದಲ್ಲಿಯೊ, ಶಾಲ್ಮಲಿಯ ಸನಿಹವೊ ಅಥವಾ ಸುತ್ತಮುತ್ತಲೊ ಎದುರಾಗುವ ಪರಿಸರದ ರೌದ್ರ ಮುಖಗಳು 'ಜೋಗಿ' ಕವಿತೆಯಲ್ಲಿ ಪ್ರಕಟವಾಗುತ್ತವೆ. ಬೇಂದ್ರೆಯವರು 'ನಮ್ಮ ಊರ ಹೊರಗಿನ ಸೋಮೇಶ್ವರ' ಎಂಬ ಸ್ಥಳದ ಪ್ರಕೃತಿಯ ಭಯಾನಕ ರಮ್ಯತೆಯನ್ನು ನೆನೆಸಿಕೊಂಡು, ಜೀವನದಲ್ಲೂ ಬರುವಂಥ ಇಂಥ ಒಂದು ರಮ್ಯ ಭಯಾನಕ ಸ್ಥಿತಿಯನ್ನು ಈ ಪದ್ಯ ಹೇಳುತ್ತದೆ ಎನ್ನುತ್ತಾರೆ. ಲೌಕಿಕ ಹಾಗೂ ಅಲೌಕಿಕ ಅನುಭವಗಳ ರಹಸ್ಯ ಹಾಗೂ ಭಯಾನಕ ಪರಿಸರ ಈ ಕವಿತೆಯ ಉದ್ದಕ್ಕೂ ಚಿತ್ರಿತಗೊಂಡಿದೆ. ಈ ಪರಿಸರವನ್ನು ಹೊಕ್ಕವರು ಕಕ್ಕಾಬಿಕ್ಕಿಯಾಗುತ್ತಾರೆ. ಇರುಳೆಂದೇ ಭ್ರಮಿಸಿ ಹಾಡಹಗಲೇ ಕೂಗುವ ಜೋಡಗೂಗಿ, ಮುಂದೆ ಎದುರಾಗುವ ಮಸಣ, ಹೊಂಡದಲ್ಲಿನ ಹಸಿರು ಪಾಚಿ ಹಾಗೂ ಕಪ್ಪು ನೀರಿನ ಸೆಳೆತ, ಮುಂದೆ ಕಾಣುವ ಗುಡ್ಡ, ಕಾಳಮ್ಮನ ದರ್ಶನ, ಹುಣಸಿಮರದ ಹಾಗೂ ಹತ್ತ ಗಿಡದ ಗುಂಪಿನ ಚಿತ್ರಗಳು ಮೈಜುಮ್ಮೆನ್ನುವ ಅನುಭವವನ್ನು ಸ್ಫುರಿಸುತ್ತವೆ.

ಹಗಲಿನಲ್ಲಿಯೇ ಚೀರಾಡುವ ತೊಗಲಬಾವಲೀ ಹಾಗೂ ಪಾರಿವಾಳಗಳ ಹಿಂಡು, ಹಲಸಿನ ಹಣ್ಣಿನಂತೆ ಜೇನುತುಂಬಿ ತೊಟಗುಟ್ಟುವ ಅತ್ತಿ ಗಿಡದ ಕೆಂಪು ಹಣ್ಣು, ಆ ತೋಪಿನಲ್ಲಿಯೇ ಬೆಳೆದ ಮಾವು, ಹುತ್ತ ಮತ್ತು ಅದರೊಳಗಿನ ಏಳು ಹೆಡೆಯ ಹಾವಿನ ಚಿತ್ರಗಳು ಗೂಢ ಹಾಗೂ ರಹಸ್ಯ ಪರಿಸರವೊಂದರ ಅನುಭವವನ್ನು ಉಂಟುಮಾಡುತ್ತವೆ. ಈ ಕೆಳಗಿನ ಲಂಕೇಶರ ಉಲ್ಲೇಖ 'ಜೋಗಿ' ಕವಿತೆಯ ಪರಿಸರದ ನೆಲೆಗಳನ್ನು ಸಮರ್ಥವಾಗಿ ಗ್ರಹಿಸಿದೆ.

> ಇಡೀ ಪದ್ಯದಲ್ಲಿ ಜೋಗಿ ಕೆಲವು ಪಂಕ್ತಿಗಳಲ್ಲಿ ಮಾತ್ರ, ಪ್ರಕೃತಿಯ ಶಕ್ತಿಯ ಸಂಕೇತವಾಗಿ ಮಾತ್ರ ಬರುತ್ತಾನೆ. ಇದರಲ್ಲಿ ಬರುವ ಹೆಣ್ಣು ಪ್ರಕೃತಿಯಿಂದ, ಜೋಗಿಯ ಲೋಕಾತೀತ ಸ್ತರದ ಕಲ್ಪನೆಯಿಂದ ರೂಪುಗೊಂಡು ವಿಚಿತ್ರ ನಾಟಕೀಯತೆಯನ್ನು ಸೃಷ್ಟಿಸುತ್ತಾಳೆ.
>
> ...... ದ.ರಾ. ಬೇಂದ್ರೆಯವರ 'ಜೋಗಿ' ಬೇಂದ್ರೆಯ ಕನಸು, ವಾಸ್ತವ ಮತ್ತು ಅಧ್ಯಾತ್ಮ ಲೋಕಗಳನ್ನು ಏಕಕಾಲದಲ್ಲಿ ತೆರೆದಿಡುವ ಕವನ ಇದು. ಇದೊಂದು ತೋಪಿನ, ನಿರಂತರವಾಗಿ ಇರುವ ಹಳ್ಳಕೊಳ್ಳದ ಚಿತ್ರ ; ಇದೊಂದು ಜೋಗಿಯ ಚಿತ್ರ. ಇದೊಂದು ಮನುಷ್ಯರನ್ನು ಭಯಕ್ಕೀಡುಮಾಡುವ ಕವನ. ಬೇಂದ್ರೆಯವರ ಪ್ರಕಾರ ಈ ಕವನದ ಗೂಬೆ, ಬಾವಲಿ, ಮರಗಳು, ಪ್ರಾಣಿಗಳು ಎಲ್ಲವೂ ಒಂದು ಅಲೌಕಿಕ ಭಯಾನಕ ವಾತಾವರಣ ಸೃಷ್ಟಿಸುತ್ತವೆ.
>
> ...... ಇದೆಲ್ಲ ಏನು? ಜೋಗಿ ಕಾಣುವ ತೋಪು ನಮ್ಮಲ್ಲಿಯೇ ಇದೆ. ಮನುಷ್ಯನೊಳಗಿನ ಭಯ ಮತ್ತು ಪ್ರೇಮ, ಮರಣ ಹೊಂದುವ ಕಸಿವಿಸಿ ಮತ್ತು ಇನ್ನೆರಡು ಕ್ಷಣ ಇರುವ ಆಸೆ - ಎಲ್ಲವೂ ಎಲ್ಲರಲ್ಲೂ ಇರುತ್ತದೆ.[೩೩]

ಈ ಉಲ್ಲೇಖದಲ್ಲಿ 'ಜೋಗಿ' ಕಾಣುವ ಪರಿಸರದಲ್ಲಿನ ಒಳ ಮತ್ತು ಹೊರಗಿನ ಒಳತೋಟಿಯ ಅವಸ್ಥೆಗಳನ್ನು ಗ್ರಹಿಸಲಾಗಿದೆ. ಅಂಥ ಒಳತೋಟಿಯ ಪರಿಸರದಲ್ಲಿಯೇ ನಿಸರ್ಗದ ಸಮೃದ್ಧ ಮುಖವೊಂದು ಪ್ರಕಟಗೊಳ್ಳುತ್ತದೆ. ಸೃಷ್ಟಿಯ ಸಂಭ್ರಮಕ್ಕೆ ಹದವಾಗುವ ಚಿತ್ರಗಳು ಮುಂದೆ ಕವಿತೆಯಲ್ಲಿ ಬೆಳೆಯುತ್ತಾ

ಹೋಗುತ್ತವೆ. ಭಯಾನಕ ಹಾಗೂ ಗೂಢ ಪರಿಸರವೊಂದು ಹಿಂದೆ ಸರಿದು ಮುಂದೆ ಎದುರಾಗುವ ಸುಗ್ಗಿಯ ಚಿತ್ರವನ್ನು ಈ ಕೆಳಗಿನ ಕಾವ್ಯಭಾಗ ಸ್ಪಷ್ಟಪಡಿಸುತ್ತದೆ.

ಆ ಮಾವಿನೊಳಗ ಈ ಸುಗ್ಗಿಯೊಳಗ ಬಂದsದ ಕೋಗಿಲೊಂದು
ತನ್ನ ಜೋಡಿ ಕರೆದ್ಹಾಂಗ ಕರಿತsದ ನನ್ನ ಬಾರs ಅಂದು
ಕೂಗೇ ಕೂಗತದ ಕೂಗೇ ಕೂಗತsದ ಗಿರಣಿ ಕರೆಯೊ ಹಾಂಗ
ತೆರಪು ಇಲ್ಲ ಒಂದಳತಿ ಕೂಗತsದ ಬ್ಯಾಸರಿಲ್ಲಧಾಂಗ.

ತಿಳಿಯದ್ಯಾವದೋ ಕಂಪು ಎಳೀತsದ ತುಂಬಿ ಹುಚ್ಚಿ ಆಗಿ
ಎಚ್ಚರಿಲ್ಲದs ಎತ್ತೊ ತಿರಗತಾವ ದಿಕ್ಕು ತೋರದಾಗಿ
ಬಂತು ಸುಗ್ಗಿ ಬಂದsದ ಸುಗ್ಗಿ ಬರತsದ ಸುಗ್ಗಿ ಎಂದು
ಕುಹೂ ಅನ್ನತದ ಕುಹೂ ಅನ್ನತದ ಕುಹುಕ್ಕುಹೂ ಅಂದು.[೩೪]

ಕೋಗಿಲೆ ತರುವ ಸುಗ್ಗಿಯ ಪರಿಸರ ಎಲ್ಲೆಲ್ಲೂ ಸಮೃದ್ಧಗೊಂಡು ಸೃಷ್ಟಿಗೆ ಇಂಬುಕೊಡುವ ಚಿತ್ರಗಳನ್ನು ಕವಿತೆಯ ಈ ಭಾಗ ಕಾಣಿಸುತ್ತದೆ. ಅಂಥ ಪರಿಸರವನ್ನು ಹೊಕ್ಕ ಜೋಗಿಯನ್ನು ಹೆಣ್ಣು ಜೀವವೊಂದು ಸಂಭ್ರಮದಿಂದ ಆಹ್ವಾನಿಸುತ್ತಾಳೆ. ಜೋಗಿ ಹೇಳಿದ ನಾಮದ ಜಪದಿಂದಲೇ ಅಖಂಡ ನಿಸರ್ಗ ಸಮೃದ್ಧ ಸುಗ್ಗಿಯಲ್ಲಿ ಪಾಲ್ಗೊಳ್ಳುತ್ತದೆ. 'ತಲೆಯ ಯಾವುದೋ ನಾಡಿಯೊಳಗ ಸುರುವಾದ ಸುಗ್ಗಿಯ ಸೊಲ್ಲು' ದೇಹ ಮತ್ತು ಮನಸ್ಸುಗಳ ಮೂಲೆ ಮೂಲೆಯನ್ನು ಹೊಕ್ಕು ಸೃಷ್ಟಿಕ್ರಿಯೆಗೆ ಹದವಾದ ಪರಿಸರವೊಂದನ್ನು ನಿರ್ಮಿಸುತ್ತದೆ.

ಯಾವ ಸ್ವರಾ ಇದು, ಯಾವ ಕೋಗಿಲಾ? ಯಾವ ಮರವೋ ಏನೋ!
ಯಾಕ ಹೀಂಗ ಅಸರಂತ ಕೂಗತದ ಏನು ಇದಕೆ ಬ್ಯಾನ್ಯೊ?
ಸುತ್ತು ಗುಡ್ಡ ನುಗ್ಗಾಗಿ ಹೋದವೋ ಓಗೊಟ್ಟು ಇದಕs
ಬಿಸಿಲು ಕುಣಿದು ಬೆವತsದ, ಈಗ ಬಂದsದ ಮಳಿಯ ಹದಕs[೩೫]

ಈ ಮೇಲಿನ ಕಾವ್ಯಭಾಗದಲ್ಲಿ ನಿರಂತರವಾಗಿ ಕೇಳಿಬರುವ ಕೋಗಿಲೆಯ ಸ್ವರಕ್ಕೆ ಅಖಂಡ ಪರಿಸರ ಓಗೊಟ್ಟು, ಅದರ ಸೆಳೆತಕ್ಕೆ ಸಿಕ್ಕಿ ಎಲ್ಲೆಲ್ಲೂ ಚೈತನ್ಯವನ್ನೇ ಕಾಣುವ ಪರಿಸರವೊಂದು ಸೃಷ್ಟಿಗೊಳ್ಳುತ್ತದೆ. ಕವಿತೆಯ ಆರಂಭದ ಭಾಗಗಳಲ್ಲಿ ಕಂಡ ಗೂಢ, ಭಯಾನಕ, ರಹಸ್ಯ ಪ್ರಕೃತಿಯು ಹಿಂದೆ ಸರಿದು ಆನಂದಾನುಭೂತಿಯ ನಿಸರ್ಗ ಎದುರಾಗುವುದನ್ನು 'ಬಿಸಿಲು ಕುಣಿದು ಬೆವತsದ, ಈಗ ಬಂದsದ ಮಳಿಯ ಹದಕs' ಎಂಬ ಸಾಲಿನಲ್ಲಿ ಕಾಣಬಹುದಾಗಿದೆ. ಬೇಂದ್ರೆಯವರು ಪರಿಸರದಲ್ಲಿನ ರಮ್ಯ ಹಾಗೂ ರೌದ್ರಾನುಭವಗಳ ಅನೇಕ ಮುಖಗಳನ್ನು ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಿಸಿರುವುದನ್ನು ಇಂಥ ಅಧ್ಯಯನದಿಂದ ತಿಳಿಯಬಹುದು.

೮. ನಿಸರ್ಗ ದೃಷ್ಟಿ

ಪ್ರಕೃತಿ ವರ್ಣನೆ, ಅದರ ಸೌಂದರ್ಯದ ಆಸ್ವಾದನೆ, ಪ್ರೀತಿ, ತನ್ಮಯತೆ ಹಾಗೂ ಪ್ರಕೃತಿಯ ಬಗೆಗಿನ ಕುತೂಹಲಗಳನ್ನು ಬೇಂದ್ರೆಯವರ ನಿಸರ್ಗ ಕವಿತೆಗಳಲ್ಲಿ ಕಾಣುತ್ತೇವೆ. ಜೀವ ವೈವಿಧ್ಯ ಹಾಗೂ ಭೂಮಿಯ ಮೇಲಿನ ಸೌಂದರ್ಯಾನುಭವಗಳಲ್ಲಿ ಮೈತಾಳಿದ ಕಾವ್ಯ ಬೇಂದ್ರೆಯದು. ತಮ್ಮ ಆರಂಭದ ಕಾವ್ಯ ಸಂಕಲನವಾದ

"ಗರಿ"ಯ 'ಬೆಳಗು' ಕವನದಲ್ಲಿಯೇ ಬೇಂದ್ರೆಯವರ ನಿಸರ್ಗಾನುಭವದ ದೃಷ್ಟಿ ಮೈತಾಳುತ್ತದೆ. ಮೂಡಲ ಮನೆಯಲ್ಲಿ ಕಂಡ ಸೂರ್ಯೋದಯದಿಂದ ನಿಸರ್ಗದ ಅಖಂಡ ವೈವಿಧ್ಯಗಳು ಸಾಕ್ಷಾತ್ಕಾರಗೊಳ್ಳುತ್ತವೆ. 'ಇದು ಬರಿ - ಬೆಳಗಲ್ಲೋ ಅಣ್ಣಾ' ಎಂಬ ಸಾಲಿನಲ್ಲಿಯೇ ಪಂಚೇಂದ್ರಿಯಗಳ ಅನುಭವಕ್ಕೆ ಬರುವ ಮತ್ತು ಬಾರದ, ಕಣ್ಣಿಗೆ ಕಾಣುವ ಮತ್ತು ಕಾಣದ ನಿಸರ್ಗದಲ್ಲಿ ಮೈದೋರುವ ಪ್ರಕೃತಿಯನ್ನು 'ಬೆಳಗು' ಕವಿತೆಯ ಸೂರ್ಯೋದಯ ಕಾಣಿಸುತ್ತದೆ.

ಮೂಡಲ ಮನೆಯ ಬಾಗಿಲಿನಿಂದ ಹರಿದು ಬಂದ ಬೆಳಕಲ್ಲಿ ಗೋಚರವಾಗುವ ನಿಸರ್ಗದ ನಾನಾ ಮುಖಗಳನ್ನು ಮುಂದೆ ಬೇಂದ್ರೆ ಕಾವ್ಯ ಕಟ್ಟುತ್ತದೆ. ಆ ಕಾವ್ಯ ನಿಸರ್ಗ ಹಾಗೂ ಬದುಕಿನ ಜೀವನಾನುಭವಗಳ ಜೊತೆಜೊತೆಗೆ ಚಲಿಸುತ್ತದೆ. ಋತುಮಾನಗಳಲ್ಲಿನ ನಿಸರ್ಗದ ಬೇರೆ ಬೇರೆ ಮುಖಗಳನ್ನು ಕಾವ್ಯಾಭಿವ್ಯಕ್ತಿಗೆ ಒಳಪಡಿಸುತ್ತಾ ನಿಸರ್ಗ ಮತ್ತು ಮಾನವ ಸಮುದಾಯದ ಸಂಬಂಧಗಳನ್ನು ಇವರು ಚಿತ್ರಿಸುತ್ತಾರೆ. ' 'ಅತ್ತಿಕೊಳ್ಳ'ದ ಬೆಳಗು ಲೋಕದ ಎಲ್ಲ ಭೌತಿಕ ಹಾಗೂ ಜೈವಿಕ ನೆಲೆಗಳಲ್ಲಿ ಚೈತನ್ಯವನ್ನು ತರುವ ಹರಿಕಾರನಂತೆ ಎದುರಾಗುತ್ತದೆ' ಎಂಬ ಕೆ.ಸಿ. ಶಿವಾರೆಡ್ಡಿಯವರ ಕಾವ್ಯಗ್ರಹಿಕೆಯು ಬೇಂದ್ರೆ ಪರಿಸರದೃಷ್ಟಿಯ ನೆಲೆಯನ್ನೇ ಕುರಿತದ್ದಾಗಿದೆ.

"ಗರಿ" ಸಂಕಲನದ 'ಚಂದ್ರ' ಕವಿತೆ ನಿಸರ್ಗ ಮತ್ತು ಮಾನವ ಸಮುದಾಯದ ಸಂಬಂಧಗಳನ್ನು ಸ್ಪಷ್ಟಪಡಿಸುತ್ತದೆ.

ಒಡಲ ಕಿಚ್ಚಿಗೆ ಬೆಂದರೂ ನೀ -
ನೊಡಲುರಿಗೆ ಮೊರೆಯಿಡುವ ಕಡಲನು
ಕಡುಪಿನೊಳು ಮುದ್ದಾಡಿ ರಮಿಸುವೆ
ನಗೆಮೊಗವ ತೋರಿ
ಒಡನೆ ಮರುಗನು ಮರೆತು ನನ್ನಯ
ನುಡಿಯು ಪೊಡವಿಯ ಪಾಡುಗಂಬನಿ -
ಗಡಲ ಸೈಪಿಡಲೀಗ ನಿನ್ನೊಲು
ಹಾಡಾಗಿ ಮೂಡಿ.

ನಿನ್ನೊಳವು ನನ್ನೊಳಗೆ ಮೊಳೆಯಿತು
ನಿನ್ನ ಮಣಿಹವು ತಣಿಸಿತೆನ್ನನು
ತನ್ನ ದುಃಖವ ನುಂಗಿ ಪರದುಃ-
ಖವನು ಹಿಂಗಿಸುವ
ಚೆನ್ನಿಗಳು ಭೂದೇವಿ, ಆಕೆಯ
ನನ್ನಿಯಲಿ ಮಡಿಯಾದ ನುಡಿಗಳು
ನನ್ನ ನಾಲಗೆಯಲ್ಲಿ ಮೂಡಲಿ
ಪ್ರತಿ ಚಂದ್ರರಂತೆ.[೩೬]

ತನ್ನ ದುಃಖವ ನುಂಗಿ ಪರದುಃಖವ ಹಿಂಗಿಸುವ ಸೌಂದರ್ಯಮಾತೆ ಭೂದೇವಿಯ ಪ್ರೀತಿಯಲ್ಲಿ ಮಡಿಯಾದ ನುಡಿಗಳು ಪ್ರತಿಚಂದ್ರರಂತೆ ಕವಿಯ ಕಾವ್ಯಾಭಿವ್ಯಕ್ತಿಯಾಗಿ ಮೈಪಡೆಯುವುದನ್ನು ಇಲ್ಲಿ ಕಾಣುತ್ತೇವೆ. ಬೇಂದ್ರೆ ಕಾವ್ಯದ ಚೆಲುವು ಹಾಗೂ ಚತುರ್ಮುಖ ಸೌಂದರ್ಯದ ಚೆಲುವನ್ನು ಈ ಕವಿತೆ ಕಾಣಿಸುತ್ತದೆ.

ಇದೇ ಸಂಕಲನದ 'ಯುಗಾದಿ' ಕವಿತೆ ನಿಸರ್ಗದ ನಿರಂತರ ಚೈತನ್ಯಶೀಲತೆಯನ್ನು ಹಾಗೂ ಮಾನವ ಸಮುದಾಯದ ಮಿತಿಗಳನ್ನು ಚಿಂತಿಸುತ್ತದೆ.

ವರುಷಕೊಂದು ಹೊಸತು ಜನ್ಮ
ಹರುಷಕೊಂದು ಹೊಸತು ನೆಲೆಯು
ಅಖಿಲ ಜೀವಜಾತಕೆ!
ಒಂದೆ ಒಂದು ಜನ್ಮದಲ್ಲಿ
ಒಂದೆ ಬಾಲ್ಯ ಒಂದೆ ಹರೆಯ
ನಮಗದಷ್ಟೆ ಏತಕೆ?
ನಿದ್ದೆಗೊಮ್ಮೆ ನಿತ್ಯ ಮರಣ
ಎದ್ದ ಸಲ ನವೀನ ಜನನ
ನಮಗೆ ಏಕೆ ಬಾರದೋ?[೩೨]

ಎಂಬ ಮಾನವ ಪ್ರಶ್ನೆಯಲ್ಲಿ ಸೃಷ್ಟಿಶೀಲತೆಯ ಸಾಧ್ಯತೆಯನ್ನು ಕಾಣಿಸುತ್ತಾರೆ. ವರ್ಷ ವರ್ಷ ಹೊಸತು ಜನ್ಮ ಹೊಸತು ನೆಲೆಯು ಅಖಿಲ ಜೀವಜಾತಕೆಗೆ ಮಾತ್ರ ಏಕೆ ಎಂಬ ಪ್ರಶ್ನೆ ಎದುರಾದರೂ ಬೇವಿನ ಕಹಿ ಬಾಳಿನಲ್ಲಿಯೇ ಹೊಸ ವರುಷಕೆ ಹೊಸ ಹರುಷ ತರುವ ಚೈತನ್ಯಾವಸ್ಥೆಯನ್ನು ಬೇಂದ್ರೆ ಸಂವೇದನೆ ಇಂಥ ಕವಿತೆಗಳಲ್ಲಿ ಚಿಂತಿಸುತ್ತದೆ.

'ಕವಿಯು ಭೂಮಿಜೀವಿ. ಭೂಮಿಯ ಸಾಮಗ್ರಿಯೇ ಅವನ ಸಾಮಗ್ರಿ' - ಶಂಕರ ಮೊಕಾಶಿ ಪುಣೇಕರರ ಈ ಮಾತುಗಳು ಬೇಂದ್ರೆಯವರ ನಿಸರ್ಗ ಕಾವ್ಯದ ಕೇಂದ್ರ ಧಾತುಗಳನ್ನು ಒಂದೇ ವಾಕ್ಯದಲ್ಲಿ ಹಿಡಿದಿಟ್ಟಿವೆ ಎನ್ನಬಹುದು. ಅಖಂಡ ಪರಿಸರದ ಚೇತನಾಚೇತನ, ಸುಂದರ ಹಾಗೂ ರೌದ್ರಾನುಭವಗಳನ್ನು ಬೇಂದ್ರೆ ತಮ್ಮ ನಿಸರ್ಗ ಕಾವ್ಯದಲ್ಲಿ ಚಿತ್ರಿಸಿದ್ದಾರೆ. ನೆಲ, ನೀರು, ಗಾಳಿ, ಆಕಾಶ, ಮಳೆ, ಕತ್ತಲು, ಸೂರ್ಯೋದಯ, ಸೂರ್ಯಾಸ್ತಮ, ಚಂದ್ರೋದಯ, ಬೆಳದಿಂಗಳು, ರಾತ್ರಿ, ಹಗಲು, ಬೇರೆ ಬೇರೆ ಋತುಮಾನಗಳ ವರ್ಣನೆಗಳು, ಕೋಗಿಲೆ, ನವಿಲು, ಗುಬ್ಬಿ ಮೊದಲಾದ ಪಕ್ಷಿ ಸಂಕುಲಗಳು, ಮಲ್ಲಿಗೆ, ಆಕಾಶ ಮಲ್ಲಿಗೆ, ಪಾರಿಜಾತ ಮೊದಲಾದ ಹೂಗಳ ವರ್ಣನೆಗಳು - ಹೀಗೆ ತಮ್ಮ ಬದುಕಿನುದ್ದಕ್ಕೂ ಕಂಡದ್ದನ್ನು ಕಾವ್ಯದಲ್ಲಿ ಕಾಣಿಸಿದ್ದಾರೆ. ಇಂಥ ಕಾವ್ಯದಲ್ಲಿ ಭೂಮಿ, ನೀರು, ಅಗ್ನಿ, ವಾಯು, ಆಕಾಶ ತತ್ವಗಳ ಚಿಂತನೆ ಮುಖ್ಯವಾಗಿದೆ. ಈ ಚಿಂತನೆಗಳಲ್ಲಿಯೇ ಪಂಚಭೂತಗಳ, ಚರಾಚರಗಳ ಹಾಗೂ ಮಾನವ ಸಮುದಾಯದ ಸಂಬಂಧಗಳನ್ನು ಚಿಂತಿಸುತ್ತಾರೆ.

ಮಳೆ ಮತ್ತು ಶ್ರಾವಣ ಮಾಸದ ದೃಶ್ಯ ವೈಭವಗಳನ್ನು ಕುರಿತು ಅಸಂಖ್ಯ ಕವನಗಳನ್ನು ರಚಿಸಿದ್ದಾರೆ. ಆ ಕವನಗಳಲ್ಲಿ ಶ್ರಾವಣ ತರುವ ಜೀವ ಚೈತನ್ಯ ಹಾಗೂ ಬದುಕಿನ ಬಗೆಗಿನ ಶ್ರದ್ಧೆಗಳನ್ನು ಕುರಿತ ಚಿಂತನೆ ಇದೆ. 'ದೃಶ್ಯಕು ಅದೃಶ್ಯಕ್ಕು ಕೊಡು ಕೊಳೆಯೆ ಚೆಂದ, ಜೀವಕು ಅಜೀವಕ್ಕು ದೈವಿಕವೆ ಬಂಧ'ವೆಂದು ಮಳೆಯನ್ನು

ಆಹ್ವಾನಿಸುತ್ತಾರೆ. 'ಮಳೆ ಬರುವ ಕಾಲಕ್ಕ, ಒಳಗ್ಯಾಕ ಕೂತೇವೊ, ಇಳೆಯೊಡನೆ ಜಳಕ ಮಾಡೋಣ, ನಾವೂನು, ಮೋಡಗಳ ಆಟ ನೋಡೋಣ'ವೆಂದು ನಿಸರ್ಗದಲ್ಲಿ ಒಂದಾಗುವ ಅಭೀಪ್ಸೆಯನ್ನು ವ್ಯಕ್ತಪಡಿಸುತ್ತಾರೆ.

'ಪ್ರತಿ ವರುಷದ ಹಾಗಲ್ಲವು ಈಸಲದೀ ಸುಗ್ಗಿ, ಏನರಳಿದೆ ಗಿಡಮರ ಬಳ್ಳಿಗಳೆದೆ ಹಿಗ್ಗಿ, ಕೊಳಲ ಗುಬ್ಬಿ ಕರೆಯುತ್ತಿವೆ ತೋಟಕೆ ಬಾ ಹೊರಗೆ, ಬೇವಿನ ಹೂ ನೆರಳಿನಲ್ಲಿ ಸವಿನೋಟದೊಳದೊ ನೆರೆಗೆ' ಎಂದು ವಸಂತಮಾಸದ ಸೌಂದರ್ಯಕ್ಕೆ ಮನಸೋತು ಸಂಭ್ರಮಿಸುತ್ತಾರೆ. ಬದುಕಿನ ಕಹಿ ಅನುಭವಗಳಲ್ಲೂ ಸವಿಯನ್ನೇ ಹುಡುಕುವ ಯತ್ನ ನಿಸರ್ಗ ಕವಿತೆಗಳಲ್ಲಿ ಪ್ರಕಟಗೊಳ್ಳುತ್ತದೆ.

ಭೂಮಿ ಬೆಳದಂತೆ ಸ್ವರ್ಗ ಇಳಿದಂತೆ ಕ್ಷಣವು ಪರ್ವವಾಗೆ
ಆನಂದ ಕಟ್ಟಿ ಹೊಸಚೇನ ಹುಟ್ಟಿ ಅವತಾರವಾದ ಹಾಗೆ
ನರನ ಹೃದಯ ನಾರಾಯಣಾಗ್ನಿ ಒಲಿದೀಯೆ ಬಂತು ವರವು
ಮೂರು ಸಪ್ತಕವ ಮೀರಿ ಇರುವಂಥ ಆ ಅಪೂರ್ವ ಸ್ವರವು.[೩೮]

ಎಂದು ಋತುಗಾನದ ವೈಭವಕ್ಕೆ ಮನಸೋಲುತ್ತಾರೆ.

ಹಗಲಿರುಳಿನ ತೆರೆಮರೆ ತೆರೆದಾಟದ ಸರಿ ತೂಕ,
ದೇವರ ರತ್ನಾಭರಣದ ನಕ್ಷತ್ರದ ಲೋಕ ;
ನೆಲದಲಿ, ಮಲೆಯೊಳು, ಮರದಲೆಯಲಿ ಪುಷ್ಪಾಲೋಕ;
ಸಂಜೆಯ ಮುಂಜಾವದ ಕೆಂಬೆಳಕಿನ ಸಮಪಾಕ.[೩೯]

ಎಂಬಲ್ಲಿ ಬದುಕಿನ ಸಂಭ್ರಮದ ಕ್ಷಣಗಳು ಕಾವ್ಯದಲ್ಲಿ ಕ್ಷಣಕ್ಷಣವೂ ಹೊಸಹೊಸದನ್ನು ರಿಂಗಣಗುಣಿಸುತ್ತವೆ. ಋತುಗಾನದ ಹಾಡಿಗೆ ಶೃತಿಯನ್ನು ಹಿಡಿಯುವ ಪ್ರಕ್ರಿಯೆ ಬೇಂದ್ರೆಯವರ ನಿಸರ್ಗಾನುಭವ ಕವಿತೆಗಳಲ್ಲಿ ಮೈಪಡೆಯುತ್ತದೆ.

ಶ್ರಾವಣದ ವೈಭವವಂತೂ ಬೇಂದ್ರೆ ಕಾವ್ಯದಲ್ಲಿ ಮಡುಗಟ್ಟಿ ನಿಲ್ಲುತ್ತದೆ.

ನೆಲ ಹಸಿರು ; : ಹೊಲ ಹಸಿರು ; ಗಿಡಗಂಟಿ ಹಸಿರು ;
ಫಲ ಏನೊ? ಬಳೆಯುತಿದೆ ಬಯಲ ಬಸಿರು.
ನೆನೆನೆನೆಸಿ ಅತ್ತಂತೆ ಆಗಾಗ ಮಳೆಯು,
ಅನಿತರೊಳು ನಡುನಡುವೆ ಹೊಂಬಿಸಿಲ ಕಳೆಯು
....
ನನ್ನ ಬಾಳುವೆಯಹುದು ಶ್ರಾವಣದ ಹಗಲು ;
ತನ್ನ ಹೊಯ್ದಾಟದಲಿ ಅದಕಿಂತ ಮಿಗಿಲು.[೪೦]

ಎಂದು ಬೇಂದ್ರೆ ತಮ್ಮ ಜೀವನ ಮತ್ತು ಶ್ರಾವಣ ಋತುವಿನ ಸಂಬಂಧವನ್ನು ದಾಖಲಿಸುತ್ತಾರೆ. ಮಳೆ ಮತ್ತು ಹೊಂಬಿಸಿಲ ಕಳೆ ಬದುಕಿನ ಸುಖದುಃಖಗಳ ಸಂಕೇತವಾಗಿ ಕಾಣುತ್ತದೆ. ಪ್ರತಿವರ್ಷದಂತೆ ಬಂದ ಶ್ರಾವಣಕ್ಕೆ ಹುಚ್ಚಾಗಿ ಮದೋನ್ಮತ್ತನಾದ ಅಂಬಿಕಾತನಯದತ್ತನ ಧ್ಯಾನ ಹಾಡಾಗಿ ಹರಿಯುತ್ತದೆ. 'ಅಗೋ ಅಲ್ಲಿ ದೂರದಲ್ಲಿ'

ಎಂಬ ಕವಿತೆಯಂತೂ ಕುಣಿವ ಮಣಿವ ಹೆಡೆಯು ಹಾವುಗಳನ್ನು ಹಿಡಿದು ತಂದಂಥ ಅನುಭವವುಳ್ಳ ಕವಿತೆ. ಹಾಗೆಯೇ ಪರ್ಜನ್ಯ ಗೀತವನ್ನು ಸೃಷ್ಟಿಸಿದ ಸಂಭ್ರಮದ್ದು.

'ಏನು ಹಸಿರು! ಏನು ಹಳದಿ ಸುತ್ತುಮುತ್ತು ನೋಡು ಕೆಳದಿ!' ಎಂಬ "ಸಖೀಗೀತ" ಸಂಕಲನದಲ್ಲಿನ 'ಶ್ರಾವಣದ ವೈಭವ'ವು ರೂಪಕ, ಚಿತ್ರ, ಉಪಮೆಗಳ ಗಣಿಯಂತೆ ಎದುರಾಗುತ್ತದೆ. ಹುಲ್ಲು, ಹೂವಿನ ಹಬ್ಬದುಬ್ಬಿನಲ್ಲಿಯ ಸಂಭ್ರಮ, ಮಳೆಬಿಲ್ಲು ಮುರಿದು ಹತ್ತು ಕಡೆಗೆ ಹಂಚಿದ ಚಿತ್ರ, ನೆಲದ ಬಸಿರು ತನ್ನ ಸೊಬಗಿನಿಂದ ಬಣ್ಣದ ಒಂದು ಜಾತ್ರೆಗಾಗಿ ಬೆಳೆಸಿದ ಪಯಣ, ಮಣ್ಣು ಹುಡಿಯ ಕಣಕಣವೂ ಕಣ್ಣು ಪಡೆದ ಅನುಭವ, ಬಸಿರ ಹೊಲಕೆ ಹೂ ಮುಡಿಸಲೆಂದು ಬಂದ ಶ್ರಾವಣ ಮಾಸದ ಸೃಷ್ಟಿ ಸಂಭ್ರಮವು ಕವಿತೆಯ ಆರಂಭದಲ್ಲಿ ಪ್ರಕಟಗೊಳ್ಳುತ್ತದೆ.

ಹುಡಿಯು ಅರಳಿ ಹೂವು ಆಗೆ,
ಹುಳಕೆ ರೆಕ್ಕೆ ಒಡೆದವು ;
ಮುಸುಕು ಹರಿದು ಪಕ್ಕ ತೆರೆದು
ಚಿಟ್ಟೆ ಮುಕ್ತಿ ಪಡೆದವು.
....
ನಯವೆ ರೆಕ್ಕೆ ಪಡೆದು ಚೆಲ್ಲ-
ವರಿದು ಪಾರುತಿರುವದು;
ಹುಚ್ಚುಹಿಗ್ಗಿಗೆಗ್ಗು ಇಲ್ಲ
ಎಂದು ಸಾರುತಿರುವದು.

ರೆಕ್ಕೆಹುಳಗಳಲ್ಲ ಇವೂ
ಚಿಕ್ಕ ರೂಪ ತಾಳಿದ
ಚೊಕ್ಕ ಅಪ್ಸರಸಿಯರೇ
ನಕ್ಕು ನಲಿಯುತಿರುವರು.

'ಇಂದ್ರಜಾಲದಿಂದ ಬಂದ
ಸುಂದರಿಯರು' ಎಂಬುದು
ಊಹೆ ಕೂಡ ಊಹಿಸಿಯೂ
ತನ್ನ ತಾನೆ ನಂಬದು ;

ಒಂದನೊಂದು ಅಟ್ಟುತಿಹವು
ಒಂದನೊಂದು ಮುಟ್ಟಲು,
ಅಲ್ಲು ಇಲ್ಲು ಎಲ್ಲು ಚಿಟ್ಟೆ
ಸಾಲು ಸಾಲು ಮೆಟ್ಟಲು

....

ಒಂದನೊಂದು ತಬ್ಬಿ ಮುತ್ತಿ
ಏಕಜೀವವಾಗಿವೆ.
ಜಡವು ಜೀವವೆಂದು ಸುಳ್ಳೆ
ಎರಡು ರೂಪವಾಗಿವೆ.[೪೧]

ಈ ಮೇಲಿನ ಕಾವ್ಯ ಭಾಗದಲ್ಲಿ ಶ್ರಾವಣದ ಸಮೃದ್ಧತೆಯಲ್ಲಿನ ಸಂಭ್ರಮ, ಜೀವ ಸಮೂಹದಲ್ಲಿನ ಪ್ರಣಯ ಹಾಗೂ ಸೃಷ್ಟಿಶೀಲತೆಯ ನೆಲೆಗಳು ಸಾಲು ಸಾಲಾಗಿ ಹರಿಯುತ್ತವೆ. ಅಖಂಡ ಜೀವ ಸಮೂಹ ಒಂದನ್ನೊಂದು ತಬ್ಬಿ ಮುತ್ತಿ ಏಕಜೀವವಾಗಿದೆ. ಚೇತನಾಚೇತನಗಳು ಎಂಬ ಭೇದವಳಿದು ಹೋಗಿವೆ. ಚಿಟ್ಟೆ ದುಂಬಿ ಒಂದಾಗಿ ದೊಂಬಿಯಾಟ ಆಡುತಿರುವ ರಾಸಲೀಲೆಯ ಚಿತ್ರ ಎದುರಾಗುತ್ತದೆ. ಹೂವ ಹಡಲಿಗೆಯನು ಹೊತ್ತ ಭೂಮಿ ತಾಯಿ ಶ್ರಾವಣದ ವೈಭವದಲ್ಲಿ ಮೈತುಂಬಿ ಕುಣಿಯುತ್ತಾಳೆ. ಇಂಥ ಸಂಭ್ರಮಗಳಿಗೆ ಎಷ್ಟು ಹೋಲಿಕೆಗಳನ್ನು ಕೊಟ್ಟು ಹೊಗಳಿದರೂ ಮನವು ತಣಿಯದೆಂಬುದು ಬೇಂದ್ರೆ ಅವರ ಶ್ರಾವಣ ಮಾಸದ ನಿಸರ್ಗಾನುಭವ ಕವಿತೆಗಳ ಸಂವೇದನೆಯ ಉದ್ಗಾರ. ಹಾಗಾಗಿಯೇ 'ಮತ್ತ ಶ್ರಾವಣಾ', 'ಮತ್ತೆ ಶ್ರಾವಣ ಬಂದಾ' ಎಂಬ ಕವಿತೆಗಳಲ್ಲಿಯೂ ಶ್ರಾವಣದ ವೈಭವ ಮುಂದುವರಿಯುತ್ತದೆ.

ಶ್ರಾವಣ ಮಾಸದ ಸಂಭ್ರಮಗಳು ಕವಿ ಬೇಂದ್ರೆಯನ್ನು ಕಾವ್ಯೋದ್ಯೋಗದಲ್ಲಿ ಕಟ್ಟಿಹಾಕುತ್ತವೆ. 'ಕಾವ್ಯವೂ ಕರ್ಮ; ಅದು ಪುರುಷಾರ್ಥ ಪೂರ್ಣವಾಗಲಿ ; ಬರಿ ಪ್ರಕೃತಿ ವಿಲಾಸವಾಗದಿರಲಿ - ಎಂಬುದೇ ಕಾವ್ಯೋದ್ಯೋಗ' ಎಂಬ ಮಾತನ್ನು ಬೇಂದ್ರೆ ಇಲ್ಲಿ ಮರೆತಿಲ್ಲ (ಸಾ.ವಿ.ಸ್ವ., ಪು. ೮೫) 'ಶ್ರಾವಣಾ ಬಂತು ಕಾಡಿಗೆ' ಕವಿತೆ ಬೇಂದ್ರೆ ಸೂಚಿಸುವಂತೆ 'ಆನಂದ ಗೀತ'. ಶ್ರಾವಣ ಮಾಸದ ಪರಿಸರ ಆಕಾಶ, ಭೂಮಿ, ಮನೆಮನೆ, ಮನಸ್ಸು ಇವುಗಳ ಮೇಲೆ ಉಂಟುಮಾಡುವ ಪರಿಣಾಮದ ಚಿತ್ರ ಇಲ್ಲಿದೆ ಎಂದು ಭಾವ ಸಂದರ್ಭದಲ್ಲಿ ಸೂಚಿಸುತ್ತಾರೆ. ಕಾಡು, ಬೀಡು, ನಾಡು, ಕಡಲು, ಘಟ್ಟ, ರಾಜ್ಯ, ಬಾನು, ಹೊಳೆ, ಊರು, ಕೇರಿ, ಮನೆ, ಮನ - ಹೀಗೆ ಅಖಂಡ ಪರಿಸರಕ್ಕೆ ಎಲ್ಲ ನೆಲೆಗಳಲ್ಲೂ ಪ್ರಾಪ್ತವಾದ ಆನಂದ ಇಲ್ಲಿ ಗೀತೆಯಾಗಿ ಮೈಪಡೆದಿದೆ.

ಶ್ರಾವಣ ಬಂತು ಊರಿಗೆ! ಕೇರಿ ಕೇರಿಗೆ!

....

ಶ್ರಾವಣ ಬಂತು ಮನಿಮನಿಗೆ ! ಕೂಡಿ ದನಿದನಿಗೆ!
ಮನದ ನನಿಕೊನಿಗೆ!
ಒಡೆದಾವ ಹಾಡೂ! ರಸ ಉಕ್ಕತಾವ ನೋಡು
ಶ್ರಾವಣಾ ಬಂತು.
ಬೆಟ್ಟ ತೊಟ್ಟಾವ ಕುತನಿಯ ಅಂಗಿ।
ಹಸಿರು ನೋಢ ತಂಗಿ ।

....

ಬನಬನ ನೋಡು ಈಗ ಹ್ಯಾಂಗ ।

....

ಹಸಿರುಟ್ಟ ಬಸುರಿಯ ಹಾಂಗ ।

ನೆಲಾ ಹೊಲಾ ಹ್ಯಾಂಗ ।

ಅರಿಸಿಣ ಒಡೆಧಾಂಗ ।

ಹೊಮ್ಮತಾವ । ಬಂಗಾರ ಚಿಮ್ಮತಾವ ॥

....

ಜಗದ್ಗುರು ಹುಟ್ಟಿದ ಮಾಸ ।

ಕಟ್ಟಿ ನೂರು ವೇಷ ।

ಕೊಟ್ಟ ಸಂತೋಷ ।

ಕುಣಿತದ । ತಾನಽನ ದಣಿತದ ।[೪೨]

ಈ ಮೇಲಿನ ಕಾವ್ಯಭಾಗ ಸಮಷ್ಟಿ ಪರಿಸರ ಶ್ರಾವಣಾನ ಆಗಮನದಿಂದ ಹರ್ಷಗೊಂಡ ಅನುಭವವನ್ನು ಪ್ರಕಟಿಸುತ್ತದೆ. ಇಂಥ ಅನುಭವದಲ್ಲಿ ಬೇಂದ್ರೆಯವರ ಕಾವ್ಯಸೃಷ್ಟಿ ಸಮೃದ್ಧಗೊಳ್ಳುತ್ತದೆ. ಜೀವದ ಒಳ ಮತ್ತು ಹೊರಗಿನ ಚೈತನ್ಯ ಸಂಭ್ರಮಗೊಳ್ಳುತ್ತದೆ. ಅಂಥ ಸಂಭ್ರಮದಲ್ಲಿ ಅಖಂಡ ಪರಿಸರ ಶ್ರೀಮಂತಗೊಳ್ಳುತ್ತದೆ. ಸಾಮರಸ್ಯ ಬದುಕಿನ ಹದ ನಿರ್ಮಾಣಗೊಳ್ಳುತ್ತದೆ. ಜಗದ್ಗುರು ಹುಟ್ಟಿದ ಈ ಮಾಸ ತರುವ ಸಂತೋಷವು ಸೃಷ್ಟಿಕ್ರಿಯೆಯ ಸೆಲೆಯಾಗಿ ಕ್ರಿಯಾಶೀಲವಾಗುತ್ತದೆ.

'ಮಳೆ', 'ಚಿತ್ತಿಯ ಮಳೆಯ ಸಂಜೆ', 'ಚಳಿಯಾಕೆ', 'ಚಳಿ ಇರಲಿ ಮಳೆ ಇರಲಿ', 'ಓಲೆ', 'ಮನಸುಖರಾಯನ ಮಗಳು' - ಇನ್ನೂ ಮೊದಲಾದ ಕವಿತೆಗಳಲ್ಲಿ ಬೇಂದ್ರೆಯವರು ನಿಸರ್ಗಾನುಭವವನ್ನು ಪ್ರಕಟಿಸಿದ್ದಾರೆ. 'ಚಳಿ ಇರಲಿ ಮಳೆ ಬರಲಿ' ಎಂಬ ಕವಿತೆಯಂತೂ ಅವರ ಪರಿಸರ ದೃಷ್ಟಿಯ, ನಿಸರ್ಗ ಆಸ್ವಾದನೆಯ ಅಂತರಾಳವನ್ನೇ ವ್ಯಂಜಿಸುತ್ತದೆ.

ಚಳಿ ಇರಲಿ ಮಳೆ ಬರಲಿ

ಮಂಜು ಸುರಿಯುತಲಿರಲಿ

ಬಿಸಿಲು ಕುದಿಸುತಲಿರಲಿ

ಮುಮ್ಮುಖದ ಋತುಮಾನ ಹೇಗು ಇರಲಿsss

ನಗುತ ಒಲಿವೆವು ನಾವು

ನಗುತ ಒಲಿಸುವೆವುsss

ಏನೆ ಕಷ್ಟವು ಬರಲಿ ; ಎಂಥ ನಷ್ಟವೆ ಇರಲಿ

ಇಷ್ಟವು ಅನಿಷ್ಟವೂ ಕೂಡಿ ಬರಲಿss

ದುಮ್ಮಾನ ಕಳೆವಂತೆ ಸುಮ್ಮಾನ ಹೊಳೆವಂತೆ

ಹಾಡಿ ನಲಿವೆವು ನಾವು

ಹಾಡಿ ನಲಿಸುವೆವುsss.[೪೩]

ಇದು ಬೇಂದ್ರೆ ನಿಸರ್ಗ ಕವಿತೆಗಳ ಆಳದ ಧ್ವನಿ. ದನಿ. ಅಭೀಪ್ಸೆ ಹಾಗೂ ನಿವೇದನೆ. ಇಂಥ ಸಂವೇದನೆಯ ಕಾವ್ಯದಲ್ಲಿಯೇ ಬೇಂದ್ರೆಯವರ ನಿಸರ್ಗ ದೃಷ್ಟಿ ಶೋಧಿತಗೊಳ್ಳುತ್ತದೆ.

ಅಭಿನ್ನ ಪರಿಸರತತ್ವವೊಂದು 'ಕಣ್ಣು ತಿಳಿ ಆದರಽ ಎಲ್ಲಾ ತಿಳಿ' ಕವನದಲ್ಲಿ ಗರ್ಭೀಕರಣಗೊಂಡಿದೆ. ಈ ತತ್ವ ಅಧ್ಯಯನದ ತೆಕ್ಕೆಯನ್ನು ಮೀರಿ, ಅತೀತವಾದ ನೆಲೆಯಲ್ಲಿ ಚಿಂತಿತವಾಗುತ್ತದೆ. ಪೂರ್ವದ ಅನುಭಾವಿ ಚಿಂತನೆ ಅವಿಚ್ಛಿನ್ನವಾಗಿ ಸಾಂದ್ರಗೊಂಡಿರುವ ಮಾದರಿ ಇದು. ಅಖಂಡ ಪರಿಸರ ಮಾನವನ ಹಸ್ತಕ್ಷೇಪದಿಂದ ಕದಡಿಹೋಗಿರುವ, ಭಿನ್ನಗೊಂಡಿರುವ ಚಿತ್ರದಿಂದ ಆರಂಭವಾಗುವ ಈ ಕವಿತೆ ತನ್ನ ಮೂಲಸ್ಥಿತಿಯನ್ನು ಮತ್ತೆ ಪಡೆಯುವ ಕಡೆಗೆ ಚಲಿಸುತ್ತದೆ.

ಪಂಚ ಮಹಾಭೂತಗಳು ಪರಸ್ಪರ ಒಂದು ಮತ್ತೊಂದರ ಸಂಬಂಧವನ್ನು ಹೊಂದಿರುವುದರೊಂದಿಗೆ ತನಗಾದ ಗಾಯಗಳನ್ನು ಸರಿಪಡಿಸಿಕೊಳ್ಳುವ ಕ್ರಮವೊಂದು ಇಲ್ಲಿ ಕಾಣಿಸುತ್ತದೆ.

ಕದಡು ನೀರಾಗ - ಕೈ ಹಾಕಿ - ಕಲಕಬ್ಯಾಡ್ರಿ
ಸುಮ್ಮನೆ ಕೂತ ನೋಡ್ರಿ
ನೆಲಕ್ಕ ನೆಲಾ ಕೂಡತದ - ಜಲಕ್ಕ ಜಲಾ ಕೂಡಿತಾದ
ಅದಕ್ಕ ಗೊತ್ತದ ಅದರ ಬೇರು
ನಾವಽ ಕಲಕತೇವಿ ನೀರು.
ಹೊಲಸು ಕಳೀತೈತಿ ಮಣ್ಣು
ಹೊಲಸು ತೊಳೀತೈತಿ ನೀರು
ಹೊಲಸು ಹಾರಸತೈತಿ ಗಾಳಿ
ಹೊಲಸು ಸುಡತೈತಿ ಬಿಸಿಲು
ಆಕಾಶದ ಸೊನ್ನೀ ಒಳಗಽ
ಯಾವದೋ ಸನ್ನಿಹೊಕ್ಕೈತಿ
ಅದರಾಗ ಸಿಕ್ಕೈತಿ ನಮ್ಮ ಮನಸು.[೪೪]

ಪಂಚ ಮಹಾಭೂತಗಳ ಸಾಮರಸ್ಯದಿಂದ ಕದಡಿಹೋಗಿರುವ ಪರಿಸರ ಮತ್ತೆ ಒಂದು ಒಂದನ್ನು ಕೂಡುವ ಮಾರ್ಗಾಂತರಗಳನ್ನು ವ್ಯಂಜಿಸುತ್ತದೆ. ಇದು ಇಡೀ ವಿಶ್ವ ಚೈತನ್ಯದ ಆಟದಲ್ಲಿ ತೊಡಗಿರುವಂತೆ ಕಾಣುತ್ತಲೆ ತನ್ನ ಗಾಯಗಳನ್ನು ವಾಸಿಮಾಡಿಕೊಳ್ಳುವ ಪ್ರಕ್ರಿಯೆಗೆ ಇದು ಉತ್ತಮ ಉದಾಹರಣೆಯಾಗುತ್ತದೆ.

'ಆಕಾಶದ ಸೊನ್ನೀ ಒಳಗಽ ಹೊಕ್ಕ ಯಾವುದೋ ಸನ್ನಿಯಿಂದ ಭೂಮಿಗೆ ಏರಿದ ನಂಜು ಇನ್ನೂ ಇಳಿದಿಲ್ಲ' ವಾದ್ದರಿಂದ ಕತ್ತಲು ಬೆಳಕಿನ ಮುಖಾಮುಖಿ ಅನಿವಾರ್ಯವಾಗಿದೆ. ಅಂಥ ಮುಖಾಮುಖಿಯಲ್ಲಿ ಕಾಣುವ 'ಕದಡದ ನೀರು' ಬೆಳಕಿನ ಬೇರುಗಳು ಕಾಣಿಸುತ್ತವೆ.

ಇದು ನಮ್ಮ 'ಕಣ್ಣು ತಿಳೀ ಆದರ' ಅಂದರೆ ನಮ್ಮ ಕಣ್ಣಿಗೆ ಹತ್ತಿರುವ ನಂಜಿನ ಕಾಮಾಲೆ 'ತಿಳಿ' ಪಾರದರ್ಶಕವಾದರೆ ಮಾತ್ರ ಕಾಣುವ ದಾರ್ಶನಿಕತೆ. 'ತಿಳೀ ಆದರ, ಎಲ್ಲಾ ತಿಳಿ'ಯುತ್ತದೆ. ನೋಡೋದು -

ಕೂಡೋದು, ತೋರೋದು, ಮೂಡೋದು, ಏಕಸ್ವರಾ ಆಗಿ ದಿನದಿನಾ ಬೆಳೆಯು ಹೊಸದೊಂದು ಬನ, ಪರಿಸರ ಸೃಷ್ಟಿಯಾಗುತ್ತದೆ.

ಇದು ಎಲ್ಲವೂ ಪರಸ್ಪರ ಹೊಂದಿಕೊಂಡಿರುವ ಸಮಗ್ರ ಪರಿಸರ ಸಂಬಂಧ. ಈ ಸಂಬಂಧದಲ್ಲಿ ಬೆಳಕು ಬಾಳಾಗುತ್ತದೆ. ಕದಡದ ನೀರು ಕಾಣುತ್ತದೆ. ಅಲ್ಲಿ ಹೊಸ ಗುಡಿ ನಿರ್ಮಾಣಗೊಳ್ಳುತ್ತದೆ. ಕಣ್ಣು ತಿಳಿಗೊಳ್ಳುತ್ತದೆ. ಆ ತಿಳಿಯಲ್ಲಿ ತಿಳಿವಳಿಕೆಯಲ್ಲಿ ಅರಿವಿನಲ್ಲಿ "ಕದಡು ನೀರಾಗ - ಕೈ ಹಾಕಿ ಕಲಕ'ಬಾರದೆಂಬ ವಿವೇಕ ಮೂಡುತ್ತದೆ. ಈ ವಿವೇಕದಲ್ಲಿ 'ನೆಲಕ್ಕ ನೆಲ ಕೂಡುವ, ಜಲಕ್ಕ ಜಲಾ ಕೂಡುವ' ಪರಿಸರ ದಾರ್ಶನಿಕತೆ ಮೈದೋರುತ್ತದೆ.

..... ವಿರಹವೇ ನರಕ, ಮಿಲನವೇ ಸ್ವರ್ಗ ಎಂಬೀ ಮಾತಿನಲ್ಲಿಯ ಅರ್ಥವನ್ನು
ಇನ್ನೂ ಪೂರ್ಣವಾಗಿ ಈ ಜಗತ್ತು ಅರಿತುಕೊಳ್ಳಬೇಕಾಗಿದೆ.

..... ಸಮಸ್ತ ಸೃಷ್ಟಿ ಪ್ರೇಮದ ಪ್ರಸೂತಿಯಾಗಿದೆ ; ಅಲ್ಲಿ ಪ್ರೇಮವೇ ಇರದಿದ್ದರೆ
ಅದೊಂದು ಶೂನ್ಯವನ್ನೇ ಹೊರತರುವ ಕೇವಲ ಶ್ರಮವೇ ಸರಿ.[೪೫]

ಈ ಮೇಲಿನ ಉಲ್ಲೇಖದಲ್ಲಿಯೂ ಅಖಂಡ ಜಗತ್ತು ಕೂಡಿಬಾಳುವ, ಜೀವನ ಪ್ರೀತಿ, ಪರಿಸರ ತತ್ವವನ್ನೇ ಬೇಂದ್ರೆ ಧ್ಯಾನಿಸಿದ್ದಾರೆ. ಶೋಧಿಸಿಕೊಳ್ಳುತ್ತಾರೆ. ಈ ತತ್ವ, ಪ್ರೀತಿಗಳೇ ಅವರ ಕಾವ್ಯ ತತ್ವವಾಗಿ ಅನಾವರಣಗೊಳ್ಳುತ್ತದೆ. ಇದು ಬೇಂದ್ರೆಯವರಿಗೆ ಸಿದ್ಧಿಸಿದ ಸಿದ್ಧಿ. ಈ ವಿಷಯವನ್ನು ಕುರಿತು ವಿಸ್ತೃತವಾದ ಅಧ್ಯಯನವನ್ನು ಮಾಡಲು ವಿಫುಲವಾದ ಅವಕಾಶ ಇದೆ.

ಅಡಿಟಿಪ್ಪಣಿ

೧. ಇಂದಿರಾಗಾಂಧಿ ; ವಿಜ್ಞಾನ ಮತ್ತು ಅಭಿವೃದ್ಧಿಯ ಸಮಸ್ಯೆಗಳು, "ವಿಜ್ಞಾನ ಮತ್ತು ಸಮಾಜ : ಒಂದು ವಿಚಾರ ಧಾರೆ", ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರು, ೧೯೭೭, ಪು. ೧೫೪.
೨. ಶಿವರಾಮ ಕಾರಂತ (ಅನು) ; ನಮ್ಮೆಲ್ಲರಿಗೂ ಒಂದೇ ಭವಿಷ್ಯ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೯, ಪು. ೨-೭.
೩. ಮಣಿವಾಸಕಮ್ ಎಸ್., ನಾಗೇಶ ಹೆಗಡೆ (ಅನು) ; ಗಾಳಿಗೆ ವಿಷ ನೀರಿಗೆ ವಿಷ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೨೦೦೨, ಪು. ೫.
೪. ಅಂಬಿಕಾತನಯದತ್ತ ; ಗಂಗಾವತರಣ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೧, ಪು. ೨.
೫. - ಅದೇ -, ಪು. ೨-೩.
೬. ಮಣಿವಾಸಕಮ್ ಎಸ್., ನಾಗೇಶ ಹೆಗಡೆ (ಅನು) ; ಗಾಳಿಗೆ ವಿಷ ನೀರಿಗೆ ವಿಷ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೨೦೦೨, ಪು. ೬೦.
೭. ಅಂಬಿಕಾತನಯದತ್ತ ; ಗಂಗಾವತರಣ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೧, ಪು. ೬-೭.
೮. - ಅದೇ -, ಪು. ೧-೧೦೮.
೯. - ಅದೇ - ; ಸೂರ್ಯಪಾನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬, ಪು. ಸಂದರ್ಭ ಸೂಚಿ.
೧೦. - ಅದೇ -, ಪು. ೪೩.
೧೧. - ಅದೇ -, ಪು. ೪೫.
೧೨. ವಾಮನಬೇಂದ್ರೆ (ಸಂ) ; ಔದುಂಬರಗಾಥೆ, ಸಂಪುಟ ೪, ವಿನ್ಯಾಸ, ವರಕವಿ ಡಾ|| ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩, ಪು. ೨೨.
೧೩. ಅಂಬಿಕಾತನಯದತ್ತ ; ಹೃದಯ ಸಮುದ್ರ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬, ಪು. ೫೮.

೧೪. ಮಣಿವಾಸಕಮ್ ಎನ್., ನಾಗೇಶ ಹೆಗಡೆ (ಅನು) ; ಗಾಳಿಗೆ ವಿಷ ನೀರಿಗೆ ವಿಷ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೨೦೦೨, ಪು. ೯೭.

೧೫. ಶಿವರಾಮ ಕಾರಂತ ; ಸ್ವಾರ್ಥಿ ಮಾನವ, ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರು, ೧೯೮೧, ಪು. ೨೭.

೧೬. ವಾಮನಬೇಂದ್ರೆ (ಸಂ) ; ಅಂಬಿಕಾತನಯದತ್ತರ ಸಖೀಗೀತ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೮೭, ಪು. ೧೦೪.

೧೭. - ಅದೇ -, ಪು. ೯೭.

೧೮. ಅಂಬಿಕಾತನಯದತ್ತ ; ನಮನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೮, ಪು. ೧೪.

೧೯. - ಅದೇ -, ಪು. ೧೫.

೨೦. - ಅದೇ - ; ಮುಗಿಲ ಮಲ್ಲಿಗೆ, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೬೧, ಪು. ೪೫.

೨೧. - ಅದೇ -, ಪು. ೪೬.

೨೨. ಬೇಂದ್ರೆ ದ.ರಾ. ; ವಿಚಾರ ಮಂಜರಿ, ಗೀತಾ ಬುಕ್ ಹೌಸ್, ಮೈಸೂರು, ೧೯೭೯, ಪು. ೪೭.

೨೩. ಶಿವಾರೆಡ್ಡಿ ಕೆ.ಸಿ. ; ಕನ್ನಡದ ಹಾಡು ಪಾಡು, ಅಧ್ಯಯನ ಮಂಡಲ, ಬೆಂಗಳೂರು, ೨೦೦೩, ಪು. ೧೦೨.

೨೪. ವಾಮನಬೇಂದ್ರೆ (ಸಂ) ; ಸಾಹಿತ್ಯದ ವಿರಾಟ್ ಸ್ವರೂಪ, ದ.ರಾ. ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೪, ಪು. ೫.

೨೫. ಅಂಬಿಕಾತನಯದತ್ತ ; ಯಕ್ಷ-ಯಕ್ಷಿ, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೬೨, ಪು. ೪೭.

೨೬. ಬೇಂದ್ರೆ ದ.ರಾ. ; ವಿಚಾರ ಮಂಜರಿ; ಗೀತಾ ಬುಕ್ ಹೌಸ್, ಮೈಸೂರು, ೧೯೭೯, ಪು. ೩೮.

೨೭. - ಅದೇ -, ಪು. ೪೦.

೨೮. ಅಂಬಿಕಾತನಯದತ್ತ ; ಸೂರ್ಯಪಾನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬, ಪು. ೬೦.

೨೯. ಶಿವಾರೆಡ್ಡಿ ಕೆ.ಸಿ. ; ಕನ್ನಡದ ಹಾಡು ಪಾಡು, ಅಧ್ಯಯನ ಮಂಡಲ, ಬೆಂಗಳೂರು, ೨೦೦೩, ಪು. ೭೭-೭೮.

೩೦. ಅಂಬಿಕಾತನಯದತ್ತ ; ನಾದಲೀಲೆ, ಮಾಧವ ಸನ್ಸ್, ಬೆಂಗಳೂರು, ೧೯೪೬, ಪು. ಭಾವ ಸಂದರ್ಭ ಸೂಚಿ.

೩೧. - ಅದೇ - ; ಗರಿ, ಶ್ರೀಮಾತಾ ಪ್ರಕಾಶನ, ಸಾಧನಕೇರಿ, ಧಾರವಾಡ, ೧೯೯೩, ಪು. ೧೦೭-೧೦೮.

೩೨. - ಅದೇ -, ಪು. ೧೦೭.

೩೩. ಶಿವಾರೆಡ್ಡಿ ಕೆ.ಸಿ. (ಸಂ) : ಶತಮಾನದ ಕವಿತೆ ಜೋಗಿ, ಅಂಬಿಕಾತನಯದತ್ತ, 'ಜೋಗಿಯ ಶಕ್ತಿ ಮತ್ತು ಐಬು' - ಪಿ. ಲಂಕೇಶ್, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೯, ಪು. ೧೨೦-೧೨೩.

೩೪. ವಾಮನ ಬೇಂದ್ರೆ (ಸಂ) ; ಅಂಬಿಕಾತನಯದತ್ತರ ಗಂಗಾವತರಣ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೮೯, ಪು. ೭೬.

೩೫. - ಅದೇ -, ಪು. ೭೭.

೩೬. ಬೇಂದ್ರೆ ದ.ರಾ. ; ಗರಿ, ಶ್ರೀಮಾತಾ ಪ್ರಕಾಶನ, ಸಾಧನಕೇರಿ, ಧಾರವಾಡ, ೧೯೯೩, ಪು. ೫-೬.

೩೭. - ಅದೇ -, ಪು. ೧೧೪-೧೧೫.

೩೮. ಅಂಬಿಕಾತನಯದತ್ತ ; ಸೂರ್ಯಪಾನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬, ಪು. ೧೦೨.

೩೯. - ಅದೇ - ; ನಾದಲೀಲೆ, ಮಾಧವ ಸನ್ಸ್, ಬೆಂಗಳೂರು, ೧೯೪೬, ಪು. ೨೬.

೪೦. - ಅದೇ - ; ಉಯ್ಯಾಲೆ, ಕರ್ನಾಟಕ ಬುಕ್ ಡಿಪೋ, ಗೌಳಿಗುಡ್ಡ, ಹೈದರಾಬಾದ (ದಕ್ಷಿಣ), ೧೯೩೮, ಪು. ೭೭.

೪೧. - ಅದೇ - ; ಸಖೀಗೀತ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೧, ಪು. ೭೩-೭೫.

೪೨. ಅಂಬಿಕಾತನಯದತ್ತ ; ಹಾಡುಪಾಡು, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬, ಪು. ೩೪-೩೬.

೪೩. - ಅದೇ - ; ಸೂರ್ಯಪಾನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬, ಪು. ೯೨.

೪೪. - ಅದೇ - ; ಮುಗಿಲ ಮಲ್ಲಿಗೆ, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೬೧, ಪು. ೮.

೪೫. - ಅದೇ - ; ಅಂಬಿಕಾತನಯದತ್ತರ ಸಮಗ್ರ ಕಾವ್ಯ ಸಿದ್ಧಾಂತ, ಸಂಪುಟ ೬, ವರಕವಿ ಡಾ|| ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.

ಅಧ್ಯಾಯ – ೪

ಕುವೆಂಪು ಕಾವ್ಯ : ಪರಿಸರ

೧. ಪ್ರವೇಶ

೨. ರೊಮ್ಯಾಂಟಿಸಿಸಂ ಮತ್ತು ಕುವೆಂಪು ಅವರ ಕಾವ್ಯ

೩. ಕಾವ್ಯ - ಪ್ರಕೃತಿಗಳ ಅಭಿನ್ನತೆ

೪. ಪ್ರಕೃತಿಯ ಬಹುಮುಖತೆ

೫. ಸ್ಥಳೀಯತೆ, ಪ್ರಕೃತಿ ಸೌಂದರ್ಯ ಹಾಗೂ ಸಾಂಪ್ರದಾಯಿಕ ಜಡ ಮೌಲ್ಯಗಳ ಪ್ರತಿರೋಧ

೬. ಜೀವ ವಿಕಾಸ ಹಾಗೂ ಪರಿಸರ

೭. ನಿಸರ್ಗ ಹಾಗೂ ಜೀವ ಸಂಘರ್ಷ

೮. ಯುದ್ಧ, ಯಂತ್ರ ನಾಗರಿಕತೆ ಮತ್ತು ಪರಿಸರ

೯. ಅತಿಭೋಗ ರೋಗ, ನಗರಿಕರಣ ಮತ್ತು ಪರಿಸರ

೧೦. ಜನಸಂಖ್ಯಾ ಸ್ಫೋಟ ಮತ್ತು ಪರಿಸರ

ಹೊಲದಂದದಿ ಹಬ್ಬಿದೆ ದೇವರ ಮೆಯ್
ತೆನೆ ತೆನೆ ಜೋಳದ ನವಿರ್ನಿಮಿರಿ ;
ತೆರೆತೆರೆ ; ಪೊದೆ ಪೊದೆ ; ಮರ ಮರವಾಗಿದೆ ;
ಮೊಗವದೊ ದಿಗುತಟದೆದ್ದ ಗಿರಿ!

– ಕುವೆಂಪು

ಕುವೆಂಪು ಕಾವ್ಯ : ಪರಿಸರ

೧. ಪ್ರವೇಶ

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ನಿಂತು ಕುವೆಂಪು ಕೃತಿಗಳ ಕಡೆಗೆ ಕಣ್ಣು ಹಾಯಿಸಿದರೆ ಧುತ್ತನೆ ಎದುರಾಗುವ ಮುಖ್ಯ ಆತಂಕವೆಂದರೆ ಆ ಕಾಲದ ಜೀವವೈವಿಧ್ಯತೆಗಳು ಅಗಾಧ ಪ್ರಮಾಣದಲ್ಲಿ ಅವನತಿಯ ಕಡೆಗೆ ಚಲಿಸಿರುವುದು. ವಸಾಹತುಶಾಹಿ ಸಂದರ್ಭ ಹಾಗೂ ಸ್ವಾತಂತ್ರ್ಯಾನಂತರದ ಅಭಿವೃದ್ಧಿ, ಜನಸಂಖ್ಯಾ ಸ್ಫೋಟ, ಜಲಾಶಯಗಳ ನಿರ್ಮಾಣ, ಏಕರೂಪಿ ಪ್ಲಾಂಟೇಷನ್‌ಗಳ ರೋಗಗ್ರಸ್ತ ಅರಣ್ಯ ನೀತಿಗಳು, ಗಣಿಗಾರಿಕೆ, ವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆ, ಕೃಷಿ ಭೂಮಿಗಾಗಿ ಅರಣ್ಯದ ಒತ್ತುವರಿ, ಮನುಷ್ಯನ ದಾಹಕ್ಕಾಗಿ ಅರಣ್ಯದಲ್ಲಿನ ಮರ, ಔಷಧಿ ಸಸ್ಯಗಳು ಹಾಗೂ ಪ್ರಾಣಿಗಳ ಬೇಟೆಯಿಂದ ಎದುರಾಗಿರುವ ಆತಂಕಗಳು ಅಂದಿನ ಜೀವ ವೈವಿಧ್ಯತೆಯನ್ನು ವಿನಾಶದಂಚಿಗೆ ತಳ್ಳಿರುವ ದೃಢವಾಸ್ತವ ಕಥನವನ್ನೇ ಅವರ ಸಾಹಿತ್ಯ ಮುಂದಿಡುತ್ತದೆ. ರೈತಾಪಿ ಸಮುದಾಯ ತಮ್ಮ ತಮ್ಮ ತೋಟ, ಗದ್ದೆ, ಹೊಲಗಳಲ್ಲಿ ಬೆಳೆಯುತ್ತಿದ್ದ ವೈವಿಧ್ಯಮಯ ಬೆಳೆಗಳ ಅವನತಿಯ ಪ್ರಮಾಣವನ್ನು ಅರಿಯಲು ಪ್ರಸ್ತುತ ಸಂದರ್ಭದಲ್ಲಿ ನಿಂತು ಗತಕಾಲದ ಕಡೆ ಮುಖಮಾಡಿದರೆ ರೌದ್ರದಾರುಣ ಚಿತ್ರವೊಂದು ಕಾಣಿಸುತ್ತದೆ. ಕುವೆಂಪು ಅವರ ಒಟ್ಟು ಸಾಹಿತ್ಯದಲ್ಲಿ ಕೇಂದ್ರ ಪಾತ್ರಗಳಾಗಿ ಚಲಿಸುವ ಸಸ್ಯ ಪ್ರಪಂಚ, ಪ್ರಾಣಿ - ಪಕ್ಷಿಗಳ ಪ್ರಪಂಚ, ಕ್ರಿಮಿ-ಕೀಟ ಮೊದಲಾದ ಅನೇಕ ಪ್ರಭೇದಗಳು ಕಣ್ಣಿಗೆ ಕಾಣದಷ್ಟು ಅಪರೂಪವಾಗಿರುವ ಪರಿಸರವನ್ನು ಇಂದು ಕಾಣುತ್ತಿದ್ದೇವೆ.

ಕುವೆಂಪು ಅವರ ಕೃತಿ ಸಮೂಹದಲ್ಲಿ ಕಾಣಿಸಿಕೊಳ್ಳುವ ಜೀವವೈವಿಧ್ಯತೆಯ ಗಣತಿಯನ್ನು ನಡೆಸಿದರೆ ನಮ್ಮ ಪರಿಸರದ ದುರಂತ ಚಿತ್ರವೊಂದು ಮೂಡುತ್ತದೆ. ಮದುಮಗಳು ಕಾದಂಬರಿಯ ಗುತ್ತಿಯ ಪಯಣವೊಂದರಲ್ಲಿಯೇ ಕಾಣಿಸಿಕೊಳ್ಳುವ ಜೀವವೈವಿಧ್ಯತೆಗಳು ಪರಿಸರದ ಸಮೃದ್ಧತೆಯನ್ನು ಸೂಚಿಸುತ್ತವೆ. ಪ್ರಸ್ತುತ ವಾಸ್ತವ ಪ್ರಪಂಚದಲ್ಲಿ ಆ ಮಟ್ಟದಲ್ಲಿ ಕಾಣಲಾರದ, ನಿರ್ವಂಶದ ಹಾದಿ ಹಿಡಿದಿರುವ ಚಿತ್ರಗಳು ಮಲೆನಾಡಿನುದ್ದಕ್ಕೂ ಕಾಣಸಿಗುತ್ತವೆ. ಕಾಡಿನ ದಟ್ಟತೆಯಾಗಲಿ, ಅಲ್ಲಿ ಬರುವ ಜಲತಾಣಗಳಾಗಲಿ, ಹಸಿರಿನ ಸಮೃದ್ಧತೆಯ ಪರಿಸರವಾಗಲಿ, ಜೀವಜಾಲದ ವೈವಿಧ್ಯತೆಯನ್ನಾಗಲಿ ಕಾಣಲಾರದ ಪ್ರಸ್ತುತ ಸಂದರ್ಭದಲ್ಲಿ ಕುವೆಂಪು ಅವರ ಕೃತಿಗಳ ಜೀವಕೇಂದ್ರಿತ ಅಧ್ಯಯನ ಹೆಚ್ಚು ಮಹತ್ವ ಪಡೆಯುತ್ತದೆ.

ಆಧುನಿಕ ಕೃಷಿ ಪದ್ಧತಿಯು ಅಭಿವೃದ್ಧಿಯ ನೆಪದಲ್ಲಿ ಬಳಸಿದ ರಸಾಯನಿಕಗಳಿಂದ ಅನೇಕ ಜಲಚರಗಳು, ಪ್ರಾಣಿ ಪಕ್ಷಿಗಳು, ನಾಮಾವಶೇಷವಿಲ್ಲದೆ ಅವಸಾನಗೊಂಡಿವೆ. ವಾಣಿಜ್ಯೀಕೃತ ಬೆಳೆಗಳ ಬೆನ್ನು ಹತ್ತಿದ ರೈತನ ದುರಾಸೆಯಿಂದಾಗಿಯೂ, ಇಬ್ಬಂದಿತನಗಳಿಂದಾಗಿಯೂ ಸ್ಥಳೀಯ ಕೃಷಿ ಪದ್ಧತಿ ಎಡಬಿಡಂಗಿ ಅವಸ್ಥೆಯನ್ನು ತಲುಪಿದೆ. ಹಾಗಾಗಿ ಸ್ಥಳೀಯ ಪಾರಂಪರಿಕ ಕೃಷಿ ಪದ್ಧತಿಗೆ ತಿಲಾಂಜಲಿಯನ್ನಿಟ್ಟ ರೈತಾಪಿ ಬದುಕು ಸ್ಥಳೀಯ

ಅಗತ್ಯಗಳಿಗಾಗಿ ಕೃಷಿಯನ್ನು ಕೈಗೊಳ್ಳದೆ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಹಸಿವನ್ನು ತಣಿಸಲು ಮುಂದಾಗಿರುವುದರಿಂದ ಶುಂಠಿ, ವೆನಿಲಾ, ರಬ್ಬರ್ ಕೃಷಿ, ಪುಷ್ಪೋದ್ಯಮ ಮೊದಲಾದ ಅಗತ್ಯಗಳಿಗಾಗಿ ಸಿಕ್ಕಸಿಕ್ಕಲ್ಲಿ ಅರಣ್ಯ ಹಾಗೂ ಜಲತಾಣಗಳಿಗೆ ಧಕ್ಕೆಯನ್ನು ಉಂಟು ಮಾಡುತ್ತಿರುವುದರಿಂದ ಪರಿಸರ ಸಮತೋಲನಕ್ಕೆ ಮಾರಕವಾಗಿ ಪರಿಣಮಿಸಿದೆ. ಪ್ರತಿ ವರ್ಷ ಸರ್ಕಾರಿ ಇಲಾಖೆಗಳು ನಡೆಸುವ ಜೀವವೈವಿಧ್ಯತೆಗಳ ಗಣತಿಯ ಅಂಕಿ-ಸಂಖ್ಯೆಗಳು ಆಧುನಿಕ ಬದುಕು ಮುಖಮಾಡಿರುವ ದುರಂತಗಳ ಸರಮಾಲೆಯನ್ನೇ ತೆರೆದಿಡುವಂತೆ ಕಾಣುತ್ತದೆ. ಇಂಥ ಸಂದರ್ಭದಲ್ಲಿ ಕುವೆಂಪು ಅವರ ಕೃತಿಗಳನ್ನು ಜೀವಕೇಂದ್ರಿತ ಅಧ್ಯಯನಕ್ಕೆ ಒಳಪಡಿಸಿ ಅದರಿಂದ ಶೋಧಿಸಲ್ಪಡುವ ವಾಸ್ತವಾಂಶಗಳಿಂದ (ಸತ್ಯ) ಮನುಷ್ಯ ಮುನ್ನಡೆಯಬೇಕಾದ ಹೆಜ್ಜೆಗುರುತುಗಳನ್ನು ಕಟ್ಟಿಕೊಳ್ಳಲು ಮಾರ್ಗದರ್ಶಿಗಳಾಗುತ್ತವೆಂಬುದು ಈ ಅಧ್ಯಯನದ ಆಶಯಗಳಲ್ಲಿ ಒಂದು.

ಕುವೆಂಪು ಕಾವ್ಯ ಪ್ರಕೃತಿ ಅಥವಾ ಪರಿಸರದಲ್ಲಿಯೇ ಹುಟ್ಟಿದ್ದು. ಕವಿ ತನ್ನ ಬಾಲ್ಯದಲ್ಲಿ ಕಳೆದ ಜೀವನ, ಅನುಭವ ಹಾಗೂ ದರ್ಶನಗಳನ್ನೇ ತಮ್ಮ ಕಾವ್ಯದಲ್ಲಿ ಕಡೆದಿಟ್ಟಿದ್ದಾರೆ. ಅವರ ಕಾವ್ಯದಲ್ಲಿ ಅಭಿವ್ಯಕ್ತಗೊಂಡ ಪರಿಸರವು ಪರಂಪರೆಯಾಗಿ ಬಂದುದು. ಆ ಕಾವ್ಯದಲ್ಲಿ ಬಳಸಿದ ಭಾಷೆ, ಶೈಲಿ, ಛಂದಸ್ಸು ಲಯಗಳೆಲ್ಲವು ಪರಿಸರದಿಂದಲೇ ಹೆಕ್ಕಿ ಕಾವ್ಯವಾಗಿಸಿದಂತಹವು. ಹಾಗಾಗಿಯೇ ಅವರ ಕಾವ್ಯಕ್ಕೆ ಅನನ್ಯತೆ, ಅಸಾಮಾನ್ಯತೆಗಳು ಪ್ರಕೃತಿ ದತ್ತವಾಗಿಯೇ ಬಂದುಬಿಟ್ಟಿವೆ.

ಅವರ ಕಾವ್ಯದಲ್ಲಿ ಆಯಾಯ ಕಾಲಗಳಲ್ಲಿ ಕಂಡ ಪ್ರಕೃತಿಯ ದರ್ಶನಗಳನ್ನು ವಿಸ್ಮಯಗಳನ್ನು ನಿರಂತರವಾಗಿ ಕಾಣಿಸುತ್ತಾ ಹೋಗುತ್ತಾರೆ. ತಾನು ಕಂಡ ಸೂರ್ಯೋದಯ, ಸೂರ್ಯಾಸ್ತಗಳು, ಮಂಜಿನ ಕಡಲು, ಮಂಜಿನ ಹನಿ, ಅಸಂಖ್ಯ ವರ್ಣಗಳ ಹಸಿರು, ಅಷ್ಟೇ ಏಕೆ ಹಸಿರಿನ ಸಂತೆಯ ಚಿತ್ರಗಳು, ಪಶುಪಕ್ಷಿಗಳ ಕಲರವ, ಮಾರ್ದನಿಗಳು, ಮಳೆಯ ಗುಡುಗು, ಮಿಂಚು, ಆರ್ಭಟ ಹಾಗೂ ಅದರ ರೌದ್ರತೆ, ಬೇಟೆಯ ರೋಮಾಂಚಕ ಅನುಭವ ಮತ್ತು ವಿವರಗಳನ್ನು ಕುವೆಂಪು ಕಾಲಕಾಲಕ್ಕೆ ತಮ್ಮ ಕಾವ್ಯದಲ್ಲಿ ದಾಖಲಿಸುತ್ತಾ ಹೋಗುತ್ತಾರೆ. ಈ ಎಲ್ಲ ಕೃತಿಗಳಲ್ಲಿಯೂ ಸಹಜವಾಗಿಯೇ ಏಕಸೂತ್ರತೆಯೊಂದು ಪ್ರಾಪ್ತವಾಗಿದೆ. ಪ್ರಕೃತಿಯೊಂದಿಗಿನ ಸಂಬಂಧ ಮತ್ತು ಆಯ್ಕೆಗಳಲ್ಲಿ ವಿದ್ಯುದಾಲಿಂಗನೀಯ ಸಂಬಂಧವೊಂದು ಪ್ರವಹಿಸುವುದನ್ನು ಕಾಣಬಹುದು.

ಕುವೆಂಪು ಅವರು ಮಲೆನಾಡಿನಲ್ಲಿ ಹಾಗೂ ಮೈಸೂರಿನ ಹೊರವಲಯಗಳಲ್ಲಿ ಕಳೆದ ಅನುಭವಗಳು ಹಾಗೂ ಕಂಡ ಪ್ರಕೃತಿಯನ್ನು ಏಕತ್ರಗೊಳಿಸುವ ಕ್ರಮವು ವಿಶಿಷ್ಟವಾದುದು. ತಮ್ಮ ಬದುಕಿನುದ್ದಕ್ಕೂ ನಿಸರ್ಗದೊಂದಿಗಿನ ತನ್ಮಯತೆ, ಚಿಂತನೆ, ಆಧ್ಯಾತ್ಮದ ಅನುಭವಗಳನ್ನು ಈ ಕೃತಿಗಳಲ್ಲಿ ಅಭಿವ್ಯಕ್ತಿಸುತ್ತಾರೆ. ಆ ಅಭಿವ್ಯಕ್ತಿ ಯಾವ ಬಗೆಯದೆಂದರೆ ತಮ್ಮ ಮಲೆನಾಡಿನ ಪರಿಸರದ ವಿಶ್ವರೂಪವನ್ನೇ ತೆರೆದಿಡುವ ಮಾದರಿಯದು. ತನ್ನ ಸುತ್ತಲಿನ ಪ್ರದೇಶದ ಅಂಗುಲ ಅಂಗುಲವು ಈ ಕವಿ ಸಂವೇದನೆಗೆ ಚಿರಪರಿಚಿತ. ಅಲ್ಲಿನ ಪ್ರಾಣಿ, ಪಕ್ಷಿ, ಕೀಟ, ಸಸ್ಯ ಸಂಕುಲಗಳು ಚಿರಪರಿಚಿತ. ಇವೆಲ್ಲವು ತಮ್ಮ ಕೃತಿಗಳಲ್ಲಿ ಕೇಂದ್ರಸ್ಥಾನವನ್ನು ಪಡೆಯುವುದರ ಮೂಲಕ ಜೀವಕೇಂದ್ರಿತ ಅಂದರೆ ಪರಿಸರ ಕೇಂದ್ರಿತ ಕಾವ್ಯವನ್ನು ಕಟ್ಟಿದ ಏಕೈಕ ದೈತ್ಯ ಪ್ರತಿಭೆಯಂತೆ ಕುವೆಂಪು ಕಂಡು ಬರುತ್ತಾರೆ. ಪ್ರಕೃತಿಯಲ್ಲಿ ಸೌಂದರ್ಯವನ್ನು, ಜ್ಞಾನವನ್ನು, ಪ್ರತಿರೋಧವನ್ನು ಹಾಗೂ ಆಧ್ಯಾತ್ಮವನ್ನು ಒಟ್ಟಿಗೆ ಕಂಡ ಪ್ರತಿಭೆ ಇವರದು. ಆದ್ದರಿಂದಲೇ ಸೂರ್ಯೋದಯವನ್ನು ಕಂಡ ಕವಿಗೆ ನಿಸರ್ಗ 'ಆನಂದಮಯ ಈ ಜಗಹೃದಯ ಏತಕೆ ಭಯ ಮಾಣೊ ಸೂರ್ಯೋದಯ, ಚಂದ್ರೋದಯ ದೇವರ

ದಯೆ ಕಾಣೊ' ಎಂಬ ಚಿಂತನೆಯನ್ನು ನುಡಿಸುತ್ತದೆ. ಪ್ರಕೃತಿಯೊಂದಿಗಿನ ಪ್ರಶಾಂತತೆಯು ತಾನಳಿದ ಮೇಲೆಯೂ ಏನಾಗಬೇಕೆಂಬ ಬಯಕೆಯನ್ನು ಈ ಪ್ರತಿಭೆ ತನ್ನ ಬಾಲ್ಯದಲ್ಲಿಯೇ ನುಡಿದು ಬಿಟ್ಟಿದೆ.

ಸಹ್ಯಾದ್ರಿಯ ಪಸುರುಡೆಯ ಮಲೆನಾಡ ಬನಗಳಲಿ
ಮೊರೆವ ತೊರೆಯೆಡೆಯಲ್ಲಿ ಗುಡಿಸಲೊಂದಿರಲಿ
ಅಲ್ಲಿ ಗಿಳಿ ಗೊರವಂಕ ಕೋಗಿಲೆಗಳಿಂಚರವು
ಕಲೆಯುತಲೆಯಲೆಯಾಗಿ ತೇಲಿ ಬರುತಿರಲಿ
ಅಲ್ಲಿ ಬಳಿ ಪಸಲೆಯಲಿ ದನಗಳಂಬಾ ಎಂಬ
ದನಿಯು ದನ ಕಾಯುವನ ಕೊಳಲೊಡನೆ ಬರಲಿ
ಅಲ್ಲಿ ಸಿರಿಗನ್ನಡದ ಕಬ್ಬಗಳ ಹಬ್ಬಗಳು
ದಿನದಿನವು ಸವಿಯೂಟವಿಕ್ಕುತಿರಲೆನಗೆ

ಬಾಂದಳದಿ ಹಾರಿದರು ಬುವಿಯಲ್ಲಿ ಜಾರುತಿಹ
ರಸಿಕನಾಗಿಹನೊಬ್ಬ ಗೆಳೆಯನಿರಲೆನಗೆ
ಬೈಗಾಗೆ ನಮ್ಮೊಡನೆ ಗಳಪಿಯಲೆದಡ್ಡಾಡೆ
ಗೋಪಾಲನಾಗಿರುವ ತಿಮ್ಮನೆನಗಿರಲಿ !

ಮೇಲೆ ಬಾಳನು ಬಿಟ್ಟು ನಾನಳಿದು ಮರೆಯಾಗೆ
ನನ್ನಾಸೆ ಏನೆಂದು ಎಲ್ಲರರಿತಿರಲಿ :
ಸಗ್ಗವಿವನೊಳಗೊಂಡಿರಲು ಸಗ್ಗವೆನಗಿರಲಿ ;
ನರಕವಿವನೊಳಗೊಂಡಿರಲು ನರಕವಿರಲಿ![7]

ಪರಿಸರ ಸಂವೇದನೆಯ ಬಯಕೆಯಿದು. ಜೀವಕೇಂದ್ರಿತ ಪರಿಸರದ ಉನ್ನತ ತತ್ವವೊಂದು ಈ ಬಯಕೆಯ ಹಿಂದಿದೆ. ಇಂಥ ಉನ್ನತ ತತ್ವ ತಾನು ಬಾಳನ್ನು ಬಿಟ್ಟು ಮರೆಯಾದ ಮೇಲೆಯೂ ತನ್ನ ಆಸೆಯೇನೆಂದು ಎಲ್ಲರೂ ಅರಿಯಬೇಕೆಂಬ ಇಚ್ಛೆಯನ್ನು ಈ ಕವಿತೆ ಮುಂದಿಡುತ್ತದೆ. ಇಂಥ ತತ್ವವನ್ನು ನಿಸರ್ಗ ಕವಿಯಿಂದ ನುಡಿಸಿದೆ. ಈ ಬಯಕೆಯಲ್ಲಿ ಸಹಜ, ಸರಳ ಹಾಗೂ ಸೃಷ್ಟಿಕ್ರಿಯೆಯ ಸಂತೋಷ, ಸಂತೃಪ್ತಿಗಳು ಇವೆ. ಜೀವಕೇಂದ್ರಿತ ಪರಿಸರದ ಪ್ರಾರ್ಥನೆಯಂತಿದೆ 'ನನ್ನ ಬಯಕೆ' ಕವನ.

ಕಾಡ ಕವಿಯ ಕೊಳಲು ನಾಡಿನ ಜನರಿಗಾಗಿಯೂ ಮರಮಿಗಗಳಿಗಾಗಿಯೂ ಊದಿದೆ ಎಂಬ ಮಾತಿನಲ್ಲಿ ಕಾಡು ಮತ್ತು ನಾಡುಗಳ ಸಮನ್ವಯ ತತ್ವವು ಪ್ರಕಟವಾಗುತ್ತದೆ. ಕುವೆಂಪು ಅವರ ಇಂಥ ಕಾವ್ಯದಲ್ಲಿ ತನ್ನ ಪರಿಸರದ ಸೌಂದರ್ಯ ಹಾಗೂ ರೌದ್ರತೆಗಳು ಎರಡೂ ಅಭಿವ್ಯಕ್ತಗೊಂಡಿವೆ.

ಕುವೆಂಪು ಅವರ ಭಾವಗೀತೆಗಳು ಸೂರ್ಯೋದಯ, ಸೂರ್ಯಾಸ್ತಮ, ಚಂದ್ರೋದಯ, ವಸಂತ ಕಾಲದ ನಿಸರ್ಗದ ವೈಭವದ ವರ್ಣನೆ, ಮುಂಗಾರಿನ ಮೋಡಗಳ ವೈಭವ ಹಾಗೂ ಭೀಕರ ಮಳೆ, ಗುಡುಗು, ಸಿಡಿಲು, ಮಿಂಚುಗಳ ಆರ್ಭಟ. ಕಣಿವೆಗಳಲ್ಲಿ ತುಂಬಿರುವ ಮಂಜಿನ ಕಡಲುಗಳ ವರ್ಣನೆ, ಪಕ್ಷಿಗಳ ಗಾಯನಗಳನ್ನು

ಒಳಗೊಂಡಿದೆ. ಜನನಿಬಿಡವಾದ ಅರಣ್ಯ, ಪ್ರಕೃತಿ ಸೌಂದರ್ಯದ ನಡುವೆಯೇ ಹರಿಯುವ ತೊರೆ, ನದಿಗಳ ವರ್ಣನೆಗಳ ಭಾವಗೀತೆಗಳು ಪ್ರಕೃತಿಯ ಬಗೆಗಿನ ಪ್ರೀತಿ ಹಾಗೂ ಅಖಂಡ ಜೀವ ಸಂಕುಲಗಳ ಬಗೆಗಿನ ಗೌರವವನ್ನು ಮೂಡಿಸುತ್ತವೆ. ಇಂಥ ಗೌರವವನ್ನು ಇವರ ಪರಿಸರ ಚಿಂತನೆಯ ಮುಖ್ಯ ನೆಲೆಯೆಂದು ಗುರುತಿಸಿಕೊಳ್ಳಬಹುದು.

> ಮನುಷ್ಯರಿಂದ ಕಿಕ್ಕಿರಿದಿರುವ ಭೂಮಿಯನ್ನು - ದಾರಿಯ ದೆಸೆಯಿಂದ ಕಲ್ಲು ಮಣ್ಣುಗಳಿಂದ ಗಟ್ಟನೆ ಮಾಡಿ, ಅಲ್ಲಲ್ಲಿ ಬೆಳೆದಿರುವ ಕಸಕಡ್ಡಿಗಳನ್ನು ಕೆದರಿ ಕಿತ್ತಿ, ಬೆಳೆದು ನಿಂತಿರುವ ಮರಗಳನ್ನು ಕಡಿದು ಹಾಕಿ, ಅಲ್ಲಿ ವಾಸಿಸುವ ಪಶುಪಕ್ಷಿಗಳನ್ನು ಓಡಿಸಿ, ಸ್ವಚ್ಛವಾಗಿರುವ ಹವೆಯನ್ನು ಕಲ್ಲೆಣ್ಣೆ - ಕಲ್ಲಿದ್ದಲಿಗಳ ಹೊಗೆಯಿಂದ ತುಂಬಿ, ಅದರ ಅಂದಗೆಡಿಸಬೇಕೆಂದು ಲಕ್ಷಗಟ್ಟಲೆ ಜನರು ತಮ್ಮ ಕೈಮೀರಿ ಯತ್ನ ಮಾಡಿದ್ದರೂ, ಇಂಥ ಪಟ್ಟಣದೊಳಗೆ ಕೂಡ ವಸಂತಮಾಸವು ತನ್ನ ಮೀಸಲು ಸಿರಿಯಿಂದ ಮುಖವೆತ್ತಿಕೊಂಡು ಮೆರೆಯುತ್ತಲೇ ಇತ್ತು.
>
> ಏರುವ ಸೂರ್ಯ, ಮೈಗೆ ಚುರುಚುರು ಹತ್ತುವ ಬಿಸಿಲು, ಬೇಕು ಬೇಕೆನಿಸುವ ಸುಳಿಗಾಳಿ, ಕತ್ತರಿ ಕುರ್ಪಿಗಳ ಬಾಯಿಗೆ ಸಿಲುಕದೆ ಬೀದಿಯ ಹಾಸುಗಲ್ಲುಗಳ ಸಂದುಗಳಲ್ಲಿಯೂ, ವಿಶಾಲವಾದ ಬೀದಿಯ ಎರಡೂ ಮಗ್ಗಲಿನಲ್ಲಿಯೂ ಬೆಳೆದಿರುವ ಹಚ್ಚನ್ನ ಹುಲ್ಲು ; ಅರಳಿ ನಾನಾ ಬಗೆಯ ಸುಗಂಧವನ್ನು ಬೀರುವ ಹೂಗಿಡಗಳು ; ವಸಂತಮಾಸವು ಬಂತೆಂದು ಆನಂದದಿಂದ ಚಿಲಿಪಿಲಿಗುಟ್ಟುತ್ತ ತಮ್ಮ ತಮ್ಮ ಹೊಸ ಗೂಡುಗಳನ್ನು ಕಟ್ಟುವ ಸಂಭ್ರಮದಲ್ಲಿದ್ದ ಗುಬ್ಬಿ ಕಾಗೆಗಳು, ಸೂರ್ಯನ ಬಿಸಿಲಿನಿಂದ ಬೆಚ್ಚಗಾದ ಗೋಡೆಗಳ ಮೇಲೆ ಅಖಂಡವಾಗಿ ಗುಂಯಿಗಾಡುತ್ತಿರುವ ನೊಣಗಳ ಹಿಂಡುಗಳು, ಇವೆಲ್ಲವುಗಳಿಂದ ಆ ದಿನ ಆನಂದ ಸಾಮ್ರಾಜ್ಯವೇ ನೆಲಿಸಿದಂತಾಗಿತ್ತು. ಗಿಡ-ಮರ, ಪಶು-ಪಕ್ಷಿ, ಹುಳ - ಹುಪ್ಪಡಿ, ಮಕ್ಕಳು - ಮರಿ ಎಲ್ಲರಿಗೂ ಆನಂದ. ಇಂಥ ಸಮಯದಲ್ಲಿ ಕೂಡ ಜನರು - ನಾನಾ ಅಂಬುವ ಸಭ್ಯಗೃಹಸ್ಥರು, ಹೆಂಗಸರು, ಒಬ್ಬರನ್ನೊಬ್ಬರು ವಂಚಿಸುವ - ಕಾಡುವ ಕೆಲಸಗಳನ್ನು ಬಿಟ್ಟಿರಲಿಲ್ಲ. ವಸಂತಮಾಸದ ಈ ಮುಂಜಾವಿನ, ಬ್ರಾಹ್ಮೀ ಸಮಯವಾಗಲಿ, ದೇವರು ಎಲ್ಲ ಪ್ರಾಣಿಗಳ ಆನಂದಕ್ಕಾಗಿಯೇ ಕಲ್ಪಿಸಿರುವ ಸೃಷ್ಟಿ ಸೌಂದರ್ಯವಾಗಲಿ, ಆ ಸೌಂದರ್ಯದಿಂದ ಹೃದಯಕ್ಕಾಗುವ ಶಾಂತಿ ಸಮಾಧಾನಗಳಾಗಲಿ, ಜನರಿಗೆ ಪವಿತ್ರ ಮತ್ತು ಆತ್ಮವಿಚಾರಯೋಗ್ಯವೆಂದೆನಿಸಿರಲಿಲ್ಲ ; ಅಂತೆಯೇ ಒಬ್ಬರು ಇನ್ನೊಬ್ಬರನ್ನು ಹೇಗೆ ಅಡಿಯಾಳನ್ನಾಗಿ ಮಾಡಬೇಕೆಂಬುವ ದುಷ್ಟವಿಚಾರಗಳಲ್ಲಿಯೇ ಮುಳುಗಿದ್ದರು.[3]

ಮಹರ್ಷಿ ಟಾಲ್‌ಸ್ಟಾಯ್ ಅವರ ಅಮರ ಕೃತಿ 'ರಿಸರಕ್ಷನ್' ಕಾದಂಬರಿಯ ಈ ಮೇಲಿನ ಉದ್ಧರಣೆ ಮನುಷ್ಯ ಮತ್ತು ನಿಸರ್ಗ ಸಂಬಂಧಗಳನ್ನು ಒಮ್ಮೆಗೆ ಅನಾವರಣಗೊಳಿಸುತ್ತದೆ. ಮನುಷ್ಯ ಪರಿಸರದ ಮೇಲೆ ಎಷ್ಟೇ ಆಕ್ರಮಣಗಳನ್ನು ಮಾಡಿದರೂ ಪರಿಸರ ತನ್ನ ಸಹಜತೆಯಿಂದಲೇ ಮೆರೆಯುತ್ತದೆ.

ವಸಂತಾಗಮನದಿಂದ ಅಖಂಡ ಪರಿಸರ ನವಚೈತನ್ಯದಿಂದ ಸಂಭ್ರಮಿಸಿ ಎಲ್ಲೆಲ್ಲೂ ಸೌಂದರ್ಯ, ಆನಂದವನ್ನು ಉಂಟುಮಾಡುತ್ತಿದೆ. ಆದರೆ ಮನುಷ್ಯ ಮಾತ್ರ ತನ್ನ ನೀಚ ಕಾರ್ಯಗಳಲ್ಲಿ ತೊಡಗಿರುವ ಚಿತ್ರವನ್ನು ಟಾಲ್‌ಸ್ಟಾಯ್ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಇಂಥ ವಸಂತಮಾಸದ ಪ್ರಶಾಂತತೆಯಾಗಲಿ, ಅಂಥ ಪ್ರಶಾಂತತೆಯ ಸಮಯದಲ್ಲಿ ನಿರ್ಮಾಣಗೊಂಡಿರುವ ಸೌಂದರ್ಯ ಶಾಂತಿಗಳಾಗಲೀ ಪವಿತ್ರವಾಗಿ ಕಾಣದೆ ಒಬ್ಬರು ಇನ್ನೊಬ್ಬರ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸುವ ಪ್ರಕ್ರಿಯೆಯನ್ನು ಈ ಉದ್ಧರಣೆ ವಿಶದಪಡಿಸುತ್ತದೆ. ಇದು ದಾರ್ಶನಿಕ ಮನಸ್ಸೊಂದು ಮಾನವ ಸಮುದಾಯದ ನಿರಂತರ ಕ್ರೌರ್ಯ ಹಾಗೂ ದಮನಿತ ನೆಲೆಗಳಿಗೆ ಕೊಟ್ಟ ದರ್ಶನದಂತೆ ಕಾಣುತ್ತದೆ. ಇಂಥ ಅಹಂಕಾರದ ಮಾನವ ಸಮುದಾಯ ಪರಿಸರದ ಮೇಲೆ ನಡೆಸಿರುವ ಅನೈತಿಕ ಚಟುವಟಿಕೆಗಳಿಂದ ಅನೇಕ ಪರಿಸರ ಸಮಸ್ಯೆಗಳು ಜಾಗತಿಕ ಮಟ್ಟದಲ್ಲಿ ಜೀವಕೇಂದ್ರಿತ ನೆಲೆಗಳಿಗೆ ಮಾರಕವಾಗಿ ಪರಿಣಮಿಸಿವೆ.

ಹಾಗಾಗಿ ಇಂಥ ಮನುಷ್ಯನ ಎಲ್ಲ ಚಟುವಟಿಕೆಗಳನ್ನು ಗುಮಾನಿಯಾಗಿ ನೋಡುವ, ಪ್ರಶ್ನಿಸುವ, ಪರಿಸರ ವಿಜ್ಞಾನೀಯ ದೃಷ್ಟಿಯಿಂದ ನೋಡುವ ಪ್ರಕ್ರಿಯೆ ಇಂದು ಎಲ್ಲ ಕಡೆ ಮುಂಚೂಣಿಗೆ ಬಂದಿರುವುದನ್ನು ಕಾಣುತ್ತೇವೆ. ಹಾಗಾಗಿ ಪ್ರಪಂಚದಾದ್ಯಂತ ಪರಿಸರ ಅಧ್ಯಯನಗಳು, ಹೋರಾಟಗಳು, ಸಮ್ಮೇಳನಗಳು, ವಿಚಾರ ಸಂಕಿರಣಗಳು, ಸಂಶೋಧನೆಗಳು ತುಂಬಾ ತುರ್ತಿನಿಂದ ನಡೆಯುತ್ತಿವೆ. ಹಾಗೆಯೇ ಅಂಥ ಚಟುವಟಿಕೆಗಳಿಂದ ಹೊಸ ಅರಿವನ್ನು, ಜ್ಞಾನವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸಾಹಿತ್ಯವನ್ನು ಓದುವ ಕ್ರಮವು ಇಂದು ಜರೂರಾಗಿ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರು ಪರಿಸರ ಮತ್ತು ಮನುಷ್ಯ ಸಂಬಂಧಗಳನ್ನು ಕುರಿತು ನಡೆಸಿರುವ ಚಿಂತನೆಯನ್ನು ಪರಿಶೀಲಿಸುವ, ಶೋಧಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೨. ರೊಮ್ಯಾಂಟಿಸಿಸಂ ಮತ್ತು ಕುವೆಂಪು ಅವರ ಕಾವ್ಯ

> ಮಲೆನಾಡಿನ ನಿಸರ್ಗರಮ್ಯ ಪರಿಸರದಿಂದ ಬಂದ ಅವರಿಗೆ ರೊಮ್ಯಾಂಟಿಕ್ ಕಾವ್ಯ ತಮ್ಮ ಹಿನ್ನೆಲೆಗೂ ತಮ್ಮ ಪ್ರತಿಭೆಗೂ ನಡುವೆ ಪ್ರಣಾಲಿಕೆಯಾಗಿ ಬಂದು ಅಖಂಡವಾಗಿ, ತೆರೆ ತೆರೆಯಾಗಿ, ಹೊಸ ಹೊಸ ಉನ್ಮೇಷಗಳಿಂದ ತನ್ನ ಪ್ರತಿಭಾ ಬೆಳವಣಿಗೆ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿತು.
>
> ...... 'ಕೊಳಲು' - 'ನವಿಲು'ದಂಥ ಪ್ರಥಮ ಸಂಕಲನಗಳಲ್ಲಿ ಕುವೆಂಪುವಿನ ಉಚ್ಛೃಂಖಲ ಮಲೆನಾಡ ಪ್ರತಿಭೆಗೆ ಅಭಿವ್ಯಕ್ತಿ ಕೊಡುವ ಸ್ವತಂತ್ರ ಕವನಗಳ ಜೊತೆಜೊತೆಯಾಗಿಯೇ ಪ್ರತಿಧ್ವನಿ ಪೂರ್ಣ ಕವನಗಳೂ ನೋಡಲಿಕ್ಕೆ ಸಿಕ್ಕುತ್ತವೆ.
>
> ...... ಸಂಪ್ರದಾಯಕ್ಕೆ ಸಂಪ್ರದಾಯವನ್ನೇ ತೂಗಬೇಕಾದರೆ ಯಾವ ಚಿಲ್ಲರೆ ಭಾರತೀಯ ಕವಿಯನ್ನಾದರೂ ನಾವು ಡಾಂಟೆಯ ಜೊತೆಗೇ ಕೂಡಿಸಬೇಕೇ ಹೊರತು ವರ್ಡ್ಸ್‌ವರ್ಥ್, ಕೋಲರಿಜ್, ಶೆಲ್ಲಿ, ಕೀಟ್ಸ್‌ರಂಥ ಅಡ್ಡಸೋಗುಗಳು ನಡುವೆ ಬರಬಾರದು. ಆದರೆ ಹಾಗೆ ಮಾಡುವುದರಿಂದ ನಮ್ಮ ಸಾಹಿತ್ಯಕ ಕೆಲಸ ಪೂರ್ಣವಾಗದು. ಬರಿ ಸಂಪ್ರದಾಯಕ್ಕೆ ಸಂಪ್ರದಾಯ ತೂಗುವುದರಿಂದ ಕವಿ - ಕವಿಗಳ ವೈಶಿಷ್ಟ್ಯ ಗುರುತಿಸುವ ಕೆಲಸ ಇನ್ನೂ ಉಳಿದಂತಾಗುವುದು. ಆದರೂ ಈ ಮಾತು ಆಡುವದು ಅವಶ್ಯ.

...... ಪುಟ್ಟಪ್ಪನವರ ರೊಮ್ಯಾಂಟಿಸಿಸಂದಲ್ಲಿ ಇಂಗ್ಲಿಷ್ ರೊಮ್ಯಾಂಟಿಸಿಸಂದ ಪರಿಣಾಮವಿದ್ದೂ ಕೂಡ ಅದು ಪುನಃ ಪುನಃ ಭಾರತೀಯತ್ವದ ಕಡೆಗೆ ಎಳಸುತ್ತಿರುವ ಲಕ್ಷಣಗಳು 'ಕೊಳಲಿ'ನಲ್ಲೇ ಗೋಚರವಾಗುತ್ತವೆ. ಇಂಗ್ಲಿಷ್ ಕಾವ್ಯದ ದಟ್ಟ ಛಾಯೆಯುಳ್ಳ ಕವನಗಳಾದ 'ಸೊಬಗನಾಸ್ವಾದಿಸಲು ಸಮಯವೆಮಗಿಲ್ಲ', 'ಮಳೆಬಿಲ್ಲು', 'ಗತಿ', 'ಹೊಲದ ಹುಡುಗಿ', 'ನನ್ನ ಮನೆ' ಇಂಥ ಕವನಗಳ ಜೊತೆಯಲ್ಲೆ ಈ ಪ್ರಭಾವವನ್ನು ಅರಗಿಸಿಕೊಂಡು ಸ್ವತಂತ್ರ ಸಾರ್ಥಕತೆಯನ್ನು ಪಡೆದ 'ಸತ್ಯ ಮತ್ತು ಸೌಂದರ್ಯ' 'ಅಪಜಯದ ಸುಖ' 'ನವಿಲು', 'ಮಿಣುಕು ಹುಳುಗಳು', 'ತೊರೆ' ಮುಂತಾದ ಕವನಗಳೂ ಉಂಟು. ಆದರೆ ಬರಿ ಇದೊಂದೇ ಈ ಎಳೆಯ ಕವಿಗೆ ಸ್ಫೂರ್ತಿಯ ಸೆಲೆಯಲ್ಲವೆಂಬುದನ್ನೂ ನೋಡಬೇಕು. 'ಸತ್ಯ ಮತ್ತು ಸೌಂದರ್ಯ'ದಲ್ಲಿ ಈ ಸಾಲುಗಳು ಬಂದಿವೆ :

ನಲಿಯುವ ಒಂದೊಂದಲರಿನ ಹೃದಯದಿ
ಬ್ರಹ್ಮವು ಮೌನದಿ ನರಳುತಿದೆ!

ಇದರಲ್ಲಿ ಬಂದ 'ಬ್ರಹ್ಮ' ಶಬ್ದವು ನಿಸರ್ಗದ ಜೈವೀಕರಣದ ಸಂದರ್ಭವನ್ನು ಸಾರ್ಥಕವಾಗಿ ಸ್ವೀಕರಿಸಿ ಕಟ್ಟೆಯ ಕಲ್ಲು ಕಟ್ಟೆಗೆ ಕುಳಿತಂತೆ ಸಾಂಸ್ಕೃತಿಕ ತಾದಾತ್ಮ್ಯವನ್ನು ಪಡೆಯುತ್ತದೆ.[೩]

ಶಂಕರ ಮೊಕಾಶಿ ಪುಣೇಕರ ಅವರು ಕುವೆಂಪು ಅವರ ಸಾಹಿತ್ಯದ ಮೇಲೆ ರೊಮ್ಯಾಂಟಿಕ್ ಕಾವ್ಯ ಮತ್ತು ಕವಿ ವರ್ಡ್ಸ್‌ವರ್ತ್ ಬೀರಿದ ಪ್ರಭಾವ ಪರಿಣಾಮಗಳನ್ನು ಈ ಮೇಲಿನ ಉದ್ಧರಣೆಯಲ್ಲಿ ಸಮರ್ಥವಾಗಿ ಗುರುತಿಸಿದ್ದಾರೆ. ಕುವೆಂಪು ಅವರನ್ನು ಕನ್ನಡದ ವರ್ಡ್ಸ್‌ವರ್ತ್ ಎಂದು ಕರೆದ ವಿಮರ್ಶಾ ವಿವೇಕಕ್ಕೆ ಇಂಥ ಕಡೆ ಮೌನವಾಗಿಯೇ ಪ್ರತಿಕ್ರಿಯಿಸಿರುವುದನ್ನು ಕಾಣುತ್ತೇವೆ. ರೊಮ್ಯಾಂಟಿಕ್ ಸಂಪ್ರದಾಯದೊಂದಿಗೆ ಕನ್ನಡ ನವೋದಯ ಸಂದರ್ಭವನ್ನು ಕುರುಡುತನದಿಂದ ತೌಲನಿಕ ಅಧ್ಯಯನಕ್ಕೆ ಗುರಿಪಡಿಸಿದ ನೆಲೆಗಳ ಬಗೆಗೂ ಪುಣೇಕರ ಅವರು ಆಕ್ಷೇಪಿಸಿರುವುದನ್ನು ಇಲ್ಲಿ ಕಾಣುತ್ತೇವೆ.

ಇಂಗ್ಲೀಷ್ ರೊಮ್ಯಾಂಟಿಸಿಸಂ ಕುವೆಂಪು ಅವರ ಮೇಲೆ ಪರಿಣಾಮ ಬೀರಿದ್ದರೂ ಅವರ ಪ್ರತಿಭೆ ಭಾರತೀಯತ್ವದ ನೆಲೆಗಳಲ್ಲಿಯೇ ಸ್ವಂತಿಕೆ ಮತ್ತು ಸಾರ್ಥಕತೆಯನ್ನು ಕಟ್ಟಿಕೊಂಡಿದ್ದನ್ನು ಸಮರ್ಥವಾಗಿ ಗುರುತಿಸಿದ್ದಾರೆ. ಹಾಗಾಗಿ ಪುಣೇಕರರ ಈ ವಿಮರ್ಶಾ ಪ್ರಜ್ಞೆ ಕುವೆಂಪು ಅವರನ್ನು ಕನ್ನಡದ ವರ್ಡ್ಸ್‌ವರ್ಥ್ ಎಂದು ಕರೆಯುವ ಸರಳ ನಿಲುವುಗಳನ್ನು ನಿರಾಕರಿಸುತ್ತಲೇ ಕುವೆಂಪು ಕಾವ್ಯಕ್ಕೆ ಹೊಸ ಮಾರ್ಗವೊಂದನ್ನು ಕಾಣಿಸುತ್ತದೆ. ಪುಣೇಕರರ ಚಿಂತನೆಯನ್ನೇ ಕುವೆಂಪು ಅವರ ಈ ಕೆಳಗಿನ ಮಾತುಗಳು ಸಮರ್ಥಿಸುತ್ತವೆ. ದೇ. ಜವರೇಗೌಡರು ತಮ್ಮ ಸಂದರ್ಶನವೊಂದರಲ್ಲಿ ನಿಮ್ಮ ನಿಸರ್ಗೋಪಾಸನೆಗೆ ವರ್ಡ್ಸ್‌ವರ್ತ್‌ನ ಸ್ಫೂರ್ತಿ ಕಾರಣವೆ? ಎಂಬ ಪ್ರಶ್ನೆಗೆ ಉತ್ತರಿಸಿದ ಮಾತುಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆಂದು ಕಾಣುತ್ತದೆ.

ನಾನು ನಿಸರ್ಗದ ಗರ್ಭದಲ್ಲಿಯೇ ಹುಟ್ಟಿ, ಅದರ ಸ್ತನ್ಯಪಾನದಿಂದಲೇ ಬದುಕಿ, ಅದರ ತೋಳ್ತೆಕ್ಕೆಯಲ್ಲಿಯೇ ಬೆಳೆದವನಾದ್ದರಿಂದ ಅದರ ಮಹಿಮೆ ನನ್ನ

ಮೈಮನಗಳನ್ನೆಲ್ಲ ಮೊದಲೇ ತುಂಬಿಕೊಂಡಿತ್ತು. ವರ್ಡ್ಸ್‌ವರ್ತ್‌ನ ಕವನಗಳು ಕಣ್ಣಿಗೆ ಬೀಳುವ ಮುನ್ನವೇ ನನಗರಿವಿಲ್ಲದಂತೆಯೇ ಅದರ ಉಪಾಸಕನಾಗಿದ್ದೆ. ನಾನದರ ಅಂಶವಾಗಿರುವಂತೆ ಅದು ನನ್ನ ಬದುಕಿನ ಅವಿಭಾಜ್ಯ ಭಾಗವಾದದ್ದುಂಟು. ಅದರ ಸೌಂದರ್ಯ ನನ್ನ ರಕ್ತದ ಕಣಕಣಗಳಲ್ಲಿಯೂ ಹರಿಯುತ್ತಿತ್ತು. ನನ್ನ ಉಸಿರುಸಿರಿನಲ್ಲಿ ಹೃದಯದಲ್ಲಿ ಅದೇ ತುಂಬಿಕೊಂಡಿತ್ತು. ಯಾವುದು ಭಾವವೇದ್ಯವಾಗಿತ್ತೋ ಅದು ವರ್ಡ್ಸ್‌ವರ್ತ್‌ನ ಕಾವ್ಯ ಸಂಪರ್ಕದಿಂದ ಆಲೋಚನಾಗಮ್ಯವಾಯಿತು. ಯಾವುದು ಭಾವಗಮ್ಯವಾಗಿತ್ತೋ ಅದು ಬುದ್ಧಿಗಮ್ಯವೂ ಆಯಿತು. ನಾನು ಕಂಡು ಅನುಭವಿಸಿದ್ದೆಲ್ಲ ಸತ್ಯವೆಂದು ತೋರಿತು. ನನ್ನ ಅನುಭವ ಆಳವಾಯಿತು ; ಗಟ್ಟಿಯಾಯಿತು. ಆದರೆ ನನಗಿರುವ ಭಾರತೀಯ ದರ್ಶನದ ಹಿನ್ನೆಲೆ, ಸಾಕ್ಷಾತ್ಕಾರದ ದಾರ್ಶನಿಕ ಭಿತ್ತಿ ಅವನಿಗಿಲ್ಲ. ಗೌರೀಶಂಕರದ ಮೇಲೆ ನಿಂತ ಕುಬ್ಜನೂ ಆಲ್ಪ್ಸ್ ಶಿಖರದ ಮೇಲೆ ನಿಂತ ದೈತ್ಯನಿಗಿಂತ ಎತ್ತರವಾಗಿ ಕಾಣುತ್ತಾನೆಂಬ ಮಾತು ಕೇವಲ ಅಲಂಕಾರಕವಲ್ಲ, ವಾಸ್ತವ ಸತ್ಯವೆಂದು ತಿಳಿಯಬೇಕು."[೪]

ಆದರೆ ಮತ್ತೊಂದು ಸಂದರ್ಶನದಲ್ಲಿ ಕುವೆಂಪು ಅವರು ದೇ. ಜವರೇಗೌಡರ ನಿಮ್ಮ ಸಾಹಿತ್ಯಕ್ಕೆ ಮೂಲಪ್ರೇರಣೆ ಯಾವುದು? ಎಂಬ ಪ್ರಶ್ನೆಗೆ ಉತ್ತರಿಸಿದ ಮಾತುಗಳನ್ನು ಇಲ್ಲಿ ಕಾಣಿಸುವುದು ಉಪಯುಕ್ತವೆನಿಸುತ್ತದೆ. 'ಮೊದಲನೆಯದು ನಿಸರ್ಗ ಸೌಂದರ್ಯ; ಎರಡನೆಯದಾಗಿ, ವರ್ಡ್ಸ್‌ವರ್ತ್ ಕಾವ್ಯ ಹಾಗೂ ಆಂಗ್ಲ ಸಾಹಿತ್ಯ. ನನ್ನ ನಿಸರ್ಗೋಪಾಸನೆಗೆ ವರ್ಡ್ಸ್‌ವರ್ತ್ ಕವಿತೆಗಳು ಆಳ ಅಗಲ ಕಾವುಗಳನ್ನು ನೀಡಿದವು.'[೫] ಎನ್ನುತ್ತಾರೆ. ಅಂಥ ಪ್ರೇರಣೆಗೆ ಪರಮಹಂಸ ಮತ್ತು ವಿವೇಕಾನಂದರ ದಾರ್ಶನಿಕ ಉಪದೇಶಗಳು ಮತ್ತು ಆಧ್ಯಾತ್ಮಿಕ ಸ್ಪರ್ಶ ತಮ್ಮ ಜೀವನ ಕ್ರಮ ಹಾಗೂ ಕಾವ್ಯಶಕ್ತಿಗೆ ಒದಗಿಬಂದ ಪುಷ್ಟಿಯನ್ನು ಪರಿಚಯಿಸುತ್ತವೆ.

ಮೊದಲೇ ಪ್ರಸ್ತಾಪಿಸಿದಂತೆ ಪುಣೇಕರರು ಪುಟ್ಟಪ್ಪನವರ ರೊಮ್ಯಾಂಟಿಸಿಸಂನಲ್ಲಿ ಇಂಗ್ಲಿಷ್ ರೊಮ್ಯಾಂಟಿಸಿಸಂನ ಪರಿಣಾಮವಿದ್ದೂ ಕೂಡ ಅದು ಪುನಃ ಪುನಃ ಭಾರತೀಯತ್ವದ ಕಡೆಗೆ ತುಡಿಯುತ್ತಿರುವ ಲಕ್ಷಣಗಳನ್ನು ಸಮರ್ಥಿಸುತ್ತವೆ ಎನ್ನುತ್ತಾರೆ.

ರೊಮ್ಯಾಂಟಿಸಿಸಂ ಹಾಗೂ ನವೋದಯ, ವರ್ಡ್ಸ್‌ವರ್ತ್ ಮತ್ತು ಕುವೆಂಪು ಈ ಇಬ್ಬರ ಕಾವ್ಯಾಸಕ್ತಿ, ಅಭಿವ್ಯಕ್ತಿಗಳ ನಡುವಿನ ಸಾದೃಶ್ಯ, ನಿಸರ್ಗದ ಬಗೆಗಿನ ಶ್ರದ್ಧೆಗಳನ್ನು ಕಂಡ ಯಾರಾದರೂ ಇಂಥ ಸುಲಭ ನಿರ್ಣಯಗಳಿಗೆ ಬರುವುದು ಸಹಜವಾದರು ಈ ಇಬ್ಬರು ಕವಿಗಳ ಸಮಗ್ರ ತೌಲನಿಕ ಅಧ್ಯಯನವನ್ನು ನಡೆಸಿದರೆ ಅವರಿಬ್ಬರ ನಡುವಿನ ಅನನ್ಯತೆಗಳು ಕಾಣದಿರಲಾರವು ಎಂಬ ಮಾತನ್ನೇ ಮೇಲಿನ ಪುಣೇಕರರ ಮಾತು ಸ್ಪಷ್ಟಪಡಿಸುತ್ತಿರುವಂತೆ ಕಾಣುತ್ತದೆ.

ಕುವೆಂಪು ವರ್ಡ್ಸ್‌ವರ್ತ್ ಕವಿಯ ಕೆಲವು ಕವನಗಳನ್ನು ಕನ್ನಡಕ್ಕೆ ರೂಪಾಂತರಿಸಿದ್ದಾರೆ. ವರ್ಡ್ಸ್‌ವರ್ತ್ ಅನ್ನು ಕುರಿತು ಒಂದು ಸಾನ್ನೆಟ್ಟನ್ನೂ ಸಹ ಬರೆದಿದ್ದಾರೆ. ಹಾಗೆಯೇ ತಮ್ಮ ಆತ್ಮಕಥೆ "ನೆನಪಿನ ದೋಣಿಯಲ್ಲಿ" ಹಾಗೂ ಕೆಲವು ಸಂದರ್ಶನಗಳಲ್ಲಿ ವರ್ಡ್ಸ್‌ವರ್ತ್ ಕಾವ್ಯದ ಪ್ರಭಾವ ಪರಿಣಾಮಗಳನ್ನು ಕುರಿತು ದಾಖಲಿಸಿದ್ದಾರೆ. "ಕೃತ್ತಿಕೆ" ಸಂಕಲನದಲ್ಲಿನ 'ವರ್ಡ್ಸ್‌ವರ್ತ್' ಎಂಬ ಕವಿತೆಯಲ್ಲಿ ಅಂಥ ಸಂಗತಿಗಳನ್ನು ಕಾಣಬಹುದಾಗಿದೆ.

ಆಂಗ್ಲ ಕವಿಗಳಲ್ಲಿ ನೀನೆನ್ನೆದೆಯ ಸೆಳೆದಂತೆ
ಉಳಿದವರು ಸೆಳೆದಿಲ್ಲ, ನರನಾಟಕವ ನೋಡಿ
ರಂಗದಲಿ ಚಿತ್ರಿಸಿದ ಷೇಕ್ಸ್ಪಿಯರನುಂ ಕೂಡಿ.
ನೀನೊಂದು ಪರ್ಣಕುಟಿ ; ಆತನೊ ಪಿರಿಯ ಸಂತೆ !
ಶಾಂತಿಯಲಿ ಕೊನೆಗಾಣುವುದು ನಿನ್ನಮಲ ಚಿಂತೆ ;
ಆತನದೊ ಕ್ರಾಂತಿಯಲಿ. ವನದ ಪಕ್ಷಿಯು ಹಾಡಿ,
ಪ್ರಕೃತಿ ಸಂಸರ್ಗದಲಿ ದಿವ್ಯಭಾವವು ಮೂಡಿ
ಆತ್ಮವು ವಿರಾಟದಲಿ ಎಂತು ವಿಹರಿಸುವಂತೆ
ಮಾಡುವುದೊ, ಕಾವ್ಯರ್ಷಿ, ನಿನ್ನ ವಾಣಿಯ ರೀತಿ
ಅಂತಿಹುದು, ಭಿನ್ನಾಭಿಪ್ರಾಯವನು ಜಗವೆಲ್ಲ,
ಪಂಡಿತರ ಗುಂಪೆಲ್ಲ, ಘೋಷಿಸಲಿ, ನೀನೆನಗೆ
ಸಹೃದಯನು, ಕವಿವರನು :[೬]

ಆಂಗ್ಲ ಕವಿಗಳಲ್ಲಿ ಶೇಕ್ಸ್‌ಪಿಯರ್ ಮತ್ತು ವರ್ಡ್ಸ್‌ವರ್ತ್‌ರ ಸೃಷ್ಟಿಕ್ರಿಯೆ ಹಾಗೂ ಅಭಿವ್ಯಕ್ತಿಗಳನ್ನು ಮುಖಾಮುಖಿ ಮಾಡುತ್ತಲೇ ವರ್ಡ್ಸ್‌ವರ್ತ್ ಕವಿಯ ಕಾವ್ಯಾಕರ್ಷಣೆಯನ್ನು ಕುವೆಂಪು ಈ ಕವಿತೆಯಲ್ಲಿ ಮನಗಾಣಿಸುತ್ತಾರೆ. ವರ್ಡ್ಸ್‌ವರ್ತ್ ಒಂದು ಪರ್ಣಕುಟಿಯಂತೆಯೂ ತನ್ನ ಕಾವ್ಯದ ಸಹೃದಯನಾಗಿಯೂ, ನಿಸರ್ಗಾರಾಧನೆಯ ಆಕರ್ಷಣೆಗೆ ಒಲಿದಿರುವುದನ್ನು ಇಲ್ಲಿ ಕಾಣುತ್ತೇವೆ.

ವರ್ಡ್ಸ್‌ವರ್ತ್ ಕಾವ್ಯವನ್ನು ನೆನಪಿಸುವ ನಿಸರ್ಗಾನುಭವವನ್ನು ಒಳಗೊಂಡ ಅನೇಕ ಕವಿತೆಗಳನ್ನು ಕುವೆಂಪು ಬರೆದಿದ್ದಾರೆ. ಆದರೂ ಈ ಇಬ್ಬರ ಗ್ರಹಿಕೆ, ಧೋರಣೆ ಹಾಗೂ ಅಭಿವ್ಯಕ್ತಿ ವಿಧಾನಗಳ ವಿಭಿನ್ನತೆಯನ್ನು ಮರೆಯುವಂತಿಲ್ಲ. ಇದಕ್ಕೆ ಈ ಮೇಲೆ ಉದ್ಧರಿಸಿರುವ ನಿಮ್ಮ ನಿಸರ್ಗೋಪಾಸನೆಗೆ ವರ್ಡ್ಸ್‌ವರ್ತ್‌ನ ಸ್ಫೂರ್ತಿ ಕಾರಣವೆ ಎಂಬ ಪ್ರಶ್ನೆಯ ಉತ್ತರದಲ್ಲಿಯೇ ಕುವೆಂಪು ಕಾವ್ಯಾಭಿವ್ಯಕ್ತಿಯ ಸ್ವಂತಿಕೆಯನ್ನು ಕಾಣುತ್ತೇವೆ. ಕುವೆಂಪು ಕಾವ್ಯದ ಭಾರತೀಯ ದಾರ್ಶನಿಕ ಹಿನ್ನೆಲೆ, ಆಧ್ಯಾತ್ಮಿಕ ಸ್ಪರ್ಶಗಳು ವರ್ಡ್ಸ್‌ವರ್ತ್ ಕಾವ್ಯಾಭಿವ್ಯಕ್ತಿಗಿಂತ ಭಿನ್ನ ಹಾಗೂ ಅನನ್ಯ. ಇಂಥ ಭಿನ್ನತೆ ಹಾಗೂ ಅನನ್ಯತೆ ಕುವೆಂಪು ಕಾವ್ಯಕ್ಕೆ ಪ್ರಾಪ್ತವಾಗಿರುವುದರಿಂದಲೇ ಕುವೆಂಪು ಅವರನ್ನು ಕನ್ನಡದ ವರ್ಡ್ಸ್‌ವರ್ತ್ ಎಂದು ಕರೆಯುವ ಸರಳ ಹಾಗೂ ಉಪೇಕ್ಷೆಯ ಶ್ಲೇಷೆಗಳನ್ನು ಕನ್ನಡ ವಿವೇಕ ನಿರಾಕರಿಸಿರುವುದನ್ನು ಕಾಣುತ್ತೇವೆ. ಹಾಗಾಗಿ ಕುವೆಂಪು ಕಾವ್ಯ ವರ್ಡ್ಸ್‌ವರ್ತ್ ಕಾವ್ಯ ಸಂಪರ್ಕ ಪ್ರಭಾವಗಳ ಜೊತೆಯಲ್ಲಿಯೇ ಅಪ್ಪಟ ಸ್ಥಳೀಯ ಪ್ರಭೆಯಾಗಿ ಬೆಳಗುತ್ತದೆ.

೩. ಕಾವ್ಯ - ಪ್ರಕೃತಿಗಳ ಅಭಿನ್ನತೆ

ಕುವೆಂಪು ಅವರು ತಮ್ಮ ಬಹುಪಾಲು ಕೃತಿಗಳಲ್ಲಿ ಮಲೆನಾಡಿನ ಅಖಂಡ ಪರಿಸರವನ್ನು ಅಭಿವ್ಯಕ್ತಿಗೆ ಗುರಿಪಡಿಸಿದ್ದಾರೆ. ಅಲ್ಲಿ ಸ್ಥಳೀಯ ಅರಿವು, ಅನುಭವಗಳು, ಪ್ರಾಕೃತಿಕ ವಿವರಗಳು, ಮನುಷ್ಯ ಹಾಗೂ ಪ್ರಕೃತಿಯ ಸಂಬಂಧಗಳು, ನಿಸರ್ಗ ಸೌಂದರ್ಯ ಹಾಗೂ ರೌದ್ರತೆಯ ಮುಖಗಳು ಅಂತರ್ಗತಗೊಂಡಿವೆ. ಹಾಗಾಗಿ ಅವರ ಅಭಿವ್ಯಕ್ತಿಯನ್ನು ಪರಿಸರದ ಅಖಂಡ ದರ್ಶನವೆನ್ನಬಹುದು. ಪ್ರಕೃತಿ ಅಥವಾ ಪರಿಸರ ಅಥವಾ ನಿಸರ್ಗವೆಂದರೆ

ನಮ್ಮ ಸುತ್ತಮುತ್ತ ಇರುವ ಮತ್ತು ತನಗೆ ತಾನೆ ಆಗಿರುವ ಎಲ್ಲ ವಸ್ತು ಸಮೂಹಗಳು ಸೇರುತ್ತವೆ ಎಂಬುದು ಅವರ ದೃಢವಾದ ನಂಬಿಕೆ. ಅಂದರೆ ಕಾಡು ಬೆಟ್ಟ ಹೊಳೆ ಕೆರೆ ಗದ್ದೆ ಹೊಲ ಬಯಲು ಮಲೆ ಬಾನು ಬೆಳಗು ಬೈಗು ಇರುಳು ಚುಕ್ಕಿ ಹಕ್ಕಿ ಮಿಗ ಮುಗಿಲು ಕಡಲು ನೇಸರು ತಿಂಗಳು ಮಳೆ ಗುಡುಗು ಮಿಂಚು ಗಾಳಿ ಬಿಸಿಲು ತಳಿರು ಹೂವು ಇತ್ಯಾದಿ ಇತ್ಯಾದಿ. ಈ ಎಲ್ಲವನ್ನು ಒಳಗೊಂಡ ಸಾಹಿತ್ಯವೇ ಅವರ ಅಭಿವ್ಯಕ್ತಿಯಾಗಿದೆ. ಮನುಷ್ಯ ಮತ್ತು ಪ್ರಕೃತಿಯ ಈ ಮೇಲಿನ ಎಲ್ಲಾ ಸಂಬಂಧಗಳ ಸಮಗ್ರೀಕರಣವೇ ಅವರ ಸಾಹಿತ್ಯ. ಅಂಥ ಸಮಗ್ರೀಕರಣವನ್ನು ಒಡೆದು ಭಿನ್ನಗೊಳಿಸಿ ಪ್ರತ್ಯೇಕಿಸಿ ಅಧ್ಯಯನ ಮಾಡುವುದು ಹೆಚ್ಚು ಉಪಯುಕ್ತವಾಗಲಾರದೆಂದು ಕಾಣುತ್ತದೆ. ಏಕೆಂದರೆ "ಪರಿಸರ ಅಥವಾ ಪ್ರಕೃತಿ ಅಥವಾ ನಿಸರ್ಗ ಕುವೆಂಪು ಅವರ ಸಮಗ್ರ ಸಾಹಿತ್ಯದ ರೂಪಕ. ಹಾಗಾಗಿ ಅಂಥ ಸಾಹಿತ್ಯವನ್ನು ಕುವೆಂಪು ಅವರ ವಿಮರ್ಶಾ ಪರಿಭಾಷೆಯಲ್ಲಿ ಹೇಳುವುದಾದರೆ ಪೂರ್ಣದೃಷ್ಟಿಯಿಂದ ಅಭ್ಯಸಿಸುವುದು ಹೆಚ್ಚು ಉಪಯುಕ್ತವೆಂದು ತಿಳಿಯುತ್ತೇನೆ. ಇಂಥ ಅಭ್ಯಾಸಕ್ಕೆ ಅಗತ್ಯವಾದ ವಿಮರ್ಶಾ ಕೀಲಿಕೈಗಳನ್ನು ಅವರ ಸಾಹಿತ್ಯ ವಿಮರ್ಶೆಯಲ್ಲಿಯೇ ಕಾಣಬಹುದಾಗಿದೆ.

> ಅರ್ಧದೃಷ್ಟಿ ಅನರ್ಥಕಾರಿ. ಪೂರ್ಣದೃಷ್ಟಿಯಿಂದಲೇ ಶ್ರೇಯಸ್ಸು. ಪೂರ್ಣದೃಷ್ಟಿಯೇ ನಿಜವಾದ ಶಾಶ್ವತವಾದ ಸರ್ವೋತ್ಕೃಷ್ಟವಾದ 'ದರ್ಶನ'. ಅಂತಹ 'ದರ್ಶನ'ದಲ್ಲಿ ವಿಜ್ಞಾನ, ರಾಜಕೀಯ, ಮತ, ತತ್ತ್ವ, ಕಲೆ ಎಲ್ಲವೂ ಅಂಗಗಳಾಗಿರುತ್ತವೆ ; ಅಂಶಗಳಾಗಿರುತ್ತವೆ. ಸಮನ್ವಿತಗಳಾಗಿರುತ್ತವೆ. ಶ್ರೇಷ್ಠನಾದ ಕವಿಗೆ ಅಂತಹ 'ದರ್ಶನ'ವಿರಬೇಕು. ಅಂತಹನು ರಸ ಋಷಿಯಾಗುತ್ತಾನೆ. ಅಂತಹನ ವಾಣಿಯಲ್ಲಿ ವೇದಶಾಸ್ತ್ರ ಕಲೆಗಳೆಲ್ಲ ಸಂಗಮವಾಗಿ ಕಾವ್ಯ ತ್ರಿವೇಣಿ ಜೀವನಸಮಸ್ತವನ್ನೂ ರಸಮಯವಾಗಿ ಮಾಡಿ ಪ್ರವಹಿಸುತ್ತದೆ.[೬]

ಈ ಮಾದರಿಯ ವಿಮರ್ಶೆಗೆ ಇರುವ ಮಿತಿಗಳನ್ನು ಕುರಿತು ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಪ್ರತಿಕ್ರಿಯಿಸಿದ್ದಾರೆ. ಅವರು ಅಂಥ ವಿಮರ್ಶಾ ವಿಧಾನದ ಇತಿಮಿತಿಗಳಿಗೆ ಪ್ರತಿಕ್ರಿಯಿಸುತ್ತಲೇ ಆ ಬಗೆಯ ವಿಮರ್ಶೆಯನ್ನು ಪ್ರಶ್ನಿಸುತ್ತಾರೆ. ವಿಮರ್ಶೆ ವರ್ಗೀಕರಣ ವಿಶ್ಲೇಷಣೆಗಳಿಂದ ಹೊರತಾದ ಸಮಕಾಲೀನ ವಿಮರ್ಶೆಯಾಗಿ ರೂಪುಗೊಳ್ಳಬೇಕಾಗಿದೆ ಎಂದು ಆಶಿಸುತ್ತಾರೆ. ಕುವೆಂಪು ಅವರ ವಿಮರ್ಶಾ ಕೃತಿಗಳಲ್ಲಿ ಅಂತರ್ಗತವಾಗಿರುವ ಸಂಶ್ಲೇಷಣಾತ್ಮಕ ವಿಧಾನವನ್ನು ಸಮಕಾಲೀನ ಸಾಹಿತ್ಯ ಅಧ್ಯಯನಕ್ಕೆ ಅಳವಡಿಸಿಕೊಳ್ಳುವ ಸಾಧ್ಯತೆ ಮತ್ತು ಪ್ರಯೋಗಗಳ ಕಡೆಗೂ ಗಮನ ಸೆಳೆಯುತ್ತಾರೆ. 'ಒಂದು ಕೃತಿಯನ್ನು ಓದಿದಾಗ ಆಗುವ ರಸಾನುಭವವನ್ನು ಇನ್ನೂ ಸಮರ್ಥವಾಗಿ ಸಹೃದಯನೊಡನೆ ಸಂವಾದಿಸಲು ಸಾಧ್ಯವಾಗುವ ಮಾರ್ಗಗಳನ್ನು ನಾವು ಹುಡುಕಬೇಕು' ಎಂಬ ತೇಜಸ್ವಿಯವರ ಆಶಯದಲ್ಲಿ ಹೊಸ ವಿಮರ್ಶಾ ಶೋಧದ ಅಗತ್ಯವನ್ನು ಕಾಣುತ್ತೇವೆ. ಇಂಥ ಸಂಶ್ಲೇಷಣಾತ್ಮಕ ವಿಧಾನವೇ ಕುವೆಂಪು ಸಾಹಿತ್ಯ ಅಧ್ಯಯನದ ಗ್ರಹಿಕೆಗೆ ಸಮರ್ಥವಾದುದೆಂದು ಭಾವಿಸುತ್ತೇನೆ. ಹಾಗಾಗಿ ಕುವೆಂಪು ಅವರ ಕೃತಿಗಳಲ್ಲಿ ಬರುವ ಪ್ರಾಣಿ, ಪಕ್ಷಿ, ಸಸ್ಯ ಮೊದಲಾದ ವಿಭಾಗೀಕರಣ ಅಧ್ಯಯನಗಳು ಸಾಹಿತ್ಯದ ಜೀವಧಾತುಗಳನ್ನು ಕಂಡುಕೊಳ್ಳಲು ಸಹಾಯಕವಾಗಲಾರದೆಂದು ಕಾಣುತ್ತವೆ.

ಕುವೆಂಪು ಅವರ ಈ ಕೆಳಗಿನ ಮಾತುಗಳು ಇಂಥ ಚಿಂತನೆಯನ್ನೇ ಸಮರ್ಥಿಸುತ್ತವೆ.

ಸೃಷ್ಟಿಕರ್ತನ ಕಾವ್ಯ ನಿಸರ್ಗ ; ನಿಸರ್ಗ ಮತ್ತು ಕುವೆಂಪು ಸಾಹಿತ್ಯ ಅಪ್ರತ್ಯೇಕ. ನಿಸರ್ಗದ ಜತೆಜತೆಗೆ ಕುವೆಂಪು ವ್ಯಕ್ತಿತ್ವ ಬೆಳೆದಿದೆ. ಶಿಕಾರಿ ಬೇಟೆ ಮೊದಲಾದ ಅರಣ್ಯವಾಸಿಗಳ ಹವ್ಯಾಸಗಳು ಕುವೆಂಪು ಪೂರ್ವ ಜೀವನದ ಒಂದು ಭಾಗವಾಗಿದ್ದುವು. ದರೋಡೆಯೊಂದು ಬಿಟ್ಟು ವಾಲ್ಮೀಕಿ ವ್ಯಾಧನಾಗಿದ್ದಾಗ ಏನೇನು ಮಾಡುತ್ತಿದ್ದನೋ ಅದನ್ನೆಲ್ಲ ಈ ಕವಿ ಯೌವನಪೂರ್ವದಲ್ಲಿ ಮಾಡಿದ್ದುಂಟು. ಈಗ ಮೈಸೂರಿನಲ್ಲಿ ನನ್ನ ದೇಹವಿದ್ದರೂ ನನ್ನ ಆತ್ಮ ಮಾತ್ರ ಸದಾ ಮಲೆನಾಡಿನಲ್ಲಿಯೇ ನಿವಾಸಿಯಾಗಿರುತ್ತದೆ. ಕವಿಶೈಲದಲ್ಲಿ ಕುಳಿತು ಧ್ಯಾನವೆಸಗುತ್ತೇನೆ ; ಸೂರ್ಯಾಸ್ತವನ್ನು ದರ್ಶಿಸುತ್ತೇನೆ ; ನವಿಲು ಕಲ್ಲಿನಲ್ಲಿ ಸೂರ್ಯೋದಯಕ್ಕಾಗಿ ಕಾದು ಕುಳಿತಿರುತ್ತೇನೆ. ತುಂಗೆಯಲ್ಲಿ ಮೀಯುತ್ತೇನೆ ; ನಮ್ಮ ಮನೆಯ ಉಪ್ಪರಿಗೆಯಿಂದ ಮೋಡಗಳ ದಿಬ್ಬಣವನ್ನು ನೋಡಿ ಪುಳಕಿತನಾಗುತ್ತೇನೆ ; ಕಾಜಾಣ, ಕಾಮಳ್ಳಿ ಮಡಿವಾಳಗಳ ಸಂಗದಲ್ಲಿ ಹಾರಾಡುತ್ತೇನೆ ; ಸಿಬ್ಬಲು ಗುಡ್ಡೆಯಲ್ಲಿ ವಿಹರಿಸುತ್ತೇನೆ. ನನ್ನ ಶರೀರದ ಕಣಕಣವೂ ನಿಸರ್ಗ ಸೌಂದರ್ಯದಲ್ಲಿ ಮಿಂದು ಪವಿತ್ರಗೊಳ್ಳುತ್ತದೆ.[೮]

ಈ ಮೇಲಿನ ಉಲ್ಲೇಖದಲ್ಲಿ ಕುವೆಂಪು ಸಾಹಿತ್ಯ ಹಾಗೂ ಅಖಂಡ ಪರಿಸರವನ್ನು ಪ್ರತ್ಯೇಕಗೊಳಿಸಿ ನೋಡಬಾರದೆಂಬ ವಿಚಾರವನ್ನು ಪ್ರಚುರಪಡಿಸಲಾಗಿದೆ. ಹಾಗೆಯೇ ಈ ಎರಡೂ ಅವಿಭಾಜ್ಯವೂ ಅನನ್ಯವೂ ಆದ ಸಂಬಂಧವನ್ನು ಪಡೆದಿವೆ. ಆ ಸಂಬಂಧ ಅವರೇ ಹೇಳುವಂತೆ ನೀರು ತಾವರೆಗಳ ಸಂಬಂಧದಂತೆಯೂ ಶ್ರೀಗಂಧ ಹಾಗೂ ಅದರ ಪರಿಮಳದ ಸಂಬಂಧದಂತೆಯೂ ಸೇರಿಹೋಗಿದೆ. ನಿಸರ್ಗ ಗರ್ಭದಲ್ಲಿಯೇ ಹುಟ್ಟಿದ ಕುವೆಂಪು ಸಂವೇದನೆ ಅಂಥ ಪ್ರಕೃತಿಯ ಮಡಿಲಲ್ಲಿಯೇ ಸಮೃದ್ಧಗೊಂಡದ್ದು. ಆ ಸಮೃದ್ಧತೆ ಅವರ ಒಟ್ಟು ಸಾಹಿತ್ಯದ ಅಭಿವ್ಯಕ್ತಿಯಾಗಿಯೂ ನಿರ್ಮಾಣಗೊಂಡಿರುವುದನ್ನು ಇಂಥ ಅಧ್ಯಯನಗಳಿಂದ ಕಾಣಬಹುದಾಗಿದೆ. ಮೇಲಿನ ಉಲ್ಲೇಖದಲ್ಲಿಯೇ ಕಾಣುವಂತೆ ಈ ಸಂವೇದನೆ ತನ್ನ ಜೀವನಪೂರ್ತಿ ಅಂಥ ನಿಸರ್ಗದಲ್ಲಿಯೇ ನಿರಂತರವಾಗಿ ಮಿಂದು ಪವಿತ್ರಗೊಂಡಿದೆ ಹಾಗು ಸಾಹಿತ್ಯ ಸೃಷ್ಟಿಸಿದೆ. ಹಾಗಾಗಿಯೇ 'ನನ್ನ ಸಾಹಿತ್ಯವನ್ನು ನಿಸರ್ಗದಿಂದ ಬೇರ್ಪಡಿಸಲಾಗದು' ಎಂಬ ಕವಿಯ ಬಿನ್ನಹವನ್ನು ಇಂಥ ಅಧ್ಯಯನದ ಹಿನ್ನೆಲೆಯಲ್ಲಿ ಪರಿಗಣನೆಗೆ ತೆಗೆದುಕೊಳ್ಳುವುದು ಮುಖ್ಯವೆನಿಸುತ್ತದೆ.

'ಕುವೆಂಪು ಕನ್ನಡದ ಮೊದಲ ನಿಸರ್ಗಾನುಭವಿ ; ಕನ್ನಡ ಸಾಂಸ್ಕೃತಿಕ ಚರಿತ್ರೆಯಲ್ಲಿ ಕುವೆಂಪುವಿಗೆ ಅತ್ಯಂತ ಮಹತ್ವದ ಸ್ಥಾನವಿರುವುದು ಕೂಡಾ ಇದೇ ಕಾರಣಕ್ಕೆ'[೯] ಎಂಬ ಡಿ.ಆರ್. ನಾಗರಾಜ್ ಅವರ ಈ ಚಿಂತನೆ ಮೇಲಿನ ವಿಚಾರಕ್ಕೆ ಸಮರ್ಥನೀಯವಾಗಿರುವಂತೆ ಕಾಣುತ್ತದೆ. ಕುವೆಂಪು ಅವರ ಸಾಹಿತ್ಯದಲ್ಲಿ ಪ್ರಕಟಗೊಂಡಿರುವ ಪ್ರಕೃತಿ ಮತ್ತಾವ ಲೇಖಕರಲ್ಲಿಯೂ ಈ ಪ್ರಮಾಣದಲ್ಲಿ ಹಾಗೂ ಇಷ್ಟು ಸಮೃದ್ಧತೆಯಲ್ಲಿ ಪ್ರಕಟಗೊಂಡಿಲ್ಲ. ಇದೇ ಅವರ ಸಾಹಿತ್ಯದ ಅಸ್ಮಿತೆಯಾಗಿದೆಯೆಂಬುದನ್ನು ಹಲವು ವಿಮರ್ಶಕರು ಇತ್ತೀಚಿನ ದಶಕಗಳಲ್ಲಿ ಗುರುತಿಸಿದ್ದಾರೆ. ಅದರಲ್ಲಿಯೂ ಇತ್ತೀಚೆಗೆ ಈ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ನೋಡುವ, ಓದುವ ಹಾಗೂ ವಿಶ್ಲೇಷಿಸುವ ಜರೂರು ಹೆಚ್ಚಾಗಿದೆ. ಇಂಥ ಜರೂರು ಜಾಗತಿಕ ಮಟ್ಟದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ.

ಜಾಗತಿಕ ಮಟ್ಟದಲ್ಲಿ ಪರಿಸರ ಸಮಸ್ಯೆಗಳು ಉಲ್ಬಣಿಸಿದಂತೆಲ್ಲ ಸಾಹಿತ್ಯ ಹಾಗೂ ಮನುಷ್ಯ ಸಂಬಂಧಗಳನ್ನು ಕುರಿತ ಅಧ್ಯಯನಗಳು ತುಂಬಾ ಸೂಕ್ಷ್ಮ ನೆಲೆಗಳಲ್ಲಿ ನಡೆಯುತ್ತಿರುವುದನ್ನು ಕಾಣುತ್ತೇವೆ. ಪರಿಸರ ವಿಮರ್ಶೆಯೆಂಬ ಹೊಸ ಶಾಖೆಯೊಂದು ವಿಕಾಸಗೊಂಡಿದೆ. ಆ ಶಾಖೆಯು ಹಲವು ವಿಭಾಗಗಳಾಗಿ ಅಧ್ಯಯನ ಮುಖಿಯಾಗಿದೆ. 'ಡೀಪ್ ಇಕಾಲಜಿ', 'ಇಕೊಫೆಮಿನಿಸಂ' ಪರಿಕಲ್ಪನೆಗಳು ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳ ಶೋಧವನ್ನು ಮುಖ್ಯ ನೆಲೆಯನ್ನಾಗಿ ಮಾಡಿಕೊಂಡಿವೆ. ಈ ಮಾದರಿ ತೇಜಸ್ವಿಯವರ ಶೋಧಿತ ಸಂಶ್ಲೇಷಣಾತ್ಮಕ ವಿಧಾನ. ಇಂಥ ಹಿನ್ನೆಲೆಯಿಂದ ಕುವೆಂಪು ಸಾಹಿತ್ಯವನ್ನು ಅಧ್ಯಯನ ಮಾಡುವುದು ಸೂಕ್ತವೆಂದು ಕಾಣುತ್ತದೆ.

ಕಾಡಿನ ಕೊಳಲಿದು, ಕಾಡ ಕವಿಯು ನಾ, ನಾಡಿನ ಜನರೊಲಿದಾಲಿಪುದು ಎಂಬ ಗೊಲ್ಲನ ಬಿನ್ನಹದಲ್ಲಿಯೇ ಪರಿಸರ ಚಿಂತನೆ ಅಡಗಿದೆ.

ಸಿರಿಬನದೇವಿಯ ಬೊಕ್ಕಸದಿಂದ
ಕದ್ದವು ಕೆಲವಿವು ಹಾಡುಗಳು ;
ಸುಂದರ ಋತುಗಳ ಸಿರಿಗೈಯಿಂದ
ಸುಲಿದವು ಕೆಲವಿವು ಹಾಡುಗಳು ;
ನೇಸರು ಚಂದಿರ ತಾರೆಗಳಿಂದ
ಕೆಲವನು ಭಿಕ್ಷೆಯ ಬೇಡಿದೆನು ;
....
ನೆಚ್ಚಳಿದೊಲುಮೆಯ ಕಂಬನಿ ತೆತ್ತಿಹ
ಭಾವದ ಗೀತೆಗಳಿವು ಕೆಲವು ;
....
ಸುಗ್ಗಿಯ ಬನದಲಿ ಹಸುರಿನ ಮೇಲೆ
ಹೂವುಗಳಂದದಿ ಕೆಲವನು ಆಯ್ದೆ ;
ಮಂಜಿನ ಮಣಿಗಳ ಮಾಗಿಯ ಲೀಲೆ
ಶೋಭಿಸಲದರಿಂದಿನಿತನು ಕೊಯ್ದೆ ;
ವಿಪಿನ ವಿಹಂಗಮ ಕಂಠವ ಸೇರಿ
ನುಣ್ಚರಗಳ ಗೆದ್ದೆನು ಬಲು ಹೋರಿ.
ಕಾಮನಬಿಲ್ಲನು ದಾರವ ಮಾಡಿ
ಮೊಳಗನು, ಮಿಂಚನು, ಹನಿಗಳ ಬೇಡಿ
ಹಾಡುಗಳಿನಿತನು ಕೋದಿಹೆನು!
ತುಂಗೆಯ ತೆರೆಗಳ ಚುಂಬನದಿಂದ
ಸಿರಿ ಮಲೆನಾಡಿನ ಸಿರಿ ಮಡಿಲಿಂದ
ಕವನಗಳಿನಿತನು ನೆಯ್ದಿಹೆನು![೧೦]

ಈಗಾಗಲೇ ಪ್ರಸ್ತಾಪಿಸಿದಂತೆ ಕುವೆಂಪು ಅವರ ಸಾಹಿತ್ಯ ಪ್ರಕೃತಿಯಿಂದಲೇ ಮೈಪಡೆಯಿತು ಎಂಬುದನ್ನು ಈ ಪದ್ಯಭಾಗ ಸ್ಪಷ್ಟಪಡಿಸುತ್ತದೆ. ಅಂದರೆ ಬನದೇವಿಯ ಬೊಕ್ಕಸದಿಂದಲೂ, ಸುಂದರ ಋತುಗಳ ಸಿರಿಗೈಯಿಂದಲೂ, ನೇಸರು, ಚಂದಿರ, ತಾರೆ ಮೊದಲಾದ ನಿಸರ್ಗದ ಒಡನಾಟಗಳಿಂದ ತನ್ನ ಕಾವ್ಯವನ್ನು ಪಡೆದದ್ದೆಂದು ಇಲ್ಲಿ ಸ್ಪಷ್ಟಪಡಿಸುತ್ತಾರೆ. ಇಂಥ ನಿಸರ್ಗಾನುಭವಗಳೇ ಅವರ ಕಾವ್ಯದ ಉದ್ದಕ್ಕೂ ಪ್ರವಹಿಸುವುದನ್ನು ಅವರ ಮೊದಲ ಸಂಕಲನದ ಮೊದಲ ಕವಿತೆಯಾದ 'ಗೊಲ್ಲನ ಬಿನ್ನಹ'ದಲ್ಲಿಯೇ ಮುಂಗಾಣ್ಕೆಯೊಂದು ಮಡುಗಟ್ಟಿರುವುದು ಕಾಣುತ್ತದೆ. ಅಖಂಡ ಪರಿಸರದ ರಮ್ಯಾನುಭವಗಳ ಜೊತೆಜೊತೆಯಲ್ಲಿಯೇ ಸುಖ ದುಃಖಗಳ ಆಲಿಂಗನದ ಹಾಡುಗಳು, ಒಲುಮೆಯ ಭಾವಗೀತಗಳು, ಶೃಂಗಾರದ ವಿನೋದದ ಹಾಡುಗಳು, ಇಹ ಮತ್ತು ಪರಗಳ ಅನುಭವಗಳು ಅವರ ಕಾವ್ಯದಲ್ಲಿ ಜೀವಧಾತುಗಳಾಗಿ ಕಬ್ಬಿಗನ ಇಂಚರಗಾಣ್ಕೆಯಾಗಿ ಚಲನಶೀಲಗೊಳ್ಳುತ್ತವೆ. ಇಂಥ ಚಲನಶೀಲತೆಗೆ ಕಾವ್ಯ ಕಾರಣವಾಗುವುದನ್ನು 'ಕವಿತೆಗೆ' ಕವನ ಸ್ಪಷ್ಟಪಡಿಸುತ್ತದೆ.

ಕುವೆಂಪು ಅವರು ಬಾಲ್ಯಾವಸ್ಥೆಯಲ್ಲಿಯೇ 'ಕವಿತೆ'ಯ ಸಂಗಕ್ಕೆ ಆಕರ್ಷಿತರಾದದ್ದಕ್ಕೆ ಕವಿತೆಯೇ ತಮ್ಮ ಜೀವಮಾನದುದ್ದಕ್ಕೂ ಶಕ್ತಿಯಾಗಿ, ಮುಕ್ತಿಯಾಗಿ, ಆತ್ಮಶಕ್ತಿಯಾಗಿ ಮುಂದುವರಿಯುವುದನ್ನು ಅವರ ಒಟ್ಟು ಕಾವ್ಯಾಭಿವ್ಯಕ್ತಿ ವಿಶದಪಡಿಸುತ್ತದೆ. ಹಾಗಾಗಿಯೇ ಜೀವನದ ಧ್ಯೇಯೋದ್ದೇಶಗಳಿಗೆ ಆತ್ಮಸ್ಥೈರ್ಯವನ್ನು ತುಂಬಿ ಮಾರ್ಗದರ್ಶಿಯಾಗಿ ಕೆಲಸ ಮಾಡಿರುವುದನ್ನು ಈ ಕೆಳಗಿನ ಕಾವ್ಯಭಾಗ ಸ್ಪಷ್ಟಪಡಿಸುತ್ತದೆ.

ನಿನ್ನ ಸಂಗ ನಿಚ್ಚವಾಗ
ಲೆನಗೆ, ಕವಿತೆಯೆ;
ಯೋಗಿಯಾಗಲಾಸೆ ಇಲ್ಲ,
ಚಾಗಿಯಾಗಲಾಸೆ ಇಲ್ಲ,
ಸಿದ್ಧನಾಗಲಾಸೆ ಇಲ್ಲ,
ಬುದ್ಧನಾಗಲಾಸೆ ಇಲ್ಲ ;
ನಿನ್ನ ಸಂಗದೊಂದು ಹುಚ್ಚೆ
ಆಸೆ ತಿರುಕಗೆ!
ಬದುಕಿನಲ್ಲಿ, ಸಾವಿನಲ್ಲಿ,
ಜನುಮ ಜನುಮಗಳಲಿ ನಿನ್ನ
ಸಂಗ ತಪ್ಪದಿರಲಿ ಎನಗೆ,
ಕಬ್ಬದಂಗನೆ!
ಕಾಲವೆಂಬುದಿರುವ ತನಕ
ಸೃಷ್ಟಿಯೆಂಬುದಿರುವ ತನಕ
ದೇವನೊಬ್ಬನಿರುವ ತನಕ
ಸರಸವಾಡುವ!

ಕವಿಯ ಕೆಳದಿ, ಒಂದು ವೇಳೆ
ಲೋಕವೆಲ್ಲ ಸೊನ್ನೆಯಾಗೆ,
ನಮ್ಮ ಪ್ರೇಮಭಾವದಿಂದ
ಮಧುರತರದ ಜಗವ ಮಾಡಿ
ನೋಡಿ ನಲಿಯುವ !

ಇಲ್ಲಿ ಕವಿ ನಿಸರ್ಗದೊಂದಿಗೆ ಪಡೆದುಕೊಳ್ಳುವ ಸಂಬಂಧ ಏಕಮುಖವಾದರೆ ಅಸಂಖ್ಯ ಸಂಬಂಧಗಳಲ್ಲಿ ತೊಡಗುವ ದೃಷ್ಟಿಧೋರಣೆಗಳನ್ನು ಹೊಂದಿದೆ. ಈಗಾಗಲೇ ಗೃಹೀತವಾಗಿರುವ ಅಪೇಕ್ಷೆಗಳಿಗಿಂತ ಭಿನ್ನವಾದ ಆಯ್ಕೆಯತ್ತ ಕವಿತೆ ಚಲಿಸುತ್ತದೆ. ಕಾಲ, ಸೃಷ್ಟಿ, ದೈವ ಇವುಗಳೊಡನೆ ಕೂಡ ಭಿನ್ನ ನೆಲೆಯಲ್ಲಿ ಸಂವಾದಿಸುವ ಹೊಸ ದೃಷ್ಟಿಯೊಂದು ವ್ಯಕ್ತಗೊಂಡಿದೆ. ಕಾವ್ಯ ಸೃಷ್ಟಿಯ ಆಕರ್ಷಣೆ ಮತ್ತು ಸೃಷ್ಟಿಯ ಆಕರ್ಷಣೆಯನ್ನು ಏಕತ್ರವಾಗಿ ಪರಿಭಾವಿಸುವ ಕಲ್ಪನೆಯೊಂದು ಕವಿಯ ಕಾವ್ಯಸೃಷ್ಟಿಯ ಆರಂಭದ ದಿನಗಳಲ್ಲಿಯೇ ವ್ಯಕ್ತಗೊಂಡಿರುವುದಕ್ಕೂ ಕವಿ ಈ ಎರಡೂ ಸೃಷ್ಟಿಶೀಲತೆಯನ್ನು ತನ್ನ ಸೃಷ್ಟಿಶೀಲತೆಯ ನಿರಂತರ ದ್ರವ್ಯವಾಗಿಸಿಕೊಂಡಿರುವುದಕ್ಕೂ ಒಂದು ಅನನ್ಯ ಸಂಬಂಧವಿದೆ.

ಅಲ್ಲಿ ನಾವು ಒಂದು ಗೂಡಿ
ಮಾತನಾಡಿ, ಹಾಡ ಹಾಡಿ
ಮರಳಿಯೊಲಿಯುವ !
ತಾರೆಗಳನು ಅಣಕಿಸುತ್ತ
ರವಿಶಶಿಗಳನೇಳಿಸುತ್ತ
ಮಾಯೆಯನ್ನೆ ಚಾಳಿಸುತ್ತ
ಬ್ರಹ್ಮವೆಂಬ ದಿವ್ಯವನದೊ
ಳಾಡಿ ಕುಣಿಯುವ !
ದೇವಿ, ಬಾರೆ, ಕಬ್ಬವೆಣ್ಣೆ,
ಹಾಡಿ ತಣಿಯುವ![೧೧]

ಕುವೆಂಪು ಅವರ ಕಾವ್ಯಾಭಿವ್ಯಕ್ತಿಯ ಶ್ರದ್ಧೆಗೆ ಸಾಕ್ಷಿಯಂತಿದೆ ಈ ಮೇಲಿನ ಕಾವ್ಯಭಾಗ. ಕಾವ್ಯವನ್ನೇ ತನ್ನ ಜೀವದ ಗೆಳತಿಯನ್ನಾಗಿ ಸ್ವೀಕರಿಸುವ ಹಾಗೂ ಅಂಥ ಸಂಬಂಧದಲ್ಲಿಯೇ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುವ ಕರ್ಮವೇ ಮಾರ್ಮಿಕವಾಗಿ ಕಾಣುತ್ತದೆ. ಕವಿತೆಯೊಂದಿಗಿನ ಇಂಥ ಸಾರ್ಥಕ ಸಂಬಂಧದ ಮೂಲಕವೇ ಬದುಕಿನಲ್ಲಿ ಧನ್ಯತೆಯನ್ನು, ಲೋಕ ಮಾನ್ಯತೆಯನ್ನು ಪಡೆದನೆಂಬ ವಿನಯವೂ ಇಲ್ಲಿದೆ. ಹಾಗಾಗಿಯೇ ಈ ಸಂಬಂಧ ಕಾಲ, ಸೃಷ್ಟಿ, ದೇವನಿರುವ ತನಕವೂ ಇರಬೇಕಾದ ಜೀವದಾಸೆಯಾಗಿ ಪ್ರಕಟಗೊಂಡಿದೆ. ಇಂಥ ಜೀವದಾಸೆಯ ಕವಿಗೆ ಇಡೀ ದೇಹವೇ ಕಣ್ಣಾಗಿ, ಕಿವಿಯಾಗಿ ಪರಿಸರದ ಸರ್ವವನ್ನು ಗ್ರಹಿಸಲು ಸಾಧ್ಯವಾಯಿತೆಂದು ಕಾಣುತ್ತದೆ. ಆತ್ಮಕಥಾನಕದ ಈ ಕೆಳಗಿನ ಉಲ್ಲೇಖ ಕವಿ ಸಂವೇದನೆಗೆ ಸಾಕ್ಷಿಯಂತಿದೆ.

ಕವಿ ಸಹಜ ಮನೋಧರ್ಮದಿಂದ ವನ್ಯರಮ್ಯತೆಯನ್ನು ಆಸ್ವಾದಿಸಿದೆ. ಅರಣ್ಯದ ನಿಶ್ಶಬ್ದತೆಯ ಸದ್ದುಗಳನ್ನು ಆಲಿಸಿದೆ : ಮೆಲು ಗಾಳಿಗೆ ಹಣ್ಣೆಲೆ ಉದುರುವ ಸದ್ದು, ಆಗೊಂದು ಈಗೊಂದು ಒಣಗಿದ ಕಡ್ಡಿ ಮರದಿಂದ ಬೀಳುವ ಸದ್ದು ; ನೆಲದ ಮೇಲೆ ದಟ್ಟಯಿಸಿ ಬಿದ್ದಿದ್ದ ತರಗೆಲೆಗಳಲ್ಲಿ ಏನೊ ಸಣ್ಣ ಪುಟ್ಟ ಜಂತುಗಳು ತಿರುಗಾಡಿದ ಸದ್ದು ; ಅನತಿ ದೂರದಲ್ಲಿ ಮಂಗಟ್ಟೆ ಹಕ್ಕಿ ಕೂಗಿದ ಸದ್ದು ; ಯಾವುದೊ ಬಿದಿರು ಮೆಳೆಯಲ್ಲಿ ಗಾಳಿಗೆ ಬಿದಿರು ಬಿದಿರಿಗೆ ಉಜ್ಜುವ ಕೀರಲು ಸದ್ದು ; ಯಾವುದೊ ಮರದ ಒಣಗೊಂಬೆಯಲ್ಲಿ ಮರಕುಟಿಗನ ಕೊಕ್ಕು ಕೊಟಗುವ ಸದ್ದು ; ಎಲ್ಲಿಂದಲೋ ಬಂದು ಎಲ್ಲಿಗೋ ಹೋಗುವ ಗಿಳಿಹಿಂಡಿನ ಗುಂಪುಲಿ ಸದ್ದು ; ಏಕಾಂಗಿಯಾದ ಕಾಮಹಳ್ಳಿಯ ಇಂಪುಲಿ ಸದ್ದು ; ಒಮ್ಮೊಮ್ಮೆ ದೂರದ ಕಣಿವೆಗಳಲ್ಲಿರುವ ಹಳ್ಳಿ ಮನೆಗಳ ನಾಯಿ ಬೊಗಳುವ ಸದ್ದು ; ಹಾಗೆಯೇ ದನ ಕೊಟ್ಟಿಗೆಗೆ ಹೋಗುವ ಹಂಬಾ ಸದ್ದು ; ಸದ್ದಿಲ್ಲದ ಆ ಅಡವಿಯ ನಿಶ್ಶಬ್ದತೆ ಎಷ್ಟೊಂದು ಮರಿಸದ್ದುಗಳಿಂದ ಸಂಭವಿಸುತ್ತದೆ![೨]

ಇಂಥ ತನ್ಮಯತೆಯಲ್ಲಿಯೇ ಕುವೆಂಪು ಕಾವ್ಯ ಹುಟ್ಟಿಕೊಳ್ಳುತ್ತದೆ. ಹಾಗಾಗಿಯೇ ಕುವೆಂಪು ಅವರ ಕಾವ್ಯವೇ ಪ್ರಕೃತಿಯೊ ಪ್ರಕೃತಿಯೇ ಕಾವ್ಯವೊ ಎಂಬಂತೆ ಪರಿಸರ ಅವರ ಕಾವ್ಯದಲ್ಲಿ ಸೇರಿಹೋಗಿದೆ. ಅವರ ಮಾತಿನಲ್ಲಿಯೇ ಹೇಳುವುದಾದರೆ ಈ ಅರ್ಥದಲ್ಲಿ ಅವರ ಕಾವ್ಯ ಅದ್ವೈತ. ಅಂದರೆ ಒಂದು ಇನ್ನೊಂದರಲ್ಲಿ ಅಭಿನ್ನವಾಗಿದೆ. ಇಂಥ ಅಭಿನ್ನತೆ ಕನ್ನಡ ಸಾಹಿತ್ಯದಲ್ಲಿಯೇ ಅಪರೂಪ. ಅನನ್ಯ. ಈ ಅನನ್ಯತೆ ಪೂರ್ಣದೃಷ್ಟಿಯಿಂದ ಕಾವ್ಯದ ಎಲ್ಲ ಕಡೆ ಎಲ್ಲ ಸಂದರ್ಭಗಳಲ್ಲಿ ಬೆಳಗುತ್ತದೆ. ಈಗಾಗಲೇ ಪ್ರಸ್ತಾಪಿಸಿದಂತೆ ಪರಿಸರ ಕುವೆಂಪು ಅವರ ಕಾವ್ಯದ ಪ್ರತಿಮೆಯಾಗಿದೆ. ಇಂಥ ಪ್ರತಿಮಾತ್ಮಕ ಸಾಹಿತ್ಯ ನಿರ್ಮಿತಿಯಲ್ಲಿ ಕುವೆಂಪು ಅವರ ಪ್ರಜ್ಞೆ ಹಾಗೂ ಅವರ ದಾರ್ಶನಿಕ ಪೂರ್ಣದೃಷ್ಟಿ ಕೆಲಸ ಮಾಡಿದೆ. ವಿಶ್ವಮಾನವ ಸಂದೇಶ ಹಾಗೂ ಅಂಥ ಧೋರಣೆಯ ಸಾಹಿತ್ಯ ವಿಶ್ವಕ್ಕೆ ಎದುರಾಗಿರುವ ಪರಿಸರ ಆಪತ್ತುಗಳನ್ನು ಸೂಕ್ಷ್ಮವಾಗಿ ಗ್ರಹಿಸಿದೆ.

೪. ಪ್ರಕೃತಿಯ ಬಹುಮುಖತೆ

ಕುವೆಂಪು ಅವರ ಭಾವಗೀತಾತ್ಮಕ ಕಾವ್ಯದಲ್ಲಿ ಮಲೆನಾಡಿನ ಕವಿಶೈಲ, ನವಿಲುಕಲ್ಲು ಗುಡ್ಡ, ಆಗುಂಬೆ ಪರ್ವತ ಶೃಂಗಗಳು ಹಾಗೂ ಮೈಸೂರಿನ ಹೊರವಲಯಗಳಲ್ಲಿ ಕಂಡ ಅರುಣೋದಯ, ಸೂರ್ಯೋದಯ, ಸೂರ್ಯಾಸ್ತಮಗಳ ಕವಿತೆಗಳು, ಗ್ರಾಮೀಣ ಬದುಕಿನ ಸ್ವಾರಸ್ಯಕರ ಜೀವನ ವ್ಯಾಪಾರಗಳು, ಬೇಟೆ ಅಥವಾ ಶಿಕಾರಿಯ ಚಿತ್ರಗಳು, ಕಾಡು, ಬೆಟ್ಟ, ಮಲೆ ಹೊಳೆ, ಹಕ್ಕಿ, ಮಿಗ, ಹೂವು, ಬಿಸಿಲು ಮೊದಲಾದ ನೂರಾರು ನಿಸರ್ಗ ಚಿತ್ರಗಳು, ಸಹ್ಯಾದ್ರಿಯ ಪರ್ವತಶ್ರೇಣಿಗಳ ಪ್ರಕೃತಿ ಸೌಂದರ್ಯದ ವರ್ಣನೆಗಳು, ಭಯಂಕರ ಕಂದರಾರಣ್ಯಗಳ ಚಿತ್ರಗಳು, ನದಿ, ತೊರೆಗಳ ಚಿತ್ರಗಳಲ್ಲಿ ಕುವೆಂಪು ಕಾಣ್ಕೆಯ ಪರಿಸರ ದಟ್ಟವಾಗಿ ಮೈದಾಳಿದೆ.

ತನ್ನ ಬಾಲ್ಯದ ದಟ್ಟವಾದ ನಿಸರ್ಗಾನುಭವಗಳಿಗೆ ಪೀಠಿಕೆಯಂತಿದೆ ಈ ಕೆಳಗಿನ ಉಲ್ಲೇಖ.

ಗುಡ್ಡ ಬೆಟ್ಟ ಮಲೆಗಳಲ್ಲಿ ಕೋವಿ ಹಿಡಿದು ಅಲೆಯುವುದು ; ಪ್ರಾತಃಕಾಲ ಮತ್ತು ಸಂಜೆ ಕವಿಶೈಲ ಮತ್ತು ಸಂಜೆಗಿರಿಗಳಿಗೆ ಸೋದರ ಸೋದರಿಯರೊಡನೆ ಏರಿ

> ಸೂರ್ಯೋದಯ ಸೂರ್ಯಾಸ್ತಗಳ ಸೌಂದರ್ಯ ಸವಿಯುವುದು ; ಭಾವಗೀತೆಗಳನ್ನು ಬರೆಯುವುದು ಮತ್ತು ಹಾಡುವುದು ; ಜೀವ, ಜಗತ್ತು ಮತ್ತು ಈಶ್ವರ ಮೊದಲಾದ ತಾತ್ವಿಕ ವಿಚಾರಗಳ ಪರಿಚಿಂತನೆ, ಪರಿಭಾವನೆ, ಧ್ಯಾನ ಇತ್ಯಾದಿ ಆಧ್ಯಾತ್ಮಿಕ ಸಾಧನೆಗಳಲ್ಲಿ ತೊಡಗುವುದು ; ಸಾರಿಕೆ ಬೇಟೆ, ದೊಡ್ಡ ಬೇಟೆ, ಮರಸು ಬೇಟೆ ಇತ್ಯಾದಿಗಳಲ್ಲಿ ಹಳ್ಳಿಗರೊಡನೆ ಸೇರುವುದು ; ಉಪ್ಪರಿಗೆಯಲ್ಲಿ ಕುಳಿತು ಎದುರಿಗೇ ಬಾನ್ ಮುಟ್ಟಲೆಂಬಂತೆ ಎದ್ದಿರುವ ದಟ್ಟಗಾಡಿನ ಮಲೆಯ ಮತ್ತು ಅದರ ..... ಅಡಕೆ ಬಾಳೆಯ ತೋಟದ ಸೌಂದರ್ಯ ಸಾನ್ನಿಧ್ಯದಲ್ಲಿ ಪ್ರಾಚ್ಯ ಮತ್ತು ಪಾಶ್ಚಾತ್ಯ ಸಾಹಿತ್ಯ ಮತ್ತು ತತ್ವಶಾಸ್ತ್ರ ಗ್ರಂಥಗಳಲ್ಲಿ ಮಗ್ನನಾಗುವುದು ಇತ್ಯಾದಿ ಇತ್ಯಾದಿ ಇತ್ಯಾದಿ.[೧೩]

ಈ ಮೇಲಿನ ಚಟುವಟಿಕೆಗಳು ಕುವೆಂಪು ಸಂವೇದನೆಯ ಧಾತುಗಳನ್ನು ಪರಿಚಯಿಸುತ್ತವೆ. ಬೇಟೆ, ಬೆಟ್ಟಗುಡ್ಡಗಳ ಅಲೆದಾಟ, ಸೂರ್ಯೋದಯ, ಸೂರ್ಯಾಸ್ತಮಗಳನ್ನು ಎದುರುಗೊಳ್ಳುವುದು ಮೊದಲಾದ ಚಟುವಟಿಕೆಗಳಲ್ಲಿಯೇ ಪ್ರಕೃತಿಯೊಂದಿಗಿನ ಅವಿನಾಭಾವ ಸಂಬಂಧ ಬಲಗೊಳ್ಳುತ್ತಿರುವುದನ್ನು ಕಾಣುತ್ತೇವೆ. ನಿಸರ್ಗ ಮತ್ತು ಅದರ ಸೌಂದರ್ಯದ ಆಸ್ವಾದನೆಯ ಜೊತೆಯಲ್ಲಿಯೇ ಆಧ್ಯಾತ್ಮಿಕ ಸಾಧನೆಯು ಕೈಗೂಡುತ್ತಿರುವ ಸೂಚನೆಗಳು ಅವರ ಕಾವ್ಯಾಧ್ಯಯನದಿಂದ ಸ್ಪಷ್ಟಗೊಳ್ಳುತ್ತದೆ.

ಕುವೆಂಪು ಅವರು ಹೇಳುವಂತೆ ಅವರ ಸಾಹಿತ್ಯದಲ್ಲಿ ಆಧ್ಯಾತ್ಮ ದೃಷ್ಟಿಯೇ ಸರ್ವವ್ಯಾಪಿಯಾಗಿದೆ. ಅದರ ಸಾಧನೆಯೇ ತಮ್ಮ ಜೀವನೋದ್ದೇಶವೆಂದು ಭಾವಿಸುತ್ತಾರೆ. ಆ ಸಾಧನೆಯ ಅನುಭವವೇ ಸಾಹಿತ್ಯವಾಗಿ ಹೊರಹೊಮ್ಮುತ್ತದೆ ಎನ್ನುತ್ತಾರೆ. ನಿಸರ್ಗ ವರ್ಣನೆಯನ್ನು ಹಾಗೂ ಪ್ರಕೃತಿ ಸೌಂದರ್ಯವನ್ನು ಬೌದ್ಧಿಕವಾಗಿ ಮಾತ್ರವಲ್ಲದೆ ಭಾವನಾತ್ಮಕವಾಗಿ, ಆಧ್ಯಾತ್ಮಿಕವಾಗಿ ಗ್ರಹಿಸಲು ಮುಂದಾಗುವುದನ್ನು ಅವರ ಕಾವ್ಯಾಧ್ಯಯನ ಸ್ಪಷ್ಟಪಡಿಸುತ್ತದೆ. ಹಾಗಾಗಿಯೇ

> ರಸ ಋಷಿಯಾದ ಕವಿಯ ಪೂರ್ಣದೃಷ್ಟಿಗೆ ಪ್ರಕೃತಿ ಪರಮಾತ್ಮನ ಚಿನ್ಮಯ ದಿವ್ಯಶರೀರವಾಗಿ ತೋರುತ್ತದೆ. ಇಂದ್ರಿಯ ವ್ಯಾಪಾರಗಳೆಲ್ಲ ಪೂಜೆಯಾಗಿ ಪರಿಣಮಿಸುತ್ತವೆ.
>
> ....
>
> ದ್ರಷ್ಟಾರನಾದ ಕವಿಯ ಪೂರ್ಣದೃಷ್ಟಿಗೆ ಪ್ರಕೃತಿ ಮರ್ತ್ಯಗೋಚರವಾದ ಜಗತ್ತಷ್ಟರಿಂದಲೆ ಪೂರೈಸುವುದಿಲ್ಲ. ಅವಳು ಉರ್ವರೆಯೂ ಹೌದು, ವಿಶ್ವಂಭರೆಯೂ ಹೌದು, ಅಂತರ್ಯಾಮಿಯೂ ಹೌದು, ಅತೀತೆಯೂ ಹೌದು. ಅವಳು ಸೃಷ್ಟಿರತಿ, ಕಲಾಸುಂದರಿ, ಜಗದ್ಧಾತ್ರಿ, ಜಗಜ್ಜನನಿ, ಮಹಾಮಾಯೆ, ಆದಿಶಕ್ತಿ, ಸೃಷ್ಟಿಯೆಲ್ಲ ಅವಳ ಲೀಲಾವ್ಯಕ್ತಿ ; ಜನನ ಮರಣ, ಕಾಲ ದೇಶಗಳು ಅವಳ ನರ್ತನದ ಚರಣನ್ಯಾಸಗಳು.[೧೪]

ಇಂಥ ನಿಸರ್ಗದ ತನ್ಮಯತೆಯಲ್ಲಿ ಕುವೆಂಪು ಕಾವ್ಯ ಮೈಪಡೆಯುತ್ತದೆ. ಹಾಗಾಗಿ ಜಡವೆಂಬುದೆಲ್ಲ ನಟನೆಯ ಲೀಲೆಯಾಗುತ್ತದೆ. ಎಲ್ಲೆಲ್ಲೂ ಚೈತನ್ಯವನ್ನೇ ಕಾಣುತ್ತದೆ. 'ಸಕಲಾರಾಧನ ಸಾಧನ ಬೋಧನದ ಅನುಭವರಸ'

ಅಂಥ ಕಾವ್ಯದಲ್ಲಿ ಸಾಂದ್ರಗೊಳ್ಳುತ್ತದೆ. 'ಸೂರ್ಯೋದಯ ಚಂದ್ರೋದಯಗಳು ದೇವರ ದಯೆ ಕಾಣೊ' ಎಂಬ ಉದ್ಗಾರ ಮೊಳಗುತ್ತದೆ. ಅಂಥ ಕಾವ್ಯಾಭಿವ್ಯಕ್ತಿಗೆ ಅಭಿಮುಖವಾದ ಪ್ರಜ್ಞೆ ಯಾವ ಬಗೆಯದೆಂಬುದನ್ನು ಕುವೆಂಪು ಅವರ ಈ ಕೆಳಗಿನ ಮಾತುಗಳು ಸ್ಪಷ್ಟಪಡಿಸುತ್ತವೆ.

> 'ಪಸುರಸಿರಿಯ ಮೇಯುತ್ತಿತ್ತು ಕವಿಯ ಕಣ್ಣು'..... ನನ್ನ ನಿಸರ್ಗ ಕಾವ್ಯಗಳೆಲ್ಲ ನನ್ನ ಪ್ರತ್ಯಕ್ಷಾನುಭವದ ಪ್ರತಿಬಿಂಬ. 'ಚೇತನ ಮೂರ್ತಿಯು ಆ ಕಲ್ಲು - ತೆಗೆ ಜಡವೆಂಬುದೆ ಬರಿಸುಳ್ಳು!' 'ಉರಿಕಿಡಿದೆನು ಹಿಮಮಣಿಯಂತೆ!' ಈ ಸಾಲುಗಳನ್ನು ಬರೆಯುವಾಗ ಕವಿ ಲೌಕಿಕ ಭೂಮಿಕೆಯಲ್ಲಿರುತ್ತಾನೆಂದು ತಿಳಿಯಬೇಡಿ. ಕಾವ್ಯ ಸಮಾಧಿಯಲ್ಲಿದ್ದಾಗ ಅವನ ಅನುಭವವೇ ಗೀತೆಯಾಗಿ, ಹಿಮಮಣಿಯಾಗಿ, ಉರಿಯಾಗಿ, ಕಿಡಿಯಾಗಿ ಹೊರಹೊಮ್ಮುತ್ತದೆ.[೨೫]

ಪ್ರಕೃತಿಯ ಉಪಾಸಕನಾದ ಕುವೆಂಪು ಸಂವೇದನೆ ಅಥವಾ ಕವಿಪ್ರಜ್ಞೆ ಪ್ರಕೃತಿಯ ವೈಭವವೂ, ವೈವಿಧ್ಯಪೂರ್ಣವೂ ಆಗಿರುವ ಸೌಂದರ್ಯದಿಂದ ಆಕರ್ಷಿಸಿದಂತೆ ಅಂತರ್ಮುಖವಾದ ಅಂತರಂಗ ಸೌಂದರ್ಯದ ಕಡೆಗೂ ಚಲಿಸುತ್ತದೆ.

ಹಾಗಾಗಿ ಕುವೆಂಪು ಅವರಿಗೆ ಪ್ರಕೃತಿ ಆಸ್ವಾದನೆಯೇ ಕಾವ್ಯಾಭಿವ್ಯಕ್ತಿಯಾಗಿ ಮೈಪಡೆಯುತ್ತದೆ. ಪ್ರಕೃತಿಯ ವೈವಿಧ್ಯತೆಗಳು ಕಾವ್ಯದ ಸೆಲೆಯಾಗುತ್ತವೆ. ಪ್ರಕೃತಿಯ ಸೌಂದರ್ಯ ಹಾಗೂ ಅಸಂಖ್ಯ ನಿಸರ್ಗ ಲೀಲೆಗಳು ತತ್ವಗಳಾಗುತ್ತವೆ. ಪ್ರಕೃತಿ ಕಲೆಗೆ ತವರಾಗಿಯೂ, ಸಿರಿಗೆ ಬಿತ್ತಾಗಿಯೂ, ಸೊಬಗಿಗೆ ನೆಲೆಯಾಗುತ್ತದೆ. 'ನನ್ನ ಕವಿತೆ'ಯ ಈ ಕೆಳಗಿನ ಸಾಲುಗಳು ಈ ಮೇಲಿನ ವಿಚಾರವನ್ನು ಪುಷ್ಟೀಕರಿಸುತ್ತವೆ.

ನನ್ನ ಕವಿತೆಯ ನಾನು ದಿನವೂ
ಮುಗಿಲಿನಲಿ ಮೈ ತಬ್ಬುವೆ !
ಮಿಂಚುವೊಳೆಯಲಿ ಮುಳುಗಿ ಮಿಂದು,
ಸಿಡಿಲಿನೂಟವನುಂಡು ಬಂದು
ನನ್ನವಳ ನಾ ತಬ್ಬುವೆ!

ನವಿಲುಗರಿಗಳ ಬಣ್ಣಗಣ್ಣು
ಅವಳ ಬಿಂಕದ ಸೀರೆಯು!
ಕಂಡು ಹೇಳುವೆ, ಕೊಂಚ ನಿಲ್ಲು -
ಏಳು ಬಣ್ಣದ ಮಳೆಯ ಬಿಲ್ಲು
ಅವಳ ಕೊರಲಿನ ಹಾರವು!

....
ನನ್ನ ಕವಿತೆಯು 'ನನ್ನ ಕವಿತೆ'
ನನ್ನವಳೆ ಎಂದೆಂದಿಗೂ!

ನನ್ನ ಕವಿತೆಯ ನೀನು ಕಾಣೆ ;
ದೇವರಾಣೆಗು ನೀನು ಕಾಣೆ !
ನನ್ನವಳೆ ಅವಳೆಂದಿಗೂ![೧೬]

ಈ ಮೇಲಿನ ಕಾವ್ಯ ಭಾಗದಲ್ಲಿ ಕುವೆಂಪು ಕಾವ್ಯ ಸೃಷ್ಟಿಯ ನೆಲೆಗಳನ್ನು ಕಾಣುತ್ತೇವೆ. ಅವರ ಕಾವ್ಯ ಮೊದಲೇ ಹೇಳಿದಂತೆ ನೆಲ, ಆಕಾಶಗಳ ನಡುವಿನ ನಿಸರ್ಗ ವೈದೃಶ್ಯಗಳಲ್ಲಿಯೇ ಮೈಪಡೆಯುವುದನ್ನು ಈ ಭಾಗ ಸ್ಪಷ್ಟಪಡಿಸುತ್ತದೆ. ವಿಶ್ವದ ಅಖಂಡ ಪರಿಸರದಲ್ಲಿ ಜೀವ ವಿಕಾಸದ ಚಿಂತನೆ, ಬ್ರಹ್ಮಸೃಷ್ಟಿಯ ಕೌತುಕಗಳು, ಬನದಮ್ಮ, ಜಲದಮ್ಮ, ನೆಲದಮ್ಮರ ಸೃಷ್ಟಿ ವೈಚಿತ್ರಗಳು, ಉದಯಾಸ್ತಗಳ ಸೊಬಗುಗಳು, ಕೋಟಿ ವಿಹಂಗಮಗಳ ಉಲಿಯ ಧ್ವನಿಗಳು - ಹೀಗೆ ಪ್ರಕೃತಿಯ ಎಲ್ಲ ಮುಖಗಳನ್ನು ಅವರ ಕಾವ್ಯ ಒಳಗೊಂಡಿದೆ. ಅವರೇ ಹೇಳುವಂತೆ

> .... ಮೊದಮೊದಲು ಬಾಳುವೆಯ ಹಿನ್ನೆಲವಾಗಿ, ಬರಬರುತ್ತ ಕಾವ್ಯ ಕಲಾಕ್ಷೇತ್ರದ ಹಿನ್ನೆಲೆಯಾಗಿ, ಮತ್ತೆ ಮುಂಬರಿದು ಕಾವ್ಯ ರಮಣೀಯತೆಯನ್ನು ಹೆಚ್ಚಿಸುವ ಅಲಂಕಾರ ಸಾಧನಗಳನ್ನು ಸಮೃದ್ಧಿಯಾಗಿ ಒದಗಿಸುವ ಸೊಬಗಿನ ಗಣಿಯಾಗಿ, ಅದಕ್ಕೂ ಮುಂದೆ ಹೋಗಿ ಸೂಕ್ಷ್ಮತರವಾದ 'ಧ್ವನಿ'ಗೂ ಆಧ್ಯಾತ್ಮಿಕವಾದ 'ದರ್ಶನ'ಕ್ಕೂ ಪ್ರತಿಮಾ ರೂಪಿಣಿಯಾಗುವ[೧೭]

ಅವರ ಕಾವ್ಯದಲ್ಲಿನ ಪರಿಸರದ ನೆಲೆಗಳನ್ನು 'ಕವಿಯ ದೃಷ್ಟಿಯಲ್ಲಿ ಪ್ರಕೃತಿ', 'ಮಲೆನಾಡಿನ ನಿಸರ್ಗವಿಭೂತಿ', 'ಪ್ರಕೃತಿ ಸೌಂದರ್ಯ' ಮೊದಲಾದ ವಿಮರ್ಶಾ ಲೇಖನಗಳಲ್ಲಿ ಕುವೆಂಪು ಅವರೇ ತಮ್ಮ ಕಾವ್ಯವನ್ನು ಅಧ್ಯಯನಕ್ಕೆ ಗುರಿಪಡಿಸಿದ್ದಾರೆ.

೫. ಸ್ಥಳೀಯತೆ, ಪ್ರಕೃತಿ ಸೌಂದರ್ಯ ಹಾಗೂ ಸಾಂಪ್ರದಾಯಿಕ ಜಡ ಮೌಲ್ಯಗಳ ಪ್ರತಿರೋಧ :

"ಕೊಳಲು", "ಕಲಾಸುಂದರಿ", "ನವಿಲು", "ಪಕ್ಷಿಕಾಶಿ", "ಕೃತ್ತಿಕೆ" ಮೊದಲಾದ ಕಾವ್ಯ ಸಂಗ್ರಹಗಳಲ್ಲಿಯೂ, "ಮಲೆನಾಡಿನ ಚಿತ್ರಗಳು", "ಕಾನೂರು ಹೆಗ್ಗಡಿತಿ" ಮತ್ತು "ಮಲೆಗಳಲ್ಲಿ ಮದುಮಗಳು" ಗದ್ಯ ಕೃತಿಗಳಲ್ಲಿಯೂ, "ಶ್ರೀ ರಾಮಾಯಣ ದರ್ಶನಂ" ಹಾಗೂ ಅವರ ನಾಟಕ ಕೃತಿಗಳಲ್ಲಿಯೂ ಸ್ಥಳೀಯ ಪರಿಸರದ ನಾನಾ ಚಿತ್ರಗಳು ಮೈಪಡೆದಿವೆ. ಸ್ಥಳೀಯ ಪರಿಸರ ವೈವಿಧ್ಯತೆಗಳನ್ನು ಸೃಷ್ಟಿಕ್ರಿಯೆಗೆ ಒಳಗು ಮಾಡುತ್ತಲೇ ಸಾಂಪ್ರದಾಯಿಕ ಜಡ ಮೌಲ್ಯಗಳಿಗೆ ಮುಖಾಮುಖಿಯಾಗುವುದು ಕುವೆಂಪು ಕಾವ್ಯದ ಬಹುಮುಖ್ಯ ನೆಲೆಯಾಗಿರುವುದನ್ನು ಕನ್ನಡ ವಿಮರ್ಶೆ ಈಗಾಗಲೇ ಗುರುತಿಸಿದೆ.

ದೇವರು, ಧರ್ಮ, ಸ್ವರ್ಗ - ನರಕಗಳ ಕಲ್ಪನೆಗಳು, ಮೇಲು - ಕೀಳಿನ ಅಂತರಗಳು, ಅಸ್ಪೃಶ್ಯತೆಯಂಥ ಆಚರಣೆಗಳು, ಪೂಜೆ ಹಾಗೂ ಧಾರ್ಮಿಕ ಆಚರಣೆಗಳ ಅಮಾನವೀಯ ನೆಲೆಗಳಿಗೆ ಮುಖಾಮುಖಿಯಾಗುತ್ತಾ, ಅಂಥ ನೆಲೆಗಳಿಗೆ ಪ್ರಕೃತಿಯ ರೂಪಕ, ಪ್ರತಿಮೆಗಳಿಂದ ಮುಖಾಮುಖಿಯಾಗುವುದು ಕುವೆಂಪು ಕಾವ್ಯದ ಅನನ್ಯತೆಯಾಗಿದೆ.

‘ಕೆಂದಳಿರು’, ‘ಪ್ರಕೃತಿ ಉಪಾಸನೆ’, ‘ದೇವರು ಋಜು ಮಾಡಿದನು’, ‘ಇಬ್ಬನಿ’, ‘ಬರಲಿ ಬಡತನಕ್ಕೆ ಜೀವದೈಸಿರಿ’ ಹಾಗೂ ಇನ್ನೂ ಅನೇಕ ಕವನಗಳಲ್ಲಿ ಈ ಬಗೆಯ ಚಿಂತನೆ ಅಭಿವ್ಯಕ್ತವಾಗಿದೆ.

ನಳನಳಿಸುತಿರೆ ಕೆಂದಳಿರಿನ್ನೆಸಿರಿಯ ಸಿರಿ
ಸಾರುತಿಹಳೀ ದಿವ್ಯ ತರುಕಲಾಸುಂದರಿ !
ಆಃ ! ನಿಂತು ನೋಡಿಲ್ಲಿ :
ನೂರು ಋಷಿಗಳ ಬೋಧನೆಯ ಸಾರವಿಹುದಿಲ್ಲಿ ;
ನೂರು ವೈರಾಗಿಗಳ ಸಂಸಾರವಿಹುದಿಲ್ಲಿ!
ಬುದ್ಧಿಯರಿಯದ ಸಿದ್ಧಿ ಭಾವಗೋಚರವಿಲ್ಲಿ !
ವ್ಯಕ್ತಿತ್ವವೇ ಜ್ವಾಲೆಯಾಗುರಿಯುವುದು ಇಲ್ಲಿ !
ಕೋಟಿ ಮೈಲಿಗಳಾಚೆ ಕಾಶಿಯಾತ್ರೆಗಳೇಕೆ?
ಇಲ್ಲಿಗೈತರು, ಯಾತ್ರಿಕನೆ, ಇದುವೆ ತರುಕಾಶಿ !
ರಸತೀರ್ಥದಲಿ ಮಿಂದವಗೆ ಭವದ ಭಯವೇಕೆ?
ಪುಣ್ಯದಾಲಯ ಪೃಥ್ವಿ ! ಸ್ವರ್ಗವದು ಪರದೇಶಿ ![೧೮]

ಕನ್ನಡ ನವೋದಯ ಕಾವ್ಯ ನವೋದಯ ಪೂರ್ವ ನೆಲೆಗಳಿಗಿಂತ ಹೇಗೆ ಭಿನ್ನ ಎಂಬುದನ್ನು ಪರಿಶೀಲಿಸಲು ಇಂಥ ಕಾವ್ಯ ಭಾಗಗಳು ಸಹಾಯಕವಾಗುತ್ತವೆ. ಸಾಂಪ್ರದಾಯಕವಾದ ದೇವಾಲಯದ ಕಲ್ಪನೆಗೆ ಎದುರಾಗಿ ನಿಸರ್ಗ, ದೇವತಾಶಾಸ್ತ್ರದ ಆಕರಗಳಿಗಿಂತ ಕವಿಯ ಕಾವ್ಯ ನಿರ್ಮಿತಿ, ಪುರೋಹಿತ ವರ್ಗಕ್ಕೆ ಎದುರಾಗಿ ಕವಿ ಮುಖ್ಯವಾಗುತ್ತದೆಂಬ ನಿಲುವನ್ನು ಇದರೊಂದಿಗೆ ಇಂಥ ಇನ್ನೂ ಅನೇಕ ಕವಿತೆಗಳು ಖಚಿತಪಡಿಸುತ್ತವೆ.

ಈ ಭಾಗ ಸಾಂಪ್ರದಾಯಿಕ ತೀರ್ಥಯಾತ್ರೆ, ದೇವಾಲಯ, ವಿಗ್ರಹಾರಾಧನೆ ಇವುಗಳನ್ನೆಲ್ಲಾ ಮೀರಿದ ಪ್ರಕೃತಿಯ ಉಪಾಸನೆಯ ಹೊಸ ಸಂವೇದನೆಯನ್ನು ಮುನ್ನೆಲೆಗೆ ತಂದಿದೆ. ಕುವೆಂಪು ಹಾಗೂ ಬೇಂದ್ರೆಯವರ ಇಂಥ ಹೊಸ ನಿಲುವುಗಳು ಇಡೀ ಕನ್ನಡ ನವೋದಯದ ಮುಖ್ಯ ಆಶಯವಾಗಿ ಇನ್ನೂ ಅನೇಕ ಕವಿಗಳಲ್ಲಿ ಈ ಅಂಶ ಸ್ಥೂಲವಾಗಿ ಕಾಣಿಸುತ್ತದೆ.

ಯಾವ ಗುಡಿ
ಮಿಗಿಲು ಈ ಭುವನ ದೇವಾಲಯಕೆ? ಮೇಣಾವ
ವಿಗ್ರಹಂ ಮೀರಿರುವುದೀ ಚೈತ್ರ ಪಂಚಮಿಯ
ಪುಣ್ಯ ಪ್ರಭಾತದಲಿ, ದೂರದ ದಿಗಂತದಿಂ
ಪ್ರತ್ಯಕ್ಷವಾಗಿರುವ ಭವ್ಯಸುಂದರ ದಿವ್ಯ
ಸೂರ್ಯದೇವನಿಗೆ? ಮೇಣಾವುದಾರಾಧನೆಯು
ಉಪಮಾನವೀ ನಿರುಪಮ ಕಲಾ ಉಪಾಸನೆಗೆ?
ಈ ಅನುಭವದೊಳಿಲ್ಲದಾನಂದಮೂರ್ತಿಯಾ
ಪರಮಾತ್ಮ ನಿನ್ನಾವ ಪೂಜೆ ಜಪತಪಗಳಲಿ
ದೊರೆಕೊಳ್ಳುವಂ?[೧೯]

ಇಂಥ ನಿಸರ್ಗಾನುಭೂತಿಯ ಕವಿತೆಗಳಲ್ಲಿ ಸಾಂಪ್ರದಾಯಿಕ ಮೌಲ್ಯಗಳಿಗೆ ತೋರುವ ಪ್ರತಿರೋಧದ ಚಿತ್ರಗಳನ್ನು ಈ ಮೊದಲೇ ಸೂಚಿಸಿದಂತೆ ಕನ್ನಡ ವಿಮರ್ಶೆ ಅಧ್ಯಯನಕ್ಕೆ ಗುರಿಪಡಿಸಿದೆ. ಹಾಗಾಗಿ ಪ್ರಬಂಧದ ವ್ಯಾಪ್ತಿಯ ಮಿತಿಯಿಂದಾಗಿ ಇಲ್ಲಿ ಹೆಚ್ಚು ವಿಸ್ತೃತವಾದ ಅಧ್ಯಯನವನ್ನು ಕೈಗೊಂಡಿಲ್ಲ. ಉದಾಹರಣೆಯಾಗಿ ಎರಡು ವಿಮರ್ಶಾ ಮಾದರಿಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆಂದು ಕಾಣುತ್ತದೆ.

> ಉನ್ಮತ್ತತೆ ಮತ್ತು ತನ್ಮಯತೆಗಳ ನಡುವೆ ಸಮೃದ್ಧವಾಗಿ ಬೆಳೆಯುವ ನಿಸರ್ಗಾನುಭವದ ಅಂತಿಮಗುರಿ ಸಾಂಸ್ಥಿಕ ಧರ್ಮದ ನಿರಾಕರಣೆ. ಈ ಸಾಂಸ್ಥಿಕ ಧರ್ಮದ ನಿರಾಕರಣೆ ಕುವೆಂಪು ಅವರ ಅತ್ಯಂತ ಮುಖ್ಯ ವೈಚಾರಿಕ ನಿಲುವುಗಳಲ್ಲಿ ಒಂದು ಎಂಬುದನ್ನು ನಾವು ಗಮನಕ್ಕೆ ತಂದುಕೊಳ್ಳಬೇಕು. ಈ ನಿಸರ್ಗಾನುಭಾವ ಎಂದೂ ಧರ್ಮದ ಶ್ರೇಣೀಕರಣಗಳಿಗೆ, ಗುಡಿಗೆ, ಮಠಕ್ಕೆ, ನಿತ್ಯಾಚಾರದ ನೀರಸ ಪ್ರತಿಕ್ರಿಯೆಗಳಿಗೆ ಬೆಲೆ ಕೊಡುವುದಿಲ್ಲ. ಈ ಎಲ್ಲಾ ಸಂಗತಿಗಳು ಅಂತಿಮವಾಗಿ ಅನುಭಾವದ ತೀವ್ರತೆಗೆ, ಪಾವಿತ್ರ್ಯತೆಗೆ ಆಘಾತ ಮಾಡುವಂಥದ್ದೇ. ಆದ್ದರಿಂದ ಕುವೆಂಪು ಕಾವ್ಯದ ನಿಸರ್ಗಾನುಭವದಲ್ಲಿ ಸುಧಾರಕನೊಬ್ಬನ ತೀವ್ರ ರೊಚ್ಚಿನ ಆಯಾಮ ಕೂಡ ಮೂಡುತ್ತದೆ.[೨೦]
>
> ಪ್ರಕೃತಿಯನ್ನು ದೈವವಾಗಿ ಪರಿವರ್ತಿಸುವ, ಹಾಗೆಯೇ ಪ್ರಕೃತಿಯನ್ನು ಪರಮಾರಾಧನೆಯನ್ನಾಗಿ ಮಾಡಿಕೊಳ್ಳುವ, ಪ್ರಕೃತಿಯ ಸೌಂದರ್ಯವೆಲ್ಲವೂ ದೇವರ ಸಾಕ್ಷಾತ್ಕಾರವಾಗಿ ಮಾಡಿಕೊಳ್ಳುವ ಕುವೆಂಪು ಅವರ ಈ ಪ್ರಜ್ಞೆ ಪರಂಪರೆಯ ಜಡಮೌಲ್ಯಗಳಿಗೆ ತೋರಿದ ಪ್ರತಿಕ್ರಿಯೆಯೇ ಆಗಿದೆ.
>
> ..... ಜಾತಿ, ಧರ್ಮ, ವರ್ಣ, ಮಠ, ಗುಡಿಗೋಪುರಗಳ ನೆಪಗಳಲ್ಲಿ ಮೌಢ್ಯತೆಯನ್ನು ಪೋಷಿಸುವ ಪುರೋಹಿತ ವ್ಯವಸ್ಥೆಗಳನ್ನು ನಿಸರ್ಗಾನುಭವಗಳ ನೆಲೆಯಲ್ಲಿ ಮುಖಾಮುಖಿಯಾಗಿಸುವ ಧೋರಣೆ ಕನ್ನಡ ನವೋದಯದ ಮುಖ್ಯ ಧೋರಣೆ.[೨೧]

ಡಿ.ಆರ್. ನಾಗರಾಜ್, ಕೆ.ಸಿ. ಶಿವಾರೆಡ್ಡಿ, ಲತಾ ರಾಜಶೇಖರ್, ಪ್ರಭುಶಂಕರ್, ಸಿ.ಪಿ. ಕೃಷ್ಣಕುಮಾರ್, ದೇ.ಜ.ಗೌ. ಅಂಥ ಇನ್ನೂ ಅನೇಕ ವಿಮರ್ಶಕರು ಇಂಥ ಚಿಂತನೆಯನ್ನು ನಡೆಸಿರುವುದನ್ನು ನೋಡುತ್ತೇವೆ.

೬. ಜೀವ ವಿಕಾಸ ಹಾಗೂ ಪರಿಸರ

'ಮುಂದಕೆಲ್ಲಿಗೆ?' ಹಾಗೂ 'ನಟರಾಜ' ಕವಿತೆಗಳಲ್ಲಿ ಜೀವ ವಿಕಾಸ ಹಾಗೂ ಬ್ರಹ್ಮಾಂಡ ಸೃಷ್ಟಿಯ ಚಿಂತನೆಯನ್ನು ಕಾಣುತ್ತೇವೆ. 'ಮುಂದಕೆಲ್ಲಿಗೆ?' ಎಂಬ ಪ್ರಶ್ನೆಯೊಂದಿಗೆ ಡಾರ್ವಿನ್‌ನ ಜೀವವಿಕಾಸ ತತ್ವವನ್ನು ಕುವೆಂಪು ಅವರು ಅನುಭಾವಿಕ ನೆಲೆಯಲ್ಲಿ ಈ ಕವನದಲ್ಲಿ ಚಿಂತಿಸುತ್ತಾರೆ.

ಮೊದಲನರಿಯದಾದಿಯಿಂದ
ಆದಿ ತಿಮಿರದುದರದಿಂದ

ಮೂಡಿ ಬಂದೆನು ;
ಯಾರ ಬಯಕೆ ಎಂಬುದರಿಯೆ;
ಏಕೆ ಎಲ್ಲಿಗೆಂಬುದರಿಯೆ;
ಮುಂದೆ ಹರಿಯುವೆ!
ಮಲಗಿಕಲ್ಲು ಮಣ್ಣುಗಳಲಿ,
ಜಡಸುಷುಪ್ತಿಯಲ್ಲಿ ಬಳಲಿ
ಯುಗಗಳಾದುವು!
ಸಸ್ಯಗಳಲಿ ಕನಸ ಕಂಡು,
ಹುಟ್ಟು ಬಾಳು ಸಾವನುಂಡು
ಕಲ್ಪಹೋದುವು![೨೨]

ಆದಿ ಅನಾದಿ ಕಾಲಗಳಿಂದ ಜಡ ಮತ್ತು ಚೇತನಗಳ ಪಯಣ 'ಮುಂದಕೆಲ್ಲಿಗೆ?' ಎಂಬ ಪ್ರಶ್ನೆಯೊಂದಿಗೆ ಜೀವವಿಕಾಸದ ನಿರಂತರತೆಯನ್ನೇ ಧ್ವನಿಸುತ್ತಿದೆ. ಇದು ಜೀವಿಯ ಹುಟ್ಟು, ಬಾಳು, ಸಾವುಗಳ, ಕಲ್ಪಗಳ ಕಥೆಯಾಗಿಯೂ ಕಾಣಿಸುತ್ತದೆ. ಜೀವವಿಕಾಸದ ಕಲ್ಪಗಳ ಈ ಕಥೆಯೊಂದಿಗೆ ಅನುಭಾವಿಕ ನೆಲೆಯು ಸಂಮಿಳಿತಗೊಂಡು ನಿಸರ್ಗದ ನಿಗೂಢ ಅನುಭವವನ್ನು ಕಾಣಿಸುತ್ತಾ ಒಂದು ಅಭಿಜಾತ ಕೃತಿಯಂತೆ ಈ ಕವನ ಕಾಣಿಸುತ್ತದೆ.

'ನಟರಾಜ'ನ ಮಾಯಾ ನೃತ್ಯದಿಂದ ಸೃಷ್ಟಿಗೊಂಡ ಬ್ರಹ್ಮಾಂಡ ಹಾಗೂ ಜೀವಸೃಷ್ಟಿಯ ಮತ್ತೊಂದು ನೆಲೆಯನ್ನು 'ನಟರಾಜ' ಕವಿತೆ ಧ್ಯಾನಿಸುತ್ತದೆ. ಇದೊಂದು ಬ್ರಹ್ಮಾಂಡದ ಕಥನ ರೂಪಕ ಅಥವಾ ಅಖಂಡ ಪ್ರತಿಮೆ. ಸೂರ್ಯ, ಚಂದ್ರ, ಭೂಮಿ, ಗ್ರಹ, ತಾರೆಗಳು, ನದಿ, ವನ, ಗಿರಿ, ಝುರಿಗಳು ಎಲ್ಲ ಸನಾತನ ವೈಣಿಕ ನಟರಾಜನ ವೀಣೆಯ ಮೀಟುವಿಕೆಯಿಂದ ಚಲನಶೀಲಗೊಳ್ಳುವುದನ್ನು ಕವಿತೆಯ ಮೊದಲ ಭಾಗ ಕಾಣಿಸುತ್ತದೆ. ಅಂಥ ವೀಣೆಯ ದನಿಯಿಂಚರದಿಂದ ಮೈಪಡೆಯುವ ಬ್ರಹ್ಮಾಂಡ ಹಾಗೂ ಜಡದ ಒಡಲಿಂದಲೇ ರೂಪುಗೊಳ್ಳುವ ಚೈತನ್ಯನಾಂಶಗಳನ್ನು ಎರಡನೇ ಭಾಗದಲ್ಲಿ ಕಾಣುತ್ತೇವೆ. ಮೂರನೆಯ ಭಾಗದಲ್ಲಿ ನಟರಾಜನ ಅನಾದಿ ಕಾಲದ ನೃತ್ಯದಲಿ ಮೈಪಡೆಯುವ ತಾರೆಗಳು, ಸೂರ್ಯ ಗ್ರಹಗಳ ಆವಿಷ್ಕಾರ, ಭೂಮಿಯ ಸೃಷ್ಟಿಯ ವಿಚಾರವನ್ನು ನೋಡುತ್ತೇವೆ. ಹಾಗಾಗಿಯೇ ಇದೊಂದು ಅಪ್ಪಟ ವಿಜ್ಞಾನ ಹಾಗೂ ಆಧ್ಯಾತ್ಮಗಳು ಸಂಲಗ್ನಗೊಂಡ ಪ್ರತಿಮೆಯಂತಿದೆ.

ವಿಶ್ವದ ಚೆಲುವೇ ಮೈಗೊಂಡಂದದಿ
ನಿನ್ನೆದುರಾಡಿದಳೆಳೆವೆಣ್ಣು!
ಮೋಹಕೆ ಸಿಲುಕಿದೆ, ಹೇ ಸನ್ಯಾಸಿ ;
ಚುಂಬಿಸಿಯಾಲಿಂಗಿಸಿ ಮೈಮರೆತೆ !
ಹುಟ್ಟಿದುವಾಗಲೆ ನದಿ ವನ ಖಗ ಮಿಗ;
ಜನಿಸಿದನಾಗಲೆ ತಿರೆಯ ಬಸಿರಿನಲಿ

ನಿನ್ನನೆ ಹೋಲುವ ಮಾನವನು!
ನಿನ್ನಾ ಚೆಲುವಿನ ಕಂದನನೆತ್ತಿ
ಮೋಹದೊಳಾತನನೆದೆಗೊತ್ತಿ
ಮುದ್ದಿಸಿ, ಚುಂಬಿಸಿ, ಕಣ್ಮರೆಯಾದೆ ;
ಯೋಗಿಯೆ, ವೈಣಿಕ, ನಟರಾಜ![೨೬]

ಈ ಮೇಲಿನ ಕಾವ್ಯಭಾಗದಲ್ಲಿ ಭೂಮಿಯ ಆವಿಷ್ಕಾರ, ಭೂಮಿಯ ಮೇಲೆ ಜೀವಸಂಕುಲಗಳ ಸೃಷ್ಟಿ ಹಾಗೂ ಮಾನವನ ಉಗಮದ ಕಥನವನ್ನು ಕಾಣುತ್ತೇವೆ.

ಇದೇ ಬಗೆಯ ಚಿಂತನೆಯನ್ನು "ಪಾಂಚಜನ್ಯ" ಸಂಕಲನದ 'ವಿಪ್ಲವಮೂರ್ತಿ', 'ಭೈರವನಾರಿ', ಕವಿತೆಗಳಲ್ಲಿ ಕಾಣುತ್ತೇವೆ. ಅಂತೆಯೇ "ಕಲಾಸುಂದರಿ"ಯ 'ಶಿಲಾತಪಸ್ವಿ' ಕವಿತೆಯಲ್ಲಿ ಜೀವವಿಕಾಸವಾದ ಹಾಗೂ ಜಡ ಮತ್ತು ಚೇತನಗಳ ಚಿಂತನೆಯಿದೆ.

..... ನೀರಿನಲಿ ತೇದ ಮಿಂಚಿನ ತೆರದಿ,
ಬಂಧನವ ಹರಿಯಲೆಳಸುವ ಕೇಸರಿಯ ತೆರದಿ,
ಹರಿದು ಭೋರಿಡುವ ಆ ಅಗ್ನಿಪ್ರವಾಹಂ
ದಿಕ್ಕುದಿಕ್ಕಿಗೆ ಸಿಡಿದೊಡೆದು, ದೇಶದೇಹಂ
ಗ್ರಹಭೂಮಿ ಶಶಿಸೂರ್ಯ ತಾರಾಖಚಿತಮಾಯ್ತು!

ವಿಕಸನಶೀಲತೆ ಒಂದು ದಿನದ ಕತೆಯಲ್ಲ. ಅದಕ್ಕೆ ಆಧಿಮ ಕಾಲದಿಂದ ಇಂದಿನ ತನಕ ಒಂದು ವಿಶಾಲವಾದ ವ್ಯಾಪ್ತಿ ಇದೆ. ಪ್ರತಿಯೊಬ್ಬ ಕವಿಯೂ ಸೃಷ್ಟಿ ವಿಕಾಸದ ಬಗೆಬಗೆಯ ಪುರಾಣಗಳನ್ನ ಸೃಷ್ಟಿಸುತ್ತಲೇ ಬಂದಿದ್ದಾನೆ. ಈ ಸೃಷ್ಟಿ ಪುರಾಣ, ಶಿಷ್ಟ, ಜನಪದ ಕಾವ್ಯಗಳ ಮುಖ್ಯ ಭಿತ್ತಿ. ಆದರೆ ಹೊಸ ಕಾಲದ ಕವಿಯೊಬ್ಬ ಕಟ್ಟುತ್ತಿರುವ ಸೃಷ್ಟಿ ವಿಕಾಸದ ಕಥನವನ್ನು 'ಶಿಲಾತಪಸ್ವಿ' ಆಧುನಿಕ ಧೋರಣೆಗೆ ಒಳಪಡಿಸಿ ನಿರ್ಮಿಸಿರುವ ರೀತಿ ಅನೇಕ ಕುತೂಹಲಗಳನ್ನು ಹುಟ್ಟಿಸುತ್ತದೆ. ಭೂಗರ್ಭದ ಸೆರೆ ಸೇರಿದ ಜೀವ ಕತ್ತಲಲ್ಲಿ ನರಳಿ ಹೊಸ ಚೈತನ್ಯವನ್ನು ಧರಿಸುತ್ತಿದೆ. ಕ್ರಮವಾಗಿ ತನ್ನ ಪರಿವಾರವೇ ಮರಗಿಡಗಳಾಗುತ್ತಿವೆ ; ಪ್ರಾಣಿಗಳ ರೂಪವನ್ನು ಪಡೆಯುತ್ತವೆ ; ಇವುಗಳ ಮಧ್ಯೆ ಬುದ್ಧಿಶಕ್ತಿಯನ್ನು ತೋರುತ್ತಾ ಮನುಷ್ಯ ಮೈ ಪಡೆಯುತ್ತಾನೆ. ಎಲ್ಲ ದಾಸ್ಯಗಳನ್ನು ಮೀರಿದ ಜಡತೆಯನ್ನು ದಾಟಿದ ವಿಶ್ವ ಚೈತನ್ಯದ ರಹಸ್ಯವನ್ನು ತಿಳಿದ ಮನುಷ್ಯನ ನೆಲೆಯೊಂದು ನಿರ್ಮಾಣಗೊಳುತ್ತದೆ. ಇಂಥದ್ದೇ ರೂಪಕ - ಕಲೆಯನಲ್ಲದೇ ಶಿಲೆಯನೇಂಸೃಷ್ಟಿಪನೆ' ಎಂಬ ರಾಮಾಯಾಣದರ್ಶನದ ಸಾಲು ಇಲ್ಲಿ ನೆನಪಾಗುತ್ತದೆ.

ನನಗೆ ಈ ಭೂಗರ್ಭವೇ ಸೆರೆಯ ಮನೆಯಾಯ್ತು!
ಕಲ್ಪಕಲ್ಪಗಳಿಂದ ನಾನಲ್ಲಿ ಸೆರೆಯಾಗಿ
ನರಳಿದೆನು ಕತ್ತಲಲಿ. ಜ್ಯೋತಿದರ್ಶನಕಾಗಿ
ಮೊರೆಯಿಟ್ಟು ಕೂಗುತಿರೆ ಕಲ್ಲೆನಗೆ ಮೈಯಾಗಿ
ಕಡೆಗಿಲ್ಲಿ ನೆಲೆಸಿದೆನು. ಇರೆಯಿರೆ ಕ್ರಮವಾಗಿ

ನನ್ನ ಸೋದರರೆಲ್ಲ ಮರಗಿಡಗಳಂದದಲಿ
ಮೂಡಿದರು ; ಉಸಿರೆಳೆದು ಬೆಳೆಬೆಳೆದು ಚಂದದಲಿ
ನಲಿದಾಡಿದರು ; ಕೆಲರು ಸ್ವಪ್ನವನು ಸೀಳಿ
ತಿರುಗಾಡಿದರು ಪ್ರಾಣಿರೂಪವನು ತಾಳಿ ;
ಮೆಲ್ಲಮೆಲ್ಲನೆ ಕೆಲರು ನರರಾಕೃತಿಯ ತಳೆದು
ತಪ್ಪು ಹಾದಿಯೊಳೆನಿತೊ ಶತಮಾನಗಳ ಕಳೆದು
ನಾಗರಿಕರಾದರೈ ಬುದ್ಧಿಶಕ್ತಿಯ ತೋರಿ !
(ಹಾ ! ದೂರವಿಹುದಿನ್ನುಮೆನಗೆ ನಡೆಯುವ ದಾರಿ!)
ಗಗನದಲಿ ಕಾಣುವಾ ತಾರೆಗಳಲೆಲ್ಲಿಯೂ
ತಿರುಗಿಹೆನು ; ಆದರೇನವುಗಳಲಿ ಎಲ್ಲಿಯೂ
ಕ್ರಿಮಿಯೊಂದರಲ್ಲಿರುವ ಚೇತನದ ಕಣವಿಲ್ಲ;
ಸ್ವೇಚ್ಛೆಯೆಂಬುವುದಿಲ್ಲ ; ಕಡೆಗೊಂದು ತೃಣವಿಲ್ಲ!
ಈ ಭೂಮಿಯೊಂದು ಕ್ರಿಮಿ ಕ್ಷಣಜೀವಿಯಾದರೂ
ತಾರೆಗಳ ಮೀರಿಹುದು ; ಯುಗಜೀವಿಯಾದರೂ
ತನ್ನಿಚ್ಛೆ ಏನೆಂಬುದರಿಯದಿಹ ದಾಸ್ಯಂ
ಸಾವಿಗೆಣೆ. ನೇಸರ್ಗೆ ಕ್ರಿಮಿಗಿರದ ದಾಸ್ಯಂ!
ಎಲ್ಲ ಜಡತೆಯ ಬಯಕೆ ಚೈತನ್ಯ ಸಿದ್ಧಿಯೈ.
ಈ ರಹಸ್ಯವನರಿತ ಮಾನವನೆ ಬುದ್ಧನೈ! -[೨೪]

'ಶಿಲಾತಪಸ್ವಿ'ಯ ಆತ್ಮಕಥೆಯಂತಿರುವ ಈ ಕವಿತೆಯ ಆಳದಲ್ಲಿ ಯುಗಯುಗಗಳ ಚಲನಶೀಲತೆಯೇ ಎದುರಾಗುತ್ತದೆ. ಹಾಗೆಯೇ ಬ್ರಹ್ಮಾಂಡದಿಂದ ಬೇರ್ಪಟ್ಟ ಭೂಮಿಯಲ್ಲಿ ಜೀವವೈವಿಧ್ಯಗಳ ಉಗಮಾವಸ್ಥೆಯನ್ನು ಕಾಣಿಸುತ್ತದೆ. ಸಸ್ಯ ಸಂಕುಲಗಳು, ಜೀವಸಂಕುಲಗಳು, ಮಾನವನ ಉಗಮ ಹಾಗೂ ಖಗೋಳದ ಆವಿಷ್ಕಾರಗಳ ವಿಚಾರವು ಚಿಂತನೆಗೊಂಡಿದೆ. ಜಡ ಮತ್ತು ಚೇತನಗಳ ತರತಮಗಳನ್ನು ಹಿಂದಿಕ್ಕಿ ಅಖಂಡ ಚೈತನ್ಯ ಸಿದ್ಧಿಗಾಗಿ ತುಡಿಯುವ ತಪಸ್ಸು ಕಲ್ಲು ತವಸಿಯ ಆಕಾರದಲ್ಲಿ ರೂಪಕಗೊಂಡಿದೆ.

ಅನ್ನ ಹೆಂಪ್‌ಸ್ಟೆಡ್ ಬ್ರಾಂಚ್ ಎಂಬಾಕೆಯ 'ಕಲ್ಲು' ಎಂಬ ಕವನದ ಅನುವಾದದ ಆಯ್ಕೆ ಮತ್ತು ಸಂವೇದನೆಯಲ್ಲಿ ಇದೇ ಬಗೆಯ ಚಿಂತನೆಯನ್ನು ಕಾಣುತ್ತೇವೆ. ಹಾಗಾಗಿಯೇ ಕುವೆಂಪು ಅವರು ಕಲೆಯ ಸಾನ್ನಿಧ್ಯಕ್ಕೆ ಜಡವನ್ನು ಚೇತನಗೊಳಿಸುವ ಶಕ್ತಿಯಿದೆ ಎಂದು ಗಾಢವಾಗಿ ನಂಬುತ್ತಾರೆ. ಕಲೆಯಿಂದ ನೂರಾರು ಆತ್ಮಗಳು ಜಡತನದ ಬಲೆಯಿಂದ ಬಿಡುಗಡೆ ಹೊಂದುತ್ತವೆ ಎಂಬುದು ಅವರ ಬಲವಾದ ನಂಬಿಕೆ. 'ಕಲ್ಲು ಕವಿಯಪ್ಪನ್ನೆವರಮಾನು ಹಾಡುವೆನು! ಶಿಲೆಯು ಕಲೆಯಪ್ಪನ್ನೆವರಮಾನು ಹಾಡುವೆನು!' ಎಂಬ ಉತ್ಕಟ ಕಾವ್ಯಾಭಿವ್ಯಕ್ತಿಯ ಅಭೀಪ್ಸೆ ಅವರ ಸಾಹಿತ್ಯದ ಉದ್ದಕ್ಕೂ ಕಾರ್ಯ ನಿರ್ವಹಿಸಿದೆ. ಈ ಅಭೀಪ್ಸೆಯ ಹಿಂದೆ ಪ್ರಕೃತಿಯ ಎಲ್ಲ ಬಗೆಯ ಧ್ಯಾನವು, ಚಿಂತನೆಯು, ತನ್ಮಯತೆಯು ನಿರಂತರವಾಗಿ ಚಲಿಸುತ್ತಿರುವುದನ್ನು ಅವರ ಕಾವ್ಯಾಧ್ಯಯನ ಮನವರಿಕೆ ಮಾಡಿಕೊಡುತ್ತದೆ.

೭. ನಿಸರ್ಗ ಹಾಗೂ ಜೀವ ಸಂಘರ್ಷ

ನಿಸರ್ಗದ ಜಡ ಮತ್ತು ಚೈತನ್ಯಾವಸ್ಥೆಗಳನ್ನು ತನ್ನ ಅಭಿವ್ಯಕ್ತಿಗೆ ಗುರಿಯಾಗಿಸಿಕೊಂಡಂತೆಯೇ ಪ್ರಕೃತಿಯ ಸೌಂದರ್ಯ ಹಾಗೂ ರೌದ್ರತೆಗಳ ಮುಖಗಳನ್ನು ಕುವೆಂಪು ತಮ್ಮ ಕಾವ್ಯದ ವಸ್ತುವಾಗಿಸಿಕೊಂಡಿದ್ದಾರೆ. ಅಂದರೆ ಸೃಷ್ಟಿಯಲ್ಲಿ ಮಿಳಿತವಾಗಿರುವ ರೌದ್ರತೆ, ರಮಣೀಯತೆಗಳ ಅಭಿವ್ಯಕ್ತಿ ಅವರ ನಿಸರ್ಗ ಕಾವ್ಯದ ಮುಖ್ಯ ನೆಲೆಯಾಗಿದೆ. ನಿಸರ್ಗವನ್ನು ಇಂಥ ದ್ವಿಮುಖಿ ನೆಲೆಯಲ್ಲಿ ಗ್ರಹಿಸುತ್ತಲೇ ತಮ್ಮ ನೈಜ ಕಲಾತ್ಮಕತೆಗೆ ಮುಖಾಮುಖಿಯಾಗಿ ಅಖಂಡ ಪರಿಸರದ ಅಭಿವ್ಯಕ್ತಿಗೆ ತೊಡಗಿರುವುದನ್ನು ಅವರ ಕಾವ್ಯ ಸಮರ್ಥಿಸುತ್ತದೆ. "ಪಾಂಚಜನ್ಯ"ದ ಪ್ರಥಮ ಮುದ್ರಣಕ್ಕೆ ಬರೆದ ಮುನ್ನುಡಿಯಲ್ಲಿ ಇಂಥ ಚಿಂತನೆಯನ್ನೇ ಕಾಣಬಹುದಾಗಿದೆ.

'ಮುಂಗಾರು', 'ವರ್ಷಭೈರವ', "ಪಾಂಚಜನ್ಯ" ಸಂಕಲನದ ಹಲವು ಕವನಗಳು ಹಾಗೂ ಮೈಸೂರು - ಬೀಹಾರ ಮೊದಲಾದ ಕವನಗಳಲ್ಲಿ ಪ್ರಕೃತಿಯ ಕಾಠಿಣ್ಯಾವಸ್ಥೆಗಳಿಗೆ ಮುಖಾಮುಖಿಯಾಗಿರುವುದನ್ನು ಕಾಣುತ್ತೇವೆ. ಕವಿ ಕುವೆಂಪು ಹೇಳುವಂತೆ ಈ ಕವನಗಳಲ್ಲಿ ಪ್ರಕೃತಿಯ ಲಾಲಿತ್ಯಕ್ಕಿಂತಲೂ ಪ್ರಕೃತಿಯ ರೌದ್ರತೆ ಪ್ರಧಾನವಾಗಿರುವುದನ್ನು ಗಮನಿಸಬಹುದು.

'ಮೈಸೂರು - ಬೀಹಾರ' ಕವನ ನಿಸರ್ಗದ ಲಾಲಿತ್ಯ ಮತ್ತು ರೌದ್ರತೆಗಳನ್ನು ಏಕಕಾಲಕ್ಕೆ ಚಿಂತಿಸುವ ಕವನವಾಗಿದೆ. ಕವನದ ಮೊದಲ ಭಾಗದಲ್ಲಿ ಮೈಸೂರಿನ ಪ್ರಕೃತಿಯ ಚೆಲುವನ್ನು ಹಾಗು ಅದರ ಸೌಂದರ್ಯದ ಮುಖಗಳನ್ನು ಪರಿಚಯಿಸುತ್ತಲೇ ಭೂಮಿಯ ಇನ್ನೊಂದು ಭಾಗವಾದ ಬೀಹಾರದಲ್ಲಿ ಭೂಕಂಪನದಂಥ ಪ್ರಕೃತಿ ವಿಕೋಪದಿಂದ ರಾಕ್ಷಸಿಯಂತೆ ಎದುರಾಗುವ ಪ್ರಕೃತಿಯ ಚಿತ್ರವನ್ನು ಕವನದ ಮುಂದಿನ ಭಾಗದಲ್ಲಿ ಮುಖಾಮುಖಿಯಾಗಿಸುತ್ತಾರೆ.

ಮೈಸೂರು :

ತಿಮಿರ ಜಲತರಂಗರಾಶಿ
ವರುಣ ದಿಕ್ಕಿಗುರುಳಿದೆ.
ಅರುಣತರುಣನಿನಿಯಕಾಂತೆ
ಉಷೆಯು ಹಿಡಿದ ಸೊಡರಿನಂತೆ
ಮುಗಿಲಿನಂಚು ಬಿರುಕುಗಳಲಿ
ಹೊನ್ನಿನುರಿಯು ಕೆರಳಿದೆ !

ಇಂಪು ಕಂಪು ತಂಪುವೆರಸಿ
ಮೆಲುಗಾಳಿಯು ತೀಡಿದೆ.
ಸುಪ್ರಭಾತ ಪಕ್ಷಿಗಾನ
ಕೇಳುತಲಿದೆ ತಾನತಾನ:
ನೀರವತಾ ನೀರಧಿಯಲಿ
ನಾದವೀಚಿ ಮೂಡಿದೆ!

ಬೀಹಾರ :

ಇಂದುವದನೆ ಕುಂದರದನೆ,
ಇಲ್ಲಿ ಪ್ರಕೃತಿ ರೂಪಸಿ!
ಅಲ್ಲಿ ಭೂಮಿ ನಡುಗಿತಂತೆ;
ಲಕ್ಷಲಕ್ಷ ಮಡಿದರಂತೆ :
ರಕ್ತನಖಿ, ರಕ್ತಮುಖಿ,
ಅಲ್ಲಿ ಪ್ರಕೃತಿರಾಕ್ಷಸಿ!
ನೆಲವು ನಡುಗಿ ಮನೆಗಳುರುಳಿ
ಹಿರಿಯ ಕಿರಿಯರೆಲ್ಲರು
ತಾಯಿ ಕೂಸು ಗಂಡು ಹೆಣ್ಣು
ಸತ್ತರಯ್ಯೊ, ಮುಚ್ಚಿ ಮಣ್ಣು!
ಏಕೆ? ಇದಕೆ ಹೊಣೆಯದಾರು?
ಯಾರು ಹೇಳಬಲ್ಲರು?[೨೫]

'ಇಲ್ಲಿ' ಅಂದರೆ ಮೈಸೂರಿನಲ್ಲಿ ನಲಿಯುತ್ತಿರುವ ತಳಿರು, ಉಲಿಯುತಿಹ ಹಕ್ಕಿ 'ಎಲ್ಲ ಚೆನ್ನು, ಚೊಕ್ಕಟ'ವಾಗಿ ಕಾಣಿಸಿದರೆ 'ಅಲ್ಲಿ' ಅಂದರೆ ಬೀಹಾರದಲ್ಲಿ ತೊಲೆಯ ಕೆಳಗೆ ಸಿಕ್ಕಿ ಕಂದನ ಅಪ್ಪಿದ ಅಮ್ಮನ ಗೋಳಿನ ಆಕ್ರಂದನದ ಚಿತ್ರ ಎದುರಾಗುತ್ತದೆ. 'ಒಬ್ಬ ದೇವರೊಂದೆ ಸೃಷ್ಟಿ, ಅದರೊಳಿಷ್ಟು ಭೇದವೆ? ಎಂಬ ಪ್ರಶ್ನೆಯಿಂದಲೇ ನಿಸರ್ಗದ ತರತಮಗಳನ್ನು ಕವಿ ಸಂವೇದನೆ ಪ್ರಶ್ನಿಸುತ್ತದೆ. ಹಾಗೆಯೇ 'ಭೀತಿ, ಶೋಕ, ಸರ್ವನಾಶ', 'ಪ್ರಕೃತಿ ಹೃದಯ ಬರಿಯ ಕ್ರೌರ್ಯ'ವೆಂಬ ವಿಚಾರ ಇಲ್ಲಿ ನಿರಾಕರಣೆಗೊಳ್ಳುತ್ತದೆ.

ಆದರಾಲಿಸೆದೆಯ ವಾಣಿ
ಬೇರೆ ಕಥೆಯ ಹೇಳಿದೆ ;
ಕಷ್ಟನಷ್ಟವೆಲ್ಲ ಬರಲಿ,
ನೋವು ಸಾವು ಏನೆ ಇರಲಿ,
ಸೃಷ್ಟಿ, ಮುಖ ಪರಮಸುಖ
ಎಂದು ಧೈರ್ಯ ತಾಳಿದೆ!
ಸೃಷ್ಟಿಯೊಂದನಂತ ಚಲನೆ,
ಅಖಂಡ ಪ್ರಾಣವಾಹಿನಿ
ಕ್ಷಣವ ಕಣವನರಿವ ಬುದ್ಧಿ
ಕಾಲದೇಶನದಿಯೊಳದ್ದಿ
ಹೊಕ್ಕು ಹರಿದು ತಿಳಿಯಲರಿದು :
ಅಗಮ್ಯವದಕೆ ವಾಹಿನಿ![೨೬]

ಸಾವು ನೋವುಗಳ ನಡುವೆಯೇ ಸೃಷ್ಟಿಯ ಪರಮಸುಖವನ್ನು ಹರಸುತ್ತಲೇ ನಿಸರ್ಗ ಕ್ರೌರ್ಯಾವಸ್ಥೆಗಳಿಗೆ ಎದುರಾಗುವ ಸಂವೇದನೆಯೊಂದು ಇಲ್ಲಿ ಮೈದಾಳುತ್ತದೆ.

ಅಂಥ ಸಂವೇದನೆಯೇ ನಿಸರ್ಗದ ರೌದ್ರಾವಸ್ಥೆಗಳಿಗೆ ಎದುರಾಗಿ ಮುಂದೆ ದೊರಕುವ ಶಾಂತಿ, ಮಹಾನಂದಗಳ ಬಗೆಗೆ ಶ್ರದ್ಧೆಯನ್ನು ಮೂಡಿಸುತ್ತದೆ. ‘ಅಲ್ಲಿ’ ಬೀಹಾರದ ಪ್ರಕೃತಿ ರಾಕ್ಷಸಿಯಿಂದ ನಿರ್ಮಾಣಗೊಂಡ ಚಿಂತೆಯೇಕೆಂಬ ಪ್ರಶ್ನೆಯೊಂದಿಗೆ ‘ಅಲ್ಲಿರುವುದೆ ಇಲ್ಲಿಯೂ!, ಇಂದು (ಮುಂದೆ ಏನೆ ಬರಲಿ) ನರಗೆ ನರನ ನೆರವು ಇರಲಿ! ಇಲ್ಲಿ ಒಲಿದರೊಲಿವೆವಲ್ಲಿ: ಇಲ್ಲಿರುವುದೆ ಅಲ್ಲಿಯೂ’[೨೭] ಎಂಬ ಮಾನವೀಯ ಹಾಗೂ ಜೀವಸಮಾನತೆಯ ಧೋರಣೆಯನ್ನು ಕವಿ ಪ್ರಜ್ಞೆ ಕಾಣಿಸುತ್ತದೆ.

‘ಜಡವಾದಿ’ ಕವನವು ಸೃಷ್ಟಿ ಮತ್ತು ಜೀವ ಸಮುದಾಯದ ಸಂಘರ್ಷಾತ್ಮಕ ಕಥನ. ಸೂರ್ಯೋದಯ, ಸೂರ್ಯಾಸ್ತಮ, ಚಂದ್ರೋದಯ ಹಾಗೂ ಪ್ರಕೃತಿ ಉಪಾಸನ ಕವಿತೆಗಳಲ್ಲಿರುವ ನಿಸರ್ಗ ಚಿತ್ರಣಕ್ಕಿಂತ ಭಿನ್ನ ಧೋರಣೆಯನ್ನು ಈ ಕವಿತೆ ಪ್ರಕಟಿಸುತ್ತದೆ. ಭೂಮಿಯಲ್ಲಿನ ಜೀವ ಸಮುದಾಯದ ಬಗೆಗಿನ ನಿಷ್ಕರುಣತೆಯನ್ನು ಇಲ್ಲಿ ಕಾಣುತ್ತೇವೆ. ಜೀವ ಹಾಗೂ ಭೂಮಿ ತಾಯಿಯ ಸಂಬಂಧ ಹಾಗೂ ಸಂಘರ್ಷಗಳ ಅನಾದಿ ಕಾಲದ ಕಥನವೂ ಇಲ್ಲಿದೆ. ನಿಸರ್ಗದೊಂದಿಗಿನ ಹೋರಾಟ, ಅಂಥ ಹೋರಾಟಗಳಿಂದಲೇ ತನ್ನ ಅಸ್ತಿತ್ವವನ್ನು ಕಂಡುಕೊಳ್ಳಬೇಕಾದ ದೃಢವಾಸ್ತವತೆಗಳು ಇಲ್ಲಿ ಪ್ರಕಟಗೊಳ್ಳುತ್ತವೆ. ಹಗಲು ಇರುಳುಗಳ ಪರಿವೆ ಇಲ್ಲದೆ ಇಂಥ ಹೋರಾಟ ಅನಿವಾರ್ಯವೆಂಬ ವಿಚಾರವು ಇಲ್ಲಿ ಅಡಕಗೊಂಡಿದೆ. ಸುಂದರ ವಸುಂಧರೆಯ ದಾಸ್ಯದ ಕಥನವೂ ಇಲ್ಲಿದೆ.

ಉರುಳುರುಳು ಹಗಲಿರುಳು
ಸುಂದರ ವಸುಂಧರಾ!
ಬನದ ವೇಷವನುಟ್ಟು
ಬೆಟ್ಟ ಹೊಳೆಗಳ ತೊಟ್ಟು
ಹೊಟ್ಟೆಯೊಳಗಿರೆ ಗುಟ್ಟು
ಕಿಚ್ಚೊಡಲ ಗುಟ್ಟು ;
ಮೇಲೆ ನಗೆಮೊಗ ತೋರಿ
ಒಳಗಿರುವ ರೌದ್ರವನು
ಲಾಲಿತ್ಯದಲಿ ಮುಚ್ಚಿ,
ಕೋರೆದಾಡೆಯ ದನಿಯ
ಖಗಗಳೆಂಬುವ ಹೊಗಳು -
ಭಟ್ಟರಾ ಗಾನದಲಿ
ಮುಳುಗುವಂದದಿ ಮಾಡಿ
ಉರುಳುರುಳು ಹಗಲಿರುಳು
ಸುಂದರ ವಸುಂಧರಾ![೨೮]

ಸುಂದರ ವಸುಂಧರೆಯ ಬಾಹ್ಯ ಮತ್ತು ಆಂತರಿಕ ಮುಖಗಳನ್ನು ಇಲ್ಲಿ ಕಾಣುತ್ತೇವೆ. ಮೇಲಿನ ನಗೆಮೊಗ ಒಳಗಿನ ರೌದ್ರತೆಗಳ ಚಿತ್ರಗಳೊಂದಿಗೆ ಜೀವ ಸಮುದಾಯದ ಸಂಘರ್ಷ ಮೈದಾಳುತ್ತದೆ. ವಸುಂಧರೆಯ ಬಾಹ್ಯ ಸೌಂದರ್ಯ ಜೀವ ಸಮುದಾಯದ ದಿಕ್ಕು ತಪ್ಪಿಸುವ ಚಿಂತನೆಯನ್ನು ಇಲ್ಲಿ ಕಾಣುತ್ತೇವೆ.

ಇಲ್ಲಿ ಭೌತವಾದಿ ಅಥವಾ ಮೆಟೀರಿಯಲಿಸ್ಟಿಕ್ ಧೋರಣೆ ಕವಿತೆಯ ಕೇಂದ್ರ. ಆದರೂ ನಿಸರ್ಗದೊಂದಿಗಿನ ಸೌಂದರ್ಯಾತ್ಮಕ ಕಲ್ಪನೆಗೆ ಪ್ರತಿಯಾಗಿ ವಾಸ್ತವವಾದಿ ನೆಲೆಯಿಂದ ಪ್ರಕೃತಿಯನ್ನು ನೋಡುವ ಕ್ರಮಕ್ಕೆ ಈ ಕವಿತೆ ಒಂದು ಉದಾಹರಣೆಯಾಗಿದೆ. ಇಂಥ ಭೌತವಾದಿ ಧೋರಣೆಯಿಂದ ವಸುಂಧರೆಯ ಕಿಚ್ಚೊಡಲ ಗುಟ್ಟುಗಳು ಬಯಲಾಗುತ್ತವೆ. ಲಾಲಿತ್ಯದಲ್ಲಿ ಮುಚ್ಚಿ ಹೋಗಿರುವ ನಿಸರ್ಗದ ರೌದ್ರಾವತಾರಗಳು, ಕೋರೆದಾಡೆಗಳು ಬಯಲಾಗುತ್ತವೆ.

ಎಲೆ ಧರಣಿ, ನಿಷ್ಕರುಣಿ,
ನೀನೆಂಥ ಮಾರಿ!
ಓ ಮಂಕು ನರಗುರಿಯೆ,
ಭೂಮಿ ಬರಿ ದೋಣಿ ಕಣೊ!
ತಾಯ ಮಡಿಲೆಂದೇಕೆ
ಬರಿದೆ ಬೆಮೆಗೊಂಡಿರುವೆ?
ಜಡವು ಜಡವನು ಹೊತ್ತು
ಜಡವು ಜಡವನು ಹೆತ್ತು
ಜಡವು ಜಡದಲಿ ಮುಳುಗಿ
ಹೋಗುವುದೆ ಮಿತ್ತು!
ಹುಸಿ ಜಡವ ನಂಬುವರೆ
ಚೇತನಂಗೆತ್ತು?
ಕಡೆಗೆ ಭೂಮಿಯೆ ನಮಗೆ
ಕಡೆಯ ಸುಡುಗಾಡು.
ತಾಯ ಮಡಿಲೇ ನಮಗೆ
ಮಸಣದಾ ಸೂಡು!
ತಿರೆಯ ಬಸಿರದು ಬರಿಯ
ಬಲ್ಮಸಣವಲ್ತೆ?
ಯುಗಯುಗಗಳಡಗಿರುವ
ಹಿರಿ ಗೋರಿಯಲ್ತೆ?[೨೯]

ಪ್ರಕೃತಿ ಮತ್ತು ಜೀವಸಮುದಾಯದ ರಮ್ಯ ಸಂಬಂಧಾಂತರಗಳನ್ನು ಈ ಕವಿತೆ ಒಮ್ಮೆಗೆ ಕಾಣಿಸುತ್ತದೆ. ಭೂಮಿ ತಾಯಿಯ ಮಡಿಲೇ ಕಡೆಗೆ ಜೀವ ಸಮುದಾಯದ ಸುಡುಗಾಡಾಗುವ, ಮಸಣವಾಗುವ,

ಬಲ್ಮಸಣವಾಗುವ, ಹಿರಿಗೋರಿಯಾಗುವ ದೃಢ ವಾಸ್ತವತೆಯನ್ನು ಕವಿ ಸಂವೇದನೆ ಬಯಲುಗೊಳಿಸುತ್ತದೆ. ಮನುಷ್ಯನ ಎಲ್ಲ ಸಾಧಕ ಸಾಧನೆಗಳು, ಭೂಮಾತೆಯ ಒಡಲೊಳಗಿಹ ಬಸಿರ ಮಸಣದಲಿ ಐಕ್ಯಗೊಳ್ಳುವ ಚಿತ್ರವನ್ನು 'ಜಡವಾದಿ' ಕಾಣಿಸುತ್ತಾನೆ.

'ಇಂದುವದನೆ ಕುಂದರದನೆ ಪ್ರಕೃತಿ ರೂಪಸಿಗೆ ಸಂಪೂರ್ಣ ವಿರುದ್ಧ ಮುಖವಾದ ರಕ್ತನಖಿ ರಕ್ತಮುಖಿ ಪ್ರಕೃತಿ ರಾಕ್ಷಸಿ'ಯ ಮುಖವನ್ನು ಮುಖಾಮುಖಿ ಆಗಿಸುವುದರೊಂದಿಗೆ ಸೃಷ್ಟಿಯ ರೌದ್ರವನ್ನು ಹಾಗು ರಮಣೀಯತೆಯನ್ನು ಒಮ್ಮೆಗೆ ಅಭಿವ್ಯಕ್ತಿಗೆ ಗುರಿಯಾಗಿಸುವ ಕ್ರಮವನ್ನು ಇಲ್ಲಿ ಕಾಣುತ್ತೇವೆ. ನಿಜವಾದ ಕಲಾವಿದ ಈ ಎರಡೂ ಮುಖಗಳನ್ನು ಸಮರ್ಥವಾಗಿ ಹಿಡಿದಿಡುವುದರೊಂದಿಗೆ ಯಶಸ್ವಿಯಾಗಿದ್ದಾನೆ. ನಿಸರ್ಗದ ಲಾಲಿತ್ಯ, ರೌದ್ರತೆಗಳು, ಪಾಂಚಜನ್ಯ - ಕೊಳಲ ದನಿಗಳ ಹಲವು ಮಗ್ಗಲುಗಳನ್ನು ಕವಿ ಸಂವೇದನೆ ಸಮರ್ಥವಾಗಿ ಇಂಥ ಕವಿತೆಗಳಲ್ಲಿ ನಿರ್ವಹಿಸಿರುವುದನ್ನು ಕಾಣುತ್ತೇವೆ.

೮. ಯುದ್ಧ, ಯಂತ್ರ ನಾಗರಿಕತೆ ಮತ್ತು ಪರಿಸರ :

ಭೂಮಿಯ ಮೇಲಿನ ಮನುಷ್ಯನ ಒತ್ತಡ ಹಾಗೂ ಅನ್ಯಾಕ್ರಮಣದ ಚಿತ್ರವನ್ನು 'ಜೋಗುಳ' ಕವಿತೆ ಕಾಣಿಸುತ್ತದೆ. ಮಾನವನ ಅಭಿವೃದ್ಧಿಯ ಫಲವಾಗಿ ನಿರ್ಮಾಣಗೊಂಡ ಯಂತ್ರ ನಾಗರೀಕತೆಯ ಮೇಲಾಟ ಹಾಗೂ ಭೂಮಿಯ ಪ್ರಶಾಂತತೆಗೆ ಧಕ್ಕೆ ತರುವ ಪ್ರಕ್ರಿಯೆಯ ಬಗೆಗೂ ಈ ಕವಿತೆ ಚಿಂತಿಸುತ್ತದೆ.

ಜೋಗುಳವ ಹಾಡೆನ್ನ ಮಲಗಿಸಮ್ಮಾ,
ಕೂಗು ಕರ್ಕಶವಿದನು ತಾಳೆನಮ್ಮಾ!
ಉನ್ಮತ್ತ ಖಡ್ಗಗಳ ಝಣ ಝಣತ್ಕಾರ!
ಬಿಲ್ಲಾಳುಗಳ ಕಠಿಣ ಚಾಪಟಂಕಾರ !
ಪೃಥ್ವಿಯಂ ಚುಂಬಿಪರ ಘೋರ ಹಾಕಾರ!
ಹೇ ತಾಯೆ, ಸೈರಿಸೆನು, ರಣವಿದು ಕಠೋರ !

ಒಂದು ಕಡೆ ಸಿಡಿಗುಂಡ ಘೋರ ಢಂಕಾರ !
ಒಂದು ಕಡೆ ಯಂತ್ರಗಳ ತುಚ್ಛ ಚೀತ್ಕಾರ!
ಒಂದು ಕಡೆ ಗಡಿಬಿಡಿಯ ಸಂತೆ ವ್ಯಾಪಾರ !
ಒಂದೆಡೆಯು ಬಿಡುವಿಲ್ಲದೀ ಭೂಮಿ ಘೋರ ![೩೦]

ಅಭಿವೃದ್ಧಿಯಂತೆಯೇ ಯುದ್ಧದಾಹೀ ಮನುಷ್ಯನ ಪಾಶವೀ ಕೃತ್ಯಗಳಿಂದ ಇಡೀ ಭೂಮಂಡಲವೇ ಯುದ್ಧಭೂಮಿಯಾಗಿ ನಿರ್ಮಾಣಗೊಂಡಿರುವುದರ ಬಗೆಗಿನ ವಿಷಾದ ಹಾಗೂ ಭೂಮಿತಾಯಿಯ ಗೋಳಿನ ಕಥೆ ಇದಾಗಿದೆ.

ಬೇಂದ್ರೆಯವರ 'ಚಿಗರಿಗಂಗಳ ಚೆಲುವಿ' ಕವಿತೆಯಲ್ಲಿ ಬರುವ ಭೂಮಿ ತಾಯಿಯ ಆಕ್ರಂದನವನ್ನು ನೆನಪಿಸುವ ಈ ಕವಿತೆಯಲ್ಲಿ ಅಂತಹದೇ ಮನುಷ್ಯನ ಯುದ್ಧ ದಾಹೀ ಮತ್ತು ಅಸುರೀ ಪ್ರವೃತ್ತಿಗಳ ಬಗೆಗಿನ ಉದ್ಗಾರವನ್ನು ಕಾಣುತ್ತೇವೆ. ಇದೇ ಬಗೆಯ ಚಿಂತನೆಯನ್ನು ಯುದ್ಧ ಹಾಗೂ ನಗರ ನಾಗರೀಕತೆಯನ್ನು ಕುರಿತು

ಬರೆದ ಕವನಗಳಲ್ಲಿ ಕಾಣಬಹುದಾಗಿದೆ. ಆದರೆ 'ಯಂತ್ರರ್ಷಿ' ಕವಿತೆಯ ಚಿಂತನೆ ಭಿನ್ನವಾಗಿದೆ ಎಂಬುದನ್ನು ಇಲ್ಲಿ ಮರೆಯುವಂತಿಲ್ಲ.

ಪ್ರತಿಯೊಬ್ಬ ಕವಿಯು ಪ್ರಕೃತಿಯನ್ನು ನೋಡುವ ದೃಷ್ಟಿಯಲ್ಲಿ ಭಿನ್ನತೆ ಇರುತ್ತದೆಂದು ಕುವೆಂಪು ಅವರು ಅಭಿಪ್ರಾಯಪಡುತ್ತಾರೆ. ಏಕೆಂದರೆ ಪ್ರತಿಯೊಬ್ಬ ಕವಿಯ ಸಂಸ್ಕಾರ, ಬದುಕು, ಸ್ವಭಾವ, ಸ್ವಧರ್ಮ, ಆಶೆ, ರುಚಿ, ಅಭಿರುಚಿ, ವಿದ್ಯೆ, ಸಂಸ್ಕೃತಿ ಎಲ್ಲ ಬೇರೆಬೇರೆಯಾದ್ದರಿಂದ ವ್ಯಕ್ತಿತ್ವ ವ್ಯತ್ಯಾಸಗಳು ಹೆಚ್ಚುತ್ತಾ ಹೋಗುತ್ತವೆ. ಆದ್ದರಿಂದ ಪ್ರಕೃತಿಯಲ್ಲಿಯೂ ವ್ಯತ್ಯಾಸವಾಗುತ್ತದೆ ಎನ್ನುತ್ತಾರೆ. ಹಾಗಾಗಿಯೇ ಬೇಂದ್ರೆ ಹಾಗೂ ಕನ್ನಡದ ಇನ್ನಿತರ ಕವಿಗಳ ಕೃತಿಗಳಲ್ಲಿನ ಪ್ರಕೃತಿ ಅಭಿವ್ಯಕ್ತಿಗೂ ಕುವೆಂಪು ಅವರ ನಿಸರ್ಗಾನುಭೂತಿಗೂ ಭಿನ್ನತೆಗಳು ನಿಚ್ಚಳವಾಗಿ ಕಾಣುತ್ತವೆ. ಈಗಾಗಲೇ ಕನ್ನಡ ವಿಮರ್ಶೆಯಲ್ಲಿ ಡಿ.ಆರ್. ನಾಗರಾಜ್ ಮೊದಲಾದ ವಿಮರ್ಶಕರು ಇದನ್ನು ಅಧ್ಯಯನಕ್ಕೆ ಗುರಿಪಡಿಸಿದ್ದಾರೆ.

> ಕುವೆಂಪುರವರನ್ನು ಬಿಟ್ಟರೆ ಇಡೀ ಭಾರತೀಯ ಸಾಹಿತ್ಯದಲ್ಲಿ ಇಷ್ಟು ವಿಸ್ತೃತವಾದ, ದಟ್ಟವಾದ ಮತ್ತು ಸಾಂದ್ರವಾದ ಪರಿಸರ ವ್ಯವಸ್ಥೆಯ ವಿವರಣೆ ಬೇರೊಬ್ಬ ಲೇಖಕರಲ್ಲಿ ಸಿಗಲಾರದು. ಈ ಕಾರಣಕ್ಕಾಗಿ ಕುವೆಂಪು ನಮಗೆ ವಿಶಿಷ್ಟರಾಗುತ್ತಾರೆ. ಇಂತಹ ಸಾಹಿತ್ಯ ನಮಗೆ ಸಾಹಿತ್ಯವನ್ನು ಒಂದು ಜ್ಞಾನ ಮತ್ತು ಮಾಹಿತಿ ವ್ಯವಸ್ಥೆಯನ್ನಾಗಿ ಪರಿಗಣಿಸಲು ಅಗತ್ಯವಾದ ನೆಲಯನ್ನೂ ಕಟ್ಟಿಕೊಡುತ್ತದೆ.[೨೧]

ಮಲೆನಾಡಿನ ಅಖಂಡ ಪರಿಸರ ಕುವೆಂಪು ಅವರ ಬಾಲ್ಯದಲ್ಲಿಯೇ ಭಾವಕೋಶಗಳ ವಶವಾಗಿದ್ದರಿಂದಾಗಿ ನಿಸರ್ಗದ ಅಣುಅಣುವು ಅವರ ಕಾವ್ಯದಲ್ಲಿ ಮೈಪಡೆಯುವುದನ್ನು ನಿಚ್ಚಲವಾಗಿ ಗುರುತಿಸಬಹುದು. ಯಕಶ್ಚಿತ್ ಎನ್ನಬಹುದಾದ ನೈಸರ್ಗಿಕ ವಿವರಗಳು, ಘಟನೆಗಳು ಅವರ ಕಾವ್ಯದ ನರನಾಡಿಗಳಾಗಿ ಚಲನಶೀಲಗೊಳ್ಳುತ್ತವೆ. ಹಾಗಾಗಿಯೇ ಅವರ ಸಮಗ್ರ ಕಾವ್ಯ ದಟ್ಟ ಹಾಗೂ ಅಖಂಡ ಪರಿಸರ ವೈವಿಧ್ಯತೆಗಳ ಆಗರವಾಗಿ ಕಣ್ಮುಂದೆ ನಿಲ್ಲುತ್ತದೆ. ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರ ಕಾವ್ಯದಲ್ಲಿ ಪರಿಸರ ಅಭಿವ್ಯಕ್ತಗೊಂಡಂತೆ ಮತ್ತಾರಲ್ಲಿಯೂ ಅಭಿವ್ಯಕ್ತಗೊಂಡಿಲ್ಲವೆಂಬುದನ್ನು ಕನ್ನಡ ವಿಮರ್ಶಾ ವಿವೇಕ ಗುರುತಿಸಿದೆ.

೯. ಅತಿಭೋಗ ರೋಗ, ನಗರಿಕರಣ ಮತ್ತು ಪರಿಸರ

ವಸಾಹತುಶಾಹಿ ಸಂಸ್ಕೃತಿಯ ಆಗಮನದಿಂದಾಗಿ ಹಾಗು ಇಂಗ್ಲೆಂಡಿನ ಕೈಗಾರಿಕೀಕರಣದ ಪರಿಣಾಮವಾಗಿ ರೂಪುಗೊಂಡ ನಗರ ಸಂಸ್ಕೃತಿ ಗ್ರಾಮೀಣ ಬದುಕಿನಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದೊಡ್ಡಿತು. ಇಂಥ ಕೈಗಾರಿಕೀಕರಣಕ್ಕೆ, ನಗರೀಕರಣಕ್ಕೆ ಪ್ರತಿಕ್ರಿಯೆಯಂತಿದೆ 'ಹಾಳೂರು' (೧೯೨೬) ಕವಿತೆ. ಗ್ರಾಮೀಣ ಬದುಕಿನಲ್ಲಾದ ಬದಲಾವಣೆಗಳ ಬಗೆಗಿನ ಪ್ರತಿಕ್ರಿಯೆಯ ಜೊತೆಜೊತೆಯಲ್ಲಿಯೇ ಕನ್ನಡ ಪರಿಸರವಾದ ಬೆಳೆಯುವುದನ್ನು ಗುರುತಿಸಬಹುದಾಗಿದೆ. ಕುವೆಂಪು ಬೇಂದ್ರೆ ಅವರ ಅನೇಕ ಕೃತಿಗಳಲ್ಲಿ ಇಂಥ ಪ್ರತಿಕ್ರಿಯೆ ಪ್ರಕಟಗೊಂಡಿದೆ.

ಬ್ರಿಟಿಷರ ಆಗಮನ, ಶಿಕ್ಷಣ ಪ್ರಸಾರ, ರಾಜಕೀಯ ವಿಸ್ತರಣೆಯಿಂದ ನಗರೀಕರಣ ಪ್ರಕ್ರಿಯೆ ಭಾರತದಲ್ಲಾಯಿತು. ಹೊಸ ಶಿಕ್ಷಣ ಜಾರಿಯಿಂದ ಹಳ್ಳಿಗಳ ಯುವಕರು ನಗರ ಮುಖಿಯಾದರು. ನಗರಗಳಿಗೆ ಹೋದವರು ಹಳ್ಳಿಗಳಿಗೆ ವಾಪಸ್ಸಾಗದ ಪರಿಸರ ಹಾಗು ಸಂದರ್ಭಗಳು ಸೃಷ್ಟಿಯಾದವು. ಹಾಗಾಗಿ ಹಳ್ಳಿಗಳು

ಬದಲಾದವು. ವಿದ್ಯಾವಂತರಂತೆಯೇ ಅನೇಕರು ಗ್ರಾಮ ಜೀವನದಿಂದ ನಗರ ಜೀವನವನ್ನು ಅರಸಿ ಹೊರಟರು. ಅಂಥ ಪರಿಸರದಿಂದ ಗ್ರಾಮೀಣ ಜೀವನಕ್ಕೆ ಎದುರಾದ ಸಂಕಟದ ಕಥನವನ್ನು 'ಹಾಳೂರು' ಕಥನದಲ್ಲಿ ಕುವೆಂಪು ಕಟ್ಟಿಕೊಟ್ಟಿದ್ದಾರೆ. ಇದು ವಸಾಹತು ಕಾಲದ ಆದಿ ಕಥನ.

ಹೊಸ ಶಿಕ್ಷಣದಿಂದ, ಸ್ಥಳೀಯ ಸಾಮಾಜಿಕ ಅನಿಷ್ಟಗಳಿಂದ ಬಿಡುಗಡೆ ಪಡೆದ ಶೂದ್ರ ಸಂವೇದನೆಯ ಪ್ರತಿಕ್ರಿಯೆ ಈ ಕೆಳಕಂಡಂತಿದೆ.

> ಇಂಗ್ಲಿಷಿನವರು ಇಂಡಿಯಾಕ್ಕೆ ಬರದಿದ್ದರೆ ನಾನು ಕುಪ್ಪಳಿಯಲ್ಲಿ ಸಗಣಿ ತಟ್ಟಿಕೊಂಡು, ಬ್ರಾಹ್ಮಣರ ಗದ್ದೆ ಉತ್ತುಕೊಂಡಿರುತ್ತಿದ್ದೆ. ಅವರೊಡನೆ ಕ್ರೈಸ್ತ ಮಿಷನರಿಗಳು ಬರದೆ ಇದ್ದಿದ್ದರೆ ನಾನು ಶ್ರೀ ರಾಮಾಯಣದರ್ಶನಂ ಬರೆದ ಕವಿಯಾಗುತ್ತಿರಲಿಲ್ಲ. ವೈದಿಕರ ಮತಮೌಢ್ಯದ ಕೆಸರುಸುಬಿನಲ್ಲಿ ಒದ್ದಾಡುವ ಮೂಢಶೂದ್ರ ಹಂದಿಯಾಗಿರುತ್ತಿದ್ದೆ![೩೨]

ಇದೇ ಸಂವೇದನೆ ಮತ್ತೊಂದು ಬಗೆಯಲ್ಲಿ ಹಾಳೂರು ಅಂಥ ಕವನದಲ್ಲಿ ಇದಕ್ಕಿಂತ ಭಿನ್ನವಾಗಿ ಚಿಂತಿಸುತ್ತದೆ. ಗ್ರಾಮೀಣ ಸಂಸ್ಕೃತಿಗೆ ಒದಗಿದ ದುಃಸ್ಥಿತಿಯನ್ನು ಕಂಡು ಸ್ವತಃ ಕುವೆಂಪು ಅವರೇ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಇದು ಕುವೆಂಪು ಅವರಲ್ಲಿನ ದ್ವಂದ್ವವಾಗಿ ಕಂಡರೂ, ಹೊಸ ಸಂಸ್ಕೃತಿಯೊಂದರ ಸ್ವೀಕರಣೆ ನಿರಾಕರಣೆಯ ಪ್ರಕ್ರಿಯೆಗೆ ಮಾದರಿಯಂತಿದೆ.

ಕುವೆಂಪು ಅವರ 'ಹಾಳೂರು' ಕೃತಿಗೆ ಪ್ರೇರಣೆ ಎಂದು ತಿಳಿದ ಗೋಲ್ಡ್‌ಸ್ಮಿತ್‌ರ 'ದಿ ಡೆಸೆರ್ಟೆಡ್ ವಿಲೇಜ್' ಕೃತಿಯೂ ಕೂಡ ಇಂಗ್ಲೆಂಡಿನ ಕೈಗಾರಿಕೀಕರಣದ ವಿರೋಧವನ್ನು ಕುರಿತದ್ದು. ವಸಾಹತು ಸಂಸ್ಕೃತಿಯ ಕೂಸಾದ ನಗರೀಕರಣ ಪ್ರಕೃತಿಯ ತಾಣಗಳಾದ ಹಳ್ಳಿಗಳ ಮೇಲೆ ಎಸಗಿದ ಕ್ರೌರ್ಯ, ಅತ್ಯಾಚಾರದ ಕಥನವೆಂದು 'ಹಾಳೂರು' ಕವಿತೆಯನ್ನು ಗ್ರಹಿಸಬಹುದು.

> ಹಳ್ಳಿಯಿದು ಪಟ್ಟಣದ ಪಾಲಾಯಿತೆಲ್ಲ;
> ಹಳ್ಳಿಗರು ಪುರಮಾರಿಗುಣಿಸಾದರಲ್ಲಾ![೩೩]

ಇಡೀ ಹಳ್ಳಿ ಪುರಮಾರಿಯ ಅಸುರೀ ಹಸಿವಿಗೆ ಬಲಿಯಾದದ್ದನ್ನು ಈ ಸಾಲುಗಳು ಧ್ವನಿಸುತ್ತವೆ. ದೇಶದ ಹಸಿವನ್ನು ನೀಗುತ್ತಿದ್ದವರ ಆಶ್ರಯ ಸ್ಥಾನವಾಗಿದ್ದ ನಾಡು ಅನಾಥವಾಗುವ, ನಿರ್ಜನವಾಗುವ, ಹಾಳು ಸುರಿಯುವ ಕೊಂಪೆಯಾಗಿರುವ ಚಿತ್ರ ಕವನದ ಮೊದಲೇ ಎದುರಾಗುತ್ತದೆ. ನಗರ ಮಾರಿಯ ಉಣಿಸಿಗೆ ಬಲಿಯಾದ ಹಳ್ಳಿಯ ಚಿತ್ರಗಳ ಸರಮಾಲೆಯನ್ನೇ ಕವಿತೆ ಮುಂದೆ ಕಾಣಿಸುತ್ತದೆ.

ನಗರ ಮುಖಿಯಾದ ಸಂವೇದನೆ 'ಮರಳಿ ಮಣ್ಣಿಗೆ' ಹಿಂದಿರುಗಿದಾಗ ಕಂಡ ದೈನ್ಯಾವಸ್ಥೆಯ ಚಿತ್ರ ಹಾಗೂ ಪ್ರತಿಕ್ರಿಯೆ ಕವನದ ಮುಂದಿನ ಭಾಗದಲ್ಲಿ ಎದುರಾಗುತ್ತದೆ. ನಾಯಕನೂ, ನಿರೂಪಕನೂ ಆಗಿರುವ ಸಂವೇದನೆಯ ಧೋರಣೆ ವಸಾಹತು ಸಂಸ್ಕೃತಿಯಿಂದ ಸ್ಥಳೀಯ ಪರಿಸರಕ್ಕೆ ಯಾವ ಯಾವ ನೆಲೆಗಳಲ್ಲಿ ಧಕ್ಕೆ ಒದಗಿತೆಂಬುದನ್ನು ಮುಂದೆ ಕಾಣಿಸುತ್ತದೆ.

ಸ್ಥಳೀಯ ಪಂಚಾಯತ್ ವ್ಯವಸ್ಥೆಗೆ ಬದಲು ಹೊಸ ನ್ಯಾಯಾಲಯ ಪದ್ಧತಿ ಹಳ್ಳಿಯ ರಕ್ತ ಹೀರುವ ಜಿಗಣೆಯಾದ ಚಿತ್ರ ಈ ಕೆಳಕಂಡಂತಿದೆ.

ಹಳ್ಳಿಯೊಳು ಮನೆಬಿದ್ದು ಹಾಳಾಗುತಿಹವು,
ಪೇಟೆಯೊಳು ಲಾಯರರ ಮನೆಯೇಳುತಿಹವು.
ಹಳ್ಳಿಯರ ರಕ್ತವನು ದೂರದಿಂ ಹೀರಿ
ಕೊಬ್ಬಿ ಬೆಳೆದಿಹರು ಲಾಯರರು ಮಿತಿ ಮೀರಿ[೩೪]

ಸ್ಥಳೀಯ ಸಾಹಿತ್ಯ, ಸಂಸ್ಕೃತಿ, ಭಾಷೆ ಹಾಗೂ ಜ್ಞಾನವು ಅವಗಣನೆಗೆ ಒಳಗಾಗುತ್ತಿರುವ ಸಂಗತಿಗಳನ್ನು ಈ ಕೆಳಗಿನ ಸಾಲುಗಳು ಸ್ಪಷ್ಟಪಡಿಸುತ್ತವೆ.

ತಾಯನುಡಿಯೊಲುಮೆ ತಾತಯ್ಯಗಿದ್ದಂತೆ
ನಮಗಿದ್ದರೇನುಂಟು ತಾಯ್ನುಡಿಗೆ ಚಿಂತೆ?
ನಾವೀಗ ಮಾತೃಭಾಷೆಯ ತಳ್ಳಿ ದೂರ
ಪರಭಾಷೆಯನ್ನಪ್ಪಿ ಚುಂಬಿಪೆವು ಪೂರ !
ನಮ್ಮ ನಾಡಿನ ನುಡಿಯು ನಮಗೆ ಸೊಗಸಲ್ಲ
ಪರಭಾಷೆಯೆಂದರದು ನಮಗೆಲ್ಲ ಬೆಲ್ಲ.[೩೫]

ಸ್ಥಳೀಯ ಉದ್ಯೋಗ ವ್ಯವಸ್ಥೆಗಳ ಬಗೆಗೆ ಅಸಡ್ಡೆಯನ್ನು ಮೂಡಿಸಿದ್ದು ಆಧುನಿಕ ಶಿಕ್ಷಣ ಪದ್ಧತಿಯ ಅವಲಕ್ಷಣಗಳಲ್ಲಿ ಮುಖ್ಯವಾದುದು. ಹಾಗಾಗಿ ಹಳ್ಳಿಯ ಜನಸಮುದಾಯ ಉದ್ಯೋಗ ಅರಸಿ ನಗರ ಮುಖಿಯಾದರು. ಅಂಥ ಪ್ರಕ್ರಿಯೆಯಿಂದ ನೆಮ್ಮದಿಯ ಬದುಕು ನರಕ ಸದೃಶವಾದ ಚಿತ್ರವನ್ನು ಮುಂದಿನ ಪದ್ಯಭಾಗ ವಿಶದಪಡಿಸುತ್ತದೆ. ಪರಿಸರ ಸ್ನೇಹಿ ಜನಸಮುದಾಯ ಪರಿಸರದಿಂದ ಬೇರ್ಪಡುವ ಕ್ರಮಕ್ಕೂ ಇದೊಂದು ಉತ್ತಮ ಉದಾಹರಣೆ.

ಹಾಳೂರು ಮಾಡಿದರು ಪುರವ ಸೇರೆಲ್ಲ!
ಕಾರ್ಖಾನೆಗಳ ಕೂಲಿಗಾಸೆಪಡುತೆಲ್ಲ
ಓಡಿದರು ಪಟ್ಟಣಕೆ! ದೇವರೇ ಬಲ್ಲ!
ಪಟ್ಟಣವ ಸೇರೆ ದುರ್ನಡತೆಗಳನೆಲ್ಲ
ಒಂದೊಂದನೇ ಕಲಿತು ಹಾಳಾದರೆಲ್ಲ.
ಪುರದೊಳಗೆ ಸೌಭಾಗ್ಯ ದೊರಕುವುದು ಎಂದು
ಬರಿದೆ ಭಾವಿಸಿ ಹಳ್ಳಿಗಳ ಬಿಟ್ಟರಂದು,
ಪುರಕೆ ನೋಡಲು ಬಂದು ಕಂಡುದವರೇನು?
ದುರ್ವ್ಯಸನ ಕುಡುಕುತನ ಜೂಜಾಟವೇನು,
ಹೊಟ್ಟೆಗಿಲ್ಲದ ಬಟ್ಟೆಯಾಡಂಬರೇನು,
ಸಿನಿಮನಾಟಕಶಾಲೆಗಳ ಭೋಗವೇನು!
ಸಂಪಾದಿಸಿದುದೆಲ್ಲ ದುರ್ನಡತೆಗಾಯ್ತು,
ಹಳ್ಳಿಯಾ ಸುಖವಳಿದು, ಪುರ ಮಸಣವಾಯ್ತು !
ಹಳ್ಳಿಯಾ ಸುಖವಿಲ್ಲ; ಪುರದ ಸುಖವಿಲ್ಲ;

....

ಮೇಲೆಲ್ಲ ಹೊಸತಳುಕು, ಕೆಳಗೆ ಬರಿ ಹುಳುಕು ;
ಮೇಲೆ ನೋಡಲು ಬೆಳಕು, ಒಳಗಿಳಿಯೆ ಕೊಳಕು !
ಹಳ್ಳಿಯರಿಗಿರುವ ಸುಖ ಪಟ್ಟಣಿಗಗೆಲ್ಲಿ?
ಹಳ್ಳಿಯವ ತಾ ರಾಜ ತನ್ನೂರಿನಲ್ಲಿ !
ಗಂಜಿಯುಂಡರು ಹಳ್ಳಿಯದು ಪರಮನಾಕ,
ಪಾಯಸವನುಂಡರೂ ಪುರ ನರಕಲೋಕ !
ಹಳ್ಳಿಯೊಳು ಬಲುಶಾಂತಿ, ಗಲಿಬಿಲಿಯೆ ಇಲ್ಲ;
ಪಟ್ಟಣವೊ ಬರಿಬೊಬ್ಬೆ, ಶಾಂತಿಯೇ ಇಲ್ಲ!
ಪುರಜನದ ದಾಸತನ ಹಳ್ಳಿಯವರಿಗಿಲ್ಲ,

....

ಕೋಟಿ ಧನವಿದ್ದರೂ ಪಟ್ಟಣವು ಗೋಳು ;
ಕಾಸಿಲ್ಲದಿದ್ದರೂ ಸುಖ ಹಳ್ಳಿಬಾಳು !
ಕಷ್ಟವಿದ್ದರು ಸರಿಯೆ, ಇರಲಿ ಸ್ವಾತಂತ್ರ್ಯ ;
ಸುಖವಿದ್ದರೂ ಹೀನವೈ ಪಾರತಂತ್ರ್ಯ ;
ಸ್ವಾತಂತ್ರ್ಯವಿಲ್ಲದವಗಾನಂದವೆಲ್ಲಿ?
ಸ್ವಾತಂತ್ರ್ಯಕಾವಾಸವಾಗಿಹುದು ಹಳ್ಳಿ![೩೬]

ಈ ಮೇಲಿನ ಕವಿತೆಯ ಉದ್ಧರಣೆಯಲ್ಲಿ ಅಭಿವ್ಯಕ್ತಗೊಂಡಿರುವ ಅವಸ್ಥೆಯ ಮಾರಕತೆಗಳನ್ನು ಗಾಂಧೀಜಿಯವರ ಚಿಂತನೆಯಿಂದಲೇ ಸ್ಪಷ್ಟಪಡಿಸುವುದು ಉಚಿತವೆಂದು ತೋರುತ್ತದೆ.

> ಗಾಂಧಿ ತಮ್ಮ ಪುಸ್ತಕ 'ಹಿಂದ್ ಸ್ವರಾಜ್'ನಲ್ಲಿ ರಸ್ಕಿನ್ ಹಾಗೂ ಎಡ್ವರ್ಡ್ ಕಾರ್ಪೆಂಟರ್‌ರನ್ನು ನೆನಪಿಸಿಕೊಂಡಿದ್ದಾರೆ. ೧೯೦೯ರಲ್ಲಿ ಪ್ರಕಟವಾದ ಆ ಪುಸ್ತಕದಲ್ಲಿ ನಿರ್ದಾಕ್ಷಿಣ್ಯವಾಗಿ ಕೈಗಾರಿಕೀಕರಣವನ್ನು ವಿರೋಧಿಸುವ ಅವರು, ಕೈಗಾರಿಕೀಕರಣಗೊಂಡ ಸಮಾಜವು ಸ್ವಾರ್ಥ, ಸ್ಪರ್ಧೆಯಿಂದ ಕೂಡಿದ ಹಾಗೂ ಪರಿಸರಕ್ಕೆ ಹಾನಿ ಮಾಡುವಂತಹ ಸಮಾಜ ಎನ್ನುತ್ತಾರೆ. ಅವರ ಪ್ರಕಾರ 'ಆಧುನಿಕ ನಾಗರಿಕತೆಯ ಮುಖ್ಯ ಲಕ್ಷಣ - ಬೇಡಿಕೆಗಳ ಹೆಚ್ಚಳ'. ಅದನ್ನು ಪೂರೈಸಲು ಕಚ್ಚಾವಸ್ತುಗಳು ಹಾಗೂ ಇತರೆ ವಸ್ತುಗಳನ್ನು ಒದಗಿಸುತ್ತಲೇ ಇರಬೇಕಾಗುತ್ತದೆ.
>
> ...... ಆಧುನಿಕ ನಾಗರಿಕತೆ ಎಂಬುದು ಇದೇ ಆಗಿದ್ದಲ್ಲಿ, 'ಅದನ್ನು ನಾನು ಪೈಶಾಚಿಕ ಎಂದು ಕರೆಯುತ್ತೇನೆ' ಎಂದಿದ್ದರು. ಇದರ ಬದಲು 'ಸ್ವಯಂ ಸರಳತೆಯನ್ನು ಹಾಗೂ ಸಂಪನ್ಮೂಲದ ಮರುಬಳಕೆ'ಯನ್ನು ಪರ್ಯಾಯ ಎಂದಿದ್ದರು. ಅವರ ಪ್ರಸಿದ್ಧ ಹೇಳಿಕೆ "ಈ ಭೂಮಿ ನಮ್ಮೆಲ್ಲ ಅವಶ್ಯಕತೆಗಳನ್ನು ಪೂರೈಸಬಲ್ಲುದು; ಆದರೆ ಅತ್ಯಾಶೆಯನ್ನಲ್ಲ."

.... ಸ್ವತಂತ್ರ ಭಾರತದ ಕುರಿತು ಗಾಂಧೀಜಿಯ ಕಲ್ಪನೆ - ಗ್ರಾಮೀಣ ಭಾರತದ್ದಾಗಿತ್ತು. ಕೈಗಾರಿಕೀಕರಣ, ನಗರೀಕರಣದ ಅಲೆಯನ್ನು ವಿರೋಧಿಸಿ ಗ್ರಾಮೀಣ ಭಾರತದ ಪುನಶ್ಚೇತನಕ್ಕಾಗಿ ಗಾಂಧಿ ಪ್ರಯತ್ನಿಸಿದರು. 'ಇದಕ್ಕೆ ನೈತಿಕ ಹಾಗೂ ಪಾರಿಸರಿಕ ಕಾರಣಗಳಿವೆ - ಇಡೀ ಪ್ರಪಂಚದ ಕೈಗಾರಿಕೀಕರಣಕ್ಕೆ ಸ್ವಾಭಾವಿಕ ಮಿತಿಗಳಿವೆ ; ಅದು ದೇಶವೊಂದರ ಕೈಗಾರಿಕೀಕರಣಕ್ಕೆ ಹೋಲಿಸಿದರೆ ವಿಶಿಷ್ಟವಾದದ್ದು. ಡಿಸೆಂಬರ್ ೧೯೨೮ರಲ್ಲಿ ಅವರು ಹೀಗೆ ಬರೆದಿದ್ದರು ; ಪಶ್ಚಿಮದಂತೆ ಭಾರತ ಕೈಗಾರಿಕೀಕರಣಕ್ಕೆ ಪ್ರಯತ್ನಿಸಬಾರದು. ಸಣ್ಣ ದ್ವೀಪವೊಂದರ (ಇಂಗ್ಲೆಂಡ್) ಆರ್ಥಿಕ ಸಾಮ್ರಾಜ್ಯಶಾಹಿತ್ವ ಇಡೀ ಪ್ರಪಂಚವನ್ನು ಸಂಕೋಲೆಯಲ್ಲಿರಿಸಿದೆ. ಭಾರತದ ೩೦೦ ದಶಲಕ್ಷ ಜನರು ಅದೇ ರೀತಿ ಶೋಷಣೆ ಮಾಡಿದಲ್ಲಿ, ಅದು ಪ್ರಪಂಚವನ್ನು ಮಿಡತೆ ತಿಂದಂತೆ ಬರಿದು ಮಾಡಿಬಿಡುತ್ತದೆ."

.........ಜುಲೈ ೧೯೪೬ರಲ್ಲಿ 'ಹಳ್ಳಿಗಳ ರಕ್ತವು ನಗರಗಳ ಸೌಧಗಳ ನಿರ್ಮಾಣಕ್ಕೆ ಬಳಸುವ ಸಿಮೆಂಟ್' ಎಂದು ಅವರು ಬರೆದಿದ್ದರು. 'ಇಂದು ನಗರದ ರಕ್ತನಾಳಗಳಲ್ಲಿ ಹರಿಯುತ್ತಿರುವ ರಕ್ತವು ಹಳ್ಳಿಗಳ ರಕ್ತನಾಳಗಳಲ್ಲಿ ಹರಿಯುವಂತಾಗಬೇಕು' ಎಂದು ಅವರು ಆಶಿಸಿದರು.[೩೨]

.... "ಇಂಗ್ಲೆಂಡಿನ ಸದ್ಯದ ಪರಿಸ್ಥಿತಿ ದಯನೀಯವಾಗಿದೆ. ದೇವರ ದಯೆಯಿಂದ ಹಿಂದುಸ್ಥಾನಕ್ಕೆ ಅಂಥಾ ಸ್ಥಿತಿ ಎಂದೂ ಬಾರದಿರಲಿ."[೩೩]

ಎಂಬ ಗಾಂಧೀಜಿಯವರ ಈ ಹೇಳಿಕೆಯಲ್ಲಿ ವಸಾಹತುಶಾಹಿ ಸಂಸ್ಕೃತಿಯಿಂದ ಭಗ್ನಗೊಳ್ಳುತ್ತಿರುವ ಗ್ರಾಮೀಣ ಬದುಕಿನ ಬಗೆಗೆ ಇರಬೇಕಾದ ಎಚ್ಚರ ಮತ್ತು ಆತಂಕ ವ್ಯಕ್ತವಾಗುತ್ತದೆ.

ನಾಗರೀಕ ಬದುಕು ಸುಖವನ್ನೇ ಬಾಳಿನ ಗುರಿಯನ್ನಾಗಿ ಮಾಡಿಕೊಳ್ಳುವ, ಶರೀರ ಸುಖವೇ ಪರಮ ಪುರುಷಾರ್ಥ ಎಂದು ಭಾವಿಸುವ ಕ್ರಮವನ್ನು ವಿರೋಧಿಸುತ್ತಾರೆ. ದೈಹಿಕ ಶ್ರಮಕ್ಕೆ ವಿಮುಖವಾದ ಮನುಷ್ಯ ಯಂತ್ರಗಳ ಬೆನ್ನು ಹತ್ತಿದ್ದನ್ನು ವಿರೋಧಿಸುತ್ತಾರೆ. ಗ್ರಾಮೀಣ ಪರಿಸರದಲ್ಲಿ ತಮ್ಮ ಇಚ್ಛಾನುಸಾರ ದುಡಿಯುತ್ತಿದ್ದ ಜನ ನಗರೀಕರಣದ ಸಲುವಾಗಿ ಸಾವಿರಾರು ಜನ ಒಟ್ಟಿಗೆ ಸೇರಿ ಹೊಟ್ಟೆ ಪಾಡಿಗಾಗಿ ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ ಕೆಲಸ ಮಾಡುವ ಅವರ ಗತಿಯನ್ನು ದನಗಳಿಗಿಂತ ಅಧಮವೆನ್ನುತ್ತಾರೆ.

ಪರಿಸರದಿಂದ ದೊರೆಯುವ ಶಿಕ್ಷಣದಿಂದ ದೂರ ಮಾಡಿದ ಆಧುನಿಕ ಶಿಕ್ಷಣದ ಅಪಾಯದ ಮುನ್ಸೂಚನೆ ಇಲ್ಲಿದೆ. ಅಕ್ಷರ ಜ್ಞಾನ ಆಯುಧವಾಗಿ ಅಂಥ ಆಯುಧ ಸದುಪಯೋಗಗೊಳ್ಳುವ ಬದಲು ದುರುಪಯೋಗವಾದ ಮಾರ್ಮಿಕತೆಯನ್ನು ಈ ಕವಿತೆಯ ಭಾಗ ಧ್ವನಿಸುತ್ತದೆ. ಆಧುನಿಕ 'ಅಕ್ಷರ ಜ್ಞಾನದಿಂದ' ಲಾಭಕ್ಕಿಂತ ನಷ್ಟವೇ ಹೆಚ್ಚಾಯಿತೆಂಬ ಗಾಂಧೀಜಿಯವರ ಮಾತಿಗೆ (ಹಿಂದ್ ಸ್ವರಾಜ್) ಈ ಸಾಲುಗಳು ಪುಷ್ಟಿ ನೀಡುತ್ತವೆ. ಸ್ಥಳೀಯ ಪರಿಸರದಿಂದ ದತ್ತವಾದ ಶಿಕ್ಷಣದಿಂದ ದೊರೆಯುತ್ತಿದ್ದ ಸಹಬಾಳ್ವೆಯ ಜೀವನಕ್ರಮವನ್ನು ಆಧುನಿಕ ಶಿಕ್ಷಣ ಭಗ್ನಗೊಳಿಸಿದ ಕ್ರಮವೂ ಇಲ್ಲಿದೆ. ವ್ಯಕ್ತಿ ವ್ಯಕ್ತಿಗಳ, ಕುಟುಂಬಗಳ ಹಾಗೂ ಸಮುದಾಯದ ಸಂಬಂಧಗಳಲ್ಲಿ ಉಂಟಾಗುತ್ತಿರುವ ಬಿರುಕುಗಳ ಚಿತ್ರಣವನ್ನು ಇಲ್ಲಿ ಕಾಣಬಹುದು. ಗಾಂಧೀಜಿಯವರು ಹೇಳುವಂತೆ ಪಶ್ಚಿಮದ

ವಿಚಾರ ಪ್ರವಾಹದಲ್ಲಿ ಕೊಚ್ಚಿಕೊಂಡು ಬಂದು ಹಿಂದು ಮುಂದು ಆಲೋಚಿಸದೆ ಜನರಿಗೆ ಈ ಅಕ್ಷರ ಶಿಕ್ಷಣವನ್ನು ಕೊಡಬೇಕೆಂದು ತಾವು ತೀರ್ಮಾನ ಮಾಡಿದೆವು ಎಂಬ ವಿವೇಕಯುತ ಮಾತುಗಳು ಇಲ್ಲಿ ನೆನಪಾಗುತ್ತವೆ. ಅಂಥ ಶಿಕ್ಷಣದಿಂದ ಸಮಾಜಕ್ಕಾಗಲೀ ವ್ಯಕ್ತಿಗಾಗಲಿ ಆಗುವ ಪ್ರಯೋಜನದ ಬಗೆಗೂ ಪ್ರಶ್ನಿಸುತ್ತಾರೆ.

ಹಕ್ಸ್‌ಲೇಯವರ ಶಿಕ್ಷಣವನ್ನು ಕುರಿತ ಅಭಿಪ್ರಾಯವನ್ನು ಗಾಂಧೀಜಿ ಅನುಮೋದಿಸುತ್ತಾರೆ. ಹಾಗೆ ಅನುಮೋದಿಸಲು ಮುಖ್ಯ ಕಾರಣವೆಂದರೆ ಅದು ತನ್ನ ಸ್ಥಳೀಯ ಪರಿಸರದಿಂದಲೆ ದೊರೆಯುವ ಶಿಕ್ಷಣ ಹಾಗೂ ಸ್ಥಳೀಯ ಪರಿಸರದ ಅಭಿವೃದ್ಧಿಗೆ ಸಹಾಯಕವಾಗುವ ದೃಷ್ಟಿಯಿಂದಲೇ.

> ತನ್ನ ದೇಹ ತನಗೆ ದಾಸನಾಗಿ, ಹೇಳಿದ ಕೆಲಸವನ್ನು ಸರಾಗವಾಗಿ ಸಂತೋಷವಾಗಿ ಶಕ್ತಿಯಿದ್ದಷ್ಟು ಮಾಡುವಂತೆ ಯಾರಿಗೆ ತಾರುಣ್ಯದಲ್ಲಿ ಶಿಕ್ಷಣ ದೊರೆತಿದೆಯೋ; ಯಾರ ಬುದ್ಧಿ ಶುದ್ಧ ಶಾಂತ, ನ್ಯಾಯದರ್ಶಿ ಆಗಿದೆಯೋ ; ಯಾರ ಮನಸ್ಸು ಪ್ರಕೃತಿ ನಿಯಮಗಳ ಜ್ಞಾನದಿಂದ ಪೂರ್ಣವಾಗಿದೆಯೊ ; ಯಾರ ಇಂದ್ರಿಯಗಳು ನಿಗ್ರಹಿತವೋ ; ಯಾರ ಅಂತರಾತ್ಮ ಪರಿಶುದ್ಧವೋ ; ಯಾರಿಗೆ ನೀಚ ಕಾರ್ಯವೆಂದರೆ ಹೇಸಿಗೆಯೋ ; ಯಾರು ತನ್ನಂತೆಯೇ ಪರರನ್ನು ಕಾಣುತ್ತಾನೋ - ಅವನು ನಿಜವಾಗಿ ಶಿಕ್ಷಿತ. ಅವನು ಪ್ರಕೃತಿ ನಿಯಮದಂತೆ ನಡೆಯುತ್ತಾನೆ. ನಿಜವಾಗಿ ಅವನೇ ಸರಿಯಾದ ಶಿಕ್ಷಣ ಪಡೆದವನು. ಪ್ರಕೃತಿಯನ್ನು ಅವನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಂಡಾನು, ಪ್ರಕೃತಿ ಅವನನ್ನು ಉತ್ತಮವಾಗಿ ಉಪಯೋಗಿಸೀತು.[೩೯]

ಬೇಸಾಯಗಾರರಿಗೆ ತುರುಗಳಾಧಾರ
ದನಕರುಗಳಿಂದಹುದು ಹಳ್ಳಿಯುದ್ಧಾರ ;
ಶ್ರೀ ಕೃಷ್ಣ ಗೋಕುಲದಿ ಗೋಗಳನು ಕಾಯೆ,
ಗೋಪೊಳಿರಲುರ್ವರೆಯೆ ಗೋವಮ್ಮ ತಾಯೆ !

....

ಸಿದ್ದಣ್ಣನಿದ್ದ, ನಮ್ಮೂರ ವ್ಯಾಪಾರಿ ;
ಅವನಂಗಡಿಯು ಸುಮ್ಮನಿರದ ಸಂಚಾರಿ !

....

ಪುರದ ವರ್ತಕರಂತೆ ಸಿದ್ದಣ್ಣ ಕೆಡದೆ
ಶುದ್ಧನಾಗಿದ್ದ ದುರ್ವ್ಯಸನಕೆಡೆಗೊಡದೆ !
ದಾಕ್ಷಿಣ್ಯ, ಚಾರಿತ್ರ, ಕರುಣೆ, ನಯ, ದಯವು,
ಸಜ್ಜನತೆ, ತುಸುಧರ್ಮ, ದೇವರೊಳು ಭಯವು,
ಸದ್ಗುಣಗಳಾತನೊಳು ನೆಲೆಸಿದ್ದುವಿನ್ನೂ ;
ನರತನವನವನು ಮಾರಿರಲಿಲ್ಲವಿನ್ನೂ.
ಇಂತಿರ್ದ ಸಿದ್ದಣ್ಣ ಪೇಟೆಯೊಡಗೂಡಿ

ತನ್ನ ಯೋಗ್ಯತೆ ಮೀರಿ ವ್ಯಾಪಾರ ಮಾಡಿ
ನಷ್ಟಪಡೆ, ಪಾಪರಾದನು ಸಾಲ ಕೂಡಿ ;
ಮೇಲೆ ಜೀವಿಸತೊಡಗಿದನು ಮೋಸವಾಡಿ !
ಹಳ್ಳಿಯ ಗುಣಗಳೆಲ್ಲ ಜಾರಿದುವು ಬೇಗ
ಹಿಡಿಯಿತವನಿಗೆ ಹಾಳು ಪಟ್ಟಣದ ರೋಗ
ಮುಗ್ಧನಾಗಿದ್ದವನು ಬಲು ಠಕ್ಕನಾದ !
ಕೆಡದೆ ಪಟ್ಟಣ ಸೇರಿ ಹಾಳಾಗಿ ಹೋದ !

ಈ ಭಾಗ ಈ ಹೊತ್ತು ನಮ್ಮ ಸಂದರ್ಭದ ರಕ್ಷಣಾ ಕೇಂದ್ರಗಳಲ್ಲಿ ಒಂದಾದ ನಗರ ಮತ್ತು ಹಳ್ಳಿಯ ಪ್ರಶ್ನೆಯನ್ನು ತಾತ್ವಿಕವಾಗಿ ತೆರೆದಿಡುತ್ತದೆ. ಈ ಆಶಯ ಕುವೆಂಪು ಅವರ ಒಟ್ಟು ಸೃಜನಶೀಲತೆಯ ಮುಖ್ಯ ನೆಲೆಯಾದ ಬೆರಳ್‌ಗೆ ಕೊರಳ್, ಕಾನೂರು ಹೆಗ್ಗಡತಿ, ಜಲಗಾರ, ಅಂಥ ಅವರ ಅನೇಕ ಕೃತಿಗಳಲ್ಲಿ ಬೇರೆ ಬೇರೆ ಸ್ಥರಗಳಲ್ಲಿ ಶೋಧನೆಗೆ ಒಳಪಡಿಸಿರುವುದನ್ನು ಕಾಣುತ್ತೇವೆ. ಈ ಸಂಬಂಧದ ಮಹತ್ವದ ಬೆಳವಣಿಗೆಯನ್ನು ಶ್ರೀರಾಮಾಯಣದರ್ಶನಂ ಕಾವ್ಯದಲ್ಲಿ ಇನ್ನೂ ವಿಸ್ತಾರದಲ್ಲಿ ರೂಪಿತವಾಗಿದೆ. ಅದನ್ನು ಮುಂದೆ ಚರ್ಚಿಸಲಾಗುವುದು.

ಹಳ್ಳಿಯ ನಿವಾಸಿಗಳೆ, ಎಲ್ಲಿರುವಿರೀಗ ?
ಯಾವನೂಳಿಗವೆಸಗಿ, ಯಾವನತಿ ಭೋಗ
ಭೂತಕ್ಕೆ ಬಲಿಯಾಗಿ, ದಾಡೆಯೊಳು ಸಿಕ್ಕಿ,
ಸೋದರರೆ, ನರಳುತಿರುವಿರಿ ಬಿಕ್ಕಿ ಬಿಕ್ಕಿ !
ದುಷ್ಟನಾವನು ನಿಮ್ಮ ಪೀಡಿಸುತಲಿಹನು ?
ಕಷ್ಟಗಳನೆಷ್ಟೆಷ್ಟು ಹೇರುತ್ತಿಲಿಹನು ?
ನೆನೆವಿರಾ ನೀವಂದು ಬಿಟ್ಟ ನಮ್ಮೂರ?[೬೦]

ಗ್ರಾಮೀಣ ಹೈನುಗಾರಿಕೆ, ವ್ಯಾಪಾರಿ ಪದ್ಧತಿ, ಕೃಷಿ, ಸ್ಥಳೀಯ ನಂಬಿಕೆ ಹಾಗೂ ಆಚರಣೆಗಳು, ಸ್ಥಳೀಯ ಗುಡಿ ಕೈಗಾರಿಕೆಗಳು ಗ್ರಾಮೀಣ ಪರಿಸರದಲ್ಲಿ ಬ್ರಿಟಿಷರ ಆಗಮನ ಮತ್ತು ಅವರ ಕಾರ್ಯ ವೈಖರಿಯಿಂದ ಅವನತಿಯ ಕಡೆಗೆ ದಾಪುಗಾಲು ಇಟ್ಟದ್ದನ್ನು ಈ ಮೇಲಿನ ಕವಿತೆಯ ಸಾಲುಗಳು ಧ್ವನಿಸುತ್ತವೆ.

ಈ ಕವಿತೆ ಮೊದಲೇ ಪ್ರಸ್ತಾಪಿಸಿದಂತೆ ಗ್ರಾಮೀಣ ಪರಿಸರದಿಂದ ನಗರಮುಖಿಯಾಗಿ ಮರಳಿ ಮಣ್ಣಿಗೆ ಹಿಂತಿರುಗಿದ ಸಂವೇದನೆಯ ಆತ್ಮಕಥಾನಕ ಪ್ರಾಯಶ್ಚಿತ್ತ ಅಥವಾ ಪಾಪಪ್ರಜ್ಞೆಯಾಗಿರುವಂತೆ ಗಾಂಧೀಜಿಯ ಕನಸಿನ ಗ್ರಾಮ ಜೀವನಕ್ಕೆ ಒದಗಿದ ದುರಂತ ಕಥನವು ಆಗಿದೆ. ರಾಮಚಂದ್ರ ಗುಹಾ ಅವರು 'ಜಾಗತಿಕ ಪರಿಸರ ಚರಿತ್ರೆ'ಯಲ್ಲಿ ಗಾಂಧೀಜಿಯ ಪರಿಸರವಾದವನ್ನು ಕುರಿತ ಜೆ.ಸಿ. ಕುಮಾರಪ್ಪನವರ ಗ್ರಹಿಕೆಯ ಹಿನ್ನೆಲೆಯಲ್ಲಿ ಉಲ್ಲೇಖಿಸಿರುವ ಮಾತುಗಳನ್ನು ಇಲ್ಲಿ ಪ್ರಸ್ತಾಪಿಸುವುದು ಸೂಕ್ತವೆಂದು ಕಾಣುತ್ತದೆ.

ಅತಿಕ್ರಮಣವಿಲ್ಲದೆ ಕೈಗಾರಿಕೀಕರಣ ಸಾಧ್ಯವಿಲ್ಲ. ಆದರೆ ಕೃಷಿಯು ಉತ್ತಮ ವೃತ್ತಿಯಾಗಿದ್ದು ಅದರಲ್ಲಿ ಮನುಷ್ಯನು ಪ್ರಕೃತಿಯನ್ನು, ಪರಿಸರವನ್ನು ನಿಯಂತ್ರಿಸಿ, ಉತ್ತಮ ಫಲಿತಾಂಶವನ್ನು ಪಡೆಯುತ್ತಾನೆ. ಅವರ ಪ್ರಕಾರ -

ಕೃಷಿಯನ್ನಾಧರಿಸಿದ ನಾಗರೀಕತೆಯಲ್ಲಿ, ಪರಿಸರ ವ್ಯವಸ್ಥೆಯಲ್ಲಿ ಹೆಚ್ಚಿನ ಹಸ್ತಕ್ಷೇಪವಾಗುವುದಿಲ್ಲ. ಕೈಗಾರಿಕಾ ಸಮಾಜದಲ್ಲಿ ಬೇಡಿಕೆಯನ್ನು ಗಮನಿಸದೆ ಉತ್ಪಾದಿಸಲಾಗುತ್ತದೆ ಮತ್ತು ಜಾಹೀರಾತುಗಳನ್ನು ಬಳಸಿ ಕೃತಕ ಬೇಡಿಕೆಗಳನ್ನು ಸೃಷ್ಟಿಸಲಾಗುತ್ತದೆ. ಕೈಗಾರಿಕಾ ಸಮಾಜದಲ್ಲಿ ಪರಿಸರದಲ್ಲಾಗುವ ಬದಲಾವಣೆಗಳು ಹಿಂಸಾತ್ಮಕವಾಗಿರುತ್ತವೆ.' ಗಾಂಧಿ ಪ್ರತಿಪಾದಿಸಿದ ಸರಳ ಜೀವನದ ತತ್ವವು ಬ್ರಿಟಿಷ್ ನಗರ ವಿರೋಧಿ ಮಾದರಿಯನ್ನು ಹೋಲುತ್ತದೆ. ದೈಹಿಕ ಶ್ರಮ, ಮನುಷ್ಯ ಸಮಾಜದಲ್ಲಿ ಗ್ರಾಮದ ಶ್ರೇಷ್ಠತೆ, ಕೈಗಾರಿಕಾ ಸಂಸ್ಕೃತಿಯು ಹಿಂಸಾತ್ಮಕ ಎಂಬ ತಿರಸ್ಕಾರ, ದೂರಕಾಲದಲ್ಲಿ ಅದು ಕಾರ್ಯಸಾಧುವಲ್ಲ ಎಂಬ ನಂಬಿಕೆ - ಈ ತತ್ವಗಳೆಲ್ಲ ಎರಡರಲ್ಲೂ ಒಂದೇ ರೀತಿ ಇವೆ. ಆದಾಗ್ಯೂ ಇಂಗ್ಲೀಷ್ ಮಾದರಿಗೆ ಹೋಲಿಸಿದರೆ, ಭಾರತದ ಮಾದರಿ ಎರಡು ವಿಧದಲ್ಲಿ ವಿಶಿಷ್ಟವಾದದ್ದಾಗಿದೆ. ಮೊದಲಿಗೆ, ಗಾಂಧಿಯ ತತ್ವಗಳು ಪ್ರಾಯೋಗಿಕ ಸಿದ್ಧಾಂತಗಳು. ಅವು ವರ್ಡ್ಸ್‌ವರ್ತ್ ಮತ್ತವರ ಸಹಚರರ ಸಿದ್ಧಾಂತಗಳಂತೆ ರೊಮ್ಯಾಂಟಿಕ್ ಅಲ್ಲ. ಗಾಂಧಿಗೆ ಕಲೆ, ಕಾವ್ಯ ಅಥವಾ ಸಂಗೀತ ಮುಖ್ಯವಾಗಿರಲಿಲ್ಲ. ಆತನ ಮುಖ್ಯ ಕಾಳಜಿ ಬ್ರಿಟಿಷ್ ವಸಾಹತುಶಾಹಿಗೆ ಸಿಕ್ಕು ಶೋಷಣೆಗೊಳಗಾಗಿದ್ದ ಗ್ರಾಮೀಣ ಜನತೆಯ ಘನತೆ ಮತ್ತು ಬದುಕಿನ ಪುನರ್‌ಸ್ಥಾಪನೆ. ಎರಡನೆಯದಾಗಿ, ೧೯ನೇ ಶತಮಾನದ ಕೈಗಾರಿಕಾ ಕ್ರಾಂತಿಯಲ್ಲಿ ಬ್ರಿಟನ್ನಿನ ರೈತರು ಮತ್ತು ಕರಕುಶಲ ಕಲೆಗಾರರು ಇಲ್ಲವಾಗಿಬಿಟ್ಟಿದ್ದರು. 'ಮರಳಿ ಭೂಮಿಗೆ' ಹಿಂತಿರುಗುವ ಕ್ರಿಯೆಯು ಪ್ರತಿಭಟನೆಯ ಕ್ರಿಯೆಯಾಗಿತ್ತು. ಒತ್ತಡ ಹೇರಿ ಇಲ್ಲವೇ ಪರಿಸರ ಸಂಘಟನೆಗಳ ಮೂಲಕ ಕೈಗಾರೀಕರಣದ ಪ್ರಗತಿಯನ್ನು ನಿಧಾನಿಸಬಹುದಿತ್ತೇ ಹೊರತು, ನಿಲ್ಲಿಸುವುದು ಸಾಧ್ಯವಿರಲಿಲ್ಲ. ಇದಕ್ಕೆ ವಿರುದ್ಧವಾಗಿ, ಗಾಂಧಿ ಮತ್ತು ಕುಮಾರಪ್ಪ ಬರೆದ, ಕೆಲಸ ಮಾಡಿದ ಭಾರತವು ಏಳುನೂರು ಸಾವಿರ ಹಳ್ಳಿಗಳ ದೇಶವಾಗಿದ್ದು, ಅಲ್ಲಿ ಸಾಂಪ್ರದಾಯಿಕ ಕೃಷಿ, ಕರಕುಶಲವೃತ್ತಿ ಇವು ಕಾರ್ಖಾನೆಯ ಉತ್ಪನ್ನಗಳ ಸ್ಪರ್ಧೆಯನ್ನು ತಡೆಯಬಲ್ಲವಾಗಿದ್ದವು. ರಸ್ಕಿನ್ನನ ಹಳ್ಳಿಗಳ ಮಾದರಿ ಒಂದು ಆದರ್ಶ ಅಷ್ಟೆ. ಆದರೆ ಗಾಂಧಿಯ ಮಾದರಿಯು ಸ್ವತಂತ್ರ ಭಾರತದ ಸಾಮಾಜಿಕ ಪುನರುಜ್ಜೀವನದ ಬುನಾದಿಯಾಗಬಹುದಾದ ಸಾಧ್ಯತೆಗಳಿತ್ತು.'[೪೧]

ಸ್ಥಳೀಯ ಪುರೋಹಿತಶಾಹಿ ವ್ಯವಸ್ಥೆಯು ಮನುಷ್ಯಾ ಮನುಷ್ಯರಲ್ಲಿ ಅಂತರಗಳನ್ನು ಸೃಷ್ಟಿಸಿ ಪರಕೀಯ ಶಕ್ತಿಗಳ ಪ್ರವೇಶಕ್ಕೆ ದಾರಿಮಾಡಿಕೊಟ್ಟ ಅನಿಷ್ಟತೆಯನ್ನು ಪ್ರಶ್ನಿಸಿದ್ದಾರೆ.

೧೦. ಜನಸಂಖ್ಯಾ ಸ್ಫೋಟ ಮತ್ತು ಪರಿಸರ

ಕುವೆಂಪು ಅವರ ಪ್ರೇತ-ಕ್ಯೂ (೧೯೬೭) ಜನಸಂಖ್ಯಾ ಸ್ಫೋಟದ ಮಾರಕತೆಯನ್ನು ಕುರಿತದ್ದು. ಜನಸಂಖ್ಯಾ ಸ್ಫೋಟ ಪರಿಸರದ ಮೇಲಿನ ಒತ್ತಡವನ್ನು ಅಧಿಕಗೊಳಿಸಿ ಪರಿಸರವನ್ನು ವಿನಾಶದಂಚಿಗೆ ಕೊಂಡೊಯ್ಯುವ

ಬಹುಮುಖ್ಯ ಸಮಸ್ಯೆಯಾಗಿ ಪರಿಣಮಿಸಿದೆ. ಅಂದರೆ ಜನಸಂಖ್ಯೆ ಮತ್ತು ಪರಿಸರ ಒಂದಕ್ಕೊಂದು ಸಂಬಂಧವನ್ನು ಪಡೆದಿವೆ. ಜನಸಂಖ್ಯೆ ಅಧಿಕವಾಗುತ್ತಾ ಹೋದಂತೆ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತಾ ಹೋಗುತ್ತದೆ. ಇಂಥ ಸಮಸ್ಯೆಗಳಿಂದ ಪಾರಾಗಲು ಕುಟುಂಬ ಯೋಜನೆಯಂಥ ಜನನ ನಿಯಂತ್ರಣ ಯೋಜನೆಗಳನ್ನು ಭಾರತ ಸರ್ಕಾರವು ಸ್ವಾತಂತ್ರ್ಯಾನಂತರದ ತನ್ನ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗೆತ್ತಿಕೊಂಡಿತು. ಆದರೂ ಜನಸಂಖ್ಯಾ ಸ್ಫೋಟದ ನಿಯಂತ್ರಣ ಹಿಡಿತವನ್ನು ಮೀರಿ ನೂರುಕೋಟಿಗೂ ಅಧಿಕವಾಗಿ ಭಾರತದಲ್ಲಿ ಮಾತ್ರವೇ ಬೆಳೆದು ನಿಂತಿದೆ. ಭಾರತ ಸರ್ಕಾರದ ಕುಟುಂಬ ಯೋಜನೆಯ ಸೋಲಿನ ಪ್ರತಿಮೆಯಾಗಿಯೂ ಈ ಸ್ಫೋಟ ಕಾಣುತ್ತದೆ. ಅನೇಕ ಪರಿಸರ ತಜ್ಞರು ಜನಸಂಖ್ಯಾ ವೃದ್ಧಿಯ ಪ್ರಮಾಣ ಗತಿಯನ್ನು ಗಮನಿಸಿ ಇದು ಪರಿಸರದ ಮೇಲೆ ಪ್ರಯೋಗಿಸುತ್ತಿರುವ 'ಜನಸಂಖ್ಯಾ ಸ್ಫೋಟದ ಬಾಂಬ್' ಎಂದು ಕರೆದಿದ್ದಾರೆ. ಇಂಥ ಜನಸಂಖ್ಯಾ ಸ್ಫೋಟದ ಬಾಂಬಿನಿಂದ ತೀವ್ರ ನಗರೀಕರಣ, ಅರಣ್ಯ ಒತ್ತುವರಿ, ನೀರಿಗಾಗಿ ಅಣೆಕಟ್ಟುಗಳ ನಿರ್ಮಾಣ, ಭೂಮಿ ಹಾಗೂ ಕೃಷಿ ಮೇಲಿನ ಒತ್ತಡ, ರಸ್ತೆಗಳಿಗಾಗಿ ಭೂಮಿಯ ಕಬಳಿಕೆ ಮೊದಲಾದ ಪ್ರಕ್ರಿಯೆಗಳು ಪರಿಸರದ ಮೇಲೆ ಅಧಿಕ ಒತ್ತಡವನ್ನು ತರುತ್ತವೆ. ಇವು ಪರಿಸರ ವಿನಾಶಕ್ಕೆ ಕಾರಣವಾಗುತ್ತಿರುವ, ದಾರಿಯಾಗುತ್ತಿರುವ ಪರಿಣಾಮಗಳನ್ನು ಕುರಿತು ಜಗತ್ತಿನಾದ್ಯಂತ ಅನೇಕ ತಜ್ಞರು ತಮ್ಮ ಅಧ್ಯಯನ ಚಿಂತನೆ ಮಂಥನಗಳಿಂದ ಅನೇಕ ವರದಿಗಳನ್ನು ಮಂಡಿಸಿದ್ದಾರೆ. ಜನಸಂಖ್ಯಾ ಸ್ಫೋಟದ ಪರಿಣಾಮವಾಗಿ ಪ್ರಸ್ತುತ ಸಂದರ್ಭದಲ್ಲಿ ಭೂಮಿ, ನೀರು, ಆಹಾರ, ವಸತಿ, ವಾಯು ಮತ್ತು ಸಂಪನ್ಮೂಲಗಳ ಮೇಲಿನ ಒತ್ತಡದಿಂದಾಗಿ ಅತಿ ಹೆಚ್ಚು ಪ್ರಮಾಣದ ಸಮಸ್ಯೆಗಳು ಈ ಹಿಂದಿಗಿಂತ ಇಂದು ಮಾರಕವಾಗಿ ಪರಿಣಮಿಸಿವೆ. ಇಂಥ ಮಾರಕತೆಗೆ ಕಾರಣವಾಗುತ್ತಿರುವ ಜನಸಂಖ್ಯಾ ಸ್ಫೋಟದ ವೇಗವನ್ನು ಮತ್ತು ಒತ್ತಡವನ್ನು ಪ್ರೇತಗಳ ಕ್ಯೂ ಎಂದು ಕುವೆಂಪು ಕರೆದಿದ್ದಾರೆ.

ಯಾಕಿಂತು
ಕ್ಯೂ ನಿಂತು
ನುಗ್ಗುತಿರುವಿರಿ ಜನ್ಮಧಾರಣೆಗೆ,
ಓ ನತದೃಷ್ಟ ಜೀವಗಳಿರಾ?

ನಿಮಗೆ ಕಾಣುವುದಿಲ್ಲ?
ಭೂಮಿ ತುಂಬೆಲ್ಲ
ಜನಸಂಖ್ಯೆ ಏರಿ ಕಿಕ್ಕಿರಿದು ಮೀರಿ,
ಕಂಕಾಲ ಪಂಕ್ತಿ, ಹೊಟ್ಟೆಗಿಲ್ಲ!

ಏನು ಅವಸರ ನಿಮಗೆ?
ಯಾವ ಗರ್ಭವೊ ಏನೊ?
ಯಾರ ಯೋನಿಯೊ ಏನೊ?
ಅಂತು ಹುಟ್ಟಿದರಾಯ್ತು
ಭೂಮಿಯಲ್ಲಿ!
ಉಸಿರು ಕಟ್ಟಿಹುದೇನು ನಿಮಗೆ ಅಲ್ಲಿ?[೨೨]

ಜನಸಂಖ್ಯಾ ಸ್ಫೋಟದಿಂದ ಎದುರಾಗಿರುವ ಸಮಸ್ಯೆಗಳ ಹಿನ್ನೆಲೆಯಲ್ಲಿ ಹೊಸ ಮಾನವನ ಜೀವಸ್ಫೋಟ ಅಥವಾ ಜನ್ಮಧಾರಣೆಯನ್ನು ಕುವೆಂಪು ಅವರು ನತದೃಷ್ಟವೆಂದು ಕರೆದಿದ್ದಾರೆ. ಏಕೆಂದರೆ ಮಾನವ ಪರಿಸರದಲ್ಲಿ ಹೊಸ ಜೀವಕ್ಕೆ ಎದುರಾಗಿರುವ ಸಮಸ್ಯೆಗಳ ಕೋಟಲೆಯನ್ನು ಗಮನಿಸಿದರೆ ಹೊಸ ಸೃಷ್ಟಿ ಸಂಭ್ರಮವಾಗಿ ಕಾಣದೆ ನತದೃಷ್ಟವಾಗಿ ಕಂಡಿದೆ. ನಿಸರ್ಗವನ್ನು ಅಗಾಧ ಪ್ರಮಾಣದಲ್ಲಿ ಪ್ರೀತಿಸುವ ಕವಿಗೆ ಭೂಮಿಯ ಮೇಲೆ ಜನಸಂಖ್ಯಾ ಸ್ಫೋಟದಿಂದ ಎದುರಾಗಿರುವ ಸಮಸ್ಯೆ ಇಂಥ ಉದ್ಗಾರಕ್ಕೆ, ಪ್ರಶ್ನೆಗೆ ಗುರಿಯಾಗಿದೆ.

ಜನಸಂಖ್ಯಾ ಸ್ಫೋಟದಿಂದ ಎದುರಾಗಿರುವ ಬಡತನದಿಂದ ಅಸ್ತಿಪಂಜರಗಳ (ಕಂಕಾಲಪಂಕ್ತಿ) ಮೆರವಣಿಗೆ ಕಾಣಿಸಿದೆ. ಮಾನವನ ಜೀವಸ್ಫೋಟದ ತೀವ್ರತೆಯನ್ನು ಗಮನಿಸಿದ ಸಂವೇದನೆ ಕ್ರಿಮಿಕೀಟಗಳ ಜೀವಸ್ಫೋಟವು ನಾಚುವಂತಿದೆ ಎನ್ನುತ್ತಾರೆ. ಪ್ರತಿನಿಮಿಷಕ್ಕೆ ಕೋಟಿಕೋಟಿ ಸಂಖ್ಯೆಯಲ್ಲಾಗುತ್ತಿರುವ ಶಿಶುಜನನದ ಬಗೆಗೂ, ಅಂಥ ಜನನ ಮುಂದೆ ವಿವಿಧ ದಾರಿಗಳಲ್ಲಿ ಮೃತ್ಯು ಕೂಪಕ್ಕೆ ಒಳಗಾಗುವ ಚಿತ್ರವನ್ನು ಈ ಕವಿತೆಯ ಮುಂದಿನ ಭಾಗಗಳಲ್ಲಿ ಕಾಣುತ್ತೇವೆ. ಜನಸಂಖ್ಯೆಯ ಒತ್ತಡದಿಂದ ಎದುರಾಗುವ ಅನೇಕ ಸಮಸ್ಯೆಗಳಿಂದ ಜಿಗುಪ್ಸೆಗೊಂಡ ಮಾನವ ಸಮುದಾಯ ಸಾವಿನ ನಾನಾ ದಾರಿಗಳನ್ನು ಹುಡುಕಿಕೊಳ್ಳುವ ಚಿತ್ರವನ್ನು ಈ ಕವಿತೆಯಲ್ಲಿ ಕಾಣುತ್ತೇವೆ. ಇಂಥ ದುರಂತ ಪರಿಸರದ ಅರಿವಿದ್ದು ಮಾನವ ಸಮುದಾಯ, ಇಂಥ ಜನಸಂಖ್ಯಾ ಸ್ಫೋಟಕ್ಕೆ ಕಾರಣವಾಗುವ ಪ್ರಕ್ರಿಯೆಯನ್ನು ಲೇಖಕರು ವಿಡಂಬಿಸಿದ್ದಾರೆ. ಸರ್ಕಾರ ಮೊದಲಾದ ಸಂಘ ಸಂಸ್ಥೆಗಳು ಕೈಗೊಳ್ಳುವ ಪರಿಹಾರೋಪಾಯಗಳನ್ನು, ಯೋಜನೆಗಳನ್ನು ಹಿಂದಿಕ್ಕಿ ಜನಸಂಖ್ಯಾ ಸ್ಫೋಟಕ್ಕೆ ಕಾರಣವಾಗುವ ವಿಧಾನವನ್ನು ಪ್ರಶ್ನಿಸುತ್ತಾರೆ.

ನೀವಿತ್ತ ಬರದಂತೆ ತಡೆಗಟ್ಟಲೆಂದು
ನೀವು ಐತರುವ ಕಂಡಿಗಳನೆಲ್ಲ ಅಡಕಲೆಂದು
ರಾಸಾಯನಿಕ ರಬ್ಬರುಂಗುರ ಕಾಂಡಮಿತ್ಯಾದಿ
ಕೃತಕ ನಾನಾ ಉಪಾಯ ಸಾಧನಗಳಿಂದೆ,
ಸಂನ್ಯಾಸ ಬ್ರಹ್ಮಚರ್ಯ ಮೋಕ್ಷಾದಿ
ಆದರ್ಶದಾಕರ್ಷಣೆಯ ಬೋಧನೆಗಳಿಂದೆ
ಮಾನವರು ಕಟ್ಟುತಿಹ ಕಟ್ಟೆಗಳನ್ನೆಲ್ಲ
ಬರಿದೊಡೆದು ಕೊಚ್ಚಿ ಹೊನಲುಕ್ಕಿ
ನುಗ್ಗುತಹಿರಲ್ಲಾ ಅತ್ತ ಕಡೆಗೇ?!
ಅಯ್ಯಯ್ಯೊ
ಏನು ಬಂದಿದೆ ನಿಮಗೆ ಅಲ್ಲಿ ಆತಂಕ?
ಕಾದಿರದೆ ನಿಮಗಿಲ್ಲಿ ಘೋರತರ ನರಕ?[೪೩]

ಜನಸಂಖ್ಯಾ ಹೆಚ್ಚಳದಿಂದ ಭೂಮಿಯ ಧಾರಣಶಕ್ತಿ ಸಾಮರ್ಥ್ಯಗಳು ಕೈಮೀರಿದಾಗ ದುರಂತ ನಿಶ್ಚಿತವೆಂಬುದು ಹೀಗಾಗಲೇ ನಮಗೆಲ್ಲ ಮನವರಿಕೆಯಾಗಿದೆ. ಮೂಲಭೂತ ಸೌಲಭ್ಯಗಳ ಕೊರತೆಯು ಅಧಿಕವಾಗಿ ಭೂಮಿಯ ಮೇಲಿನ ಒತ್ತಡವು ಮಿತಿಮೀರಿದೆ. ಇದರಿಂದಾಗಿ ಸಂಪನ್ಮೂಲಗಳ ಮೇಲಿನ ಒತ್ತಡವು

ಹೆಚ್ಚಿದೆ. ಅಂಥ ಒತ್ತಡದಿಂದಾಗಿ ಭೂಮಿಯ ಮೇಲಿನ ನಿಸರ್ಗ ತಾಳಿಕೊಳ್ಳಲಾರದ ಸ್ಥಿತಿಯನ್ನು ತಲುಪಿದೆ. ಜೊತೆಗೆ ಸಂಪನ್ಮೂಲಗಳ ಹಂಚಿಕೆಯು ಅಸಮಾನತೆಯಿಂದ ಕೂಡಿರುವುದರಿಂದ ಪ್ರಪಂಚದಾದ್ಯಂತ ವಿರಾಟ್ ರೂಪವನ್ನು ಪಡೆಯುತ್ತಿದೆ. ಹಾಗಾಗಿ ಎಲ್ಲೆಲ್ಲೂ ಹಸಿವು, ಅಶಾಂತಿಯ ಚಿತ್ರಗಳು ಎದುರಾಗುತ್ತಿವೆ. ಯುದ್ಧ, ಭಯೋತ್ಪಾದನೆಗಳಿಗೂ ಕಾರಣವಾಗಿ ಸಮಷ್ಟಿ ಜೀವಸಮುದಾಯಕ್ಕೆ ಮಾರಕವಾಗುವ ಸನ್ನಿವೇಶದಲ್ಲಿದ್ದೇವೆ. ಈಗಾಗಲೇ ಪ್ರಸ್ತಾಪಿಸಿದಂತೆ ಜನಸಂಖ್ಯಾ ಸ್ಫೋಟದ ಒತ್ತಡದಿಂದಾಗಿ ಜೀವವೈವಿಧ್ಯತೆ ಮಾನವನ ಹಸಿವು ದಾಹಗಳಿಗೆ ಬಲಿಯಾಗಿ ನಿರ್ನಾಮದ ಹಂತವನ್ನು ತಲುಪುತ್ತಿದೆ. ಹಾಗಾಗಿ ಅನೇಕ ಜೀವರಾಶಿಗಳು ಅಳಿವಿನಂಚನ್ನು ಮುಟ್ಟುತ್ತಿವೆ. ಈ ವಿಚಾರವನ್ನು ಸಮರ್ಥಿಸಲು ರಾಮಚಂದ್ರ ಗುಹಾ ಹಾಗೂ ಮಾಧವ ಗಾಡಗೀಳ ಅವರ ಮಾತುಗಳನ್ನು ಇಲ್ಲಿ ಉದಾಹರಿಸುವುದು ಸೂಕ್ತವೆಂದು ಕಾಣುತ್ತದೆ.

> ಸಂಪನ್ಮೂಲಗಳ ಬಳಕೆ ಹೆಚ್ಚಾಗುತ್ತಾ ಹೋದಂತೆ ಅದು ಪರಿಸರದ ಮೇಲೆ ಪರಿಣಾಮ ಬೀರುತ್ತಾ ಹೋಗುತ್ತದೆ. ಜನಸಂಖ್ಯೆ ಹೆಚ್ಚಿದಂತೆ, ಮತ್ತು ಪ್ರತಿಯೊಬ್ಬರ ಬೇಡಿಕೆ ಹೆಚ್ಚಿದಂತೆ ಸಂಪನ್ಮೂಲಗಳ ಬಳಕೆಯೂ ಹೆಚ್ಚಾಗುತ್ತಾ ಹೋಗುತ್ತದೆ. ಜನಸಂಖ್ಯೆ ಹೆಚ್ಚಳಕ್ಕೆ ಪರಿಸರ ಸ್ನೇಹಿ ಮತ್ತು ಪರಿಸರ ನಿರಾಶ್ರಿತರು ಕಾರಣರಾದರೆ, ಸರ್ವಭಕ್ಷಕ ಗುಂಪಿನ ಒಬ್ಬೊಬ್ಬರ ಬೇಡಿಕೆಯೂ ಹೆಚ್ಚು. ಇವರ ಸಂಖ್ಯೆ ಅಷ್ಟೇನೂ ಹೆಚ್ಚಿಲ್ಲವಾದರೂ ಬೇಡಿಕೆಯ ಗಾತ್ರ ಮಾತ್ರ ಏರುತ್ತಿದೆ. ಯಾವುದೇ ಒಂದು ಕುಟುಂಬ ತನ್ನ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಲು, ಕೌಶಲ್ಯದಲ್ಲಿ ಅವರನ್ನು ಪಾರಂಗತರನ್ನಾಗಿ ಮಾಡಲು ಶಕ್ತವಾಯಿತೆಂದರೆ ಆ ಕುಟುಂಬ ಬಹಳಷ್ಟು ಮಕ್ಕಳನ್ನು ಹೆರುವುದಿಲ್ಲ.[೬೪]

ಈ ಮಾತುಗಳು ಜನಸಂಖ್ಯಾ ಸ್ಫೋಟದ ಪರಿಣಾಮ ಮತ್ತು ಪರಿಹಾರಗಳ ಕಡೆಗೂ ಗಮನಸೆಳೆಯುತ್ತದೆ. ಜನಸಂಖ್ಯಾ ಸ್ಫೋಟ ಹೀಗೇ ಮುಂದುವರಿದರೆ ಒಂದಲ್ಲ ಒಂದು ದಿನ ಮಾನವ ಕುಲವು ಅಪಾಯದಂಚಿನ ಜೀವಿಗಳ (Endangered Species) ಹಂತವನ್ನು ತಲುಪುವ ಎಲ್ಲ ಸೂಚನೆಗಳು ದೂರವಿಲ್ಲವೆಂದು ಕಾಣುತ್ತವೆ. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಹಾಗೂ ಪ್ರದೀಪ ಕೆಂಜಿಗೆ ಅವರು ಬರೆದಿರುವ 'ಎಚ್ಚರಿಕೆಯ ಗಂಟೆ ಸಹೇಲ್' ಕಥೆ ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

ಆಫ್ರಿಕಾದ ಮಾಲಿ, ಸುಡಾನ್, ನೈಜರ್, ಛಡ್, ಮಾಂಟಾನ ರಾಜ್ಯಗಳನ್ನು ಒಳಗೊಂಡ ಭೂಪ್ರದೇಶವೇ ಸಹೇಲ್. ಜನಸಂಖ್ಯಾ ಸ್ಫೋಟದಿಂದ ಈಗಾಗಲೇ ಸಹೇಲ್ ಭೀಕರ ಅನಾಹುತಗಳನ್ನು ಅನುಭವಿಸಿದೆ. ಕಾಲದಿಂದ ಕಾಲಕ್ಕೆ ಸಮಸ್ಯೆಗಳು ಮತ್ತಷ್ಟು ಹೆಚ್ಚಿವೆ. ಸಹೇಲ್ ಪ್ರಾಂತ್ಯದ ಜನರು ಕಾಡುಮೇಡುಗಳಲ್ಲಿ ಅಲೆಯುತ್ತಾ ಪಶುಪಾಲನೆಯನ್ನು ಜೀವನಾಧಾರವನ್ನಾಗಿಸಿಕೊಂಡಿದ್ದರು. ಈ ಪರಿಯ ಕಷ್ಟಕರ ಜೀವನವನ್ನು ನಡೆಸುತ್ತಿದ್ದ ಈ ಪ್ರಾಂತ್ಯದಲ್ಲಿ ರೋಗರುಜಿನಗಳ ಮುಖಾಂತರ ಹಾಗೂ ಬದುಕುಳಿಯುವ ಕಡಿಮೆ ಶಿಶುಗಳ ಮುಖಾಂತರ ಜನಸಂಖ್ಯೆ ನಿಶ್ಚಿತ ಪ್ರಮಾಣದಲ್ಲಿತ್ತು. ಆದರೆ ಈ ಜನರು ದೊಡ್ಡ ಕುಟುಂಬಗಳನ್ನು ಆದರ್ಶವಾಗಿ ಕಂಡರು. ಇದಕ್ಕೆ ಪೂರಕವಾಗಿ ಆಧುನಿಕ ವೈದ್ಯೋಪಚಾರಗಳು ಸುಲಭವಾಗಿ ಲಭ್ಯವಾದವು. ಇಲ್ಲಿಂದ ಸಹೇಲ್ ನಿವಾಸಿಗಳ ಸಂಖ್ಯೆ ದ್ವಿಗುಣವಾಯಿತು. ಇದರ ಪರಿಣಾಮವಾಗಿ ಭೂಮಿಯ ಮೇಲೆ ಒತ್ತಡವುಂಟಾಯಿತು.

ಹುಲ್ಲುಗಾವಲುಗಳಾಗಿದ್ದ ನೆಲವು ಕೃಷಿ ಭೂಮಿಯಾಗಿ ಪರಿವರ್ತಿತವಾಯಿತು. ಜನಸಂಖ್ಯೆಯ ಹೆಚ್ಚಳದ ಪರಿಣಾಮವಾಗಿ ಅಷ್ಟೇ ತೀವ್ರತರವಾದ ಸಮಸ್ಯೆಗಳು ಉಂಟಾದವು. ಇವು ಅಷ್ಟೇ ಭೀಕರವಾಗಿ ಉಲ್ಬಣಿಸಿದವು. ಅಸಂಖ್ಯಾ ಜನರು ಅಸುನೀಗಿದರು. ದನಕರುಗಳ ಸಂಖ್ಯೆ ಕ್ಷೀಣಿಸಿತು. ಮಳೆಯ ಪ್ರಮಾಣ ಕುಂಠಿತಗೊಂಡಿತು. ನದಿ ಸರೋವರಗಳು ಸಂಪೂರ್ಣ ಬರಿದಾದವು. ಹೀಗೆ ಸಹೇಲ್ ಪ್ರಾಂತ್ಯದ ಜನಸಂಖ್ಯೆಯ ಮೇಲೆ ಆದ ಪರಿಣಾಮ ಘೋರ. ಇದರಿಂದ ಆಫ್ರಿಕಾ ಜನರು ವಲಸೆ ಹೋಗಲು ನಿರ್ಧರಿಸಿದರು. ಕೃಶವಾದ ದೇಹವನ್ನು ಹೊತ್ತ ಜನರೆಲ್ಲರೂ ದಿಕ್ಕಿಲ್ಲದ ದಿಕ್ಕಿಗೆ ಮುಖಮಾಡಿ ಹೊರಡಲನುವಾದರು. ಸಹೇಲ್ ಪ್ರಾಂತ್ಯದ ವ್ಯಾಪಾರೀಕೇಂದ್ರಗಳು ಸ್ತಬ್ಧಗೊಂಡವು. ವ್ಯಾಪಾರ ವಹಿವಾಟುಗಳು ನಿಂತವು. ಈ ಭೀಕರ ಸ್ಥಿತಿ ಮಾಧ್ಯಮಗಳವರೆಗೂ ವ್ಯಾಪಿಸಿತು. ವಿಶ್ವದ ಉಳಿದೆಲ್ಲ ದೇಶಗಳ ಜನರು ಸಹಾಯಕ್ಕೆ ಮುಂದಾದರು. ಆದರೆ ಆ ವೇಳೆಗೆ ಪರಿಸ್ಥಿತಿ ತೀವ್ರ ಹದಗೆಟ್ಟಿದ್ದರ ಪರಿಣಾಮ ಇವರ ಸಹಾಯ ಸಹೇಲ್ ಜನರಿಗೆ ಲಭ್ಯವಾಗಿಲ್ಲ. ಅನೇಕ ಆಂತರಿಕ ಕಲಹಗಳು ಸೃಷ್ಟಿಯಾದವು. ಆಹಾರವೇ ಮುಖ್ಯ ಸಮಸ್ಯೆಯಾಗಿ ಜನ ಸಾವಿಗೆ ಶರಣಾದರು. ಸಹೇಲ್ ಪ್ರಾಂತ್ಯದ ಯಾವುದೇ ಪ್ರದೇಶಕ್ಕೆ ಪ್ರವೇಶಿಸಿದರೆ ಸಾಕು ಇಂಥ ಘೋರತೆಯ ದರ್ಶನವಾಗುತ್ತದೆ. ಇಂಥ ಚಟುವಟಿಕೆಗೆ ಮೂಲ ಜನಸಂಖ್ಯಾ ಸ್ಫೋಟ. ಹಾಗಾಗಿ ಹಿಂದುಳಿದ ರಾಷ್ಟ್ರಗಳಿಗೆ ಸಹೇಲ್ ಮೊದಲ ಎಚ್ಚರಿಕೆಯ ಗಂಟೆಯಾಗಿದೆ (ಸಂಗ್ರಹ)[೪೫]

ಅಡಿಟಿಪ್ಪಣಿ :

೧. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಕಾವ್ಯ, ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೦, ಪು. ೪೩.
೨. ನಗರ ವೆಂಕಣ್ಣಾಚಾರ್ಯರು, ನಾರಾಯಣಶರ್ಮರು (ಸಂ) ; ಪುನರ್ಜನ್ಮ ಅಥವಾ ಆತ್ಮಶುದ್ಧಿ, ಶ್ರೀ ವಿದ್ಯಾರಣ್ಯ ಗ್ರಂಥ ಪ್ರಕಾಶಕ ಸಮಿತಿ, ಬೆಳಗಾವಿ, ೧೯೩೬, ಪು. ೧-೨.
೩. ಶಂಕರ ಮೊಕಾಶಿ ಪುಣೇಕರ ; ಅಪೂರ್ಣ ವರ್ತಮಾನಕಾಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೫, ಪು. ೧೧೪-೧೨೦.
೪. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಗದ್ಯ ಸಂಪುಟ ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೯೩೯.
೫. - ಅದೇ -, ಪು. ೯೦೩.
೬. - ಅದೇ - ; ಕುವೆಂಪು ಸಮಗ್ರ ಕಾವ್ಯ, ಸಂಪುಟ ೧, ಪ್ರಸಾರಾಂಗ, ಕ.ವಿ.ವಿ, ಹಂಪಿ, ೨೦೦೦, ಪು. ೪೮೬.
೭. - ಅದೇ - ; ಕುವೆಂಪು ಸಮಗ್ರ ಗದ್ಯ ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೩, ಪು. ೨೭.
೮. - ಅದೇ - ; ಕುವೆಂಪು ಸಮಗ್ರ ಗದ್ಯ ಸಂಪುಟ ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೯೦೮.
೯. ನಾಗರಾಜ್ ಡಿ.ಆರ್. ; ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩, ಪು. ೭೮.
೧೦. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಕಾವ್ಯ, ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೦, ಪು. ೧-೨.
೧೧. - ಅದೇ -, ಪು. ೧೦-೧೧.
೧೨. ಕುವೆಂಪು ; ನೆನಪಿನ ದೋಣಿಯಲ್ಲಿ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ೧೯೮೦, ಪು. ೧೦೭೮.
೧೩. - ಅದೇ -, ಪು. ೭೧೮-೭೧೯.
೧೪. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಗದ್ಯ, ಸಂಪುಟ ೧, ಪ್ರಸ್ತಾರಾಂಗ, ಕ.ವಿ.ವಿ., ಹಂಪಿ, ೨೦೦೩, ಪು. ೨೯೦-೨೯೧.
೧೫. - ಅದೇ - ; ಕುವೆಂಪು ಸಮಗ್ರ ಗದ್ಯ ಸಂಪುಟ ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೯೨೧.
೧೬. ಕುವೆಂಪು ; ಕಲಾಸುಂದರಿ, ಕಾವ್ಯಾಲಯ, ಮೈಸೂರು, ೧೯೪೮, ಪು. ೧೩.
೧೭. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಗದ್ಯ, ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೩, ಪು. ೨೯೦.

೧೮. - ಅದೇ - ; ಕುವೆಂಪು ಸಮಗ್ರ ಕಾವ್ಯ ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೦, ಪು. ೬೪೩.

೧೯. - ಅದೇ - ; ಕುವೆಂಪು ಸಮಗ್ರ ಕಾವ್ಯ, ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೦, ಪು. ೬೪೬-೬೪೭.

೨೦. ನಾಗರಾಜ್ ಡಿ.ಆರ್. ; ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩, ಪು. ೬೮.

೨೧. ಶಿವಾರೆಡ್ಡಿ ಕೆ.ಸಿ. ; ಕನ್ನಡದ ಹಾಡು ಪಾಡು, ಅಧ್ಯಯನ ಮಂಡಲ, ಬೆಂಗಳೂರು, ೨೦೦೩, ಪು. ೧೩೬-೧೩೯.

೨೨. ಕುವೆಂಪು ; ಕೊಳಲು, ಉದಯರವಿ ಪ್ರಕಾಶನ, ವಾಣೀವಿಲಾಸಪುರಂ, ಮೈಸೂರು, ೧೯೯೫, ಪು. ೧೨.

೨೩. - ಅದೇ -, ಪು. ೮೯.

೨೪. ಕುವೆಂಪು ; ಕಲಾಸುಂದರಿ, ಉದಯರವಿ, ವಾಣೀವಿಲಾಸಪುರಂ, ಮೈಸೂರು, ೧೯೬೨, ಪು. ೪೭-೪೯.

೨೫. ಕುವೆಂಪು ; ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೯೬, ಪು. ೬-೭.

೨೬. - ಅದೇ - ; ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೬೬, ಪು. ೮-೯.

೨೭. - ಅದೇ -, ಪು. ೯.

೨೮. ಕುವೆಂಪು ; ಪಾಂಚಜನ್ಯ, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೬೯, ಪು. ೨೭-೨೮.

೨೯. - ಅದೇ -, ಪು. ೩೦-೩೧.

೩೦. ಕುವೆಂಪು ; ಕೊಳಲು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೯೫, ಪು. ೯೬.

೩೧. ನಾಗಭೂಷಣ ಡಿ.ಎಸ್. (ಸಂ) ; ಕುವೆಂಪು : ಒಂದು ಪುನರನ್ವೇಷಣೆ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫, ಪು. ೧೪೨.

೩೨. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಗದ್ಯ ಸಂಪುಟ ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೮೫೪

೩೩. ಕುವೆಂಪು ; ಹಾಳೂರು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೬೨, ಪು. ೩

೩೪. - ಅದೇ -, ಪು. ೪

೩೫. - ಅದೇ -, ಪು. ೫

೩೬. - ಅದೇ -, ಪು. ೬-೮

೩೭. ರಾಮಚಂದ್ರ ಗುಹಾ ; ಮಾಧವ ಐತಾಳ (ಅನು) ; ಜಾಗತಿಕ ಪರಿಸರ ಚರಿತ್ರೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯, ಪು. ೩೩-೩೪.

೩೮. ಸಿದ್ದವನಹಳ್ಳಿ ಕೃಷ್ಣಶರ್ಮ (ಅನು) ; ಆತ್ಮಕಥೆ ಮತ್ತು ಹಿಂದ್ ಸ್ವರಾಜ್ಯ, ಗಾಂಧೀ ಸ್ಮಾರಕ ನಿಧಿ, ೧೯೫೮, ಪು. ೧೩

೩೯. - ಅದೇ -, ಪು. ೭೦

೪೦. ಕುವೆಂಪು ; ಹಾಳೂರು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೬೨, ಪು. ೧೨-೧೫.

೪೧. ರಾಮಚಂದ್ರ ಗುಹಾ ; ಮಾಧವ ಐತಾಳ (ಅನು) ; ಜಾಗತಿಕ ಪರಿಸರ ಚರಿತ್ರೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯, ಪು. ೩೬-೩೭.

೪೨. ಶಿವಾರೆಡ್ಡಿ ಕೆ.ಸಿ. (ಸಂ) : ಕುವೆಂಪು ಸಮಗ್ರ ಕಾವ್ಯ, ಸಂಪುಟ ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೦, ಪು. ೪೫೧

೪೩. - ಅದೇ -, ಪು. ೪೫೧-೪೫೨

೪೪. ಶಾರದಾ ಗೋಪಾಲ (ಅನು) ; ಪರಿಸರ ನ್ಯಾಯದ ತಕ್ಕಡಿಯಲ್ಲಿ, (ಲೇ) ಮಾಧವ ಗಾಡಗೀಳ, ರಾಮಚಂದ್ರ ಗುಹಾ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೩.

೪೫. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಪ್ರದೀಪ ಕೆಂಜಿಗೆ ; ವಿಸ್ಮಯ (೨), ಪುಸ್ತಕ ಪ್ರಕಾಶನ, ಸರಸ್ವತಿ ಪುರಂ, ಮೈಸೂರು, ೨೦೦೪, ಪು. ೨೮-೩೧.

ಅಧ್ಯಾಯ – ೫

ಮಹಾಕಾವ್ಯ ಶ್ರೀರಾಮಾಯಣ ದರ್ಶನಂ

೧. ಮಹಾಕವಿ - ಮಹಾಕಾವ್ಯ

೨. ಪೂರ್ಣದೃಷ್ಟಿ : ಪರಿಸರ ವಿಜ್ಞಾನೀಯ ದೃಷ್ಟಿ

೩. ಸ್ಥಳೀಯತೆ

೪. ವನ ಸಂಸ್ಕೃತಿ, ಅರಣ್ಯಯಾನ - ನಿಸರ್ಗಾನುಭವ

೫. ಜೀವ ವೈವಿಧ್ಯತೆ

೬. ನಗರ ಹಾಗೂ ಅರಣ್ಯ ಸಂಸ್ಕೃತಿಯ ಸಂಘರ್ಷ

ಮಲೆಯ ನಾಡೆನಗೆ ತಾಯಿಮನೆ.
ಕಾಡು ದೇವರ ಬೀಡು.
    ಗಿರಿಯ ಮುಡಿ ಶಿವನ ಗುಡಿ.
    ಬನವೆಣ್ಣೆ ಮೊದಲಿನಾ ಮನದನ್ನೆ.

– ಶ್ರೀರಾದ

ಮಹಾಕಾವ್ಯ ಶ್ರೀರಾಮಾಯಣ ದರ್ಶನಂ

೧. ಮಹಾಕವಿ - ಮಹಾಕಾವ್ಯ

ವಾಲ್ಮೀಕಿ ಮತ್ತು ಕುವೆಂಪು ಅವರ ನಡುವೆ ಅನೇಕ ಸಾಮ್ಯತೆಗಳನ್ನು ಕಾಣುತ್ತೇವೆ. ವ್ಯಾಧ ಕುಲದಲ್ಲಿ ಹುಟ್ಟಿದ ವಾಲ್ಮೀಕಿಯು ಹಾಗೂ ಮಲೆನಾಡಿನ ಶೂದ್ರನಾಗಿ ಹುಟ್ಟಿದ ಕುವೆಂಪು ಇಬ್ಬರೂ ಅರಣ್ಯ ಪ್ರಜ್ಞೆಯ ಕವಿಗಳು. ನಿಸರ್ಗ ಮತ್ತು ವಾಲ್ಮೀಕಿ ಕಾವ್ಯ ಹೇಗೆ ಅಪ್ರತ್ಯೇಕವೋ ಹಾಗೆಯೇ ನಿಸರ್ಗ ಮತ್ತು ಕುವೆಂಪು ಸಾಹಿತ್ಯವೂ ಅಪ್ರತ್ಯೇಕ. ಕುವೆಂಪು ಅವರೇ ಹೇಳುವಂತೆ ನಿಸರ್ಗದ ಜೊತೆಜೊತೆಗೆ ಅವರ ವ್ಯಕ್ತಿತ್ವ ಬೆಳೆದಿದೆ. ಹಾಗೆಯೇ ಶಿಕಾರಿ, ಬೇಟೆ ಮೊದಲಾದ ಅರಣ್ಯ ವಾಸಿಗಳ ಹವ್ಯಾಸಗಳು, ವಾಲ್ಮೀಕಿಯಂತೆಯೇ ಕುವೆಂಪು ಪೂರ್ವಜೀವನದ ಭಾಗವಾಗಿದ್ದದ್ದನ್ನು ಅವರ ಆತ್ಮಕಥನ ನೆನಪಿನ ದೋಣಿಯೇ ಸ್ಪಷ್ಟಪಡಿಸುತ್ತದೆ. ದರೋಡೆಯೊಂದು ಬಿಟ್ಟು ವಾಲ್ಮೀಕಿ ವ್ಯಾಧನಾಗಿದ್ದಾಗ ಏನೇನು ಮಾಡುತ್ತಿದ್ದನೊ ಅದನ್ನೆಲ್ಲ ಈ ಕವಿ ಯೌವನ ಪೂರ್ವದಲ್ಲಿ ಮಾಡಿದ್ದನ್ನು ನೆನಪಿಸಿಕೊಳ್ಳುತ್ತಾರೆ.

ಜನಪ್ರಿಯ ವಾಲ್ಮೀಕಿ ರಾಮಾಯಣದ ಮುನ್ನುಡಿಯಲ್ಲಿ ವಾಲ್ಮೀಕಿಯನ್ನು ಕುರಿತು ಬರೆಯುವ ಅನೇಕ ಮಾತುಗಳ ಹಿಂದೆ ಕುವೆಂಪು ಅವರ ಸಾಂಸ್ಕೃತಿಕ ರಾಜಕಾರಣದ ವಿಚಾರಗಳು ಕೆಲಸ ಮಾಡುತ್ತಿರುವುದನ್ನು ಗುರುತಿಸಬಹುದಾಗಿದೆ.

> ವ್ಯಾಧರ ಕುಲದಲ್ಲಿ ಹುಟ್ಟಿದ ವಾಲ್ಮೀಕಿ ವ್ಯಾಧವೃತ್ತಿಯಿಂದಲೆ ಬಾಳುತ್ತಿದ್ದನೆಂದರೆ ಅಧರ್ಮವೂ ಅಲ್ಲ, ಆಶ್ಚರ್ಯವೂ ಅಲ್ಲ. ಅರಣ್ಯಗಳಲ್ಲಿ ಬಿಲ್ಲುಬಾಣ ಕತ್ತಿ ಈಟಿಗಳನ್ನು ಹಿಡಿದು ತನ್ನವರ ಕೂಡೆ ನಡೆದು ಹುಲಿ ಸಿಂಹ ಆನೆ ಕಡವೆ ಮಿಗ ಮೊದಲಾದ ವನ್ಯಜಂತುಗಳನ್ನು ಬೇಟೆಯಾಡಿರಬೇಕು; ದಂತ ಚರ್ಮ ಉಗುರು ಮೊದಲಾದವುಗಳನ್ನು ಶೇಖರಿಸಿರಬೇಕು. ಹೊಳೆ ಕೆರೆಗಳಲ್ಲಿ ಬಲೆ ಬೀಸಿಯೋ ಗಾಳ ಹಾಕಿಯೋ ಸಿಡಿಯೊಡ್ಡಿಯೋ ಮೀನು ಹಿಡಿದಿರಬೇಕು; ಈಸಾಡಿರಬೇಕು. ತರತರದ ಮರಗಳಲ್ಲಿ ತರತರದ ರುಚಿಯ ಹಣ್ಣು ಹಂಪಲುಗಳನ್ನು ಕಿತ್ತಿರಬೇಕು; ವಿಧವಿಧವಾದ ಗಿಡಬಳ್ಳಿಗಳನ್ನು ಹುಡುಕಿ ಗೆಡ್ಡೆ ಗೆಣಸುಗಳನ್ನು ಅಗೆದು ತನಗೂ ತನ್ನವರಿಗೂ ಆಹಾರ ಒದಗಿಸಿರಬೇಕು. ಬದುಕಿನ ಈ ಎಲ್ಲ ಅನಿವಾರ್ಯವಾದ ಲೌಕಿಕ ನಿಮಿತ್ತಗಳಿಂದಾಗಿ ವಾಲ್ಮೀಕಿ ಪ್ರಕೃತಿದೇವಿಯ ಸೌಂದರ್ಯದ ಸಾಮ್ರಾಜ್ಯದ ವಿವಿಧ ಸಂಪತ್ತುಗಳನ್ನು ವಿವರವಾಗಿ ಹೃದಯಂಗಮವಾಗಿ ಅನುಭವಿಸಿರಬೇಕು.

ಮೊದಲ ಕವಿಯಾಗುವ ತನ್ನ ಮೆಚ್ಚಿನ ಕಂದನನ್ನು ವ್ಯಾದನನ್ನಾಗಿ ಹುಟ್ಟಿಸುವಂತೆ ವಾಗ್ದೇವಿ ತನ್ನ ಪತಿಯನ್ನು ಪ್ರೇರಿಸಿದಳು ಎಂದು ತೋರುತ್ತದೆ. ಇಲ್ಲದಿದ್ದರೆ ರಾಮಾಯಣ ಈಗಿರುವುದಕ್ಕಿಂತಲೂ ಸಂಪೂರ್ಣವಾಗಿ ಅನ್ಯ ಪ್ರಕಾರದಲ್ಲಿ ನಮಗೆ ದೊರೆಯುತ್ತಿತ್ತು ಎಂದು ಧೈರ್ಯವಾಗಿ ಊಹಿಸಬಹುದು. ವಾಲ್ಮೀಕಿಯ ಬಾಲ್ಯ ಮತ್ತು ತಾರುಣ್ಯ ಕಾಲಗಳ ಅರಣ್ಯ ಪರಿಚಯದ ಪೂರ್ಣಫಲ ಅವನ ದಿವ್ಯಕೃತಿಯಲ್ಲಿ ಪ್ರತಿಫಲಿತವಾಗಿರುವುದನ್ನು ನಾವು ಕಾಣುತ್ತೇವೆ.

ಆ ಕಾಡಿನ ಒಲವು, ಆ ಮರ ಮರದ ಗಿಡಗಿಡದ ಬಳ್ಳಿಬಳ್ಳಿಯ ಆತ್ಮೀಯವಾದ ಪರಿಚಯ, ಹೂವು ಹಕ್ಕಿ ಹಣ್ಣು ಮೊದಲಾದುವುಗಳ ಸೌಂದರ್ಯದಲ್ಲಿರುವ ಆ ಆವೇಶಪೂರ್ಣವಾದ ಆಸಕ್ತಿ, ಅವುಗಳ ಒಂದೊಂದು ವಿವರದಲ್ಲಿಯೂ ನಿಕಟವೂ ದೀರ್ಘವೂ ಆದ ಅನುಭವದಿಂದಲೆ ಒದಗುವ ಆ ರಸರುಚಿ, ಋತುಋತುಗಳಲ್ಲಿ ವ್ಯತ್ಯಸ್ತವಾಗುವ ಪ್ರಕೃತಿ ಸೌಂದರ್ಯದ ಆ ವಿವರಜ್ಞಾನ, - ಇವು ವ್ಯಾಧ ವೃತ್ತಿಗಳಲ್ಲದೆ ಅಷ್ಟು ಆತ್ಮೀಯವಾಗಿ ಲಭಿಸುವುದು ಸುಲಭವಲ್ಲ. ವಾಲ್ಮೀಕಿಯ ನಾಳನಾಳಗಳಲ್ಲಿ ಬಾನು ಮುಗಿಲು ಬೆಟ್ಟ ಕಾಡು ಮಿಗ ಹಕ್ಕಿ ಮಳೆ ಬಿಸಿಲು ಚಳಿ ಮಂಜು ಬೆಳಗು ಬೈಗು ನೇಸರು ತಿಂಗಳು ಇವೆಲ್ಲವೂ ನೆತ್ತರಾಗಿ ಹರಿಯುತ್ತಿರುವುದು ಅವನು ನಿಷಾದನಾಗಿ ಸಂಭವಿಸಿದ ಪುಣ್ಯದಿಂದಲ್ಲದೆ ಬೇರೆ ಅಲ್ಲ.[೧]

ಅರಣ್ಯ ವಾಸಿಗಳನ್ನು, ವ್ಯಾಧರುನ್ನು ಅಜ್ಞರೆಂದಾಗಲಿ, ಕ್ರೂರಿಗಳಾದ ಕಾಡುಜನರೆಂದಾಗಲಿ ಭಾವಿಸದೆ ಅವರಿಗೆ ನೆಲದ ಕುಲದ ವಿದ್ಯೆ ಸಂಸ್ಕೃತಿಗಳ ಪರಿಚಯವಿದ್ದುವೆಂದು ಒಪ್ಪಿಕೊಳ್ಳಬೇಕೆಂಬ ಮಾತುಗಳ ಹಿಂದೆ ಕೆಳಸಂಸ್ಕೃತಿಯ ಅನುಭವ ಮತ್ತು ಜ್ಞಾನದ ಪ್ರತಿಪಾದನೆಯನ್ನೇ ಕಾಣಿಸುತ್ತಿದ್ದಾರೆ. ಬೇಟೆ, ಕೃಷಿ ಮೊದಲಾದ ಲೌಕಿಕ ಬದುಕಿನ ಅನುಭವಗಳು ರಾಮಾಯಣದ ಸಮೃದ್ಧತೆಗೆ ಕಾರಣವಾಗಿವೆ ಎಂಬ ತತ್ವವು ಕುವೆಂಪು ಸಾಂಸ್ಕೃತಿಕ ರಾಜಕಾರಣವೇ ಆಗಿದೆ.

ವಾಲ್ಮೀಕಿಯ ಬಾಲ್ಯ ಮತ್ತು ತಾರುಣ್ಯ ಕಾಲಗಳ ಅರಣ್ಯ ಪರಿಚಯದ ಪೂರ್ಣ ಫಲ ಅವನ ದಿವ್ಯ ಕೃತಿಯಲ್ಲಿ ಪ್ರತಿಫಲಿತವಾಗಿರುವುದು ಕಾಡಿನ ಒಲವಿನಿಂದಲೇ. ಮರ, ಗಿಡ, ಬಳ್ಳಿಗಳು, ಹೂವು, ಹಕ್ಕಿ, ಹಣ್ಣು ಮೊದಲಾದುವುಗಳ ಸೌಂದರ್ಯಾಸಕ್ತಿಗಳು ವಾಲ್ಮೀಕಿಯ ನಾಳನಾಳಗಳಲ್ಲಿ ಹರಿಯುತ್ತಿರುವುದು ಅವನು 'ನಿಷಾದನಾಗಿ ಸಂಭವಿಸಿದ ಪುಣ್ಯದಿಂದಲ್ಲದೇ ಬೇರೆ ಅಲ್ಲ'ವೆಂಬ ವಿಚಾರದ ಹಿಂದೆ ತನ್ನ ಯೌವನಪೂರ್ವ ಬದುಕಿನ ಹಿಂದಿನ ಅನುಭವಗಳು ರಾಮಾಯಣದರ್ಶನದಂಥ ಅಭಿಜಾತ ಕೃತಿಯ ರಚನೆಗೆ ಅಗತ್ಯವಾದ ಅನುಭವ ಸಂಪತ್ತನ್ನು, ಸಮೃದ್ಧತೆಯನ್ನು ಪಡೆದುಕೊಂಡದ್ದನ್ನೇ ನೆನಪಿಸುತ್ತವೆ. ಈ ಕೆಳಗಿನ ಉದ್ಧರಣೆ ಈ ಸಂಗತಿಯನ್ನು ಮತ್ತಷ್ಟು ಸಮರ್ಥಿಸುತ್ತದೆ.

ಸೃಷ್ಟಿಕರ್ತನ ಕಾವ್ಯ ನಿಸರ್ಗ ; ನಿಸರ್ಗ ಮತ್ತು ಕುವೆಂಪು ಸಾಹಿತ್ಯ ಅಪ್ರತ್ಯೇಕ. ನಿಸರ್ಗದ ಜತೆಜತೆಗೆ ಕುವೆಂಪು ವ್ಯಕ್ತಿತ್ವ ಬೆಳೆದಿದೆ. ಶಿಕಾರಿ ಬೇಟೆ ಮೊದಲಾದ ಅರಣ್ಯವಾಸಿಗಳ ಹವ್ಯಾಸಗಳು ಕುವೆಂಪು ಪೂರ್ವ ಜೀವನದ ಒಂದು ಭಾಗವಾಗಿದ್ದುವು.

ದರೋಡೆಯೊಂದು ಬಿಟ್ಟು ವಾಲ್ಮೀಕಿ ವ್ಯಾದನಾಗಿದ್ದಾಗ ಏನೇನು ಮಾಡುತ್ತಿದ್ದನೋ ಅದನ್ನೆಲ್ಲ ಈ ಕವಿ ಯೌವನ ಪೂರ್ವದಲ್ಲಿ ಮಾಡಿದ್ದುಂಟು. ಈಗ ಮೈಸೂರಿನಲ್ಲಿ ನನ್ನ ದೇಹವಿದ್ದರೂ ನನ್ನ ಆತ್ಮ ಮಾತ್ರ ಸದಾ ಮಲೆನಾಡಿನಲ್ಲಿಯೇ ನಿವಾಸಿಯಾಗಿರುತ್ತದೆ. ಕವಿಶೈಲದಲ್ಲಿ ಕುಳಿತು ಧ್ಯಾನವೆಸಗುತ್ತೇನೆ; ಸೂರ್ಯಾಸ್ತವನ್ನು ದರ್ಶಿಸುತ್ತೇನೆ; ನವಿಲು ಕಲ್ಲಿನಲ್ಲಿ ಸೂರ್ಯೋದಯಕ್ಕಾಗಿ ಕಾದು ಕುಳಿತಿರುತ್ತೇನೆ. ತುಂಗೆಯಲ್ಲಿ ಮೀಯುತ್ತೇನೆ; ನಮ್ಮ ಮನೆಯ ಉಪ್ಪರಿಗೆಯಿಂದ ಮೋಡಗಳ ಡಿಬ್ಬಣವನ್ನು ನೋಡಿ ಪುಳಕಿತನಾಗುತ್ತೇನೆ; ಕಾಜಾಣ ಕಾಮಳ್ಳಿ ಮಡಿವಾಳಗಳ ಸಂಗದಲ್ಲಿ ಹಾರಾಡುತ್ತೇನೆ; ಸಿಬ್ಬಲು ಗುಡ್ಡೆಯಲ್ಲಿ ವಿಹರಿಸುತ್ತೇನೆ. ನನ್ನ ಶರೀರದ ಕಣಕಣವೂ ನಿಸರ್ಗ ಸೌಂದರ್ಯದಲ್ಲಿ ಮಿಂದು ಪವಿತ್ರಗೊಳ್ಳುತ್ತದೆ. ಸಹ್ಯಾದ್ರಿಯ ಶಿಶುವಾಗಿ ಚಾಮುಂಡಿಯ ಸ್ತನ್ಯಪಾನ ಮಾಡಿದ ಪುಣ್ಯ ನನ್ನದು. ಆದ್ದರಿಂದ ನನ್ನ ಸಾಹಿತ್ಯವನ್ನು ನಿಸರ್ಗದಿಂದ ಬೇರ್ಪಡಿಸಲಾಗದು.[೨]

ಇಂಥ ಸಮೃದ್ಧ ಅನುಭವವೇ ಆಧುನಿಕ ಯುಗ ಸತ್ಯದೊಂದಿಗೆ ಶ್ರೀ ರಾಮಾಯಣದರ್ಶನಂ ಕೃತಿಗೆ ಪೂರ್ಣ ದೃಷ್ಟಿಯನ್ನು ಅನುಗ್ರಹಿಸಿ ಪೂರ್ಣಸಿದ್ಧಿಯ ಕಡೆಗೆ ಕರೆದೊಯ್ಯುತ್ತದೆಂಬ ಆಶಯದ ಹಿಂದೆ ಮಹಾಕವಿಯ ಸಾಂಸ್ಕೃತಿಕ ವಿವೇಕ ಗುಪ್ತಗಾಮಿನಿಯಾಗಿದೆ.

ರಾಮನ ಹದಿನಾಲ್ಕು ವರ್ಷಗಳ ವನವಾಸದ ಪಯಣ ಭಾರತ ಭೂಖಂಡದ ಭೌಗೋಳಿಕ ಚಿತ್ರಣವನ್ನು, ಆ ಭೌಗೋಳಿಕ ಪ್ರದೇಶದಲ್ಲಿನ ಜನಜೀವನ, ಅರಣ್ಯ ಸಂಸ್ಕೃತಿ, ಸಸ್ಯ ವೈವಿಧ್ಯತೆ, ಜೀವ ವೈವಿಧ್ಯತೆಗಳ ಅಖಂಡ ದರ್ಶನವನ್ನೇ ರಾಮಾಯಣ ಕಾಣಿಸುತ್ತದೆ. ಹದಿನಾಲ್ಕು ವರ್ಷಗಳ ವನವಾಸದ ಈ ಮಹಾಯಾತ್ರೆಯಲ್ಲಿ ರಾಮ, ಲಕ್ಷ್ಮಣ ಸೀತೆಯರ ಅನ್ನಮಯ, ಪ್ರಾಣಮಯ, ವಿಜ್ಞಾನಮಯ, ಆನಂದಮಯ ಕೋಶಗಳ ವಿಕಾಸ ಪೂರ್ಣದೃಷ್ಟಿಯ ಕಡೆಗೆ ಚಲನಶೀಲಗೊಳ್ಳುತ್ತಿರುವ ಅಖಂಡ ಪ್ರಜ್ಞೆಯನ್ನು ಕಾಣುತ್ತೇವೆ. ಹಲವಾರು ಋಷ್ಯಾಶ್ರಮಗಳ ಸಂಪರ್ಕ, ತಪಸ್ವಿಗಳ ಒಡನಾಟ, ಮಹಾಪ್ರಯಾಣದ ದಾರಿಯುದ್ದಕ್ಕೂ ಸಂಪರ್ಕಿಸಿದ ವೈವಿಧ್ಯಮಯ ಜನಜೀವನ, ರಾಕ್ಷಸರೊಂದಿಗಿನ ಸಂಘರ್ಷಗಳು ಮತ್ತು ಕಾಡು ಇವೆಲ್ಲವು ಪೂರ್ಣದೃಷ್ಟಿಯ ಕಡೆಗೆ ದುಡಿಯುತ್ತವೆ. ಒಟ್ಟಾರೆ ಪರಿಸರವೆ ಉನ್ನತ ತತ್ವಗಳ ಬೆಳವಣಿಗೆಗಳಿಗೂ, ಮನಸ್ಸಿನ ವಿಕಸನಕ್ಕೂ, ಹೃದಯ ವೈಶಾಲ್ಯತೆಗೂ, ಆತ್ಮ ಪ್ರಸನ್ನತೆಗೂ ಕಾರಣವಾದದ್ದು ಈ ಮಹಾಕಥನದಲ್ಲಿ ಪ್ರಕಟಗೊಂಡಿದೆ.

೨. ಪೂರ್ಣದೃಷ್ಟಿ : ಪರಿಸರ ವಿಜ್ಞಾನೀಯ ದೃಷ್ಟಿ

ರಾಮನ ಕಥನದೊಂದಿಗೆ ಭಾರತದ ಅಖಂಡ ಪರಿಸರ ದರ್ಶನಗೊಳ್ಳುವುದು ಶ್ರೀರಾಮಾಯಣದರ್ಶನದ ಅನನ್ಯತೆಯಾಗಿದೆ. ಮನುಷ್ಯ ಪರಿಸರದಂತೆಯೇ ಅರಣ್ಯ ಮತ್ತು ಜೀವಪರಿಸರ ಕಾವ್ಯದುದ್ದಕ್ಕೂ ದಟ್ಟವಾಗಿ ಕಾಣುವುದರಿಂದಲೇ ಈ ಕೃತಿಗೆ ಮಹಾಕಾವ್ಯದ ಘನತೆ ಪ್ರಾಪ್ತವಾಗಿದೆ. ಅಂತೆಯೇ ಒಂದು ವಿಲಕ್ಷಣತೆಯೂ ಅಸಮಾನ್ಯತೆಯೂ ಪ್ರಾಪ್ತವಾಗಿದೆ. ವಾಲ್ಮೀಕಿ ರಾಮಾಯಣ ಕಥಾಪಂಜರವನ್ನು ತನ್ನ ಆಧುನಿಕ ದರ್ಶನದ ಅಭಿವ್ಯಕ್ತಿಗೆ ಆಯ್ದುಕೊಂಡಿದ್ದರೂ ಕವಿ ತನ್ನ ಸ್ಥಳೀಯ ಸಮಗ್ರ ಪರಿಸರವನ್ನು ಹಾಗೂ ಅನುಭವವನ್ನು ವ್ಯಕ್ತಪಡಿಸುವುದರ ಮೂಲಕ ಶಾಶ್ವತಗೊಳಿಸಿದ್ದಾರೆ. ಅಂದರೆ ಅಯೋಧ್ಯೆ ಮತ್ತು ರಾಮಕಥೆಯು ಘಟಿಸುವ ಭೌಗೋಳಿಕ ಪ್ರದೇಶ ನಿಮಿತ್ತ ಮಾತ್ರವಾಗಿ ತನ್ನ ಅನುಭವ ಪರಿಸರವನ್ನೇ ಕಾವ್ಯದುದ್ದಕ್ಕೂ ಕುವೆಂಪು

ದಾಖಲಿಸುತ್ತಾರೆ. ಅಂಥ ಅನುಭವ ಪರಿಸರದಲ್ಲಿ ಅಖಂಡ ಕರ್ನಾಟಕದ ಪರಿಚಯವು ಈ ಕೃತಿಯುದ್ಧಕ್ಕೂ ಮೇಳೈಸಿರುವುದನ್ನು ಗುರುತಿಸಬಹುದಾಗಿದೆ. ಈ ಮುಖೇನ ಮಾನವ ಪರಿಸರ ಮತ್ತು ಅರಣ್ಯ ಪರಿಸರಗಳ ಮುಖಾಮುಖಿ ಹಾಗೂ ಪರಸ್ಪರ ಸಂಬಂಧಗಳ ದರ್ಶನಗಳನ್ನು ಕಾವ್ಯದುದ್ದಕ್ಕೂ ಕಾಣುತ್ತೇವೆ. ಈ ಕೆಳಗಿನ ಉದ್ಧರಣೆಯಲ್ಲಿ ತನ್ನ ಸ್ಥಳೀಯ ಪರಿಸರದ ಬಗೆಗಿನ ಸ್ಪಷ್ಟ ಚಿತ್ರಣವನ್ನು ಕಾಣಬಹುದಾಗಿದೆ.

> ..... ಮಲೆನಾಡಮ್ಮನ ಹೊಟ್ಟೆಯಲ್ಲಿ ಹುಟ್ಟಿ, ಮಡಿಲಲ್ಲಿ ಬೆಳೆದು, ತೊಡೆಯ ಮೇಲೆ ನಲಿದು, ಆ ತಾಯಿಯ ಮೊಲೆ ಹಾಲು ಕುಡಿದು ಬೆಳೆದು ಬಂದವನು. ಮಲೆನಾಡೆಂದರೆ ನನಗೆ ಬಹಳ ಮಮತೆ. ಒಂದು ವಿಧವಾದ ಕುರುಡು ಮೋಹ ಎಂದರೂ ಎನ್ನಬಹುದು. ಮಲೆನಾಡು ಸೊಬಗಿನ ಬೀಡು ; ಸಿಡಿಲು ಮಿಂಚುಗಳ ನಾಡು ; ಸಾಲುಸಾಲಾಗಿ ಎದ್ದಿರುವ ಬೆಟ್ಟಗಳು ; ಮಾಲೆಮಾಲೆಯಾಗಿ ಬೆಳೆದಿರುವ ಕಾಡುಗಳು ; ಅಲ್ಲಲ್ಲಿ ಬನಬೆಟ್ಟಗಳ ನಡುವೆ ಹರಿಯುವ ಹೊಳೆ ತೊರೆಗಳು ; ಕಾಡಿನ ಮೇಲೆ ಮಲಗುವ ಬಿಸಿಲು ಬೆಳ್ದಿಂಗಳು ; ವಿಧವಿಧವಾಗಿ ಇಂಚರಗೈವ ಸಾವಿರಾರು ಬಣ್ಣಬಣ್ಣದ ಹಕ್ಕಿಗಳು ; ಅನವರತ ಶ್ಯಾಮಲ ವನಶ್ರೇಣಿಗಳಿಂದ ಆವೃತವಾದ ಧೀರ ಸಹ್ಯಾದ್ರಿ ಪರ್ವತಗಳ ಕಂದರ ಮಾರ್ಗಗಳಲ್ಲಿ ಮಂಜುಳ ನಾದದಿಂದ ಪ್ರವಹಿಸುವ ತುಂಗೆ, ಭದ್ರೆ, ಶರಾವತಿಯರು ; ಶೃಂಗೇರಿ ಮೊದಲಾದ ಪುರಾತನ ಪವಿತ್ರ ಕ್ಷೇತ್ರಗಳು ; ಗೇರುಸೊಪ್ಪೆ ಮೊದಲಾದ ದರ್ಶನೀಯ ಪ್ರಕೃತಿ ಸೌಂದರ್ಯ ಸ್ಥಾನಗಳು ; ಇವೆಲ್ಲವುಗಳಿಂದ ಮೋಹಿತನಾದ ನನಗೆ ಮಲೆನಾಡೆಂದರೆ ಬಹಳ ಮಮತೆ.[೩]

ಮಲೆನಾಡಿನಲ್ಲಿ ಹುಟ್ಟಿದ ಕವಿಗೆ ಆ ನಾಡಿನ ಬಗೆಗಿರುವ ಮಮತೆ, ಮೋಹಗಳು ರಾಮಾಯಣ ದರ್ಶನದಲ್ಲಿ ಸಂದರ್ಭಕ್ಕೆ ಅನುಗುಣವಾಗಿ ಅಭಿವ್ಯಕ್ತಗೊಂಡಿವೆ. ರಾಮಕಥನದ ಅಭಿವ್ಯಕ್ತಿಯೊಂದಿಗೆ ಹೊಸ ದರ್ಶನ, ಘಟನೆ, ಸನ್ನಿವೇಶಗಳಿಗೆ ಅನುಗುಣವಾಗಿ ತನ್ನ ಬಾಲ್ಯದಿಂದಲೂ ಕಂಡುಂಡ ಮಲೆನಾಡಿನ ಪರಿಸರದ ಸೌಂದರ್ಯ, ರೌದ್ರತೆ, ಬನ, ಬೆಟ್ಟ, ಹೊಳೆ, ತೊರೆ, ಬಿಸಿಲು, ಬೆಳದಿಂಗಳು, ಅಸಂಖ್ಯ ವಿಹಂಗಮಗಳ ವರ್ಣನೆಗಳು ಈ ಕಾವ್ಯದುದ್ದಕ್ಕೂ ಕಾಣಸಿಕೊಳ್ಳುತ್ತವೆ. ತನ್ನ ಮೋಹಿತ ಮಲೆನಾಡು ಮಹಾಕಾವ್ಯದ ಉದ್ದಕ್ಕೂ ಪ್ರವಹಿಸುವ ಶೋಧವು ಅಧ್ಯಯನಕ್ಕೆ ಗುರಿಪಡಿಸಬೇಕಾದ ಅಂಶವೂ ಆಗಿದೆ. ಇಂಥ ಅನುಭವದಿಂದ ವಿಕಸನಗೊಂಡ ಸಂವೇದನೆಗೆ ಮಾತ್ರ ಮಹಾಕಾವ್ಯ ರಚಿಸುವ ಹಾಗೂ ಆ ಕಾವ್ಯದಲ್ಲಿ ಪೂರ್ಣದೃಷ್ಟಿಯ ದರ್ಶನವನ್ನು ಏಕತ್ರಗೊಳಿಸುವ ಶಕ್ತಿ ಪ್ರಾಪ್ತವಾದದ್ದನ್ನು ಈ ಕೆಳಗಿನ ಉಲ್ಲೇಖವೇ ಸ್ಪಷ್ಟಪಡಿಸುತ್ತದೆ.

> ..... ನಾನು ಮಲೆನಾಡಿನಲ್ಲಿ, ಸಹ್ಯಾದ್ರಿಯ ತೋಳ್ತೊಟ್ಟಿಲಲ್ಲಿ ಹುಟ್ಟದೇ ಇದ್ದ ಪಕ್ಷದಲ್ಲಿ ನನ್ನ ಮೂಲಕ ಇಂಥ ಸಾಹಿತ್ಯ ಹುಟ್ಟುತ್ತಿರಲಿಲ್ಲ. ಅದರಲ್ಲಿ ಪೂರ್ಣದೃಷ್ಟಿ ಮೂಡಲು ಸಹ ಸಾಧ್ಯವಾಗುತ್ತಿರಲಿಲ್ಲ.[೪]
>
> ಪ್ರಪಂಚದ ಜೀವನ ಸುಖ-ದುಃಖ, ಸೌಂದರ್ಯ-ವಿಕಾರ, ಪ್ರೇಮ-ದ್ವೇಷ, ಜ್ಞಾನ - ಅಜ್ಞಾನ, ಔದಾರ್ಯ - ಕಾರ್ಪಣ್ಯ, ಸತ್ಯ - ಅಸತ್ಯ, ಸ್ವಾತಂತ್ರ್ಯ - ದಾಸ್ಯ ಇತ್ಯಾದಿ ದ್ವಂದ್ವಗಳಿಂದ ಕೂಡಿ ಒಂದು ಜಟಿಲ ಸಮಸ್ಯೆಯಾಗಿದೆ. ಕಾಲದೇಶಗಳಿಂದ

ವಿರಚಿತವಾಗಿರುವ ಈ ಮಹಾವಿಶ್ವವಂತೂ - ನಮ್ಮ ಭೂಮಿಯೂ, ಭೂಮಿಯಂತೆಯೇ ಪ್ರದಕ್ಷಿಣೆ ಮಾಡುತ್ತಿರುವ ಇತರ ಗ್ರಹಗಣದೊಡನೆ ಕೂಡಿ, ನಮ್ಮ ಭೂಮಿಗಿಂತಲೂ ಸಹಸ್ರಪಾಲು ಹಿರಿದಾಗಿ ಉರಿಯುತ್ತಿರುವ ಸೂರ್ಯನೂ, ಸೂರ್ಯನಿಗಿಂತ ಇಮ್ಮಡಿ ಮುಮ್ಮಡಿ ಸಾಸಿರ್ಮಡಿ ದೊಡ್ಡದಾಗಿ, ಕೋಟಿ ಕೋಟಿ ಮೈಲಿಗಳ ದೂರದೂರದಲ್ಲಿ, ಅನಂತಾಕಾಶದಲ್ಲಿ ಹೊಳೆಯುತ್ತಿರುವ ನಕ್ಷತ್ರ ನೀಹಾರಿಕೆಗಳೂ ಮನಸ್ಸು ಮೂರ್ಛೆ ಹೋಗುಮಂತೆ, ಚಿಂತೆ ಭ್ರಾಂತವಾಗುವಂತೆ, ಕಮನೀಯ ಭಯಂಕರವಾಗಿದೆ. ವೈಜ್ಞಾನಿಕರು ದಾನ ಮಾಡಿರುವ ನೂತನ ಸಂಶೋಧನೆಗಳ ಜ್ಞಾನಜ್ಯೋತಿ ಹರಿಯುವ ಹುಳುವಿನಿಂದ ಹಿಡಿದು ತತ್ತ್ವಜ್ಞಾನಿಯಾದ ಮಹರ್ಷಿಯವರೆಗಿರುವ ಅಸಂಖ್ಯಮುಖವಾದ ಜಗಜ್ಜೀವನವನ್ನು ಮತ್ತಷ್ಟು ಭವ್ಯತರವನ್ನಾಗಿ ಮಾಡಿದೆ. ಇಂತಹ ಸೃಷ್ಟಿಯ ಬಾಹ್ಯವಿರಚನೆಯ ಮತ್ತು ಅಂತಶ್ಚೇತನದ ರಹಸ್ಯವನ್ನರಿಯಲು ಬಹು ಪುರಾತನಕಾಲದಿಂದಲೂ ಮಾನವನು ನಿರಂತರ ಪ್ರಯತ್ನದಲ್ಲಿ ಇನ್ನೂ ತೊಡಗಿದ್ದಾನೆ. ಆ ರಹಸ್ಯ ಸಾಧನೆಯೇ ಸರ್ವವೇದ ಶಾಸ್ತ್ರಮತಗಳ ಹೆಗ್ಗುರಿ. ಇಷ್ಟಾದರೂ ಅಂದಿಗೂ ಇಂದಿಗೂ ಎಂದೆಂದಿಗೂ ಆ ರಹಸ್ಯ ಅನಿರ್ವಚನೀಯವಾಗಿ ಅಂಚಿತ್ಯವಾಗಿಯೇ ಬಿಟ್ಟಿದೆ.[೫]

ಅಂದರೆ ಜೀವನದ ಅಸಂಖ್ಯ ಪ್ರಶ್ನೆಗಳಿಗೆ, ದ್ವಂದ್ವಗಳಿಗೆ ಇಂಥ ಅನುಭವ ಮುಖಾಮುಖಿಯಾಗುವುದರಿಂದ ಸೃಷ್ಟಿ ರಹಸ್ಯಗಳ ಒಗಟುಗಳನ್ನು ಶೋಧಿಸಿಕೊಳ್ಳಲು ತೊಡಗಿದೆ. ಕುವೆಂಪು ಅವರು ಹೇಳುವಂತೆ ಅವರ ಸಾಹಿತ್ಯದಲ್ಲಿ ಆಧ್ಯಾತ್ಮ ದೃಷ್ಟಿಯೇ ಸರ್ವವ್ಯಾಪಿಯಾಗಿ ಅದು ಇಡೀ ಜೀವನವನ್ನೆಲ್ಲ ಆಕ್ರಮಿಸಿಕೊಂಡಿರುವ ನೆಲೆಗಳನ್ನು ಕಾಣುತ್ತೇವೆ. ಆಧ್ಯಾತ್ಮ ಸಾಧನೆಯೇ ಜೀವನೋದ್ದೇಶವನ್ನಾಗಿ ಮಾಡಿಕೊಂಡ ಅನುಭವವೇ ಇಂಥ ಕೃತಿಯಲ್ಲಿ ಸಾಹಿತ್ಯವಾಗಿ ಮೈಪಡೆದಿದೆ. ಕುವೆಂಪು ಅವರು ಪ್ರಕೃತಿ ವರ್ಣನೆಯನ್ನು ತಮ್ಮ ಕೃತಿ ಸಮೂಹದಲ್ಲಿ ಕೇವಲ ಬೌದ್ಧಿಕವಾಗಿ, ಭಾವನಾತ್ಮಕವಾಗಿ ಮಾತ್ರ ಗ್ರಹಿಸದೆ ಆಧ್ಯಾತ್ಮಿಕವಾಗಿ ಗ್ರಹಿಸಿದ್ದಾರೆಂಬ ಚಿಂತನೆಯು ಈ ಕಾವ್ಯದ ಅನೇಕ ಸಂದರ್ಭಗಳಲ್ಲಿ ಸ್ಪಷ್ಟವಾಗುತ್ತದೆ.

ತಪಸ್ವಿಯು, ತೇಜಸ್ವಿಯು ಆದ ತರುಣ ವಾಲ್ಮೀಕಿಯು ಸ್ನಾನ ಮಾಡಲು ನದಿಯ ತೀರಕ್ಕೆ ಅಡಿಯಿರಿಸಿದನು. ಪ್ರಣಯಾತುರ ಕ್ರೌಂಚ ಪಕ್ಷಿಯ ಕೂಗನ್ನು ಕೇಳಿ ಗಗನಾವೀಣಾ ಪಂಕ್ತಿಯನ್ನು ಮೀಟಿದಂತಾಗಿ ಹರ್ಷಗೊಂಡ ಆ ಮಹರ್ಷಿ ಕವಿ ಆಕಾಶವನ್ನು ನೋಡಿದನು. ಕ್ರೌಂಚ ದಂಪತಿಗಳ ಕ್ರೀಡೆಯನ್ನು ಕಂಡು ಸಂತೋಷಪಟ್ಟನು. ಆ ಸಂತೋಷದಲ್ಲಿಯೇ ನೋಡುತ್ತಿದ್ದಂತೆ ಆಕಾಶದಲ್ಲಿ ಹಾರಾಡುತ್ತಿದ್ದ ಪಕ್ಷಿಗಳಲ್ಲಿ ಗಂಡುಹಕ್ಕಿ ನೆಲಕ್ಕೆ ಉರುಳಿತು. ಬಾಣವು ಚುಚ್ಚಿದ್ದ ಎದೆಯಿಂದ ರಕ್ತವು ಚಿಮ್ಮಿತು. ಪೊದೆಯಲ್ಲಿ ಅವಿತಿದ್ದ ಕಪ್ಪು ದೇಹದ ಬೇಡನೊಬ್ಬನು ಮಾಂಸದ ಆಸೆಯಿಂದ ಆ ಹಕ್ಕಿಯನ್ನು ಹಿಡಿದುಕೊಂಡನು. ಬೇಡನ ಕೈಗೆ ಸಿಕ್ಕಿದ ತನ್ನ ಪ್ರಿಯಪಾತ್ರನಾದ ಗಂಡನನ್ನು ಕಂಡ ಹೆಣ್ಣು ಕ್ರೌಂಚ ಬೇಡನನ್ನು ಚಕ್ರಾಕಾರವಾಗಿ ಸುತ್ತಿ, ಹಾರಿ ಬೆಟ್ಟ ಕಾನನಗಳು ಚೀತ್ಕರಿಸುವಂತೆ ಚೀರಿತು. ಮಹರ್ಷಿ ವಾಲ್ಮೀಕಿಯ ಕರುಳು ಕರಗಿತು. ಆತನ ಹೃದಯದಲ್ಲಿ ದುಃಖದ ಕಾರ್ಮೋಡವೇ ಕವಿಯಿತೋ ಎನ್ನುವಂತೆ ಕಣ್ಣುಗಳಿಂದ ಕಂಬನಿಯುಕ್ಕಿತು. ಮನನೊಂದ ಋಷಿಗೆ ಬೇಡನ ಕ್ರೌಂಚದ ಬೇಟೆ ತನ್ನ ಪೂರ್ವ ಜೀವನದ ಕಥೆಯ ನೆನಪನ್ನು ಕರುಣೆ - ಅಹಿಂಸಾ ತತ್ವವನ್ನು ನೆನಪಿಸಿತು. ಆ ನೆನಪಿನ ಉದ್ಗಾರವೇ ಪರಿಸರ ತತ್ವವಾಗಿ ಜೀವಕೇಂದ್ರಿತ ನೆಲೆಯ ಬೀಜರೂಪದ ಮಂತ್ರವಾಗಿ ಛಂದಶ್ಶರೀರವನ್ನು

ಪಡೆದು ಮಹಾಕಾವ್ಯದ ಸೃಷ್ಟಿಗೆ ಮೂಲವಾಯಿತು. ಅಂಥ ಬೀಜರೂಪದ ಕಾವ್ಯದಲ್ಲಿ ಪರಿಸರ ಅಥವಾ ಪ್ರಕೃತಿ ತತ್ವವಾದ ಅಹಿಂಸಾ ತತ್ವದ ಸಾರ ಮಡುಗಟ್ಟಿ ಪ್ರವಹಿಸುವುದನ್ನು ರಾಮಕಥೆಯ ಉದ್ಧಕ್ಕೂ ಕಾಣುತ್ತೇವೆ.

ಮಾಣ್, ನಿಷಾದನೆ, ಮಾಣ್! ಕೊಲೆ ಸಾಲ್ಗುಮಯ್ಯೊ, ಮಾಣ್!
ನಲಿಯುತಿರೆ ಬಾನ್ ಬನದ ತೊರೆ ಮಲೆಯ ಭುವನಕವನಂ
ಸುಖದ ಸಂಗೀತಕೆ ವಿಷಾದಮಂ ಶ್ರುತಿಯೊಡ್ಡಿ
ಕೆಡಿಸುವಯ್? ನಾನುಮೊರ್ ಕಾಲದೊಳ್ ನಿನ್ನ ವೊಲೆ
ಕೊಲೆಯ ಕಲೆಯಲ್ಲಿ ಕೋವಿದನಾಗಿ ಮಲೆತಿರ್ದನಯ್
ನಾರದ ಮಹಾಋಷಿಯ ದಯೆ ಕಣಾ ಕರುಣೆಯಂ
ಕಲಿತೆನ್!" ಎಂದಾತ್ಮ ಕಥೆಯಾತ್ಮ ತತ್ತ್ವವನೊರೆದು,
ಕಬ್ಬಿಲಗೆ ಬಗೆ ಕರಗುವಂತೆ ಬೋಧಂಗೆಯ್ದು,
ಕೃಪೆದೋರುತಾತಂಗಹಿಂಸಾ ರುಚಿಯನಿತ್ತು,
ಕೊಂಚೆವಕ್ಕಿಯ ಮೆಯ್ಯಿನಾ ಬಾಣಮಂ ಬಿಡಿಸಿ,
ಪ್ರಾಣಮಂ ಬರಿಸಿ ಸಂಜೀವ ಜೀವನದಿಂದೆ,
ತವಿಸಿ ಪೆಣ್ವಕ್ಕಿಯೊಡಲುರಿಯನಾ ವಾಲ್ಮೀಕಿ
ತಮಸೆಯಿಂ ತನ್ನೆಲೆವನೆಗೆ ಮರಳ್ದು, ಧ್ಯಾನದೊಳ್
ಮುಳುಗಿರಲ್, ಮಿಂಚಿತಯ್ ಕಾವ್ಯದಿವ್ಯ ಪ್ರಜ್ಞೆ,
ನವನವೋನ್ಮೇಷ ಶಾಲಿನಿ, ನಿತ್ಯತಾ ಪ್ರತಿಭೆ
ಹೊಮ್ಮಿತಾ ದರ್ಶನಂ ಬಗೆಗಣ್ಗೆ ; ಚಿಮ್ಮಿದತ್ತೀ
ವರ್ಣನಂ ನಾಲಗೆಗೆ ; ಪಿಡಿವೊಲಲ್ತಾದುದಕೆ
ಕನ್ನಡಿಯನಪ್ಪುದಕೆ ಮುನ್ನುಡಿಯನುಲಿವಂತೆಯುಂ,
ಕಂಡ ರಾಮಾಯಣವನೆಲ್ಲಮಂ ಕಂಡಂತೆ
ಹಾಡಿದನೊ, ಕೇಳ್ದ ಲೋಕಂಗಳೆಲ್ಲ ತಣಿವವೋಲ್.[೬]

ಈ ಮೇಲಿನ ಉದ್ಧರಣೆಯಲ್ಲಿಯೇ ಪರಿಸರತತ್ವದ ಚಿಂತನೆ ಸಾಂದ್ರವಾಗಿದೆ. ಆಕಾಶ, ನದಿ, ಬೆಟ್ಟಗಳು, ಸುಖದ ಸಂಗೀತದಲ್ಲಿ ಮೈಮರೆತಿರುವಾಗ ಮನುಷ್ಯನು ಬೇಟೆ ಮೊದಲಾದ ಕ್ರಿಯೆಗಳಿಂದ ದುಃಖದ ಶ್ರುತಿ ಮಾಡಿ ಅನರ್ಥ ಪರಂಪರೆಗಳಿಗೆ ಕಾರಣವಾಗುವ ಪ್ರಕ್ರಿಯೆಯನ್ನೇ ಈ ಕಾವ್ಯ ಪ್ರಶ್ನಿಸುತ್ತದೆ. ಸಕಲ ಜೀವರಾಶಿಗಳಿಗೆ ತೋರಬೇಕಾದ ದಯೆಯನ್ನು ಪ್ರತಿಪಾದಿಸುತ್ತದೆ. ಮಾನವ ಸಮುದಾಯಕ್ಕೆ ರಾಮಕಥೆ ಆತ್ಮಕಥೆಯ ಆತ್ಮತತ್ವವಾಗುತ್ತಲೇ ಆಧುನಿಕ ಯುಗ ದರ್ಶನವಾದ ಅಹಿಂಸಾ ತತ್ವದ ಸಾರವಾಗಿಯೂ ಕಾಣಿಸುತ್ತದೆ. ಅಂಥ ತತ್ವದ ಅಗತ್ಯ ಮತ್ತು ಪ್ರತಿಪಾದನೆಗಾಗಿ ವಾಲ್ಮೀಕಿ ಈ ಕಥಾಪಂಜರದಲ್ಲಿ ಹೊಸದರ್ಶನದ ಪಕ್ಷಿಯನ್ನು ಪ್ರತಿಷ್ಠಾಪಿಸುತ್ತಾರೆ. ರಚನೆ ಮತ್ತು ಕಥೆ ವಾಲ್ಮೀಕಿಯದಾದರೂ ಕುವೆಂಪು ಹೊಸ ದರ್ಶನವನ್ನು, ಪೂರ್ಣತ್ವವನ್ನು, ಚೈತನ್ಯವನ್ನು ಆ ಕಾವ್ಯಕ್ಕೆ ಸ್ಪರ್ಶಿಸುತ್ತಾರೆ.

..... ರಾಮನ ಕಿರೀಟದಾ
ರನ್ನವಣಿಯೋಲೆ ರಮ್ಯಂ, ಪಂಚವಟಿಯೊಳ್
ದಿನೇಶೋದಯದ ಶಾದ್ವಲದ ಪಸುರ್‌ಗರುಕೆಯೊಳ್
ತೃಣಸುಂದರಿಯ ಮೂಗುತಿಯ ಮುತ್ತುಪನಿಯಂತೆ
ಮಿರುಮಿರುಗಿ ಮೆರೆವ ಹಿಮಬಿಂದುವುಂ.[2]

ಚಕ್ರವರ್ತಿಯ ಕಿರೀಟದ ರತ್ನಮಣಿಗೂ ಸೂರ್ಯೋದಯದ ಸಮಯದಲ್ಲಿ ಹಸಿರುಗರಿಕೆಯ ಮೇಲೆ ಸ್ತ್ರೀಯ ಮೂಗುತಿಯಲ್ಲಿನ ಮುತ್ತಿನ ಹನಿಯಂತೆ ಮಿನುಮಿನುಗಿ ಪ್ರಕಾಶಿಸುವ ಹಿಮಬಿಂದುಗಳ ನಡುವಿನ ಸಮಾನತೆಯ ಧೋರಣೆಯು ಈ ಕಾವ್ಯದ ಬಹುಮುಖ್ಯ ನೆಲೆಯಾಗಿದೆ. ಇಂಥ ಧೋರಣೆಯಿಂದಲೇ ಈ ಕೃತಿಯಲ್ಲಿ ಎಲ್ಲ ಘಟನೆ, ಸನ್ನಿವೇಶ, ವ್ಯಕ್ತಿ ಚಿತ್ರ, ಜೀವಸಮೂಹಗಳಲ್ಲಿ ಪರಿಸರ ಅಭಿವ್ಯಕ್ತಗೊಳ್ಳುತ್ತದೆ. ಅಂಥ ಪ್ರಜಾಸತ್ತಾತ್ಮಕ ಧೋರಣೆಯ ದಶರಥನು ಜನ್ಮ, ಕುಲ, ಧನ, ಜಾತಿ, ವರ್ಣಬೇಧಗಳನ್ನು, ನೀಚ, ಉಚ್ಚ, ಬೇಧ, ಸ್ಪರ್ಧೆ, ವೈರಗಳನ್ನು ತ್ಯಜಿಸಿ ಸಮಬುದ್ಧಿಯಿಂದಲೂ, ಸಮಸ್ತ ಜನರ ಅಭಿಮತಕ್ಕೆ ಪ್ರತಿನಿಧಿಯಾಗಿ ರಾಜ್ಯವನ್ನು ಪಾಲಿಸುವ ಕ್ರಮವು ಇಂಥ ಸಂಗತಿಗಳನ್ನೇ ಪ್ರತಿಪಾದಿಸುತ್ತದೆ.

ಶ್ರೀ ರಾಮಾಯಣ ದರ್ಶನದ ಪುತ್ರಕಾಮೇಷ್ಠಿಯಾಗದ ಪರಿಕಲ್ಪನೆಯನ್ನು ಆಧುನಿಕ ಯುಗದರ್ಶನಕೆ ಸಾಕ್ಷಿಯಾಗಿ ಕುವೆಂಪು ಸಂವೇದನೆ ಅಭಿವ್ಯಕ್ತಿಸಿದೆ. ಯಜ್ಞಶಾಲೆಯ ಎಲ್ಲ ಬಗೆಯ ಹಿಂಸೆ ಕ್ರೌರ್ಯಗಳನ್ನು ತೊರೆದು, ದಿಗ್ವಿಜಯ ಅಶ್ವಮೇಧಗಳನ್ನು ನಿರಾಕರಿಸಿ ದೇವತೆಗಳನ್ನು ಪ್ರೀತಿಯಿಂದ ಪೂಜಿಸುವುದರೊಂದಿಗೆ ದೈವಶಕ್ತಿಯನ್ನು ಮೆಚ್ಚಿಸುವ ಕ್ರಮವೇ ಮಾರ್ಮಿಕವಾದುದು.

..... ರಘುಕಾಲ ವಾರ್ದಿಚಂದ್ರಮನೆ,
ಕುಲ ಪುರೋಹಿತರೊರೆದ ಜನ್ನಮಂ ಕೈಕೊಂಡು
ಪಸುಳೆರನ್ನರ ಪಡೆವೆಯದು ದಿಟಂ. ಕೇಳಾದೊಡಂ
ನನ್ನೊಂದು ಕಾಣ್ಕೆಯಂ. ಪೂರ್ವ ಪದ್ಧತಿವಿಡಿದು
ಮಾಳ್ಪ ದಿಗ್ವಿಜಯ ಹಯಮೇಧ ಮೊದಲಾದುವಂ
ತೊರೆದು, ಹಿಂಸಾ ಕ್ರೌರ್ಯಮಿಲ್ಲದಿಹ ಪ್ರೇಮಕ್ಕೆ
ನೋಂತು, ದೇವರ್ಕಳಂ ಪೂಜಿಸಲ್ ಮೆಚ್ಚುವುದು
ಜಗವನಾಳುವ ಋತಂ. ನೆಲದಲ್ಲಿ, ಬಾನಲ್ಲಿ,
ಕಡಲು ಕಾಡುಗಳಲ್ಲಿ ಪಕ್ಕಿಮಿಗ ಪುಲ್ಗಳಲಿ
ಆರ್ಯರಲಿ ಮೇಣ್ ಅನಾರ್ಯರಲಿ, ಕೇಳ್ ವಿಶ್ವಮಂ
ಸರ್ವತ್ರ ತುಂಬಿದಂತರ್ಯಾಮಿ ಚೇತನಂ ತಾಂ
ಪ್ರೇಮಾತ್ಮವಾಗಿರ್ಪುದದರಿಂದೆ ಹಿಂಸೆಯಿಂ
ಪ್ರೇಮಮೂರ್ತಿಗಳಾದ ಸಂತಾನಮುದಿಸದಯ್
ರಾಜೇಂದ್ರ, ಕೇಳ್, ಪ್ರೇಮ ಸಾಕ್ಷಾತ್ಕಾರಮಾಗಿರ್ಪ

ಹಸಿವು ತೃಷಾದಿ ದುಃಖಗಳಿಲ್ಲಗಾಣ್ಮನ್ನಗೆದಿರ್
ಮುನಿವರೇಣ್ಯಂ ಬಳಿಕ, ರಾಮಭದ್ರಂಗೆಂದ.
ವಿಶ್ವಶಕ್ತಿ ಸ್ವರೂಪಿಣಿಯಗ್ನಿಯಂ ಭಜಿಸು ನೀಂ
ಸಾತ್ವಿಕ ವಿಧಾನದಿಂ, ಪ್ರಜೆಗಳ ಬದುಕಿಗೆ.
ಸತ್ಯನಿಷ್ಠರ್ಗೆ ಒಳಿತ ತಿಳಿಸುತ್ತಿರ್ಪ್, ಕೃಷಿಗಂ
'ದೇವರೆಗೆಲಕ್ಕಶಕ್ತಿ' ಎಂದು ಮುನಿ ಪಾಡೆ,
ಪಡೆದಿಹುದೆ ದೇವಾಯತನಾಧಿಕಾರವಾಗಿ
ಕೃಷಿಕ ವಿಧಿಯಂ ಬಿಂಬಿ ತಿಳಿಸುತ್ತಿಹ್ಮ ಬಿಸಿಗೆ
ನೆಲದಾತಿಕೆಯೆಲ್ಲ ಕೃಷಿಂ ಜನಮನದ ಶಕ್ತಿ
ದೊರೆಯುವುದಾಹುತಿಯ ಮಹಾತ್ಮ್ಯದಿಂ ನಮ್ಮೆಲ್ಲರಿ
ತಪ್ಪದೆಲೆಕಶ್ಯದು ಕಾಣಾ"

ಭೂಮಿಯು, ಆಕಾಶ, ಗಾಳಿ, ಬೆಳಕು, ಶಕ್ತಿ, ಪ್ರಾಣಿ, ಸಸ್ಯಗಳೆಲ್ಲವೂ, ಅಗ್ನಿ - ಅವನ್ನೆಲ್ಲವೂ ವಿಶ್ವದ ಏಳ್ಗೆಯೂ ತೋರುವುದು ಅಂತರ್ಗತವಾದ ಚೇತನವು ಶ್ರೇಯಸ್ಸಿನಿಂದ ಕೂಡಿರುವಾಗ ಏಳಿಗೆಯಲ್ಲಿ ತೊಡಗುತ್ತವೆ. ಶ್ರೇಯಸ್ಕರವಲ್ಲವೆಂಬ ದರ್ಶನವನ್ನು ಇಲ್ಲಿ ಕಾಣುತ್ತೇವೆ. ರಾಮಭದ್ರನಲ್ಲಿ ವಿಶ್ವಶಕ್ತಿ ಸ್ವರೂಪಿಣಿಯಾದ ಅಗ್ನಿಯನ್ನು ಸಾತ್ವಿಕ ವಿಧಾನದಲ್ಲಿ ಪೂಜಿಸುವುದು ಶ್ರೇಯಸ್ಕರವೆಂಬುದು ಇಲ್ಲಿಯ ಚಿಂತನೆ. ದೇಹ ಹಸಿವು ಒಡಲ ಒಳ್ಳಿದರೆಂದೆ ಸಕಲವನ್ನು ಸತ್ಕರಿಸುವುದು ಆಧುನಿಕ ದರ್ಶನಿಕರು ಯುಗ ಕಾಣ್ಕೆ ನಮ್ಮಲ್ಲಿ ಜನತೆಯು ಒಳಿತಾಗದೇ ಜನಮನದ ಶಕ್ತಿಯಾಗಿ, ಅವರ ಆಹುತಿಯೇ ಈ ಭೂಮಿಗೆ ಆಧಾರ ಮಹಾತ್ಮ್ಯವನ್ನು ತಪ್ಪದೇ ಕರೆತರುವುದು. ಹೊಸ ದರ್ಶನವನ್ನು ಕುವೆಂಪು ಹನ್ನೆರಡನೆ ದೃಷ್ಟಿಗೊಳಿಸುತ್ತದೆ. ಇಂಥ ದೃಷ್ಟಾಂತಗಳಲ್ಲಿ ಜೀವಕೇಂದ್ರಿತ ಚಿಂತನೆಯನ್ನೇ ಕಾಣುತ್ತೇವೆ.

೬. ಸ್ಥಳೀಯತೆ

ಶ್ರೀ ರಾಮಾಯಣ ದರ್ಶನದ ಅನೇಕ ಪ್ರಾಕೃತಿಕ ವರ್ಣನೆಗಳಲ್ಲಿ, ವರ್ಣನೆಗಳಲ್ಲಿ ಕುವೆಂಪು ತಮ್ಮ ಅನುಭವದ ಮಲೆನಾಡಿನ ನಿಸರ್ಗಚಿತ್ರಗಳನ್ನೇ ದರ್ಶಿಸುತ್ತಾರೆ. ನವಿಲುಕಲ್ಲಿನ ಸೂರ್ಯೋದಯ, ಕುಪ್ಪಳಿಯ ಸೂರ್ಯಾಸ್ತಮಾನಗಳು, ಮಲೆನಾಡಿನ ಸಹ್ಯಾದ್ರಿಯ ವರ್ಣನೆಗಳು, ಮುಂಗಾರು ಮಳೆಯ ರೌದ್ರತೆ, ಭೀಕರತೆಗಳು, ಕಾಡಿನ ಅಸಂಖ್ಯ ಸಸ್ಯ ಹಾಗೂ ಜೀವ ಜಾಲಗಳ ವರ್ಣನೆಗಳು, ಕೃಷಿ ಹಾಗೂ ಸಮಗ್ರ ಬದುಕಿನ ಚಿತ್ರಗಳು ಕಾವ್ಯದುದ್ದಕ್ಕೂ ಅತ್ಯಮೋಘವಾಗಿರುವುದಲ್ಲದೆ, ಸಂದರ್ಭೋಚಿತವಾಗಿ ಚಿತ್ರಣಗೊಳ್ಳುವ ಕ್ರಮವು ಈ ಕಾವ್ಯದ ಅನನ್ಯತೆಯಾಗಿದೆ. ಅಂಥ ಅನನ್ಯತೆಗೆ ಉದಾಹರಣೆಯೆಂಬಂತೆ ಮಹರ್ಷಿ ವಿಶ್ವಾಮಿತ್ರನ ಒಡಗೂಡಿ ಹೊರಟ ರಾಮಲಕ್ಷ್ಮಣರು ಸರಯೂ ನದಿಯ ತೀರದಲ್ಲಿ ಕಂಡ ದೃಶ್ಯವನ್ನು ಕುರಿತ ಈ ಮುಂದಿನ ಕಾವ್ಯದಶೆ ನವಿಲುಕಲ್ಲಿನ ಸೂರ್ಯೋದಯದ ಅಖಂಡ ಚಿತ್ರವನ್ನು ಮತ್ತೆ ನೆನಪಾಗಿಸುತ್ತದೆ.

ಪ್ರಾಚೀ ದಿಗಂಗನೆಯ ಕಣ್ದೆರೆಯಿತೆಳ್ದಗೆಯ,
ಕನಕ ಮೇಖಲೆಯೊಲು ಕಿರಣಮಾಲಿಕೆ

ತಪನ ಹಯ ಖುರಪುಟದಿನೆದ್ದ ಹೊಂದೂಳಿಯೋ,
ಕತ್ತಲೆಯನಟ್ಟಿ ಬರ್ಹಿನನ ನಾರಾಚದಿಂ
ಗಾಯಗೊಂಡಿರ್ಪಿರುಳ್ ಕಾರ್ದ ನೆತ್ತರ್ ಸೋರ್ವ
ಸೋನೆ ತುಂತುರ್ ಮಳೆಯೊ ಪೇಳೆನಲ್, ಮರುದಿನಂ
ಬೆಳಗಾದುದಿಂದ್ರ ದಿಕ್ತಟದಿ. ತುಂಬಿತ್ತೊಡನೆ
ವನದೇಶಮಂ ಲಕ್ಷಪಕ್ಷಿಯುಲಿ, ರಾಜಿಸಿತು
ಸರಯೂ ನದಿಯ ವಕ್ಷಮೋಕುಳಿಯ ಕಾಂತಿಯಿಂ
ತಳಿಸಿ. ಋಷಿಯೊಡನೆ ಮಿಂದರು ರಾಮಲಕ್ಷ್ಮಣರ್,
ಶೀತ ಸುಂದರ ಸುಖದ ಸಲಿಲದಲಿ! ಕುವರರಿಗೆ
ತಮ್ಮರಮನೆಯ ಸಿರಿಯೆ ಬಡತನಂ ತಾನಾಯ್ತಲಾ
ಕಾಡಿನ ಸೊಗದ ಸರಿಸದಲಿ! ಒಂಡೆಯಿಂ ದುಮುಕಿ
ನೀರ್ಗೆ, ಮೇಣೊಬ್ಬರೊಬ್ಬರ ಮೊಗಕೆ ನೀರೆರಚಿ,
ನಲಿದಾಡಿದರ್ ಸ್ಪರ್ಧೆಯಿಂದೀಸಿ. "ಗುರು ದೇವ,
ನಿಮ್ಮ ಕರುಣೆಯಿನೆಮಗೆ ಲಭಿಸಿತೀ ವನಸುಖಂ
ದಾರಿದ್ರ್ಯಮಲ್ತೆ ಆ ನಾಗರಿಕ ಜೀವನಂ
ಈ ವನ್ಯ ಸಂಸ್ಕೃತಿಯ ಮುಂದೆ?" ಎಂದ ರಾಮನಂ
ಕುರಿತಾ ಮಹರ್ಷಿ ಮಂತ್ರಿಸಿದನಿಂತು : -

ಕುವೆಂಪು ಅವರ ಪರಿಸರ ದರ್ಶನ ಏಕಮುಖಿಯಾದುದಲ್ಲ. ಬಹುಮುಖಿ ನಿಲುವುಗಳನ್ನು ಒಂದು ಕೇಂದ್ರಕ್ಕೆ ತರುವ ಪ್ರತಿಭಾ ಸೃಷ್ಟಿ. ರಾಮಕಥೆಯನ್ನು ನಿಮಿತ್ತವಾಗಿಸಿಕೊಂಡು ಗತ, ವರ್ತಮಾನ ಹಾಗೂ ಭವಿಷ್ಯತ್‌ಗಳನ್ನು ತಾತ್ವಿಕವಾಗಿ ವಿಮರ್ಶೆಗೆ ಒಡ್ಡಿ ಆ ಮೂಲಕ ಸಮಕಾಲೀನ ಎಚ್ಚರವನ್ನು ಜಾಗೃತಗೊಳಿಸುವಂತಹದು. ಹೀಗಾಗಿ ನಿಸರ್ಗದ ಚಿತ್ರಗಳು ವಿಭಿನ್ನ ಅವಸ್ಥಾಂತರಗಳನ್ನು ಪಡೆಯುತ್ತಾ ರೂಪುಗೊಳ್ಳುತ್ತವೆ. ನಾಡು, ಕಾಡು, ಬಡತನ, ಸಿರಿತನ ಈ ಎಲ್ಲ ನೆಲೆಗಳನ್ನು ಒಂದು ಕೇಂದ್ರಕ್ಕೆ ತರುವ ವಿಶ್ವಾತ್ಮಕ ದೃಷ್ಟಿ ಇಲ್ಲಿ ವ್ಯಕ್ತಗೊಳ್ಳುತ್ತದೆ. ವನ್ಯ ಸಂಸ್ಕೃತಿಯ ಎದುರಿಗೆ ನಾಗರೀಕ ಜೀವನ ದಾರಿದ್ರ್ಯ ಎಂಬ ಧೋರಣೆ ಒಂದು ಸಂಕೀರ್ಣ ನಿಲುವಾಗಿ ವ್ಯಕ್ತಗೊಳ್ಳುತ್ತದೆ. ನಾಗರೀಕ ಜೀವನ ಕಳೆದುಕೊಂಡ ಮೌಲ್ಯಗಳನ್ನು ಪ್ರಸ್ತಾಪಿಸುತ್ತಾ ಪರಿಸರ ಕೇಂದ್ರಿತ ಸೃಜನಶೀಲ ಸತ್ವವನ್ನು ಹೊರಹೊಮ್ಮಿಸುವ ಧೋರಣೆಯೊಂದು ಇಂಥ ಭಾಗಗಳಲ್ಲಿ ನೋಡಬಹುದು. ಈ ಹಿಂದೆ ಹೇಳಿದಂತೆ ಪ್ರಕೃತಿಯಲ್ಲಿಯೇ ಅಡಗಿರುವ ಸೃಜನಶೀಲತೆಯ ಧಾತುಗಳು ನಮ್ಮ ಸುತ್ತಾ ಹಬ್ಬುತ್ತಿರುವ ಎಲ್ಲ ಕೃತಕ ನಿರ್ಮಿತಿಗಳಿಗೆ ಹೇಗೆ ಎದುರಾಗಬಲ್ಲವೂ ಎಂಬ ನೈತಿಕ ಕಾಳಜಿಯೂ ಕೂಡ ಇಲ್ಲಿನ ದರ್ಶನಧ್ವನಿಯಾಗಿದೆ.

"ದಿಟವೊರೆದೆ,
ಹೇ ವತ್ಸ, ಗಿರಿವನ ಪ್ರೀತಿ ತಾಂ ದೈವಕೃಪೆ ದಲ್.
ಜಗದೀಶ್ವರನ ಮಹಿಮೆ ಸಂವೇದ್ಯವಹುದಿಲ್ಲಿ

ಭವ್ಯ ಸೌಂದರ್ಯ ಶೀಲದ ವನ್ಯ ಶಾಂತಿಯಲಿ
ಉಪನಿಷತ್ತಿನ ಮಹಾಮಂತ್ರಾನುಭವಗಳುಂ
ಹೃದ್ಗಮ್ಯವಿಲ್ಲಿ. ಚಿತ್ತಕೆ ಸಮಾಧಿಯನಿತ್ತು
ಹರಿದಂತ ವಿಶ್ರಾಂತ ಹರಿತ ಕಾನನಮಯಂ ತಾಂ
ಪರ್ವತಶ್ರೇಣಿ ಪರ್ವಿದೆ ನೋಡು ಶಿವನಂತೆವೋಲ್,
ಧ್ಯಾನ ಮಾಳ್ಪಗೆ ಹೃಷ್ಟರೋಮತೆಯನಿತ್ತು. ಅದೊ,
ಬಣ್ಣದ ಮುಗಿಲ್ ಗಗನ ಪಟದಲ್ಲಿ ತೇಲುತಿದೆ
ದೇವರೆ ಪೆಸರ್ ಬರೆದ ಮುದ್ರೆಯೋಲ್. ಕರೆಯುತಿದೆ ಕಾಣ್
ನಮ್ಮಾತ್ಮಮಂ ಕಲೋಪಾಸನೆಗೆ ರಾಮ, ಕೇಳ್,
ಸೃಷ್ಟಿ ಸೌಂದರ್ಯದೊಲ್ಮೆಯೆ ಸೃಷ್ಟಿಕರ್ತಂಗೆ
ಪೂಜೆಯಯ್. ರಸಜೀವನಕೆ ಮಿಗಿಲ್ ತಪಮಿಹುದೆ?
ರಸಸಿದ್ಧಿಗಿಂ ಮಿಗಿಲೆ ಸಿದ್ಧಿ? ಪೊಣ್ಮಿದೆ ಸೃಷ್ಟಿ
ರಸದಿಂದೆ ; ಬಾಳುತಿದೆ ರಸದಲ್ಲಿ ; ರಸದೆಡೆಗೆ ತಾಂ
ಪರಿಯುತಿದೆ ; ಪೊಂದುವುದು ರಸದೊಳೈಕ್ಯತೆವೆತ್ತು
ತುದಿಗೆ, ರಸಸಾಧನಂಗೈಯದಿರುವುದೆ ಮೃತ್ಯು,
ಆನಂದರೂಪಮಮೃತಂ ರಸಂ!"[೯]

ಈ ಮೇಲಿನ ಪದ್ಯ ಭಾಗದಲ್ಲಿ ಕಾಡು ಮತ್ತು ನಗರ ಪರಿಸರಗಳು ಮುಖಾಮುಖಿಯಾಗಿ ಪರಿಸರ ತತ್ವವೊಂದು ಶೋಧಿತಗೊಳ್ಳುತ್ತಿದೆ. ಅರಮನೆಯ ಸಂಪತ್ತು ಕಾಡಿನ ಸೌಂದರ್ಯದ ಮುಂದೆ ಬಡವಾಗಿಯೂ ನಾಗರೀಕ ಜೀವನವು ವನಸಂಸ್ಕೃತಿಯ ಮುಂದೆ ಕಾಂತಿಹೀನವಾಗಿಯೂ ಕಾಣಿಸುತ್ತದೆ. ಉಪನಿಷತ್ತಿನ ಮಹಾಮಂತ್ರಗಳ ಅಖಂಡ ಅನುಭವವನ್ನು ರಾಮಲಕ್ಷ್ಮಣರು ಕಂಡ ಈ ಸೂರ್ಯೋದಯ ಒಮ್ಮೆಗೆ ಸಾಕ್ಷಾತ್ಕರಿಸುತ್ತದೆ. ಮನಸ್ಸಿಗೆ ಧ್ಯಾನವನ್ನು ಗಂಭೀರತೆಯನ್ನು ಕಾಣಿಸುವುದರೊಂದಿಗೆ ಹಸಿರುಮಯವಾದ ಕಾಡಿನ ಪರ್ವತಶ್ರೇಣಿಗಳು ಆನಂದಮಯದ ಕಡೆಗೆ ಮುಖಮಾಡಿಸುತ್ತವೆ. 'ಸೃಷ್ಟಿ ಸೌಂದರ್ಯೋಪಾಸನೆಯೇ ಸೃಷ್ಟಿಕರ್ತಂಗೆ ಪೂಜೆ'ಯೆಂಬ ಯುಗದರ್ಶನವನ್ನು ಶಾಶ್ವತಗೊಳಿಸುತ್ತದೆ. ಪ್ರಕೃತಿಯ ಇಂಥ ಆಸ್ವಾದನೆಯಿಂದ ದೊರೆಯುವ ಪ್ರೇಮದ ಸಾಧನೆಯೇ ಆನಂದ ಸ್ವರೂಪಿಯಾಗಿ ಮೈಪಡೆಯುವ ಕ್ರಮವು ಕುವೆಂಪು ಶೋಧಿತ ಪರಿಸರ ಚಿಂತನೆಯ ಮುಖ್ಯ ನೆಲೆಯಾಗಿದೆ.

೪. ವನ ಸಂಸ್ಕೃತಿ, ಅರಣ್ಯಯಾನ - ನಿಸರ್ಗಾನುಭವ

ವನವಾಸ ನಿಮಿತ್ತವಾಗಿ ಅರಣ್ಯವನ್ನು ಹೊಕ್ಕ ರಾಮಲಕ್ಷ್ಮಣರಿಗೆ ನಗರವಾಸಕ್ಕಿಂತಲೂ ಅರಣ್ಯವಾಸವೇ ಆಹ್ಲಾದಕರವಾಗಿ ಕಾಣಿಸುತ್ತದೆ. ಧರ್ಮವನ್ನೇ ಸಂಪತ್ತೆಂದು ತಿಳಿದ ರಾಮನಿಗೆ ಧರ್ಮವಿಲ್ಲದ ರತ್ನಮಯ ಅರಣ್ಯವು ಶ್ಮಶಾನಕ್ಕಿಂತಲೂ ಭಯಂಕರವಾಗಿ ಕಾಣಿಸುತ್ತದೆ. ಧರ್ಮದಿಂದ ಕೂಡಿದ ಕಾಡು ಅರಮನೆಯಂತೆ

ಭಾಸವಾಗುತ್ತದೆ. ನಾಗರೀಕ ಕೃತ್ರಿಮತೆಗಳಿಂದ ಪಟ್ಟಾಭಿಷೇಕ ವಂಚಿತನಾದ ರಾಮನಿಗೆ ಅರಣ್ಯವಾಸವೇ ಆಹ್ಲಾದವಾಗಿಯೂ, ಆನಂದದಾಯಕವಾಗಿಯೂ ಕಾಣಿಸುತ್ತದೆ. ಅಯೋಧ್ಯೆಗಿಂತ ನೂರುಪಾಲು ಅಧಿಕವಾದ ಶಾಶ್ವತ ಸಿರಿಯ ಸಾಮ್ರಾಜ್ಯವು ಅರಣ್ಯದಲ್ಲಿ ತನಗೆ ದೊರೆತಿದೆ ಎಂಬ ಧೋರಣೆಯಲ್ಲಿ ನಿಸರ್ಗ ಸಾಮೀಪ್ಯದ ಶಕ್ತಿ ಕಾಣಿಸುತ್ತದೆ. ಸಮುದ್ರ, ಕಾಡು, ನಾನಾ ಪ್ರಾಣಿಗಳು, ಪರ್ವತ ಶ್ರೇಣಿಗಳು ತಾನು ಬಿಟ್ಟು ಬಂದ ರಾಜ್ಯಕ್ಕಿಂತಲೂ ಅಧಿಕ ಸಂಪದ್ಭರಿತವಾಗಿ ಕಾಣುತ್ತವೆ. ರಾಮನ ಈ ಧೋರಣೆಯನ್ನು ಈ ಕೆಳಗಿನ ಮಾತುಗಳೇ ಸ್ಪಷ್ಟಪಡಿಸುತ್ತವೆ.

...............ನಾನೀ ಪೊಳ್ತು
ತೊರೆವ ರಾಜ್ಯಕೆ ನೂರುಮಡಿ ಶಾಶ್ವತದ ಸಿರಿಯ
ಸಾಮ್ರಾಜ್ಯಮಹುದೆನಗೆ.[೧೦]

ಕಾಡಿನ ಮತ್ತೊಂದು ಮುಖವಾದ ರೌದ್ರತೆಯ ಚಿತ್ರಗಳು ಈ ಕೃತಿಯ ಉದ್ದಕ್ಕೂ ಕಾಣುತ್ತವೆ. ಹುಲಿ, ಕಾಡುಕೋಣ, ವಿಷಸರ್ಪಗಳಿಂದ ಕೂಡಿದ ಅರಣ್ಯವು ಭಯಂಕರವಾದುದು. ಮೇಘಚುಂಬಿತ ಗಿರಿಶಿಖರಗಳಿಂದ ಆರ್ಭಟಿಸಿ ಧುಮುಕುವ ತೊರೆಗಳು, ಭಯಾನಕವಾದ ಜಲಪಾತಗಳಿಂದ ಕೂಡಿದ ಕಾಡು ಭೀಕರವಾದುದು. ಅನೇಕ ಜೀವಜಂತುಗಳ ಕರ್ಕಶ ಶಬ್ದಗಳು, ಭೀಕರವಾದ ಕತ್ತಲೆಯ ರಾತ್ರಿಗಳು ಭಯಾನಕವೂ ಮಹಾಕ್ರೂರವೂ ಆಗಿರುತ್ತವೆ. ಬೇಸಿಗೆಯಲ್ಲಿ ಕಾಳ್ಗಿಚಿನ ಭಯವಾದರೆ ಮಳೆಗಾಲದಲ್ಲಿ ನಿರಂತರ ಸುರಿಯುವ ರಭಸವಾದ ಮಳೆಯ ಆರ್ಭಟ. ನಿಸರ್ಗದ ಸೌಂದರ್ಯ ಮತ್ತು ರೌದ್ರತೆಗಳ ಈ ಅನುಭವಗಳು ಶ್ರೀ ರಾಮಾಯಣ ದರ್ಶನದಲ್ಲಿ ಮತ್ತೆ ಮತ್ತೆ ಎದುರಾಗುತ್ತವೆ. ಇಂಥ ಅನೇಕ ನಿಸರ್ಗಾನುಭವಗಳನ್ನು ಕುವೆಂಪು ಕಾವ್ಯದ ಉದ್ದಕ್ಕೂ ಮುನ್ನಡಿಸಿರುವ ಸಂಭ್ರಮ, ಉತ್ಸಾಹಗಳಲ್ಲಿ ನಿಸರ್ಗದ ಬಗೆಗಿನ ಪ್ರೀತಿ, ಕುತೂಹಲ, ವಿಸ್ಮಯಗಳನ್ನು ಕಾಣಬಹುದು. ಚಿತ್ರಕೂಟಕೆ, ಪಂಚವಟಿಯ ಪರ್ಣಕುಟಿ ಮೊದಲಾದ ಸಂಚಿಕೆಗಳಲ್ಲಿ ಅಭಿವ್ಯಕ್ತಗೊಂಡಿರುವ ಪರಿಸರ ಚಿತ್ರಗಳು ಕುವೆಂಪು ಅವರ ನಿಸರ್ಗಾಸಕ್ತಿಗೆ ಸಾಕ್ಷಿಯಂತೆ ಎದುರಾಗುತ್ತವೆ.

ವನವಾಸ ನಿಮಿತ್ತವಾಗಿ ಕಾಡಿಗೆ ಹೊರಟ ರಾಮನನ್ನು ಅಯೋಧ್ಯೆಗೆ ಕರೆತರಲು ಹೊರಟ ಕೈಕೆ ಭರತರಿಗಿಂತ ಕವಿಯೇ ಇಮ್ಮಡಿ ಕಾತರತೆಯಿಂದ ಗಿರಿವನ ಪ್ರಿಯ ರಾಮನನ್ನು ಸಂದರ್ಶಿಸಲು ಪಾತ್ರವಾಗುವ ಕ್ರಿಯೆಯು ಮಾರ್ಮಿಕವಾದುದು.

ಕೈಕೆ ಭರತರಿಗಿರ್ಮ್ಮಡಿಯ ಕಾತರತೆ, ಕೇಳ್, ಕವಿಗೆ
ಗಿರಿವನಪ್ರಿಯರಾಮ ಸಂದರ್ಶನಂ ಗೈಯೆ
ಕಾನನಾಂತರದಿ ; ಕರೆ ತರಲಲ್ತು ಸಾಕೇತ
ಪುರಿಗೆ. ಮರಳಿಸಲಲ್ತು ಮಣಿಮಕುಟ ಧಾರಣೆಗೆ.
ಸೌಮಿತ್ರಿಯೋಲಂತೆ ರಾಮಸೀತಾ ಪುಣ್ಯ
ಸಂಗ ಮಂಗಲ ತುಂಗ ಶೃಂಗ ವನರಂಗಮಂ
ಚರಿಸಲಾನುತ್ಕಂಠಿತಂ! ಮಲೆಯ ನಾಡೆನಗೆ
ತಾಯಿಮನೆ. ಕಾಡು ದೇವರ ಬೀಡು. ಗಿರಿಯ ಮುಡಿ
ಶಿವನ ಗುಡಿ. ಬನವೆಣ್ಣೆ ಮೊದಲಿನಾ ಮನದನ್ನೆ.

ವಾಲ್ಮೀಕಿಯ ದೃಷ್ಟಿಯಲ್ಲಿ ರಾಮ ವನವಾಸವನ್ನು ಒಪ್ಪಿದ್ದು ಪಿತೃವಾಕ್ಯ ಪರಿಪಾಲನೆಯ ಕಾರಣದಿಂದ ಆದರೆ ರಾಮಾಯಣದರ್ಶನಂ ಮಹಾಕಾವ್ಯದಲ್ಲಿ ಆ ಎಲ್ಲ ಕಾರಣಗಳ ಜೊತೆಗೆ ಭಿನ್ನವಾದ ಅನುಭೂತಿಗಳನ್ನು ಪಡೆದು, ನಗರಜೀವನಕ್ಕಿಂತ ಭಿನ್ನವಾದ ವನ್ಯ ಜೀವನದ ಸೊಬಗು ವಿಸ್ತಾರಗಳನ್ನು ಹಾಗೂ ಅದರ ಸಂಕೀರ್ಣತೆಯನ್ನು ಅನುಭವಿಸುವ ಉದ್ದೇಶವನ್ನು ಹೊಂದಿದೆ. ಹೀಗಾಗಿ ನಿಸರ್ಗ ನಗರ ಸಂಸ್ಕೃತಿ ಹಾಗೂ ವನ್ಯ ಸಂಸ್ಕೃತಿ ಇವೆರಡರ ಘರ್ಷಣಾ ಬಿಂದುವಾಗಿರುವುದನ್ನು ಇಲ್ಲಿ ರೂಪಕವನ್ನಾಗಿಸಲಾಗಿದೆ. ಈ ಚರ್ಚೆಯನ್ನು ಇನ್ನೂ ವಿಸ್ತಾರವಾಗಿ ಮುಂದೆ ಮಾಡಲಾಗುವುದು.

ಕವಿರಾಮಚಂದ್ರನೀ ಸೀತಾಕಲಾಕಾಂತೆ
ನಿತ್ಯವನವಾಸಿಯದರಿಂದಮೀ ಕಬ್ಬಿಗಂ
ಗಿರಿವನ ಪ್ರೇಮ ಸಾದೃಶ್ಯದಿಂ ಸಮರಸಂ
ಸಮಹೃದಯಿ ರಾಮರಸಋುಷಿಗೆ. ವನದೇಶಮಂ
ಸವಿದಪೆನ್ ಸೀತಾರಮಣನೊಡನೆ. ತೊಳತೊಳಲಿ
ಮೆಯ್ಯ ಮರೆದಪೆನೀಂಟಿ ಕಾನನಾವೇಶಮಂ.
ದೊರೆವಂತೆವೋಲ್ ಹೃದಯಜಿಹ್ವೆಗೆ ರಸದ ಮಧುತೃಪ್ತಿ
ಕೈಕೊಂಡಪೆನ್ ಪ್ರಕೃತಿಯಾತ್ರೆಯಂ. ರಮಣನಿರೆ
ಕಲೆಯ ವಧುತಾನಯ್ದೆ. ಪುಣ್ಯಾತ್ಮ ರಾಮನಿರೆ
ಸೀತೆಯೊಲ್ ಪೂಜ್ಯೆ ಮಂಗಳೆಯೆನ್ನ ಕೃತಿಕನ್ಯೆ ![೧೧]

ಈ ಮೇಲಿನ ಕಾವ್ಯಭಾಗದಲ್ಲಿ ರಾಮಾಯಣ ದರ್ಶನದ ಸಮಗ್ರ ಕಾವ್ಯ ಧೋರಣೆಯೇ ಅಭಿವ್ಯಕ್ತಗೊಳ್ಳುತ್ತಿದೆ. ವನವಾಸಿಯಾದ ರಾಮನ ಜೊತೆಜೊತೆಯಲ್ಲಿಯೇ ಪ್ರಕೃತಿ ಯಾತ್ರೆಯನ್ನು ಕೈಗೊಂಡು, ರಾಮನ ಸಮಹೃದಯಿಯಾಗಿ ಗಿರಿವನಗಳನ್ನು ಸಂದರ್ಶಿಸುವ ಲಕ್ಷ್ಮಣ ಸೀತೆಯರ ಸಹಪ್ರಯಾಣಿಕನಾಗಿ ಹೊರಡುವ ಕವಿಯ ಸಂಭ್ರಮ, ಸಂವೇದನೆ ಪರಿಸರ ಪ್ರೀತಿಯ ನೆಲೆಗಳನ್ನು ಸ್ಪಷ್ಟಪಡಿಸುತ್ತದೆ. ರಮಣೀಯವಾದ ವೃಕ್ಷ ಸಮುದಾಯ, ಹೂ ಚಿಗುರುಗಳಿಂದ ಶೋಭಿಸುವ ಅರಣ್ಯ, ಕೋಟಿ ಪಕ್ಷಿಗಳ ದಿವ್ಯ ಕಲರವ ಹಾಗೂ ಮಧುರ ಧ್ವನಿಗಳ ಆಸ್ವಾದನೆಗೆ ಕವಿ ಸಂವೇದನೆ ನಿರಂತರವಾಗಿ ಸ್ಪಂದಿಸಿದೆ.

ರಾಮ ದಾರಿಯುದ್ದಕ್ಕೂ ಕಂಡ ನಾನಾ ವೈಚಿತ್ರ್ಯಗಳನ್ನು, ಮರ, ಗಿಡ, ಪ್ರಾಣಿ, ಪಕ್ಷಿಗಳನ್ನು ಸೀತೆಗೆ ತೋರಿಸುತ್ತಾ ದಾರಿಯ ಶ್ರಮವನ್ನು ಮರೆಸುತ್ತಾನೆ. ಅಂತೆಯೇ ಕವಿ ಪ್ರತಿಭೆ ಕಾವ್ಯದುದ್ದಕ್ಕೂ ಪರಿಸರದ ನಾನಾ ವೈವಿಧ್ಯತೆಗಳನ್ನು ಸೌಂದರ್ಯ ಹಾಗೂ ರೌದ್ರತೆಗಳ - ಆಂತರಿಕ ನೆಲೆಗಳು ವಿಶ್ಲೇಷಣೆಗೊಂಡಿವೆ. ಈ ಮೇಲಿನ ಮಾತಿಗೆ ಮುಂದಿನ ಕಾವ್ಯ ಭಾಗ ಸಾಕ್ಷಿಯಂತಿದೆ.

...... ಓ ತಾಯೆ
ನಿನ್ನ ಸೌಂದರ್ಯ ಸಾನ್ನಿಧ್ಯಮಿರೆ, ಓ ಪ್ರಕೃತಿ,
ಮಿಂಚಿದಪುದಿಂದ್ರಿಯಮತೀಂದ್ರಿಯಕೆ. ಜಡಜಗಂ
ತೋರಿದಪುದಂತರಾತ್ಮದ ಸಿರಿಗೆ ಹೊರಮೊಗಂ

ತಾನಾಗಿ. ಲಯವಹುದು ಚಿತ್ತಚಂಚಲ ವಿಕೃತಿ
ರಸದ ಮಿಂಚಿನ ಮೀಹದಿಂಪಿನಲಿ. ದೊರೆಕೊಳ್ವ
ತನ್ಮಯತೆಯಿಂ ಹೃದಯದಿಂಗಡಲ್ಗಲೆ ನಲಿಸಿ
ಮೈದೋರ್ಪುದಾ ಸಚ್ಚಿದಾನಂದ ಶಾಂತಿ ಶಶಿ
ಮೃಣ್ಮಯಂ ಮಾಸಿ, ನನೆಕೊನೆಯೇರಿ ಚಿನ್ಮಯಂ,
ಧ್ಯಾನಿಸುವ ಕವಿಮನಂ ಗಾಯತ್ರಿಯನ್ನೇರ್ದು
ಭೂರ್ಭುವಸ್ಸುವಗಳಂ ತುಂಬಿ ತುಳುಕುತೆ ಮೀರ್ದು
ಭೋಗಿಸುವುದಾ ಬ್ರಹ್ಮ ಹೃದಯ ಮಧುವಂ ಪೀರ್ದು
ಯೋಗಲಯ ನಿದ್ರಾ ಸಮಾಧಿಯೊಳ್ ತಾನಾರ್ದು !
ಹೇ ಪ್ರಕೃತಿ, ಎಲ್ಲಮಿರ್ದೇನಿಲ್ಲದಾ ಅಲ್ಲಿ, ಮೇಣ್
ಸರ್ವಮಿರ್ಪಾ ಸರ್ವಶೂನ್ಯತಾ ಸಂಪೂರ್ಣದಲಿ
ನಿನ್ನ ಕೃಪೆಯಿಲ್ಲದಿರೆ ಪೇಳ್ ಪುರುಷದರ್ಶನವೆಲ್ಲಿ?[೧೨]

ಕುವೆಂಪು ಅವರ ಪರಿಸರ ತತ್ವ ಇಂಥ ಭಾಗಗಳಲ್ಲಿ ಮಡುಗಟ್ಟಿದೆ. ಮನುಷ್ಯ ಪರಿಪೂರ್ಣತೆಗೆ ನಿಸರ್ಗದ ಕೃಪೆ ಅತ್ಯಗತ್ಯವೆಂಬ ಧೋರಣೆ ಇಂಥ ಕಡೆಗಳಲ್ಲಿ ಸ್ಪಷ್ಟವಾಗುತ್ತದೆ. ಪ್ರಕೃತಿ ಸಾನ್ನಿಧ್ಯದಿಂದ ಜಡಜಗತ್ತು ಚೇತನಗೊಳ್ಳುವ, ಆಧ್ಯಾತ್ಮದ ಕಡೆಗೆ ಚಲನಶೀಲಗೊಳ್ಳುವ ಪ್ರಕ್ರಿಯೆಯನ್ನು ಇಲ್ಲಿ ಕಾಣುತ್ತೇವೆ. ರಾಮನ ಈ ಕೆಳಗಿನ ಪ್ರಶ್ನೆಗಳಿಗೂ ಇಂಥ ಚಿಂತನೆ ಮುಖಾಮುಖಿಯಾಗುತ್ತದೆ.

ಅರಮನೆಯೊಳಿಹುದೇನೊ?
ಅರಸುತನಮೆದೆಯೊಳಿರೆ ಕಾಡರಮನೆಗೆ ಕೀಳೆ?
ರಸವಿಲ್ಲದಿಹ ಬಾಳಿಗರಮನೆಯೆ ಮರುಭೂಮಿ.
ರಸಿಕಂಗಡವಿ ಸಗ್ಗಕಿಂ ಮಿಗಿಲ್ ಸೊಗಸಲ್ತೆ,
ಜೊತೆಯಿರಲ್ಕೊಲಿದ ಪೆಣ್, ಮೇಣ್ ಕಾಣ್ಬ ಕಬ್ಬಗಣ್?
ಕಣ್ಣುಪೆಣ್ಣುಗಳೆರಡುಮಂ ಪಡೆದ ರಾಮಂಗೆ
ಎಲೆವನೆಯೆ ಕಲೆಯ ಮನೆಯಾಯ್ತು; ವಿಪಿನಾಂಗಣಂ
ರಸ ತಪೋರಂಗಕೆಣೆಯಾಯ್ತು. ದಿನ ಕಳೆದಂತೆ
ಮೊದಮೊದಲ್ ಪರಕೀಯಮಪರಿಚಿತಮಾಗಿರ್ದ
ಗಿರಿವನಂ ಪರಿಚಯದಿನಾತ್ಮೀಯ ಭಾವಮಂ
ತಳೆದುದು ಸಲಿಗೆವೆತ್ತು ; ಅಂದು ಕಲ್ಲಾಗಿರ್ದ
ಕಲ್ಲೀಗಳಾದುದಯ್ ನೆನಹಿಂಗೆ ನಿಕೇತನಂ.
ಹಿಂದೆ ಬರಿ ಮರವಾದುದಿಂದವರ ಬಾಳ್ಗೊಂದು
ಸಂಕೇತವಾಯ್ತು.[೧೩]

ಜಡತ್ವವನ್ನು ಕಳೆದುಕೊಂಡು ಪ್ರಾಣಮಯವಾಗಿ ಪ್ರತಿಯೊಂದು ವಸ್ತುವು ಚೇತನಗೊಳ್ಳುವ ಪರಿಸರತತ್ವಕ್ಕೆ ಈ ಭಾಗ ಉತ್ತಮ ಉದಾಹರಣೆ. ಶಿಲೆಯು ಪರಿಸರ ಸಾನ್ನಿಧ್ಯದಲ್ಲಿ ತಪಸ್ಸಿನಿಂದ ಚೇತನಗೊಳ್ಳುವ ಪ್ರಕ್ರಿಯೆಗಳು ಇಂಥಲ್ಲಿ ಕಾಣುತ್ತವೆ. ಇಂಥ ನಿಸರ್ಗಾನುಭವಗಳು ಪ್ರತಿಯೊಂದು ಜೀವಿಯನ್ನು ಆಧ್ಯಾತ್ಮ ಲೋಕಕ್ಕೆ ಕರೆದೊಯ್ಯುತ್ತವೆಂಬುದಕ್ಕೆ ಈ ಕೆಳಗಿನ ಪದ್ಯಭಾಗ್ಯದಲ್ಲಿನ ಸೂರ್ಯೋದಯದ ಅನುಭವ ಸಾಕ್ಷಿಯಾಗಿ ನಿಲ್ಲುತ್ತದೆ.

ಮೈದೋರಿದನ್,
ರಮಣೀಯ ಪೂರ್ವಗಿರಿವನರಮಾ ರಮಣನೆನೆ,
ಉದಯರವಿ ಗಿರಿವನಪ್ರಿಯರಾಮನಾ ಪ್ರಕೃತಿ
ಪೂಜಾಸುಖದ ರಸಕ್ಕೋತು, ತಾನೊರ್ವನೆಯೆ,
ಹೊಂಬಿಸಿಲ ಚುಂಬನದ ಹಸುರು ಕಾಡಿನ ನಡುವೆ
ಪಿಕಳಾರ ಕಾಜಾಣ ಕಾಮಳ್ಳಿ ಕೋಗಿಲೆಯ
ಗಿಳಿಯ ಕೊರಲಿನ ದನಿಯ ಜೇನೀಂಟುತ್ತೆತಂದು
ನೋಡಿದನ್, ಮಂದಾಕಿನಿಯ ಸಿರಿಯ ಕಣ್‌ಸೆಳೆಯ
ಪೊನ್‌ನೋಟಮಂ : ತುಂಬಿ ಪರಿದುದು ಶುಭಜಲದ ರಮ್ಯ
ನದಿ, ತಾಯಿ ಕೌಸಲ್ಯೆಯಂತೆ, ರಾಮನ ಮನಕೆ
ಮಗುತನವನೊಡರಿಸುತೆ......

ಶ್ರೀ ರಾಮಾಯಣದರ್ಶನಂ ಕಾವ್ಯದಲ್ಲಿ ಬರುವ ಪ್ರಕೃತಿವರ್ಣನೆಗಳು ಬೇರೆ ಬೇರೆ ಸ್ಥರಗಳಲ್ಲಿ ಸಾಂಕೇತಿಕಗೊಳ್ಳುತ್ತವೆ ಎಂಬುದನ್ನು ಈ ಹಿಂದೆ ಹೇಳಲಾಗಿದೆ. ಅಂತೆಯೇ ಉದಾಹರಿಸುತ್ತಿರುವ ಈ ಭಾಗದಲ್ಲಿ ಸೂರ್ಯೋದಯ ವರ್ಣನೆ ಅದರಂತೆಯೇ ಕಾವ್ಯದ ಇನ್ನಿತರ ಭಾಗದಲ್ಲಿ ಬರುವ ನಿಸರ್ಗದ ಚಿತ್ರಗಳು ಅನೇಕ ಉಪಮಾನಗಳ ವಲಯವೊಂದನ್ನು ನಿರ್ಮಿಸಿದೆ. ಇಂಥ ಉಪಮಾನಗಳನ್ನು ಕವಿ ಒಂದು ಕಾಲಸ್ಥಿತಿಯ ನೆಲೆಗೂ ಇಂದಿನ ಪ್ರಸ್ತುತ ಸ್ಥಿತಿಗೂ ಇರುವ ಅಂತರವನ್ನು ಸೂಚಿಸುತ್ತಾರೆ.

ಕೊಂಬೆಗೈಗಳಿಂ ಪೂವಲಿಯ
ಚೆಲ್ಲಿ, ನಾನಾವರ್ಣ ಸ್ವರ್ಣಶೃಂಗಾರದಿಂ
ಮೆರೆದು, ಗಾಳಿಗೆ ತೊನೆದು, ಹಕ್ಕಿಯಿಂಚರದುಲಿಯೆ
ಕಾಲ್ಗೆಜ್ಜೆ ಕಿಂಕಿಣಿಯವೋಲಾಗೆ ನರ್ತಿಸುವ
ತರುತಿಲೋತ್ತಮೆ ಸೃಷ್ಟಿಸಿದಳಿಂದ್ರಲೋಕಮಂ
ಚಿತ್ರಕೂಟದೊಳೆ ಆ ರಸ ಋಷಿ ರಘೂದ್ವಹಂಗೆ.
ಮೆಯ್ಯೊಳ್ ಪರಿವ ನೆತ್ತರೆಲ್ಲಂ ಮಿಂಚುವೊನಲಾಗೆ
ಸವಿಯುತಾ ಬೆಳಗಿನ್ನೆಸಿರಿಯನಿಳಿದನ್ ನೀರ್ಗೆ
ಮೀಹಕ್ಕೆ. ಬಂಡೆಬಂಡೆಯ ನಡುವಣನವರತ

ಜಲಗದ್ಗದ ಶ್ರುತಿಗೆ ಉಪನಿಷತ್ತಿನ ಶ್ರುತಿಯ
ಮಂತ್ರಘೋಷಂ ಬೆರೆಸಿ ನೀರಾಡಿದನ್, ಪೃಥ್ವಿ
ಕಂಡು ಪುಲಕಂಗೊಂಡು ನಲಿಯೆ. ಮಿಂದಿರಲಿಂತು,
ಕಣ್ಗೆ ಪೊಕ್ಕನೆ ಪೊದಳ್ದುದೆನೆ ಚೆಲ್ವಿನ ಬುಗ್ಗೆ,
ಕಾಣ್ಕೆವೊಲದಂಚಿಂದೆ, ಬಾನ್ಮುಡಿಯ ಪೊಳೆಯಡಿಯ
ಬೆಟ್ಟದಡವಿಯ ತಡಿಯ ಚಿತ್ರಭಿತ್ತಿಯಿನುಣ್ಮಿ
ಹಾರುತೊಯ್ಯನೆ ತೇಲಿಬಂದತ್ತು ಸಾಲ್ಗೊಂಡು,
ಪಾಲ್ ಬೆಳ್ಪನೆಯ ಬೆಣ್ಣೆನುಣ್ಪನೊರ್‌ಬರೆಪಮೆನೆ,
ಬೆಳ್ಳಕ್ಕಿಪಂತಿ. ನೋಡಿದನು ರಸವಶನಾಗುತಾ
ದಾಶರಥಿ. ನೋಡುತಿರೆ, ತಾನೆ ಹೊಳೆಯಾದಂತೆ,
ತಾನಡವಿಯಾದಂತೆ, ತಾನೆ ಗಿರಿಯಾದಂತೆ,
ತಾನೆ ಬಾನಾದಂತೆ, ತಾನೆಲ್ಲಮಾದಂತೆ,
ಮೇಣೆಲ್ಲಮುಂ ತನ್ನೊಳಧ್ಯಾತ್ಮಮಾದಂತೆ
ಭೂಮಾನುಭೂತಿಯಿಂ ಮೈಮರೆದನಾ ರಸಸಿದ್ಧಿ,
ಪೇಳ್, ರಾಮನಧ್ಯಾತ್ಮಮಂ ಸಕಲಲೋಕಕೆ ಸಾರ್ವ
ಭವ್ಯ ಭಗವತ್ ಸಾಕ್ಷಿಯೈಸಲೆ ಕಿರೀಟೋನ್ನತಂ![೨೨]

ಈ ಸೂರ್ಯೋದಯದ ಅನುಭವ ಹುಲಿಕಲ್ಲು ನೆತ್ತಿಯಲ್ಲಿ ತಿಮ್ಮಿ ಗುತ್ತಿಗೆ ಸೂರ್ಯೋದಯವನ್ನು ತೋರಿಸಿ ಸಂಭ್ರಮ ಪಡುವ ಕ್ಷಣಗಳನ್ನು ನೆನೆಪಿಸುತ್ತದೆ. ಗುತ್ತಿಯೊಂದಿಗೆ ತಿಮ್ಮಿ ನೋಡುವ ಆ ಸೂರ್ಯೋದಯ ತಿಮ್ಮಿಯ ಆಧ್ಯಾತ್ಮಕ್ಕೆ ಸಾಕ್ಷಿಯಾದರೆ ಇಲ್ಲಿನ ಸೂರ್ಯೋದಯ ರಾಮನ ಆಧ್ಯಾತ್ಮವನ್ನು ಸಮಸ್ತ ಲೋಕಕ್ಕೆ ಸಾರುವ ಭವ್ಯವಾದ, ಕಿರೀಟಸದೃಶವಾದ ಸಾಕ್ಷಿಯಲ್ಲವೆ ಎಂಬ ಕವಿಮಾತು ನಿಸರ್ಗದ ತನ್ಮಯತೆಯಿಂದ ದತ್ತವಾಗುವ ಆನಂದಾನುಭೂತಿಯನ್ನು ಅನುಭವಕ್ಕೆ ತಂದು ಕೊಡುತ್ತದೆ. ಮನುಷ್ಯ ನಿಸರ್ಗದೊಂದಿಗೆ ಅಭಿನ್ನನಾಗುವ ಕ್ರಮಕ್ಕೆ ಇದು ಉತ್ತಮ ಉದಾಹರಣೆ. ತಾನೇ ಬೆಟ್ಟವಾಗುವ, ಆಕಾಶವಾಗುವ, ಹೊಳೆ, ಕಾಡು, ತಾನೇ ಎಲ್ಲವೂ ಆಗಿ ಎಲ್ಲವೂ ತನ್ನಲ್ಲಿಯೇ ಐಕ್ಯವಾಗುವ ಈ ರಸಾನುಭವವು ಕುವೆಂಪು ಅವರ ಪರಿಸರ ತತ್ವಕ್ಕೆ ಮತ್ತೊಂದು ಉದಾಹರಣೆ. ಚಿತ್ರಪಟದಿಂದ ಹಾರುವ ಬಿಳಿಯ ಬೆಳ್ಳಕ್ಕಿಯ ಸಾಲು ದೇವರ ರುಜುವಿನಂತೆ ಕಂಡು ರಸವಶನಾಗುವ ಕವಿಯ ಪರಿಸರ ಸಿದ್ಧಾಂತವು ಇಲ್ಲಿ ಸ್ಫುಟಗೊಂಡಿದೆ. ಪ್ರಕೃತಿಯ ಇಂಥ ರಸವಶವಾಗಿಸುವ ನೆಲೆಗಳಿಗೆ ರಾಮುನನ್ನು ಕಳೆದುಕೊಂಡ ಅಯೋಧ್ಯೆಯ ಚಿತ್ರವನ್ನು ಕವಿ ಮುಖಾಮುಖಿಯಾಗಿಸುತ್ತಾರೆ.

ಹಾ! ಭಾಗ್ಯಹೀನ ದೀನ ಅಯೋಧ್ಯೆ,
ನಿನಗುಂ ಅರಣ್ಯಗತಿಯಾಯ್ತಲಾ ರಾಮನಾ
ವನವಾಸದಿಂ, ದಶರಥನ ನಿಧನದಿಂ ಮೇಣ್
ಭರತನಾ ಪರಿತ್ಯಾಗದಿಂ ! ಶ್ರೇಷ್ಠರಿಲ್ಲದಿರೆ,

ಏನಿರ್ದರೇನಂತೆ, ಮಸಣಮಾ ಪತ್ತನಂ
ತತ್ವ ವಿದ್ಯಾ ಕಲಾ ಸಂಗೀತ ಸಾಹಿತ್ಯ
ಸಕಲ ಸಂಸ್ಕೃತಿಗೆ. ಬಿತ್ತರದ ಬೀದಿಗಳೆರಡು
ಕೆಲದಿ ಮುಗಿಲಂ ಮುಟ್ಟಿ ಮೆರೆದೊಡೇಂ ಸ್ಪರ್ಧೆಯಾ
ಪ್ರಾಸಾದ ಪಂಕ್ತಿ? ರಂಜಿಸಿದೊಡೇಂ ರಜನಿಯಂ
ಪಗಲುಗೈದಾಗಸದ ಚುಕ್ಕಿಗಳನೇಳಿಸುತೆ
ಕಿಕ್ಕಿರಿದು ಕಣ್ಬೆರಗುಗೊಳಿಸಿ ಗೊಂಚಲ್ಗೊಂಡು
ಉರಿವ ವಿದ್ಯುದ್ದೀಪ ರಾಜಿ? ಬಣ್ಣದ ಬುಗ್ಗೆ
ಕಣ್ಗೆ ಕಾಮನ ಬಿಲ್ಲಳಂಗನೆಯರಾಟವೆನೆ
ಸಾಲ್ಗೊಂಡು ವಿವಿಧಗತಿಯಾ ಕಲಾಕೃತಿಯಿಂದೆ
ರಂಗುರಂಗಿನ ತೋಂಟರಂಗದಿ ಮನಂಗೊಳಿಸಿ
ಕುಣಿದೊಡೇಂ? ಪ್ರಾಸ ಛಂದಃಪೂರ್ಣಮಪ್ಪುದೇಂ
ಪುರುಷಾರ್ಥ ಶಾಶ್ವತದ ರಾಸಲೀಲಾ ಬೃಂದೆ?

ಸಾಮಾನ್ಯವಾಗಿ ಭೌತ ವಿಜ್ಞಾನಿಗಳು, ಚಿಂತಕರು ವಿಜ್ಞಾನದ ಚರಿತ್ರೆಯನ್ನು ದಾಖಲಿಸುತ್ತಾರೆ. ಆದರೆ ಒಬ್ಬ ಲೇಖಕ ಅಥವಾ ತತ್ವ ಚಿಂತಕ, ಕಲಾವಿದ ಶೋಧಿಸುವುದು ವಿಜ್ಞಾನದ ಚರ್ಚೆಯನ್ನಲ್ಲ. ಚರಿತ್ರೆಯಲ್ಲಿಯೇ ವಿಕಸಿತಗೊಂಡಿರುವ ವಿಜ್ಞಾನವನ್ನು ಧ್ಯಾನಿಸುವುದು ಕುವೆಂಪು ಅವರ ಕಾವ್ಯದ ಮೂಲಕ ಗಮನಿಸಬೇಕಾದ ಗಂಭೀರ ತಾತ್ವಿಕತೆಯಾಗಿದೆ.

ಜನಮನೋಮಂದಿರದ ಸುಸ್ವಪ್ನಗೋಪುರದ
ಕಲಶಂ ನಭಶ್ಚುಂಬಿಯಾಗದಿರೆ, ಋಷಿ ಹೃದಯ
ಮಂಗಳಾರತಿ ಬಾಳಿನಂಧತೆಯನಳಿಸದಿರೆ,
ಕವಿಕೃತಿಯ ವರ್ಣಗಾನಂ ಮಹನ್ನಿತ್ಯತಾ
ಸ್ವರ್ಣಸುಂದರ ಇಂದ್ರಿಯಾತೀತ ನಂದನದಿ
ನವರಸಾಪ್ಸರಿಯರಂ ನರ್ತನಂಗೈಸದಿರೆ, ಪೇಳ್
ಏನಿರ್ದುಮೇನ್ ಅನಾಗರಿಕತಾ ಶ್ರೀ, ದಿಟಂ
ಮಸಣಮಾ ಪತ್ತನಮಯೋಧ್ಯೆ ತಾನಾದೊಡಂ[೨೫]

ಇಂಥ ಅನೇಕ ಚಿತ್ರಗಳು ಈ ಕಾವ್ಯದ ಉದ್ದಕ್ಕೂ ಕಾಣಿಸುತ್ತವೆ. ರಾಮಾಯಣ ದರ್ಶನ ಪರಿಸರ ಕೇಂದ್ರಿತ ಕಾವ್ಯವಾಗಿ ಅಧ್ಯಯನಕ್ಕೆ ಅಸಂಖ್ಯ ಆಧಾರಗಳನ್ನೇ ಒದಗಿಸುತ್ತದೆ. ಈ ಮಹಾಕಾವ್ಯ ಅರಣ್ಯಗಳ ನೈಸರ್ಗಿಕ ಇತಿಹಾಸವನ್ನು ಮತ್ತು ಪ್ರಕೃತಿಯನ್ನು ಪರಿಚಯಿಸುವುದರೊಂದಿಗೆ ಪ್ರಕೃತಿಯ ಬಗೆಗಿನ ಅಗಾಧ ಮಾಹಿತಿಗಳನ್ನು ಕೊಡುತ್ತದೆ. ಈ ಕಾವ್ಯದಲ್ಲಿ ಬರುವ ಪರಿಸರ ಒಂದು ವ್ಯವಸ್ಥೆಯಾಗಿಯೂ ಕ್ರಿಯಾಶೀಲವಾಗಿದೆ. ನಿಸರ್ಗದ ಚೇತನಾಚೇತನಗಳ ನಡುವೆಯೂ ಸಂಬಂಧವನ್ನು ಏರ್ಪಡಿಸುತ್ತದೆ. ಹಾಗಾಗಿ ಪರಿಸರ ವ್ಯವಸ್ಥೆಯ ಸಂಕೀರ್ಣ

ಅಖಂಡತೆ ಇಲ್ಲಿದೆ. ವನಪ್ರಿಯ ರಾಮನ ಪರಿಸರ ಪ್ರೀತಿ ಮತ್ತು ಜ್ಞಾನ ಸಂಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಕಾರಣವಾಗುವ ತತ್ವವಾಗಿಯೂ ಕೆಲಸ ಮಾಡುತ್ತದೆ. ವ್ಯಕ್ತಿತ್ವ ಮತ್ತು ಪರಿಸರ ಸಂಬಂಧಗಳ ಹೊಸ ದೃಷ್ಟಿಯೊಂದು ಇಲ್ಲಿ ನಿರ್ಮಾಣಗೊಂಡಿದೆ.

ಪ್ರಕೃತಿಯಲ್ಲಿನ ಸೂರ್ಯೋದಯ, ಚಂದ್ರೋದಯ, ಹಕ್ಕಿಗಳ ಕೂಜನ, ಅಸಂಖ್ಯ ಗಿಡ ಮರಗಳ ಸೌಂದರ್ಯ ವೈವಿಧ್ಯತೆಗಳ ಹಾಗೂ ನಿಸರ್ಗ ರೌದ್ರತೆಗಳ ಮುಂದೆ ಮನುಷ್ಯನ ಅಹಂಕಾರಗಳು ಅಣುಮಾತ್ರವಾಗಿಯೂ ನಿಲಲಾರವೆಂಬ ಸತ್ಯವನ್ನು ಈ ಕಾವ್ಯ ಅನೇಕ ಕಡೆ ಧ್ಯಾನಿಸುತ್ತದೆ. ಪ್ರಕೃತಿಯ ಆರ್ಭಟ ಮತ್ತು ಉಗ್ರತೆಗಳ ಮಧ್ಯೆ ಮಾನವ ಶಕ್ತಿ ಅತ್ಯಲ್ಪವೆಂದು, ಮನುಷ್ಯ ಅಹಂಕಾರಕ್ಕೆ ನಿಸರ್ಗ ರೌದ್ರತೆಗಳ ಸಾನ್ನಿಧ್ಯವೇ ದಿವ್ಯೌಷದ ಎಂಬ ಅನುಭವಗಳನ್ನು ಈ ಕಾವ್ಯ ಅನೇಕ ಸನ್ನಿವೇಶಗಳಿಂದ ಸ್ಪಷ್ಟಪಡಿಸುತ್ತದೆ. ಕಾಡಿನ ದಟ್ಟತೆ, ಅಂಥ ದಟ್ಟತೆಗಳಿಂದ ನಿರ್ಮಾಣವಾಗಿರುವ ಭೀಕರತೆಗಳು, ಅತಿ ಎತ್ತರ ಪರ್ವತಗಳು, ಅತಿ ವಿಸ್ತಾರವಾಗಿ ಹಬ್ಬಿರುವ ಕಾನನದ ವೈಶಾಲ್ಯತೆ, ಅದರ ನಡುವಿನ ವನ್ಯಜೀವಿಗಳ ಭಯಾನಕತೆ, ಮುಂಗಾರ್ಗಾಲ, ಮಳೆಯ ಆರ್ಭಟಗಳ ಮುಂದೆ ಮಾನವನ ಶಕ್ತಿ ಅತ್ಯಲ್ಪವೆಂಬ ವಾಸ್ತವತೆಯನ್ನು ಈ ಕೃತಿ ಮತ್ತೆ ಮತ್ತೆ ಮನಗಾಣಿಸುತ್ತದೆ. ಈ ಕೆಳಗಿನ ಮುಂಗಾರ್ಗಾಲದ ವರ್ಣನೆಯ ಭೀಕರತೆಯೇ ಈ ವಿಚಾರವನ್ನು ಸ್ಪಷ್ಟಪಡಿಸುವಂತಿದೆ.

"ಏನ್ ವೃಷ್ಟಿಘೋಷಮಿದು, ಆಲಿಸಾ, ಸೌಮಿತ್ರಿ!
ಮಲೆ ಕಾಡು ನಾಡು ಬಾನ್ ಒಕ್ಕೊರಲೊಳೊಂದಾಗಿ
ಬಾಯಳಿದು ಬೊಬ್ಬಿರಿಯುತಿಪ್ಪಂತೆ ತೋರುತಿದೆ
ಈ ಪ್ರಕೃತಿಯಾಟೋಪದೀ ಉಗ್ರತೆಯ ಮಧ್ಯೆ
ನಾಂ ಮನುಜರತ್ಯಲ್ಪ ಕೃತಿ ! ನಮ್ಮಹಂಕಾರ
ರೋಗಕಿಂತಪ್ಪ ಬೃಹದುಗ್ರತಾ ಸಾನ್ನಿಧ್ಯಮೇ
ದಿವ್ಯ ಭೇಷಜಮೆಂಬುದೆನ್ನನುಭವಂ.[೧೬]

ಇಂಥ ನಿಸರ್ಗಾನುಭವಗಳ ಭೀಕರತೆ ಎಂಥಾ ಮನುಷ್ಯ ಶಕ್ತಿಯನ್ನು ಸಹ ಅಲುಗಾಡಿಸದಿರಲಾರವು. ಕಾರ್ಗಾಲದ ರಾತ್ರಿಗಳಲ್ಲಿ ನಿರಂತರವಾಗಿ ಸುರಿಯುವ ಮಳೆ, ಅದರ ನಡುವೆಯೇ ಅಸಂಖ್ಯ ಹುಳು ಹುಪ್ಪಟೆಗಳ ಸಾವಿರ ಸಾವಿರ ಧ್ವನಿಗಳ ಕರ್ಕಶತೆ, ಅದರ ಮಧ್ಯೆ ಭೀಕರ ನಿಶ್ಯಬ್ಧತೆಗಳು ಮನುಷ್ಯ ಶಕ್ತಿಗೆ ಸವಾಲನ್ನೊಡ್ಡುವ ಅನುಭವಗಳು. ಇಂಥ ಭೀಕರತೆಯ ನಡುವೆ ಮುಂಗಾರ್ಗಾಲದ ಮಳೆಯ ನರ್ತನಗಳ ಮಧ್ಯೆ ಮಾನವನು ನಿಸರ್ಗದ ಮುಂದೆ ಅತ್ಯಲ್ಪವೆಂಬ ಅಂಶವನ್ನು ಈ ಭಾಗ ವಿಶದಪಡಿಸುತ್ತದೆ. ಮನುಷ್ಯ ಅಹಂಕಾರದ ರೋಗಕ್ಕೆ ಇಂತಹ ಮಹಾನ್ ಸಾನ್ನಿಧ್ಯವೇ ದಿವ್ಯೌಷಧವೆಂಬ ಅನುಭವವನ್ನು ರಾಮನ ಈ ಮಾತು ಸ್ಪಷ್ಟಪಡಿಸುತ್ತದೆ. ಆದರೂ ಇಂಥ ಭೀಕರಾನುಭವಗಳ ಗರಡಿಯಲ್ಲಿ ಸಾಧನೆ ಮಾಡಿದ ಮನುಷ್ಯ ಶಕ್ತಿಗೆ ಪರ್ವತ ಸದೃಶ ಸ್ಥಿರತೆಯು ಕೈಗೂಡದಿರಲಾರದೆಂಬ ಮಹತ್ವಾಕಾಂಕ್ಷೆಯನ್ನು ಈ ಕಾವ್ಯ ಸೂಚಿಸುತ್ತದೆ.

೫. ಜೀವ ವೈವಿಧ್ಯತೆ

ಅಸಂಖ್ಯ ಬಗೆಯ ಜೀವಸಂಕುಲ ಈ ಮಹಾಕಾವ್ಯದ ಭಾಗವಾಗಿವೆ. ಮರ, ಗಿಡ, ಸಸ್ಯ, ಪ್ರಾಣಿ, ಪಕ್ಷಿ, ವಿಷ ಸರ್ಪಗಳು ಹಾಗೂ ಅಸಂಖ್ಯ ಕೀಟಸ್ತೋಮಗಳ ಪರಿಚಯ ಇಲ್ಲಾಗುತ್ತದೆ. ಹುಲಿ, ಕಾಡು ಹಂದಿ, ಕಾಡು ಕೋಣ, ಜಿಂಕೆ, ಸಿಂಹ ಮೊದಲಾದ ಪ್ರಾಣಿಗಳು, ನಸರಿ, ತುಡುವೆ, ಹೆಜ್ಜೇನು - ಇಂಥ ಹಲವು ಬಗೆಯ

ಜೇನುಗಳು, ಹಾಲವಕ್ಕಿ, ಕೊಂಚೆ, ಅಂಚೆ, ಕಾಜಾಣ, ಭಾರದ್ವಾಜ, ಕಾಮಳ್ಳಿ, ಮಡಿವಾಳ, ಪಿಕಳಾರ, ಗಿಳಿ, ಕೋಗಿಲೆ, ಗೂಬೆ, ಗಿಡುಗ, ಕುಟುರ, ಮಂಗಟ್ಟೆ ಮೊದಲಾದ ಪಕ್ಷಿ ಸಮೂಹಗಳು ಈ ಕಾವ್ಯದಲ್ಲಿವೆ. ಅಶೋಕ, ಕೇದಗೆ, ಸಂಪಿಗೆ, ಆಲ, ಸೀತಾಳೆ, ಬೂರಗ, ಮುತ್ತುಗ, ನೆಲ್ಲಿ, ಹಾಲುವಾಣ, ಕಲ್ಲುಸಂಪಿಗೆ, ಮಾವು, ನೇರಳೆ, ಹೆಬ್ಬಲಸು, ಮತ್ತಿ, ನಂದಿ, ರಂಜ, ಹೊನ್ನೆಯಂತಹ ಹಲವು ಬಗೆಯ ಮರಗಿಡಗಳು ಇಲ್ಲಿ ಪಾಲು ಪಡೆದಿವೆ. ಭಾರತದ ಅನೇಕ ನದಿ, ಸರೋವರ, ಬೆಟ್ಟ, ಅರಣ್ಯ ಚಿತ್ರಗಳು ಈ ಕಾವ್ಯದಲ್ಲಿ ಎದುರಾಗುತ್ತವೆ. ಹಾಗೆಯೇ ಪ್ರಕೃತಿಯ ಚಿತ್ರಸೃಷ್ಟಿಯ ಸಮಸ್ತವನ್ನು, ಲಕ್ಷ ನಕ್ಷತ್ರ ಲೋಕಗಳ ಆಕಾಶವನ್ನು, ಪರಮಾತ್ಮನ ಅನುಭವದ ಪ್ರಚೋದನೆಯ ನಿಸರ್ಗ ಕೃತಿಗಳನ್ನು, ಮನೋಕಲ್ಪನೆಗಳನ್ನು ಹಾಗು ಅದ್ಭುತ ವೈವಿಧ್ಯತೆಗಳನ್ನು ಈ ಕೃತಿ ಸಾಕ್ಷಾತ್ಕಾರಗೊಳಿಸುತ್ತದೆ.

ನೈಸರ್ಗಿಕ ಸಂಪನ್ಮೂಲಗಳ ರಕ್ಷಣೆಯೇ ಶ್ರೇಷ್ಠಮೌಲ್ಯವೆಂಬುದು ಇಂತಹ ಕೃತಿಗಳಲ್ಲಿ ಅಂತರ್ಗತವಾಗಿರುವ ಚಿಂತನೆಯಾಗಿದೆ. ಪ್ರಕೃತಿ ಸಕಲ ಜೀವರಾಶಿಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ. ಈ ಬಗೆಯ ಅಸಂಖ್ಯ ಜೀವಿಗಳು ತಮ್ಮ ಸುತ್ತಣ ಪರಿಸರದೊಂದಿಗೆ ಉಳಿಸಿಕೊಂಡಿರುವ ಸಂಬಂಧದ ಸಮಗ್ರ ಅಧ್ಯಯನವೇ ಪರಿಸರ. ಅನೇಕ ಜೀವಸಂಕುಲಗಳು ಮಾನವ ಸಮುದಾಯದೊಂದಿಗೆ ಹಾಗು ಸುತ್ತಣ ಪರಿಸರದೊಂದಿಗೆ ಅನ್ಯೋನ್ಯ ಸಂಬಂಧಗಳನ್ನು ಉಳಿಸಿಕೊಂಡು ಒಂದು ಪರಿಸರ ವ್ಯವಸ್ಥೆಯನ್ನೇ ಸೃಷ್ಟಿಸುತ್ತಿವೆ. ಮಾನವ ಸಮುದಾಯಗಳು ಚಲನಶೀಲಗೊಳ್ಳುವುದೇ ಪರಿಸರದ ಮೂಲಕ. ಹಾಗಾಗಿ ಆದಿವಾಸಿಗಳಿಗೆ, ಬುಡಕಟ್ಟು ಜನಾಂಗದವರಿಗೆ, ಆಶ್ರಮವಾಸಿಗಳಿಗೆ ಕಾಡು ಆಶ್ರಯತಾಣವಾಗಿದೆ. ಈ ಕೃತಿಯಲ್ಲಿ ಮಾನವ ಪರಿಸರದೊಂದಿಗೆ ಉಳಿಸಿಕೊಂಡಿರುವ ಸಂಬಂಧಗಳ ಅಗಾಧ ಮುಖಗಳನ್ನು ಕಾಣುತ್ತೇವೆ. ಹಾಗಾಗಿ ಮಹಾಕಾವ್ಯದ ಕಥನ ಹಲವು ಪರಿಸರ ವ್ಯವಸ್ಥೆಗಳ ನಡುವೆ ಕಾರ್ಯನಿರ್ವಹಿಸಿದೆ. ಅಂತೆಯೇ ಮಹಾಕಾವ್ಯದ ಅನೇಕ ಪಾತ್ರಗಳು ಪ್ರಕೃತಿಯೊಂದಿಗೆ ಗಾಢ ಪ್ರೀತಿಯನ್ನು ಹೊಂದಿದ್ದಾರೆ. ಜೀವವೈವಿಧ್ಯತೆಯ ಸಮೂಹ ಇಂಥ ಕೃತಿಗಳಲ್ಲಿ ಹೆಜ್ಜೆ ಹೆಜ್ಜೆಗೂ ಕಾಣಿಸುತ್ತದೆ. ಅಂಥ ಜೀವವೈವಿಧ್ಯತೆಗೆ ಚಲನಶೀಲತೆಯನ್ನು ಒದಗಿಸುವ ನದಿ, ಸರೋವರ, ಸಮುದ್ರಗಳಲ್ಲಿನ ನೀರು ಬಹುಮುಖ್ಯ ವಸ್ತುವಾಗಿ ಪ್ರಕಟಗೊಳ್ಳುತ್ತದೆ. ವಾಲ್ಮೀಕಿ, ಕುವೆಂಪು ಅಂಥ ದೈತ್ಯ ಪ್ರತಿಭೆಗಳು ಇಂಥ ಕಾರಣಗಳಿಂದಾಗಿ ಕವಿಯಾಗಿ, ಪರಿಸರ ತಜ್ಞರಾಗಿ, ಇತಿಹಾಸಕಾರರಾಗಿ ಕಾಣಿಸುತ್ತಾರೆ. ಶ್ರೀ ರಾಮಾಯಣ ದರ್ಶನಂ ಕೃತಿಯಲ್ಲಿ ಪ್ರಕಟಗೊಂಡಿರುವ ಅಖಂಡ ಪರಿಸರ ಕವಿಗೆ ಚಿರಪರಿಚಿತ ಲೋಕ. ಕುವೆಂಪು ಅವರು ಹೇಳುವಂತೆ -

> "ರಾಮಾಯಣ ಆದಿಕಾವ್ಯ ; ಅದರ ಕವಿ ಆದಿಕವಿ. ಆತನು ಮಹರ್ಷಿಯೂ ಆಗಿರುವುದರಿಂದ ದ್ರಷ್ಟಾರನೂ ಅಹುದು. ಆತನ ಪೂರ್ಣದೃಷ್ಟಿ ಲೋಕಾತಿಕ್ರಾಂತ ಗೋಚರವೂ ಆಗಿರುವುದರಿಂದ ಆತನು ಕ್ರಾಂತದರ್ಶಿ ಮತ್ತು ಅವನ ಪ್ರತಿಭೆ ನಿತ್ಯಸತ್ಯ ಸಂಸ್ಪರ್ಶಿ. ಆ ಋಷಿಕವಿ ವಾಲ್ಮೀಕಿಯ ಸಮುದ್ರೋಪಮವಾದ ಮಹಾಗಾನಕ್ಕೆ ಜಗತ್ತು ಮಹಾಕಾವ್ಯದ ಪಟ್ಟಕಟ್ಟಿದೆ. ಏಕೆಂದರೆ ರಾಮಾಯಣವು ಪುರಾಣವಾದರೂ ಅದೊಂದು ಬೃಹದ್ ಭಾವಗೀತೆಯಂತಿದೆ. ಅದು ಏಕಕವಿ ಕೃತಿಯೂ ಆಗಿದೆ ; ಬಹುಕಾಲದ ಸಂಸ್ಕೃತಿಯ ಬಹುದೊಡ್ಡ ಜನಾಂಗದ ಮನಃಕೃತಿಯೂ ಆಗಿದೆ."[೧೭]

ಎಂಬ ವಾಲ್ಮೀಕಿ ಹಾಗು ಅವನ ಕಾವ್ಯ ಕುರಿತ ಈ ಮಾತುಗಳನ್ನು ಶ್ರೀ ರಾಮಾಯಣ ದರ್ಶನಂ ಕಾವ್ಯಕ್ಕೂ ಅನ್ವಯಿಸಬಹುದು. ಆ ಎಲ್ಲ ಶಕ್ತಿಗಳನ್ನು ಈ ಕಾವ್ಯವು ಪಡೆದಿದೆ ಎಂದರೆ ಉತ್ಪ್ರೇಕ್ಷೆಯ ಮಾತಾಗಲಾರದು.

ಪೃಥ್ವಿಯಲ್ಲಿ ಎಲ್ಲಿಯವರೆಗೆ ಗಿರಿನದಿಗಳಿರುತ್ತವೆಯೊ ಆ ವರೆಗೆ ಲೋಕಲೋಕಗಳಲ್ಲಿ ರಾಮಾಯಣ ಕಥೆ ಪ್ರಚುರವಾಗಿರುತ್ತದೆ. ಎಲ್ಲಿಯವರೆಗೆ ನಿನ್ನ ರಾಮಾಯಣ ಕಥಾಕೃತಿ ಪ್ರಚುರವಾಗಿರುತ್ತದೆಯೊ ಅಲ್ಲಿಯವರೆಗೆ ನೀನು ನನ್ನ ಕೃತಿಯಾಗಿರುವ ಈ ಮೇಲಣ ಮತ್ತು ಕೆಳಗಣ ಹದಿನಾಲ್ಕು ಲೋಕಗಳಲ್ಲಿಯೂ ಸರ್ವವ್ಯಾಪಿಯಾಗಿ ಸರ್ವತೋಮುಖವಾಗಿ ಸರ್ವೋದಯ ಕಾರಣನಾಗಿ ಸರ್ವರಸಾನಂದರೂಪನಾಗಿ ಇರುತ್ತೀಯೆ.[೧೮]

ಬ್ರಹ್ಮಕೃತಿಗಳಾದ ಪರ್ವತಾರಣ್ಯನದಿಗಳಂತೆ ಕವಿಕೃತಿಯಾದ ರಾಮಾಯಣವೂ ಪ್ರಕೃತಿಯ ಸತ್ಯಾಂಶವಾಗಿರುತ್ತದೆ ಎಂಬ ಆಶ್ವಾಸನೆಯಿದೆ. ಅದಕ್ಕಿಂತಲೂ ಅತಿಶಯವಾಗಿ, ಈ ಪೃಥ್ವಿಯ ಪರ್ವತಾರಣ್ಯಗಳ ಸತ್ಯ ಈ ಒಂದು ಲೋಕದಲ್ಲಿ ಮಾತ್ರ ಪ್ರಚುರವಾಗಿರುವುದಾದರೆ ಋಷಿಕವಿಕೃತಿಯ ಸತ್ಯ ಅನೇಕ ಲೋಕಚರವಾಗಿರುತ್ತದೆ ಎಂಬ ಅತೀಂದ್ರಿಯವೂ ಯೌಗಿಕವೂ ಆಗಿರುವ ಸತ್ಯಸ್ಯ ಸತ್ಯವೂ ಪ್ರತಿಬೋಧಿತವಾಗಿರುವಂತೆ ಭಾಸವಾಗುತ್ತದೆ.[೧೯]

ಇಂಥ ಎಲ್ಲ ಶಕ್ತಿಯು ಶ್ರೀ ರಾಮಾಯಣ ದರ್ಶನಂ ಕೃತಿಗಿದೆ. ನಿತ್ಯ ರಾಮಾಯಣದ ರಾಮನಿಗೆ ನಿತ್ಯವೂ ನಡೆಯುವ ಪಟ್ಟಾಭಿಷೇಕದ ಸ್ತೋತ್ರವಾಗಿ, ಅಂತೆಯೇ ಮಾನವನು ತಿಳಿಯಲಾರದ ಸೃಷ್ಟಿಗಾನವೂ ಆಗಿದೆ. ಜಡ, ಜೀವ, ಚೇತನ, ಚರಾಚರ, ಅನುರೇಣು, ತೃಣಕಾಷ್ಠ ಕಂಠಗಳಿಂದ ಹೇಳುವ ಆನಂದದ ಸಮುದಾಯ ಗೀತವೂ ಇದಾಗಿದೆ.

ಆಲಿಸದೊ! ಸ್ಥಾವರದಿ, ಜಂಗಮದಿ, ಜಡ ಜೀವ
ಚೇತನ ಚರಾಚರದೊಳಣುರೇಣು ತೃಣಕಾಷ್ಠ
ಕೋಟಿಕೋಟಿಯ ಕಂಠದಿಂದೇಳುವಾನಂದ
ಗೋಷ್ಠಿಗಾನಂ!"

....

ಶಿಲೆಗಳಲಿ ಜಲಗಳಲಿ ಲೋಹ ಲೋಹಗಳಲ್ಲಿ
ಖಗಗಳಲಿ ಮೃಗಗಳಲಿ ನಾನಾ ನರಸ್ವರಕಲಾ
ಸಕಲ ವಿನ್ಯಾಸದಲಿ ಮರ್ತ್ಯೇಂದ್ರಿಯಂಗಳಿಗೆ
ಪ್ರತ್ಯಕ್ಷಮಾಗುತಿರ್ಪೋಂಕಾರಮಂ![೨೦]

ಕುವೆಂಪು ಅವರ ಶ್ರೀ ರಾಮಾಯಣ ದರ್ಶನದ ಎಲ್ಲ ಪಾತ್ರಗಳು ಚಲನಶೀಲವಾಗಿ ವಿಕಾಸಗೊಳ್ಳುವ ಕಡೆಗೆ ಚಲಿಸುತ್ತವೆ. 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್' ಎಂಬುದು ಈ ಕೃತಿಯ ಬೀಜರೂಪದ ದರ್ಶನ. ಆದರೆ ಜಗತ್ತಿನ ಸೃಷ್ಟಿಯಲ್ಲಿ ಈ ಬೀಜರೂಪದ ದರ್ಶನಕ್ಕೆ ಅನುಗುಣವಾಗಿ ಪರಿವರ್ತನೆ ಹೊಂದುವುದನ್ನು ಕಾಣುತ್ತೇವೆ. ಪಾಪಿಗಳು, ನೀಚರು, ದ್ರೋಹಿಗಳು, ದುಷ್ಟರು ಎಲ್ಲರೂ ಪರಿವರ್ತನೆ ಹೊಂದುವ ಪ್ರಕ್ರಿಯೆಯಲ್ಲಿಯೇ ಕಾವ್ಯ ಚಲಿಸುತ್ತದೆ. ನಿಸರ್ಗ ತತ್ವವಾದ ಪೂರ್ಣದೃಷ್ಟಿಗೆ ಎಲ್ಲವೂ ಜೀವ ಸಮಾನತೆಯ

ಧೋರಣೆಯ ಕಡೆಗೆ ಚಲಿಸುತ್ತವೆ. ಹಾಗಾಗಿಯೇ ಕೈಕೆ, ಮಂಥರೆ, ರಾವಣ ಈ ಯಾವ ಪಾತ್ರವೂ ತುಚ್ಛವಾಗಿ ಕಾಣಲಾರವು. ನೀಚತ್ವದಿಂದ ನೀಚತ್ವದ ಕಡೆಗೆ ಚಲಿಸದೆ ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿಗಳ ಕಡೆಗೆ ಎಲ್ಲಾ ಜೀವರಾಶಿಯನ್ನು ಈ ಕಾವ್ಯ ಮುನ್ನಡೆಸುತ್ತದೆ. ಇಂಥ ಮುನ್ನಡೆಯಲ್ಲಿಯೇ ಕೊನೆಗೆ ಸಚರಾಚರಗಳೆಲ್ಲವೂ ಓಂ ಸಚ್ಚಿದಾನಂದಮಯದ ಅವಸ್ಥೆಯನ್ನು ತಲುಪುತ್ತವೆ. ಹಾಗಾಗಿ ಕೆಡುಕು ದುಷ್ಟತೆಗಳು ನಿತ್ಯವಸ್ತುವಾಗಿ ನಿಲ್ಲದೆ ಅನಿತ್ಯವಾಗುವ ಕಡೆಗೆ ಚಲಿಸುತ್ತವೆ. ಈ ಕೆಳಗಿನ ಸೀತೆಯ ಪ್ರಾರ್ಥನೆಯನ್ನು ಅಂಥ ಚಿಂತನೆಗಾಗಿ ಉದಾಹರಿಸಬಹುದು.

ಪ್ರಾರ್ಥನಾ ತೀವ್ರತೆಯ ಸಾತ್ವಿಕ ತಪಶ್ಶಕ್ತಿ, ಪೇಳ್,
ತಾಂ ಸ್ವಯಂಕ್ರಿಯೆಯಾಗಿ ಚೋದಿಸದೆ ಸೃಷ್ಟಿಯಂ?
ಸೇತುಗಟ್ಟದೆ ಕಷ್ಟದಂಬುಧಿಗೆ - ಮೇಣಂತೆ ತಾಂ
ತಿರ್ದದೇನುಳಿಯುವುದೆ ಪೇಳಿಂದಲ್ಲದಿರೆ ನಾಳೆ
ಪಾಪ ಬುದ್ಧಿಯ ಜೀವಿತದ ವಕ್ರರೇಖೆಯಂ
ಪುಣ್ಯ ಋಜು ಪಥಕೆ?[೨೧]

ಇಂಥ ಚಿಂತನೆಯಿಂದಲೇ ನಿತ್ಯಸತ್ಯಗಳನ್ನು ಅನುಭವಿಸುವ, ದರ್ಶಿಸುವ ಲೋಕವೊಂದು ಈ ಕಾವ್ಯದಲ್ಲಿ ಮಡುಗಟ್ಟಿದೆ. ಇದೇ ಕುವೆಂಪು ಸಂವೇದನೆಯ ಪರಿಸರ ವಿಜ್ಞಾನೀಯ ದೃಷ್ಟಿ. ಅಂದರೆ ಆಧುನಿಕ ಭೌತವಿಜ್ಞಾನಿಯಾದ ಫ್ರಿಜೊ ಕಾಪ್ರಾ ಶೋಧಿತ "ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡಿರುವ ಚರಾಚರ ಜಗತ್ತಿನ ಸಮಗ್ರ ದೃಷ್ಟಿ"ಯೊಂದಿಗೆ ಈ ಚಿಂತನೆಯು ಚಲಿಸಬಲ್ಲದು. ದೇಕಾರ್ತೆ ಮತ್ತು ನ್ಯೂಟನ್ ಹೊಂದಿದ್ದ ಯಾಂತ್ರಿಕ ದೃಷ್ಟಿಗಳು ಹಿಂದೆ ಸರಿದು ಭಾರತೀಯ ಆರ್ಷೇಯ ಸಂಪ್ರದಾಯದ ಅನುಭಾವಿಗಳ ಚಿಂತನೆಯ ಅಖಂಡದೃಷ್ಟಿಯೊಂದನ್ನು ಆಧುನಿಕ ಸಂದರ್ಭದಲ್ಲಿ ಕುವೆಂಪು ಸಂವೇದನೆ ತನ್ನ ಕೃತಿ ಸಮೂಹಗಳಲ್ಲಿ ಪುನರ್‌ಶೋಧಿಸಿಕೊಂಡಿದ್ದೇ ನಮ್ಮ ಕಾಲದ ಬಹುದೊಡ್ಡ ದಾರ್ಶನಿಕತೆಯೆಂದರೆ ಉತ್ಪ್ರೇಕ್ಷೆಯ ಮಾತಲ್ಲ.

ಪಾಶ್ಚಾತ್ಯ ಸಂಸ್ಕೃತಿಯ ಕಾರ್ಟೀಶಿಯನ್ ದೃಷ್ಟಿಕೋನಕ್ಕೆ ಮುಖಾಮುಖಿಯೆಂಬಂತೆ ಕುವೆಂಪು ಶೋಧಿತ ಪೂರ್ಣದೃಷ್ಟಿ ಅಥವಾ ಪರಿಸರ ವಿಜ್ಞಾನೀಯ ದೃಷ್ಟಿ ಮುಖಾಮುಖಿಯಾಗುತ್ತದೆ. ಫ್ರಿಜೊಕಾಪ್ರಾ ಹೇಳುವಂತೆ "ಇಂದು ನಾವು ಜಾಗತಿಕವಾಗಿ ಎಲ್ಲವೂ ಒಂದಕ್ಕೊಂದು ಸಂಬಂಧಿಸಿಕೊಂಡಿರುವ ವಿಶ್ವದಲ್ಲಿ ಬದುಕುತ್ತಿದ್ದೇವೆ ; ಮತ್ತು ಇಂಥ ಜಗತ್ತಿನಲ್ಲಿ ಜೈವಿಕ, ಮಾನಸಿಕ, ಸಾಮಾಜಿಕ ಮತ್ತು ಪರಿಸರಕ್ಕೆ ಸಂಬಂಧಪಟ್ಟ ಎಲ್ಲಾ ಸಂಗತಿಗಳು ಪರಸ್ಪರ ಒಂದನ್ನೊಂದು ಅವಲಂಬಿಸಿವೆ. ಈ ಭೌತಪ್ರಪಂಚವನ್ನು ಸಮರ್ಥವಾಗಿ ವಿವರಿಸಬೇಕಾದರೆ ಪರಿಸರ ವಿಜ್ಞಾನೀಯ ದೃಷ್ಟಿಕೋನ ಅಗತ್ಯವೆನ್ನುತ್ತಾರೆ."[೨೨] ಈ ದೃಷ್ಟಿಕೋನ ಭಾರತೀಯ ಆಧ್ಯಾತ್ಮದರ್ಶನದಿಂದ ಶೋಧಿತಗೊಂಡಿದೆ.

ಬ್ರಹ್ಮಸತ್ತೆಯನಾ ಪರಬ್ರಹ್ಮ ಸತ್ತೆಯಿಂ
ಮಾತ್ರಮೆಯೆ ದರ್ಶಿಸುತಿದಂ ಮಿಥ್ಯೆಯೆಂಬುದೇಂ
ಪೂರ್ಣ ಸತ್ಯಮೆ? ಯೋಗವಿಜ್ಞಾನಮೊಪ್ಪದು ಕಣಾ!
ಪೂರ್ಣಮದು ; ಪೂರ್ಣಮಿದು ; ಪೂರ್ಣದಿಂ ಬಂದುದೀ
ಪೂರ್ಣಮಾ ಪೂರ್ಣದಿಂ ಪೂರ್ಣಮಂ ಕಳೆದೊಡಂ

ಪೂರ್ಣಮೆಯೆ ತಾನುಳಿವುದಾ ಪ್ರಜ್ಞೆಗದುವಿದುಂ
ಸರ್ವಮುಂ ಸತ್ಯದಾವಿಷ್ಕಾರ ವಿನ್ಯಾಸಗಳ್.[೨೩]

ಕುವೆಂಪು ಅವರ ಈ ಗಣಿತ ಉಪನಿಷತ್ ಮಂತ್ರಗಳಿಂದ ಶೋಧಿತಗೊಂಡದ್ದು. ನಮ್ಮ ಸುತ್ತಲಿನ ನಿಸರ್ಗವನ್ನು ಅಖಂಡವಾಗಿ ನೋಡುವ ವಿಶ್ವದೃಷ್ಟಿಯ, ಪೂರ್ಣದೃಷ್ಟಿಯ, ಆಧುನಿಕ ಪರಿಸರ ವಿಜ್ಞಾನೀಯ ದೃಷ್ಟಿಯ ಒಳನೋಟವೇ ಆಗಿದೆ. ಸಮಗ್ರ ವಿಶ್ವವು ಅಭೇದ್ಯವೂ, ಅಖಂಡವೂ, ಚಲನಶೀಲವೂ, ಜೈವಿಕವೂ, ಆಧ್ಯಾತ್ಮಿಕವೂ ಮತ್ತು ಭೌತವಸ್ತುವೂ ಆಗಿ ಪರಸ್ಪರ ಹೆಣಿಗೆಯೊಂದಿಗೆ ಚಲಿಸುವ ತಾತ್ವಿಕತೆಯನ್ನು ಈ ಕಾವ್ಯ ದರ್ಶಿಸುತ್ತದೆ. ಹಾಗಾಗಿಯೇ ಶ್ರೀ ರಾಮಾಯಣ ದರ್ಶನಂ ಏಕಕಾಲಕ್ಕೆ ಆದಿ ಅನಾದಿ ಕಾಲಗಳ ಕಾವ್ಯವಾಗಿ ವಿಕಸನಗೊಳ್ಳುತ್ತದೆ. ಇದನ್ನೇ ಕುವೆಂಪು ಅವರ ಈ ಕೆಳಗಿನ ಮಾತುಗಳು ಸ್ಪಷ್ಟಪಡಿಸುತ್ತವೆ. ಅವರ ಮಾತುಗಳ ಉಲ್ಲೇಖದೊಂದಿಗೆ ಆದಿ ಅನಾದಿ ಕಾಲಗಳ ಪರಿಸರ ವಿಜ್ಞಾನೀಯ ದೃಷ್ಟಿಯೊಂದು ಪ್ರಕಟವಾಗಿರುವುದನ್ನು ಕಾಣಬಹುದು.

> ಮಾನವನ ಬ್ರಾಹ್ಮೀ ಪ್ರಜ್ಞಾವಿಕಾಸಕ್ಕೆ ಪೂರ್ವಭಿತ್ತಿ ರೂಪವಾಗಿರುವ ಪೂರ್ಣದೃಷ್ಟಿಯ ರಸಸ್ಯಂದಿಯಾದ ಪ್ರತಿಪಾದನೆ. ತತ್ತ್ವದ ಮಟ್ಟದಲ್ಲಿ ಭಾರತೀಯ ಸಂಸ್ಕೃತಿ ಇದನ್ನು ಒಂದಲ್ಲ ಒಂದು ರೀತಿಯಲ್ಲಿ ವೇದೋಪನಿಷತ್ತುಗಳ ಕಾಲದಿಂದಲೂ ಸಾರುತ್ತಾ ಸಾಧಿಸುತ್ತಾ ಬಂದಿದೆ. ಅದನ್ನು ಆಯಾ ಯುಗದ ಧರ್ಮವಿಕಾಸದ ಸ್ವರೂಪಾನುಗುಣವಾಗಿ ಸಂಪೂರ್ಣವಾಗಿ ಸಾಧಿಸಿ, ಸಿದ್ಧಪುರುಷರಾಗಿ, ವಿಶ್ವಮಾನವರಾಗಿ, ಪೃಥ್ವೀತತ್ತ್ವಕ್ಕೆ ಪರಾಶಕ್ತಿಯ ಆವಾಹನೆ ಮಾಡಿ, ಅಲ್ಪಮಾನವ ಭೂಮಮಾನವನಾಗಿ ಪರಿವರ್ತನಹೊಂದುವುದಕ್ಕೆ ನೆರವಾಗಿ ಹೋದ ಋಷಿ ರಸ ಋಷಿವರೇಣ್ಯರೂ ಅನೇಕರಿದ್ದಾರೆ. ಈ ವಿಶ್ವಮಾನವ ರಚನೆಯೆ ನಮ್ಮ ಇತರ ಎಲ್ಲ ಉದ್ಧಾರೋದ್ಯಮಗಳ ಮತ್ತು ಸುಖ ಸಾಧನೆಯ ಸಾಹಸಗಳ ಅಂತರಾತ್ಮದಲ್ಲಿ ಅಡಗಿರುವ ಪ್ರಚ್ಛನ್ನ ಪ್ರೇರಣೆ. ಈ ಪೂರ್ಣದೃಷ್ಟಿ ದೇಶ ಕಾಲ ಪೂರ್ವ ಪಶ್ಚಿಮ ಮತ ಜಾತಿ ವರ್ಣಪಕ್ಷ ಪಂಥ ಸಿದ್ಧಾಂತಾದಿ ಎಲ್ಲ ತೆರನಾದ ಸೀಮೆಗಳನ್ನೂ ಉಲ್ಲಂಘಿಸಿ ಅತೀತವಾಗಿರುತ್ತದೆ, ಅನಿಕೇತನವಾಗಿರುತ್ತದೆ, ನಿತ್ಯವಾಗಿರುತ್ತದೆ. ಈ ಪೂರ್ಣದೃಷ್ಟಿ ಜನಾಂಗ ಜನಾಂಗಗಳ ನಡುವೆ ಗೋಡೆ ಕಟ್ಟಿಕೊಂಡು ನಿಂತಿರುವ ರಾಷ್ಟ್ರೀಯತೆಯನ್ನು ಉತ್ತರಿಸಿ, ಮಾನವನಿಂದ ಮಾನವನನ್ನು ಪ್ರತ್ಯೇಕಿಸುತ್ತಿರುವ ಕ್ಷುದ್ರಭೇದಗಳನ್ನು ಇಲ್ಲಗೈದು, ಶಾಶ್ವತವೂ ಸರ್ವಸಂಪೂರ್ಣತಾಸಿದ್ಧಿಕಾರಕವೂ ಆಗಿರುವ ನಿತ್ಯ ಶಾಂತಿಯ ಕಡೆಗೆ ಜಗತ್ತನ್ನು ಒಯ್ಯುತ್ತದೆ.[೨೪]

೬. ನಗರ ಹಾಗೂ ಅರಣ್ಯ ಸಂಸ್ಕೃತಿಯ ಸಂಘರ್ಷ

ನಿಸರ್ಗ ಸೌಂದರ್ಯಕ್ಕೆ ವಿರುದ್ಧವಾದ ನಿಸರ್ಗದ ನಡುವಿನ ರೌದ್ರಾನುಭವವನ್ನು ಮುಖಾಮುಖಿಯಾಗಿಸುವುದು ಈ ಕಾವ್ಯದ ಅನೇಕ ಕಡೆಗಳಲ್ಲಿ ಕಾಣಿಸುತ್ತದೆ. ಸೃಷ್ಟಿ ಸೌಂದರ್ಯೋಪಾಸನೆಯ ಅನುಭವದಲ್ಲಿದ್ದ ರಾಮಲಕ್ಷ್ಮಣರಿಗೆ ಅರಣ್ಯದ ರೌದ್ರತೆಯ ಮುಖಗಳು ರಾಕ್ಷಸರೊಂದಿಗಿನ ಸೆಣಸಾಟಗಳೊಂದಿಗೆ ಮುಖಾಮುಖಿಯಾಗುವ ಕ್ರಮವು

ಮಾರ್ಮಿಕವಾದುದು. ತಾಟಕಿವನದ ಪ್ರವೇಶ, ಅಲ್ಲಿನ ಅನುಭವ, ತಾಟಕಿಯೊಂದಿಗಿನ ಸಾಂಸ್ಕೃತಿಕ ಸಂಘರ್ಷದ ಕಥನಗಳಾಗಿಯೂ ಮಹತ್ವ ಪಡೆದಿದೆ.

ಅರಣ್ಯ ಸಂಸ್ಕೃತಿಯ ಒಳಹೊಕ್ಕು ತಪೋವನಗಳನ್ನಾಗಿ ನಿರ್ಮಾಣ ಮಾಡಿಕೊಂಡ ಋಷ್ಯಾಶ್ರಮಗಳೊಂದಿಗೆ ರಾಕ್ಷಸಕುಲಗಳು ನಡೆಸುವ ಯುದ್ಧಗಳು ನಗರ ಹಾಗೂ ಅರಣ್ಯ ಸಂಸ್ಕೃತಿಯ ನಡುವಿನ ಸಂಘರ್ಷವೇ ಆಗಿದೆ. ಋಷ್ಯಾಶ್ರಮಗಳ ರಕ್ಷಣೆಗಾಗಿ ಕಾಡನ್ನು ಹೊಕ್ಕ ರಾಮಲಕ್ಷ್ಮಣರು ನಡೆಸುವ ಸಂಘರ್ಷ, ಯುದ್ಧಗಳು, ಅದಕ್ಕಾಗಿ ಅವರು ಪಟ್ಟ ಪಾಡುಗಳು, ಸೀತಾಪಹರಣ, ರಾವಣನೊಂದಿಗಿನ ಯುದ್ಧ ಹಾಗೂ ಭೀಕರತೆಗಳ ಸಂಘರ್ಷವನ್ನು ಮುಖಾಮುಖಿಯಾಗಿಸುತ್ತವೆ. ಅಂದರೆ ಈ ಸಂಘರ್ಷ ಆರ್ಯ ಮತ್ತು ದ್ರಾವಿಡರ ಸಂಘರ್ಷವಾಗಿಯೂ ಕಾಣಿಸುತ್ತದೆ. ಅಲ್ಲದೆ ಅನ್ಯ ಮತ್ತು ಸ್ಥಳೀಯ ಸಂಘರ್ಷದ ಸಂಕೇತವೂ ಹೌದು.

ಆರ್ಯರು ದಕ್ಷಿಣದವರನ್ನು ವೈರಿಗಳೆಂದು, ಅನಾರ್ಯರೆಂದು, ದುಷ್ಕರ್ಮಿಗಳೆಂದು, ಋಷಿಗಳಿಗೆ ಕಂಟಕರೆಂದು ಭಾವಿಸಿ ದುಷ್ಟಶಿಕ್ಷಣವೆಂದು ಬಗೆದು ರಾಕ್ಷಸ ಕುಲಗಳ ಮೇಲೆ ನಡೆಸುವ ಅನ್ಯಾಕ್ರಮಣವು ಸಾಮ್ರಾಜ್ಯಶಾಹಿ ಧೋರಣೆಯನ್ನೇ ನೆನಪಿಸುತ್ತದೆ. ಇಂಥ ಸಂಘರ್ಷದ ನೆಲೆಯನ್ನು 'ಅತ್ರಿಯಿಂದಗಸ್ತ್ಯಂಗೆ' ಸಂಚಿಕೆಯಲ್ಲಿನ ಸೀತೆ ಮತ್ತು ರಾಮನ ಸಂಭಾಷಣೆಯಲ್ಲಿ ಕಾಣಬಹುದು. ಇಂಥ ಸಂಘರ್ಷವನ್ನು ಕುವೆಂಪು ನಿರ್ವಹಿಸಿರುವ ಕ್ರಮವು ಕುತೂಹಲದಿಂದ ಕೂಡಿದೆ. ಪ್ರಥಮ ಮುಂಗಾರ್ ಮಳೆಯ ಪರಿಣಾಮವಾಗಿ ಮಲೆನಾಡಿನ ವೈಭವದ ಸೌಂದರ್ಯಕ್ಕೆ ಸೋತ ಸೀತೆಯ ಪ್ರಶ್ನೆ ಮತ್ತು ರಾಮನ ಉತ್ತರಗಳ ನಿರ್ವಹಣೆಯ ಈ ಕೆಳಗಿನ ಭಾಗವನ್ನು ಇಲ್ಲಿ ವಿವೇಚಿಸುವುದು ಸೂಕ್ತವೆಂದು ಕಾಣುತ್ತದೆ.

> "ಬಗೆಯೊಂದು ಶಂಕೆಯನರುಹಿದಪೆನಾಂ,
> ಹೃದಯಪ್ರಿಯ, ಬಾಲಭಾಷಿತವನಾದರದಿಂದೆ
> ಕೇಳಿ ಕರುಣಿಪುದೆನಗೆ : ಋಷಿಗಳ್ಗೆ ನುಡಿಗೊಟ್ಟೆಯಯ್ ;
> ರಾಕ್ಷಸ ವಧೆಗೆ ಪೂಣ್ದೆಯಯ್ ; ವೈರಮಂ ವ್ರತವಾಂತೆಯಯ್,
> ಹೇ ಸ್ನೇಹನಿಧಿ ! ಒರ್ವನನ್ಯಾಯಿಯಾದೊಡೇಂ
> ಸರ್ವರಾಕ್ಷಸರೆಂತು ಸಂಹಾರಕರ್ಹರಯ್?
> ಕ್ಷಾತ್ರಕೇಂ ಕ್ರೌರ್ಯಂ ಕಿರೀಟಮೇ?"
>
> ....
>
> "ತೊದಲಾಗುತಿದೆ
> ನನ್ನ ನಾಲಗೆ ನಿನ್ನ ದನಿಗೇಳ್ದು, ಮನದನ್ನ
> ಪುಣ್ಯಾಶ್ರಮಂಗಳಂ ನೆವವೊಡ್ಡುತೈತಂದು
> ತಮ್ಮ ನೆಲಮಂ ಸುಲಿಯುತೊಯ್ಯನೆ ವಸತಿಗೈದು,
> ದಿನದಿನಕೆ ತಮ್ಮ ನೊತ್ತುವರಾರ್ಯರಾದೊಡಂ
> ದಸ್ಯುಗಳೆ ದಿಟಮಲ್ತೆ?"
>
> "ತಿಮಿರಕ್ಕೆ ರವಿ ದಸ್ಯು
> ಜ್ಞಾನಮಜ್ಞಾನಕ್ಕೆ ದಸ್ಯು, ಮಾಯೆಯನಳಿಸಿ

ಮನುಜಹೃದಯವನಾಕ್ರಮಿಸುತಾತ್ಮಮಂ ತನ್ನ
ಕೃಪೆಗುಯ್ವ ಪರಮಾತ್ಮನುಂ ದಸ್ಯು. ನಾಂ ನಿನಗೆ
ನೀನೆನಗೆ ದಸ್ಯು. ಕೇಳಂತೆವೋಲಾರ್ಯರುಂ
ದಸ್ಯುಗಳ್ ದಂಡಕಾರಣ್ಯ ದಕ್ಷಿಣ ಜನದ
ನಯಕೆ. ಪಿರಿತನಕೆ ಮಣಿವುದೆ ಕಿರಿಯ ಸಂಸ್ಕೃತಿಗೆ
ಮೇಲ್ಮೆ ಪುಣ್ಯಂ ವಿಪತ್ತಿನ ತೆರದಿನೋರೊರ್ಮೆ
ದೈತ್ಯನೋಲಾಕ್ರಮಿಪುದಾತ್ಮಮಂ ಜನತೆಯಂ
ನಾಡೂರ್ಗಳಂ. ಕೃಪಾಬಾಹು ನೀಡಲ್ಕದರ
ನೆಳಲಲ್ತೆ ಪೇಳ್ ರಾಹು!"[೨೫]

ಋಷ್ಯಾಶ್ರಮಗಳ ರಕ್ಷಣೆಗಾಗಿ ರಾಕ್ಷಸವಧೆಗೆ ಪ್ರತಿಜ್ಞೆ ಮಾಡಿರುವ ರಾಮನ ಧೋರಣೆಯನ್ನೇ ಸೀತೆ ಇಲ್ಲಿ ಪ್ರಶ್ನಿಸುತ್ತಾಳೆ. ಒಬ್ಬನ ಅನ್ಯಾಯಕ್ಕೆ ಸಮಸ್ತ ರಾಕ್ಷಸರ ಸಂಹಾರ ಹೇಗೆ ಅರ್ಹ? ಕ್ಷತ್ರಿಯ ಕುಲಕ್ಕೆ ಕ್ರೌರ್ಯವೇ ಕಿರೀಟವೇನು? ಎಂಬ ಪ್ರಶ್ನೆಯಲ್ಲಿಯೇ ಅಂಥ ಧೋರಣೆಯ ಬಗೆಗೆ ವಿರೋಧ ವ್ಯಕ್ತವಾಗುತ್ತದೆ. ಇಂಥ ವಿರೋಧದ ಪ್ರಶ್ನೆಗಳಿಂದ ಬಿಡಿಸಿಕೊಳ್ಳಲು ಕುವೆಂಪು ಪ್ರತಿಪಾದಿಸುವ ಪೂರ್ಣದರ್ಶನತತ್ವವನ್ನು ಈ ಉದ್ಧರಣೆಯಲ್ಲಿಯೇ ಕಾಣುತ್ತೇವೆ. ಮುಗ್ಧ, ಸಾತ್ವಿಕ ವ್ರತಿಗಳಿಗೆ ಸಂಕಟವನ್ನುಂಟು ಮಾಡುವ ದುಷ್ಟ ಹಿಂಸೆಯನ್ನು ಬೆಂಬಲಿಸುವ ಶಕ್ತಿಯನ್ನು ಕೊನೆಗಾಣಿಸುವುದನ್ನು ದೀಕ್ಷೆ ಮತ್ತು ಕರ್ತವ್ಯವನ್ನಾಗಿಸಿಕೊಂಡ ರಾಮನ ಪ್ರಜ್ಞೆ ರಾಕ್ಷಸ ಕುಲದ ನಾಶದ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಆರ್ಯರು ಪುಣ್ಯಾಶ್ರಮಗಳನ್ನು ನೆಪಮಾಡಿಕೊಂಡು, ಹಾಗೆಯೇ ಅನ್ಯರ ನೆಲೆಗಳನ್ನು ಅಪಹರಿಸಿ ಅವರ ನೆಲೆಗಳನ್ನು ತಮ್ಮವನ್ನಾಗಿಸಿಕೊಂಡು ದಿನದಿನವು ಮೂಲನಿವಾಸಿಗಳನ್ನು ಹೊರದಬ್ಬುವ ಇವರು ನಿಜವಾದ ವೈರಿಗಳಲ್ಲವೆ ಎಂಬ ಸೀತೆಯ ಪ್ರಶ್ನೆ ರಾಮನ ವಾದಕ್ಕೆ ಪ್ರತಿವಾದವಾಗಿ ಕಾಣಿಸುತ್ತದೆ.

ಆರ್ಯರಾದರಿಗೆಮ್ಮ ಕೂಡೆ ಕೊಳುಕೊಡೆ ನಂಟು
ಪೇಸಂತೆ ! ನಾವು ರಾಕ್ಷಸರಂತೆ ! ನೀನರಿಯೆ
ನಮ್ಮನೆಂತವರು ಬಣ್ಣಿಪರೆಂಬುದಂ ! ದಶಶಿರಂ
ಎಂಬೆನ್ನ ಬಿರುದನವರೀರ್ಯೆದು ತಲೆಯೆಂದು
ಚಿತ್ರಿಪರ್! ದಶರಥನನಂತು ನಾಂ ಚಿತ್ರಿಪೆವೆ?
ಪತ್ತು ತೇರೊಳ್ ಪತ್ತು ಸೂಳೆರಡು ಕಾಲ್ಗಳನಿಟ್ಟು
ಚರಿಸುವೊಲ್ ಬಣ್ಣಿಪ್ಪೆವೇಂ? ನಮ್ಮ ಪೆಣ್ಗಳನವರ್
ಕೋರೆಗಳ್ ಕೋಡುಗಳ್ವೆರಸಿ ಬರೆದಪರಂತೆ!
ನಾವು ನರರಂ ಕಡಿದು, ಬಿಸಿನೆತ್ತರಂ ಕುಡಿದು
ಬರ್ದುಕುವವರಂತೆ! ಸಂಸ್ಕೃತಿ ನಮ್ಮೊಳಿನಿಸಾನುಮೇನ್
ಇಲ್ಲಂತೆ! ರಾಕ್ಷಸ ಕುಲದ ನಾವು ರಾಕ್ಷಸರೆ
ದಿಟಮಂತೆ![೨೬]

'ಲಂಕೇಶನೊಲಿಸಿದನು ಮಾರೀಚನಂ' ಸಂಚಿಕೆಯ ರಾವಣನ ಮತ್ತು ಮಂಡೋದರಿಯ ಈ ಮೇಲಿನ ಸಂಭಾಷಣೆಯಲ್ಲಿಯೂ ಆರ್ಯ - ದ್ರಾವಿಡರ ಮಾತ್ಸರ್ಯದ ಕಿಡಿಗಳನ್ನೇ ಕಾಣುತ್ತೇವೆ. ಆರ್ಯರಿಗೆ ದ್ರಾವಿಡರೊಂದಿಗಿನ ಸ್ನೇಹ ಸಂಬಂಧಗಳ ಬಗೆಗಿನ ತಿರಸ್ಕಾರ, ದ್ರಾವಿಡರನ್ನು ರಾಕ್ಷಸರೆಂದು ಸಂಬೋಧಿಸುವುದು, ದಶಶಿರನನ್ನು ಹತ್ತು ತಲೆಯವನೆಂದು ವರ್ಣಿಸುವುದು, ದ್ರಾವಿಡರ ವೇಷ, ಭೂಷಣ, ಆಕಾರಗಳ ಬಗೆಗಿನ ವಿಕೃತ ಕಲ್ಪನೆಗಳು, ಮನುಷ್ಯರನ್ನೇ ಕಡಿದು ರಕ್ತವನ್ನು ಕುಡಿದು ಬದುಕುತ್ತಾರೆಂಬ ಕಲ್ಪನೆಗಳು, ಸಂಸ್ಕೃತಿ ಹೀನರೆಂಬ ನಂಬಿಕೆ ಮೊದಲಾದ ಆರ್ಯರ ಅಪನಂಬಿಕೆಗಳ ಬಗೆಗೆ ರಾವಣನಾಡುವ ಮಾತಿನ ಕಿಡಿಗಳು ಆರ್ಯ ದ್ರಾವಿಡರ ಮಾತ್ಸರ್ಯದ ಸಂಘರ್ಷವನ್ನು ಧ್ವನಿಸುತ್ತವೆ.

ಅಡಿಟಿಪ್ಪಣಿ :

೧. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಗದ್ಯ, ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೩, ಪು. ೩೮೩ -೩೮೪
೨. - ಅದೇ - ; ಕುವೆಂಪು ಸಮಗ್ರ ಗದ್ಯ ಸಂಪುಟ ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೯೦೮.
೩. - ಅದೇ - ; ಕುವೆಂಪು ಸಮಗ್ರ ಗದ್ಯ, ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೩, ಪು. ೧೪.
೪. - ಅದೇ - ; ಕುವೆಂಪು ಸಮಗ್ರ ಗದ್ಯ, ಸಂಪುಟ ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೮೪೮.
೫. - ಅದೇ - ; ಕುವೆಂಪು ಸಮಗ್ರ ಗದ್ಯ, ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೩, ಪು. ೩೪.
೬. ಕುವೆಂಪು ; ಮಹಾಛಂದಸ್ಸಿನ ಶ್ರೀ ರಾಮಾಯಣ ದರ್ಶನಂ, ಉದಯರವಿ, ವಾಣಿವಿಲಾಸಪುರಂ, ಮೈಸೂರು, ಪು. ೨-೩.
೭. - ಅದೇ -, ಪು. ೫.
೮. - ಅದೇ -, ಪು. ೯-೧೦.
೯. - ಅದೇ -, ಪು. ೩೧-೩೨.
೧೦. - ಅದೇ -, ಪು. ೮೧.
೧೧. - ಅದೇ -, ಪು. ೧೨೫.
೧೨. - ಅದೇ -, ಪು. ೧೩೩.
೧೩. - ಅದೇ -, ಪು. ೧೪೪.
೧೪. - ಅದೇ -, ಪು. ೧೪೯-೧೫೧.
೧೫. - ಅದೇ -, ಪು. ೧೭೪-೧೭೫.
೧೬. - ಅದೇ -, ಪು. ೩೪೩.
೧೭. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಗದ್ಯ, ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೩, ಪು. ೩೮೨-೩೮೩.
೧೮. - ಅದೇ -, ಪು. ೩೮೬.
೧೯. - ಅದೇ -, ಪು. ೩೮೬-೩೮೭.
೨೦. ಕುವೆಂಪು ; ಮಹಾಛಂದಸ್ಸಿನ ಶ್ರೀ ರಾಮಾಯಣ ದರ್ಶನಂ, ಉದಯರವಿ, ವಾಣಿವಿಲಾಸಪುರಂ, ಮೈಸೂರು, ಪು. ೮೭೫-೮೭೬.
೨೧. - ಅದೇ -, ಪು. ೩೨೬.
೨೨. ಫ್ರಿಜೋ ಕಾಪ್ರಾ ; ಸತ್ಯದ ನವದರ್ಶನ, ನಿ. ಮುರಾರಿ ಬಲ್ಲಾಳ (ಅನು), ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩, ಪು. ೨-೩.
೨೩. ಕುವೆಂಪು ; ಮಹಾಛಂದಸ್ಸಿನ ಶ್ರೀ ರಾಮಾಯಣ ದರ್ಶನಂ, ಉದಯರವಿ, ವಾಣಿವಿಲಾಸಪುರಂ, ಮೈಸೂರು, ಪು. ೩.
೨೪. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಗದ್ಯ, ಸಂಪುಟ ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೧೬೮.
೨೫. ಕುವೆಂಪು ; ಮಹಾಛಂದಸ್ಸಿನ ಶ್ರೀ ರಾಮಾಯಣದರ್ಶನಂ, ಉದಯರವಿ, ವಾಣಿವಿಲಾಸಪುರಂ, ಮೈಸೂರು, ಪು. ೧೮೫-೧೮೬.
೨೬. - ಅದೇ -, ಪು. ೨೧೩-೨೧೪.

ಅಧ್ಯಾಯ – ೬

ನಾಟಕಗಳು

೧. ಪರಿಸರ ಸ್ನೇಹಿ ತತ್ವ

೨. ಯುದ್ಧ, ವಿನಾಶ, ಪರಿಸರ ಹೊಂದಾಣಿಕೆ

೩. ಅಹಿಂಸೆ ಹಾಗೂ ಕರುಣೆಯ ತತ್ವ

೪. ಜೀವ ಅಸಮಾನತೆಯ ನೆಲೆ

೫. ಪ್ರಕೃತಿ ಮತ್ತು ಮನುಷ್ಯನ ಅವಿನಾಭಾವ ಸಂಬಂಧ

೬. ಪರಿಸರ ಸಹೋದರತ್ವ ಮತ್ತು ಮೋಡಣ್ಣನ ತಮ್ಮ

"ಬಿಡೊ ಬಿಡೊ ನಿನ್ನೀ ನುಣ್ಣನೆ ನುಡಿಗಳ :
ಕಡಿ ಕಡಿ ಎನ್ನುವೆ ತಂದೆಗೆ ಬುಡಗಳ
ಬೆಂಕಿಯ ಬುಡಗಳಿಗಿಡಿಸುವನು,
ಧಗ ಧಗ ಉರಿಸುವನು!
ಅಂಕೆಯೆ ಇಲ್ಲದೆ ಕಡಿಸುವನು,
ಸೊಬಗನೆ ಕೆಡಿಸುವನು!
ಸೊಟ್ಟನೆ ಮರಗಳನೊಡಿಸುವನು!
ಕಟ್ಟಿಗೆಯಂದದಿ ಸುಡಿಸುವನು!
ದಟ್ಟನೆ ಎನ್ನನು ಕಡಿ ಕಡಿದು
ಮಟ್ಟವ ಮಾಡುವರಡಿಗಡಿಗೆ."

– ಕುವೆಂಪು

ನಾಟಕಗಳು

೧. ಪರಿಸರ ಸ್ನೇಹಿ ತತ್ವ

> ಸೂರ್ಯಾಸ್ತದ ಅದ್ಭುತ ದೃಶ್ಯವನ್ನೊ ಚಂದ್ರನ ಸೊಗಸನ್ನೊ ನೋಡಿದಾಗ ನನ್ನ ಆತ್ಮದಲ್ಲಿ ಸೃಷ್ಟಿಕರ್ತನ ವಿಚಾರದಲ್ಲಿ ಭಕ್ತಿಭಾವ ಹುಟ್ಟುತ್ತದೆ. ಎಲ್ಲ ಸೃಷ್ಟಿಯಲ್ಲಿಯೂ ಜಗದೀಶ್ವರನನ್ನೂ ಅವನ ದಯೆಯನ್ನೂ ನಾನು ಕಾಣಲು ಯತ್ನಿಸುತ್ತೇನೆ.[೧]

ಗಾಂಧಿಯವರ ಈ ಮೇಲಿನ ಮಾತುಗಳು ಪ್ರಕೃತಿಯಲ್ಲಿ ದೈವವನ್ನು ಸಾಕ್ಷಾತ್ಕರಿಸಿಕೊಳ್ಳುವ ಪ್ರಕ್ರಿಯೆಯನ್ನು ಪ್ರಸ್ತುತಪಡಿಸುತ್ತವೆ. ಮಾನವ ನಿರ್ಮಿತ ಗುಡಿ, ಗೋಪುರಗಳು, ಆಚರಣೆಗಳನ್ನು ನಿತ್ಯ ಸೌಂದರ್ಯದಿಂದ ಶೋಭಿಸುವ ಪ್ರಕೃತಿಯ ವಸ್ತುಗಳೊಂದಿಗೆ ಹೋಲಿಸಿದರೆ ಕೃತಕವಾಗಿ ಕಾಣುತ್ತವೆ. ಇದು ಪ್ರಕೃತಿಯ ಎಲ್ಲ ಸೌಂದರ್ಯವನ್ನು ದೈವದ ಮಟ್ಟಕ್ಕೇರಿಸುವ ಗೌರವದ ಸಂಕೇತವೂ ಆಗಿದೆ.

ಕುವೆಂಪು ಅವರ ಜಲಗಾರ ನಾಟಕ (೧೯೨೮) ಇಂಥ ಪರಿಸರದಲ್ಲಿ ದೈವವನ್ನು ಕಾಣುವ ಕೇಂದ್ರ ನೆಲೆಯಿಂದ ಕೂಡಿದೆ. ಪ್ರಕೃತಿ ಮತ್ತು ಮಾನವ ನಿರ್ಮಿತ ಆಚಾರ ವಿಚಾರಗಳ ಯಾಂತ್ರಿಕತೆ, ಮೇಲು - ಕೀಳಿನ ಕಲ್ಪನೆಗಳ ಅನೈತಿಕತೆಯನ್ನು ಪ್ರಶ್ನಿಸುತ್ತದೆ. ದೈವ - ಮನುಷ್ಯ ಸಂಬಂಧಗಳು, ಪ್ರಕೃತಿ - ಮನುಷ್ಯ ಸಂಬಂಧಗಳ ಅಭಿನ್ನತೆಯ ಪರಿಸರ ತತ್ವವನ್ನು ಪ್ರತಿಪಾದಿಸುತ್ತದೆ. ಭೂದೇವಿ, ಶಿವ, ಜಲಗಾರ, ರೈತ ಪ್ರಕೃತಿಯೊಂದಿಗೆ ಉಳಿಸಿಕೊಂಡಿರುವ ಸಂಬಂಧಗಳನ್ನು ಮುಖಾಮುಖಿಯಾಗಿಸುತ್ತಾ ಮಾನವ ನಿರ್ಮಿತ ಸಮಾಜದಲ್ಲಿ ಸೃಷ್ಟಿಗೊಂಡಿರುವ ಅಂತರಗಳ ಪ್ರಕ್ರಿಯೆಯನ್ನು ವಿಡಂಬಿಸುತ್ತದೆ.

ಜಲಗಾರ ನಾಟಕ ಏಕಕಾಲಕ್ಕೆ ಪರಿಸರ ಸ್ನೇಹಿ ತತ್ವವನ್ನು ಹಾಗೂ ಗಾಂಧೀಜಿ ಪರಿಕಲ್ಪನೆಯ ಸಾಮಾನ್ಯ ಬದುಕಿನ ತತ್ವವನ್ನು ಪ್ರತಿಪಾದಿಸುತ್ತದೆ (ನೋಡಿ ಅಡಿಟಿಪ್ಪಣಿ). ಅಖಂಡ ಜೀವಸೃಷ್ಟಿಗೆ ಚೈತನ್ಯವನ್ನು ನೀಡುವ ಉಷಃಕಾಲದಲ್ಲಿ ಭೂದೇವಿ ಹಾಡುತ್ತಿದ್ದಾಳೆ. ಈ ಹಾಡಿನೊಂದಿಗೆ ನಾಟಕ ಆರಂಭವಾಗುತ್ತದೆ. ಸಮಷ್ಟಿ ಪರಿಸರ ಸೂರ್ಯನ ಆಗಮನದಿಂದ ಚೈತನ್ಯಯುಕ್ತವಾಗಿ ತನ್ನ ಮೋಹಜಾಲದೊಂದಿಗೆ ಕಾಣಿಸಿಕೊಳ್ಳುತ್ತದೆ. ಸೂರ್ಯನನ್ನು ಸ್ವಾಗತಿಸುವ ಜಲಗಾರನ ಹಾಡಿನಲ್ಲಿ ಪರಿಸರದ ಸಂಬಂಧಾಂತರಗಳನ್ನು ಕಾಣುತ್ತೇವೆ. ಸೂರ್ಯನ ಉದಯದೊಂದಿಗೆ ಜೀವ ವೈವಿಧ್ಯತೆಯ ಅಖಂಡ ಚೇತನವೇ ಗೋಚರವಾಗುತ್ತದೆ. ಭೂಮಿ, ಭೂಮಿಯ ಮೇಲಿನ ಜೀವಸಂಪತ್ತು, ಬಾನು, ನೆಲ, ಬನ, ಜಲಗಳ ನಡುವಿನ ಆತ್ಮೀಯ ಸಂಬಂಧಗಳು ಇಲ್ಲಿ ಕಾಣಿಸುತ್ತವೆ. ಅಂಥ ಮಧುರ ಸಂಬಂಧಗಳಲ್ಲಿ ಪರಿಸರ ಸರಪಳಿಯ ತತ್ವವು ಮೈದೋರುತ್ತದೆ.

ರಮ್ಯಾರುಣೋದಯವದೆಂತು ಚೆಲ್ವಾದುದು !
ಸೃಷ್ಟಿಕರ್ತನನೆಮಗೆ ಸಾಧಿಸಲು, ತೋರಿಸಲು,
ಸೃಷ್ಟಿಯಿದು ಸಾಲದೇ ? ಸೃಷ್ಟಿ ಸೌಂದರ್ಯಮಿದು
ಸಾಲದೇ? ಪಳವಾತದೇಕೆ? ಬಿಜ್ಜೆಯೇಂ
ತೋರ್ಕುಮೇ ಎದೆಯರಿವು ತೋರದಾ ಪರಮನಂ?[3]

ಜಲಗಾರನ ಈ ಮಾತುಗಳಲ್ಲಿ ಸೃಷ್ಟಿ ಮತ್ತು ದೈವ ಹಾಗೂ ಮಾನವ ಸಂಬಂಧಗಳನ್ನು ಕಾಣುತ್ತೇವೆ.

ಸಾಮಾನ್ಯವಾಗಿ ಕುವೆಂಪು ಅವರ ಕೃತಿಗಳಲ್ಲಿ ಸೌಂದರ್ಯ ಆರಾಧನೆಯ ನೆಲೆಗಳು ಪ್ರಧಾನವೆಂದು ವಿಮರ್ಶಕರು ಒಟ್ಟಾರೆಯಾಗಿ ವಿವೇಚಿಸಿದ್ದಾರೆ. ಅಷ್ಟೇ ಅಲ್ಲದೆ ಅಂತಹ ನಿರ್ಣಯಗಳಿಗೂ ಎಡೆಮಾಡಿಕೊಟ್ಟಿದ್ದಾರೆ. ಆದರೆ ಕೃತಿಯ ಒಳವಿವರಗಳನ್ನು ಪ್ರವೇಶಿಸಿ ನೋಡಿದರೆ ಈ ಸೌಂದರ್ಯದ ಆರಾಧನೆಯ ಕಲ್ಪನೆ ಸಮಂಜಸವಲ್ಲವೆಂದು ತೋರುತ್ತದೆ.

ಈ ಒಳ ವಿವರಗಳಲ್ಲಿ ಕುವೆಂಪು ಅವರು ಎರಡು ಅವಸ್ಥೆಗಳ ಘರ್ಷಣೆಯ ಸ್ವರೂಪವನ್ನು ಅನಾವರಣಗೊಳಿಸುತ್ತಾರೆ. ನಿಸರ್ಗದ ವ್ಯಾಪಕದ ಚಿತ್ರಗಳನ್ನು ಮನುಷ್ಯ ಸಂದರ್ಭಕ್ಕೆ ಸ್ಥಾನಾಂತರಗೊಳಿಸಿ ಆರಾಧನೆಯ ಕಲ್ಪನೆಯನ್ನು ಕವಿ ಪಲ್ಲಟಗೊಳಿಸಿದ್ದಾರೆ. ಹೀಗಾಗಿ ಪ್ರಕೃತಿ ಕುವೆಂಪು ಅವರಿಗೆ ಒಂದು ಹಂತದಲ್ಲಿ ವಿಶ್ವವ್ಯಾಪಿ ಕಲ್ಪನೆಯಾದರೆ ಅದನ್ನು ಮನುಷ್ಯ ಸಂದರ್ಭಕ್ಕೆ ಸ್ಥಾನಪಲ್ಲಟಗೊಳಿಸುವ ಧೋರಣೆಯನ್ನು ನೋಡುತ್ತೇವೆ. ಇಂಥ ಸಂದರ್ಭಗಳಲ್ಲಿ ನಿಸರ್ಗ ತತ್ವ ಮತ್ತು ಪ್ರಕೃತಿ ತತ್ವ ಇವೆರಡರ ನಡುವಣ ಸಂಬಂಧಗಳ ಪ್ರಶ್ನೆಯನ್ನು ಗಮನಿಸುವುದು ಇಂಥ ಅಧ್ಯಯನಗಳಲ್ಲಿ ತೀರ ಮುಖ್ಯ.

...... ಬನದ ಕೆಂದಳಿರಲ್ಲಿ
ಬಗ್ಗಿಸುವ ಕೋಗಿಲೆಯೆ, ನಿನ್ನ ಪುಗಲಿಂಚರದಿ
ಪರಮವಾಣಿಯ ಕೇಳದವಗೆ ಕಿವಿಯಿದ್ದರೇಂ?
ಎಲೆ ರಮ್ಯವನಗಳಿರ, ನಿಮ್ಮ ಸೌಂದರ್ಯದಲಿ
ಪರಮಾತ್ಮನಂ ಕಾಣದವಗಿದ್ದರೇಂ ಕಣ್ಣೆರಡು?
ಜಗದ ದೇಗುಲದಲ್ಲಿ ಜಗದುದಯ ಕಾರಣನ
ಕಾಣದವನೆಂತು ಕಾಣ್ಬನು ಶಿವನ, ಗುಡಿಯಲ್ಲಿ?
ತಣ್ಗದಿರ ಬೆಂಗದಿರನರಿಲುಗಳೆ ಸೊಡರುಗಳು
ಸುಮಮಾಲೆ ಅಲರುಗಳ ಚೆಲ್ವುತಿರುವಡವಿಗಳು
ಮುನ್ನೀರು ತೊರೆ ಕೆರೆಗಳೇ ಪಂಚಪಾತ್ರೆ
ಬಿತ್ತರದ ಬಾಂದಳವೆ ಗೋಪುರಂ ! ಹೊಳೆಗಳಲಿ
ಹರಿವ ಸಲಿಲವೆ ತೀರ್ಥ ; ಸುಮಗಂಧವೇ ಧೂಪ
ಹಕ್ಕಿಯಿಂಚರವೆ ಸುಸ್ವರ ಮೇಳ ! ಎದೆಯೊಲವೆ
ವರ ಧರ್ಮಶಾಸ್ತ್ರ. ಭಕ್ತಿಯೆ ದಿವ್ಯಾತ್ಮ ಯಜ್ಞ.

ಎದೆಯ ಮಣೆಯೇ ಯಜ್ಞಶಾಲೆ !
ನಲ್ನಾತುಗಳೆ ಮಂತ್ರಘೋಷ ; ನೀತಿಯೆ
ಪರಮ ವೇದ. ತಿರೆಗಿಂತ ದೇಗುಲವದೊಳದೇನ್?[೩]

ಮಾನವ ನಿರ್ಮಿತ ದೇಗುಲದ ನಿರಾಕರಣೆ, ನಿಸರ್ಗದಲ್ಲಿ ಹಾಗು ತನ್ನ ಕಾಯಕದಲ್ಲಿ ದೈವವನ್ನು ಅರಸುವುದು, ಅಂಥ ನಿಸರ್ಗದ ಬಗೆಗಿರುವ ಜಲಗಾರನ ಪ್ರೀತಿಯಲ್ಲಿ ಪರಿಸರ ಸ್ನೇಹಿ ತತ್ವಗಳೇ ಕಾಣಿಸುತ್ತವೆ. ಅಖಂಡ ಪರಿಸರವನ್ನೇ ದೇಗುಲವನ್ನಾಗಿ ಕಾಣುವ ಜಲಗಾರನ ಸಂವೇದನೆ ಪರಿಸರ ಕೇಂದ್ರಿತ ಪ್ರಜ್ಞೆಯಿಂದ ನಿರ್ಮಿತವಾದಂತೆ ಕಾಣುತ್ತದೆ. ಅಂಥ ಪ್ರಜ್ಞೆಯಿಂದಲೇ ಮಾನವ ನಿರ್ಮಿತ ಎಲ್ಲ ಕೃತಕಾಚರಣೆಗಳನ್ನು ಕುವೆಂಪು ಸಂವೇದನೆ ನಿರಾಕರಿಸುವ ಪ್ರಕ್ರಿಯೆಯು ಕಾಣುತ್ತದೆ. ಎರಡನೆ ದೃಶ್ಯದ ಸೂರ್ಯಾಸ್ತಮ ಮತ್ತು ಚಂದ್ರೋದಯಗಳಲ್ಲಿಯೂ ಇಂತಹ ಚಿಂತನೆಯನ್ನೇ ಕಾಣುತ್ತೇವೆ. ಮೊದಲನೆಯ ದೃಶ್ಯದಲ್ಲಿ ಸೂರ್ಯೋದಯದಿಂದ ದರ್ಶನಗೊಳ್ಳುವ ನಿಸರ್ಗ ಸೌಂದರ್ಯದ ಪರಿಚಯವಾದರೆ ಎರಡನೆ ದೃಶ್ಯದಲ್ಲಿ ಸೂರ್ಯಾಸ್ತಮದ ಸಮಯದಲ್ಲಿನ ನಿಸರ್ಗ ಸೌಂದರ್ಯ ಹಾಗೂ ಚಂದ್ರೋದಯದ ಸೌಂದರ್ಯವನ್ನು ಕಾಣುತ್ತೇವೆ.

ಹಾಗೆಯೇ ಮಾನವ ನಿರ್ಮಿತ ಕ್ರೂರ ಮೂಢಾಚಾರಗಳು ಮನುಷ್ಯ - ಮನುಷ್ಯರ ನಡುವೆ ಸೃಷ್ಟಿಸಿದ ಅಂತರಗಳ ನಿರಾಕರಣೆಗೆ ಕುವೆಂಪು ಅವರು ನಿಸರ್ಗ ಸಂಬಂಧಗಳಿಂದಲೇ ಹೊಸ ದರ್ಶನವನ್ನು ಕಟ್ಟಿಕೊಡುತ್ತಾರೆ. ಇದಕ್ಕೆ ಸಾಕ್ಷಿಯಂತಿದೆ. ಈ ಕೆಳಗಿನ ಜಲಗಾರನ ಮಾತುಗಳು.

...... ವಿಶ್ವದಲಿ
ಸೌಂದರ್ಯ ಬಾಳುತಿದೆ. ತೊಳಗುತಿಹ ಚುಕ್ಕಿಗಳು,
ಬೆಳಗುತಿಹ ಚಂದಿರನು, ದಿನದಿನವು ತಳತಳಿಸಿ
ಬಾಂದಳದಿ ಸುತ್ತುತಿಹ ದಿನಮಣಿಯು, ಭೋರ್ಗರೆವ
ಕಡಲುಗಳು, ತಿಳಿಯಾಗಿ ಹರಿಯುತಿಹ ಹೊಳೆಗಳು,
ಮೆರೆಯುವ ಅರಣ್ಯಗಳು, ಎಲ್ಲವೂ, ಎಲ್ಲವೂ
ಜಲಗಾರನೊಬ್ಬನಿಗೆ ಋಣಿಯಾಗಿ ಬಾಳುತಿವೆ.[೪]

ಬೀದಿಗುಡಿಸುವ ಬಡವನೆದೆಯಲ್ಲಿ ನಾನಿರುವೆ!
ಉಳುತಿರುವ ಒಕ್ಕಲಿಗನೆದೆಯಲ್ಲಿ ನಾನಿರುವೆ!
ಎಲ್ಲಿ ಹೊಲೆಯನು ನನ್ನ ಕಾರ್ಯದಲಿ ತೊಡಗಿಹನೊ
ಅಲ್ಲಿ, ನಾನವನ ಪಕ್ಕದೊಳಿರುವೆ, ಕುಂಟರನು,
ಕುರುಡರನು, ದೀನರನು, ಅನಾಥರನು ಕೈಹಿಡಿದು
ಪೊರೆಯುತಿಹನೆಡೆಯಿರುವೆ.[೫]

ಜಲಗಾರ ಮತ್ತು ಜಗದ ಜಲಗಾರನಾದ ಶಿವನು ಒಂದಾಗುವ ಪ್ರಕ್ರಿಯೆಯಲ್ಲಿ ನಿಸರ್ಗ (ಶಿವ) ಮತ್ತು ಮನುಷ್ಯ (ಜಲಗಾರ)ರ ನಡುವೆ ಸಾಮರಸ್ಯವನ್ನೇ ನಾಟಕದ ಈ ಕೊನೆಯ ಭಾಗ ಸಂಕೇತಿಸುತ್ತದೆ. ಸಹಜ

ನಿಸರ್ಗ ಸೌಂದರ್ಯದ ಸಾಕ್ಷಿಯಂತಿದ್ದ ಶಿವನನ್ನು ಮನುಷ್ಯ ನಿರ್ಮಿತ ಧಾರ್ಮಿಕ ಕ್ರಿಯಾಚರಣೆಗಳು ಕೃತಕವಾಗಿಸಿದ ಬಗೆಗಿನ ವಿಡಂಬನೆ ಇಲ್ಲಿ ಪ್ರಕಟವಾಗುತ್ತದೆ. 'ಊರ ತೋಟಿಯು ನೀನು; ಜಗದ ತೋಟಿಯು ನಾನು ! ನೀನೆ ನಾನಾಗಿಹೆನು! ನಾನೆ ನೀನಾಗಿರುವೆ' ಎಂಬ ಶಿವನ ಮಾತುಗಳು ಮನುಷ್ಯ ಮತ್ತು ಪರಿಸರ ಸಂಬಂಧಗಳ ಸಾಮರಸ್ಯವನ್ನೇ ಪ್ರತಿಪಾದಿಸುತ್ತದೆ. ಜಲಗಾರ ಅಸ್ಪೃಶ್ಯತೆಯಂಥ ಸಮಸ್ಯೆಯನ್ನು ಕೇಂದ್ರವಾಗಿರಿಸಿಕೊಂಡ ನಾಟಕವಾಗಿದ್ದರೂ, ಅಂಥ ಸಮಸ್ಯೆಗಳಿಗೆ ಕುವೆಂಪು ಅವರು ನಿಸರ್ಗ ಪ್ರತಿಮೆಗಳನ್ನೇ ಮುಖಾಮುಖಿಯಾಗಿಸಿ ಹೊಸದರ್ಶನವೊಂದನ್ನು ಈ ನಾಟಕದ ಮುಖೇನ ಕಾಣಿಸುತ್ತಾರೆ.

> ತನ್ನ ಸುತ್ತಮುತ್ತಲು ಲಭ್ಯವಿರುವ ಕ್ರಿಯಾತ್ಮಕ ಹಾಗೂ ಅರ್ಥಪೂರ್ಣವಾಗಿರುವ ಸಂಗತಿಗಳನ್ನು ತನ್ನೊಳಗೆ ಸಮಗ್ರವಾಗಿ ಅಳವಡಿಸಿಕೊಂಡೂ ತಾನು ಯಾವೊಂದು ನಿರ್ದಿಷ್ಟ ಸಂಗತಿಯನ್ನು ಅವಲಂಬಿಸದೆ ಸ್ವತಂತ್ರವಾಗಿರುವುದೇ ಸಾಮಾನ್ಯ ಬದುಕು. ಹಾಗಾಗಿ ಅದು ಏಕಕಾಲಕ್ಕೆ ಶ್ರೀಮಂತವೂ, ಅವಶ್ಯವೂ, ಅನಿವಾರ್ಯವೂ ಆದ ಬದುಕು. ಇದನ್ನು ಕೇವಲ ಸಾಮಾನ್ಯ ಸ್ತ್ರೀ-ಪುರುಷರ ಯಃಕಶ್ಚಿತ್ ಬದುಕೆಂದು ಕಡೆಗಣಿಸುವಂಥದಲ್ಲ. ನಿಜಕ್ಕೂ ಈ ಬದುಕು ಶ್ರೀಮಂತವೂ, ಅನಿವಾರ್ಯವೂ, ಸರ್ವವ್ಯಾಪಿಯೂ ಆಗಿದೆ. ಸಾಮಾನ್ಯ ಬದುಕು ಎಂಬುದು ಇಲ್ಲ ಎನ್ನುವುದಾದರೆ ಮಾನವನ ಬದುಕೇ ಅಸಂಭವವಾಗಿದೆ. ಅದರ ಅರ್ಥ, ಬದುಕು ಎಲ್ಲೆಲ್ಲಿದೆಯೋ ಅಲ್ಲೆಲ್ಲ ಸಾಮಾನ್ಯ ಬದುಕಿದೆ.[೬]

> ಸಾಮಾನ್ಯ ಬದುಕು ನೈತಿಕವಾದುದು, ನಿಜವಾದುದು, ದಕ್ಷವಾದುದು, ನಿಖರವಾದುದು, ವೇಗವಾದುದು, ನೇರವಾದುದು, ಕಾನೂನು ಪಾಲಿಸುವಂಥದ್ದು, ಸ್ವಾವಲಂಬಿಯಾದುದು, ಜವಾಬ್ದಾರಿಯುತವಾದುದು, ತೃಪ್ತಿ- ಸಂತೋಷ ನೀಡುವಂಥದು.[೭]

> ಸಾಮಾನ್ಯ ಬದುಕು ನಿರಂತರವಾಗಿ ಬದಲಾಗುವ ಸ್ವಭಾವವುಳ್ಳ ಮಾನವನ ಮೂಲತತ್ವವನ್ನು ಅಭಿವ್ಯಕ್ತಿಪಡಿಸುವ ಅಖಂಡಧಾರೆ. ಎದುರಾಗುವ ಹೊಸ ಸನ್ನಿವೇಶಗಳಲ್ಲಿ ತಮ್ಮ ಚಿಂತನೆ ಮತ್ತು ಆಚರಣೆಯ ಮೂಲಕ ಸಾಮಾನ್ಯ ಬದುಕನ್ನು ಸೃಷ್ಟಿಸುವ ಮತ್ತು ಮರುಸೃಷ್ಟಿಸುವ ಪರಂಪರೆಯೇ ನಮ್ಮ ಸಂತರ ಭವ್ಯ ಪರಂಪರೆ. ಇದು ಆಯಾ ಕಾಲಮಾನಕ್ಕೆ ತಕ್ಕಂತೆ ಪ್ರಸ್ತುತವಾದ ಮಾನದಂಡಗಳನ್ನು ಒದಗಿಸುವ ಪರಂಪರೆ.[೮]

೨. ಯುದ್ಧ, ವಿನಾಶ, ಪರಿಸರ ಹೊಂದಾಣಿಕೆ

ಯುದ್ಧ ಪರಮಘೋರ. ಮನುಷ್ಯನ ಸ್ವಾರ್ಥ ಮತ್ತು ಆಸೆಯೇ ಯುದ್ಧಕ್ಕೆ ಮೂಲ. ಇಂಥ ಆಸೆಯಿಂದಲೇ ಅನೇಕ ಯುದ್ಧಗಳಾಗಿರುವುದನ್ನು ಚರಿತ್ರೆ ಸ್ಪಷ್ಟಪಡಿಸುತ್ತದೆ. ಅನಾದಿ ಕಾಲದಿಂದಲೂ ಯುದ್ಧಗಳು ನಡೆಯುತ್ತಾ ಬಂದಿರುವುದನ್ನು ಚರಿತ್ರೆ ಕಾಣಿಸುತ್ತದೆ. ರಾಮಾಯಣ, ಮಹಾಭಾರತ, ಪುರಾಣಗಳಲ್ಲಿಯೂ ಯುದ್ಧಗಳ ಕಾರಣ ಮತ್ತು ಪರಿಣಾಮಗಳನ್ನು ಮನುಷ್ಯ ಕಟ್ಟಿಕೊಳ್ಳುತ್ತಲೇ, ಅದರಿಂದ ಬಿಡುಗಡೆಗೊಳ್ಳಲು ಹವಣಿಸುತ್ತಲೇ, ಮತ್ತೆ

ಮತ್ತೆ ಯುದ್ಧಗಳಿಗೆ ಕಾರಣವಾಗುತ್ತಲೇ ಹೊರಟಿರುವುದು ಕೇವಲ ಮನುಷ್ಯ ಸಮುದಾಯದ ದುರಂತಕ್ಕೆ ಮಾತ್ರ ಕಾರಣವಾಗದೆ ಸಮಷ್ಟಿ ಜೀವ ಸಮುದಾಯಕ್ಕೆ ಮಾರಕವಾಗಿದೆ.

ಮಹಾಯುದ್ಧಗಳೆಂದರೆ ಸರ್ವನಾಶದ ಸಂಕೇತಗಳು. ಜೀವ, ಜಡ, ಚೇತನಾಚೇತನಗಳ ಪರಿವೆಯೇ ಇಲ್ಲದೆ ವಿನಾಶಕ್ಕೀಡು ಮಾಡುವ ಮನುಷ್ಯನ ಪಾಶವೀ ಕೃತ್ಯದ ಸಂಕೇತಗಳೇ ಯುದ್ಧಗಳು. ಅಂಥ ಪಾಶವೀ ಕೃತ್ಯಗಳಿಂದ ಎದುರಾಗುವ ನಷ್ಟ ಪರಂಪರೆ ಯಾವ ಅಳತೆಗೂ ಸಿಗಲಾರದು. ಇದು ಕೇವಲ ಆ ಕಾಲದ ದುರಂತ ಮಾತ್ರವಾಗದೆ ಶತಶತಮಾನಗಳವರೆಗೆ ಮುಂದುವರೆಯುತ್ತದೆ. ಯುದ್ಧಗಳಿಂದ ವಿನಾಶದ ಪರಂಪರೆ ಮುಂದುವರಿದಿರುವ ದೃಢ ವಾಸ್ತವತೆಯನ್ನು ಮೊದಲ ಹಾಗೂ ಎರಡನೇ ಮಹಾಯುದ್ಧಗಳು ಸಾಬೀತು ಪಡಿಸುತ್ತವೆ.

ಮನುಷ್ಯನ ಉಪಭೋಗಕ್ಕಾಗಿ ಕಂಡುಕೊಂಡ ಅಣುಶಕ್ತಿಯನ್ನು ಸಮಷ್ಟಿ ಜೀವಸಂಕುಲಗಳ ವಿನಾಶಕ್ಕೆ ಪ್ರಯೋಗಿಸಿದ್ದು ಅವನ ರಾಕ್ಷಸ ಪ್ರವೃತ್ತಿಯ ಸಂಕೇತವೇ ಆಗಿದೆ. ಯುದ್ಧಗಳಲ್ಲಿ ಪ್ರಯೋಗಿಸಿದ ಶಸ್ತ್ರಾಸ್ತ್ರಗಳ ಭೀಕರ ಪರಿಣಾಮಗಳು ಎಲ್ಲ ಬಗೆಯ ಜೀವ ಸಂಕುಲಗಳಿಗೂ ಮಾರಕವಾಗಿ ಪರಿಣಮಿಸಿವೆ. ಹಾಗೆಯೇ ಯುದ್ಧಗಳಿಂದ ಸುತ್ತಣ ಪರಿಸರ ಹಾನಿಗೊಳಗಾಗುತ್ತದೆ. ಅಂದರೆ ಮರ, ಗಿಡ, ಪಶು, ಪಕ್ಷಿ, ಪ್ರಾಣಿಗಳು ಕಷ್ಟಕ್ಕೀಡಾಗುತ್ತವೆ. ವಿಷಯುಕ್ತ ಅನಿಲಗಳು ನೀರನ್ನು ಸೇರುತ್ತವೆ. ಆ ನೀರನ್ನು ಕುಡಿದ ಜೀವ ಸಂಕುಲಗಳು ಹಾಗೂ ಸಸ್ಯ ಪ್ರಬೇಧಗಳು ವಿನಾಶದ ಕಡೆಗೆ ಮುಖ ಮಾಡುತ್ತವೆ. ವಿಷಯುಕ್ತ ಗಾಳಿ ಸುತ್ತಣ ಪರಿಸರವನ್ನು ಆಕ್ರಮಿಸಿ ವಿಷಪೂರಿತವಾಗುತ್ತದೆ. ಆಧುನಿಕ ಅಸ್ತ್ರಗಳ ಪ್ರಯೋಗದಿಂದ ಉಂಟಾಗುವ ಬೆಂಕಿಯ ಮುಖೇನ ಇಡೀ ಭೂಮಿ ಆಹುತಿಯಾಗುತ್ತದೆ. ಕೃಷಿ ಭೂಮಿ, ಹಸಿರು ಬಯಲುಗಳು, ಅರಣ್ಯಗಳು ಹಾಗೂ ಹುಲ್ಲುಗಾವಲುಗಳು ನಾಶವಾಗುತ್ತವೆ. ಕೃಷಿ ಭೂಮಿ ನಾಶವಾದರೆ ಆಹಾರ ಸಮಸ್ಯೆಯುಂಟಾಗಿ ಬಡತನಕ್ಕೆ ಕಾರಣವಾಗುತ್ತದೆ. ಹಾಗಾಗಿ ಜೀವಸಂಕುಲಗಳ ಅವನತಿ ಅಧಿಕವಾಗುತ್ತದೆ. ಹೀಗೆ ಪರಿಸರಕ್ಕೆ ಎದುರಾಗುವ ತೀವ್ರವಾದ ಆಘಾತಗಳಿಂದ ಮನುಷ್ಯನೂ ಸೇರಿ ಅಸಂಖ್ಯ ಜೀವಸಂಕುಲಗಳು ಅವಸಾನದ ಕಡೆಗೆ ಮುಖಮಾಡುತ್ತವೆ.

ಮನುಷ್ಯನ ಆಧುನಿಕ ತಂತ್ರಜ್ಞಾನದ ಶೋಧ ಹೆಚ್ಚಿದಂತೆಲ್ಲ ಪ್ರಕೃತಿಯ ಮೇಲಿನ ಆಕ್ರಮಣವು ಅಧಿಕವಾಗುತ್ತಿದೆ. ಪ್ರತಿಯೊಂದು ರಾಷ್ಟ್ರವು ತನ್ನ ಕ್ಷೇಮ ಹಾಗೂ ಬಲಪ್ರದರ್ಶನಗಳಿಗಾಗಿ ಸ್ವತಃ ವಾಸಮಾಡುವ ನೆಲೆಗಳನ್ನೇ ಶಸ್ತ್ರಾಗಾರಗಳನ್ನಾಗಿ ರೂಪಿಸಿಕೊಳ್ಳುತ್ತಿರುವ ಸಂದರ್ಭ ಇಂದಿನದಾಗಿದೆ. ಮಹಾಯುದ್ಧಗಳಲ್ಲಿ ಅಣ್ವಸ್ತ್ರಗಳ ಪ್ರಯೋಗದಿಂದ ಉಂಟಾದ ಭೀಕರ ಪರಿಣಾಮಗಳು ಇನ್ನೂ ಹಸಿಹಸಿಯಾಗಿಯೇ ಇವೆ. ಹಾಗಿದ್ದರೂ ಪ್ರತಿಯೊಂದು ರಾಷ್ಟ್ರವು ಸ್ಪರ್ಧೆಯೋಪಾದಿಯಲ್ಲಿ ಯುದ್ಧಾಸ್ತ್ರಗಳ ತಯಾರಿಕೆಯಲ್ಲಿ ತೊಡಗಿವೆ. ಇದು ಅಪಾರ ಪ್ರಾಕೃತಿಕ ಸಂಪನ್ಮೂಲಗಳನ್ನು, ಸಾಮಾನ್ಯ ಜನರ ದುಡಿಮೆಯ ಹಣವನ್ನು ವ್ಯಯಮಾಡಿ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುವ ಕಡೆಗೆ ಹೊರಟಿರುವ ಆಧುನಿಕ ಮನುಷ್ಯನ ದುರಂತವೇ ಆಗಿದೆ. ಯುದ್ಧಾಸ್ತ್ರಗಳ ಪರಿಣಾಮಗಳನ್ನು ಪರೀಕ್ಷಿಸಲು ಮನುಷ್ಯ ನಡೆಸುತ್ತಿರುವ ಮಂಗಾಟಗಳಿಗೆ ಕೊನೆಯಿಲ್ಲದಂತಾಗಿದೆ. ಮನುಷ್ಯ ತಾನು ಕಂಡು ಹಿಡಿದ ಅಸ್ತ್ರಗಳ ಶಕ್ತಿ ಸಾಮರ್ಥ್ಯಗಳನ್ನು ಅರಿಯಲು ಆತ ಅವುಗಳನ್ನು ಸಮುದ್ರ ಹಾಗೂ ಮರುಭೂಮಿಗಳ ಮೇಲೆ ಪ್ರಯೋಗಿಸುವುದರಿಂದ ಭೂಮಿಯ ಮೇಲಿನ ಅಸಂಖ್ಯ ಜೀವಕೇಂದ್ರಿತ ನೆಲೆಗಳು ದುರಂತಕ್ಕೆ ಗುರಿಯಾಗುತ್ತವೆ.

ವಿಶ್ವದ ಪ್ರತಿಯೊಂದು ರಾಷ್ಟ್ರ ಶೇಖರಿಸಿಟ್ಟಿರುವ ಅಣ್ವಸ್ತ್ರಗಳು ಆಕಸ್ಮಿಕವಾಗಿ ಸಿಡಿದರೂ ಇಡೀ ವಿಶ್ವವೇ ದುರಂತಕ್ಕೀಡಾಗುವ ಭಯಭೀತ ಸಂದರ್ಭ ನಮ್ಮದು. ಇಂಥ ಯುದ್ಧಾಸ್ತ್ರಗಳು ಮರ್ಕಟ ಮನಸ್ಸಿನ, ಮೂಲಭೂತವಾದಿಗಳ ಕೈ ಸೇರಿ ಹೊಸ ಸಮಸ್ಯೆಗಳಿಗೂ ಕಾರಣವಾಗುತ್ತಿರುವ ಸಂದರ್ಭ ನಮ್ಮದಾಗಿದೆ. ಜಾಗತಿಕ ಮಟ್ಟದಲ್ಲಿ ಮತಧರ್ಮಗಳ ನಡುವೆ ಎದುರಾಗಿರುವ ಅನೇಕ ಬಿಕ್ಕಟ್ಟುಗಳು ಜಾಗತಿಕ ಭಯೋತ್ಪಾದನೆಗೆ ಕಾರಣವಾಗಿವೆ. ಮತ, ಧರ್ಮಗಳ ಮಾದಕತೆಗೆ ಮಾರುಹೋದ ಮನುಷ್ಯ ಸಮುದಾಯಗಳು ಬಾಂಬುಗಳಾಗಿ ಸೃಷ್ಟಿಗೊಳ್ಳುತ್ತಿರುವುದು ಆಧುನಿಕ ಸಮಾಜದ ವಿಕೃತಿಗೆ ಸಂಕೇತವಾಗಿದೆ. ಇಂಥ ವಿಕೃತಿಗಳ ಪರಿಣಾಮಗಳು ಮತ್ತು ಭೀಕರವೆಂಬುದು ನಮಗೆ ಮನವರಿಕೆಯಾಗುತ್ತಿದೆ. ಇಂಥ ಮನುಷ್ಯನ ಹಿಂಸಾಕೃತ್ಯಗಳು ಯುಗಯುಗಗಳ ಸಾಧನೆಯನ್ನೇ ಸ್ಮಶಾನಗೈಯುವ ನೆಲೆಗೆ ತಲುಪಿದೆ ಎಂಬುದರಲ್ಲಿ ಸಂಶಯವಿಲ್ಲ. ಈ ಹಿನ್ನೆಲೆಯಲ್ಲಿ ಕುವೆಂಪು ಅವರ ಶ್ಮಶಾನ ಕುರುಕ್ಷೇತ್ರಂ ನಾಟಕದ ಓದು ಮಾರ್ಮಿಕವಾದುದು. ಶ್ಮಶಾನ ಕುರುಕ್ಷೇತ್ರ ನಾಟಕದ ದ್ವಾಪರನ ಈ ಕೆಳಗಿನ ಮಾತುಗಳು ಇಂಥ ಭೀಕರತೆಗೆ ಸಾಕ್ಷಿಯೆಂಬಂತಿವೆ.

> ಏನ್ ರೌದ್ರಮೇನ್ ಕ್ರೂರಮೇನ್ ದುಃಖಮಯ ದೃಶ್ಯಂ ।
> ದಿಟ್ಟಿಪರಿವೆನ್ನವರಂ ಎತ್ತ ನೋಡಿದೊಡತ್ತ
> ನಾಶಮೇ ನಗುತಿಹುದು ವಿಕಟಾಟ್ಟಹಾಸದಿಂ !
> ಕಣ್ಣಿಡುವ ಕಡೆ ಮುರಿದ ಪೊಂದೇರುಗಳ ರಾಶಿ ;
> ಎತ್ತನೋಡಿದೊಡತ್ತ ಸತ್ತಾನೆಗಳ ಮೊತ್ತಂ ;
> ರುಂಡಗಳ ಚೆಂಡಾಡುತಿಹ ಮರುಳ್ಗಳ ಬಳಗಂ ;
> ಬೆನ್ನ ಬೀವಂ ಸಿಗಿವ ಸೃಗಾಲಗಳ ಗುಂಪು ! -
> ಎನ್ನ ಯುಗದಂತ್ಯದೊಳೆ ವಿಲಯಮಾದಂತಿಹುದು !
>
> ....
>
> ಎನಿತೆನಿತೊ ಬರಿಸಗಳ ಗೆಯ್ಮೆಯಿಂ ಗಳಿಸಿರ್ದ ಸಂಸ್ಕೃತಿಯ
> ಚೆಲ್ವಿಕೆಯು ತುತ್ತತುದಿಯಲಿ ಪುಚ್ಚಳಿದು ಪೋಯ್ತೆ?
> ನಿನಗೆನ್ನ ಕಾಲಸಾಮ್ರಾಜ್ಯಮಂ ಮರಳೀವ
> ಸಮಯದಲಿ, ಆವ ಪೆರ್ಮೆಯೊಳಾವ ಮೆಚ್ಚುಗೆಯ
> ವಸ್ತುವನ್ ಎನ್ನ ಕೃತಿ ಎಂದಾನು ತೋರಿಸಲಿ?
> ಈ ಮಹಾಕುರುಕ್ಷೇತ್ರ ಶ್ಮಶಾನಮಂ ತೋರಲೇನ್?
> ಅಳಿದ ತುಳಿಲಾಳ್ಗಳ ಶವಂಗಳಂ ನಿನಗಿತ್ತಪೆನೆ?
> ಮುರಿದ ಹೊಂದೇರುಗಳ ಮಂದೆಯಂ ತೋರ್ದಪೆನೆ?
> ನಿನಗಾವ ಮಂಗಳದ ಸಿರಿಯನೀಯಲಿ? ಹೇಳು![೯]

ಯುದ್ಧದ ರೌದ್ರತೆ, ಅದರ ಕ್ರೌರ್ಯ, ದುಃಖಮಯ ದೃಶ್ಯಗಳ ಮೂಲಕ ನೋಡಿದಲ್ಲೆಲ್ಲ ವಿನಾಶವೇ ವಿಕಟಾಟ್ಟಹಾಸಗೊಂಡ ಚಿತ್ರ ಇಲ್ಲಿದೆ. ಕುರುಕ್ಷೇತ್ರ ಯುದ್ಧ ಒಂದು ಯುಗದ ಅಂತ್ಯಕ್ಕೆ ಬರೆದ ಮರಣ ಪತ್ರ. ಸಂಸ್ಕೃತಿಯ ಅಸಂಖ್ಯ ಸಾಧನೆಗಳು ಇಂಥ ಯುದ್ಧದ ಪರಿಣಾಮವಾಗಿ ವಿನಾಶದ ಹಾದಿ ಹಿಡಿದವು.

ನೀಲಾಕ್ಷ - ಇನ್ನೆಗಂ ಸಮರರಂಗಂ ಇನಿತು ಭಯಂಕರಮೆಂದು ನಾನರಿದುದಿಲ್ಲ. ಸಮರಸಮಯಕಿಂತಲೂ ಸಮರೋಪಸಂಹಾರದೀ ಮಸಣಮೇ ಮಿಗಿಲಗುರ್ವುವಡೆದಿಹುದಲ್ತೆ?

ಗೀರ್ವಾಣ - ಕಾಳಗದಿಂದ್ಯೆತಹ ನಾಶದಗುಂದಲೆಯಂ ನಾನಿಂದು ಮನ ಗಂಡೆ. ಕಟ್ಟಕಡೆಗಿಂತುಟಾಗುವುದೆಂದು ಮೊದಲಂದು ತಿಳಿದರಾರು?[೧೦]

ನೀಲಾಕ್ಷ ಮತ್ತು ಗೀರ್ವಾಣರ ಈ ಮಾತುಗಳು ಯುದ್ಧದ ಭೀಕರ ಪರಿಣಾಮವನ್ನು ನಿರೂಪಿಸುತ್ತಿವೆ. ಹಾಗೆಯೇ ಈ ಭೀಕರತೆ ಮರುಳುಗಳ ಹಾಗು ಮುದುಕಿಯ ಮಾತುಗಳಲ್ಲಿ ವ್ಯಕ್ತವಾಗಿದೆ.

ಮಾನವರು ಕೊಲೆಗೆ ಕೈಯಿಡೆ ಮಾರಿಯನ್ ಮೀರ್ದಪರು!
....
ಇದೇನ್ ಮಾನವರ ಮರುಳಾಟಂ ಎಮ್ಮ ಮರುಳ್ತನಮಂ
ಗೆಲುವಂತಿರ್ಪುದು !
ನಮಗೆ ಒಂದಿನಿತು ನಿಲಲುಂ ಎಡೆಯಿಲ್ಲ.
ಮಾನವರ ಮುಂದೆಯೇ ಮಸಣಮಂ ಮುತ್ತಿಹುದು.
....
ಏಂ ಭಯಂಕರಂ ಈ ಕುರುಕ್ಷೇತ್ರ
ಸಂಗ್ರಾಮರಂಗಂ ? ಮರುಳ್ಗಂ ಮರುಳ್ಪಿಡಿದು
ಪೋಪಂತೆ ಕೊಲೆ ಕಳೆಯೇರಿರ್ಪುದು
ಪಿಂತಣ್ಗೆ ಮತ್ತಾವ ಕಾಳೆಗದೊಳುಂ ಇಂತಪ್ಪ ಬೀರಮುಂ,
ಇಂತಪ್ಪ ಕೊಲೆಯುಮಂ ನಾನ್ ಪಾರ್ದರಿಯೆನ್
ಏನ್ ಮಚ್ಚರವೋ? ಏನ್ ಕಾಳೆಗದ ಪುರ್ಚೋ ಈ
ಕೀಳ್ಮಾನಿಸರ್ಗೆ ! ಇವರನಾನುಂ ಪೇಸುವೆನ್![೧೧]

ಮನುಷ್ಯನ ಮತ್ಸರ ಹಾಗೂ ಹುಚ್ಚಿನಿಂದ ಎದುರಾದ ದುರಂತಗಳನ್ನು ಕಂಡು ಮರುಳುಗಳೇ ನಾಚುತ್ತವೆ. ಮರಳುಗಳ ಈ ಮೇಲಿನ ಪ್ರಶ್ನೆ ಕುರುಕ್ಷೇತ್ರ ಸಂಗ್ರಾಮದಿಂದ ಎದುರಾಗಿರುವ ಜೀವಹಾನಿಯ ಭೀಕರತೆಯನ್ನು ಪರಿಚಯಿಸುತ್ತದೆ. ಎಂದೆಂದೂ ಮತ್ತಾವ ಯುದ್ಧದಲ್ಲಿಯೂ ಇಂಥ ಭೀಕರತೆಯ ಕೊಲೆಯನ್ನು ನಾವು ಕಂಡಿಲ್ಲವೆಂಬ ಮರಳುಗಳ ಉದ್ಗಾರವು ಯುದ್ಧದ ಅನರ್ಥತೆಯ ಪರಂಪರೆಯನ್ನೇ ಧ್ವನಿಸುತ್ತದೆ. ಯುದ್ಧದ ಭೀಕರತೆ ಹಾಗೂ ಕೆಲವೇ ಯುದ್ಧಾಸಕ್ತರ ಕಲಹಾಗ್ನಿಗೆ ಶ್ರೀಸಾಮಾನ್ಯರು ಯಜ್ಞಪಶುಗಳಾಗುವ ಮಾರ್ಮಿಕತೆಯನ್ನು ಮುದುಕಿಯ ಈ ಉದ್ಧರಣೆ ಸ್ಪಷ್ಟಪಡಿಸುತ್ತದೆ.

ಇದೇನ್ ಮಾರಿಯಾಟಂ ? ಇನಿತು ಜನಂ ತಿರುಗುತಿರ್ಪ
ಈ ಕತ್ತಲೆಯ ಬಯಲಿನೊಳ್ ನನ್ನನ್ ಕೇಳ್ವರೆ ಇಲ್ಲ.

......................ನೀನ್

ತುಳಿಲಾಳೆಂದು ತಿಳಿದು ದೊರೆಯು ಸೇನಾಧಿಕಾರಿಗಳುಂ
ನನ್ನೆಡೆಗೆ ಬಂದು ನೂರಾರು ಸಾವಿನುಡಿಗಳಿಂ, ಕವಡಾಸೆಗಳಿಂ
ಬೆನ್ನನ್ ತಟ್ಟಿ ಬೋಳೈಸಿ, ದೇಶಾಭಿಮಾನಂ, ಸ್ವಾಮಿಭಕ್ತಿ,
ಧರ್ಮನಿಷ್ಠೆ, ಕ್ಷಾತ್ರಧರ್ಮಂ ಮೊದಲಹ ಸಮಯಕ್ಕೊದಗುವ
ಉಪಾಯವೇದಾಂತಮಂ ಪೇಳ್ದು ನಿನ್ನನ್ ಕೊಂಡೊಯ್ದರ್
ನಾನುಂ ಮಾತಿಗೆ ಮರುಳಾದೆನ್. ಈಗಳೆಲ್ಲಿ ಆ ತತ್ತ್ವಂ -
ಗಳುಂ, ಆ ಅಧಿಕಾರಿಗಳುಂ, ಆ ಭಕ್ತಿಧರ್ಮಾಭಿಮಾನಂ -
ಗಳುಂ? ಎಲ್ಲ ಬರುಪುಸಿಯಲ್ತೆ? ತಿಳಿಯದವರ್ಗೆ ತಿಳಿದವ
ರೊಡ್ಡುವ ಬಲೆಯುರುಳ್ಗಣ್ಣೆಗಳಲ್ತೆ? ಅಂತುಂ ಶ್ರೀಮಂತರ
ಕಲಹಾಗ್ನಿಗೆ ಯಜ್ಞಪಶುಗಳೆಮ್ಮಂತಹ ದರಿದ್ರರಲ್ತೆ !-

....

ನಮ್ಮವೋಲಿಹ ಬಡಜನಂಗಳೆಲ್ಲ ಮಂಕುಗಳಮ್ಮಾ.
ಪಾಂಡವರ್ ಕೌರವರ್ ನೆಲಕೆ ಪೊಯ್ದಾಡಿದರೆ ನಮ್ಮ
ಮಕ್ಕಳ್ ಅವರಿವರಂ ಕೆಳೆಗೊಂಡು ನಿಂತು ಹೆಮ್ಮೆಗೆ ಬಡಿದಾಡಿ
ಮಡಿಯುವರ್ - ನನ್ನ ಮಗುಗೆ ನಿನ್ನಾತನಮೇಲೆ ಪಗೆ
ಯೇನ್? - ನಾವಿರ್ವರುಂ ದುಃಖಾರ್ತರಮ್ಮಾ! ಬಾ,
ಹುಡುಕಿ ನೋಡುವಂ.[೧೨]

ಹಾಗೆಯೇ ಯಾವ ಪಾಪವನ್ನು ಅರಿಯದ ಸಮಷ್ಟಿ ಜೀವ ಸಂಕುಲಕ್ಕೂ ಇಂಥ ಯುದ್ಧಗಳು ಮಾರಕವಾಗಿ ಪರಿಣಮಿಸುತ್ತವೆ. 'ವಿಪ್ಲವದ ಪಥವಿಡಿಯೆ ದಿನಮೆರಡೆ ಸಾಲ್ಗುಂ - ಯುಗಯುಗಗಳೆದೆಗೆ, ಒರ್ದಿನಂ ಗದೆಗೆ !'. ಭೀಮನ ಈ ನುಡಿ ಒಂದು ಯುಗಸಾಧನೆಯನ್ನು ಶ್ಮಶಾನಗೈದ ಯುದ್ಧವ್ಯಾಖ್ಯೆಯಂತಿದೆ. ಮನುಷ್ಯನ ಮತ್ಸರ, ಅಸೂಯೆಗಳು ಜೀವಸಮೂಹದ ಸಂಪದ್ಭರಿತ ಭೂಮಿಯನ್ನು ರುದ್ರಭೂಮಿಯನ್ನಾಗಿಸುವ ಪ್ರಕ್ರಿಯೆಯ ಬಗೆಗಿನ ವಿಡಂಬನೆ ಈ ನಾಟಕ. ಅಂಥ ರುದ್ರಭೂಮಿಯಿಂದಲೇ (ಶ್ಮಶಾನ) ಮತ್ತೊಂದು ಹೊಸ ಸಂಸ್ಕೃತಿಯ ವಿಕಾಸದ ಮುನ್ಸೂಚನೆಯನ್ನು ಈ ನಾಟಕ ಪ್ರತಿಮಿಸುತ್ತದೆ. ಕಲಿಯ ಈ ಕೆಳಗಿನ ಮಾತುಗಳು ಅದನ್ನು ದೃಢಪಡಿಸುತ್ತವೆ.

ವ್ಯಕ್ತ ಸೃಷ್ಟಿಯನ್ನೆಲ್ಲ
ತನ್ನೊಡಲಿನೊಳ್ ಪೊತ್ತು ಸಲಹಿದಾ ನಿತ್ಯತೆಯು
ಮರಳಿಯದಂ ಅವ್ಯಕ್ತಮನ್ನಾಗಿ ಮಾಡೆ
ಯುಗಪುರುಷನಾದ ನೀನದಕೇಕೆ ದುಮ್ಮಾನ -
ಗೊಳ್ಳುತಿಹೆ? ರಸಪೂರ್ಣ ಶೂನ್ಯದಿಂದೊಗೆತಂದು -
ದೀ ವಿಶ್ವಂ ; ಅದರೊಳೆ ವಿಲೀನಮಾಗಡಗುವುದು.

ಆದೊಡೇಂ? ಮರಳಿ ಬೇರೊಂದಾಕೃತಿಯ ತಳೆದು,
ಬೇರೊಂದು ಕಟ್ಟಳೆಗೆ ತಲೆಬಾಗಿ, ಬೇರೊಂದು
ಕಾಲದಲಿ ಮೂಡುವುದು. ಲೀಲೆಯೆಂಬುವುದೆಲ್ಲ
ಮೂಡುವುದು ಮುಳುಗುವುದರಲ್ಲಿಹುದು. ಅದಕೇಕೆ
ಮರುಗುವುದು? ಕನಸಿನಲಿ ಕಂಡ ಕಡವರಮಳಿಯೆ
ಎಚ್ಚತ್ತು ಶೋಕಿಪುದುಚಿತಮಲ್ತು.[೧೩]

ಅಖಂಡ ಪರಿಸರ ವಿನಾಶದಲ್ಲಿಯೇ ಸೃಷ್ಟಿಯ ಪೂರ್ಣ ಮತ್ತು ಸತ್ವಪೂರ್ಣ ಯುಗಾರಂಭದ ಕಥನ ಕುವೆಂಪು ಶೋಧಿತ ಜೀವಕೇಂದ್ರಿತ ಚಿಂತನೆಯಾಗಿದೆ. ಈ ಚಿಂತನೆ ಭೌತವಿಜ್ಞಾನಿ ಕಾಪ್ರಾನ ಪರಿಸರ ವಿಜ್ಞಾನೀಯ ದೃಷ್ಟಿಯನ್ನೇ ಹೋಲುತ್ತದೆ. ಇದು ಕುವೆಂಪು ಸಂವೇದನೆಯ ದಿವ್ಯದರ್ಶನವೂ ಆಗಿ, ಹೊಸಯುಗದ ಕಾಣ್ಕೆಯಾಗಿ ಪ್ರಕಟಗೊಳ್ಳುತ್ತದೆ. ಯುದ್ಧ ಮತ್ತು ವಿನಾಶಗಳ ನಡುವೆಯೇ ಪರಿಸರ ಪರ ಚಿಂತನೆ ಕೃತಿಯಲ್ಲಿ ಮಡುಗಟ್ಟಿದೆ.

ತೇಜಸ್ವಿಯವರು 'ಚಿದಂಬರ ರಹಸ್ಯ' ಅಧ್ಯಾಯ ೪೨ರಲ್ಲಿ ಹೇಳುವಂತೆ ಪ್ರಕೃತಿ ತನ್ನ ನಡವಳಿಕೆಯಲ್ಲಿ ಮಾಡಿಕೊಳ್ಳುವ ಕ್ರಮ ಹಾಗೂ ಅದು ತನ್ನ ಗಾಯ ವಾಸಿಮಾಡಿಕೊಳ್ಳುವ ವಿಧಾನವನ್ನೇ ಈ ಮೇಲಿನ ಉದ್ಧರಣೆ ಸಮರ್ಥಿಸುತ್ತದೆ. ಇಡೀ ಜೀವರಾಶಿ ಎಲ್ಲಾ ಸ್ಮಶಾನದಿಂದಲೇ ಉದ್ಭವಿಸಿದ್ದು. ಕುದಿಯೋ ಭೂಗೋಳದ ಬೆಂಕಿಯುಂಡೆಯಿಂದಲೇ ಪರಿಸರ ಪ್ರತಿರೋಧ ಮತ್ತು ಹೊಂದಾಣಿಕೆಗಳಿಂದ ತನ್ನ ಗಾಯಗಳನ್ನು ವಾಸಿಮಾಡಿಕೊಳ್ಳುತ್ತದೆ ಎಂಬುದನ್ನೇ ಈ ಕೆಳಗಿನ ಉದ್ಧರಣೆ ಸಮರ್ಥಿಸುತ್ತದೆ.

> "ನಮ್ಮ ಪಾಲಿಗೆ ಭೂಮಿ ಹಾಳಾಗುತ್ತದೆಯೇ ಹೊರತು ಅದರ ಪಾಲಿಗಲ್ಲ. ಈಗಾಗಲೇ ಪ್ರಕೃತಿ ಎಷ್ಟೊಂದು ಪ್ರಯೋಗ ಮಾಡಿದೆಯಯ್ಯಾ. ಎಷ್ಟೊಂದು ತರತರದ ಪ್ರಾಣಿಗಳೂ ಸಸ್ಯ ಸಮೂಹ ಈ ಭೂ ಮಂಡಲದ ಮೇಲೆ ಆಗಿಹೋದವು. ನಿನಗೇ ತಿಳಿದಂತೆ ಒಂದು ಕಾಲಕ್ಕೆ ಜಲಚರಗಳೂ, ಆಮೇಲೆ ಸರೀಸೃಪಗಳು, ಮಹೋರಗಗಳು, ಸಸ್ತನಿಗಳು, ಒಂದೆರಡೇ ಪ್ರಯೋಗವೇನಯ್ಯಾ. ನಾವು ಇಲ್ಲಿ ಬದುಕೋಕ್ಕೆ ನಾಲಾಯಖ್ ಅಂತನ್ನಿಸಿದರೆ ನಾವೂ ಇಲ್ಲಿಂದ ನಿರ್ಗಮಿಸ್ತೀವಿ. ನಾಮಾವಶೇಷ ಆಗ್ತೀವಿ. ಆದರೆ ನಿಧಾನವಾಗಿ ಪ್ರಕೃತಿ ಇನ್ನೊಂದು ತರದ ಪ್ರಯೋಗಕ್ಕೆ ಕೈ ಹಾಕ್ತದೆ. ಮತ್ತೆ ಭೂ ಮಂಡಲದ ಸ್ಮಶಾನದಿಂದ್ಲೇ ಇನ್ನೇನೋ ಒಂದು ಚೈತನ್ಯ ಚಿಮ್ಮುತ್ತೆ ಅಷ್ಟೇ."[೧೪]

'ಚಿದಂಬರ ರಹಸ್ಯ' ಕೃತಿಯಲ್ಲಿ ತೇಜಸ್ವಿಯವರ ಈ ಚಿಂತನೆ ಮನುಷ್ಯನ ಎಲ್ಲ ಬಗೆಯ ರಾಕ್ಷಸಿ ಪ್ರವೃತ್ತಿಗಳಿಂದ ಭಗ್ನಗೊಂಡ ಪರಿಸರ ಅಗಾಧ ಕಾಲದ ನಡುವೆ ತನ್ನನ್ನು ತಾನು ಮರುಹೊಂದಿಸಿಕೊಳ್ಳುವ ಮತ್ತೆ ತನ್ನ ಚೈತನ್ಯ ಮತ್ತು ಜೀವ ಸಮೃದ್ಧತೆಯನ್ನು ಬೆಳೆಸಿಕೊಳ್ಳುವ ಪ್ರವೃತ್ತಿಗೆ ಕೈ ಹಾಕುತ್ತದೆಂಬ ಸತ್ಯವೇ ಶ್ಮಶಾನ ಕುರುಕ್ಷೇತ್ರ ನಾಟಕದ ಪ್ರಮುಖ ಧ್ವನಿಯಾಗಿ ಕಾಣಿಸುತ್ತದೆ. ದ್ವಾಪರದ ವಿನಾಶದಲ್ಲಿಯೇ ಕಲಿಯುಗದ ನವಸೃಷ್ಟಿ ಇದನ್ನೇ ಸಮರ್ಥಿಸುತ್ತದೆ. ಶೂನ್ಯದಿಂದಲೇ ಮೈಪಡೆದ ಈ ವಿಶ್ವ ಶೂನ್ಯದಲ್ಲಿಯೇ ಲೀನವಾಗಿ ಮತ್ತೆ ಶೂನ್ಯದಿಂದಲೇ ಮೂಡುವ ಪ್ರಕ್ರಿಯೆ ಪರಿಸರ ಹೊಂದಾಣಿಕೆಯ ತತ್ವವಾಗಿದೆ. ಇದು ಬೇಂದ್ರೆ ಅವರ ಪ್ರಳಯ ಸೃಷ್ಟಿಯ ತತ್ವವನ್ನು ನೆನಪಿಸುತ್ತದೆ.

ಶ್ಮಶಾನ ಕುರುಕ್ಷೇತ್ರಂ (೧೯೩೧) ನಾಟಕ ಮೊದಲನೇ ಮಹಾಯುದ್ಧದ ನಂತರ ರಚನೆಗೊಂಡದ್ದು. ಜಾಗತಿಕ ಮಹಾಯುದ್ಧದ ಭೀಕರತೆಯನ್ನು ಕಂಡ ಸಂವೇದನೆ ಈ ನಾಟಕದಲ್ಲಿ ಯುದ್ಧ ವಿರೋಧಿ ಚಿಂತನೆಯನ್ನು ರಂಗಕ್ಕಿಳವಡಿಸಿದೆ. ಅನಾದಿಕಾಲದ ಮನುಷ್ಯನ ಜೀವವಿರೋಧಿ ಚಟುವಟಿಕೆಯಾದ ಯುದ್ಧ ದಾಹವನ್ನು, ಅಂಥ ದಾಹದಿಂದ ಎದುರಾಗುವ ಕಷ್ಟ ಕೋಟಲೆಗಳ ಪ್ರತಿಮೆ ಇಲ್ಲಿ ಅನಾವರಣಗೊಂಡಿದೆ. ಮನುಷ್ಯನ ಈ ಅನಾದಿಕಾಲದ ದಾಹದಿಂದ ನಿರಂತರವಾಗಿ ಸಮೃದ್ಧವಾದ ಜೀವವೈವಿಧ್ಯತೆಗಳನ್ನು, ಭೌಗೋಳಿಕ ವಿನ್ಯಾಸಗಳನ್ನು ಶ್ಮಶಾನವಾಗಿ ಪರಿವರ್ತಿಸುವ ಮನುಷ್ಯನ ವಿಧ್ವಂಸಕ ಚಟುವಟಿಕೆಯ ಬಗ್ಗೆ ಖಂಡನೆ, ವಿಡಂಬನೆ ಈ ನಾಟಕ. ಇಂಥ ಯುದ್ಧಾಸಕ್ತಿಯ ಮನುಷ್ಯನ ಅಕೃತ್ಯವನ್ನು, ಪುರಾಣದ ಘಟನೆಯೊಂದನ್ನು ರೂಪಕ ಅಥವಾ ಪ್ರತಿಮೆಗೊಳಿಸಿ ಆಧುನಿಕ ಸಂದರ್ಭದ ಯುದ್ಧದಾಹದ ಪ್ರಜ್ಞೆಗೆ, ಅಹಂಕಾರಕ್ಕೆ ಒಡ್ಡಿದ ಪ್ರತಿರೋಧದ ಪ್ರತಿಮಾ ಸೃಷ್ಟಿಯಾಗಿದೆ ಈ ನಾಟಕ. ಶ್ಮಶಾನ ಕುರುಕ್ಷೇತ್ರಂ ನಾಟಕವನ್ನು ಕುರಿತ ಕುವೆಂಪು ಅವರ ಟಿಪ್ಪಣಿಯನ್ನು ಇಲ್ಲಿ ಉದಾಹರಿಸುವುದು ಸೂಕ್ತವೆಂದು ತೋರುತ್ತದೆ.

> ಇದೊಂದು ಪ್ರತಿಮಾಸೃಷ್ಟಿ. ಯುದ್ಧದ ದುರಂತತೆ, ಅನ್ಯಾಯ, ಕ್ರೌರ್ಯ, ವಿನಾಶನ, ಅವಿವೇಕ, ದುರ್ಲಂಘ್ಯ ವಿಧಿ, ಸರ್ವ ವಿಫಲತೆ, ಸಂಸ್ಕೃತಿಯ ಸಾವು - ಇದಕ್ಕೆ ಪ್ರತಿಮೆ. ಒಂದೊಂದು ಯುದ್ಧವೂ ಪ್ರಾರಂಭವಾಗುವಾಗ ಅದು ಯುದ್ಧವನ್ನೆ ಕೊನೆಗಾಣಿಸುವ ಜಗತ್ತಿನ ಕೊನೆಯ ಅನಿವಾರ್ಯ ಸಂಕಟವೆಂದು ಸಾರುತ್ತೇವೆ. ಅನ್ಯಾಯವೆಲ್ಲ ತೊಲಗಿ ನ್ಯಾಯಸ್ಥಾಪನೆಯಾಗುವುದೆಂದು ಭಾವಿಸುತ್ತೇವೆ, ಕಲಿ ಹೋಗಿ ಕೃತಯುಗ ಪ್ರಾರಂಭವಾಗುತ್ತದೆಂದು. ಆದರೆ? ಮತ್ತೆ! ವಿಶೇಷತೆಗಾಗಿ ಸಾಮಾನ್ಯರ ಆಹುತಿ. ಸಂಸ್ಕೃತಿ ನಾಗರೀಕತೆ ಪ್ರಗತಿ ಎಲ್ಲ ಶ್ಮಶಾನರುದ್ರನ ಮೆಯ್ಗೆ ಭಸ್ಮಲೇಪನವಾಗುತ್ತದೆ. ಸರಿ, ಪುನರ್‌ಸೃಷ್ಟಿಯ ಪ್ರಾರಂಭ, ನಾಟಕಾರಂಭ : ವಿಶ್ವಲೀಲೆ ಸಾಗುತ್ತದೆ.'[೧೫]

ಒಂದು ಯುಗದ - ಸಂಸ್ಕೃತಿಯ ಸರ್ವನಾಶಕ್ಕೆ ಕಾರಣವಾಗುವ ಕುರುಕ್ಷೇತ್ರದ ಯುದ್ಧವನ್ನು ಆಧರಿಸಿದ ಈ ನಾಟಕದ ಪ್ರತಿಮಾ ಜಗತ್ತು ವಸ್ತುವಿನ ಆಯ್ಕೆಯಲ್ಲಿಯೇ ಪರಿಸರ ಕೇಂದ್ರಿತ ದೃಷ್ಟಿ ಹಾಗೂ ಯುದ್ಧ ವಿರೋಧಿ ಧೋರಣೆಯನ್ನು ಬೀಜ ರೂಪದಲ್ಲಿ ಅಡಗಿಸಿಕೊಂಡಿದೆ. ಒಂದು ಕುಟುಂಬದ ದಾಯಾದಿ ಜಗಳ ಅಖಂಡ ಪರಿಸರ - ಸಂಸ್ಕೃತಿಯನ್ನೇ ಶ್ಮಶಾನ ಸದೃಶಕ್ಕೆಗೈಯುವ ಪ್ರಕ್ರಿಯೆಯನ್ನು ಕುವೆಂಪು ಇಲ್ಲಿ ನಾಟ್ಯೀಕರಿಸಿದ್ದಾರೆ.

ಯುದ್ಧದ ಅನರ್ಥಗಳು, ಅದರಿಂದ ಒದಗಬಹುದಾದ ದುಃಖ - ದುಮ್ಮಾನಗಳ ಪರಂಪರೆ ಊಹೆಗೆ, ಅಳತೆಗೆ ನಿಲುಕದ್ದು. ಜಗತ್ತಿನ ಎಲ್ಲ ರಾಷ್ಟ್ರಗಳು ಅಣುಶಕ್ತಿಯ ಸಂಗ್ರಹಕ್ಕೆ, ಅಂಥ ಅಣುಶಕ್ತಿಯನ್ನು ಪ್ರಯೋಗಿಸಲು ಬೇಕಾದ ಮಿಲಿಟರಿ ವ್ಯವಸ್ಥೆಗಳಿಗೆ ವ್ಯಯ ಮಾಡುತ್ತಿರುವ ಹಣದ ಪ್ರಮಾಣ, ಅದರ ಶೋಧನೆಗಾಗಿ ವಿಜ್ಞಾನವನ್ನು ದುಡಿಸಿಕೊಳ್ಳುತ್ತಿರುವ ರೀತಿ ನೀತಿಗಳು, ಅದಕ್ಕಾಗಿ ಮಾನವ ದುಡಿಮೆಯಿಂದ ತೆಗೆದಿರಿಸುತ್ತಿರುವ ಬಂಡವಾಳ, ಅಂತಹ ಚಟುವಟಿಕೆಗಳ ಬಗೆಗಿನ ಕಾಳಜಿಗಳು ಭಯಾನಕವಾಗಿ ಕಾಣುತ್ತವೆ. ಇಂಥ ಚಟುವಟಿಕೆಗಳೇ ದುಷ್ಪಟ್ಟು ಹಿಂಸೆಗೆ, ಭೀತಿಗೆ ಕಾರಣವಾಗುತ್ತವೆ. ಅದರಲ್ಲೂ ಪ್ರಸ್ತುತ ಜಾಗತಿಕ ಸಂದರ್ಭದಲ್ಲಿ ಮನುಷ್ಯನ ಎಲ್ಲ ರೀತಿಯ ಅಭಿವೃದ್ಧಿ ಪ್ರಕ್ರಿಯೆಗಳಿಗೆ, ಪ್ರಯೋಗಗಳಿಗೆ ಪರಿಸರವನ್ನು ಬಳಸುತ್ತಿರುವ, ಪರಿಸರದ ಮೇಲೆ ತಾನು ನಡೆಸುತ್ತಿರುವ ಪ್ರಯೋಗಶೀಲ ಅಕೃತ್ಯಗಳಿಂದ ಅಖಂಡ ಜೀವ

ಸಮೂಹವೇ ದುರಂತದ ಹಾದಿ ಹಿಡಿದಿದೆ. ಆ ಮುಖೇನ ತನ್ನ ಮೃತ್ಯು ಪತ್ರವನ್ನು ತಾನೇ ಬರೆದುಕೊಳ್ಳುತ್ತಿದೆ. ಇಂಥ ಎಲ್ಲ ಪ್ರಕ್ರಿಯೆಗಳಿಂದ ಜೀವಸರಪಳಿಯ ಕೊಂಡಿಗಳು ಕಳಚಿಕೊಂಡಿವೆ. ಅಂಥ ಕೊಂಡಿಗಳ ಕಳಚುವಿಕೆಯಿಂದ ಹೊಸ ಹೊಸ ಸಮಸ್ಯೆಗಳು ಅಖಂಡ ಪರಿಸರಕ್ಕೆ ಮಾರಕವಾಗಿರುವಂತೆ ಮಾನವ ಸಮುದಾಯದ ಅವನತಿಗೂ ಮಾರಕವಾಗುವ ಹಂತದಲ್ಲಿವೆ.

ಸಾಮ್ರಾಜ್ಯಶಾಹಿ ಧೋರಣೆಯ ರಾಷ್ಟ್ರಗಳು ತಮ್ಮ ಪಾಪವನ್ನು ಅಭಿವೃದ್ಧಿಶೀಲ ರಾಷ್ಟ್ರಗಳಿಗೂ ದಾಟಿಸಿ ಯುದ್ಧದ ಬೀಜಗಳನ್ನು ಬಿತ್ತುತ್ತಿವೆ. ವಿಜ್ಞಾನ, ಪ್ರಗತಿ, ಆಧುನಿಕ ತಂತ್ರಜ್ಞಾನಗಳ ಕೈಗೊಂಬೆಯಂತಿರುವ ಮನುಷ್ಯ ನಡೆಸುತ್ತಿರುವ ಜೀವವಿರೋಧಿ ಚಟುವಟಿಕೆಗಳಿಗೆ ಮಿತಿಯೇ ಇಲ್ಲವೆಂಬಂತೆ ಭಾಸವಾಗುತ್ತದೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಕುವೆಂಪು ಅವರ ಶ್ಮಶಾನ ಕುರುಕ್ಷೇತ್ರ ಅಂಥ ಚಟುವಟಿಕೆಗಳನ್ನು ವಿಡಂಬಿಸುವ, ಪ್ರಶ್ನಿಸುವ ಜೀವಕೇಂದ್ರಿತ ಚಿಂತನೆಯ ಕನ್ನಡದ ಒಂದು ಅಭಿಜಾತ ಕೃತಿ. ಈ ದೃಷ್ಟಿಯಿಂದ ಇದೊಂದು ವಿಲಕ್ಷಣ ಕೃತಿ.

ಕುವೆಂಪು ಅವರ ಆತ್ಮಕಥೆ ನೆನಪಿನ ದೋಣಿಯಲ್ಲಿ ತಮ್ಮ ಬಾಲ್ಯದ ಬೇಟೆಯ ಬಗೆಗಿನ ತುಡಿತಗಳನ್ನು ದಾಖಲಿಸುತ್ತಾ ಹೇಳಿರುವ ಮಾತುಗಳು ಈ ಸಂದರ್ಭದಲ್ಲಿ ನೆನಪಾಗುತ್ತವೆ. ಏಕೆಂದರೆ ಯುದ್ಧವೂ ಒಂದು ಬೇಟೆಯ ಬಗೆಯಲ್ಲವೆ?

> ರಾಷ್ಟ್ರಗಳಾಗಲಿ ವ್ಯಕ್ತಿಗಳಾಗಲಿ ಮದ್ದುಗುಂಡನ್ನು ಮುಂಜಾಗ್ರತೆಗಾಗಿ ಶೇಖರಿಸಲು ಶುರುಮಾಡಿದ ಮೇಲೆ ಎಷ್ಟು ದಿನ ತಾನೆ ಅದನ್ನು ಪ್ರಯೋಗಿಸಿ ನೋಡದೆ ಸುಮ್ಮನಿರುವುದಕ್ಕಾದೀತು? ಏನಾದರೂ ಒಂದು ನೆವ ಹೂಡಿ, ಮತ್ತೇನಾದರೂ ಒಂದು ಕಿತಾಪತಿ ಮಾಡಿ, ಕಾಲು ಮೆಟ್ಟಿಯಾದರೂ ಜಗಳ ಕೆಣಕಿ ಅಥವಾ ತೋಳದಂತೆ ಕುರಿಮರಿಯ ಮೇಲೆ ಆಪಾದನೆ ಹೊರಿಸಿ, ಅಕ್ಕಪಕ್ಕದ ದೇಶಗಳೊಡನೆ ಯುದ್ಧ ಹೂಡಿ, ಶೇಖರಿಸಿದ ಮದ್ದುಗುಂಡು ನಿಷ್ಪ್ರಯೋಜಕವಾಗದಂತೆ ನೋಡಿಕೊಳ್ಳುವುದು ಇತಿಹಾಸ ಸಾಧಾರಣ ವಿಷಯ ತಾನೆ? ಹಾಗೆಯೆ ಆಯಿತು ನಮಗೂ![೧೬]

ಈ ಮೇಲಿನ ಉಲ್ಲೇಖ ಅನಾದಿಕಾಲದಿಂದ ಮನುಷ್ಯನ ಮನಸ್ಸಿನ ಆಳದಲ್ಲಿ ಹುದುಗಿರುವ ಯುದ್ಧದಾಹ ಹಾಗೂ ಅದರ ಕಾರಣ ಉದ್ದೇಶಗಳನ್ನು ತೆರೆದಿಡುತ್ತದೆ.

೩. ಅಹಿಂಸೆ ಹಾಗೂ ಕರುಣೆಯ ತತ್ವ

ಮಹಾರಾತ್ರಿ ೧೯೩೧ ಎಲ್ಲ ಬಗೆಯ ಹಿಂಸಾ ಪ್ರಕ್ರಿಯೆಗಳನ್ನು ನಿರಾಕರಿಸಿದವನ ಕಥೆ. ಪ್ರಾಣಿದಯೆ, ಅಹಿಂಸೆ ಹಾಗೂ ಕರುಣೆಯ ತತ್ವವನ್ನು ಲೋಕಕ್ಕೆ ಸಾರಿದ ಸಂತನ ಕಥೆ. ಎಲ್ಲ ಮಟ್ಟದ ಭೋಗಾಭಿಲಾಷೆಗಳನ್ನು ನಿರಾಕರಿಸುವ ಪ್ರಕ್ರಿಯೆಯೇ ಜೀವ ಕೇಂದ್ರಿತವಾದ. ಅಂಥ ನೆಲೆಯಿಂದಲೇ ರಾಜತ್ವದ ಎಲ್ಲ ಭೋಗಗಳನ್ನು ತ್ಯಜಿಸಿ ಲೋಕಕ್ಕೆ ಶಾಶ್ವತವಾದ ಜೀವನ ಸರಳತೆಯ ತತ್ವಗಳನ್ನು ಶೋಧಿಸಿ ಬೋಧಿಸಲು ಬದುಕನ್ನು ಮುಡುಪಾಗಿ ಇಡಲು ಹೊರಟದ್ದರ ಕಥನವೇ ಮಹಾರಾತ್ರಿ.

> ಕಬ್ಬಿಣದ ಸರಪಣಿಯ ಬಂಧನ !
> ದಿನಕಳೆದ ಹಾಗೆಲ್ಲ ಬುವಿಯ ಜಾಲವು ನಮ್ಮ

ಸುತ್ತುವುದೆ ಹೊರತು, ಬಿಗಿಬಿಗಿಯುವುದೆ ಹೊರತು
ಬಿಚ್ಚಿಬಿಡುವುದು ಎಂಬ ನೆಚ್ಚನಾ ಕಾಣೆ.[೧೭]

ಇಂಥ ಕಷ್ಟಸಾಧ್ಯತೆಗಳೆಲ್ಲವನ್ನು ಚಿಂತಿಸಿ ಮುಕ್ತಿಯನ್ನು ಹುಡುಕಲು ಹೊರಟ ಸಿದ್ದಾರ್ಥನ ನಿರ್ಧಾರಗಳಲ್ಲಿಯೇ ಇಂಥ ತತ್ವವು ಅಡಗಿದೆ. 'ಆಸೆಯೇ ದುಃಖಕ್ಕೆ ಮೂಲ'ವೆಂಬ ಸತ್ಯವನ್ನು ಶೋಧಿಸಿ ಎಲ್ಲ ಮಟ್ಟದ ಭೋಗಾಸಕ್ತಿಗಳನ್ನು ನಿರಾಕರಿಸುವುದು ಜೀವಕೇಂದ್ರಿತ ನಿಲುವೇ ಆಗಿದೆ.

.... ಬ್ರಹ್ಮಾಂಡ -
ದಲ್ಲಿರುವ ಪರಮತಮ ಪದವಿಗಾಗೆಳಸುತಿಹೆ
ಸರ್ವಸೃಷ್ಟಿಯ ಹರ್ಷಕಾಗೆಳಸುತಿರುವೆ.
ಸರ್ವಜೀವರ ಶಾಂತಿಗಾಗೆಳಸುತಿರುವೆ.
ನನ್ನ ಮುಕ್ತಿಯನೊಂದ ನಾನೆಂದು ಬಯಸೆ.
ಎಳೆಯೊಳಣುವೊಂದು ಬಂಧನದ ಬಲೆಯೊಳಗೆ
ಸಿಕ್ಕಿಗೋಳಿಡುವಲ್ಲಿ ಪರಿಯಂತ ಮುಕ್ತಿಯಂ
ಬಯಸೆ ನಾ ; ಹರ್ಷವಂ ಬಯಸೆ ನಾ; ಶಾಂತಿಯಂ
ಬಯಸೆ ನಾ ;[೧೮]

ಸರ್ವಸಾಮ್ರಾಜ್ಯ ಭೋಗಗಳಿಂದ ಬಿಡುಗಡೆ ಪಡೆದು ಮುಕ್ತಿ ಸಾಮ್ರಾಜ್ಯಕ್ಕೆ ಇಟ್ಟ ಹೆಜ್ಜೆಯ ಕಥನವೂ ಇದಾಗಿದೆ. ಹಾಗೆಯೇ ಈ ಮೇಲಿನ ಉಲ್ಲೇಖದಲ್ಲಿ ಸರ್ವಜೀವಿಗಳ ಶಾಂತಿಯ, ಬಿಡುಗಡೆಯ, ಮುಕ್ತಿಯ ಶೋಧದ ನೆಲೆಗಳನ್ನು ಕಾಣುತ್ತೇವೆ. ಅಂಥ ತತ್ವದ ಶೋಧ ಸಕಲ ಜೀವಿಗಳ ಹರ್ಷ, ಶಾಂತಿ, ಮುಕ್ತಿಗಳನ್ನೇ ಬೋಧಿಸುತ್ತದೆ.

ಬಾಳ ಮೋಹವ ಕುಟ್ಟಿ, ದರ್ಪಸಂಪದವಟ್ಟಿ,
ವಿಷಯಸುಖಗಳ ಮೆಟ್ಟಿ, ಸಿರಿಯ ತರಿದಟ್ಟಿ,
ನಡೆ, ಹಯವೆ, ಕಂಥಕನೆ, ನಡೆ ಮುಂದಕೀಗ !
ಎದೆಯ ಕೀಳಾಸೆಗಳನೆಲ್ಲವನು ಸುಟ್ಟು
ಮನದ ಸಂದೇಹಗಳನೆಲ್ಲವನು ಬಿಟ್ಟು
ಪರಮಾತ್ಮನಲ್ಲಚಲಭಕ್ತಿಯನ್ನಿಟ್ಟು,
ವೈರಾಗ್ಯವನು ತೊಟ್ಟು, ಮುಕ್ತಿಯನ್ನುಟ್ಟು,[೧೯]

ವೈರಾಗ್ಯವೊಂದೇ ಮನುಷ್ಯನ ಎಲ್ಲ ಬಗೆಯ ಭೋಗಾಸಕ್ತಿಗಳನ್ನು ನಿರಾಕರಿಸಬಲ್ಲುದು. ಪರಿಸರದ ಎಲ್ಲ ವಸ್ತುಗಳ ಮೇಲಿನ ವ್ಯಾಮೋಹದಿಂದ ಮನುಷ್ಯ ಬಿಡುಗಡೆ ಪಡೆಯದಿದ್ದರೆ ಅಖಂಡ ಪರಿಸರವೇ ಬರಿದಾಗಿ ಅನರ್ಥ ಪರಂಪರೆಗೆ ದಾರಿಯಾಗುತ್ತದೆ ಎಂಬುದು ಅನಾದಿಕಾಲದ ಚಿಂತನೆಯಾಗಿದೆ. ಹಸಿರು ಓದಿನ ನೆಲೆಯಿಂದ ನೋಡಿದಾಗ 'ಮಹಾರಾತ್ರಿ' ನಾಟಕದ ಧೋರಣೆ, ಆಶಯಗಳು ಪರಿಸರ ತತ್ವವನ್ನು ಅಭಿವ್ಯಕ್ತಿಸುತ್ತವೆ.

ಸಿದ್ಧಾರ್ಥ ಬುದ್ಧನಾಗುವ ರಾತ್ರಿ ಸಾಮಾನ್ಯವಾದುದಲ್ಲ. ಅದು ಮಹದ್ ವ್ಯಾಪಾರಗಳ ಮಹಾರಾತ್ರಿ. ಲೌಕಿಕ ಜಂಜಡಗಳನ್ನು ಕಳಚಿಕೊಂಡು ಲೋಕದ ಕಲ್ಯಾಣಕ್ಕೆ ಹಾತೊರೆಯುವ ಸಿದ್ಧಾರ್ಥ ನಿಜವಾಗಿಯೂ ವಿಶ್ವಸಮಷ್ಟಿಯ ಸಂರಕ್ಷಕ. ಮಾನವನ ಹೃದಯಾಳದ ಅಂತರ್ಗತ ಭೋಗಾಭಿಲಾಸೆಗಳನ್ನು ತೊರೆದು ಸತ್ಯ, ಧರ್ಮ, ನಿಷ್ಠೆ, ಪ್ರೀತಿ, ಪ್ರೇಮ, ಕರುಣೆ, ಅಹಿಂಸೆಗಳಂತಹ ಶ್ರೇಷ್ಠ ಮೌಲ್ಯಗಳನ್ನು ಶಾಶ್ವತಗೊಳಿಸಲು ಹೋರಾಟ ನಡೆಸಿದ ಮಹಾಚೇತನ ಸಿದ್ಧಾರ್ಥ.

ಬುದ್ಧನ ಹಾಗೂ ಬೌದ್ಧಧರ್ಮದ ಪರಿಸರ ಪ್ರಜ್ಞೆ ಅಶೋಕ ಚಕ್ರವರ್ತಿಯನ್ನು ಪ್ರಭಾವಿಸಿದೆ. ಅಶೋಕನು ಬುದ್ಧನ ಶೋಧಿತ ಬೌದ್ಧಧರ್ಮದ ಆಕರ್ಷಣೆಗೆ ಒಳಗಾಗಿ ಅನೇಕ ಸುಧಾರಣೆಗಳನ್ನು ಮಾಡಲು ಮುಂದಾದ. ಇಂಥ ಮನಃಸ್ಥಿತಿಯ ಹಿಂದೆ ಬುದ್ಧನ ಚಿಂತನೆಗಳು ಕೆಲಸ ಮಾಡಿವೆ. ಪ್ರಾಣಿದಯೆ, ಅಹಿಂಸಾ ತತ್ವದ ಪ್ರಚಾರ, ಸರಳ ಜೀವನದ ಬಗೆಗಿನ ಶ್ರದ್ಧೆ, ರಸ್ತೆಗಳ ಇಕ್ಕೆಲಗಳಲ್ಲಿ ಸಾಲುಮರಗಳು ಹಾಗು ಅರವಟ್ಟಿಗೆಗಳನ್ನು ಸಂರಕ್ಷಿಸುವುದರ ಮೂಲಕ ಅಶೋಕ ಚಕ್ರವರ್ತಿ ಬೌದ್ಧಧರ್ಮದ ಅನುಯಾಯಿಯಾಗಿದ್ದಾನೆ. ಅಶೋಕ ಚಕ್ರವರ್ತಿಯ ಇಂಥ ಚಟುವಟಿಕೆಗಳ ಹಿಂದೆ ಬುದ್ಧನ ಜೀವಕೇಂದ್ರಿತ ಧೋರಣೆ ಕೆಲಸ ಮಾಡಿದೆ. ಬುದ್ಧ ಶೋಧಿಸಿಕೊಂಡ ಜೀವಕೇಂದ್ರಿತ ಚಿಂತನೆಗಳು ಅನೇಕ ಶತಮಾನಗಳ ನಂತರವೂ ಪ್ರಭಾವ ಬೀರಿರುವುದು ಬಹುಪ್ರಮುಖವಾಗಿದೆ. ಹಾಗಾಗಿ ಪರಿಸರ ಚಿಂತಕರು ಬುದ್ಧನನ್ನು ಆದಿಪರಿಸರ ದಾರ್ಶನಿಕನೆಂದು ಗುರುತಿಸಿರುವುದು ಸೂಕ್ತವೆನಿಸುತ್ತದೆ.

ಭೂಮಿಯೊಂದಿಗೆ ಶಾಂತಿ, ಸಮಾಧಾನ ಹಾಗೂ ಸೌಹಾರ್ದಯುತವಾಗಿ ಜೀವಿಸುವುದು ಬೌದ್ಧಧರ್ಮದ ಮೂಲಮಂತ್ರವಾಗಿದೆ. ಪ್ರಕೃತಿಯ ರಕ್ಷಣೆ ಇವರ ಬದುಕಿನ ಭಾಗವಾಗಿದೆ. ಹಾಗಾಗಿ ಬೌದ್ಧಧರ್ಮದ ಪರಿಸರ ತಾತ್ವಿಕತೆ ಅಹಂಕೇಂದ್ರಿತ ನೆಲೆಯಿಂದ ಪರಿಸರ ಕೇಂದ್ರಿತ ನೆಲೆಗೆ ಬದಲಾವಣೆ ಆಗುವುದಾಗಿದೆ.

೪. ಜೀವ ಅಸಮಾನತೆಯ ನೆಲೆ

ಶಂಭೂಕ ಮಹರ್ಷಿಯ ಪುರಾಣ ಪ್ರತಿಮೆಯೊಂದಿಗೆ ವಿಕಸನ ಹೊಂದುವ 'ಶೂದ್ರ ತಪಸ್ವಿ' ನಾಟಕವು 'ಬೆರಳ್‌ಗೆ ಕೊರಳ್' ನಾಟಕದಂತೆಯೇ ಅಧಿಕಾರ, ಪ್ರಭುತ್ವ, ಅಧೀನತೆ ಹಾಗೂ ಸಾಂಪ್ರದಾಯಿಕ ಮೌಲ್ಯಗಳ ಹೇರುವಿಕೆಯಿಂದ ಉಂಟಾಗುವ ಅನರ್ಥಗಳನ್ನು ಪ್ರತಿನಿಧಿಸುವ ರೂಪಕವಾಗಿದೆ. 'ಶೂದ್ರ ತಪಸ್ವಿ' ಸಹಜ ಸಾಮರ್ಥ್ಯ, ಸ್ವಂತ ಪರಿಶ್ರಮ ಹಾಗೂ ಉತ್ಕಟ ಶ್ರದ್ಧಾನುಭವಗಳಿಂದ ಸಾಧನೆಗೆ ತೊಡಗುವ ಶಂಭೂಕನ ಬಗೆಗೆ ವ್ಯಕ್ತವಾಗುವ ಪ್ರತಿರೋಧದ ನೆಲೆ ಜೀವ ಅಸಮಾನತೆಯ ನೆಲೆಯೊಂದನ್ನು ಪರಿಚಯಿಸುತ್ತದೆ.

ಪರಿಸರದಿಂದಲೇ ಪಡೆದ ಅನುಭವಗಳಿಂದ ಸಾಧನೆಗೈಯ್ದ ಶಂಭೂಕನನ್ನು ಶಿಕ್ಷಿಸಲು ಹೊರಡುವ ಧೋರಣೆಯಲ್ಲಿಯೇ ಜೀವ ವಿರೋಧಿ ನೆಲೆಗಳು ಮೈದೋರುತ್ತಿರುವುದನ್ನು ಗುರುತಿಸಬಹುದಾಗಿದೆ. ನಗರ ಮತ್ತು ವನ್ಯ ಸಂಸ್ಕೃತಿಯ ಸಂಘರ್ಷಣಾ ನೆಲೆಗಳು ಈ ನಾಟಕದಲ್ಲಿ ತೀವ್ರವಾಗಿ ವಿಶ್ಲೇಷಣೆಗೆ ಒಳಪಟ್ಟಿವೆ. ಅಂದರೆ ಅನ್ಯ ಸಂಸ್ಕೃತಿಯ ಬಗೆಗಿನ ಅಸೂಯೆ, ಅಸಹನೆಗಳು ಇಲ್ಲಿವೆ. ನಾಟಕದ ಮೊದಲನೆ ದೃಶ್ಯವೇ ಅಖಂಡ ಪರಿಸರದ ದರ್ಶನಕ್ಕೆ ಮಾದರಿ. ಶಂಭೂಕನ ಸಹಜ ಸಾಮರ್ಥ್ಯಗಳಿಗೆ ಅಡ್ಡಿಪಡಿಸುವ ಎಲ್ಲಾ ಶಕ್ತಿಗಳಿಗೂ ಮುಖಾಮುಖಿಯಾದ ನಿಸರ್ಗ ರೌದ್ರಾನುಭವ ಈ ಭಾಗದಲ್ಲಿ ಎದುರಾಗುತ್ತದೆ. ತನ್ನ ಮೇಲಿನ ಎಲ್ಲಾ ಮಟ್ಟದ ಅನ್ಯಾಕ್ರಮಣಗಳಿಗೆ ಪರಿಸರ ಮುಖಾಮುಖಿಯಾಗುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

'ಶೂದ್ರ ತಪಸ್ವಿ' ನಾಟಕದ ಎರಡನೇ ದೃಶ್ಯದಲ್ಲಿ ಬರುವ ಈ ಕೆಳಗಿನ ಆಯ್ದ ಭಾಗ ಈಗಾಗಲೇ ಪ್ರಸ್ತಾಪಿಸಿದಂತೆ ನಗರ ಮತ್ತು ವನ್ಯ ಸಂಸ್ಕೃತಿಯ ಸಂಘರ್ಷವನ್ನೇ ಕಾಣಿಸುತ್ತದೆ.

ಏನ್‌ಶಾಂತಿ ನೆಲೆಸಿರ್ಪುದೀ ಚೆಲ್ವಿನೊಳ್ ;
ಅನುಭವಮೆ ಪೇಳ್ವುದು ಇದು ಋಷಿಯ ಬೀಡೆಂದು
ತಪೋಮಹಿಮೆಗೆಣೆಯುಂಟೆ?
....
ಸೋಜಿಗಮಾಗಿರ್ಪುದೀ ರಾಜೇಂದ್ರನೀ ತೆರಂ !
ಅರಮನೆಯೊಳಿರ್ಪೀತಂಗೆ ಗಿರಿವನ ಪ್ರಕೃತಿಯೆನೆ
ಅದೇನ್ ಪ್ರೇಮವೋ? ಅದೇನ್ ಮೋಹವೋ?
ಸೀತೆಯನ್ ಅರಣ್ಯಕೆ ವಿಸರ್ಜಿಸಿದೀತಂಗೆ
ಅರಣ್ಯಮೆ ಸೀತೆಯಾಗಿರ್ಪಳ್![೨೦]

ರಾಮನ ನಿಸರ್ಗಾನುಭವ ಹಾಗೂ ಆಸ್ವಾದನೆಯನ್ನು ಮೂದಲಿಕೆಗೆ ಗುರಿಪಡಿಸುವ ಕ್ರಮದಲ್ಲಿಯೇ ಪರಿಸರ ವಿರೋಧಿ ಧೋರಣೆಯನ್ನು ಕಾಣುತ್ತೇವೆ. ಮನುಷ್ಯ-ಮನುಷ್ಯರ ನಡುವಿನ ಸಮಾನತೆಯನ್ನು ಧಿಕ್ಕರಿಸುವ ವೈದಿಕಶಾಹಿ ನೆಲೆಗಳಲ್ಲಿಯೇ ಜೀವ ಸಮಾನತಾ ಧೋರಣೆ ಅಡಗಿರುವುದನ್ನು ಈ ನಾಟಕ ಧ್ವನಿಸುತ್ತದೆ. ಕೆಳಸ್ತರದ ಶ್ರೀ ಸಾಮಾನ್ಯನೊಬ್ಬ ಶಿಕ್ಷಣವನ್ನು ಪಡೆಯುವುದನ್ನು ಸಹಿಸಲಾರದ ಮನೋಧರ್ಮ ಜೀವ ಸಮಾನತಾ ಧೋರಣೆಗೆ ವಿರುದ್ಧವಾದ ನೆಲೆಯಲ್ಲಿರುವುದನ್ನು ಗುರುತಿಸಬಹುದಾಗಿದೆ. ಸಾಂಪ್ರದಾಯಿಕ ಕ್ರೌರ್ಯಕ್ಕೆ ಪ್ರಾಯಶ್ಚಿತ್ತದ ಹಾಗೂ ಕರುಣೆಯ ತತ್ವವನ್ನು ಮುಖಾಮುಖಿಯಾಗಿಸಿ ಪರಿವರ್ತನೆ ಮಾಡುವ ಕುವೆಂಪು ಅವರ ಒಟ್ಟು ದಾರ್ಶನಿಕತೆಯಲ್ಲಿ 'ನಿಸರ್ಗ ತತ್ವ' ಅಡಗಿದೆ.

೫. ಪ್ರಕೃತಿ ಮತ್ತು ಮನುಷ್ಯನ ಅವಿನಾಭಾವ ಸಂಬಂಧ

ಪ್ರಕೃತಿ ಮತ್ತು ಮಾನವ ಸಂಬಂಧಗಳನ್ನು ತಿಳಿಯಲು ಕುವೆಂಪು ಅವರ ಬೆರಳ್‌ಗೆ ಕೊರಳ್ (೧೯೪೭) ನಾಟಕ ಉತ್ತಮ ಉದಾಹರಣೆ. ವನಚರರಾದ ಏಕಲವ್ಯ ಹಾಗೂ ಅಬ್ಬೆಯ ಬದುಕಿನ ಚಿತ್ರಣದಲ್ಲಿ ಪ್ರಕೃತಿ ಹಾಗೂ ಮನುಷ್ಯನ ಅವಿನಾಭಾವ ಸಂಬಂಧವನ್ನು ಕುವೆಂಪು ನಾಟಕದುದ್ದಕ್ಕೂ ಏಕತ್ರಗೊಳಿಸಿದ್ದಾರೆ. ಅಬ್ಬೆ ಮತ್ತು ಏಕಲವ್ಯ ಪ್ರಕೃತಿಯೊಂದಿಗೆ ತೋರುವ ಮಾನವೀಯತೆ ಮತ್ತು ಆತ್ಮೀಯ ಸಂಬಂಧಗಳೇ ಈ ವಿಚಾರವನ್ನು ಸ್ಪಷ್ಟಪಡಿಸುತ್ತವೆ. ಆದಿವಾಸಿಗಳು ನಿಸರ್ಗದ ಮಡಿಲಲ್ಲಿಯೇ ಬೆಳೆದು ನಿಸರ್ಗದ ನಿಕಟ ಸಹವಾಸದಲ್ಲಿಯೇ ಜೀವಿಸುವರು ಎಂಬ ಥೋರೋನ ಅನುಭವದ ಮಾತು ಏಕಲವ್ಯನ ಮತ್ತು ಅಬ್ಬೆಯ ಬದುಕಿನ ಚಿತ್ರವನ್ನು ನೆನಪಿಗೆ ತರುತ್ತದೆ. ನಾಗರೀಕ ಸಂವೇದನೆಯ ಅರ್ಜುನ ಪ್ರಕೃತಿಯಿಂದ ಬೇರ್ಪಟ್ಟ ಪಾತ್ರವಾಗಿ ಕಾಣಿಸಿದರೆ ಏಕಲವ್ಯ ಪರಿಸರ ಸ್ನೇಹಿಯಾಗಿ ಪರಿಸರದ ಕೂಸಾಗಿ ಕಾಣುತ್ತಾನೆ. ಇದರಿಂದಲೇ ಅರ್ಜುನ ಅಪೂರ್ಣನಂತಿದ್ದರೆ ಏಕಲವ್ಯ ಪರಿಪೂರ್ಣ ಮನುಷ್ಯನಾಗಿ ಕಾಣುತ್ತಾನೆ. ಪರಿಪೂರ್ಣ ಮನುಷ್ಯನೆಂದರೆ ಮನುಷ್ಯ ಮತ್ತು ಪರಿಸರವೆಂಬ ಭೇದಗಳನ್ನು ಮೀರಿ ಬದುಕುವುದು. ಅಂದರೆ ಪರಿಸರದ ಇತರ ಜೀವ ಸಮೂಹಗಳಿಗಿಂತ ಮೇಲೆಂಬ ಅಹಂಕಾರವನ್ನು ಕಳೆದುಕೊಳ್ಳುವುದು. ಹಾಗಾಗಿ ಅಪರಾಧವಿಲ್ಲದ ಸಾಧುವನ್ನು ಕೊಲ್ಲಲು ಏಕಲವ್ಯ ನಿರಾಕರಿಸುವ, ಅಂಥ ಜೀವಸಮೂಹಕ್ಕೆ ಕೇಡೊದಗಿದ ಸಂದರ್ಭದಲ್ಲಿ ರಕ್ಷಕನಾಗುವ ಪ್ರಕ್ರಿಯೆ ಇದಕ್ಕೆ ಉತ್ತಮ ಉದಾಹರಣೆ.

ಏಕಲವ್ಯ ವನಸಂಸ್ಕೃತಿಯ ಸಂಕೇತವಾದರೆ ಅರ್ಜುನ ನಾಗರೀಕ ಸಂಸ್ಕೃತಿಯ ಪ್ರತೀಕವಾಗುತ್ತಾನೆ. ಈ ಎರಡೂ ಸಂಸ್ಕೃತಿಗಳ ಸಂಘರ್ಷವು ಈ ಕಥೆಯ ಮುಖ್ಯ ಆಯಾಮಗಳಲ್ಲಿ ಒಂದು. ಬೆರಳ್‌ಗೆ ಕೊರಳ್ ನಾಟಕ ಡೀಪ್ ಇಕಾಲಜಿಯ ತಾತ್ವಿಕತೆಯನ್ನು ಒಳಗೊಂಡದ್ದು. ಅಂದರೆ ಒಟ್ಟು ಪರಿಸರ ಅಥವಾ ಜೀವಕೇಂದ್ರಿತ ಪರಿಸರವೇ ಇಲ್ಲಿ ಕೇಂದ್ರ ಪಾತ್ರವಾಗಿ ಮೈಪಡೆದಿರುವುದು. ಮೊದಲೇ ಸೂಕ್ಷ್ಮವಾಗಿ ಸೂಚಿಸಿದಂತೆ ಕಾಡು ಮತ್ತು ನಗರ, ಅದರ ಪ್ರತಿನಿಧಿಗಳಾದ ಏಕಲವ್ಯ ಮತ್ತು ಅರ್ಜುನನ ಪಾತ್ರಗಳ ಮುಖೇನ ಮಾನವ ಕೇಂದ್ರಿತ ಹಾಗೂ ಜೀವಕೇಂದ್ರಿತ ದೃಷ್ಟಿಗಳ ಸಂಘರ್ಷದ ಚಿತ್ರಣ ಈ ನಾಟಕದಲ್ಲಿ ಕೇಂದ್ರಪ್ರಜ್ಞೆಯಾಗಿ ಬೆಳೆಯುತ್ತದೆ. ನಾಟಕದ ಮೊದಲ ದೃಶ್ಯವೆ ಏಕಲವ್ಯನ ಮತ್ತು ಪರಿಸರದ ಅಭಿನ್ನತೆಗೆ ಸಾಕ್ಷಿಯಂತಿದೆ. ಪ್ರಕೃತಿಯ ಅಥವಾ ಪರಿಸರದ ವಿರಾಟ್ ದರ್ಶನದಲ್ಲಿ ಏಕಲಪ್ಯನು ಗೋಚರವಾಗುವ ಪ್ರಕ್ರಿಯೆ ಒಂದು ಮಾರ್ಮಿಕ ಉದಾಹರಣೆ.

ರಾತ್ರಿಯ ತಿಮಿರ ಗರ್ಭದಿಂದ ಇವುಗಳೆಲ್ಲ ಮೂಡಿದಂತೆಯೆ
ಅರುಣತೆ ಮಾಗುತ್ತಿರುವ ಪ್ರಾಚೀ ದಿಕ್ತಟಕ್ಕೆದುರಾಗಿ ಮಲೆತು
ತಲೆಯೆತ್ತಿರುವ ಮಲೆಯನೆತ್ತಿಯೊಂದರಲ್ಲಿ ಗಿಡು ಬಳ್ಳಿಗಳ
ಇಡುಕುರೆಡೆಯೆಡೆ ಬೆಳ್ನೊರೆಯ ಚವರವೀಸಿ ಕಲ್ಲರೆಯ
ನಡುವೆ ದುಮುಕುತ್ತಿರುವೊಂದರ್ಬಿಯ ಬಳಿ, ಅದರ
ಚರಣಸ್ಥಾನದಂತಿರುವ ಒಂದು ಹಾಸುಬಂಡೆಯ ಮೇಲೆ
ಏಕಲವ್ಯನ ಗಾತ್ರ ಕೊರೆದು ಬಿಡಿಸಿದಂತೆ ಮೂಡಿ
ಕಣ್‌ಗೊಳಿಸುತ್ತದೆ.
ಮೊದಮೊದಲು ಮಬ್ಬಾಗಿ ಸುತ್ತಲೂ ಎದ್ದಿರುವ
ಕೋಡುಗಲ್ಲುಗಳೊಡನೆ ತಾನೂ ಒಂದು ಮನುಷ್ಯಾಕಾರದ
ಕಲ್‌ಕೋಡಾಗಿ ಕಾಣಿಸಿಕೊಳ್ಳುತ್ತಾನೆ.[೨೧]

ಈ ಮೇಲಿನ ಉದ್ಧರಣೆ ಪರಿಸರದೊಂದಿಗಿನ ಸಂಬಂಧದ ಅಭಿನ್ನತೆಯನ್ನು ಸಂಕೇತಿಸುತ್ತದೆ. ಸಸ್ಯ ಸಂಕುಲ, ಪ್ರಾಣಿ ಸಂಕುಲ ಹಾಗು ಒಟ್ಟು ಪರಿಸರದೊಂದಿಗಿನ ಏಕಲವ್ಯನ ಸಂಬಂಧ ಈ ದೃಶ್ಯದಲ್ಲಿಯೇ ಎದುರಾಗುತ್ತದೆ. ಅವನ ವೇಷಭೂಷಣಗಳು ಅಂಥ ಪರಿಸರದ ಭಾಗವೇ ಆಗಿವೆ. ಅಂತೆಯೇ ಪರಿಸರದೊಂದಿಗಿನ ಅವನ ಸಂಬಂಧವು 'ಪವಿತ್ರತರಮಪ್ಪುದೀ ಕಾಡುಮಲೆ' ಎಂಬ ವಿವೇಚನೆಯಿಂದಲೇ ಬಂದದ್ದು. ಪ್ರಕೃತಿಯೊಂದಿಗಿನ ಏಕಲವ್ಯನ ಸಂಬಂಧವನ್ನು ನಾಟಕದ ಮುಂದಿನ ಭಾಗ ಸ್ಪಷ್ಟಪಡಿಸುತ್ತದೆ.

ಕಣ್‌ತೆರೆ, ಓ ನಿಮೀಲಿತಾ ಉಷಾಲಲಿತೆ;
ನಿನ್ನಾದಿಗಂತ ದೀರ್ಘ ಕಟಾಕ್ಷವಿಕ್ಷೇಪದಿಂ
ಸುಪ್ರಸನ್ನತೆಯಕ್ಕೆ ಈ ಗಿರಿಧರಾ ಚೇತನಕೆ,
ಮೂಡಿ ಬಾ, ಓ ನಲ್ ಪಗಲೆ,
ರಶ್ಮಿ ಸೂತ್ರದ ಕಾಂತಿಧೋತ್ರದಿ ಅಲಂಕರಿಸುತೀ
ವಿಪಿನ ಸುಂದರ ಪರ್ವತಾಂಗಮಂ !

....

ಕಂದರದೊಳಲೆಯುತಿಹ ಮಂಜು ಮೋಡಂ, ನೋಡ,
ಗುರುವುಟ್ಟ ಧವಳೊತ್ತರೀಯದಂಚಲಮೆನಲ್
ಸಂಚಲಿಸುತಿಪ್ಪುದು ಕೆರಳ್ಕುತಾಕಾಂಕ್ಷೆಯಂ
ಅಃ ಆಲಿಸಾ ಅಲೆಯುತಿಹ ಪರಪುಟ್ಟನಿಂಚರಂ
ಬೆಳ್ಳಂಗೆಡೆಯುವೀ ಅರ್ಬ್ಬಿಯೋಂಕಾರಮಂ ಮೀರ್ದು
ಸಾರುತಿಹುದಿಂಗಿತದಿ ಗುರುದೇವನಾಗಮನಮಂ
ದುಮುಕುವೀ ಅರ್ಬ್ಬಿಮೊರೆಯಂ
ಶ್ರುತಿಯವೋಲಾಶ್ರಯಿಸಿ
ತಾನತಾನದಿ ಗಾನಗೈಯುತಿದೆ ಕಾಜಾಣವದೊ
ಸುಸ್ವನದಿ, ಕೇಳ್, ಸುಖಾಗಮನ ಸಂಗೀತಮಂ !

....

ಅಲರಿಮ್, ಎಲೆ ಸಸ್ಯ ಸೋದರರಿರಾ,
ಪುಷ್ಪಮಯಮಪ್ಪವೋಲ್ ಗುರು ಬರ್ಪ ಗಿರಿಪಥಂ
ಮೂಡಿ ಬರ್ಪೀ ಮುಂಬಿಸಿಲ ಹೊಂಬಣ್ಣದೊಳ್
ಮಿರುಮಿರುಗುವಿರ್ಬನಿಯ ತಳಿರ ತೋರಣಗಟ್ಟಿ
ಮದ್ಗುರುಗೆ ಸುಸ್ವಾಗತಂಗೆಯ್ಯಿಂ, ಓ ತರುಗಳಿರ.

....

ಓ ಲಾಸ್ಯಮಯಿ, ನಿರ್ಝರಿಣಿ, ನಿನಗಿದೊ ನಮಸ್ಕಾರ!
ಗಿರಿ ಶಿವ ಜಟಾಜೂಟದಿ ಜಗುಳ್ದಿಳಿವ ಗಂಗೆ,
ಶೈಲ ಶಂಕರನಂಕವನಲಂಕರಿಪ
ಅರಣ್ಯ ಪಾರ್ವತಿಯ ತಂಗೆ,
ನನ್ನ ಕಿವಿಗಿಂದಾವ ಮಂತ್ರವನಿಂತು ಘೋಷಿಸುವೆ?
ಕಾಲ ಗಹ್ವರ ಗುಹ್ಯ ಗರ್ಭದೊಳ್
ಸುರುಳಿ ಸುತ್ತಿರುವಾವ ವಿಧಿಯಂ ಮೊರೆದು ಕರೆದು
ಜಾಗ್ರತಂಗೊಳಿಸುತಿಹೆ? ಪುಟ್ಟದಂದಿಂ ತೊಟ್ಟು
ನಿನ್ನ ಜೋಗುಳವೆನ್ನ ತೊಟ್ಟಲಂ ತೂಗಿರ್ಪುದಾದೊಡಂ
ನಿನ್ನ ನೀರ್ಗೊರಳಿಂದು ಬೇರೆಯೆಂಬಂದದಿಂ
ಹೃದಯಮಸ್ಥಿರಮಾಗೆ ಸಾರುತಿಹುದಾದೇಶಮಂ
ಪೋದ ಜನ್ಮದ ಮೊರೆಯೊ? ಬರ್ಪಪುಟ್ಟಿನ ಕರೆಯೊ?
ಮೇಣ್, ಮುಂದಿರ್ಪ ಬಾಳಂ ಮುನ್ನೊರೆವ
ತೊರೆಯ ಮರೆಯಾಂತುಲಿವ ಬಿದಿಯ ನಾಲಗೆಯೊ?”

ಈ ಮೇಲಿನ ಉದ್ಧರಣೆಯಲ್ಲಿ ಗುರುವಿನ ಆಗಮನಕ್ಕಾಗಿ ಏಕಲವ್ಯನಂತೆಯೆ ಒಟ್ಟು ಪರಿಸರವೇ ಸ್ವಾಗತಿಸಲು ಸಂಭ್ರಮಗೊಂಡಿರುವ ಚಿತ್ರ ಎದುರಾಗುತ್ತದೆ. ಸೂರ್ಯೋದಯ, ಕಣಿವೆಗಳಲ್ಲಿ ಹರಿಯುವ ಮಂಜು ಮೋಡಗಳು, ಅಸಂಖ್ಯ ಪಕ್ಷಿಗಳ ಗಾನ, ಧುಮುಕುವ ಅಬ್ಬಿಯ ಮೊರೆ, ಕಾಜಾಣದ ಗಾಯನ, ಸಸ್ಯಗಳಲ್ಲಿ ಅರಳಿರುವ ಪುಷ್ಪಗಳು, ಸೂರ್ಯನ ಆಗಮನದಿಂದ ತಳಿರು ತೋರಣಗಟ್ಟಿದಂತೆ ಮಿನುಗುತ್ತಿರುವ ಇಬ್ಬನಿ - ಹೀಗೆ ಸಮಷ್ಟಿ ಪರಿಸರ ಗುರುವಿನ ಆಗಮನಕ್ಕಾಗಿ ಕಾಯುತ್ತಿರುವ ಪ್ರಕ್ರಿಯೆ ಏಕಲವ್ಯನೊಂದಿಗಿನ ಸೋದರತ್ವದ ಸಂಬಂಧವನ್ನು ತೆರೆದಿಡುತ್ತದೆ. ಇದೇ ವಿಚಾರವನ್ನು ಈ ಮುಂದಿನ ಏಕಲವ್ಯನ ತಾಯಿಯ ಮಾತುಗಳು ಪುಷ್ಟಿಗೊಳಿಸುತ್ತವೆ.

ಉಂಡ ಮೇಲಾದಡಂ ಪೋಗಲಾಗದೆ ಅಡವಿಗೆ?
ಕಾಡೇನ್ ಮಂಜೆ? ಬಿಸಿಲೇರ್ದೊಡಳಿವುದಕೆ?
ನಿಚ್ಚಮುಂ ಇವನದು ಇದೊಂದು ಪಾಡು!
ಕಾಡು ! ಕಾಡು ! ಕಾಡು !
....
ಅಣುಗನಲ್ತೆ ಆಡಲಿ!
ಪಿಂತಿಲ್ಲ, ಮುಂತಿಲ್ಲ, ಬೆನ್ನಿಲ್ಲ, ಬಸಿರಿಲ್ಲ;
ಒರ್ವನೊಂಟಗನಲ್ತೆ? ಬೇಸರ್ ಕಳೆವುದೆಂತು?
ಮಿಗಗಳ್, ಪಕ್ಕಿಗಳ್, ಮರಗಳ್, ಕಲ್ಗಳ್,
ತಿಂಗಳ್, ನೇಸರ್, ಉದಯಾಸ್ತಂಗಳ್,
ತೊರೆಗಳ್,
ಮೇಣೆಂತಪ್ಪ ನೀರ್‌ಬೀಳಗಳ್?
ಇವೆ ಅಲ್ತೆ ಒಡವುಟ್ಟುಗಳ್? ಮೇಣ್ ಒಡನಾಡಿಗಳ್![೨೩]

ತಾಯಿಯ ಈ ಮೇಲಿನ ಮಾತುಗಳಲ್ಲಿ ಏಕಲವ್ಯನ ನಿಸರ್ಗದೊಂದಿಗಿನ ಸಂಬಂಧ ಮತ್ತು ಒಡನಾಟಗಳು ಸ್ಪಷ್ಟವಾಗುತ್ತವೆ. ಈ ಒಡನಾಟ ತನ್ನ ತಾಯಿಯನ್ನು ಮರೆಯುವಷ್ಟು ಗಾಢವಾದದ್ದು. 'ಪಸಿವು ನೀರಳ್ಕೆಗಳಂ ಮರೆಯಿಪ್ಪವೋಲ್ ಮಾಳ್ಪ ಆ ಪ್ರಕೃತಿಗಳ್ ದಿಟಂ ಸುಕೃತಿಗಳ್' ಎಂದು ತಾಯಿ ತನ್ನನ್ನು ಮರೆಯುವಂತೆ ಮಾಡುವ ಪ್ರಕೃತಿಯೊಂದಿಗಿನ ಸೆಳೆತ ನಾಟಕದುದ್ದಕ್ಕೂ ಪ್ರಕಟಗೊಳ್ಳುತ್ತದೆ. ಮಾನವ ಸಂಬಂಧಗಳು, ಮಾನವ ಮತ್ತು ನಿಸರ್ಗ ಸಂಬಂಧಗಳು ಸಹಜತೆಯಿಂದ ಕೂಡಿದ್ದರೆ ಮಾತ್ರ ಎಲ್ಲವೂ ಸವಿಯಾಗಿ ಕಾಣುತ್ತವೆಂಬ ಧೋರಣೆ ಈ ನಾಟಕದಲ್ಲಿದೆ. ಅಂಥ ಜೀವಕೇಂದ್ರಿತ ಸಂಬಂಧದ ಏಕಲವ್ಯ ತನ್ನ ಪರಿಸರಕ್ಕೆ ಒದಗಿದ ಅನ್ಯಾಕ್ರಮಣಕ್ಕೆ ಮುಖಾಮುಖಿಯಾಗುವ ಚಿತ್ರ ಈ ಕೆಳಗಿನದು.

ನನ್ನ ರಕ್ಷೆಯಿೀ ಅರಣ್ಯ ಸೀಮೆಯಂ
ಮುತ್ತಿದವರಂ ಸೊರ್ಕಿಳಿಸಿ ಪಿಂತೆಳ್ಚಿದಪೆನೆಂದು
ರೋಷದಿಂ ತರಿಸಂದು ಮರದಿಂದಿಳಿದು,
ಬಿಲ್ಲಕೊಪ್ಪಿಗೆ ಹೆದೆಯನೇರಿಸುತ್ತಿರೆಯಿರೆ

ತೆಕ್ಕನೆಯೆ ಕಿವಿಗೆ ಕಿಕ್ಕಿರಿಯಿರಿದುದೊಂದಾರ್ಭಟಂ
ಹೂಂಕರಿಸುವೆಕ್ಕಲನ !
ಮಲೆಯೆ ಗುಡುಗಿತ್ತು; ಕಾಡೆ ನಡುಗಿತ್ತು;
ಪೂಡಿದೆನ್ ಕೂಡೆ ಸರಳನ್ ಹೆದೆಗೆ!
ಹೂಂಕೃತಿಯ ಕೇಳ್ದು ಗುರಿಯಿಟ್ಟನ್, ಎಚ್ಚೆನ್ ![೨೪]

ಇದು ಕಾಡವರ ಮತ್ತು ನಾಡವರ ನಡುವಿನ ಮತ್ಸರದ ಒಂದು ವಾಗ್ಯುದ್ಧವಾಗಿದೆ.

"ನನ್ನಯ್ಯನಿಂದೆನಗೆ ಬಂದಡವಿ ಈ ಪೊಡವಿ.
ನನ್ನಯ್ಯನಾದಿಂ ಬಳಿಂ ನಾನಿಲ್ಲಿಗೊಡೆಯನ್
ನನ್ನಾಜ್ಞೆಯಿಲ್ಲದೆಯೆ ನನ್ನಡವಿಯಂ ಪೊಕ್ಕು
ರಕ್ಷೆಯ ಮೃಗಂಗಳಂ ಬೇಂಟೆಯಾಡುವ ನೀನ್
ಕೊಳ್ಳೆಗಾರನ್, ಕಳ್ಳನ್, ದಂಡ ನಾರ್ಹನ್ !
ನಿನ್ನ ಊರತ್ತಣ್ಗೆಯಿರ್ಕೆ ನಿನ್ನಾಳ್ವ ಬಿಂಕಂ
ನಾನೆಚ್ಚುದೀ ವರಾಹನನ್ ಉಳಿದು
ಕ್ಷೇಮದಿಂ ಬಿಟ್ಟು ತೊಲಗೀ ಅಡವಿಯಂ![೨೫]

ಅರ್ಜುನನ ನಾಗರೀಕ ಅಹಂಕಾರದ ವಿಕೃತ ನಾಟ್ಯವೇ ಇಲ್ಲಿ ಎದುರಾಗುತ್ತದೆ. ಕೀರ್ತಿಶನಿಯ ಬೆಂಬತ್ತಿದ ನಾಗರೀಕತೆಯ ವಿಡಂಬನೆಯೂ ಇಲ್ಲಿ ಮಾರ್ಮಿಕವಾಗಿ ಪ್ರಕಟಗೊಂಡಿದೆ. ನಗರ ಹಾಗೂ ನಾಗರೀಕ ಜೀವನದಿಂದ ಕಾಡನ್ನು ಹೊಕ್ಕ ಅಶ್ವತ್ಥಾಮ ಹಾಗೂ ದ್ರೋಣನ ಪ್ರವೇಶದಿಂದ ಕಾಡಿನ ವಿವಿಧ ಮುಖಗಳು ಮೈದೋರುತ್ತಾ ಹೋಗುತ್ತವೆ. ಹಾಗೆಯೇ ನಾಗರೀಕ ಬದುಕಿನ ಅಹಂಕಾರ, ಅಸೂಯೆ, ಮತ್ಸರಗಳ ಮಧ್ಯೆ ಬೇಸತ್ತ ಬದುಕಿಗೆ ಕಾಡಿನ ರೌದ್ರತೆ ಹಾಗೂ ರಮಣೀಯತೆ ಶಾಂತಿಪೀಯೂಷವನ್ನು ವರ್ಷಿಸುವ ತಾಣವಾಗಿ ಕಾಣುತ್ತದೆ.

ಎನಿತು ತಣ್ಪೆರ್ಪುದೀ ಅಡವಿಯೆರ್ದೆಯೊಳ್!
ಕಾಡಾದೊಡಂ ನೂರುಮಡಿ ಲೇಸು
ಕರುಬು ಕಿಚ್ಚುರಿವ ಆ ನಮ್ಮ ನಾಡಿಗಿಂ[೨೬]

ಈ ಮೇಲಿನ ದ್ರೋಣನ ಮಾತುಗಳು ನಿಸರ್ಗದ ವಿವಿಕ್ತ, ಪ್ರಶಾಂತ ಪರಿಸರದೊಂದಿಗೆ ನಗರ ಪರಿಸರದ ವೈರುಧ್ಯವನ್ನು ನೆನಪಿಸುತ್ತದೆ. ಹಾಗೆಯೇ ನಾಗರೀಕ ಪರಿಸರದಲ್ಲಿ ಶಿಕ್ಷಣದ ಅಹಂಕಾರದ ಪರಾಕಾಷ್ಠೆಯ ಚಿತ್ರವೂ ಎದುರಾಗುತ್ತದೆ. ಅಂಥ ಶಿಕ್ಷಣದ ಮಾದರಿಯಂತಿರುವ ಅರ್ಜುನನ ವರ್ತನೆ 'ಕಾಡ ಬೇಡರ ಹುಡುಗನ ಬೆರಳ್ ಕೊಯ್ದು ಆ ರಕ್ತ ಪಂಕದೊಳಿವನ ಕೀರ್ತಿ ಪಂಕೇಜಮಂ ಮೆರೆಯಲು' ಮುಂದಾಗುವ ನೆಲೆಯಲ್ಲಿ ನಾಗರೀಕ ವಿದ್ಯೆಯ ಮಿತಿಗಳನ್ನು ಅನರ್ಥಗಳನ್ನು ಪರಿಚಯಿಸುತ್ತದೆ.

ಲೋಕತ್ರಯಂಗಳೊಳ್ ನಿನ್ನಂ ಮೀರ್ದರಿಲ್ಲಮೆನೆ
ನಿನಗೆ ಬಿಲ್‌ಬಿಜ್ಜೆಯಂ ಕಲಿಪೆನೆಂದಾಡುತಿರ್ದೆನ್?

ಈಗಳೋ ಪಿಡಿದಿರ್ಪುದಾತಂಗೆ ಕೀರ್ತಿಶನಿ ;
ಪೆಸರ್ ! ಪೆಸರ್ ! ಪೆಸರ್ !
ತನ್ನೊಂದು ಪಿರಿಯ ಪೆಸರ್,
ಇನ್ನಿಲ್ಲಮೆಣೆ ತನಗೆ ಎಂಬಾ ಪೆಸರ್
ತನ್ನದಾಗಲ್ ವೇಳ್ಕುವೆಂಬುದಾತಂಗೆ ಪೈತ್ಯಂ!
....
ಬಿಂಕಕ್ಕೆ ಡೊಳ್ಳಿವುದದು ವಿದ್ಯೆಯೆ? ಅವಿದ್ಯೆ!
ತವಿಪುದಾವುದೊ ಅಹಂಕಾರಮಂ ಅದು ವಿದ್ಯೆ;
ಮಿಕ್ಕುದೆಲ್ಲಂ ಅವಿದ್ಯೆ!
ವಿದ್ಯೆಯೆಂಬಾ ಪೆಸರ ಮರೆಯೊಳಾನ್
ಅವಿದ್ಯೆಯಂ ಪೋಷಿಸುವ ಗುರುವಾದೆನಲ್ತೆ!

ಪರಿಸರ, ಜ್ಞಾನ, ಅಧಿಕಾರ, ಪ್ರಭುತ್ವ, ಅಧೀನತೆ ಈ ಪ್ರಶ್ನೆಗಳು ಒಟ್ಟಾರೆಯಾಗಿ ಜಿಜ್ಞಾಸೆಗೊಂಡಿರುವ ಮಹತ್ವದ ರೂಪಕವಾಗಿ 'ಬೆರಳ್‌ಗೆ ಕೊರಳ್' ನಾಟಕವನ್ನು ಗಮನಿಸಬೇಕು. ನಾಟಕದ ಎಲ್ಲ ಕ್ರಿಯೆ ಹಾಗೂ ಸಂಘರ್ಷಗಳು ಕಾನನ ಮಧ್ಯೆಯೇ ನಡೆಯುವುದು ಈ ನಾಟಕದ ವಿಶೇಷ. ಇಲ್ಲಿ ಧ್ಯಾನಾಸಕ್ತಿಯ ವಿಭಿನ್ನ ಪ್ರಶ್ನೆಗಳನ್ನು ಮನುಷ್ಯ ಸ್ವಭಾವದ ವೈಚಿತ್ರ್ಯಗಳು ಅಧಿಕಾರದ ಎಲ್ಲ ಮಟ್ಟದ ಅಹಂಕಾರಗಳನ್ನು ಕಾಡಿನ ಸಾಕ್ಷಿತ್ವದಲ್ಲಿ ಮಹತ್ವದ ಸಂಘರ್ಷಕ್ಕೆ ಒಳಪಡಿಸಿವೆ. ಪುರಾಣದ ಪ್ರತೀಕದ ಹಿನ್ನೆಲೆಯನ್ನು ವರ್ತಮಾನಕ್ಕೆ ತರುವ ಈ ಬಗೆ ಕುವೆಂಪು ಪ್ರತಿಭೆಗೆ ಹೊಸತಾದದ್ದೇನು ಅಲ್ಲ. ಆದರೆ ಪರಿಸರದ ಶಿಶುವಾದ ಏಕಲವ್ಯ ಏಕಕಾಲಕ್ಕೆ ನಗರ ಪ್ರಜ್ಞೆಯ, ಪ್ರಭುತ್ವ ಶಕ್ತಿಯ ಹಾಗೂ ಜಡಮೌಲ್ಯಗಳ ಒತ್ತಡಗಳಿಗೆ ಸಿಲುಕಿ ಭಿನ್ನವಾಗುತ್ತಾನೆಂಬ ಗಾಢ ವಿಷಾದವನ್ನು ಈ ನಾಟಕ ಪ್ರತಿಮಿಸಿದೆ. ಈ ಹೊತ್ತು ನಾವೆಲ್ಲ ಎದುರಿಸುತ್ತಿರುವ ಇಂಥದೇ ಸಂಕೀರ್ಣ ಸಂದರ್ಭದೊಂದಿಗೆ ಈ ನಾಟಕವನ್ನು ಪರಿಶೀಲಿಸಿದರೆ ಇನ್ನೂ ಅಸಂಖ್ಯ ಹೊಳಪುಗಳು ನಮ್ಮ ತಿಳಿವಳಿಕೆಗೆ ಬಂದೀತು.

ಧನ್ಯನ್ ನೀನ್ ಏಕಲವ್ಯ, ಧನ್ಯನೆ ದಿಟಂ.
ಎನಿತೆನಿತೊ ಬಾಲರ್ಕಳನ್ ನಾನ್ ಕಂಡಿಹೆನ್,
ಕಲಿಸಿಹೆನ್ ಕಾಣೆನಾನ್ ಶ್ರದ್ಧೆಯೊಳ್ ನಿನಗೆಣೆಯನ್
ಇನ್ನೆವರಮ್ ಎನ್ನ ಹಿರೆಮೆಯನೆನಗೆ ತೋರಿದಯ್;
ಗುರುಕೃಪಾ ಮಹಿಮೆಯಂ ಲೋಕಕ್ಕೆ ಸಾರಿದಯ್
ನೀನು ಗುರುವೆಂದೊಲಿದೆ ನನಗೆ ಗುರುತನವಿತ್ತೆ
ಮೇಣ್, ಗುರುವಾದೆ..................
ಅದೊ, ಪರ್ವತಾರಣ್ಯಚೇತನಮೆ ಮೆಯ್ಗೊಂಡು
ಬರ್ಪಂತೆ ಬರ್ಪನಾ ಏಕಲವ್ಯನ್,

ಗಾತ್ರ ಭವ್ಯನ್ ! ದಿವ್ಯಮವನಾ ಪಿಡಿದ ಚಾಪಂ,
ಉಪಾಸನಾ ಶಕ್ತಿರೂಪಂ! ಅಃ ಏನ್ ವಿನಯಶಾಲಿ ![೨೭]

ಈ ಮೇಲಿನ ನಾಟಕದ ಎರಡೂ ಉಲ್ಲೇಖಗಳಲ್ಲಿ ನಾಡು - ಕಾಡಿನ ಪರಿಸರದಲ್ಲಿ ಪಡೆದ ಶಿಕ್ಷಣದ ಎರಡು ಮಾದರಿಗಳ ವ್ಯಕ್ತಿತ್ವವನ್ನು ಕಾಣಬಹುದು. ಎಲ್ಲವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಬೇಕೆಂಬ ಅರ್ಜುನನ ಅಹಂಕಾರದಲ್ಲಿಯೇ ಜೀವ ವಿರೋಧಿ ಧೋರಣೆಗಳನ್ನು ಕಾಣಬಹುದು. ಇದರ ಜಿಜ್ಞಾಸೆಯೇ ನಾಟಕದ ಬೀಜ. ಅರ್ಜುನನ ಸರ್ವಾಧಿಕಾರಿ ವೃತ್ತಿಯು ಪರಿಸರದ ಮೇಲಿನ ಆಕ್ರಮಣದಂತೆ ಕಾಣುತ್ತದೆ. ನಾಗರೀಕ ಅಹಂಕಾರದ ಈರ್ಷ್ಯೆಯ ಪ್ರತಿರೂಪವು ಹಾಗೂ ಅದರ ಕ್ರೂರತನದ ಮಾದರಿಯಂತೆ ಅರ್ಜುನ ಇಲ್ಲಿ ಕಾಣುತ್ತಾನೆ. ಅರ್ಜುನನ ಮಚ್ಚರಾಗ್ನಿಗೆ ಏಕಲವ್ಯ, ಅವನ ಪರಿಸರ ಎಲ್ಲವು ಆಹುತಿಗೊಳ್ಳುವ ಅನರ್ಥ ಪರಂಪರೆಯನ್ನೇ ಈ ನಾಟಕ ಈ ಬಗೆಯ ಓದಿನಿಂದ ಧ್ವನಿಸುತ್ತದೆ.

ಏಕಲವ್ಯನ ವಿದ್ಯಾಸಾಮರ್ಥ್ಯವನ್ನು ಪರೀಕ್ಷಿಸಲು ಗಗನಪಕ್ಷಿಯನ್ನು ಕೊಲ್ಲು ಎಂದು ಸೂಚಿಸುವ ಸಂದರ್ಭದಲ್ಲಿ ಏಕಲವ್ಯನ ವರ್ತನೆ ಹಾಗೂ ಪ್ರತಿಕ್ರಿಯೆ ಜೀವಕೇಂದ್ರಿತ ನೆಲೆಗೆ ಉತ್ತಮ ಮಾದರಿಯಾಗಿದೆ. ಅಪರಾಧವಿಲ್ಲದ ಸಾಧುವನ್ನು ಕೊಲ್ಲುವುದು ಪಾಪಕಾರ್ಯವೆಂದು. ಅದು ಹಾಗೆಯೇ ಆತ್ಮಹಾನಿಯು, ಸರ್ವನಾಶಕ್ಕೂ ಕಾರಣವಾಗುತ್ತದೆಂಬ ಏಕಲವ್ಯನ ಧೋರಣೆ ಮೇಲೆ ಸೂಚಿಸಿದ ಮಾದರಿಗೆ ಉತ್ತಮ ಪ್ರತಿಕ್ರಿಯೆಯಾಗಿದೆ. ಈ ಆಂತರ್ಯವನ್ನು ಅರಿಯಲಾರದ ದ್ರೋಣನು ಏಕಲವ್ಯನ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆಯುವುದರ ಮೂಲಕ ತನ್ನ ಆತ್ಮಹಾನಿಗೂ, ಸರ್ವನಾಶಕ್ಕೂ ಕಾರಣನಾಗುತ್ತಾನೆ. ಹಾಗೆಯೇ ದ್ರೋಣ ಏಕಲವ್ಯನ ಹೆಬ್ಬೆರಳನ್ನು ದಕ್ಷಿಣೆಯಾಗಿ ಸ್ವೀಕರಿಸುವುದೆಂದರೆ ಆದಿವಾಸಿ ಜನಾಂಗ ಪರಿಸರದಿಂದ ಪಡೆದ ಜ್ಞಾನ ಹಾಗೂ ಶಕ್ತಿಯನ್ನು ಸರ್ವನಾಶಗೈಯುವ ಪರಿಸರ ವಿರೋಧಿ ಚಟುವಟಿಕೆಯನ್ನು ಕೈಗೊಂಡಂತೆಯೇ ಸರಿ. ಈ ಕೆಳಗಿನ ಮಾತುಗಳು ಈ ಸಂಗತಿಯನ್ನೇ ವಿಶದಪಡಿಸುತ್ತವೆ.

ನಿನ್ನೀ ಬೆರಳ್‌ಗೆ
ಕೊಳ್ವುದೆಂದೇ ತೋರ್ಪುದಾ ಬಿದಿ
ನನ್ನ ಕೊರಳಂ !
....
ಮರಿಗೆ ಮರಿ : ಮರಿಗೆ ಮರಿ :
ಬೆರಳ್‌ಗೆ ಕೊರಳ್ ![೨೮]

ಏಕಲವ್ಯನ ತಾಯಿ ಅಬ್ಬೆಯ ಶಾಪವು ದ್ರೋಣನ ಕೊರಳನ್ನು ಮಾತ್ರ ಬಲಿ ತೆಗೆದುಕೊಳ್ಳದೆ ನನ್ನನ್ನು ಕೊಲ್ಲದೆ ಬಿಡದು ಈ ಶಾಪ ಎಂಬ ಏಕಲವ್ಯನ ಮಾತು ಮನುಷ್ಯಶಕ್ತಿ ಪರಿಸರಕ್ಕೆಸಗುವ ಆಘಾತಗಳಿಂದ ಇಡೀ ಜೀವ ಸಮೂಹದ ನಾಶಕ್ಕೆ ಕಾರಣವಾಗಬಹುದಾದ ದೊಡ್ಡ ಎಚ್ಚರವನ್ನು ಈ ನಾಟಕ ಅಂತಿಮವಾಗಿ ದರ್ಶನಗೈಯ್ಯುತ್ತದೆ. ಇಂಥ ದರ್ಶನಗಳಲ್ಲೇ ಕುವೆಂಪು ಅವರ ಜೀವಕೇಂದ್ರಿತ ಮಾದರಿಗಳು ಪ್ರಕಟಗೊಳ್ಳುತ್ತವೆ.

ಶಿವ ವಿಶ್ವನಾಥನ್ ಅವರು ಪ್ರಭುತ್ವ, ವಿಜ್ಞಾನ ಹಾಗೂ ಪರಿಸರದ ಸಂಬಂಧಗಳನ್ನು ಕುರಿತು ಮಾತನಾಡುವ ಸಂದರ್ಭದಲ್ಲಿ ಹೇಳುವ ಮಾತೊಂದು ಇಲ್ಲಿ ನೆನಪಾಗುತ್ತದೆ. ಏಕಲವ್ಯ ಹಾಗೂ ಅಬ್ಬೆಯ ಪ್ರಕೃತಿಯೊಂದಿಗಿನ

ಸಂಬಂಧ 'ಆದಿವಾಸಿಯೊಬ್ಬನ ಆಂತರ್ಯವು ಪ್ರಕೃತಿಯೊಂದಿಗೆ ರೂಪಿಸಿಕೊಳ್ಳುವ ಸಂಬಂಧ - ಇವು ಈ ಜಗತ್ತಿನ ಎಲ್ಲ ಹಾರ್ಡಿನ್ ಪ್ಯಾಡಿಕ್‌ಗಳ ವೈಜ್ಞಾನಿಕ ಆಧುನಿಕತೆಗಿಂತ ಹೆಚ್ಚು ಅರ್ಥವತ್ತಾದ್ದು; ಪರಿಸರ ಪೋಷಕವಾದದ್ದು"[೨೯] ಎಂಬ ಮಾತುಗಳು ಬೆರಳ್‌ಗೆ ಕೊರಳ್ ನಾಟಕದ ಚಿಂತನೆಯ ಮುಖ್ಯ ನೆಲೆಯೊಂದನ್ನು ಸಮರ್ಥಿಸುತ್ತವೆ.

ಅರ್ಜುನ (ಪ್ರಭುತ್ವ) ಮತ್ತು ದ್ರೋಣ (ವಿಜ್ಞಾನ) ಈ ಎರಡೂ ಪರಿಕಲ್ಪನೆಗಳ ಹಿಂದಿರುವ ಏಕರೂಪಿ ಜೀವನದರ್ಶನ ಎಂಬುದು ಶಿವ್ ವಿಶ್ವನಾಥನ್ ಅವರ ಚಿಂತನೆಯ ಹಿನ್ನೆಲೆಯಲ್ಲಿ ಪ್ರಕಟವಾಗುವ ವಿಚಾರ.

> ರಾಷ್ಟ್ರಪ್ರಭುತ್ವವು ತನ್ನ ಎದುರು ಇನ್ನೊಂದು ಶಕ್ತಿಕೇಂದ್ರವಾಗಿ ಬೆಳೆಯಬಲ್ಲ ಯಾವುದೇ ಜನಾಂಗೀಯ ಅಸ್ತಿತ್ವಕ್ಕೆ ಅವಕಾಶ ನೀಡಲಾರದು. ಹಾಗೆಯೇ ವಿಜ್ಞಾನವು ಯಾವುದೇ ಜಾನಪದ - ಜನಾಂಗೀಯ ಜ್ಞಾನರೂಪವೂ ತಾನು ಅಧಿಕೃತವೆಂದು ಹೇಳಿಕೊಳ್ಳುವುದನ್ನು ಸಹಿಸಲಾರದು. ಈ ಎರಡೂ ರೀತಿಯ ಜನಾಂಗೀಯ ರೂಪಗಳೂ ಆಧುನಿಕ ವ್ಯವಸ್ಥೆಯನ್ನು ಭಂಗಗೊಳಿಸುವಂಥವು.[೩೦]
>
> ಆಧುನಿಕರಣದ ಕಟ್ಟಡದ ಅಡಿಯಲ್ಲಿ ಅಸಹಿಷ್ಣುತೆಯ ಒಂದು ಪಂಚಾಂಗವೇ ಇದೆ. ಆಧುನಿಕತೆಯು ಮೂರನೆಯ ಜಗತ್ತಿನ ವಿಭಿನ್ನ ಜೀವನ ಪರಂಪರೆಗಳನ್ನು - ಅಲೆಮಾರಿಗಳ, ಆದಿವಾಸಿಗಳ, ಗ್ರಾಮೀಣರ ಮತ್ತು ರೈತರ ಬದುಕಿನ ವಿಧಾನಗಳನ್ನು - ಮಟ್ಟಹಾಕಿಯೇ ಆಧುನಿಕತೆಯೆಂಬ ಬಯಲನ್ನು ನಿರ್ಮಿಸುತ್ತದೆ.[೩೧]

ಅರ್ಜುನ ಮತ್ತು ದ್ರೋಣ, ಪ್ರಭುತ್ವ ಹಾಗೂ ವಿಜ್ಞಾನ ಪರಿಕಲ್ಪನೆಗಳ ಹಿಂದಿನ ಏಕರೂಪಿ ಜೀವನ ದರ್ಶನಗಳಂತೆ ಕಾಣುತ್ತಾರೆ. ಈ ಏಕರೂಪಿ ಜೀವನದರ್ಶನದ ಪ್ರಭುತ್ವವು ತನ್ನೆದುರು ಇನ್ನೊಂದು ಶಕ್ತಿಯಾಗಿ ಬೆಳೆಯಬಲ್ಲ ಏಕಲವ್ಯನ ಅಸ್ತಿತ್ವವನ್ನು ಬಲಿ ತೆಗೆದುಕೊಳ್ಳುವುದು ಸ್ಥಳೀಯ ಜ್ಞಾನ ಹಾಗು ಶಕ್ತಿಯನ್ನು ಸಹಿಸಲಾರದ ಪ್ರಕ್ರಿಯೆಯನ್ನು ಸಮರ್ಥಿಸುತ್ತದೆ.

ಪರಿಸರದ ಸಂಬಂಧಗಳನ್ನು ಅಸ್ತವ್ಯಸ್ತಗೊಳಿಸುವುದರಿಂದ ಆಗುವ ಅನಾಹುತಗಳ ಪರಿಣಾಮ ಯಾವ ಬಗೆಯದೆಂಬುದನ್ನು ಈ ನಾಟಕದಲ್ಲಿನ ತಾಯಿಯ ಶಾಪ ಹಾಗೂ ಏಕಲವ್ಯನ ಅಂತಿಮ ಮಾತುಗಳು ಧ್ವನಿಸುತ್ತವೆ.

> ಅಬ್ಬೆ - ಆರ್‍ಗೊ ಬಲಿ ನನ್ನ ಕಂದನ ಬೆರಳ್
> ಬಲಿಯಕ್ಕೆ ಆ ಪಾಪಿಯ ಕೊರಳ್ !
>
> ....
>
> ಏಕಲವ್ಯ - ನನ್ನನುಂ ಕೊಳ್ಳದೆಯೆ ಬಿಡದು ನಿನ್ನೀ ಶಾಪಂ ![೩೨]

ಪ್ರಸ್ತುತ ಸಂದರ್ಭದಲ್ಲಿ ಜಗತ್ತಿನೆಲ್ಲೆಡೆ ಪರಿಸರ ಪ್ರಜ್ಞೆಯ ಕೊರತೆಯಿಂದ ಮನುಷ್ಯನ ಅನೇಕ ಯೋಚನೆ ಮತ್ತು ಯೋಜನೆಗಳು ಅವಘಡಗಳಿಗೆ ಗುರಿಯಾಗಿಸಿವೆ. ಪ್ರಗತಿ ಹಾಗೂ ಅಭಿವೃದ್ಧಿಯ ನೆಪಗಳಲ್ಲಿ ತನ್ನ ಗೋರಿಯನ್ನು ತಾನೆ ಕಟ್ಟಿಕೊಳ್ಳುತ್ತಿರುವ ಸಂದರ್ಭವು ಇದಾಗಿದೆ. ಹಾಗಾಗಿ ಜಗತ್ತಿನಾದ್ಯಂತ ಇಕಾಲಜಿಯ ಅಧ್ಯಯನಗಳು ಪ್ರಮುಖ ಸ್ಥಾನವನ್ನು ಪಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಕೃತಿಗಳನ್ನು ಇಂಥ ಅಧ್ಯಯನಗಳಿಗೆ ಗುರಿಪಡಿಸುವ ಪ್ರಕ್ರಿಯೆಯು ಚುರುಕಾಗಿದೆ. ಅಂಥ ಅಧ್ಯಯನಗಳಿಂದ ಮನುಷ್ಯ ಮತ್ತು

ಪರಿಸರ, ಸಂಸ್ಕೃತಿ ಮತ್ತು ಪರಿಸರ, ಸಾಹಿತ್ಯ ಮತ್ತು ಪರಿಸರ, ವಿಜ್ಞಾನ ಮತ್ತು ಪರಿಸರ, ಪರಿಸರ ಮತ್ತು ನೈತಿಕತೆ ಮೊದಲಾದ ಸಂಬಂಧಗಳನ್ನು ಅರಿಯುವ ಪ್ರಯತ್ನಗಳು ಮುಖ್ಯವಾಗುತ್ತವೆ. ವಿಶ್ವದ ಜೀವ ಸಮಸ್ತವನ್ನು ಅದರ ಪರಿಸರವನ್ನು ಒಂದು ವ್ಯಕ್ತಿತ್ವವನ್ನಾಗಿ ಕಾಣುವ ದರ್ಶನ ವಿಮರ್ಶೆ ತೇಜಸ್ವಿಯವರ ಮಾತಿನಲ್ಲಿ ಹೇಳುವುದಾದರೆ ಸಂಶ್ಲೇಷಣಾತ್ಮಕ ಕಥನಗಳಾಗಿ ಓದಬೇಕಾದ ತುರ್ತು ಪ್ರಸ್ತುತ ಸಂದರ್ಭದ್ದಾಗಿದೆ.

೬. ಪರಿಸರ ಸಹೋದರತ್ವ ಮತ್ತು ಮೋಡಣ್ಣನ ತಮ್ಮ

ಮಕ್ಕಳಲ್ಲಿ ಪರಿಸರ ಪ್ರೀತಿಯನ್ನು ಮತ್ತು ಪರಿಸರವನ್ನು ಕುರಿತು ಹೊಸ ಬಗೆಯ ಎಚ್ಚರವನ್ನು ಹುಟ್ಟಿಸುವ ಹಂಬಲ ಕವಿಯ ಅನುಭವದಾಳದಲ್ಲಿ ಮೂಡಿನಿಂತಿದೆ. ಹಾಗಾಗಿ ಪ್ರಕೃತಿ ಜಗತ್ತನ್ನು ಸೇರುವ ಹೆಬ್ಬಯಕೆಯನ್ನಿಟ್ಟುಕೊಂಡಿರುವ ಬಾಲಕನನ್ನು ನಾಟಕದ ಪ್ರಮುಖ ಪಾತ್ರವಾಗಿ ಚಿತ್ರಿಸಿದ್ದಾರೆ. ಸಾಮಾನ್ಯತೆಯನ್ನು, ಲೌಕಿಕತೆಯನ್ನು ಮತ್ತು ಅಲ್ಪತೆಯನ್ನು ಕಳಚಿಕೊಂಡಿರುವ ಶಿಶುಚೇತನ ಅಸಮಾನ್ಯತೆಯ, ಅಲೌಕಿಕತೆಯ ಮತ್ತು ಮಹತ್ತಾದ ವಿಸ್ಮಯಗಳ ಕಡೆ ಮುಖ ಮಾಡಿ ನಿಂತಿರುವುದು ಹೊಸ ಅರ್ಥಪರಂಪರೆಗಳನ್ನು ಹುಟ್ಟಿಸುವಲ್ಲಿ ಸಹಕಾರಿಯಾಗಿದೆ. ಪ್ರಸ್ತುತ ಕಾಲಮಾನದ ಕೃತಕ ಪರಿಸರ ಸ್ನೇಹಿ ವ್ಯವಸ್ಥೆಗಳನ್ನು ಪ್ರಶ್ನೆ ಮಾಡುವುದರತ್ತ ಈ ನಾಟಕ ಸಾಗಿದೆ.

ಅನಾದಿ ಕಾಲದಿಂದ ಪುರಾಣ, ಕಾವ್ಯ, ಕಥೆಗಳಿಗೆ ಪರಿಸರವೇ ವಸ್ತುವಾಗಿತ್ತು. ಇದರ ಮುಂದುವರಿದ ರೂಪವಾಗಿ ಅಥವಾ ಭಾಗವಾಗಿ ನವೋದಯ ಸಾಂಸ್ಕೃತಿಕ ಸಂದರ್ಭದ ಕಾವ್ಯದ ವಸ್ತುಗಳನ್ನು ಗುರುತಿಸಬಹುದಾಗಿದೆ. ನಿತ್ಯ ನೂತನ ಮತ್ತು ನಿತ್ಯ ನವೀನ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳುವ ನವೋದಯ ಪ್ರತಿಭೆಗಳು ಮಾನವ ಮತ್ತು ಪ್ರಕೃತಿಯೊಂದಿಗೆ ಇರುವ ಸ್ನೇಹ ಮತ್ತು ಆಪ್ತತೆಗಳನ್ನೂ ವಸ್ತುವಾಗಿ ಸ್ವೀಕರಿಸಿವೆ. ಇದರ ಫಲವಾಗಿ ಸಣ್ಣ ಹುಡುಗ ಮೋಡಣ್ಣನ ತಮ್ಮನಾಗಿ ರೂಪುಗೊಂಡಿದ್ದಾನೆ. ಅಣ್ಣ - ತಮ್ಮ, ಅಕ್ಕ - ತಂಗಿ, ಅಂಥ ಸ್ನೇಹ ಭಾವಗಳು ನಿರಂತರವಾಗಿರುವಂತಹವು. ಪ್ರೀತಿ - ಪ್ರೇಮಗಳಿಂದ ತುಂಬಿರುವಂತಹವು. ಹಾಗಾಗಿ ಕವಿ ಮೋಡವನ್ನು ಅಣ್ಣನಾಗಿ ಚಿತ್ರಿಸಿ, ಸಣ್ಣ ಬಾಲಕನನ್ನು ತಮ್ಮನಾಗಿ ಚಿತ್ರಿಸಿದ್ದಾರೆ. ಕವಿಯ ಕಲ್ಪನಾಲೋಕ "ಪರಿಸರ ಸಹೋದರತ್ವ"ದ ಕಡೆಗೆ ಚಲಿಸಿದೆ.

ಅಸಂಖ್ಯವಾದ ಅನುಭವ, ಆಯುಷ್ಯವಿರುವ ಮೋಡಣ್ಣ ಹುಡುಗನಿಗೆ ಅತ್ಯದ್ಭುತಗಳ ಆಗರವಾಗಿ ಕಾಣುತ್ತಿದ್ದಾನೆ. ನೀಲಾಕಾಶದಲ್ಲಿ ಒಂಟಿಯಾಗಿ ತೇಲುತ್ತಿರುವ ಮೋಡವನ್ನು ಕಂಡು ಬಾಲಕ ನನ್ನ ಜನ್ಮಕ್ಕಿಂತಲೂ ನಿನ್ನ ಜನ್ಮವೇ ಪುಣ್ಯಕರವಾದುದೆಂದು ತಿಳಿದು ಈ ಮಾತುಗಳನ್ನು ಆಡುತ್ತಿದ್ದಾನೆ.

ಬಲು ಸಂತೋಷದಿ ತೇಲುವೆಯಣ್ಣ;
ಬಳಲದೆ ಆಟವನಾಡುವೆಯಣ್ಣ.
ಮಿಂಚಿನ ಬಳಿಯೇ ನೀನಿರುವೆ;
ಮಿಂಚಿನ ಬಳೆಯನೆ ಧರಿಸಿರುವೆ.
ಗುಡುಗಿನ ಸಂಗಡ ಆಡುವೆ ನೀನು
ಗುಡುಗಾಟವ ಆಡುವವೊಲು ನಾನು

ದೂರದ ಗಿರಿಗಳ ಏರುವೆ ನೀನು
ದೂರದ ಪುರಗಳ ನೋಡುವೆ ನೀನು;"

ಎಂದು ಮೋಡಣ್ಣನ ಸಾಹಸಕಾರ್ಯಗಳನ್ನು ಲೀಲಾಜಾಲವಾಗಿ ಉಸುರುತ್ತಿದ್ದಾನೆ. ಇಲ್ಲಿ ನಿರೂಪಕರು ಮನುಷ್ಯ ಮತ್ತು ಪ್ರಕೃತಿಯ ನಡುವಿನ ಅಭಿನ್ನತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅಂತೆಯೇ ಇಲ್ಲಿನ ಮಗು ಮೋಡ, ಗಿರಿ, ಕಾಡುಗಳೊಂದಿಗೆ ಸುಲಭವಾಗಿ ಮಾತಾಡಬಲ್ಲ, ಜಗಳವಾಡಬಲ್ಲ, ನಿವೇದಿಸಿಕೊಳ್ಳಬಲ್ಲ ಮತ್ತು ಅವರುಗಳ ಬೋಧನೆಯನ್ನು ಕೇಳಬಲ್ಲ. ಹುಟ್ಟಿದ ಮಗುವಿನಲ್ಲಿ ಕೃತಕ ಬದ್ಧತೆ ಬೆಳೆಯುವುದಕ್ಕೆ ಮುನ್ನ ಇರುವ ಮುಗ್ಧತೆ ಈ ಮಗುವಿನಲ್ಲಿದೆ. ಎಳೆಯ ಮಕ್ಕಳಲ್ಲಿ ಕುವೆಂಪು ಪರಿಭಾವಿಸುತ್ತಿರುವ ವಿಶ್ವಮಾನವತೆ ಇದೇ ಆಗಿದೆ.

ಮೋಡಣ್ಣನ ಸಾಹಸ ಕಾರ್ಯಗಳಲ್ಲಿ ಭಾಗಿಯಾಗಲು, ಆತನ ಜೊತೆ ಸೇರಲು ಹೆಚ್ಚು ಕಾತುರನಾಗಿದ್ದಾನೆ. ಆದರೆ ಹುಡುಗನ ಶಕ್ತಿ ಸಾಮರ್ಥ್ಯಗಳನ್ನು ಗುರುತಿಸಿಯೋ ಅಥವಾ ಮುಂದೆ ಆತನಿಂದ ಪ್ರಕೃತಿ ಜಗತ್ತಿಗೆ ಆಗುವ ಅಪಾಯವನ್ನು ತಿಳಿದೋ ಮೋಡಣ್ಣ ತಮ್ಮನನ್ನು ತನ್ನ ಬಳಿಗೆ ಕರೆದುಕೊಳ್ಳಲು ಹಿಂಜರಿಯುತ್ತಿದ್ದಾನೆ. ಅವ್ವ ಬೈವಳು ನೀ ಬರಬೇಡ ಎಂದು ತಡೆಯುತ್ತಿದ್ದಾನೆ. ಇದರಿಂದ ಬೇಸತ್ತ ಹುಡುಗ ಗಿರಿಯ ಸಹಾಯವನ್ನು ನಾನಾ ಪರಿಯಲ್ಲಿ ಬೇಡುತ್ತಾನೆ. ಸ್ನೇಹ ಸಂಬಂಧಗಳು ಇಬ್ಬರ ನಡುವೆ ನಿರಂತರವಾಗಿ ರೂಪುಗೊಂಡಿರುವ ಬಗೆಯನ್ನು ನೆನಪಿಸುತ್ತಾನೆ. ಸವಿಯಾದ ಮುಂಜಾನೆಗಳನ್ನು ಬೆಟ್ಟ ಗುಡ್ಡಗಳಲ್ಲಿ ಕಳೆದ ಪರಿಯನ್ನು ಮನವರಿಕೆ ಮಾಡಿಕೊಡುತ್ತಾನೆ. ಕೊಳಲನ್ನು ಊದಿ ಹೃದಯಾನಂದವಾದ ಅನುಭವವನ್ನು ಅಭಿವ್ಯಕ್ತಿಸುತ್ತಿದ್ದಾನೆ. ನಮ್ಮಿಬ್ಬರ ನಡುವಿನ ನಂಟಿಗೆ ಕೊನೆಯೇ ಇಲ್ಲವೆಂದೂ ಹೇಳುತ್ತಿದ್ದಾನೆ. ಈ ನಂಟಿನ ನೆಪದಲ್ಲಿ ಗಿರಿಯಣ್ಣ ಮೋಡಣ್ಣನಿಗೆ ಹುಡುಗನ ಪರವಾಗಿ ಸಹಾಯವನ್ನು ಮಾಡಲು ಮುಂದಾಗುತ್ತಾನೆ. ಜಗತ್ತಿನ ಕೇಂದ್ರ ಬಿಂದುವಾಗಿರುವ ನೀನು, ಶರಧಿಯ ನೀರು, ಸಿಡಿಲು, ಮಿಂಚು, ರೈತರ ನಿಂದೆ ಮಾತುಗಳನ್ನು ಸಹಿಸಿಕೊಳ್ಳುವವನು ಹುಡುಗನನ್ನು ನಿನ್ನೆಡೆಗೆ ಕರೆದುಕೊಂಡು ತಾಯಿಯ ದೂರನ್ನು ಸಹಿಸಿಕೊಂಡರೆ ನಿನಗಾಗುವ ತೊಂದರೆಯಾದರೂ ಏನು? ಎಂದು ಕೇಳುತ್ತಾನೆ. ಹೀಗೆ ಗಿರಿಯಣ್ಣ ಮೋಡಣ್ಣನ ಸಾಧ್ಯಾಸಾಧ್ಯತೆಗಳನ್ನೆಲ್ಲ ವರ್ಣಿಸಿ ಸಣ್ಣ ಬಾಲಕನ ಮೇಲೆ ಕೃಪೆದೋರಲು ಪ್ರಯತ್ನಿಸುತ್ತಾನೆ. ಆದರೆ ಮೋಡಣ್ಣ ನಾಗರೀಕ ಪ್ರಜ್ಞೆ ರೂಢಿಸಿಕೊಂಡಿರುವ ಅನಾಗರೀಕ ಪ್ರವೃತ್ತಿಯಿಂದಲೋ ಏನೋ ಕೋಪಗೊಂಡಿದ್ದಾನೆ.

ಮಾನವ ಸಮುದಾಯಕ್ಕೆ ಪ್ರಕೃತಿ ಮಾತೆಯ ಒಡನಾಟ ಇತ್ತೀಚಿನದಾಗಿರದೆ ಬಹು ಹಿಂದಿನಿಂದಲೂ ರೂಢಿಯಲ್ಲಿದೆ. ಭೂಮಾತೆಯ ಗರ್ಭ ಅಥವಾ ಒಡಲೇ ಮಾನವನ ಜೀವನ ನಿರ್ವಹಣೆಗೆ ಮೂಲ. ಆದ್ದರಿಂದಲೇ ನಾಟಕಕಾರರು "ಅಂದಿನ ಗೆಳೆತನವಿನ್ನೂ ಉಂಟು. ಎಂದಿಗೂ ಹೋಗದು ಹಿಂದಿನ ನಂಟು" ಎಂಬ ಸತ್ಯಾಂಶವನ್ನು ನುಡಿದಿದ್ದಾರೆ. ಇದನ್ನು ಅಸಂಖ್ಯ ವರ್ಷಗಳ ಬೆಸುಗೆ, ಬಂಧನವೆಂದರೂ ತಪ್ಪಾಗಲಾರದು. ಇಂದು ಪ್ರಕೃತಿಯ ಸೂಕ್ಷ್ಮತೆಯನ್ನು ತಿಳಿದುಕೊಳ್ಳುವಲ್ಲಿ ಸೋತು ನಿಸರ್ಗವನ್ನು ಅತಿಲೋಭದತ್ತ ಎಳೆಯುತ್ತಿದ್ದಾರೆ. ಇದರಿಂದಾಗುವ ಮಾರಕಗಳ ಬಗ್ಗೆಯೂ ಕವಿ ಚಿಂತಿಸುತ್ತಿದ್ದಾರೆ.

ಮನುಷ್ಯ ಸೃಷ್ಟಿಯಾದಾಗಿನಿಂದ ಇಲ್ಲಿಯವರೆಗೆ ನಡೆದ ಎಲ್ಲಾ ದುಶ್ಕೃತ್ಯಗಳ ಪಟ್ಟಿಯನ್ನು ಕಾಡಣ್ಣ ಬಯಲಿಗೆಳೆಯುತ್ತಾನೆ. ಮಾನವ ಜನಾಂಗ ಕಾಡಣ್ಣನಿಗೆ ಕೊಟ್ಟ ಕಷ್ಟ ದುಃಖಗಳು ಕೊನೆಗಾಣದಂತಹವು. ಅಂತೆಯೇ

ಮರೆಯಲಾರದಂತಹವು. ಈ ದುರಂತವನ್ನು ಕವಿ ಕೃತಿಯಲ್ಲಿ ಕಾಡಣ್ಣನೆಂಬ ಪಾತ್ರವನ್ನು ಪ್ರತಿನಿಧೀಕರಿಸಿ ಸ್ವತಃ ಆತನ ಬಾಯಿಂದಲೇ ಮನುಷ್ಯನ ದುಷ್ಟತನವನ್ನು ದಾಖಲಿಸುತ್ತಿರುವುದು ಮಾರ್ಮಿಕವಾಗಿದೆ. ಈ ದುರಂತಕ್ಕೆ ಅಥವಾ ದುಃಖಾಂತಕ್ಕೆ ಆಧುನಿಕ ಜಗತ್ತಿನ ಪ್ರಗತಿ ಮತ್ತು ಅಭಿವೃದ್ಧಿ ಪರಿಕಲ್ಪನೆಗಳೇ ನಿತ್ಯ ಸಾಕ್ಷಿಗಳಾಗಿವೆ. ಆಧುನಿಕ ನಾಗರೀಕತೆಯ, ಪ್ರಗತಿಯ, ವಿಜ್ಞಾನ – ತಂತ್ರಜ್ಞಾನದ ಸೆಳೆತಕ್ಕೆ ಸಿಲುಕಿರುವ ಮಾನವ ನಿರಂತರವಾಗಿ ಅರಣ್ಯ ನಾಶಕ್ಕೆ ಮುಂದಾಗಿದ್ದಾನೆ. ಆತ ಮಾಡಿದ, ಮಾಡುತ್ತಿರುವ, ಮಾಡುವ ಎಲ್ಲಾ ಕ್ರಿಯೆಗಳನ್ನು ಕಾಡಣ್ಣನ ಧ್ವನಿಯಿಂದಲೇ ಕೇಳಿದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಅಸಂಖ್ಯಾತ ವರ್ಷಗಳಿಂದ ಮೋಸದ ಮಾತುಗಳನ್ನು ಆಡಿಕೊಂಡು ಬಂದಿರುವ ಮಾನವನನ್ನು ತಿರಸ್ಕಾರಭಾವದಿಂದ ಕಾಣುತ್ತಾನೆ.

"ಬಿಡೊ ಬಿಡೊ ನಿನ್ನೀ ನುಣ್ಣನೆ ನುಡಿಗಳ :
ಕಡಿ ಕಡಿ ಎನ್ನುವೆ ತಂದೆಗೆ ಬುಡಗಳ
ಬೆಂಕಿಯ ಬುಡಗಳಿಗಿಡಿಸುವನು,
ಧಗ ಧಗ ಉರಿಸುವನು!
ಅಂಕೆಯೆ ಇಲ್ಲದೆ ಕಡಿಸುವನು,
ಸೊಬಗನೆ ಕೆಡಿಸುವನು!
ಸೊಟ್ಟನೆ ಮರಗಳನೊಡಿಸುವನು!
ಕಟ್ಟಿಗೆಯಂದದಿ ಸುಡಿಸುವನು!
ದಟ್ಟನೆ ಎನ್ನನು ಕಡಿ ಕಡಿದು
ಮಟ್ಟವ ಮಾಡುವರಡಿಗಡಿಗೆ."[೩೪]

ಇದು ಮನುಷ್ಯನಿಂದ ಕಾಡಣ್ಣನಿಗೆ ಆಗುತ್ತಿರುವ ಆಘಾತಗಳ ಪಟ್ಟಿ. ಭವಿಷ್ಯದಲ್ಲಿ ದುರಂತದ ಹಾದಿ ತನಗೂ ಕಾದಿದೆ ಎಂಬ ಸತ್ಯಾಂಶವನ್ನು ಮಾನವ ಮರೆತಿದ್ದಾನೆ. ಪ್ರಕೃತಿ ಮಾತೆಯ ಸಂಪತ್ಭರಿತ ಒಡಲನ್ನು ಲೂಟಿ ಮಾಡುವುದು ಮತ್ತು ಬರಿದುಗೊಳಿಸುವುದರ ಮೂಲಕ ಕೈಗಾರಿಕೆಗಳನ್ನು ಸ್ಥಾಪಿಸುವುದೇ ನನ್ನ ಆದ್ಯ ಕರ್ತವ್ಯವೆಂಬ ತಪ್ಪು ಗ್ರಹಿಕೆ ಆಧುನಿಕ ಮಾನವನನ್ನು ಕಾಡುತ್ತಿದೆ. ಪ್ರಕೃತಿಯ ಆರಾಧನೆ ಪರಮನಾರಾಧನೆ ಎಂಬ ಅಂಶವನ್ನು ಮನುಷ್ಯ ಪೂರ್ಣವಾಗಿ ಕಡೆಗಣಿಸಿದ್ದಾನೆ. ಸಸ್ಯ ಸಂರಕ್ಷಣೆ ಶ್ರೇಷ್ಠತರ ಮೌಲ್ಯವೆಂಬುದನ್ನು ಮರೆತೇ ಹೋಗಿದ್ದಾನೆ. ಹಾಗಾಗಿ ಕಾಡಣ್ಣ ತೀವ್ರವಾಗಿ ನೊಂದುಕೊಳ್ಳುತ್ತಾ ಹೀಗೆ ನುಡಿಯುತ್ತಾನೆ.

"ಕಡಿವರೆ ಹೊರತೂ ಬಂದವರೆಲ್ಲಾ
ನೆಡುವರನೊಬ್ಬರ ಕಾಣಲೆ ಇಲ್ಲಾ
ಇದ್ದಿಲ ನೆವದಿಂ ಕಡಿವರು ಕೆಲರು
ಗೆದ್ದಲಿಗೆನ್ನನು ಕೊಡುವರು ಕೆಲರು!"[೩೫]

ಹೀಗೆ ಯಾವುದೇ ಸದ್ದುಗದ್ದಲವಿಲ್ಲದೆ ಆಧುನಿಕ ಮನಸ್ಥಿತಿ ಸದಾ ಪ್ರಕೃತಿ ವಿನಾಶದಲ್ಲಿ ತೊಡಗಿರುವುದು ಶೋಚನೀಯ ಸಂಗತಿಯಾಗಿದೆ. ಜಗತ್ತಿಗೆ ಮುಂದೆ ಒದಗಲಿರುವ ಸಂಕಟಕ್ಕೆ ಇದು ನಾಂದಿಯೂ ಆಗಲಿದೆ. ರಾಷ್ಟ್ರದ ಆರ್ಥಿಕತೆಯ ಮೇಲೂ ಇದು ಪ್ರಭಾವ ಬೀರಲಿದೆ. ಅರಣ್ಯ ನಾಶ ದೇಶದ ಪ್ರಗತಿಗೆ ದಾರಿಯಾಗುತ್ತದೆ

ಎಂದು ತಿಳಿದಿರುವ ಸಮಾಜಕ್ಕೆ ಕಾಡಣ್ಣನ ಎಚ್ಚರಿಕೆಯ ಮಾತುಗಳು ಹಿತವೆನಿಸುತ್ತಿಲ್ಲ. ಮನುಷ್ಯನ ಕೃತ್ಯದಿಂದ ಕಾಡು ಸಂಪೂರ್ಣ ನಾಶವಾಗುತ್ತಿರುವ ನೆಲೆಯನ್ನು ಮೋಡಣ್ಣನಿಗೆ ವಿವರಿಸುತ್ತಿದ್ದಾನೆ. ಕಾಡು ದಟ್ಟವಾಗಿರಲು ನೀನೆಲ್ಲಲ್ಲೂ ರಾರಾಜಿಸುವೆ. ಮೋಡದ ಛಾಯೆ ಎಲ್ಲೆಲ್ಲೂ ಕಾಣುತ್ತದೆ. ಅಂದರೆ ಕಾಡಿನಿಂದಲೇ ಮೋಡ. ಕಾಡು ವಿನಾಶದ ಹಾದಿಯನ್ನು ಹಿಡಿದರೆ ನೀನೂ ವಿನಾಶದ ಹಾದಿಯಿಡಿಯುವೆ ಎಂದು ತಿಳಿಸುತ್ತಿದ್ದಾನೆ. ಕಾಡು ಮತ್ತು ಮೋಡಗಳ ನಡುವಿನ ಸ್ನೇಹವನ್ನು ಕೊನೆಗೊಳಿಸುವವರು ಈ ಮನುಜರು. ಹಾಗಾಗಿ ಇವರ ಬಗ್ಗೆ ಎಚ್ಚರಿಕೆಯನ್ನು ಉಳಿಸಿಕೊಳ್ಳುವುದು ಒಳಿತು ಎಂದು ಕಾಡಣ್ಣ ಬುದ್ಧಿಮಾತನ್ನು ಹೇಳುತ್ತಿದ್ದಾನೆ. 'ಮನುಜರು ಹೋದೆಡೆಯೆಲ್ಲಾ ಹಾಳು' ಎಂಬ ಸತ್ಯಾಸತ್ಯತೆಯನ್ನು ಕಾಡಣ್ಣ ಪ್ರತಿಪಾದಿಸುತ್ತಿದ್ದಾನೆ. 'ನೀನು ಇವನನ್ನು ಕೊಂಡೊಯ್ದರೆ ತಪ್ಪದೊ ಗೋಳು' ಎಂದು ಅವನಿಂದಾಗುವ ತೊಂದರೆಗಳಿಗೆ ಮುನ್ಸೂಚನೆಯನ್ನು ಕೊಡುತ್ತಿದ್ದಾನೆ.

ದೈವ, ಮನುಷ್ಯ ಮತ್ತು ಪರಿಸರಗಳ ಅಭಿನ್ನತೆಯೇ 'ನನ್ನ ಗೋಪಾಲ' ನಾಟಕದ ವಸ್ತು. ತಾಯಿಯ ಮಮತೆ, ಭಗವಂತನ ಭಕ್ತಿ ಇಲ್ಲಿಯ ಪ್ರಧಾನ ನೆಲೆ. ಪರಿಶುದ್ಧವಾದ, ನಿರ್ಮಲವಾದ, ನಿರಾಡಂಬರವಾದ, ಸಹಜವಾದ ಭಕ್ತಿಗೆ ದೈವ ಒಲಿಯುತ್ತಾನೆಂಬ ತತ್ವ ಈ ನಾಟಕದಲ್ಲಿ ಗುಪ್ತಗಾಮಿನಿಯಾಗಿ ಹರಿದಿದೆ.

ಅಡಿಟಿಪ್ಪಣಿ :

೧. ಸಿದ್ಧವನಹಳ್ಳಿ ಕೃಷ್ಣಶರ್ಮ (ಅನು) ; ಮಹಾತ್ಮಗಾಂಧಿಯವರ ಆಯ್ದ ಕೃತಿಗಳು, ಸಂಪುಟ - ೫, ಸತ್ಯವಾಣಿ, ನವಜೀವನ ಪ್ರಕಾಶನ ಮಂದಿರ, ಅಹಮದಾಬಾದು, ಪು. ೭೮.
೨. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೫-೬.
೩. - ಅದೇ -, ಪು. ೯.
೪. - ಅದೇ -, ಪು. ೨೬.
೫. - ಅದೇ -, ಪು. ೨೯.
೬. ಪುಟ್ಟಸ್ವಾಮಿ ಕೆ. ; ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೭, ಪು. xxxii.
೭. - ಅದೇ -, ಪು. xxxiii.
೮. - ಅದೇ -, ಪು. xxxiv.
೯. ಕುವೆಂಪು ; ಮೂರು ನಾಟಕಗಳು, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೪೬, ಪು. ೫೦-೫೨
೧೦. - ಅದೇ -, ಪು. ೫೮.
೧೧. - ಅದೇ -, ಪು. ೬೨-೬೩.
೧೨. - ಅದೇ -, ಪು. ೮೬-೮೭.
೧೩. - ಅದೇ -, ಪು. ೫೨
೧೪. ಪೂರ್ಣಚಂದ್ರ ತೇಜಸ್ವಿ ಕೆ.ಪಿ. ; ಚಿದಂಬರ ರಹಸ್ಯ, ಪುಸ್ತಕ ಪ್ರಕಾಶನ, ಮೈಸೂರು, ೧೯೯೧, ಪು. ೨೪೭.
೧೫. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೭೭
೧೬. ಕುವೆಂಪು ; ನೆನಪಿನ ದೋಣಿಯಲ್ಲಿ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ೧೯೮೦, ಪು. ೮೫-೮೬.
೧೭. ಕುವೆಂಪು ; ಮೂರು ನಾಟಕಗಳು, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೪೬, ಪು. ೧೨.
೧೮. - ಅದೇ -, ಪು. ೨೯.
೧೯. - ಅದೇ -, ಪು. ೩೫-೩೬.
೨೦. ಕುವೆಂಪು ; ಶೂದ್ರ ತಪಸ್ವಿ, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೮೭, ಪು. ೨೮.

೨೧. ಕುವೆಂಪು ; ಬೆರಳ್‌ಗೆ ಕೊರಳ್, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೮೭, ಪು. ೨
೨೨. - ಅದೇ -, ಪು. ೩-೫
೨೩. - ಅದೇ -, ಪು. ೭-೮
೨೪. - ಅದೇ -, ಪು. ೧೩
೨೫. - ಅದೇ -, ಪು. ೧೯-೨೦
೨೬. - ಅದೇ -, ಪು. ೨೯.
೨೭. - ಅದೇ -, ಪು. ೩೦-೪೦.
೨೮. - ಅದೇ -, ಪು. ೫೧
೨೯. ಅಕ್ಷರ ಕೆ.ವಿ. (ಅನು) ; ಪ್ರತಿಭೆಯ ಒಂದು ಪ್ರವಾಹ, ಶಿವ ವಿಶ್ವನಾಥನ್ ಅವರ ಆಯ್ದ ಲೇಖನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೮, ಪು. ೪೦.
೩೦. - ಅದೇ -, ಪು. ೪೧.
೩೧. - ಅದೇ -, ಪು. ೪೩.
೩೨. ಕುವೆಂಪು ; ಬೆರಳ್‌ಗೆ ಕೊರಳ್, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೮೭, ಪು. ೫೫
೩೩. ಕುವೆಂಪು, ಮೋಡಣ್ಣನ ತಮ್ಮ, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪು. ೩
೩೪. – ಅದೇ –, ಪುಟ–೮
೩೫. – ಅದೇ –, ಪು–೮

ಅಧ್ಯಾಯ – ೭

ಕಾದಂಬರಿಗಳು

೧. ಕಥನ ಹಾಗೂ ಸಮಕಾಲೀನ ಸಹ್ಯಾದ್ರಿ ಪರಿಸರ
೨. ಕಾನೂರು ಪರಿಸರ ಸಾಂಕೇತಿಕತೆ
೩. ಕಾನೂರಿನ ಚರಾಚರ ಜಗತ್ತು
೪. ಜೀವ ಜಗತ್ತಿನ ಮಹದ್ವ್ಯಾಪಾರಗಳು
೫. ವಸಾಹತುಶಾಹಿ ಪ್ರಭುತ್ವ ಹಾಗೂ ಅರಣ್ಯ (ಪರಿಸರ) ಕಾಯ್ದೆ
೬. ಎಲ್ಲ ಕ್ಷೇಮ ಭೂಮಿಯಲ್ಲಿ!
೭. ಪರಿಸರ ಮತ್ತು ಆಧ್ಯಾತ್ಮ
೮. ಪ್ರಾಕೃತಿಕ ಪರಿಸರ
೯. ಬೇಟೆ ಹಾಗೂ ಮಾನವ ಸಮುದಾಯ
೧೦. ಅರಣ್ಯ ಮತ್ತು ಮನುಷ್ಯ
೧೧. ಮಲೆಗಳಲ್ಲಿ ಮದುಮಗಳು : ಜೀವ ಸಮಾನತೆಯ ಧೋರಣೆ
೧೨. ಆಧ್ಯಾತ್ಮ ಮತ್ತು ಪರಿಸರ ದೃಷ್ಟಿ
೧೩. ಪರಿಸರ ಸ್ತ್ರೀವಾದ

ಕಾದಂಬರಿ ಕರತಲ ರಂಗಭೂಮಿ;
ಅಂಗೈ ಮೇಲಣ ನಾಟಕಶಾಲೆ.
– ಕುವೆಂಪು

ಕಾದಂಬರಿಗಳು

೧. ಕಥನ ಹಾಗೂ ಸಮಕಾಲೀನ ಸಹ್ಯಾದ್ರಿ ಪರಿಸರ

ಕುವೆಂಪು ಅವರ ಸಾಹಿತ್ಯ ಕೃತಿಗಳಲ್ಲಿ ಬರುವ ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ, ಗಿಡ, ಮರ, ಸಸ್ಯಾದಿಗಳಲ್ಲಿ ಅನೇಕವು ನಾಮಾವಶೇಷವಾಗಿವೆ. ಹಲವು ಅವಸಾನದ ಅಂಚಿನ ಹಂತವನ್ನು ತಲುಪಿರುವುದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಗದ್ದೆಗಳಲ್ಲಿ ಕಾಣಿಸುತ್ತಿದ್ದ ಏಡಿ, ಮರುಗುಂಡು, ಹತ್ತು ಮೀನು ಮೊದಲಾದ ಜಲಚರಗಳು ಅಪರೂಪವಾಗುತ್ತಿವೆ. ಅವುಗಳನ್ನೇ ಆಹಾರವಾಗಿ ಬಳಸುತ್ತಿದ್ದ ಕೆಳವರ್ಗಗಳ ಜೀವನ ಕ್ರಮದಲ್ಲಿಯೂ ವ್ಯತ್ಯಾಸಗಳು ಉಂಟಾಗಿವೆ. ಕುವೆಂಪು ಬರೆಯುವ ಕಾಲದಲ್ಲಿದ್ದ ಹುಲಿಯ ಸಂತಾನ ನಾಮಾವಶೇಷವಾಗಿದೆ. ಚಿರತೆ, ಕಾಡೆಮ್ಮೆ, ಕಾಡು ಹಂದಿ, ಕಾಡು ಕುರಿ, ಮುಳ್ಳು ಹಂದಿ, ಕಡವೆ ಮೊದಲಾದ ಜೀವಸಂಕುಲಗಳು ಅಪಾರ ಪ್ರಮಾಣದಲ್ಲಿ ಕಾಣೆಯಾಗುತ್ತಿವೆ. ಕೃಷಿಯ ಒತ್ತಡ, ಜನಸಂಖ್ಯೆಯ ಸ್ಫೋಟ ಮೊದಲಾದ ಕಾರಣಗಳಿಂದ ಕೇವಲ ಬೆರಳೆಣಿಕೆಯಷ್ಟು ಮಾತ್ರ ಉಳಿದಿವೆ. ಹಾಗಾಗಿಯೇ ಆ ಕಾಲದ ಬೇಟೆಯ ಸಂಭ್ರಮವಾಗಲಿ ಸಮುದಾಯದ ಬೇಟೆಯಂಥ ಆಚರಣೆಗಳಾಗಲೀ ಇಂದು ಕಾಣಲು ಸಿಗಲಾರವು. ಮಾನವನ ಪ್ರಗತಿಯಿಂದ ಕಾಡಿನ ಉತ್ಪನ್ನಗಳ ಮೇಲೆ ಅವಲಂಬನೆ ಹೆಚ್ಚಾಗಿ ಕುವೆಂಪು ಕೃತಿಗಳಲ್ಲಿರುವ ದಟ್ಟತೆಯಾಗಲಿ, ಸಾಂದ್ರತೆಯಾಗಲಿ, ಜೀವವೈವಿಧ್ಯತೆಯಾಗಲಿ ಕಾಣಲಾರದಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ಕುವೆಂಪು ಕಾವ್ಯದ ಪರಿಸರ ಸ್ನೇಹಿ ವ್ಯಕ್ತಿಯಾದ ಅಮಲನು ತೋರಿಸುವ ಜೀವವೈವಿಧ್ಯದ ವಿರಾಟ್ ದರ್ಶನವಾಗಲಿ, 'ಗುತ್ತಿಯ' ಪ್ರಯಾಣದಲ್ಲಿ ಎದುರಾಗುವ ಕಾಡಿನ ರೌದ್ರತೆ, ದಟ್ಟತೆಗಳ ಪರಿಸರವಾಗಲಿ ಇಂದು ಕಾಣಸಿಗಲಾರದು. ಕುವೆಂಪು ಕಾವ್ಯದಲ್ಲಿ ಕಾಣಿಸುವ ಪ್ರಶಾಂತ, ನಿರ್ಜನ, ಪರಿಸರವೂ ಅಪರೂಪವಾಗಿದೆ. ನಿಸರ್ಗದ ಮೇಲಿನ ಅವಲಂಬನೆ ಪ್ರಸ್ತುತ ಪ್ರಮಾಣದಲ್ಲಿ ಹೀಗೆಯೇ ಮುಂದುವರಿದರೆ ಮುಂದೊಂದು ದಿನ ಕುವೆಂಪು ಕಾವ್ಯದಲ್ಲಿ ಕಂಡುಬರುವ ಮುಂಜಾನೆಯ ಹಾಗೂ ಸಂಜೆಯ ಹಕ್ಕಿಗಳ ಆಲಾಪನೆಯು ಇಲ್ಲವಾಗಬಹುದು. ವನ್ಯಮೃಗಗಳ ಗರ್ಜನೆ, ಆರ್ಭಟಗಳು ಮಾಯವಾದಂತೆಯೇ ಹುಳು, ಹುಪ್ಪಟೆ, ಹಕ್ಕಿ ಮೊದಲಾದ ಜೀವಗಳ ಕಾಡಿನ ಕಲರವವೇ ಮಾಯವಾಗಬಹುದು.

ಜಗತ್ತಿನ ಖ್ಯಾತ ಪರಿಸರ ಚಿಂತಕಿ ರಾಖೆಲ್ ಕಾರ್ಸನ್ ನ 'ಸೈಲೆಂಟ್ ಸ್ಪ್ರಿಂಗ್' ಕೃತಿಯ 'ಸ್ತಬ್ಧ ಲೋಕ' ಕುವೆಂಪು ಪರಿಸರದಲ್ಲಿ ನಿರ್ಮಾಣವಾಗುವ ದಿನಗಳು ದೂರವಿಲ್ಲವೆಂದು ಕಾಣುತ್ತದೆ. ಅವಸಾನದ ಅಂಚಿನಲ್ಲಿರುವ ಜೀವ ಹಾಗೂ ಸಸ್ಯಗಳ ಆವಾಸ ಸ್ಥಾನವನ್ನು ರಕ್ಷಿಸುವ ಕಾಳಜಿಗಳನ್ನು 'ಸೈಲೆಂಟ್ ಸ್ಪ್ರಿಂಗ್' ಕೃತಿ ಮುಖ್ಯವಾಗಿಸಿಕೊಂಡಿದೆ. ಹಾಗೆಯೇ ಕುವೆಂಪು ಕೃತಿಗಳಲ್ಲಿ ಅಭಿವ್ಯಕ್ತಗೊಂಡಿರುವ ಪರಿಸರ ಪ್ರೀತಿ, ಜೀವ ವೈವಿಧ್ಯದ

ಬದುಕಿನ ಚಿಂತನೆ ಪರಿಸರದ ಬಗೆಗೆ ಹೊಸ ಎಚ್ಚರವನ್ನು ಮೂಡಿಸದಿದ್ದರೆ ಮುಂದೊಂದು ದಿನ ಇಡೀ ನಿಸರ್ಗವೇ ಮರಣಜಾಲವಾಗಿ ಬದಲಾಗಿ ಬಿಡಬಹುದು.

ಸರ್ಕಾರಗಳು ಹಾಗೂ ಖಾಸಗಿಯ ಮೋಜುದಾರರು 'ಇಕೋಟೂರಿಸಂ' ಎಂಬ ಹೊಸ ಉದ್ಯಮವನ್ನೇ ಹುಟ್ಟು ಹಾಕಿದ್ದಾರೆ. ಆ ನೆಪಗಳಲ್ಲಿ ಹಣ ಮತ್ತು ಕಾಲಗಳ ಲಭ್ಯತೆಯ ಗ್ರಾಹಕರನ್ನು ನಗರದಿಂದ ಕಾಡುಗಳ ಗರ್ಭದೊಳಗೆ ಕರೆತಂದು ಮೋಜುಮಾಡುವ ಹುನ್ನಾರವನ್ನು ನಡೆಸುತ್ತಿವೆ. ಅದಕ್ಕಾಗಿ ಅನೇಕ ಯೋಜನೆಗಳು ರೂಪುಗೊಳ್ಳುತ್ತಿವೆ. ಸರ್ಕಾರದ ವಾರ್ಷಿಕ ಆಯವ್ಯಯದಲ್ಲಿಯೂ ಇಂಥ ಚಟುವಟಿಕೆಗಳಿಗಾಗಿ ಹಣವನ್ನು ಮೀಸಲಿಡಲಾಗಿದೆ.

ವಸಾಹತುಶಾಹಿ ಕಾಲದಲ್ಲಿ ಆಯಕಟ್ಟಿನ ನಿಸರ್ಗ ತಾಣಗಳಲ್ಲಿ ಬ್ರಿಟಿಷರ ಮೋಜಿಗಾಗಿ ನಿರ್ಮಾಣಗೊಂಡ ಬಂಗಲೆಗಳ ಅನುಕರಣೆಯೊ ಎಂಬಂತೆ ಜಂಗಲ್ ರೆಸಾರ್ಟ್‌ಗಳನ್ನು, ವಸತಿ ನಿಲಯಗಳನ್ನು ಉತ್ತೇಜಿಸಲಾಗುತ್ತಿದೆ. ಇವೆಲ್ಲವೂ 'ಭೋಗದ ರೋಗ' ಹತ್ತಿದ ನಗರವಾಸಿಗಳ ಮೋಜು ತಾಣಗಳಾಗಿ ಮದ್ಯದ ಮಾದಕತೆಯಲ್ಲಿ ತೇಲಾಡುವ ಫ್ಯಾಷನ್ನುಗಳಾಗಿ ರೂಪುಗೊಳ್ಳಲು ಸಹಕರಿಸುತ್ತವೆಯೇ ಹೊರತು ಕುವೆಂಪು ಸಾಹಿತ್ಯ ಕಾಣಿಸುವ ಪರಿಸರ ಪ್ರೀತಿಯಾಗಲೀ ಜೀವವೈವಿಧ್ಯತೆಯ ಬಗೆಗಿನ ಶ್ರದ್ಧೆ ಆಸಕ್ತಿಗಳಾಗಲೀ ಮೂಡಿಸಲಾರವು. ಅಂತಹ ತಾಣಗಳನ್ನು ಪರಿಶೀಲಿಸಿದರೆ ಮೇಲುನೋಟದಲ್ಲಿಯೇ ಈ ವಿಚಾರ ಸ್ಪಷ್ಟವಾಗುತ್ತದೆ.

ನಮ್ಮ ಅನೇಕ ಪ್ರವಾಸಿ ತಾಣಗಳು ಪ್ರವಾಸಿಗರು ತಂದುಹಾಕುವ ಪ್ಲಾಸ್ಟಿಕ್ ಹಾಗೂ ಕಸದಿಂದ ಕಲುಷಿತಗೊಂಡಿವೆ. ಪವಿತ್ರ ಹಾಗೂ ದಟ್ಟ ಕಾಡುಗಳ ಸಹಜತೆಗೆ ಮನುಷ್ಯನ ಪ್ರವೇಶ ಧಕ್ಕೆಯುಂಟು ಮಾಡುತ್ತದೆ. ಪ್ರವಾಸಿ ತಾಣಗಳು ಪ್ರವಾಸಿಗರು ತಂದು ಹಾಕುವ ಕಸದ ತೊಟ್ಟಿಗಳಾಗಿ ನಿರ್ಮಾಣಗೊಂಡಿವೆ. ಇಂಥ ಜಂಗಲ್ ರೆಸಾರ್ಟ್‌ಗಳನ್ನು ಅರಸಿ ಬರಲು ಶಕ್ತರಾದ ಶ್ರೀಮಂತರಿಗೆ ಮಾತ್ರ ಸಾಧ್ಯ.

> 'ಪರಿಸರವೂ ಒಂದು ಭೋಗವಸ್ತು, ವೈಭವೋಪೇತ ಜೀವನಕ್ಕೆ ಅಗತ್ಯವಾದದ್ದು' ಎಂದುಕೊಂಡಿದ್ದ ಆಸಕ್ತ ಜನ ನಿಂತಿದ್ದರು. ಈ ಪರಿಸರಾಸಕ್ತರ ದ್ವಂದ್ವವನ್ನು ಅವರು ಸಾವಿರಾರು ಮೈಲಿ ದೂರಕ್ಕೆ ರಾಷ್ಟ್ರೀಯ ಉದ್ಯಾನಗಳನ್ನು ಅಭಯಾರಣ್ಯಗಳನ್ನು ನೋಡಲು ಅಮೂಲ್ಯ ತೈಲವನ್ನು ಬಳಸಿ, ಪರಿಸರ ಮಾಲಿನ್ಯ ಉಂಟುಮಾಡುತ್ತಾ ವಾಹನಗಳಲ್ಲಿ ಹೋಗುತ್ತಿದ್ದುದರ ಕ್ರಿಯೆಯಲ್ಲಿ ನೋಡಬಹುದು.[೧]

ಈ ಮೇಲಿನ ಉಲ್ಲೇಖದಲ್ಲಿ ಗುಹಾ ಅವರು ಹೇಳಿರುವಂತೆ ಭೋಗಾಸಕ್ತ ಮನಸ್ಸುಗಳು ಪರಿಸರಾಸಕ್ತಿಯ ಮುಖವಾಡಗಳಲ್ಲಿ ಪರಿಸರ ಮಾಲಿನ್ಯಕ್ಕೆ ಕೊಡುಗೆಯಾಗುವುದಕ್ಕೆ ಯಾವ ಸಂಶಯವೂ ಇಲ್ಲದಂತೆ ತೋರುತ್ತದೆ.

ಖ್ಯಾತ ಸಮಾಜವಾದಿ ಚಿಂತಕ ಶಿವ ವಿಶ್ವನಾಥನ್ ಅವರು ತಮ್ಮ 'ಪ್ರತಿಭೆಯ ಒಂದು ಪ್ರವಾಹ' ಕೃತಿಯಲ್ಲಿ ಬಳಸಿರುವ ಕೃಷ್ಣಕುಮಾರ್ ಅವರ ಮಾತಿನ ಉಲ್ಲೇಖವನ್ನು ಇಲ್ಲಿ ಉದಾಹರಿಸುವುದು ಸೂಕ್ತವೆಂದು ಕಾಣುತ್ತದೆ.

> ಈಗ ಮೂರನೆಯ ಜಗತ್ತು ಎಂಬುದು 'ಅಲ್ಲಿಯ ಸಂಪತ್ತನ್ನೂ ಸಂಸ್ಕೃತಿಗಳನ್ನೂ ಲೂಟಿ ಮಾಡಿಯಾದ ಬಳಿಕ ಬದಿಗೆ ಬಿಸಾಕುವ ಮುರಿದ ಮಕ್ಕಳ ಆಟಿಕೆಯಂತಾಗಿದೆ' ಈಗ ಅದಕ್ಕಿರುವ ಅಸ್ತಿತ್ವವೆಂದರೆ ಒಂದೇ ಪ್ರವಾಸೋದ್ಯಮ ಸ್ಥಳವಾಗಿ ಅಥವಾ ಅಪಾಯಕಾರಿ ಕಾರ್ಖಾನೆಗಳನ್ನು ಕೂರಿಸುವ ಜಾಗವಾಗಿ.[೨]

ನಮ್ಮಂಥ ಮೂರನೇ ಜಗತ್ತಿನ ರಾಷ್ಟ್ರಗಳು ಪ್ರಭುತ್ವಶಾಹಿಗಳ ಹುನ್ನಾರಿನಲ್ಲಿ ಇಕೊಟೂರಿಸಂ ಹಾಗೂ ಅಪಾಯಕಾರಿ ಕಾರ್ಖಾನೆಗಳ ತಾಣಗಳಾಗಿ ಈಗಾಗಲೇ ಬಲಿಯಾಗಿವೆ. ಇಕೊಟೂರಿಸಂ ಅಭಿವೃದ್ಧಿಯ ನೆಪದಲ್ಲಿ ಪರಿಸರ ಜ್ಞಾನದ ನೆಪವನ್ನು ಮುಂದು ಮಾಡುವ ಇಂಥ ಉತ್ತೇಜನಗಳಿಗಿಂತ ಆದಿವಾಸಿಯೊಬ್ಬನ ಪ್ರಕೃತಿಯೊಂದಿಗಿನ ಸಂಬಂಧ ಇಂದು ಅಗತ್ಯವೆಂದು ತೋರುತ್ತದೆ.

> ವಿಜ್ಞಾನವು ಜೀವಜೀವಿಗಳನ್ನು ಅರ್ಥಮಾಡಿಕೊಳ್ಳಲು ವಿಫಲವಾದದ್ದು ; ಬದುಕಿನ ಭದ್ರತೆಯನ್ನು ಕೊಡಲಾಗದೆ ಸೋತದ್ದು. ಮೂರನೆಯ ಜಗತ್ತಿನ ಬಡವರಿಗೆ ವಿಜ್ಞಾನವು ಕೊಟ್ಟಿರುವುದು ಕೇವಲ ಸಾಮಾಜಿಕ ಜೀವಶಾಸ್ತ್ರದ ಜಡ ಪರಿಭಾಷೆಗಳನ್ನು ಮಾತ್ರ. ಇಂಥ ಸನ್ನಿವೇಶದಲ್ಲಿ ಬದುಕು ಕೇವಲ ಆಶಾವಾದದಿಂದಲೇ ನಡೆಯಲು ಸಾಧ್ಯವೆನ್ನುವುದಾದರೆ, ಆಗ ನಾನು, ಮದರ್ ಥೆರೆಸಾ ಮತ್ತು ಗಾಂಧಿಯಂಥವರು ಬರೀ ಭಾವಜೀವಿಗಳಲ್ಲ, ಅವರೇ ಈ ಜಗತ್ತಿನ ನಿಜವಾದ ವಿಜ್ಞಾನಿಗಳು ಎಂದು ಹೇಳಬಯಸುತ್ತೇನೆ. ಒಬ್ಬ ದಾದಿಯ ಒಳಮನಸ್ಸಿನಿಂದ ಉದ್ಭವಿಸಿದ ಕರುಣೆ ಮತ್ತು ಆದಿವಾಸಿಯೊಬ್ಬನ ಆಂತರ್ಯವು ಪ್ರಕೃತಿಯೊಂದಿಗೆ ರೂಪಿಸಿಕೊಳ್ಳುವ ಸಂಬಂಧ - ಇವು ಈ ಜಗತ್ತಿನ ಎಲ್ಲ ಹಾರ್ಡಿನ್ ಪ್ಯಾಡಿಕ್‌ಗಳ ವೈಜ್ಞಾನಿಕ ಆಧುನಿಕತೆಗಿಂತ ಹೆಚ್ಚು ಅರ್ಥವತ್ತಾದ್ದು ; ಪರಿಸರ ಪೋಷಕವಾದದ್ದು.[೩]

ಇಂಥ ಅಭಿವೃದ್ಧಿಯ ಪರಿಕಲ್ಪನೆ ಪರಿಸರ ನಾಶದ ಅಸ್ತ್ರವಾಗುವ ಎಲ್ಲ ಲಕ್ಷಣಗಳನ್ನು ಹೊಂದಿದೆ. ಏಕೆಂದರೆ ಪ್ರವಾಸೋದ್ಯಮ ನಿಗಮಗಳು ಹಾಗೂ ಇಕೊಟೂರಿಸಂ ಕಾರ್ಪೋರೇಷನ್‌ಗಳು ತಮಗೆ ಕಾಲ್ತೊಡಕಾಗುವ ಎಲ್ಲವನ್ನು ಸರಿಪಡಿಸಿಕೊಳ್ಳಲೇಬೇಕಾದ್ದರಿಂದ ಅಡ್ಡಬರುವ ನದಿ, ಹಳ್ಳ, ಗುಡ್ಡ, ಆದಿವಾಸಿ ಜನಾಂಗ, ವನ್ಯ ಮೃಗಗಳು ಹಾಗೂ ಕಾಡನ್ನು ಗುಡಿಸಿಹಾಕಲೇಬೇಕಾಗುತ್ತದೆ. ಇಂಥ ಪ್ರಕ್ರಿಯೆಗಳಿಂದ ಪರಿಸರಕ್ಕೆ ಆಘಾತವೇ ಹೊರತು ಸ್ನೇಹವಾಗಲಾರದು. ರಾಮಚಂದ್ರ ಗುಹಾ ಅವರ 'ಜಾಗತಿಕ ಪರಿಸರ ಚರಿತ್ರೆ'ಯ ಈ ಕೆಳಗಿನ ಮಾತುಗಳೇ ಇಂಥ ಅಭಿವೃದ್ಧಿ ಪರಿಕಲ್ಪನೆಯನ್ನು ಸ್ಪಷ್ಟಪಡಿಸುತ್ತವೆ.

> ಪ್ರಕೃತಿಯಲ್ಲಿ ಯಾವುದೂ ಒಂಟಿಯಲ್ಲ. ಸಸ್ಯಗಳು ಮತ್ತು ಭೂಮಿಯ ನಡುವೆ, ಸಸ್ಯ - ಸಸ್ಯಗಳ ನಡುವೆ, ಸಸ್ಯ - ಪ್ರಾಣಿಗಳ ನಡುವೆ ವೈಯಕ್ತಿಕವಾದ ಹಾಗೂ ಅಗತ್ಯವಾದ ಸಂಬಂಧವಿದೆ. ಪರಿಸರವೆಂಬುದು ಸೂಕ್ಷ್ಮ ಜೀವಿಗಳಿಂದ ಮೊದಲಾಗಿ ಮನುಷ್ಯನವರೆಗೆ ಎಲ್ಲ ಪರಸ್ಪರ ಹೆಣೆದುಕೊಂಡಿರುವ, ಜಟಿಲವಾದ ಜೀವಜಾಲ.[೪]

ಇಂಥ ಜೀವಜಾಲದ ಯಾವ ಕೊಂಡಿಯನ್ನು ಕಳಚಿದರೂ, ಅದರ ಸೌಂದರ್ಯವಾಗಲಿ, ಸಹಜತೆಯಾಗಲಿ, ಸಹಬಾಳ್ವೆಯಾಗಲಿ, ವೈವಿಧ್ಯತೆಯಾಗಲಿ ಕಾಣಲು ಸಾಧ್ಯವೇ ಎಂಬ ಪ್ರಶ್ನೆ ಎದುರಾಗುತ್ತದೆ.

ಈ ಸಂದರ್ಭದಲ್ಲಿ ಕುವೆಂಪು ಕೃತಿ-ಸಮೂಹದಲ್ಲಿ ಬರುವ, ನಾಶ ಹಾಗೂ ವಿನಾಶದ ಅಂಚಿನಲ್ಲಿರುವ ಜೀವಿಗಳಿಗೆ ಇರುವ ಮೌಲ್ಯವನ್ನು ಹಾಗು ಅವುಗಳ ರಕ್ಷಣೆಯ ಬಗೆಗೆ ಅರಿಯಲು ಜರ್ಮನ್ನಿನ ಅರಣ್ಯ ಪ್ರವಾದಿಯೆಂದೇ ಪ್ರಖ್ಯಾತನಾದ ಫರ್ಡಿನಾಂಡ್ ಮುಲ್ಲರ್ ಅರಣ್ಯ ನಾಶದ ಬಗ್ಗೆ ಮೂಡಿಸಿದ ಎಚ್ಚರದ ಮಾತುಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆಂದು ಕಾಣುತ್ತದೆ.

ಪ್ರಕೃತಿ ನಮಗೆ ನೀಡಿದ ಪಿತ್ರಾರ್ಜಿತ ಬಾಧ್ಯತೆ ಎಂದು ಗಣಿಸಬೇಕು. ಅದನ್ನು ಹಾಳು ಮಾಡದೆ, ವಿವೇಕದಿಂದ ಬಳಸಬೇಕು, ಗೌರವಿಸಬೇಕು ಮತ್ತು ಎಚ್ಚರಿಕೆಯಿಂದ ಕಾಯ್ದಿಟ್ಟುಕೊಳ್ಳಬೇಕು. ಕೆಲಕಾಲ ಮಾತ್ರ ಕಾಯ್ದಿಟ್ಟುಕೊಂಡು ನಂತರ ಮುಂದಿನ ಜನಾಂಗಕ್ಕೆ ಒಪ್ಪಿಸಲು ನೀಡಿದ ವರವೆಂದು ನಾನು ಕಾಡನ್ನು ಗಣಿಸುತ್ತೇನೆ. ತಲೆ ತಲೆಮಾರುಗಳವರೆಗೆ ಅದನ್ನು ನಾಶಮಾಡದೆ, ಇನ್ನಷ್ಟು ಸಮೃದ್ಧಗೊಳಿಸಿ, ಮುಂದಿನ ಜನಾಂಗಕ್ಕೆ ನಾವದನ್ನು ವರ್ಗಾಯಿಸಬೇಕು.[೫]

ಇಂಥ ಎಚ್ಚರಿಕೆ ಹಾಗೂ ಮುಂಗಾಣ್ಕೆಯ ಚಿಂತನೆಗಳು ಪರಿಸರ ವಿರೋಧಿ ಚಟುವಟಿಕೆಗಳ ರೂವಾರಿಗಳಿಗೆ ಹಾಗೂ ತಕ್ಷಣದ ಬಂಡವಾಳಶಾಹಿ ಧೋರಣೆಯ ಅಭಿವೃದ್ಧಿ ಪರಿಕಲ್ಪನೆಗಳಿಗೆ, ಮೋಜಿನ ತಾಣಗಳಾಗಿ ಪರಿವರ್ತಿಸಲು ಹೊರಟಿರುವ ಇಲಾಖೆಗಳಿಗೆ ಕಣ್ಣು ತೆರೆಸೀತೆಂದು ಭಾವಿಸುತ್ತೇನೆ. ಅಂಥ ಕಣ್ಣು ತೆರೆದಲ್ಲಿ ಜೀವನದುದ್ದಕ್ಕೂ ಪರಿಸರವನ್ನೇ ಧ್ಯಾನಿಸಿದ, ಅಭಿವ್ಯಕ್ತಿಸಿದ ಕುವೆಂಪು ಅವರಿಗೆ ತೋರುವ ಗೌರವವೆಂದು ತಿಳಿಯುತ್ತೇನೆ.

೨. ಕಾನೂರು ಪರಿಸರ ಸಾಂಕೇತಿಕತೆ

ಕಾನೂರು ಹೆಗ್ಗಡಿತಿ (1936)ಯಲ್ಲಿ "ಚಿತ್ರಿತವಾಗಿರುವುದು ಮಲೆನಾಡಿನ ಬಾಳಿನ ಕಡಲಿನಲ್ಲಿ ಒಂದು ಹನಿ" ಎಂದು ಕುವೆಂಪು ಅವರು ಕಾದಂಬರಿಯ ಅರಿಕೆಯಲ್ಲಿ ಸೂಚಿಸಿದ್ದಾರೆ. ಆ ಒಂದು ಹನಿಯ ಪ್ರಪಂಚವು ಅನೇಕರಿಗೆ ಸಂಪೂರ್ಣವಾಗಿ ಹೊಸದೆಂದು, ಅಂಥ ಹೊಸ ಜನ ಮತ್ತು ಜೀವನದ ವಿಚಾರವಾಗಿ ತಿಳಿದುಕೊಳ್ಳಲು ತಾಳ್ಮೆಯ ಅಗತ್ಯತೆಯನ್ನು ಸೂಚಿಸುತ್ತಾರೆ. ಈ ಕಾದಂಬರಿಯ ಅರಣ್ಯ ಜಗತ್ತನ್ನು ಪ್ರವೇಶಿಸುವ ವಾಚಕರು ತಾಳ್ಮೆಯಿಂದ ವರ್ತಿಸಬೇಕೆಂದು ಬಿನ್ನವಿಸುತ್ತಾರೆ. ಈ ಬಿನ್ನಹದಲ್ಲಿ ಮಲೆನಾಡಿನ ಪರಿಸರ ಜಗತ್ತಿನ ಪ್ರವೇಶಿಕೆಗೆ ಅಗತ್ಯವಾದ ತಾಳ್ಮೆ, ಶ್ರದ್ಧೆ, ಕಲ್ಪನೆ, ಎಚ್ಚರ, ಸಹಾನುಭೂತಿಗಳ ಅಗತ್ಯವನ್ನು ಒತ್ತಿ ಹೇಳುತ್ತಾರೆ.

'ಕಾದಂಬರಿ ಕರತಲ ರಂಗಭೂಮಿ : ಅಂಗೈ ಮೇಲಣ ನಾಟಕಶಾಲೆ. ಆದ್ದರಿಂದ ಕಾದಂಬರಿಯನ್ನು ಓದುವ ವಾಚಕರು ನಾಟಕವನ್ನು ನೋಡುವ ಪ್ರೇಕ್ಷಕರೂ ಆಗಬೇಕಾಗುತ್ತದೆ.'

ವಾಚಕರ ಕಲ್ಪನೆ ಸದಾ ಎಚ್ಚತ್ತಿರಬೇಕು. ಅದು ನಿದ್ದೆ ಮಾಡುವುದಿರಲಿ, ತೂಕಡಿಸಿದರೂ ರಸಾಸ್ವಾದನೆಗೆ ಭಂಗ ಬರುತ್ತದೆ. ಸನ್ನಿವೇಶಗಳನ್ನು ಕಲ್ಪಿಸಿಕೊಳ್ಳುವಾಗ, ದೃಶ್ಯಗಳನ್ನು ಚಿತ್ರಿಸಿಕೊಳ್ಳುವಾಗ, ವ್ಯಕ್ತಿಗಳನ್ನು ಪರಿಚಯ ಮಾಡಿಕೊಳ್ಳುವಾಗ, ಅವರ ಸಂಭಾಷಣೆಗಳನ್ನು ಅವರವರ ಬೇರೆ ಬೇರೆಯ ವಾಣಿಗಳೊಡನೆ ಆಲಿಸುವಾಗ ವಾಚಕರು ಸಿನಿಮಾ ವಾಕ್ಚಿತ್ರವನ್ನು ತತ್ಪರತೆಯಿಂದ ನೋಡುತ್ತಿರುವ ಪ್ರೇಕ್ಷಕರಂತಾಗಬೇಕಾಗುತ್ತದೆ. ಹಾಗೆ ಮಾಡದಿದ್ದರೆ ಓದು ಸಾರ್ಥಕವಾಗುವುದಿಲ್ಲ. ಎಲ್ಲಕ್ಕೂ ಬಹು ಮುಖ್ಯವಾದುದು ಸಹಾನುಭೂತಿ. ಅದಿಲ್ಲದಿದ್ದರೆ ನಂದನವೂ ಮರುಭೂಮಿಯಾಗುತ್ತದೆ.[೬]

ಈ ಮೇಲಿನ ಅರಿಕೆಯಲ್ಲಿ ಕಾದಂಬರಿಯ ಓದಿನ ಕ್ರಮವನ್ನೇ ಸೂಚಿಸಿದ್ದಾರೆ. ಓದುವ ವಾಚಕರು ನಾಟಕವನ್ನು ನೋಡುವ ಪ್ರೇಕ್ಷಕರಾಗುವುದು ಎಂದರೆ ಒಂದು ಪಠ್ಯ ಅನೇಕ ಪಠ್ಯಗಳಾಗಿ ಸೃಷ್ಟಿಗೊಳ್ಳಬೇಕಾದ

ಅಗತ್ಯ ಮತ್ತು ಪ್ರಯೋಜನಗಳನ್ನು ಇಲ್ಲಿ ಕಾಣುತ್ತೇವೆ. ಮಹಾಕಾವ್ಯದ ವೈಶಾಲ್ಯತೆಯನ್ನು ಪಡೆದಿರುವ ಈ ಕಾದಂಬರಿಯ ಓದು ಸಾರ್ಥಕವಾಗಬೇಕಾದರೆ ಸಹೃದಯನು ತನ್ನ ಮನೋಭೂಮಿಕೆಯನ್ನು ಹೊಸದಾಗಿ ಉತ್ತು ಬಿತ್ತಿ ಹೂದೋಟವನ್ನು ಬೆಳೆಯಿಸುವಂತೆ ಅದೊಂದು ಸಜೀವವಾದ ಪ್ರಾಣಪೂರ್ಣವಾದ ಕ್ರೀಡಾಕ್ರಿಯೆಯಾಗಬೇಕೆಂಬುದು ಇಲ್ಲಿನ ಆಶಯ.

ಮಲೆನಾಡಿನ ಬಾಳಿನ ಕಡಲಿನಲ್ಲಿ ಒಂದು ಹನಿಯಂತಿರುವ ಕಾನೂರು ಪರಿಸರ ಜಗತ್ತಿನ ವಿರಾಟ್ ದರ್ಶನದ ಕಥನವಾಗಿದೆ. ಈ ಕಥನ ಸುಮಾರು ಆರುನೂರಕ್ಕಿಂತಲೂ ಹೆಚ್ಚಿನ ಪುಟಗಳಲ್ಲಿ ಅನಾವರಣಗೊಂಡಿದೆ. ಈ ಅನಾವರಣದಲ್ಲಿ ಮನುಷ್ಯ ಪರಿಸರದೊಂದಿಗೆ ಪ್ರಾಕೃತಿಕ ಪರಿಸರದ ಸೌಂದರ್ಯಾನುಭವಗಳು ಪರಿಸರ ರೌದ್ರತೆಯ ಚಿತ್ರಗಳು ದಟ್ಟವಾಗಿ ಮೇಳೈಸಿವೆ.

ಕಾನೂರು ಹೆಗ್ಗಡಿತಿಯಲ್ಲಿ ಹಲವಾರು ಕಡೆ ಬರುವ ಪರಿಸರ ಸಂಬಂಧಿ ಸಂದರ್ಭ ಚಿತ್ರಗಳು ಈ ಕೆಳಕಂಡಂತಿವೆ.

- ತೀರ್ಥಹಳ್ಳಿಯನ್ನು ತೊರೆದು ಕಾನೂರಿಗೆ ಅಭಿಮುಖವಾಗಿ ಹೊರಟ ಗಾಡಿ ಹಾದಿ ಪಕ್ಕದ ಕೆರೆಗೆ ಉರುಳುವ ಪ್ರಸಂಗ.
- ನೀಳವಾಗಿ ಬೆಳೆದಿದ್ದ ಅಡಕೆಯ ಹಾಳೆ ಕೋಮಲವಾದ ಬಾಳೆಯ ಸಸಿಯ ಮೇಲೆ ಬೀಳುವ ಸಂದರ್ಭ.
- ಅನೇಕ ವರ್ಷಗಳಿಂದ ಬಾಳಿಕೊಂಡು ಬಂದಿದ್ದ ಕಲ್ಲುಗಡಿಗೆ ಬಿರುಕುಬಿಡುವ ಘಟನೆ.
- ಕಾಗೆಯ ಕಾ! ಕಾ! ಧ್ವನಿ ಹಾಗೂ ಓತಿಕ್ಯಾತದ ಹಂಗಿಸುವಿಕೆಯಿಂದ ಅಣ್ಣಯ್ಯಗೌಡರಿಗೆ ಆದ ವೇದನೆ ಮತ್ತು ಭಯ.
- ಹಲ್ಲಿಯ ಕೃಪೆಯಿಂದ ಕಾಣಿಸಿಕೊಂಡ ಸೀತೆಯ ಕೈ ಬರಹವನ್ನು ಹೂವಯ್ಯ ಅಳಿಸಿ ಹಾಕುವ ಬಗೆ.
- ರಾಮಯ್ಯನ ಮುಖೇನ ಮರದ ನೇಗಿಲು ಮುರಿದು ಹೋಗುವ ಕ್ಷಣ.
- **ಲಕ್ಷ್ಮಿಯ ಆಟದ ಮದುವೆ ಮಂಟಪದಲ್ಲಿ ಹೆಣ್ಣುಗೊಂಬೆಯ ಸೀರೆ ಕಳಚಿ ಬೀಳುವ ರೀತಿ.**
- 'ನಿನ್ನ ಕೃಷ್ಣಪ್ಪ ಗೌಡ್ರನ್ನ ಹುಲಿ ಹಿಡೀಲೊ!' ಎಂಬ ಸೀತೆಯ ಮಾತಿನಿಂದ ಮುಂದೆ ಕೃಷ್ಣಪ್ಪನಿಗೊದಗಿದ ದುರಂತ.
- ಹಲ್ಲಿಯ ಲೊಚಗುಟ್ಟುವಿಕೆಯ ಮೂಲಕ ಸೀತೆ ಅನುಭವಿಸುವ ಒಂದು ಕ್ಷಣದ ಸುಖ ಮತ್ತು ನೆಮ್ಮದಿ.
- ಅನಾರೋಗ್ಯದ ಸಂದರ್ಭದಲ್ಲಿ ಸೀತೆಗೆ ಎದುರಾಗುವ ಹೆಬ್ಬುಲಿಯ ಅಟ್ಟಹಾಸದ ಗರ್ಜನೆ, ಕೂಗು ಮತ್ತು ಆರ್ಭಟದ ಪರಿ.
- ಕರಾಳ ಜೇಡನ ಮುಷ್ಟಿಯಿಂದ ಬಿಡುಗಡೆ ಪಡೆಯಲು ಹವಣಿಸುತ್ತಿದ್ದ ಚಿಟ್ಟೆಯೊಂದಿಗೆ ಸೀತೆಯ ಹೋಲಿಕೆ.
- ಸುಬ್ಬಮ್ಮನ ದುಸ್ವಪ್ನ ತಂದೊಡ್ಡುವ ಅಂತ್ಯ.

ಕಾದಂಬರಿಯಲ್ಲಿನ ಈ ಎಲ್ಲ ಘಟನೆಗಳು ಮನುಷ್ಯನ ಬದುಕಿನ ಸಂಕೇತಗಳಾಗಿ ಕಾಣಿಸುತ್ತವೆ. ಇಲ್ಲಿನ ನಿಸರ್ಗದ ವೈಚಿತ್ರ್ಯಗಳೇ ಮನುಷ್ಯನ ಬದುಕಿನಲ್ಲಿ ಮುಂದೆ ಒದಗಬಹುದಾದ ಘಟನಾವಳಿಗಳನ್ನು ಧ್ವನಿಸುತ್ತವೆ. ಅಂತೆಯೇ ಆತನ ಏಳು ಬೀಳುಗಳನ್ನು, ಅತಂತ್ರ ಸ್ಥಿತಿಯಲ್ಲಿರುವ ಭವಿಷ್ಯವನ್ನು, ಕೌಟುಂಬಿಕ ವಿಘಟನೆಯನ್ನು,

ಮನೋವೇದನೆಯನ್ನು, ಮನಸ್ಸಿನಾಳದ ತಳಮಳವನ್ನು, ಇಬ್ಬಗೆಯ ಸ್ಥಿತಿಯನ್ನು, ಕನಸಿನ ಚಿತ್ರಗಳು ನನಸಾಗುವುದರಿಂದ ಎದುರಾಗುವ ದುರಂತ ಸನ್ನಿವೇಶಗಳು - ಇಂಥ ಎಲ್ಲ ಅಂಶಗಳು ಕಾದಂಬರಿಯಲ್ಲಿನ ವ್ಯಕ್ತಿತ್ವಗಳ ಬದುಕಿಗೆ ಸಂಕೇತಗಳಾಗಿ ಅವರ ಉಜ್ವಲ ಬದುಕನ್ನು ಅಂತ್ಯಗೊಳಿಸುತ್ತವೆ.

೩. ಕಾನೂರಿನ ಚರಾಚರ ಜಗತ್ತು

ರಾಮತೀರ್ಥದೆಡೆ ಕಲ್ಲುಸಾರದ ಮಾರ್ಗವಾಗಿ ತುಂಗಾ ನದಿಯನ್ನು ದಾಟುತ್ತಿದ್ದ ಇಬ್ಬರು ತರುಣರು ಬೇಸಿಗೆಯ ಬಿಸಿಲ ಬೇಗೆಗೆ ಬಳಲಿ ನದಿಯ ದಡದಲ್ಲಿ ಕೊಬ್ಬಿ ಬೆಳೆದಿದ್ದ ಮರಗಳ ಹಸಿರು ನೆಳಲನ್ನು ಆಶ್ರಯಿಸಲು ಬೇಗಬೇಗನೆ ಹೆಜ್ಜೆ ಹಾಕುತ್ತಿದ್ದರು. ಆ ಇಬ್ಬರಲ್ಲಿ ಒಬ್ಬನಾದ ಹೂವಯ್ಯನು ತಾನು ಕೆಲವು ವರ್ಷಗಳ ಹಿಂದೆ ತೀರ್ಥಹಳ್ಳಿಯಲ್ಲಿ ಓದುತ್ತಿದ್ದಾಗಿನ ತನ್ನ ಬಾಲ್ಯ ಕಾಲದ ನೆನಪುಗಳೊಂದಿಗೆ ಮಲೆನಾಡಿನ ಸಹ್ಯಾದ್ರಿ ಪರಿಸರದ ಅಖಂಡ ಜಗತ್ತು ಬಿಚ್ಚಿಕೊಳ್ಳುತ್ತಾ ಸಾಗುತ್ತದೆ.

ಪ್ರಾಕೃತಿಕ ಪ್ರಪಂಚ ತಾನು ಹಿಂದೆ ಕಂಡಂತೆಯೇ ಕಂಡರೂ ತಾನು ಮಾತ್ರ ಹಿಂದೆ ಇದ್ದಂತಿರಲಿಲ್ಲವೆಂಬ ಅರಿವಿನೊಂದಿಗೆ ಈ ಕಥನ ಮುಂದುವರಿಯುತ್ತದೆ. ತುಂಗೆಯ ಹರಿವು ಅದರ ಇಕ್ಕೆಲದ ದಡಗಳಲ್ಲಿರುವ ಅರಣ್ಯಗಳು, ನದಿಯ ನಡುವಿನ ಹೆಬ್ಬಂಡೆಗಳು, ಕುರುವಳ್ಳಿಯ ಅರಳಿ ಕಟ್ಟೆ, ತಮ್ಮನ್ನು ಮನೆಗೆ ಕರೆದೊಯ್ಯಲು ಬಂದು ನಿಂತ ಮನೆಯ ಕಮಾನು ಗಾಡಿ ಹಾಗೂ ಎತ್ತುಗಳ ದರ್ಶನದಿಂದ ತಾನು ಬಿಟ್ಟು ಬಂದ ನಾಗರೀಕ ಪ್ರಪಂಚವೆಲ್ಲವೂ ಹಿಂದೆ ಸರಿದು ತನ್ನ ಮನೆ, ಕಾಡು, ಕೊಟ್ಟಿಗೆ, ಗದ್ದೆ, ದನ, ಕರು, ತೋಟ, ಕೂಲಿಯಾಳುಗಳ ಸಾಂದ್ರ ಪ್ರಪಂಚವೊಂದು ಕಣ್ಮುಂದೆ ಬರುತ್ತದೆ.

ಮರಗಳಲ್ಲಿ ಚಿಲಿಮಿಲಿಗುಟ್ಟುತ್ತಾ ಕೊಂಬೆಯಿಂದ ಕೊಂಬೆಗೆ ಕುಪ್ಪಳಿಸುತ್ತಿದ್ದ ಹಕ್ಕಿಗಳು, ನೆತ್ತಿಯ ಮೇಲೆ ಕಾಣುತ್ತಿದ್ದ ನೀಲಾಕಾಶ, ಆ ಆಕಾಶದಲ್ಲಿ ತೇಲುತ್ತಿದ್ದ ಬಿಳಿಯ ಬಣ್ಣದ ಮುಗಿಲುಗಳು ಆತನ ಭಾವಕೋಶದ ಆಲೋಚನೆಗಳ ಜೊತೆಗೂಡಿ ತನ್ನ ವಿದ್ಯೆ, ತನ್ನ ಧ್ಯೇಯ ಹಾಗೂ ತನ್ನ ಬದುಕಿನ ಜವಾಬ್ದಾರಿಗಳನ್ನು ನೆನಪಿಸುತ್ತವೆ. ಇಂಥ ಮನೋರಾಜ್ಯದಲ್ಲಿ ಪ್ರವಹಿಸುವ ಹೂವಯ್ಯನನ್ನು ಮರದ ಹಸಿರು ಎಲೆಗಳ ಮಧ್ಯೆ ಕರ್ರಗೆ ಕುಳಿತು ಕೂಗುವ ಕೋಗಿಲೆಯ 'ನನ್ನಂತಾಗು ನನ್ನಂತಾಗು' ಧ್ವನಿ ಒಂದು ಜಗತ್ತಿನಿಂದ ಮತ್ತೊಂದು ಜಗತ್ತಿಗೆ ಕರೆದೊಯ್ಯುವ ಕಾಣ್ಕೆ ಮುಂದೆ ಈ ಕಥನದಲ್ಲಿ ಅನುರಣನಗೊಳ್ಳುತ್ತದೆ.

ಮೈಸೂರಿನಿಂದ ಹೊತ್ತು ತಂದ ಪುಸ್ತಕದ ಟ್ರಂಕನ್ನು ಹೊತ್ತ ಕಮಾನು ಗಾಡಿಯ ಚಲನೆಯಿಂದ ಸಹ್ಯಾದ್ರಿಯ ಲೋಕದೊಳಗೆ ಹೊಸದೊಂದು ಜ್ಞಾನಕೋಶವೇ ಚಲಿಸಿದಂತೆ ಭಾಸವಾಗುತ್ತದೆ. ಅಂತಹ ಹೊಸ ಸಂವೇದನೆಯ ಜ್ಞಾನಕೋಶವೊಂದು ಸಂಘರ್ಷಿಸಬೇಕಾದ ಘಟನೆಗಳನ್ನು ಧ್ವನಿಸುವಂತೆ ಬೇಸಿಗೆಯ ಬಿಸಿಲಿನ ತಾಪ, ರಸ್ತೆಯಲ್ಲಿ ಕೆರೆಗೆ ಉರುಳಿಬೀಳುವ ಕಮಾನು ಗಾಡಿಯ ದುರಂತಗಳು ಘಟಿಸುತ್ತವೆ. ಹಾಗೆಯೇ ಕಾನೂರು ಚಂದ್ರಯ್ಯಗೌಡರ ಮನೆಯ ಪರಿಚಯವನ್ನು ಕುರಿತ ಈ ಭಾಗವು ಅಂಥ ಸಂಘರ್ಷವನ್ನೇ ಕಾಣಿಸುತ್ತದೆ.

> ಕಾನೂರು ಚಂದ್ರಯ್ಯಗೌಡರ ಮಂಗಳೂರು ಹೆಂಚಿನ ದೊಡ್ಡಮನೆ ಕಾಡು ಕಿಕ್ಕಿರಿದ ಬೆಟ್ಟಗುಡ್ಡಗಳ ತಪ್ಪಲಿನಲ್ಲಿ, ಮಹಾ ವಟವೃಕ್ಷದ ಬುಡದಲ್ಲಿ ಎದ್ದಿರುವ ಹುತ್ತದ ನೆನಪು ತರುವಂತೆ ಏಕಾಂತವಾಗಿತ್ತು. ಮನೆಯ ಪೂರ್ವೋತ್ತರ ದಿಕ್ಕುಗಳಲ್ಲಂತೂ ಕಾಡು ಬೆಟ್ಟಗಳ

ಹೆಗ್ಗೋಡೆ ಭಯಂಕರ ಸಮೀಪವಾಗಿ ಮೇಲೆದ್ದಿತ್ತು. ಪಶ್ಚಿಮ ದಕ್ಷಿಣ ದಿಕ್ಕುಗಳಲ್ಲಿ ಅವರ ಗದ್ದೆ ತೋಟಗಳೂ, ಒಕ್ಕಲು ಮತ್ತು ಆಳುಗಳ ಹುಲ್ಲುಮನೆ ಮತ್ತು ಬಿಡಾರಗಳೂ, ಕಣ, ಕೊಟ್ಟಿಗೆ ಹಟ್ಟಿಗಳೂ ಇದ್ದುವು. ಮನೆ ಹಳೆಯ ಕಾಲದ್ದು. ರಚನೆಯಲ್ಲಿ ಎಲ್ಲೆಲ್ಲಿ ನೋಡಿದರೂ ಭೀಮತೆ ಪ್ರಧಾನವಾಗಿತ್ತು. ಗೋಡೆ ಕಂಭಗಳಿಂದ ಹಿಡಿದು ತೊಲೆ ಪಕಾಸಿ ರೀಪುಗಳವರೆಗೂ ಸ್ಥೂಲತೆ ತೋರುತ್ತಿತ್ತು. ಮನೆಗೆ ಹೊದಿಸಿದ್ದ ಮಂಗಳೂರು ಹೆಂಚುಗಳು ಮಳೆ ಬಿಸಿಲುಗಳಲ್ಲಿ ಹಾವಸೆ ಹಬ್ಬಿ, ಒಣಗಿ, ತಮಗೆ ಸಹಜವಾಗಿದ್ದ ಮಣ್ಣಿನ ಕೆಂಬಣ್ಣವನ್ನು ತೊರೆದು ಕಪ್ಪಾಗಿದ್ದುವು. ಅಲ್ಲಲ್ಲಿ, ಮುಂಗಾರುಗಳಲ್ಲಿ ಬಿದ್ದ ದೊಡ್ಡ ದೊಡ್ಡ ಆಲಿಕಲ್ಲುಗಳಿಂದ ಬಿರುಕು ಬಿಟ್ಟು ಸೋರುತ್ತಿದ್ದ ಹೆಂಚುಗಳನ್ನು ತೆಗೆದು ಹೊಸ ಹೆಂಚುಗಳನ್ನು ಹಾಕಿದ್ದುದರಿಂದ ಸರ್ವ ಸಾಮಾನ್ಯವಾದ ಪ್ರಾಚೀನತೆಯ ನಡುವೆ ಅಪೂರ್ವವೂ ವಿರಳವೂ ಆಗಿರುವ ನವೀನತೆ ತಲೆಹಾಕಿದಂತಿತ್ತು. ಮನೆಗೆ ಉಪಯೋಗಿಸಿದ್ದ ಮರಮುಟ್ಟುಗಳೆಲ್ಲ ಅನೇಕ ವರ್ಷಗಳಿಂದ ಹೊಗೆ ಹಿಡಿದು ತಾರೆಣ್ಣೆ ಬಳಿದಂತೆ ಕರ್‍ರಗಾಗಿದ್ದುವು. ಗೋಡೆಗಳಲ್ಲಿ ಒಂದೆರಡು ಎಡೆ ಹುತ್ತಗಳು ದೊಡ್ಡದಾಗಿ ಬೆಳೆದಿದ್ದುವು. ಆ ಹುತ್ತಗಳಿಗೆ ಪೂಜಾ ಸಮಯದಲ್ಲಿ ಬಳಿದಿದ್ದ ಕೆಂಪು ಬಿಳಿ ನಾಮಗಳು ಚಿತ್ರವಿಚಿತ್ರವಾಗಿದ್ದುವು. ಪ್ರಾಕಾರದ ನಡುವೆ ಇದ್ದ ಅಂಗಳದಲ್ಲಿ ಕಗ್ಗಲ್ಲಿನಿಂದ ವಿರಚಿಸಿದ್ದ ಒಂದು ದೊಡ್ಡ ತುಲಸೀ ಪೀಠವು ಶಿರದಲ್ಲಿ ಪುಷ್ಟವಾಗಿ ಬೆಳೆದಿದ್ದ ಒಂದು ತುಲಸಿಯ ಗಿಡವನ್ನು ಹೊತ್ತು 'ಅಂಗಳದ ದೇವರಾಗಿ' ಕುಳಿತಿತ್ತು. ಅಂಗಳದ ಮೂಲೆಯಲ್ಲಿ ಅಡಕೆ ಒಲೆ; ಪಕ್ಕದಲ್ಲಿ ಮಣ್ಣಾದ ನೇಗಿಲು. ಜಗುಲಿಯ ಮೇಲೆ ಒಂದು ಹೆಗ್ಗಡಿಯಾರದ ಸುತ್ತಲೂ ಕೆಲವು ತಿರುಪತಿಯ ಬಣ್ಣದ ಚಿತ್ರಗಳಿದ್ದುವು. ಜೊತೆಗೆ ರವಿವರ್ಮನ ಬಣ್ಣದ ದೇವತೆಗಳೂ ಕುಳಿತಿದ್ದರು. ಒಬ್ಬಿಬ್ಬರು ದೇಶಭಕ್ತರ ಪಟಗಳೂ ಭಾರತಾಂಬೆಯ ಚಿತ್ರಪಟವೂ ಅಲ್ಲಿದ್ದುದು, ಸರ್ವವ್ಯಾಪಿಯಾಗುತ್ತಿದ್ದ ರಾಷ್ಟ್ರೀಯ ಮಹಾಸಭೆಯ ಪ್ರಭಾವವು ತನ್ನ ಕ್ಷೇಮಕರವಾದ ಆಶೀರ್ವಾದ ಹಸ್ತವನ್ನು ಆ ಮಲೆನಾಡಿನ ಮೂಲೆಗೂ ಚಾಚಿತ್ತು ಎಂಬುದಕ್ಕೆ ಸ್ಪಷ್ಟವಾದ ಸಾಕ್ಷಿಯಾಗಿ, ಆ ಮನೆಯಲ್ಲಿ ಪ್ರಾಚೀನ ನವೀನಗಳ ಸ್ನೇಹವೋ ಸಮರವೋ ನಡೆಯತೊಡಗಿದ್ದಂತೆ ತೋರುತ್ತಿತ್ತು. ಇದು ಆ ಮನೆಯ ಸನ್ನಿವೇಶ ಮತ್ತು ರೂಪಲಕ್ಷಣಗಳ ಸ್ಥಾವರ ಸ್ಥಿತಿಯ ಸ್ಥೂಲರೇಖಾ ಚಿತ್ರ.

ಅದರ ಜಂಗಮಸ್ಥಿತಿಯೂ ಸಾಧಾರಣವಾಗಿ ಕುತೂಹಲಕಾರಿಯಾಗಿಯೇ ಇರುತ್ತಿತ್ತು. ಏಳೆಂಟು ನಾಯಿಗಳು, ಕೆಲವು ಚೀನಿ, ಕೆಲವು ಕಂತ್ರಿ, ಕೆಲವು ಬಿಳಿ, ಕೆಲವು ಕಪ್ಪು, ಕೆಲವು ಬಣ್ಣ ಬಣ್ಣ. ಕೆಲವು ಮಲಗಿದ್ದರೆ, ಕೆಲವು ಒಳಗೆ ಹೊರಗೆ ಸುತ್ತುವುದು. ಆಗಾಗ ಗೌಡರ ಹತ್ತಿರಕ್ಕೆ ಕಾರ್ಯಾರ್ಥವಾಗಿ, ಬಿಳಿ ಬಟ್ಟೆಯವರೂ ಆಳುಕಾಳುಗಳೂ ಬಂದು ಹೋಗುತ್ತಿರುವುದು. ಹಿತ್ತಲು ಕಡೆಯ ತಮ್ಮ ಪ್ರಪಂಚವನ್ನು ಅತಿಕ್ರಮಿಸಿ ಬಂದ ಕೋಳಿಗಳು - ಹುಂಜ, ಹೇಂಟೆ, ಮರಿ ಇತ್ಯಾದಿ - ಅಲ್ಲಲ್ಲಿ ಸುತ್ತಿ ಮೇಯುತ್ತಿದ್ದು, ಅನಿವಾರ್ಯವಾಗಿ ಅಸಹ್ಯ ಮಾಡಿ, ಯಾರಾದರೂ ಮನುಷ್ಯರಾಗಲಿ ನಾಯಿಗಳಾಗಲಿ

ಅಟ್ಟಿದಾಗ ಮಾತ್ರವೇ ಕುಕ್ಕುಟನಾದದೊಡನೆ ಹೊರಗೆ ಧಾವಿಸುವುದು. ಮನೆಗೆ ಹತ್ತಿಕೊಂಡೇ ಇದ್ದ ಕರೆಯುವ ಕೊಟ್ಟಿಗೆಯಿಂದ ವಿಶ್ರಂಖಲವಾದ ದನಕರುಗಳು ಒಮ್ಮೊಮ್ಮೆ ಸ್ಪಷ್ಟವಾದ ತಮ್ಮ ಖುರಪುಟ ಧ್ವನಿಗಳಿಂದ ಅಲ್ಲಿದ್ದವರಿಗೆ ತಮ್ಮನ್ನು ಅಟ್ಟುವಂತೆ ಎಚ್ಚರಿಕೆ ಹೇಳುತ್ತ ಬರುವುದು ; ಬತ್ತ ಮಿದಿದು ಸದ್ದು ಮಾಡುವುದು ಇತ್ಯಾದಿ, ಇತ್ಯಾದಿ, ಇತ್ಯಾದಿ.[೬]

ಮನೆಯ ಪ್ರಾಚೀನತೆ, ಅದರ ಭೀಮತೆ ಮತ್ತು ನವೀನತೆಗಳ ಸಂಘರ್ಷವೊಂದನ್ನು ಈ ಮೇಲಿನ ಭಾಗದಲ್ಲಿ ಕಾಣಬಹುದಾಗಿದೆ. ಆರ್ಷಾ ಮತ್ತು ನವೀನ ಮೌಲ್ಯಗಳ ಸಂಘರ್ಷಾತ್ಮಕ ಕಥನವಾಗಿಯೂ ಕಾನೂರು ಧ್ವನಿತಗೊಳ್ಳುತ್ತದೆ. ಹಾಗೆಯೇ ಚಂದ್ರಯ್ಯಗೌಡ - ಹೂವಯ್ಯನ ನಡುವಿನ ಸಂಘರ್ಷಾತ್ಮಕ ಕಥೆಯೂ ಇಲ್ಲಿ ಮೈದೋರುತ್ತದೆ.

ಮನೆಯ ಒಳ ಮತ್ತು ಹೊರಗಿನ ಪ್ರಪಂಚದ ವಿವರಗಳು ದಟ್ಟವಾಗಿಯೇ ಬಿಚ್ಚಿಕೊಳ್ಳುತ್ತವೆ. ಸ್ಥಳೀಯ ಕೌಟುಂಬಿಕ ವ್ಯವಸ್ಥೆ, ಮನುಷ್ಯ ಸಂಬಂಧಗಳು, ಬಹುಪತ್ನಿತ್ವದ ವೈವಾಹಿಕ ಸಂಬಂಧಗಳು, ಜೀತ ಪದ್ಧತಿ ಹಾಗೂ ಕೃಷಿ ಸಂಬಂಧಗಳ ಲೋಕವೇ ಕಾದಂಬರಿಯ ಉದ್ದಕ್ಕೂ ಅನೇಕ ಕೌಟುಂಬಿಕ ಕಥನಗಳೊಂದಿಗೆ ತೆರೆದುಕೊಳ್ಳುತ್ತದೆ. ಕೃಷಿ ಚಟುವಟಿಕೆ ಹಾಗೂ ಬೇಟೆಯ ವಿವರಗಳೊಂದಿಗೆ ಮಲೆನಾಡಿನ ರಮ್ಯ ಹಾಗೂ ರೌದ್ರತೆಯ ಪರಿಸರವು ಕಾನೂರಿನ ಕಥನದಲ್ಲಿ ಸೇರಿಹೋಗಿದೆ.

ಈ ಕಥನ ಕೌಟುಂಬಿಕ ಪರಿಸರದ ವಿಘಟನೆಯ ಕಥನವಾಗಿಯೂ ಮೈದೋರುತ್ತದೆ. ಚಂದ್ರಯ್ಯಗೌಡರ ವೈವಾಹಿಕ ಸಂಬಂಧಗಳು, ಸೇರೆಗಾರನ ದೈಹಿಕ ಸಂಬಂಧಗಳು, ಅಣ್ಣಯ್ಯಗೌಡ ಮತ್ತು ಓಬಯ್ಯನ ನಡುವಿನ ಸಂಘರ್ಷಗಳು, ಕುಟುಂಬದ ಆಚೆಗಿನ ದೈಹಿಕ ಸಂಬಂಧಗಳ ಸಂಘರ್ಷವು ಇಲ್ಲಿನ ಮುಖ್ಯ ನೆಲೆಯಾಗಿದೆ.

ಪುರೋಹಿತಶಾಹಿ ವ್ಯವಸ್ಥೆಯ ಮೇಲಾಟಗಳು ಹಾಗೂ ಆಧುನಿಕ ಪ್ರಜ್ಞೆಯ ಮುಖಾಮುಖಿ ಇಲ್ಲಿ ಮೈದಾಳುತ್ತದೆ. ಹಳೆಯ ಹಾಗೂ ಹೊಸ ತಲೆಮಾರುಗಳ ಸಂಘರ್ಷವೂ ಇಲ್ಲಿದೆ. ಜಾತಿವ್ಯವಸ್ಥೆಯ ಅನೇಕ ಸ್ತರಗಳನ್ನು ಅವರ ದೀನಾವಸ್ಥೆಗಳನ್ನು ಈ ಪರಿಸರದ ನಡುವೆ ಬೇರ್ಪಡಿಸಲಾರದಂತೆ ಚಿತ್ರಿಸಲಾಗಿದೆ.

ವಸಾಹತುಶಾಹಿ ಸಂಸ್ಕೃತಿಯ ಪ್ರವೇಶ ಹಾಗೂ ಪ್ರತಿರೋಧಗಳು, ರಾಷ್ಟ್ರೀಯ ಚಳವಳಿಯ ಪ್ರಭಾವ ಪರಿಣಾಮಗಳು, ಹೊಸ ಶಿಕ್ಷಣದ ಬಗೆಗಿನ ಆಸಕ್ತಿ, ಆಧುನಿಕ ಸುಧಾರಣ ಚಳವಳಿಗಳ ಪ್ರಭಾವ, ಮತಾಂತರ ಚಟುವಟಿಕೆಗಳ ಬಗೆಗಿನ ಪ್ರತಿರೋಧದ ಚಿತ್ರಗಳು ಸಹ್ಯಾದ್ರಿ ಪರಿಸರದ ಭಾಗವಾಗಿಯೇ ಮೈದೋರುತ್ತವೆ.

ಹಾಗೆಯೇ ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀ ಸಮುದಾಯದ ಆಯ್ಕೆಗಳನ್ನು ಹತ್ತಿಕ್ಕುವ ಪ್ರಕ್ರಿಯೆಗಳು, ಸನಾತನ ಮೌಢ್ಯತೆಗಳ ನೆರವಿನೊಂದಿಗೆ ಸ್ತ್ರೀ ಸಮುದಾಯದ ಮೇಲೆ ಹೇರಿದ ಒತ್ತಡದ ಚಿತ್ರಗಳು, ಸಾಂಪ್ರದಾಯಿಕ ಹೊರೆ, ವೈಧವ್ಯದ ಅಸಹಾಯಕ ಚಿತ್ರಗಳು, ಒಲ್ಲದ ದಾಂಪತ್ಯಕ್ಕೆ ಒಳಗಾಗಲೇಬೇಕಾದ ಸಂಕಟದ ಬಂಧನಗಳು ಹಾಗೂ ನಿಸ್ಸಹಾಯಕತೆ. ಅದರಿಂದ ಅಖಂಡ ಸ್ತ್ರೀ ಸಮುದಾಯ ಎದುರಿಸಬೇಕಾದ ಸಂಕಟಗಳು. ಹೀಗೆ ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡಿರುವ ಜಗತ್ತು ಕಾದಂಬರಿಯಲ್ಲಿ ಕಾಣಿಸುತ್ತದೆ. ಅಂತೆಯೇ ಸ್ತ್ರೀ ಶೋಷಣೆ, ಮಹಿಳೆಯರಿಂದ ಮಹಿಳೆಯರೇ ಶೋಷಿತಗೊಳ್ಳುವ ಪರಿಸರವು ಮುಖ್ಯ ನೆಲೆಯಾಗಿ ಇಲ್ಲಿ ಚಿತ್ರಿತಗೊಂಡಿದೆ.

ವಸ್ತ್ರ ನೀತಿಯ ಒತ್ತಡಗಳು ಇಲ್ಲಿವೆ. ಈ ಎಲ್ಲವೂ ಕಾನೂರು ಪರಿಸರದಲ್ಲಿ ಬೇರ್ಪಡಿಸಲಾಗದ, ಪ್ರತ್ಯೇಕಿಸಲಾಗದ ಒಂದು ವ್ಯವಸ್ಥೆಯಂತೆ ಅಭಿವ್ಯಕ್ತಗೊಂಡಿವೆ.

ಹೂವಯ್ಯನ ಪ್ರಜ್ಞೆಯ ಮೂಲಕ ನೇಯ್ಗೆಗೊಳ್ಳುವ ಈ ಪರಿಸರ ಖಂಡಖಂಡಗಳಾಗಿ ಪ್ರತ್ಯೇಕಿಸಲಾಗದ ವಿಶ್ವವನ್ನು ಮುಂದಿಡುತ್ತದೆ. ಹಾಗಾಗಿಯೇ ಈ ಬೃಹತ್ ಕಾದಂಬರಿಯಲ್ಲಿ ಪ್ರಕಟಗೊಳ್ಳುವ ಮಾನವ ಸಮುದಾಯ, ಸಸ್ಯಲೋಕ, ಪ್ರಾಣಿ ಲೋಕ, ಭೌತಿಕ ಹಾಗೂ ಪ್ರಾಕೃತಿಕ ಲೋಕಗಳು ಖಂಡ ಖಂಡಗಳಾಗದೆ ಅಖಂಡ ಜೀವಂತ ವ್ಯವಸ್ಥೆಯಂತೆ ಎದುರಾಗುತ್ತದೆ. ಅಂದರೆ ಜಗತ್ತಿನ ಚರಾಚರಗಳೆಲ್ಲವೂ ಹೆಣೆದುಕೊಂಡಿರುವ ವಿಶ್ವದ ಸಮಗ್ರ ದೃಷ್ಟಿಯೊಂದು ಈ ಕಾದಂಬರಿಯಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತದೆ.

೪. ಜೀವ ಜಗತ್ತಿನ ಮಹದ್ವ್ಯಾಪಾರಗಳು

'ಕತ್ತಲೆಗಿರಿಯ ಸರು' ಪರಿಸರ ವ್ಯವಸ್ಥೆಯ ಒಂದು ಪ್ರತಿಮೆಯಂತಿದೆ. ಅಂತೆಯೇ ಜೀವಸಂಕುಲಗಳ ಪಿರಮಿಡ್‌ನ ವಿಶ್ವರೂಪ. ಅಖಂಡ ಜೀವಸ್ತರದ ಅನಂತ ವೈವಿಧ್ಯಗಳ ತಾಣ. ಈ ತಾಣದಲ್ಲಿನ ಜೀವಿಗಳೆಲ್ಲ ಒಂದನ್ನೊಂದು ತಿಂದು ಬದುಕುತ್ತವೆ. ಆ ಬದುಕಿನ ಕ್ರಮವೇ ನಿಸರ್ಗದ ಆಹಾರ ಸರಪಳಿ. ಈ ಸರಪಳಿಯಲ್ಲಿ ಮನುಷ್ಯನೂ ಒಳಗೊಂಡ ಅಖಂಡ ಜೀವರಾಶಿಗಳ ಜೀವಜಾಲ ವ್ಯವಸ್ಥೆಯನ್ನು ಕುವೆಂಪು ಸಂವೇದನೆ ಅಭಿವ್ಯಕ್ತಿಸಿದೆ. ಈ ಜೀವಜಾಲ ವ್ಯವಸ್ಥೆ ಅಥವಾ ಜೀವಸ್ತರದ ಪರಸ್ಪರ ಸಂಬಂಧ ಹಾಗೂ ಅವಲಂಬನೆಗಳ ಅಧ್ಯಯನಕ್ಕೊಂದು ಮಾದರಿಯನ್ನು ಈ ಕಥನ ಒದಗಿಸುತ್ತದೆ.

ಪ್ರಕೃತಿಯ ನಿರಂತರ ಆವರ್ತನಶೀಲ ಲೋಕವನ್ನು ಇಲ್ಲಿ ಕಾಣಬಹುದು. ಪ್ರತಿಯೊಂದು ಜೀವಿಯು ಜೀವನ ಸಂಗ್ರಾಮದಲ್ಲಿ ಬದುಕುಳಿಯಲು ತಾನು ನಡೆಸುವ ಪ್ರತಿರೋಧ ಹಾಗೂ ಹೊಂದಾಣಿಕೆ ಜಗತ್ತಿನ ಅಧ್ಯಯನಕ್ಕಾಗಿ ನಿಸರ್ಗವೇ ಕಟ್ಟಿದ ವಿರಾಟ್ ಪ್ರತಿಮೆ. ಆದರೆ ಮನುಷ್ಯನ ಹಸ್ತಕ್ಷೇಪದಿಂದ ಪರಿಸರ ಸರಪಳಿಯ ಕೊಂಡಿಗಳು ಕಳಚಿಕೊಳ್ಳುವ ಕುರುಹುಗಳು ನಿರಂತರವಾಗುತ್ತಿರುವುದನ್ನು ಕಾನೂರು ಕಥನದ ಬೇಟೆಯ ಚಿತ್ರಗಳು ಸಾಕ್ಷಿಗಳನ್ನು ಒದಗಿಸುತ್ತವೆ. ಇಂಥ ಚಟುವಟಿಕೆಗಳಿಂದ ಪರಿಸರ ಸರಪಳಿಯ ಕೊಂಡಿಗಳನ್ನೇ ಕತ್ತರಿಸಿ ಅಸ್ತವ್ಯಸ್ತಗೊಳಿಸುವ ಪ್ರಕ್ರಿಯೆಗೆ 'ಕತ್ತಲೆಗಿರಿಯ ಸರುವಿನಲ್ಲಿ ಕಾಡು ಹಂದಿಯ ಬೇಟೆ' ಅಧ್ಯಾಯ ಉತ್ತಮ ಉದಾಹರಣೆಯಾಗಿದೆ. ಇಕಾಲಜಿಯ ಅಧ್ಯಯನಕ್ಕೆ ಉತ್ತಮ ವಸ್ತುವಾಗಿ ಕಾಣುತ್ತದೆ. ಪರಿಸರ ಬಂಧವನ್ನು ಅಸ್ತವ್ಯಸ್ಥಗೊಳಿಸುವ ಮನುಷ್ಯನ ಅನೇಕ ಚಟುವಟಿಕೆಗಳು ಈ ಕಥನದುದ್ದಕ್ಕೂ ಮೇಳೈಸುತ್ತವೆ. ಪರಿಸರದ ದಟ್ಟತೆಯನ್ನು ಗಮನಿಸಲು ಕಾದಂಬರಿಯ 'ಕತ್ತಲೆಗಿರಿ ಸರುವಿನಲ್ಲಿ ಕಾಡು ಹಂದಿಯ ಬೇಟೆ' ಅಧ್ಯಾಯದ ಕೆಲ ಭಾಗಗಳನ್ನು ಇಲ್ಲಿ ಉದ್ಧರಿಸುವುದು ಸೂಕ್ತವೆಂದು ಕಾಣುತ್ತದೆ.

> ಬಿತ್ತರದ ಜಗತ್ತಿನಲ್ಲಿ ಮಹದ್ವ್ಯಾಪಾರಗಳು ಜರುಗುತ್ತಿರುತ್ತವೆ. ಘೋರ ಸಂಗ್ರಾಮಗಳಾಗಿ ಕಿರೀಟ ಸಿಂಹಾಸನಗಳುರುಳಿ ರಾಜ್ಯಗಳೆದ್ದು ಬಿದ್ದು ಕೌಲುಗಳಾಗಿ ಹೋಗಿ ರಾಷ್ಟ್ರ ರಾಷ್ಟ್ರಗಳ ಜೀವನಗಳಲ್ಲಿ ಮಹಾ ಪರಿವರ್ತನೆಗಳಾಗುತ್ತಿರುತ್ತವೆ. ಸಜೀವ ಜ್ವಾಲಾಮುಖಿಗಳಿಂದ ನಗರಗಳು ಭಸ್ಮವಾಗುತ್ತವೆ. ಅತಿ ಪ್ರವಾಹದಿಂದ ಪ್ರಾಂತಗಳು ಕೊಚ್ಚಿಹೋಗುತ್ತವೆ. ಲಕ್ಷಾಂತರ ಜನರು ಸಾಯುತ್ತಿರುತ್ತಾರೆ. ಮನುಷ್ಯರ ಯಂತ್ರ

ಕೌಶಲದಿಂದ ಮರುಭೂಮಿಗಳು ನಂದನವನಗಳಾಗುತ್ತವೆ. ಕಾವ್ಯ ಕಲೆಗಳು ಅಭಿವೃದ್ಧಿ ಹೊಂದುತ್ತಿರುತ್ತವೆ. ಸತ್ತವರ ಸಂಖ್ಯೆಗಿಂತಲೂ ಹೆಚ್ಚು ಸಂಖ್ಯೆ ಹುಟ್ಟುತ್ತಿರುತ್ತಾರೆ. ಸಮುದ್ರಗಳು ಕೆರಳಿ ದ್ವೀಪಗಳು ಮುಳುಗಿ ದ್ವೀಪಗಳೇಳುತ್ತಿರುತ್ತವೆ. ಸೂರ್ಯ ಚಂದ್ರ ಗ್ರಹಗಳು ಅನಂತಾಕಾಶದಲ್ಲಿ ಯಾವ ಉದ್ದೇಶದಿಂದಲೋ ಏನೋ ಸುತ್ತುತ್ತಾರೆ. ಬರುಗಣ್ಣಿಗೆ ಕಾಣದೆ ಯಂತ್ರದೃಷ್ಟಿಗೆ ಮಾತ್ರ ಗೋಚರವಾಗಿರುವ ತಾರೆ ನೀಹಾರಿಕೆಗಳಲ್ಲಿ ಭಯಂಕರ ಅನಲ ವಿಪ್ಲವಗಳಾಗುತ್ತಿರುತ್ತವೆ. ಆದರೆ ಇವುಗಳು ಯಾವುದರಿಂದಲೂ ವಿಕ್ಷುಬ್ಧನಾಗದೆ ತನ್ನ ಆತ್ಮಶಾಂತಿಯ ಸಾಧನೆಯಲ್ಲಿಯೇ ತನ್ಮಯನಾಗಿರುತ್ತಾನೆ, ಹಿಮಾಲಯದ ಗುಹೆಯಲ್ಲಿ ತಪಸ್ಸು ಮಾಡುವ ವೈರಾಗಿ! ಆ ವೈರಾಗಿಯಂತಿರುವ ಕೆಲವು ಸ್ಥಾನಗಳಿವೆ, ಸಹ್ಯಾದ್ರಿ ಶ್ರೇಣಿಗಳಲ್ಲಿ.

ಆ ಸ್ಥಾನಗಳು ಮಹಾ ಗಿರಿಭಿತ್ತಿಗಳ ಮಧ್ಯೆ ಗಭೀರ ನೀರವ ಕಂದರಗಳಲ್ಲಿ ನಿರಂಕುಶವಾಗಿರುತ್ತವೆ. ಕಾನೂರಿನ ಸಮೀಪದಲ್ಲಿ 'ಕತ್ತಲೆಗಿರಿ' ಅವುಗಳಲ್ಲಿ ಒಂದು. ಅದರ ಹೆಸರೇ ಸ್ಥಿತಿಸೂಚಕವಾಗಿದೆ. ಕತ್ತಲೆಗಿರಿಯ ಮೇಲೆ ಮಟಮಟ ಮಧ್ಯಾಹ್ನದಲ್ಲಿ ಮಾತ್ರ ಬಿಸಿಲು ಬೀಳುತ್ತಿತ್ತು. ಆ ಬಿಸಿಲಿಗೂ ಮರಗಳ ನೆತ್ತಿಯ ಮೇಲಲ್ಲದೆ ಒಳಗೆ ಪ್ರವೇಶ ಮಾಡಲು ಅವಕಾಶವಿರಲಿಲ್ಲ. ಅಷ್ಟು ನಿಬಿಡವಾಗಿ, ಅಷ್ಟು ಉನ್ನತವಾಗಿ ಬೆಳೆದಿದ್ದುವು ಅಲ್ಲಿಯ ಮರಗಳು. ಆ ಮರಗಳ ಬುಡದಲ್ಲಿ, ಎರಡು ಗಿರಿಪಕ್ಷಗಳ ಸಂದಿಯಲ್ಲಿ ಯಾವಾಗಲೂ ನೀರು ಸ್ರವಿಸುತ್ತಿದ್ದ ಕಿರುಹಳ್ಳ ಹರಿಯುತ್ತಿತ್ತು. ನಿಜವಾಗಿಯೂ ಅದು ಹರಿಯುತ್ತಿದ್ದುದು ಮಳೆಗಾಲದಲ್ಲಿ ಮಾತ್ರ. ಬೇಸಗೆಯಲ್ಲಿ ಆ ಜಾಗವೆಲ್ಲ ತೇವವಾಗಿ ನೀರು ಸ್ರವಿಸಿ ಕೆಸರು ಕೆಸರಾಗಿರುತ್ತಿತ್ತು. ಕೆಲವೆಡೆಗಳಲ್ಲಿ ಉಸುಬು ಕಾಲಿಟ್ಟರೆ ಸೊಂಟದವರೆಗೂ ಮುಳುಗುವಂತಿತ್ತು. ಆ ಸರುವಿನಲ್ಲಿ ಲಕ್ಷೋಪಲಕ್ಷ ಜಾತಿಯ ಜೊಂಡು ಹುಲ್ಲೂ, ಮುಂಡಗ, ಕೇದಗೆ, ಬೆತ್ತ, ವಾಟೆ, ಕೆಸು ಮುಂತಾದ ನೂರಾರು ವಿಧವಾದ ಜಲಪ್ರಿಯ ಸಸ್ಯಗಳೂ ಅಸ್ತವ್ಯಸ್ತವಾಗಿ ಕೊಬ್ಬಿ ಬೆಳೆದು ನಿಂತಿದ್ದುವು. ಕೆಲವೆಡೆಗಳಲ್ಲಂತೂ ನಾಯಿ ನುಸಿಯಲೂ ಕೂಡ ಸ್ಥಳವಿರದಷ್ಟು ನಿಬಿಡವಾಗಿತ್ತು. ಅಲ್ಲಿಯ ಇಂಬಳಗಳಿಗೆ ಚಿರಂಜೀವತ್ವ ಲಭಿಸಿತ್ತು. ಬೆಟ್ಟ ಬೇಸಗೆಯಲ್ಲಿಯೂ ಕೂಡ, ಇತರ ಸ್ಥಳಗಳಲ್ಲಿ ಇಂಬಳಗಳೆಲ್ಲ ಮೃತಪ್ರಾಯವಾಗಿರುತ್ತಿದ್ದಾಗ, ಅಲ್ಲಿ ಕಾಲಿಡಲು ಸಾಧ್ಯವಿರಲಿಲ್ಲ. ವಾಟೆ ಬೆತ್ತಗಳನ್ನು ಕಡಿದು ತರಲು ಹೋಗುತ್ತಿದ್ದವರು ಉಪ್ಪು ಸುಣ್ಣಗಳನ್ನು ಬಟ್ಟೆಯಲ್ಲಿ ಕಟ್ಟಿಕೊಂಡು ಹೋಗಿ ಒರಸಿ ಒರಸಿ ಅವುಗಳನ್ನು ನಿವಾರಿಸಿಕೊಳ್ಳುತ್ತಿದ್ದರು. ಆಗಲೂ ಕೂಡ ಅವು ನೆತ್ತರು ಹೀರ ಬಿಡುತ್ತಿರಲಿಲ್ಲ. ತಮ್ಮ ಅಮರತೆಯಲ್ಲಿ ಅವುಗಳಿಗೆ ಅಷ್ಟು ನಂಬುಗೆ! ಕೇದಗೆ ಹೂವಿನ ಕಂಪಿಗಾಗಿಯೋ ನೀರು ನೆಳಲುಗಳ ತಂಪಿಗಾಗಿಯೋ ಅಥವಾ ಕಪ್ಪೆ ಮೊದಲಾದ ಕ್ಷುದ್ರ ಜೀವಿಗಳನ್ನು ನುಂಗುವ ಹೊಟ್ಟೆಪಾಡಿಗಾಗಿಯೋ ದಾಸರ, ಕಾಳಿಂಗ, ನಾಗರ, ಕೇರೆ ಮೊದಲಾದ ಹಾವುಗಳೂ ಅಲ್ಲಿರುತ್ತಿದ್ದುವು. ಇನ್ನು ಸೊಳ್ಳೆಗಳಿಗಂತೂ ಅದು ನೆಲೆಬೀಡಾಗಿತ್ತು. ಹಕ್ಕಿಗಳು ಆ

ಎಡೆಗೆ ದಾರಿತಪ್ಪಿಯೂ ಕೂಡ ತಲೆಹಾಕುತ್ತಿರಲಿಲ್ಲ. ಬೇಸಗೆಯಲ್ಲಿ ಮಾತ್ರ ಆ ಕಾಡಿನ
ಜಂತುಗಳು, ಹುಲಿಯಿಂದ ಹಿಡಿದು ಕಾಡುಕೋಳಿಯವರೆಗೂ, ಅಲ್ಲಿಗೆ ಜಲಪಾನ
ಮಾಡಲು ಬರುತ್ತಿದ್ದುವು.[೮]

ಈ ಮೇಲಿನ ಭಾಗ ಮೊದಲೇ ಹೇಳಿದಂತೆ ಅಖಂಡ ಪರಿಸರ ಅಧ್ಯಯನಕ್ಕೆ ಉದಾಹರಣೆಯೆಂತೊ ಅಂತೆಯೇ
ಪರಿಸರದ ಸ್ವರೂಪವನ್ನೇ ದರ್ಶನ ಮಾಡಿಸುತ್ತದೆ. ಪರಿಸರ ಜಗತ್ತಿನ ಮಹದ್ವ್ಯಾಪಾರಗಳಲ್ಲಿ ಮನುಷ್ಯನ
ಅನಾದಿ ಕಾಲದ ಚರಿತ್ರೆಯನ್ನು, ಸಂಸ್ಕೃತಿಯನ್ನು ; ಹುಟ್ಟು ಸಾವುಗಳನ್ನು, ಮನುಷ್ಯ ಸಾಧನೆ ಹಾಗೂ ವಿಪ್ಲವಗಳನ್ನು
ದರ್ಶಿಸುವಂತೆಯೇ ಸಮಷ್ಟಿ ವಿಶ್ವ ಅನಾದಿ ಕಾಲದಿಂದ ತನ್ನ ಎಲ್ಲ ಚಲನವಲನಗಳನ್ನು ಪರಿವರ್ತನಶೀಲಗೊಳಿಸಿದ
ಕಥನವನ್ನು ಕಾಣಿಸುತ್ತದೆ.

೫. ವಸಾಹತುಶಾಹಿ ಪ್ರಭುತ್ವ ಹಾಗೂ ಅರಣ್ಯ (ಪರಿಸರ) ಕಾಯ್ದೆ

ವಸಾಹತುಶಾಹಿ ಪ್ರಭುತ್ವವು ೧೮೬೫ರಲ್ಲಿ ಮೊದಲ ಭಾರತೀಯ ಅರಣ್ಯ ಕಾಯ್ದೆಯನ್ನು ಜಾರಿಗೊಳಿಸಿತು.
ಕಾಡು ಹಾಗೂ ಬೇನಾಮಿ ಜಮೀನನ್ನು ರಕ್ಷಿತ ಅರಣ್ಯವೆಂದು ಸರ್ಕಾರ ಘೋಷಿಸಿತು. ಈ ಕಾಯ್ದೆಯು ಅರಣ್ಯ
ಉತ್ಪನ್ನಗಳ ಮೇಲಿನ ಸ್ಥಳೀಯರ ಹಕ್ಕು ಹಾಗೂ ಕಾಡಿನ ಬಳಕೆಯ ಮೇಲೆ ನಿರ್ಬಂಧಗಳನ್ನು ಹೇರಿತು. ಇದು
ಅರಣ್ಯವನ್ನೇ ನಂಬಿದವರ ಮೇಲೆ ಹೇರಿದ ಒತ್ತಡವಾಗಿ ಪರಿಣಮಿಸಿತು. ಈ ಹೇರಿಕೆಯನ್ನು ಸ್ಥಳೀಯ ಜನ
ಸಮುದಾಯ ತಮ್ಮದೇ ಆದ ಪ್ರತಿತಂತ್ರಗಳನ್ನು ಒಡ್ಡುವುದರ ಮೂಲಕ ಪ್ರತಿರೋಧಿಸಿರುವುದನ್ನು 'ಕಾನೂರು
ಹೆಗ್ಗಡಿತಿ' ಕಾದಂಬರಿಯ ಹಲವು ಉದಾಹರಣೆಗಳಲ್ಲಿ ಕಾಣಬಹುದಾಗಿದೆ.

ತೇಗ, ಬೀಟೆ, ಹೊನ್ನೆ, ಮತ್ತಿ, ಶ್ರೀಗಂಧ ಮೊದಲಾದ ಅಪಾರ ಬೆಲೆಬಾಳುವ ಸಾಗವಾನಿಗಳ ಮೇಲೂ,
ಈಚಲು, ಬಗನಿಯ ಮರಗಳಲ್ಲಿ ಕಳ್ಳು ತೆಗೆಯುವುದರ ಮೇಲೂ ಸ್ಥಳೀಯರ ಮೇಲೆ ಒತ್ತಡ ಹೇರಿದ್ದನ್ನು
ಕಾಣುತ್ತೇವೆ. ಅಂಥ ಒತ್ತಡಗಳಿಗೆ ಸ್ಥಳೀಯರು ಪ್ರತಿಕ್ರಿಯಿಸಿದಕ್ಕೆ ಕಾದಂಬರಿಯಲ್ಲಿನ ಉತ್ತಮ
ಉದಾಹರಣೆಯೆಂದರೆ 'ಕಿಲಸ್ತರ ಮಾರ್ಕನಿಗೆ ಬೈರ ನಾಮ ಹಾಕಿದ' ಪ್ರಸಂಗ. ಮೇಲಿನ ಕಾಯ್ದೆಗೆ ಅನುಗುಣವಾಗಿ
ಬಗನಿ ಮರಗಳಿಗೆ ಮಾರ್ಕ್ ಹಾಕುವುದಕ್ಕೆ ಹಾಗು ಹೆಂಡವನ್ನು ತೆಗೆಯದಂತೆ ನೋಡಿಕೊಳ್ಳಲು ಇಲಾಖೆಗಳು
ನಿರ್ಮಾಣವಾದದ್ದರ ಸೂಚನೆಗಳು ಕೂಡ ಕಾದಂಬರಿಯಲ್ಲಿ ಬರುತ್ತವೆ. ಈ ಕಾಯ್ದೆಯನ್ನು ಜಾರಿಗೊಳಿಸಿ
ಮರಗಳಿಗೆ ಗುರುತು ಮಾಡಿ ಹೆಂಡ ತೆಗೆಯದಂತೆ ನೋಡಿಕೊಳ್ಳಲು ನೇಮಕವಾಗಿದ್ದ ಕಿಲಸ್ತರ ಮಾರ್ಕನು
ತನಗೆ ಅಷ್ಟು ಪರಿಚಿತವಲ್ಲದ ಅರಣ್ಯಕ್ಕೆ ಪ್ರವೇಶಿಸಿ ಕಷ್ಟಕ್ಕೊಳಗಾಗುವ ಸನ್ನಿವೇಶ ಈ ಕಾದಂಬರಿಯ ಮುಖ್ಯ
ಘಟನೆಯಾಗಿ ಚಿತ್ರಿತವಾಗಿದೆ.

ಚಂದ್ರಯ್ಯಗೌಡರ ಆಳು ಬೇಲರ ಬೈರನು ಕಳ್ಳ ಬಗನಿ ಕಟ್ಟಿದ್ದ ತಾಣದಲ್ಲಿ ಮಾರ್ಕನು ಕಳ್ಳನನ್ನು ಹಿಡಿಯಲು
ಹೊಂಚುಹಾಕುತ್ತಾನೆ. ಆದರೆ ಸ್ಥಳೀಯ ಪರಿಸರದ ಜ್ಞಾನಾನುಭವದ ಮುಂದೆ ನಗರದ ಜ್ಞಾನವು ಅವಹೇಳನಕ್ಕೆ
ಗುರಿಯಾಗುವ ಚಿತ್ರವು 'ಕಿಲಸ್ತರ ಮಾರ್ಕನಿಗೆ ಬೈರ ನಾಮ ಹಾಕಿದ' ಪ್ರಸಂಗದಲ್ಲಿ ಮಾರ್ಮಿಕವಾಗಿ
ಪ್ರಕಟಗೊಳ್ಳುತ್ತದೆ. ಕಾಡಿನಲ್ಲಿ ಒಬ್ಬನೇ ಇರಲು ಹೆದರುವ, ಕಳ್ಳನು ತನಗಿಂತ ಬಲಿಷ್ಠನಾದರೆ ಅವನೊಂದಿಗೆ
ಮುಖಾಮುಖಿಯಾಗಲು ಭಯಪಡುವ, ಅರಣ್ಯ ಹೊಕ್ಕಲು ಪರಿಚಯವಿಲ್ಲದ್ದರಿಂದ ಕಳ್ಳನನ್ನು ಹಿಡಿಯಲು
ಹಳೆಪೈಕದ ತಿಮ್ಮನ ಸಹಾಯವನ್ನು ಬೇಡುವ ಮಾರ್ಕನ ವ್ಯಕ್ತಿತ್ವವನ್ನೇ ಇಲ್ಲಿ ವಿಡಂಬಿಸಲಾಗಿದೆ. ಅದಕ್ಕೆ

ಉದಾಹರಣೆಯಾಗಿ ಕಾದಂಬರಿಯಲ್ಲಿರುವ ಈ ಕೆಳಗಿನ ಪ್ರಸಂಗವನ್ನು ಇಲ್ಲಿ ಸಂಗ್ರಹಿಸುವುದು ಸೂಕ್ತವೆಂದು ಕಾಣುತ್ತದೆ.

ಬೇಲರ ಬೈರ ಕಳ್ಳು ತೆಗೆದುಕೊಂಡು ಹೋಗುವ ಉದ್ದೇಶದಿಂದ ಉಗ್ಗ ಹಾಕಿದ್ದ ಕರಿಯ ಮೊಗೆಯನ್ನು ತನ್ನ ಜೊತೆಯಲ್ಲಿ ತಂದಿದ್ದ. ಬಿದಿರಿನ ಏಣಿಯನ್ನು ಏರಿ ಬಗನಿಯ ಮರಕ್ಕೆ ಕಟ್ಟಿದ್ದ ಕಳ್ಳು ತುಂಬಿದ ಮೊಗೆಯನ್ನು ಬಿಚ್ಚಿಕೊಂಡನು. ಕಳ್ಳಿನ ಕಂಪನ್ನು ಸವಿದ ಬೈರನಿಗೆ ತನ್ನ ಹೆಂಡತಿ ಸೇಸಿ ಮನೆಯಲ್ಲಿ ಮಾಡಿಟ್ಟಿದ್ದ ಮೀನು ಪಲ್ಯ ನೆನಪಿಗೆ ಬಂದಿತು. ಹೇಗಾದರೂ ಮಾಡಿ ಇದನ್ನು ಮನೆಗೆ ತೆಗೆದುಕೊಂಡು ಹೋಗಬೇಕೆಂಬ ಮನಸ್ಸಾಯಿತು. ಅನುಭವಶಾಲಿಯಾದ ಬೈರ ಒಂದು ಕೈಲಿ ಕಳ್ಳಿನ ಮೊಗೆಯನ್ನು ಹಿಡಿದು ಮರವನ್ನು ಇಳಿಯಲು ಆರಂಭಿಸಿದನು. ಆದರೆ ಮರದ ಬುಡದಲ್ಲಿ ಸದ್ದಾಗಿ ಬೈರ ಕೆಳಗೆ ನೋಡಲು ಮಾರ್ಕನ ಕೋಪೋದ್ರಿಕ್ತ ಮುಖ ಪ್ರದರ್ಶಿತವಾಯ್ತು. "ಇಳೀ! ಇಳೀ! ಪರ್ವಾಯಿಲ್ಲ!" ಎಂದು ಮಾರ್ಕ ಎಷ್ಟು ಪರಿಯಾಗಿ ಹೇಳಿದರೂ ಬೈರ ಭಯದಲ್ಲಿ ಮರವನ್ನು ಇಳಿಯದೆ ಗಡ್ಡೆ ಬೆಳೆದಿದ್ದ ಡೊಳ್ಳು ಹೊಟ್ಟೆಯನ್ನು ಹೊತ್ತುಕೊಂಡು ನಾನಾ ರೀತಿಯಾಗಿ ಸಂಕಟ ಪಡುತ್ತಿದ್ದ. ಏನು ಮಾಡಬೇಕು ಎಂಬ ಯೋಚನೆ ಹೊಳೆಯದೆ ಬೈರ ಚಿಂತಾಕ್ರಾಂತನಾದನು.

"ಇಳೀತೀಯೋ ಇಲ್ಲೊ?" ಎಂದು ಮಾರ್ಕ ಗದರಿಸಲು "ಇಳೀತೀನಿ, ನಮ್ಮಪ್ಪಾ! ನಿಮ್ಮ ದಮ್ಮಯ್ಯಾ ಅಂತೀನಿ! ಇದೊಂದು ಸಲ ಬಿಟ್ಟುಬಿಡಿ. ನಿಮ್ಮ ಕಾಲಿಗ್ಬೀಳ್ತೀನಿ!" ಎಂದು ಕಣ್ಣೀರಿಟ್ಟನು. ಮಾರ್ಕ ಮರದ ಕೆಳಗಿನಿಂದ ಉಗುಳುವುದು, ಬೈಯುವುದು ಮಾಡುತ್ತಿದ್ದ. ಇದರಿಂದ ಭಯಪಟ್ಟ ಬೈರ ಇಳಿಯಲು ತೀರ್ಮಾನಿಸಿ ಮಾರ್ಕನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಬೈರನಂತೆಯೇ ಮಾರ್ಕನು ಕೂಡ ಅವನನ್ನು ಹೇಗೆ ಹಿಡಿಯುವುದು ಎಂದು ಆಲೋಚಿಸುತ್ತಿದ್ದ. ಹೀಗಿರುವಾಗ ಬೈರನಿಗೆ ಎಂದೂ ಹೊಳೆಯದ ಉಪಾಯವೊಂದು ತಟ್ಟನೆ ಹೊಳೆಯಿತು. ಅವನಿಂದ ಪಾರಾಗಲು ಕಳ್ಳು ತುಂಬಿದ ಮೊಗೆಯನ್ನು ಮೇಲೆ ನೋಡುತ್ತಿದ್ದ ಮಾರ್ಕನ ಮೇಲೆ ಎಸೆದನು. ಕಳ್ಳಿನ ಮೊಗೆ ಮೇಲಿಂದ ಬಿದ್ದ ರಭಸಕ್ಕೆ ಮಾರ್ಕನ ಮೂಗಿಗೆ ಬಲವಾದ ಪೆಟ್ಟು ಬಿದ್ದಿತು. ಅಸಾಧ್ಯವಾದ ನೋವಾಯಿತು. ನೊರೆಗಳ್ಳು ಕಣ್ಣು, ಮೂಗು, ಬಾಯಿ, ಕಿವಿ ಎಲ್ಲೆಲ್ಲಿಯೂ ನುಗ್ಗಿ ಪ್ರವಹಿಸಿತು.

"ಅಯ್ಯೋ! ಅಯ್ಯಯ್ಯೋ! ಅಯ್ಯಯ್ಯೋ, ಹಿಡಕೊಳ್ಳೊ, ಓಡ್ತನಲ್ಲೊ" ಎಂದು ಮಾರ್ಕ ಗಟ್ಟಿಯಾಗಿ ಕೂಗುತ್ತಲೇ ಇದ್ದ. ಅತ್ತ ಬೈರ ಇಳಿದು ಪರಾರಿಯಾದುದನ್ನು ನೋಡಲೂ ಇಲ್ಲ, ಆಲಿಸಲೂ ಇಲ್ಲ.

ಈ ಮೇಲಿನ ಸಂಗ್ರಹ ಭಾಗದಲ್ಲಿ ಸ್ಥಳೀಯ ಜ್ಞಾನ ಮತ್ತು ಅನುಭವಗಳು ಹೊರಗಿನ ಶಕ್ತಿಗಳಿಗೆ ಮುಖಾಮುಖಿಯಾಗುವ ಮಾರ್ಮಿಕತೆಯನ್ನು ಕಾಣಬಹುದಾಗಿದೆ. ಬೈರನಿಗೆ ಸಜಾ ಹಾಕುವುದನ್ನು ತಪ್ಪಿಸಲು ತಿಮ್ಮನು ಸೃಷ್ಟಿಸುವ ಕಥನವು ಅಂಥ ಪ್ರತಿರೋಧದ ಮಾದರಿಯಂತೆ ಕಾಣುತ್ತದೆ. ಈ ಎಲ್ಲ ಆಟವು ಬೈರನದಲ್ಲವೆಂದು, ಇದು ಭೂತರಾಯನ ಚೇಷ್ಟೆಯೆಂದು, ಕಿಲಸ್ತರು ನಿಮಗೆ ಇದೆಲ್ಲಾ ಗೊತ್ತಾಗುವುದಿಲ್ಲವೆಂದು, ನಮ್ಮ ಭೂತರಾಯಗೆ ಕಿಲಸ್ತಾನ್ರು ಅಂದ್ರೆ ಆಗೋದಿಲ್ಲವೆಂದು, ಈ ಹಿಂದೆ ಕಿಲಸ್ತರಾದ ಸೀತೆಮನೆ ಜಾಕಣ್ಣನಿಗೆ ಚೌಡಿ ರಕ್ತ ಕಾರಿಕೊಳ್ಳುವ ಹಾಗೆ ಮಾಡಿದ ಕಥಾ ಸೃಷ್ಟಿಯಿಂದ ಮಾರ್ಕನ ಸ್ಥೈರ್ಯ ಹಾಗೂ ಅಧಿಕಾರವನ್ನೇ ಟೊಳ್ಳುಗೊಳಿಸುವ ತಿಮ್ಮನ ಕಥನ ಪ್ರತಿರೋಧದಂತೆ ಕಾಣುತ್ತದೆ.

ಆ ಕಾಡು, ಆ ಕತ್ತಲೆ, ಆ ಉದ್ವೇಗ, ಸಂದೇಹವೇನೆಂಬುದನ್ನೇ ಅರಿಯದ ತಿಮ್ಮನ
ಆ ಶ್ರದ್ಧಾವಾಣಿ ಇವುಗಳಿಂದ ಮಾರ್ಕನ ಚರ್ಮದಲ್ಲಿ ಮಾತ್ರವಿದ್ದ ಕ್ರೈಸ್ತ ಮತ ಅಳುಕಿತು.[೮]

ಹೀಗೆ ತಿಮ್ಮ ಕಟ್ಟಿದ ಕಥನ ವಸಾಹತುಶಾಹಿಯ ನೀತಿ ನಿಯಮಗಳಿಗೆ ಸ್ಥಳೀಯರು ಕೊಟ್ಟ ಪ್ರತಿಕ್ರಿಯೆಯಂತಿದೆ. ಸಿದ್ದನ ಸಹಾಯದಿಂದ ಬೈರನು ತಲೆಯನ್ನೂ ಗಡ್ಡ ಮೀಸೆಗಳನ್ನು ನುಣ್ಣಗೆ ಬೋಳಿಸಿಕೊಂಡು ಮಾರ್ಕನಿಗೆ ಗುರುತು ಸಿಕ್ಕದ ಹಾಗೆ ಮಾಡಿದ್ದು ಸ್ಥಳೀಯ ಜ್ಞಾನಕ್ಕೆ ಮತ್ತೊಂದು ಉದಾಹರಣೆಯಾಗಿದೆ.

> "ಈಗ ನನ್ನ ಗುರ್ತು ಸಿಕ್ತದೇನು?" ಎಂದನು ಬೈರ. "ಗುರ್ತು ಸಿಕ್ಕೋದೆ ಸೈ!! ನನಗೇ ಸಿಕ್ಕೋದಿಲ್ಲಾ! ಆ ಪ್ಯಾಟಿ ಕತ್ತೆ ಮಾರ್ಕಗೆ ಸಿಕ್ಕಿಬಿಟ್ರೆ ಇನ್ನೇನು ಕಡ್ಮೆಯಿಲ್ಲ!!!"[೧೦]

ಎಂಬ ಮಾತುಗಳು ಈ ಮೇಲಿನ ಮಾತಿಗೆ ಪುಷ್ಟಿ ನೀಡುತ್ತವೆ.

ಕಳ್ಳಬಗನಿ ಕಟ್ಟುವ ವಿಚಾರವಾಗಿ ಚಂದ್ರಯ್ಯಗೌಡರ ಮನೆಯ ಜಗಳಿಯಲ್ಲಿ ನಡೆಯುವ ಸಂಭಾಷಣೆಯನ್ನು ಇಲ್ಲಿ ಉದಾಹರಿಸುವುದು ಮುಖ್ಯವೆನಿಸುತ್ತದೆ.

> ಚಂದ್ರಯ್ಯಗೌಡರು "ಇವರಿಗೆ ಏನು ಮಾಡಬೇಕಾಯ್ತು? ಹೇಳಿದರೆ ಕೇಳೋದಿಲ್ಲ. ಬೋವಿ ಮನೆಗೆ, ಕಳ್ಳಂಗಡಿಗೆ ಬತ್ತ ಹೊತ್ತೂ ಹೊತ್ತೂ ಕುಡಿದು ಸಾಯೋದು ಸಾಲದೆ, ಕಳ್ಳ ಬಗನೀ ಬೇರೆ ಕಟ್ಟಾಕೆ ಸುರು ಮಾಡಿದ್ದಾರಲ್ಲಾ!" ಎಂದರು.
>
> ಹೂವಯ್ಯನೂ ಸ್ವಲ್ಪ ವಿನೋದಕ್ಕಾಗಿ "ಹೌದು, ದೊಡ್ಡವರೆಲ್ಲ ಮಾನ ಪತ್ರಕ್ಕೆ ರುಜು ಹಾಕಿ, ದೇವರ ಮೇಲೆ ಆಣೆ ಹಾಕಿ, ಇನ್ನೂ ಕುಡಿಯೋದು ಬಿಟ್ಟಿಲ್ಲ. ಅಂದಮೇಲೆ ಬಡವರಿಗೆ ಯಾಕೆ ಹೇಳಬೇಕು? ದೊಡ್ಡವರಿಗೆ ದುಡ್ಡಿದೆ. ಲೈಸನ್ಸಿಗೆ ದುಡ್ಡು ಕೊಟ್ಟು ಬಗನಿ ಕಟ್ಟಿಸಿ, ಕಳ್ಳು ಕುಡಿಯುತ್ತಾರೆ. ಬಡವರು ಕದ್ದು ಬಗನಿ ಕಟ್ಟಿ ಕುಡಿಯುತ್ತಾರೆ" ಎಂದನು. ರಾಮಯ್ಯ "ಊರಿನಲ್ಲಿ ಯಾರೂ ಬಗನಿ ಕಟ್ಟಕೂಡದು ಎಂದು ಸಾರಿ ನಿಲ್ಲಿಸಿಬಿಟ್ಟರೆ ಎಲ್ಲ ಸರಿಹೋಗುತ್ತದೆ. ಒಬ್ಬರು ಬಗನಿ ಕಟ್ಟಿ ಕಳ್ಳು ಕುಡಿಯುತ್ತಿದ್ದರೆ ಉಳಿದವರು ನೋಡುತ್ತ ಸುಮ್ಮನಿರುತ್ತಾರೇನು? ದುಡ್ಡಿಲ್ಲದಿದ್ದರೆ ಕಳ್ಳತನ ಮಾಡ್ತಾರೆ. ಹಾರೆ ಗುದ್ದಲಿ ಎಲ್ಲಾ ಹೊತ್ತುಕೊಂಡು ಹೋಗಿ ಕದ್ದು ಮಾರಾಟ ಮಾಡಿ ಕುಡಿಯುತ್ತಾರೆ..." ಎಂದು ಮುಂತಾಗಿ ಆಡಿದನು.
>
> ಟೀಕೆಯ ಕೊಡಲಿ ತಮ್ಮ ಬುಡಕ್ಕೇ ಬೀಳುತ್ತಿರಲು ಗೌಡರು ನಸುಮುನಿದು "ಒಳ್ಳೇ ಮಾತು ಹೇಳ್ತೀರಿ ನೀವಿಬ್ಬರೂ. ಸರ್ಕಾರಕ್ಕೆ ಮೋಸ ಮಾಡಿ ಅಂತಾ ಹೇಳ್ಕೊಡಿ ಎಲ್ಲ್ರಿಗೂ; ಪಸಂದಾಗ್ತದೆ" ಎಂದು ಮಾರ್ಕನ ಕಡೆ ನೋಡಿದರು.
>
> ಹೂವಯ್ಯ "ಸರ್ಕಾರದ ಬೊಕ್ಕಸ ಬೆಳೆಯಲಿ ಎಂದೇನು ನೀವೆಲ್ಲ ಬಗನಿ ಮರಗಳಿಗೆ ತೆರಿಗೆ ತೆರುವುದು?" ಎಂದು ಹಾಸ್ಯ ಮಾಡಿದನು. ರಾಮಯ್ಯನೂ "ಸರ್ಕಾರ ಮಾಡಿದ್ದೆಲ್ಲ ಸತ್ಕಾರ್ಯವೇನು? ಅದಕ್ಕೆ ಬೇಕಾಗಿರುವುದೂ ದುಡ್ಡೇ! ಇಲ್ಲಿ ಇವರೆಲ್ಲ ಕುಡಿದು, ಆರೋಗ್ಯ ಕೆಟ್ಟು ಸತ್ತರೇನಂತೆ? ಅಲ್ಲಿ ಪಟ್ಟಣ ಸಿಂಗಾರ ಮಾಡ್ತಾರೆ!" ಎಂದನು.[೧೧]

ಈ ಮೇಲಿನ ಸಂಭಾಷಣೆಯಲ್ಲಿ ಆಧುನಿಕ ಶಿಕ್ಷಣದ ಅರಿವಿರುವ ಹೂವಯ್ಯ ಮತ್ತು ರಾಮಯ್ಯರು ತೋರುವ ಪ್ರತಿಕ್ರಿಯೆಯನ್ನು ಗಮನಿಸಬಹುದಾಗಿದೆ. ಹಾಗೆಯೇ ಬಗನಿ ಮರಗಳಿಗೆ ತೆರಿಗೆ ವಿಧಿಸುವ, ಸ್ಥಳೀಯ

ಬದುಕಿನ ಮೇಲೆ ತಮ್ಮ ಅಧಿಕಾರವನ್ನು ಹೇರುವ ಅಧಿಕಾರಶಾಹಿ ಬಗೆಗೆ ಸ್ಥಳೀಯ ಪರಿಸರದ ಪ್ರಜ್ಞೆ ಮುಖಾಮುಖಿಯಾದ ಪ್ರಸಂಗವನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ.

೬. ಎಲ್ಲ ಕ್ಷೇಮ ಭೂಮಿಯಲ್ಲಿ!

'ಮನುಷ್ಯನ ಬಾಳು ನಶ್ವರ ದುಃಖಮಯ ಎಂದು, ಆ ದುಃಖದಿಂದ ಪಾರಾಗುವ ವಿಧಾನವನ್ನು ಕಂಡು ಹಿಡಿಯಬೇಕೆಂದು' ಮಡದಿ, ಮಗ, ಮನೆ ರಾಜ್ಯಗಳನ್ನು ಬಿಟ್ಟು ಹೊರಟ ಸಿದ್ಧಾರ್ಥನ ಬದುಕು ಈ ಕಾದಂಬರಿಯಲ್ಲಿ ಮುಖ್ಯವಾಗಿ ಚಿಂತನೆಗೆ ಒಳಪಟ್ಟಿದೆ. ಬುದ್ಧನ 'ಆಸೆಯೇ ದುಃಖಕ್ಕೆ ಮೂಲ' ಎಂಬ ತಾತ್ವಿಕತೆಯೇ ಜೀವಪರವಾದುದು. ಮಲೆನಾಡಿನ ಕಾಡಿನ ಮೂಲೆಯಲ್ಲಿ ಇಂಥ ದಾರ್ಶನಿಕತೆಯನ್ನು ಸ್ಥಾಪಿಸಲು ಪ್ರಯತ್ನಿಸುವ ಪ್ರಕ್ರಿಯೆ ಪರಿಸರದಿಂದಲೇ ಹುಟ್ಟಿದಂತೆ ಕಾಣುತ್ತದೆ.

ಪರಿಸರದ ಭೋಗ, ರೌದ್ರತೆಯ ಪರಿಣಾಮವಾಗಿ ನಿರ್ಮಾಣವಾಗುವ ದುಃಖಕ್ಕೆ ಬುದ್ಧನ ತತ್ವಗಳು ಹೂವಯ್ಯನಿಗೆ ಆಶ್ರಯವಾಗಿ ಕಾಣುತ್ತವೆ.

> ಹಿಂದೆ ಅವನ ದೃಷ್ಟಿಗೆ ಸೌಂದರ್ಯದ ಬೀಡಾಗಿ ತೋರುತ್ತಿದ್ದ ವಿಶ್ವವು ಕ್ರೂರ ಪಿಶಾಚಿಯ ಕರ್ಮಶಾಲೆಯಂತೆ ಕುರೂಪವಾಗಿ ತೋರತೊಡಗಿತು. ಸರ್ವಂ ಕ್ಷಣಿಕಂ ಕ್ಷಣಿಕಂ, ಸರ್ವಂ ದುಃಖ ದುಃಖಂ, ಸರ್ವಂ ಶೂನ್ಯಂ ಶೂನ್ಯಂ ಎಂಬುದಾಗಿ ಆತನೋದಿದ್ದ ಬೌದ್ಧ ಮತದ ಮೂಲ ಸಿದ್ಧಾಂತಗಳು ಇಂದು ಸತ್ಯವಾಗಿ ಪ್ರತ್ಯಕ್ಷವಾಗಿ ತೋರಿದುವು. ಹಿಂದೆ ಆ ಕ್ಷಣಿಕವಾದವನ್ನೂ ದುಃಖವಾದವನ್ನೂ ಶೂನ್ಯವಾದವನ್ನೂ ಕೈಲಾಗದೆ ಸೋತವರ ಅಥವಾ ಚಿರರೋಗಿಗಳ ಸಿದ್ಧಾಂತಗಳೆಂದು ತಿರಸ್ಕರಿಸಿ ನಗುತ್ತಿದ್ದನು. ಮೊದಲು ತಾನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ
>
> "ದೇವನಿಹನು ವ್ಯೋಮದಲ್ಲಿ
> ಎಲ್ಲ ಕ್ಷೇಮ ಭೂಮಿಯಲ್ಲಿ!"
>
> ಎಂಬರ್ಥದ ಆಶಾವಾದಿ ಬ್ರೌನಿಂಗ್ ಕವಿಯ ಪದ್ಯದ ಚರಣಗಳು ಎಷ್ಟು ಜಳ್ಳು ಎಂಬುದು ಸಾಕ್ಷಾತ್ತಾಗಿ ಗೊತ್ತಾಯಿತು.[೨೨]

ಬೌದ್ಧಧರ್ಮದ ಮೂಲ ಸಿದ್ಧಾಂತಗಳು ಪರಿಸರಾನುಭವದಿಂದ ಸತ್ಯವಾಗಿ, ಪ್ರತ್ಯಕ್ಷವಾಗಿ ತೋರಿ ಆ ತತ್ವಗಳ ಆಚರಣೆಗೆ ತೊಡಗುವ ಪ್ರಕ್ರಿಯೆಗಳಾಗಿವೆ. ಬೇಟೆ ಹಾಗೂ ಮಾಂಸಾಹಾರಗಳನ್ನು ತ್ಯಜಿಸಿ ಪ್ರೀತಿ, ಅಹಿಂಸೆ, ಕರುಣೆ, ಕ್ಷಮಾ ಗುಣಗಳನ್ನು ಮೈಗೂಡಿಸಿಕೊಳ್ಳಲು, ಸಾಕ್ಷಾತ್ಕಾರಗೊಳಿಸಿಕೊಳ್ಳಲು ಹಾಗೂ ತಪಸ್ಸಿಗೆ ತೊಡಗುವ ಕ್ರಿಯೆಗಳು ಎಲ್ಲ ಮಟ್ಟದ ಹಿಂಸಾ ಚಟುವಟಿಕೆಗಳಿಂದ ದೂರವಾಗುವ ಪ್ರಯತ್ನವನ್ನು ಸೂಚಿಸುತ್ತವೆ. ಬುದ್ಧದೇವನನ್ನು ಗುರುವಾಗಿಯೂ, ಆದರ್ಶವಾಗಿಯೂ ಸ್ವೀಕರಿಸಿದನು. ಅಂಥ ಕರುಣಾಮಯಿಯ ಆಶೀರ್ವಾದದಿಂದ ಹೂವಯ್ಯ ಪುನರ್ಜನ್ಮವನ್ನೇ ಪಡೆಯುತ್ತಾನೆ.

> ಆತನಾತ್ಮದಲ್ಲಿ, ಹೊಗೆ ತುಂಬಿದ ಕೊಠಡಿಯಲ್ಲಿ ಉಸಿರುಕಟ್ಟಿ ಕಣ್ಣೀರು ಕಾರಿ ಒದ್ದಾಡುತ್ತಿದ್ದವನು ಹೊರಗೆ ನಿರ್ಮಲವಾದ ಗಾಳಿಗೆ ಬಂದಹಾಗಾಗಿತ್ತು ; ನೀರಿನಲ್ಲಿ

ಮುಳುಗಿ ಗಾಳಿಗಾಗಿ ಹಾತೊರೆಯುತ್ತಿದ್ದವನನ್ನು ದಡಕ್ಕೆ ಎಳೆದ ಹಾಗಾಗಿತ್ತು; ವಿಶ್ರಂಖಲವಾಗಿತ್ತು; ಸ್ವತಂತ್ರವಾಗಿತ್ತು; ಗರಿಯಂತೆ ಹಗುರವಾಗಿತ್ತು; ಶಾಂತವಾಗಿ ಆನಂದಪೂರ್ಣವಾಗಿತ್ತು. ಕಲ್ಲಿನಿಂದ ಹೂವು ಮೂಡುತ್ತದೆಂದು ಅವನು ಭಾವಿಸಿರಲಿಲ್ಲ! ಅಂತಹ ದುಃಖದಿಂದ ಇಂತಹ ಆನಂದ, ಅಂತಹ ಕಠೋರ ತ್ಯಾಗದಿಂದ ಇಂತಹ ಪರಮ ಶಾಂತಿ ದೊರೆಕೊಳ್ಳುವುದೆಂದು, ಅನುಭವಿಸುವ ಮೊದಲು ಯಾರಿಗೆ ತಾನೆ ಹೇಗೆ ಗೊತ್ತಾಗಬೇಕು?[೧೩]

ಪ್ರಕೃತಿಯ ಅಂಗವೇ ಆಗುವ ಕಡೆಗೆ ಹೂವಯ್ಯ ಚಲಿಸುವುದನ್ನು ಇದು ಪ್ರಕಟಿಸುತ್ತದೆ. 'ಹಸುರು ಹುಲ್ಲಿಗೆ ನೋವಾಗಬಾರದೆಂದು ದಾರಿಯಲ್ಲಿ ಹುಲ್ಲು ಹುಟ್ಟದ ಕಡೆಯೇ ಹೆಜ್ಜೆಯಿಡುತ್ತಾ ನಡೆದಿದ್ದನು!' ಇದು ಹೂವಯ್ಯ ಎಲ್ಲ ಬಗೆಯ ಲೋಭ, ಕಾಮನೆಗಳಿಂದ ದೂರವಾಗುತ್ತಾ ಧ್ಯಾನ, ಆತ್ಮಸಾಧನೆಗಳಿಂದ ನಿಸರ್ಗದಲ್ಲಿ ಒಂದಾಗುವುದನ್ನು ಕಾಣಿಸುತ್ತದೆ.

ಸಮಸ್ತ ಜೀವಲೋಕದ ದುಃಖ ನಿವಾರಣೆಗೆ ತಪಿಸಿದ ಕರುಣಮಯಿ ಅಹಿಂಸಾ ಮೂರ್ತಿ ಬುದ್ಧದೇವನ ಪ್ರತಿಮೆಯನ್ನು ಪೂಜೆಗಿಡುತ್ತಾನೆ.

....

ಈ ಮೂಲಕ ಹೂವಯ್ಯನು ವೈದಿಕ ಹಿಂಸೆ (ಯಜ್ಞ)ಯನ್ನೂ ಜಾನಪದಿಕ ಹಿಂಸೆ (ಬಲಿ)ಯನ್ನೂ ವಿರೋಧಿಸುತ್ತ, ತತ್ಕಾಲೀನ ಬದುಕಿನಲ್ಲಿ ಅತ್ಯವಶ್ಯವಾದ ಪ್ರೀತಿ ಅಹಿಂಸೆಗಳನ್ನು ಧರ್ಮದ ನಾಭಿಕೇಂದ್ರಕ್ಕೆ ತಂದಿಡುತ್ತಾನೆ.[೧೪]

ಎಂಬ ಕೆ.ವಿ. ಸುಬ್ಬಣ್ಣನವರ ಈ ಗ್ರಹಿಕೆಯಲ್ಲಿ ಕುವೆಂಪು ಅವರ ಜೀವ ಪರ ನಿಲುವುಗಳನ್ನು ಕಾಣಬಹುದಾಗಿದೆ. 'ಮಲೆನಾಡಿನ ಬಾಳಿನ ಕಡಲಿನಲ್ಲಿ ಒಂದು ಹನಿ'ಯ ಅರಣ್ಯ ಜಗತ್ತಿನಲ್ಲಿ ಹೂವಯ್ಯನ ಕಾಣ್ಕೆಯ ಮೂಲಕ ಶೋಧಿತಗೊಳ್ಳುವ ಪ್ರೀತಿ, ಅಹಿಂಸೆಯ ಹೊಸದರ್ಶನ ಜೀವ ಪರಚಿಂತನೆಯೇ ಆಗಿದೆ.

೨. ಪರಿಸರ ಮತ್ತು ಆಧ್ಯಾತ್ಮ

ಚಿಕ್ಕ ಪರಿಸರ ವ್ಯಾಪ್ತಿಯಲ್ಲಿ ನಡೆಯುವ ಕಾನೂರು ಕಥನ ಆಶ್ಚರ್ಯಪಡುವಷ್ಟು ಜೀವವೈವಿಧ್ಯ ಹಾಗೂ ಪರಿಸರ ಜಗತ್ತನ್ನು ಕಟ್ಟಿಕೊಡುತ್ತದೆ. ಬೆಟ್ಟ-ಗುಡ್ಡ, ನದಿ-ಹೊಳೆ, ಕೆರೆ-ತೊರೆ, ಪ್ರಾಣಿ-ಪಕ್ಷಿ, ವನ್ಯ ಮೃಗ ಹಾಗೂ ಸಾಕು ಪ್ರಾಣಿಗಳ ಪ್ರಪಂಚ, ಜನ ಸಮುದಾಯಗಳ ಜೀವನ ಕ್ರಮಗಳು, ಕೃಷಿ ಚಟುವಟಿಕೆಗಳು, ಬೇಟೆ ಮೊದಲಾದವು ವಿವರ ವಿವರವಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಆದರೆ ಕಾನೂರಿನ ಜಗತ್ತು ಖ್ಯಾತ ಚಿಂತಕರಾದ ಕೆ.ವಿ. ಸುಬ್ಬಣ್ಣ ಅವರು ಗ್ರಹಿಸಿರುವಂತೆ -

ಸಮಾಜ ಅಥವಾ ಸಮುದಾಯವೆನ್ನುವುದು ವಿವಿಕ್ತ ವ್ಯಕ್ತಿಗಳ ರಾಶಿಯಲ್ಲ. ಅದು ಸಂಯುಕ್ತ ಪ್ರಾಣವುಳ್ಳ ಜೈವಿಕ ಘಟಕ. ವ್ಯಕ್ತಿಯು ಅದರ ಅಂಗ, ಅನುಪ್ರಾಣವುಳ್ಳ ಅಂಗ.

....

ಈ ಪುಟ್ಟ ಪ್ರಪಂಚದ ಸುತ್ತ, ಅಷ್ಟೇ ಅಥವಾ ಇದಕ್ಕಿಂತ ಹೆಚ್ಚಿನ ವೈವಿಧ್ಯ ವೈಲಕ್ಷಣ್ಯಗಳುಳ್ಳ ಜೀವಂತ ಪರ್ಯಾವರಣವಿದೆ - ಮಲೆನಾಡಿನ ಬೆಟ್ಟ ಕಾಡು, ತೋಟ ತೋಡು, ಹೊಲ ಹೊಳೆ, ಮನೆ ಬಿಡಾರ, ಪ್ರಾಣಿಗಳು, ಪಕ್ಷಿಗಳು ಇತ್ಯಾದಿ. ಇವೆಲ್ಲದರ ನಡುವೆ ಮುನ್ನೆಲೆಯಲ್ಲಿ, ಇವೆಲ್ಲಕ್ಕೂ ಭಿನ್ನವಾಗಿ ಅನ್ಯವಾಗಿ ಹೂವಯ್ಯನಿದ್ದಾನೆ.[೧೫]

ಕೆ.ವಿ. ಸುಬ್ಬಣ್ಣನವರ ಕಾನೂರು ಹೆಗ್ಗಡಿತಿಯ ಈ ಗ್ರಹಿಕೆ ಪರಿಸರ ವೈಜ್ಞಾನಿಕ ದೃಷ್ಟಿಕೋನಕ್ಕೆ ಉತ್ತಮ ಉದಾಹರಣೆಯಂತಿದೆ. ತೇಜಸ್ವಿ ಅವರು ಸೂಚಿಸುವ ಸಂಶ್ಲೇಷಣಾತ್ಮಕ ಅಧ್ಯಯನದ ಮಾದರಿಯಂತೆಯೂ ಕಾಣುತ್ತದೆ. ಫ್ರಿಜೋ ಕಾಪ್ರಾನ ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡಿರುವ ಚರಾಚರಾ ಜಗತ್ತಿನ ಸಮಗ್ರ ದೃಷ್ಟಿ ಹೂವಯ್ಯನ ವ್ಯಕ್ತಿತ್ವದ ದೃಷ್ಟಿ ಧೋರಣೆಗಳಲ್ಲಿ ಅಂತರ್ಗತವಾಗಿರುವುದನ್ನು ಈ ಗ್ರಹಿಕೆ ನೆನಪಿಸುತ್ತದೆ. ಹೂವಯ್ಯನ ಲೋಕ ಪೂರ್ಣದೃಷ್ಟಿಯ, ಅಖಂಡ ಸಂಯೋಜನೆಯ ವ್ಯಕ್ತಿತ್ವವಾಗಿ ಬೆಳೆಯಲಿರುವ ಧೋರಣೆಯಲ್ಲಿ ಕುವೆಂಪು ಅವರ ಪರಿಸರ ಪ್ರಜ್ಞೆಯನ್ನು ಕಾಣಬಹುದಾಗಿದೆ. ಫ್ರಿಜೋ ಕಾಪ್ರಾನ ಚಿಂತನೆಗೆ ಪ್ರತಿಕ್ರಿಯಿಸುತ್ತಾ ಯು.ಆರ್. ಅನಂತಮೂರ್ತಿ ಅವರು

ಈ ಪ್ರಪಂಚ ಈ ಕಣ್ಣುಗಳಿಗಾಗಲೀ, ದುರ್ಬೀನಿಗಾಗಲೀ ಪ್ರಯೋಗಶಾಲೆಯಲ್ಲಿ ಕಂಡಷ್ಟು ಮಾತ್ರ ಇರುವುದಲ್ಲ; ತೋರುವುದು ಒಂದಾದರೆ ಇರುವುದು ಇನ್ನೊಂದು; ಭಾವಿಸಿದಂತೆಯೂ ಇರುತ್ತದೆ ಇದು.[೧೬]

ಈ ಮಾತುಗಳು ಕುವೆಂಪು ಅವರ 'ಕಾನೂರು ಹೆಗ್ಗಡಿತಿ' ಕಾದಂಬರಿಯ ದಾರ್ಶನಿಕ ನೆಲೆಯ ಗ್ರಹಿಕೆಗೆ ಕೈಮರದಂತಿವೆ. ಅನುಭಾವಿ ಚಿಂತನೆಯ ನೆಲೆಗೆ ಇರುವ ಅರ್ಥಸಾಧ್ಯತೆಗಳನ್ನು ಅನಂತಮೂರ್ತಿ ಅವರ ಈ ಮಾತುಗಳು ಸ್ಪಷ್ಟಪಡಿಸುತ್ತವೆ. ಅನುಭಾವಿ ಚಿಂತನೆಯ ಅಖಂಡ ದೃಷ್ಟಿ ಹಾಗೂ ಪರಿಸರ ವಿಜ್ಞಾನೀಯ ದೃಷ್ಟಿ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಅಭಿವ್ಯಕ್ತವಾಗಿದೆ.

ಹಾಗೆಯೇ "ನಾವು ಜಾಗತಿಕವಾಗಿ ಎಲ್ಲವೂ ಒಂದಕ್ಕೊಂದು ಸಂಬಂಧಿಸಿಕೊಂಡಿರುವ ವಿಶ್ವದಲ್ಲಿ ಬದುಕುತ್ತಿದ್ದೇವೆ; ಮತ್ತು ಇಂಥ ಜಗತ್ತಿನಲ್ಲಿ ಜೈವಿಕ, ಮಾನಸಿಕ, ಸಾಮಾಜಿಕ ಮತ್ತು ಪರಿಸರಕ್ಕೆ ಸಂಬಂಧಪಟ್ಟ ಎಲ್ಲಾ ಸಂಗತಿಗಳು ಪರಸ್ಪರ ಒಂದನ್ನೊಂದು ಅವಲಂಬಿಸಿವೆ"[೧೭] ಎಂಬ ಕಾಪ್ರಾನ ಚಿಂತನೆ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿ ಪರಿಸರ ಹಾಗೂ ಮಾನವ ಬದುಕಿನ ಸಂಶ್ಲೇಷಣಾತ್ಮಕತೆಯನ್ನು ಗ್ರಹಿಸಲು ಸಹಾಯಕವಾಗುತ್ತದೆಂದು ಭಾವಿಸುತ್ತೇನೆ. ಅಂದರೆ ಅಖಂಡ ಪರಿಸರ, ಪರಿಸರದ ಒಂದು ಅಂಗವೇ ಆಗಿರುವ ಮನುಷ್ಯನ ಪ್ರಪಂಚವನ್ನು ತಿಳಿಯಲು ಕಾಪ್ರಾ ಚಿಂತನೆ ಸಹಾಯಕವಾಗುತ್ತದೆ.

ಸುಬ್ಬಣ್ಣನವರ ಮಾತುಗಳಲ್ಲಿ ಹೇಳುವುದಾದರೆ 'ಪೂರ್ವ - ಪಶ್ಚಿಮಗಳ, ಪ್ರಾಚೀನ - ಅರ್ವಾಚೀನ ಸಂಶ್ಲೇಷಣೆಯಲ್ಲಿ' ತೊಡಗಿರುವ ಕುವೆಂಪು ಅವರಿಗೆ "ಆತ್ಮಿಕ ಅಥವಾ ಆಧ್ಯಾತ್ಮಿಕ ಅನುಸಂಧಾನಗಳಿಂದಲೇ ಹೂವಯ್ಯನಿಗೆ ತನ್ನ ಸುತ್ತಲಿರುವ ಜನರು, ಪ್ರಾಣಿಗಳು, ಮರಗಿಡಗಳು, ಆದಾದ ಮೇಲೆ ಪ್ರಕೃತಿ, ಪ್ರಪಂಚ ಸಮಸ್ತವೂ ಒಂದೇ ಬೃಹತ್ ಪ್ರಾಣಶಕ್ತಿಯ ಚೆದುರು ಕಿಡಿಗಳೆನ್ನುವುದು ಬೋಧವಾಗುತ್ತದೆ."[೧೮]

"ಸಮಗ್ರ ವಿಶ್ವವು ಅಭೇದ್ಯ ಸತ್ಯವಾಗಿದೆ ಮತ್ತು ಏಕಕಾಲದಲ್ಲಿ ನಿರಂತರ ಚಲನಶೀಲವೂ, ಜೀವಂತವೂ, ಜೈವಿಕವೂ, ಆಧ್ಯಾತ್ಮಿಕವೂ ಮತ್ತು ಭೌತ ವಸ್ತುವೂ ಆಗಿದೆ ಎನ್ನುವ ದೃಷ್ಟಿ ಅನುಭಾವಿಗಳಿಗಿತ್ತು"[೧೯] ಎಂಬ

ಪರಿಸರ ವಿಜ್ಞಾನೀಯ ಗ್ರಹಿಕೆ 'ಕಾನೂರು ಹೆಗ್ಗಡಿತಿ'ಯ ಪರಿಸರ ಹಾಗೂ ಮಾನವ ಸಮುದಾಯದ ಸಂಬಂಧ ಮತ್ತು ಅನುಭಾವದ ನೆಲೆಗಳನ್ನು ಅರಿಯಲು ಹೆಚ್ಚು ಸಹಾಯಕವೆಂದು ಭಾವಿಸುತ್ತೇನೆ. ಸೀತೆ - ಹೂವಯ್ಯರ ಸಂಭಾಷಣೆಯ ಈ ಕೆಳಗಿನ ಪ್ರಸಂಗ ಹೂವಯ್ಯನ ಅನುಭಾವದ ನೆಲೆಯ ಉದಾಹರಣೆಗೆ ಸಾಕ್ಷಿಯಂತಿದೆ. ಮುತ್ತಳ್ಳಿಯಲ್ಲಿ ಕುಳಿತು ಓದುತ್ತಿದ್ದಾಗಿನ ತಲ್ಲೀನತೆ, ಕಲ್ಪನಾ ಜಗತ್ತಿನ ಸೌಂದರ್ಯ ವೈಭವಗಳ ಸ್ವರ್ಗದಲ್ಲಿ ವಿಹರಿಸುವ, ಮಲೆನಾಡಿನ ಪ್ರಕೃತಿ ಸಾನ್ನಿಧ್ಯದಲ್ಲಿ ಸಜೀವಗೊಳ್ಳುವ ಪ್ರಕ್ರಿಯೆ ಅವನ ಅನುಭಾವಿ ನೆಲೆಗೆ ಪೀಠಿಕೆಯಂತಿದೆ.

.... ಬೆಟ್ಟದ ನೆತ್ತಿಯ ಮೇಲೆ ನಿಂತು, ಕಣ್ಣು ಹೋಗುವವರೆಗೂ ಹಬ್ಬಿರುವ ದೊಡ್ಡ ಕಾಡುಗಳನ್ನು ನೋಡಿದಾಗ ಕಣ್ಣೀರು ಕರೆದಿದ್ದೇನೆ. ಪೂರ್ವ ದಿಗಂತದಲ್ಲಿ ಸೂರ್ಯಬಿಂಬ ಕೆಂಪು ಕುಂಕುಮದಲ್ಲಿ ಮಿಂದು ಮೂಡುತ್ತಿದ್ದಾಗ ನೋಡಿ ಕಣ್ಣೀರು ಕರೆದಿದ್ದೇನೆ! ಮುಂಗಾರಿನ ಪ್ರಾರಂಭದಲ್ಲಿ ಆಕಾಶವನ್ನೆಲ್ಲ ಕರಿಮುಗಿಲು ತುಂಬಿ, ಮಹಾಸರ್ಪದ ಮಹಾಜಿಹ್ವೆಗಳಂತೆ ಬಳ್ಳಿ ಮಿಂಚು ಕುಣಿಯುವುದನ್ನು ನೋಡಿ ಕಣ್ಣೀರು ಕರೆದಿದ್ದೇನೆ.... ಪೂರ್ಣಿಮಾ ರಾತ್ರಿಯಲ್ಲಿ ಚಂದ್ರನು ಶುಭ್ರ ಜ್ಯೋತ್ಸ್ನೆ...... (ಎದುರು ಕುಳಿತಿದ್ದವಳು ಸೀತೆ ಎಂಬುದು ಅವನ ನೆನಪಿಗೆ ಬಂದು) ಹುಣ್ಣಿಮೆ ರಾತ್ರಿಯಲ್ಲಿ ತಿಂಗಳ ಬೆಳಕು ಹಾಲು ಚೆಲ್ಲಿದಂತೆ ಕಾಡುಗಳ ಮೇಲೆ ಮಲಗಿರುವುದನ್ನು ನೋಡಿ ಕಣ್ಣೀರು ಕರೆದಿದ್ದೇನೆ..... ಮಹಾತ್ಮರ ಕಥೆಗಳನ್ನು ಓದುತ್ತ ಕಣ್ಣೀರು ಕರೆದಿದ್ದೇನೆ...... ನಿನಗೆ ಆಶ್ಚರ್ಯವಾಗಬಹುದು. ಉಳಿದ ಎಲ್ಲರಿಗಿಂತಲೂ ಇವರಿಗೆ ಕಣ್ಣೀರು ಹೆಚ್ಚಾಗಿರಬೇಕೆಂದು ಊಹಿಸಬಹುದು..... ಹಾಗಾದರೆ ನನಗೇಕೆ ಕಣ್ಣೀರು ಬರುತ್ತದೆ! ಹೇಳು !..... (ಸೀತೆ ಪೆಚ್ಚಾಗಿ ಸುಮ್ಮನಿದ್ದಳು) ..... ನಿನಗೂ ಕಣ್ಣೀರು ಕರೆಯುವ ಶಕ್ತಿಯಿದೆ, ಸೀತೆ. ನಿನಗೆ ಯಾರೂ ಅದನ್ನು ಹೇಳಿಕೊಟ್ಟಿಲ್ಲ. (ಸೀತೆ ಮರುಗು ದನಿಯಿಂದಲೋ ಎಂಬಂತೆ "ಇಲ್ಲ" ಎಂದಳು). ಚಿಂತೆಯಿಲ್ಲ, ನಾನು ಹೇಳಿಕೊಡುತ್ತೇನೆ. ಆ ಮೇಲೆ ನಿನ್ನ ದೃಷ್ಟಿ ಬದಲಾಯಿಸುತ್ತದೆ. ನಿನ್ನ ಆತ್ಮವೇ ಬೇರೆಯಾಗುತ್ತದೆ..... ಜಗತ್ತೆಲ್ಲ ಆನಂದಮಯವಾಗುತ್ತದೆ. ದುಃಖವೂ ಕೂಡ ಮಧುರವಾಗುತ್ತದೆ."

....

"ದೇವರು ಈ ಜಗತ್ತನ್ನೆಲ್ಲಾ ಸೃಷ್ಟಿ ಮಾಡಿದ್ದಾನೆ. ಅವನು ಎಲ್ಲೆಲ್ಲಿಯೂ ಇದ್ದಾನೆ. ಇಲ್ಲಿಯೂ ಇದ್ದಾನೆ. ನಾನು ನೀನು ಆಡುತ್ತಿರುವ ಈ ಮಾತುಗಳನ್ನೂ ಕೇಳುತ್ತಿದ್ದಾನೆ. ಅವನು ಏನು ಬೇಕಾದರೂ ಮಾಡಲು ಶಕ್ತನು. ನಾವು ಅವನನ್ನು ಪ್ರೀತಿಸಬೇಕು. ಅದನ್ನೇ 'ಭಕ್ತಿ' ಎಂದು ಕರೆಯುತ್ತಾರೆ. ..... ಅವನು ಈ ಜಗತ್ತನ್ನು ಮಾಡಿ, ದೂರ ಓಡಿ ಹೋಗಿ ಕೂತುಕೊಂಡಿಲ್ಲ. ಅದರಲ್ಲಿ ಐಕ್ಯವಾಗಿದ್ದಾನೆ. ಸೇರಿಕೊಂಡಿದ್ದಾನೆ - ಸಕ್ಕರೆಯನ್ನು ನೀರಿಗೆ ಹಾಕಿದರೆ ಕರಗಿ ಸೇರಿಕೊಳ್ಳುವಂತೆ ! ಬೆಳಿಗ್ಗೆ ಸೂರ್ಯನಾಗಿ ಮೂಡಿ ಬರುತ್ತಾನೆ. ರಾತ್ರಿ ಕತ್ತಲೆಯ ರೂಪದಿಂದ ಬರುತ್ತಾನೆ. ಅವನೇ ಗಾಳಿಯಾಗಿ ಬೀಸುತ್ತಾನೆ. ಮಳೆಯಾಗಿ ಸುರಿಯುತ್ತಾನೆ. ಮಿಂಚಾಗಿ ಹೊಳೆಯುತ್ತಾನೆ..... ನೋಡು, ನೀನು ಮುಡಿದುಕೊಂಡಿರುವ

ಹೂವಿನ ಸೌಂದರ್ಯವೂ ಅವನೇ! ನಿನ್ನ ಸೌಂದರ್ಯವೂ ಅವನೇ! ನಾನು ಆಗ ಹೇಳಿದೆನಲ್ಲಾ ಆ ಸಂಧ್ಯಾ ಸೌಂದರ್ಯವೂ ಅವನೇ! ಆ ಸಂಧ್ಯಾ ಸೌಂದರ್ಯವನ್ನು ನೋಡಿದಾಗ ಅವನನ್ನೇ ನೋಡಿದಂತೆ ನನಗೆ ಅನುಭವವಾಗುತ್ತದೆ. ಆಗ ನನಗೆ ಅತ್ಯಾನಂದವಾಗುತ್ತದೆ. ಆದ್ದರಿಂದ ಕಣ್ಣೀರು ಬರುತ್ತದೆ. ನಿನಗೂ ಆ ಅನುಭವವಾದರೆ ಕಣ್ಣೀರು ಬಂದೇ ಬರುತ್ತದೆ. ದುಃಖದಿಂದಲ್ಲ, ಸುಖದಿಂದ![೨೦] .

ಈ ಭಾಗದಲ್ಲಿ ಇಂಗ್ಲಿಷ್ ರಮ್ಯವಾದದ ಪ್ರಭಾವ ಹಾಗೂ ಭಾರತೀಯ ಆಧ್ಯಾತ್ಮದ ನೆಲೆ ಇವುಗಳ ಪ್ರಭಾವವನ್ನು ನಿಚ್ಚಲವಾಗಿ ಗುರುತಿಸಬಹುದಾಗಿದೆ. ಪೂರ್ವ - ಪಶ್ಚಿಮಗಳ, ಪ್ರಾಚೀನ - ಅರ್ವಾಚೀನತೆಯ ಸಂಶ್ಲೇಷಣೆಯನ್ನು ಹೂವಯ್ಯನ ಈ ಮೇಲಿನ ಮಾತುಗಳಲ್ಲಿ ಗುರುತಿಸಬಹುದಾಗಿದೆ. ಪ್ರಕೃತಿಯಲ್ಲಿನ ತನ್ಮಯತೆ, ಪರವಶತೆ, ಆದರ್ಶ ಹಾಗೂ ಉದಾತ್ತವಾದ ಜೀವನ ಕಲ್ಪನೆ, ಆತ್ಮದ ಜಿಜ್ಞಾಸೆ, ದೇವರು - ಸೃಷ್ಟಿಯ ಜಿಜ್ಞಾಸೆ ಅಷ್ಟೇ ಏಕೆ ಅಭೇದ್ಯ ವಿಶ್ವದ ಚಿಂತನೆಯನ್ನು ಕಾಣಬಹುದಾಗಿದೆ. ಅಖಂಡ ವಿಶ್ವದ ಚಿಂತನೆಯ ಜೊತೆಯಲ್ಲಿಯೇ ಸ್ಥಳೀಯ ಭೂಗೋಳದ ಹುಡುಕಾಟವು ಕಾನೂರಿನ ಕಥನದ ಭಾಗವಾಗಿದೆ. ತೀರ್ಥಹಳ್ಳಿ, ಮುತ್ತಳ್ಳಿ, ಕಾನುಬೈಲು, ಆಗುಂಬೆ ಘಾಟ್, ಕುಂದದ ಗುಡ್ಡ, ನವಿಲುಕಲ್ಲು, ಕುದುರೆಮುಖ, ಮೇರುತಿ ಪರ್ವತ, ಸಿಬ್ಬಲುಗುಡ್ಡೆ ಮೊದಲಾದ ನಿಸರ್ಗ ರಮ್ಯ ತಾಣಗಳು ಕಾದಂಬರಿಯಲ್ಲಿ ದಟ್ಟ ವಿವರಗಳೊಂದಿಗೆ ಚಿತ್ರಿತವಾಗಿವೆ. ಇಂಥ ಸಂದರ್ಭಗಳಲ್ಲಿಯೂ ಕುವೆಂಪು ಅವರ ಆಧ್ಯಾತ್ಮ ದೃಷ್ಟಿ ಸರ್ವವ್ಯಾಪಿಯಾಗಿರುವುದನ್ನು ಗುರುತಿಸಬಹುದಾಗಿದೆ. ಪ್ರತಿಯೊಂದು ವರ್ಣನೆಯಲ್ಲಿನ ಸಂಭ್ರಮ, ತಲ್ಲೀನತೆ ಹಾಗೂ ಅನುಭವವೇ ಮೈಪಡೆದಿದೆ. ಇಂಥ ವರ್ಣನೆಗಳಲ್ಲಿ ಆಧ್ಯಾತ್ಮಿಕವಾಗಿ ಪ್ರಕೃತಿ ಸೌಂದರ್ಯವನ್ನು ಗ್ರಹಿಸುವ ನೆಲೆಗಳನ್ನು ಗುರುತಿಸಬಹುದಾಗಿದೆ. 'ಕಾನೂರು ಹೆಗ್ಗಡಿತಿ'ಯ 'ಪರ್ವತ ಶೃಂಗದಲ್ಲಿ ಸೂರ್ಯೋದಯದ ಸೌಂದರ್ಯಾನುಭೂತಿ' ಎಂಬ ಭಾಗ ಈ ಅನುಭಾವದ ನೆಲೆಗೆ ಉತ್ತಮ ಉದಾಹರಣೆ.

ಹೂವಯ್ಯನ ಆತ್ಮದಲ್ಲಿ ಆಗುತ್ತಿದ್ದ ಬದಲಾವಣೆ ಏನು? ಆ ಬದಲಾವಣೆಗೆ ಕಾರಣಗಳೇನು? ಆ ಬದಲಾವಣೆಗಳು ಹಠಾತ್ತಾಗಿ ಸಂಭವಿಸುತ್ತಿದ್ದುವೊ? ಕ್ರಮವಾಗಿ ವಿಕಾಸ ಹೊಂದಿ ಹೊರಹೊಮ್ಮುತ್ತಿದ್ದುವೊ? ಮನುಷ್ಯನ ಅಂತಶ್ಚಿತ್ತ ಸಮುದ್ರದಂತೆ ಗಂಭೀರವಾಗಿದೆ, ಅಪಾರವಾಗಿದೆ. ಅಲ್ಲಿ ನಡೆಯುವ ವ್ಯಾಪಾರಗಳು ನಮಗೆ ಅಗೋಚರವೆಂದೆ ಹೇಳಬಹುದು. ಸಮುದ್ರದ ಒಳಗೆ ಜರುಗುವ ಘಟನೆಗಳ ಪರಿಣಾಮವಾಗಿ ಇದ್ದಕ್ಕಿದ್ದಂತೆ ದ್ವೀಪಗಳೇಳುತ್ತವೆ, ದ್ವೀಪಗಳು ಮುಳುಗುತ್ತವೆ; ನೀರು ಭೂಮಿಯನ್ನಾಕ್ರಮಿಸುತ್ತದೆ ಅಥವಾ ಭೂಮಿಯೆ ಕಡಲನ್ನು ತಳ್ಳಿದಂತಾಗಿ ನೀರು ಹಿಂಜರಿಯುತ್ತದೆ; ತೀರವು ಕುಸಿದು ಬಿದ್ದು, ನೆಲವು ಕೊಚ್ಚಿ ಹೋಗುತ್ತದೆ; ಅಥವಾ ಸಮುದ್ರ ತಲದ ಅನರ್ಘ್ಯರತ್ನಗಳೊಡನೆ ಅಲ್ಲಿ ವಾಸಿಸುವ ವಿಚಿತ್ರವೂ ವಿಕಾರವೂ ಭಯಂಕರವೂ ಆದ ಪ್ರಾಣಿಗಳು ದಡಕ್ಕೆ ಚಿಮ್ಮಿ ಬೀಳುತ್ತವೆ. ಮೇಲೆ ನಿಂತು ನೋಡುವವರಿಗೆ ಈ ವ್ಯಾಪಾರಗಳು ಆಕಸ್ಮಿಕಗಳಂತೆ, ವಿಪ್ಲವಗಳಂತೆ, ಅದ್ಭುತಗಳಂತೆ ತೋರುತ್ತವೆ. ಆದರೆ ಭೂಗರ್ಭ ಸಮುದ್ರಗರ್ಭಗಳ ವಿಚಾರವಾದ ವಿಜ್ಞಾನವನ್ನು ತಿಳಿದ ಶಾಸ್ತ್ರಜ್ಞರಿಗೆ ಆ ವ್ಯಾಪಾರಗಳು ಅದ್ಭುತಗಳೂ ಅಲ್ಲ, ಆಕಸ್ಮಿಕಗಳೂ ಅಲ್ಲ, ವಿಪ್ಲವಗಳೂ

ಅಲ್ಲ; ಸಕಾರಣವಾಗಿ ಕಾಲ ದೇಶಗಳಲ್ಲಿ ವಿಕಾಸಹೊಂದಿದ ಪ್ರಕೃತಿ ಘಟನೆಯ ಶಿಖರಗಳಾಗುತ್ತವೆ! ಹಾಗೆಯೆ ಹೂವಯ್ಯನ ಅಂತರಾತ್ಮದ ನಿಗೂಢ ಗಹ್ವರದಲ್ಲಿ ಬಾಹ್ಯದೃಷ್ಟಿಗೆ ತಿಳಿಯದಂತೆ ಅನೇಕ ವ್ಯಾಪಾರಗಳು ಜರುಗುತ್ತಿದ್ದುವು. ಅವುಗಳು ಹೊರಗೆ ಪ್ರಕಾಶಿತವಾದಾಗ ಅವನಿಗೇ ವಿಸ್ಮಯವಾಗುತ್ತಿತ್ತು.

....

ಚೈತ್ರಮಾಸದ ವಿಪಿನರಾಜಿ ; ಪರ್ವತಶ್ರೇಣಿ ;ಪ್ರಾತಃ ಸಮಯ ; ಸುಖ ಶೀತಲ ವಾಯುಮಂಡಲ ; ಇನ್ನೇನು ಗಾನದ ತಾರಾಮಂಡಲದಂತೆ ಬಿರಿದು ಸಾವಿರಾರು ಪಕ್ಷಿಗಳ ತುಮುಲ ಕಲಗಾನವಾಗಿ ಪರಿಣಮಿಸಲಿರುವ ನಾದಗರ್ಭಿತವಾದ ಗಭೀರ ವನ್ಯಮೌನ್ಯ..... ಇವುಗಳ ಮಧ್ಯೆ ಹೂವಯ್ಯ ಒಮ್ಮೆ ರಾತ್ರಿಯಲ್ಲಿ ತನಗಾದ ಅನುಭವವನ್ನು ಕುರಿತು ಯೋಚಿಸಿ ಅಂತರ್ಮುಖಿಯಾಗುತ್ತ, ಮತ್ತೊಮ್ಮೆ ಅಂತರ್ಮುಖತೆಯಿಂದ ತಟಕ್ಕನೆ ಎಚ್ಚತ್ತು ಹೊರಗಣ ಪ್ರಕೃತಿ ರಮಣೀಯತೆಯನ್ನು (ಕಾಡು ಕತ್ತಲೆಯಿಂದ ನಿಧಾನವಾಗಿ ಹೊರ ಹೊಮ್ಮುತ್ತಿತ್ತು ; ಬಾನು ಮೆಲ್ಲ ಮೆಲ್ಲನೆ ಬೆಳಗಾಗಿ ಸಾಧಾರಣ ಪ್ರಕಾಶದ ತಾರೆಗಳೆಲ್ಲ ಅಡಗಿ, ಸಪ್ತರ್ಷಿಮಂಡಲದ ನಕ್ಷತ್ರಗಳು, ಚಿತ್ರಾ ಮತ್ತು ಸ್ವಾತಿ ನಕ್ಷತ್ರಗಳೇ ಮೊದಲಾದ ಪ್ರಥಮ ಮತ್ತು ದ್ವಿತೀಯ ವರ್ಗಕ್ಕೆ ಸೇರಿರುವ ಹಲ ಕೆಲವು ತಾರೆಗಳು ಮಾತ್ರ ರಾರಾಜಿಸುತ್ತಿದ್ದುವು) - ಆಸ್ವಾದಿಸುತ್ತ, ಶ್ವಾಸಕೋಶಗಳು ತುಂಬಿ ತುಳುಕುವಂತೆ ಉಸಿರೆಳೆದು ಬಿಡುತ್ತ ಬಿರುಬಿರನೆ ಮೇಲೇರಿ ಸಾಗಿದನು.

ವನದೇವಿಯ ಹೃದಯವೀಣೆಯ ತಂತಿಗಳನ್ನು ಮಿಡಿಯುವಂತೆ ಕಾಜಾಣಗಳು ಆಲಾಪನೆ ಮಾಡತೊಡಗಿದುವು. ಮರಗಳಲ್ಲಿ ಹೂಕುಡಿಯುತ್ತಿದ್ದ ಸಾವಿರಾರು, ಲಕ್ಷ ಲಕ್ಷ, ಕೋಟಿ ಕೋಟಿ ಜೇನ್ನೊಣಗಳ ಝೇಂಕಾರ ಪ್ರಾರಂಭವಾಯಿತು. ಕಣಿವೆಗಳಲ್ಲಿದ್ದ ಊರುಕೋಳಿಗಳ ಸಾಧಾರಣವಾದ ಕೂಗಿನ ಜೊತೆಗೆ ಕಾಡು ಕೋಳಿಗಳ ಮಧುರ ಮನೋಹರವಾದ ಕೇಕೆಗಳೂ ಅಲ್ಲಲ್ಲಿ ಕೇಳಿ ಬಂದುವು. ಹೂವಯ್ಯನ ಹೃದಯ ಆನಂದಸ್ಪಂದಿತವಾಯ್ತು. ಹೊಸ ಚೇತನ ಎದೆಯಲ್ಲಿ ಮಿಂಚಿನಂತೆ ಸಂಚರಿಸಿತು. ಚೈತ್ರ ಪ್ರಕೃತಿಯ ಹುಚ್ಚಿನ ಕಿಚ್ಚು ಅವನೆದೆಗೆ ತಗುಲಿದಂತಾಯ್ತು. ಉಷಃಕಾಲ, ಅರುಣೋದಯ, ಸೂರ್ಯೋದಯಗಳ ಸಂಪತ್ತನ್ನು ಕಳೆದುಕೊಳ್ಳುವ ದಾರಿದ್ರ್ಯಕ್ಕೆ ಬೆದರಿ, ಬೇಗ ಬೇಗನೆ ಬೆಟ್ಟದ ನೆತ್ತಿಯ ಹಾಸು ಬಂಡೆಯ ಉತ್ತುಂಗ ವೇದಿಕೆಗೆ ಏರಿ, ಏದುತ್ತ ಆನಂದಪರವಶನಾಗಿ ದಿಟ್ಟಿಸುತ್ತ ನಿಂತನು.

ಮೈಲಿ ಮೈಲಿಗಳಾಚೆ, ವಿಸ್ತಾರವಾಗಿ, ಅನಂತವಾಗಿ, ದೃಶ್ಯ ತರಂಗ ವಿನ್ಯಾಸದಿಂದ ತುಂಗವಾಗಿ, ಉತ್ತುಂಗವಾಗಿ, ಮಹೋತ್ತುಂಗವಾಗಿ ಹಬ್ಬಿ ಹರಿದಿದ್ದ ಪರ್ವತಾರಣ್ಯಗಳು ಕೊನೆಮುಟ್ಟುವಂತೆ ತೋರುತ್ತಿದ್ದ ಪೂರ್ವ ದಿಕ್ಕಿನಲ್ಲಿ, ಅರಿಸಿನದ ಧೂಳಿಯನ್ನೆರಚಿದಂತೆ ಹಳದಿಯ ಕಾಂತಿ ನಲಿಯುತ್ತಿದ್ದ ಗಗನಪಟಕ್ಕೆದುರಾಗಿ, ದಿಗಂತರೇಖೆ ಕಚ್ಚು ಕಚ್ಚಾಗಿ

ಗೋಚರಿಸತೊಡಗಿತ್ತು. ಆ ಮೈಮರೆಯಿಸುವ ದೃಶ್ಯದರ್ಶನದ ಅನಂತ ಆಹ್ವಾನವನ್ನು ಕೃತಜ್ಞತೆಯಿಂದ ಸ್ವೀಕರಿಸಿ ಹೂವಯ್ಯನ ಆತ್ಮ ರೆಕ್ಕೆ ಬಿಚ್ಚಿ ಗರಿಗೆದರಿ ಹಾರಲು ಅನುವಾಯಿತು. ಅವನಿಗೆ ತನ್ನ ಮುಖವೂ ಪೂರ್ವದಿಕ್ಕಾಗುತ್ತಿದ್ದಂತೆ ಭಾಸವಾಯಿತು. ಕೋವಿಯನ್ನು ದೂರವಿಟ್ಟು, ತಣ್ಣಗಿದ್ದ ಹಾಸುಬಂಡೆಯ ಮೇಲೆ ಪದ್ಮಾಸನ ಹಾಕಿ ಕುಳಿತು ಎವೆಯಿಕ್ಕದಾದನು.

ವರ್ಣನೆಗೆ ಅಸಾಧ್ಯವಾಗಿ ಬಣ್ಣಗಳ ಮೆರವಣಿಗೆ ಪ್ರಾರಂಭವಾಯಿತು. ಹೂವಯ್ಯನ ದೃಷ್ಟಿಗೆ ಭಾವ ಮಾತ್ರವಾಗಿದ್ದ ಭಗವಂತನ ಸೌಂದರ್ಯ ರೂಪುಗೊಂಡು ತನ್ನೆದುರು ಪ್ರತ್ಯಕ್ಷವಾಗುತ್ತಿದ್ದಂತೆ ಅನುಭವವಾಗಿ ಮೈ ಪುಲಕಿತವಾಗಿ, ಹೃದಯ ರಸಾರ್ದ್ರವಾಗಿ, ಕಣ್ಣು ಹನಿ ತುಂಬಿತು. ನೋಡುತ್ತಿದ್ದಂತೆ ಹಳದಿಯ ಬೆಳಕು ಕುಂಕುಮದ ಬಣ್ಣಕ್ಕೆ ತಿರುಗಿ, ಅಲ್ಲಿದ್ದ ಕಿರುಮುಗಿಲುಗಳು ಉರಿಯುವ ಚಿನ್ನದ ಬಣ್ಣವನ್ನು ತಾಳಿ ಉಜ್ವಲವಾದುವು. ಕತ್ತಲೆ ಎತ್ತಲೊ ಅಡಗಿ, ಬೆಳಕು ಬಾನಿನಿಂದ ನೆಲಕ್ಕೆ ತುಳುಕಿ ಹರಿದಂತಾಯಿತು. ದೂರದಲ್ಲಿ ಅದುವರೆಗೆ ಅಜ್ಞಾತವಾಗಿದ್ದ ಒಂದು ಕೆರೆಯ ನೀರು ಕರಗಿದ ಬೆಳ್ಳಿಯಾಗಿ ತಳತಳಸಿತು. ಬಹಳ ತೆಳ್ಳಗೆ ಎಲ್ಲೆಲ್ಲಿಯೂ ಹಬ್ಬಿ ಮುಸುಗಿದ್ದ ಹೊಗೆ ಮಂಜಿನಲ್ಲಿ ಹತ್ತಿರದ ಬೆಟ್ಟಗಾಡುಗಳೂ ಮೃದುವಾಗಿ ಕೋಮಲ ನೀಲವಾಗಿ ಕಾಣಿಸಿದುವು.

ನೋಡುತ್ತಿದ್ದ ಹಾಗೆ, ಹೂವಯ್ಯನ ಎದೆಯ ಗೂಡಿನಲ್ಲಿ ಹೃದಯವನ್ನು ಚಿಮ್ಮಿಸುತ್ತ, ಸೂರ್ಯನ ರಕ್ತಬಿಂಬ ದಿಗಂತರೇಖೆಯ ಮೇಲೆ ಇಣಿಕಿತು. ಇಣಿಕಿ ಮೇಲೆ ಮೇಲೆ ಮೇಲಕ್ಕೇರಿ, ಸಂಪೂರ್ಣಬಿಂಬ ವಿರಾಜಮಾನವಾಯಿತು. ಹೂವಯ್ಯನ ಹತ್ತಿರದಲ್ಲಿದ್ದ ಮರಗಳಿಗೆ ದೀರ್ಘಛಾಯೆಗಳೂ ಮೂಡಿದುವು. ಆ ಛಾಯೆಗಳು ನೆಲದ ಮೇಲೆ ಕಾಣಿಸಿದುದಕ್ಕಿಂತಲೂ ಹೊಗೆ ಮಂಜಿನಲ್ಲಿ ಬಿಸಿಲ್ಕೋಲುಗಳನ್ನು ಸೃಜಿಸಿ, ಚೆನ್ನಾಗಿ ಗೋಚರವಾದುವು. ಹಕ್ಕಿಗಳು ಹುಚ್ಚೆದ್ದು ಹಾಡಿದುವು. ಆನಂದಸ್ವರೂಪಿಯಾದ ಭಗವಂತ ಸೌಂದರ್ಯರೂಪಿಯಾಗಿ ಮೈದೋರಿ ಹೂವಯ್ಯನ ಆತ್ಮದಲ್ಲಿ ರಸವಾಗಿ ಪ್ರವಹಿಸಿದನು.

ಹೂವಯ್ಯನ ಕಣ್ಣುಗಳು ಮೆಲ್ಲಮೆಲ್ಲಗೆ ತಾವಾಗಿಯೆ ಮುಚ್ಚಿಕೊಂಡು ಅವನು ಧ್ಯಾನಮಗ್ನನಾದನು. ಆ ಧ್ಯಾನದಲ್ಲಿ ಆಲೋಚನೆ ಇರಲಿಲ್ಲ. ಅದು ಅನಿರ್ವಚನೀಯವಾದ ಅಖಂಡ ಭಾವಾನುಭವ ಮಾತ್ರವಾಗಿತ್ತು. ತಾನೆ ಎಲ್ಲವೂ ಆಗುತ್ತಿದ್ದಂತೆ ಮೊದಮೊದಲು ತೋರಿದ್ದರೂ ಕಡೆಕಡೆಗೆ 'ತಾನು' ಎಂಬ ಭಾವವೂ ಪ್ರಜ್ಞೆಯಿಂದ ಉರುಳಿ ಮಾಯವಾಯಿತು. ಆನಂದವನ್ನು ಅನುಭವಿಸುತ್ತಿದ್ದನೊ? ಆನಂದವೆ ಆಗಿದ್ದನೊ? ಏನೊ? ಎಂತೊ? ಯಾರಿಗೆ ಗೊತ್ತು?

ಅಂತೂ ಆ ಭಾವಸಮಾಧಿಯ ರಸಾಗ್ನಿಗಂಗೆಯಲ್ಲಿ ಮುಳುಗಿ ಮಿಂದು ಜ್ವಾಲಾಮಯಾತ್ಮನಾದ ಹೂವಯ್ಯ ಕಣ್ದೆರೆದಾಗ ಹೊತ್ತು ಆಗಲೆ ದಿಗಂತದಿಂದ ಎರಡು

ಮೂರಾಳೆತ್ತರದಷ್ಟು ಮೇಲಕ್ಕೇರಿಬಿಟ್ಟಿತ್ತು. ಜಗತ್ತೆಲ್ಲವೂ ಶಾಂತಿ ಸೌಂದರ್ಯ ಆನಂದ ಮೈತ್ರಿ ಪ್ರೇಮಗಳಿಂದ ಪೂರ್ಣವಾಗಿದ್ದಂತೆ ಅನುಭವಿಸುತ್ತಿದ್ದ ಆತನ ಮುಖ ಮಿಂಚಿನ ಮುಗುಳುನಗೆಯಾಯಿತು. ಕಾಲು ಮರಗಟ್ಟಿದ್ದುವು. ಎದ್ದು ನಿಂತು, ಕೈ ಕಾಲುಗಳನ್ನು ಚೆನ್ನಾಗಿ ನೀಡಿ, ಸರಿ ಮಾಡಿಕೊಂಡು, ಭವ್ಯ ಸನ್ನಿವೇಶದ ಪ್ರಭಾವದಿಂದಲೊ ಎಂಬಂತೆ ಬಹಳ ಹೊತ್ತಿನಿಂದಲೂ ಸುಮ್ಮನೆ ಕುಳಿತಿದ್ದ ನಾಯಿಗಳನ್ನು ಕಂಡು, ಕೃತಜ್ಞತೆಯಿಂದ ಎಂಬಂತೆ ತಲೆ ತಟ್ಟಿ ಮುದ್ದಿಸಿ, ಕೋವಿಯನ್ನು ಹೆಗಲ ಮೇಲೆ ಹಾಕಿಕೊಂಡು ಮನೆಯ ಕಡೆಗೆ ಇಳಿಯ ತೊಡಗಿದನು. ಕಾಜಾಣಗಳ ಹಾಡು ನಿಂತಿತ್ತು. ಕುಟುರ, ಪಿಕಳಾರ, ಉರುಳಿ, ಕಾಮಳ್ಳಿ, ಗಿಣಿ - ಮೊದಲಾದ ಹಕ್ಕಿಗಳು ಕಾಡಿನ ತುಂಬಾ ಹಾಡಿನ ದೊಂಬಿಯೆಬ್ಬಿಸಿದ್ದುವು. ಬನದ ಮಧ್ಯೆ ಎರಡು ಕೋಗಿಲೆಗಳು ಒಂದನ್ನೊಂದು ಕೂಗಿ ಕರೆಯುತ್ತಿದ್ದವು. ಹೂವಯ್ಯ ಕಾಡುಕಿಚ್ಚು ಬಿದ್ದು, ನೆಲವೆಲ್ಲ ಸುಟ್ಟು ಮಸಿಹೊಯ್ದಂತೆ ಕಗ್ಗಾಗಿದ್ದ ಸ್ಥಳವೊಂದನ್ನು ಕಂಡೊಡನೆ ತಾನು ರಾತ್ರಿ ಕನಸಿನಲ್ಲಿ ಅಲ್ಲ, ಕಣಸಿನಲ್ಲಿ, ಕಂಡಿದ್ದ ಬೆಂಕಿಯ ದೃಶ್ಯವನ್ನು ನೆನೆದನು. ಮೈ ಜುಮ್ಮೆಂದಿತು.[೨೧]

ಈ ಭಾಗ ಕತ್ತಲೆಗಿರಿಯ ಸರುವಿನಲ್ಲಿ ಕಂಡ ಜಗತ್ತಿಗಿಂತ ಭಿನ್ನವಾದುದು. ಕತ್ತಲೆಗಿರಿಯ ಸರುವಿನ ಭೀಕರ ಮೌನ, ನಿರ್ಜನತಾ ಭಾವ, ಪೈಶಾಚಿಕವಾದ ಅಮರ್ತ್ಯ ಪ್ರಪಂಚ, ಭೀಕರತೆಗಳು, ರುದ್ರ ಭಯಾನಕ ಜೀವಜಾಲದ ತಾಣಕ್ಕಿಂತ ಭಿನ್ನ ಅನುಭವಲೋಕವನ್ನು ಈ ಭಾಗದಲ್ಲಿ ಕಾಣುತ್ತೇವೆ. ಪರಿಸರದ ಮಹೋನ್ನತವೂ, ಸುರ ಸುಂದರವೂ ಆದ ಪರ್ವತ ಶ್ರೇಣಿ, ವಿಪಿನರಾಜಿ, ಪ್ರಾತಃ ಸಮಯ, ಸುಖ ಶೀತಲ ವಾಯುಮಂಡಲ, ಪಕ್ಷಿಗಳ ಕಲರವ ಲೋಕ ಕರೆದೊಯ್ಯುವ ಭಾವಲೋಕ ಹಾಗೂ ಅಂತರ್ಮುಖತೆ ಒಂದು ಕಡೆಯಾದರೆ,

ಹೊರಗಣ ಪ್ರಕೃತಿ ರಮಣೀಯತೆಯು ಹಠಾತ್ತನೆ ಎದುರಾದಾಗ ಇಡೀ ಜಗತ್ತೇ ಆನಂದ ಪರವಶತೆಯನ್ನು ಉಂಟುಮಾಡುತ್ತದೆ. ಬಹಿರ್ಮುಖವಾದ ಸೌಂದರ್ಯದ ಆಸ್ವಾದನೆ ಅಂತರ್ಮುಖವಾಗಿ ಉಪಾಸನಾರೂಪವನ್ನು ಪಡೆಯುತ್ತದೆ. ಪ್ರಕೃತಿಯ ರಚನೆಯ ಕೌಶಲ್ಯ, ವೈವಿಧ್ಯತೆ ಪರವಶಗೊಳಿಸುತ್ತದೆ. ಕುವೆಂಪು ಅವರ ಮಾತಿನಲ್ಲಿಯೇ ಹೇಳುವುದಾದರೆ

ಹೊರಹೊರಗೆ ಮೃಣ್ಮಯಿಯಾಗಿ ತೋರುವವಳು, ವೈಜ್ಞಾನಿಕವಾದ ನೋಟಕ್ಕೆ ನಿಯಮಮಯಿಯಾಗಿ ತೋರುವವಳು, ವೇದಾಂತಿಯ ದೃಷ್ಟಿಗೆ ಚಿನ್ಮಯೀಶಕ್ತಿಯಾಗಿ ತೋರುವವಳು ಕವಿಪ್ರಜ್ಞೆಗೆ ಆ ಸತ್ಯಮುಖಗಳಲ್ಲಿ ಯಾವುದನ್ನೂ ಅಲ್ಲಗಳೆಯದ ಮತ್ತು ಆ ಎಲ್ಲ ಸತ್ಯಮುಖಗಳನ್ನೂ ಒಳಕೊಳ್ಳುವ ಬ್ರಹ್ಮಮಯಿಯಾಗಿ ಆನಂದಮಯಿಯಾಗಿ ಗೋಚರಿಸುತ್ತಾಳೆ. ಮೊದಮೊದಲು ಬಾಳುವೆಯ ಹಿನ್ನೆಲವಾಗಿ, ಬರಬರುತ್ತ ಕಾವ್ಯ ಕಲಾಕ್ಷೇತ್ರದ ಹಿನ್ನೆಲೆಯಾಗಿ, ಮತ್ತೆ ಮುಂಬರಿದು ಕಾವ್ಯ ರಮಣೀಯತೆಯನ್ನು ಹೆಚ್ಚಿಸುವ ಅಲಂಕಾರ ಸಾಧನಗಳನ್ನು ಸಮೃದ್ಧಿಯಾಗಿ ಒದಗಿಸುವ ಸೊಬಗಿನ ಗಣಿಯಾಗಿ, ಅದಕ್ಕೂ ಮುಂದೆ ಹೋಗಿ ಸೂಕ್ಷ್ಮತರವಾದ 'ಧ್ವನಿ'ಗೂ ಆಧ್ಯಾತ್ಮಿಕವಾದ 'ದರ್ಶನ'ಕ್ಕೂ ಪ್ರತಿಮಾ ರೂಪಿಣಿಯಾಗುತ್ತಾಳೆ. ಅಂತಹ ಕವಿಪ್ರಜ್ಞೆಗೆ ಪ್ರಕೃತಿಯಾರಾಧನೆಯೆ

> ಪರಮನಾರಾಧನೆಯಾಗುತ್ತದೆ; ಪ್ರಕೃತಿಯೊಲ್ಮೆಯೆ ಮುಕ್ತಿಯಾನಂದ ಸಾಧನೆ'ಯಾಗುತ್ತದೆ.[೨೨]

ಹೂವಯ್ಯನ ಆಧ್ಯಾತ್ಮಿಕ ತೊಳಲಾಟ, ಪ್ರಕೃತಿಯ ಅನಿರ್ವಚನೀಯವಾದ ದರ್ಶನದಿಂದ ವ್ಯಕ್ತಿತ್ವದ ತನ್ನ ತನವನ್ನೇ ಅಂದರೆ ಮನುಷ್ಯನ ಅಹಂ ಅನ್ನೇ ಇಲ್ಲವಾಗಿಸುತ್ತದೆ. ಅಖಂಡವಾದ ಭಾವಾನುಭವಗಳು 'ತಾನೇ ಎಲ್ಲವೂ ಆಗುತ್ತಿದ್ದಂತೆ ಮೊದಮೊದಲು ತೋರಿದ್ದರೂ ಕಡೆಕಡೆಗೆ 'ತಾನು' ಎಂಬ ಭಾವವು ಪ್ರಜ್ಞೆಯಿಂದ ಉರುಳಿ ಮಾಯವಾಗುವ ಪ್ರಕ್ರಿಯೆಯೇ ಪರಿಸರದಲ್ಲಿನ ಜೀವಸಮಾನತಾ ಧೋರಣೆಯನ್ನು ಸಾಕಾರಗೊಳಿಸುತ್ತದೆ. ಪರಿಸರದಿಂದ ಭಿನ್ನಗೊಳ್ಳುವ ಅಹಂ ಅನ್ನು ನಿಸರ್ಗದ ಮುಂದೆ ಹಿಂದೆ ಸರಿಸುವ ಕುವೆಂಪು ಕಾಣ್ಕೆ ಕನ್ನಡ ಸಾಹಿತ್ಯದಲ್ಲಿ ಅನನ್ಯವಾದ ಉದಾಹರಣೆಯಂತೆ ಕಾಣುತ್ತದೆ.

ನಿಸರ್ಗದರ್ಶನದ ಭಾವಸಮಾಧಿಯ ರಸಾಗ್ನಿಗಂಗೆಯಲ್ಲಿ ಮುಳುಗಿ ಮಿಂದ ಜ್ವಾಲಾಮಯಾತ್ಮನಾದ ಹೂವಯ್ಯನ ಅನುಭವದಲ್ಲಿ ನಾವು ಕಾಣುವುದು ಈ ಮೊದಲೇ ಪ್ರಸ್ತಾಪಿಸಿದ ಪೂರ್ವ - ಪಶ್ಚಿಮ, ಪ್ರಾಚೀನ - ಆರ್ವಾಚೀನಗಳ ಸಂಶ್ಲೇಷಣೆಯ ದಾರ್ಶನಿಕ ಅನುಭವವನ್ನು. ಆ ದಾರ್ಶನಿಕತೆಯಲ್ಲಿ ಪೂರ್ವದ ಅನುಭಾವಿಯ ಪರಿಸರ ವಿಜ್ಞಾನೀಯ ದೃಷ್ಟಿಯನ್ನು ಕಾಣುತ್ತೇವೆ. 'ಜಗತ್ತೆಲ್ಲವೂ ಶಾಂತಿ ಸೌಂದರ್ಯ ಆನಂದ ಮೈತ್ರಿ ಪ್ರೇಮಗಳಿಂದ ಪೂರ್ಣ'ವಾದ ಅನುಭವ ಪರಿಸರದಿಂದ ಮನುಷ್ಯನನ್ನು ಪ್ರತ್ಯೇಕಿಸಲಾಗದ ಅನುಭವಿ ಚಿಂತನೆ ಆಗಿದೆ.

> ಈ ಸುಮಾರು ಒಂದೂವರೆ ಶತಮಾನದ ಇಂಡಿಯಾದ ನಮ್ಮ ಅವಸ್ಥೆ ಅಂಥದು. ಪೂರ್ವ - ಪಶ್ಚಿಮ, ಆಧ್ಯಾತ್ಮ - ವಿಜ್ಞಾನ ಇತ್ಯಾದಿಗಳ ಮಧ್ಯೆ ತುಯ್ತ, ತತ್ತರಿಕೆ ; ಸಮತೋಲ ಸಾಧಿಸಲು ಹೆಣಗಿದಷ್ಟೂ ಹೆಚ್ಚುವ ತತ್ತರಿಕೆ. ನೆನೆದಾಗ ಕುವೆಂಪು ಅವರ 'ಕಾನೂರು ಹೆಗ್ಗಡಿತಿ'ಯ ಹೂವಯ್ಯ ನನಗೆ ಮತ್ತೆ ಮತ್ತೆ ನೆನಪಾಗುತ್ತಾನೆ. ವೇದ ಉಪನಿಷತ್‌ಗಳಿಂದ ಮೊದಲಾಗಿ ಆಧುನಿಕ ವೈಜ್ಞಾನಿಕತೆ ವೈಚಾರಿಕತೆ ಸಮಾನತೆಯ ರಾಜಕೀಯ ತತ್ವಗಳು ಇವೆಲ್ಲವುಗಳಿಂದ ಘನಸತ್ತ್ವಗಳನ್ನು ಸೆಳೆದು ಅವೆಲ್ಲವನ್ನೂ ಒಟ್ಟಯಿಸಿ ಅಪ್ಪಿ ಅಮರಿಕೊಳ್ಳುವೆನೆಂಬ ದೈತ್ಯಾಕಾಂಕ್ಷೆಯ ಅಂಥ ಹೆಣಗಾಟದಲ್ಲಿ ವಿರೂಪಗೊಳ್ಳುವ ಕುರೂಪಗೊಳ್ಳುವ ಹಾಸ್ಯಾಸ್ಪದನಾಗುವ, ಆದರೆ ಈ ಯಾವುದಕ್ಕೂ ಅಂಜದೆ ಪರಿವೆಯೇ ಇಲ್ಲದೆ ಹೆಣಗಾಡುವ ಹೂವಯ್ಯ ನಮ್ಮ ಇಂಡಿಯಾದ ಇಡಿ ಪ್ರತಿಮೆ.[೨೩]

ಹಲವು ದಶಕಗಳ ಹಿಂದೆ 'ಕಾನೂರು ಹೆಗ್ಗಡಿತಿ' ಕಾದಂಬರಿಯ ಒಂದು ಸಾವಿರ ಪ್ರತಿಗಳು ಮಾರಾಟವಾಗಲು ಪ್ರಕಾಶಕರು ಹಲವು ವರ್ಷಗಳು ಕಾದಿರುವುದನ್ನು ಕಾಣುತ್ತೇವೆ. ಆದರೆ 'ಮಲೆಗಳಲ್ಲಿ ಮದುಮಗಳು' ಕೃತಿ ಪ್ರಕಟಣೆಯ ನಂತರ ಕುವೆಂಪು ಅವರ ಎರಡೂ ಕಾದಂಬರಿಗಳು ಪ್ರತಿ ವರ್ಷ ಮರು ಮುದ್ರಣವಾಗುತ್ತಿರುವುದನ್ನು ಗಮನಿಸಿದರೆ ಆ ಪುಸ್ತಕಗಳ ಮೇಲೆ ಹೊಸಕಾಲದ ಪರಿಣಾಮ ಗಾಢವಾಗುತ್ತಿರುವುದು ಸ್ಪಷ್ಟವಾಗುತ್ತದೆ. ಈ ಕೃತಿಗಳು ಹಲವು ಭಾಷೆಗಳಿಗೆ ಅನುವಾದಗೊಂಡಿವೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಸಾಹಿತ್ಯ ವಿಮರ್ಶಕರ ಆಚೆಗಿನ ಶ್ರೀಸಾಮಾನ್ಯ ಜನಸಮುದಾಯದ ತಲೆಮಾರಿನಿಂದ ತಲೆಮಾರಿಗೆ ಹಸ್ತಾಂತರಗೊಂಡು ಕುವೆಂಪು ಅಭಿವ್ಯಕ್ತಿಯ

ಪ್ರಪಂಚ ಹಾಗೂ ದಾರ್ಶನಿಕತೆ ಆ ಸಮುದಾಯಗಳ ಭಾವಕೋಶಗಳಲ್ಲಿ ಸ್ಥಾನ ಪಡೆಯುತ್ತಿರುವುದು ಆ ಕೃತಿಗಳ ಅಮರತ್ವವನ್ನು ಸಾಬೀತುಪಡಿಸುತ್ತದೆ.

೮. ಪ್ರಾಕೃತಿಕ ಪರಿಸರ

ಸುಮಾರು ಎಂಟುನೂರು ಪುಟಗಳ ವಿಸ್ತಾರದಲ್ಲಿ ಚಿತ್ರಿತಗೊಂಡಿರುವ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪ್ರಾಕೃತಿಕ ಪರಿಸರ ಎಂಥವರನ್ನು ವಿಸ್ಮಿತರನ್ನಾಗಿ ಮಾಡುತ್ತದೆ. ಮನುಷ್ಯ ಬದುಕಿನ ಜೊತೆಜೊತೆಯಲ್ಲಿಯೇ ಕಥನದುದ್ದಕ್ಕೂ ಬಿಚ್ಚಿಕೊಳ್ಳುವ ಪರಿಸರದ ಭೀಕರ, ರೌದ್ರ ಹಾಗೂ ನಿಸರ್ಗ ಸೌಂದರ್ಯದ ದೃಶ್ಯಗಳ ಜೊತೆಗೆ ಪ್ರಕೃತಿಯಲ್ಲಿನ ವಿಸ್ಮಯಲೋಕಗಳನ್ನೂ ಕಾದಂಬರಿ ತನ್ನಲ್ಲಿ ಗರ್ಭೀಕರಿಸಿಕೊಂಡಿದೆ. ಮಹಾಕಾವ್ಯದ ಸಂವಿಧಾನಾತ್ಮಕ ತಳಪಾಯವನ್ನು ಹೊಂದಿರುವ ಈ ಮಹಾಕಾದಂಬರಿಯಲ್ಲಿ ನಿಸರ್ಗದ ಸಣ್ಣ ಸಣ್ಣ ವಿವರಗಳು, ವೈವಿಧ್ಯತೆಗಳು ಮಡುಗಟ್ಟುವುದು ವಿಸ್ಮಯಕರವಾಗಿ ಕಾಣಿಸುತ್ತವೆ.

ನಮ್ಮ ಸುತ್ತಮುತ್ತ ಇರುವ ಮತ್ತು ತನಗೆ ತಾನೆ ಆಗಿರುವ ಎಲ್ಲ ವಸ್ತು ಸಮೂಹಗಳ ಮುಖ್ಯ ಅಮುಖ್ಯಗಳ ಪರಿಕಲ್ಪನೆಯನ್ನು ಕುವೆಂಪು ಸಂವೇದನೆ ನಿರಾಕರಿಸಿ ಎಲ್ಲವನ್ನು ಪೂರ್ಣದೃಷ್ಟಿಯಲ್ಲಿ ಸೃಷ್ಟಿಕ್ರಿಯೆಗೆ ಗುರಿಪಡಿಸಿದೆ. ಸೃಷ್ಟಿಯ ಜೀವಸಮಾನತೆಯ ಧೋರಣೆಯ ಪ್ರತಿಪಾದನೆ ಎಲ್ಲಾ ಹಂತಗಳಲ್ಲೂ ಜೀವಂತವಾಗಿ ಪ್ರಕಟಗೊಳ್ಳುತ್ತದೆ. ಕುವೆಂಪು ಅವರ ಈ ಕೆಳಗಿನ ಮಾತುಗಳೇ ಈ ವಿಚಾರವನ್ನು ಸ್ಪಷ್ಟಪಡಿಸುತ್ತವೆ.

> ಸೃಷ್ಟಿಯ ವ್ಯೂಹದಲ್ಲಿ ಮರದ ತುದಿಯ ಹೂವೆಷ್ಟು ಮುಖ್ಯವೊ ಗೊಬ್ಬರವೂ ಅಷ್ಟೇ ಮುಖ್ಯ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಮುಕುಂದಯ್ಯ ಮಾತ್ರ ಮುಖ್ಯ, ಹುಲಿಯ ಮುಖ್ಯವಲ್ಲ ಎನ್ನುವಂತಿಲ್ಲ. ಅದಕ್ಕೋಸ್ಕರವೇ 'ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ!' ಎಂದು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಬ್ರಾಹ್ಮೀದೃಷ್ಟಿಗೆ ಸಾಮಾಜಿಕಾರ್ಥಿಕ ವಿಚಾರಗಳೂ ಕೀಳಲ್ಲ. ಅವುಗಳಿಗೂ ಸೃಷ್ಟಿಯಲ್ಲಿ ಸ್ಥಾನವಿದ್ದೇ ಇದೆ.[೨೪]

ಅಂದರೆ ಬ್ರಾಹ್ಮೀಪ್ರಜ್ಞೆ ಅಥವಾ ಪೂರ್ಣದೃಷ್ಟಿಗೆ ಸೃಷ್ಟಿಯಲ್ಲಿನ ಅಖಂಡ ಚರಾಚರಗಳಲ್ಲಿ ಭಿನ್ನತೆಯನ್ನೇ ಕಾಣಲಾರದ ಪ್ರಜ್ಞೆ ಈ ಕಾದಂಬರಿಯ ಉದ್ದಕ್ಕೂ ಕಾರ್ಯವಹಿಸಿದೆ. ಹಾಗಾಗಿಯೇ ಕಾದಂಬರಿಯ ಪುಟಪುಟದಲ್ಲೂ ಈ ಚಿಂತನೆ ಎದುರಾಗುತ್ತದೆ.

ಸಹ್ಯಾದ್ರಿ ಪರಿಸರದ ಮಾನವ ಸಮುದಾಯ, ಆ ಸಮುದಾಯದ ಕೃಷಿ ಚಟುವಟಿಕೆಗಳು, ದಟ್ಟವಾದ ಅರಣ್ಯಗಳು, ಎತ್ತರದ ಗುಡ್ಡಗಳು, ಕಣಿವೆಗಳು ಮೊದಲಾದ ಚಿತ್ರಗಳು ಕಾದಂಬರಿಯ ಉದ್ದಕ್ಕೂ ಎದುರಾಗುತ್ತವೆ. ಹುಲಿ, ಕಾಡುಹಂದಿ, ಬರ್ಕ, ಕಣೆ ಹಂದಿ, ಕಾಡುಕೋಣ, ದೊಡ್ಡು, ಚಿರತೆ, ಜಿಂಕೆ, ಮುಸಿಯ, ಸರ್ಪಗಳು ಮೊದಲಾದ ವನ್ಯ ಮೃಗಗಳು. ಕಾಜಾಣ, ಕಾಮಳ್ಳಿ, ಕುಟುರ, ನವಿಲು, ಗೂಬೆ, ಮರಕುಟಿಗ, ಮಂಗಟ್ಟೆ ಮೊದಲಾದ ಪಕ್ಷಿ ಸಂಕುಲಗಳು, ಹೆಸರೇ ಇಲ್ಲದ ಕರ್ಕಶ ನಾದಗಳ ಹುಳ ಹುಪ್ಪಟೆಗಳು, ಕಾಡಿನ ದುರ್ಗಮ ಹಾಗೂ ಭಯಾನಕ ತಾಣಗಳು, ತೋಟ ಗದ್ದೆಗಳು, ಬೆಳಗು - ಬೈಗಿನ ಸೂರ್ಯೋದಯ, ಸೂರ್ಯಾಸ್ತಮಗಳ ವರ್ಣನೆಗಳು, ಚಂದ್ರೋದಯ ಹಾಗೂ ಕತ್ತಲೆಯ ವರ್ಣನೆಗಳು, ಭೀಕರ ಮಳೆ ಮತ್ತು ಮಂಜಿನ ವಿಸ್ಮಯ

ಲೋಕದ ಚಿತ್ರಗಳು, ತೊರೆ, ಹೊಳೆ, ಹಳ್ಳ, ಝರಿ - ಮೊದಲಾದ ನಿಸರ್ಗದ ವಿಸ್ಮಯ ಚಿತ್ರಗಳು ಮನುಷ್ಯ ಬದುಕಿನ ಅಭಿನ್ನತೆಯೊಂದಿಗೆ ಈ ಕೃತಿಯಲ್ಲಿ ಸಹಜವಾಗಿ ಅಭಿವ್ಯಕ್ತಗೊಂಡಿವೆ.

೯. ಬೇಟೆ ಹಾಗೂ ಮಾನವ ಸಮುದಾಯ

ಮಲೆನಾಡ ಬದುಕಿನ ಅವಿಭಾಜ್ಯ ಅಂಗವಾದ ಬೇಟೆ ಕಾದಂಬರಿಯಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತದೆ. ಈ ಬೇಟೆಯ ಚಿತ್ರಗಳಲ್ಲಿ ಸಹ್ಯಾದ್ರಿಯ ಅರಣ್ಯ ಲೋಕ ಹಾಗು ಮನುಷ್ಯ ಸಮುದಾಯದ ಸಂಘರ್ಷದ ಲೋಕ ಅನಾವರಣಗೊಳ್ಳುತ್ತದೆ. ಅಂಥ ಬೇಟೆಯ ಬಗೆಗಿನ ಮೋಹ ಮತ್ತು ಆಕರ್ಷಣೆ ಯಾವ ಬಗೆಯದೆಂಬುದಕ್ಕೆ ಈ ಕೆಳಗಿನ ಉಲ್ಲೇಖವೇ ಸಾಕ್ಷಿಯಾಗಿದೆ.

> ಮಲೆನಾಡಿನಲ್ಲಿ ಹುಡುಗರೆಲ್ಲರಿಗೂ ಬೇಟೆ ಎಂದರೆ ಪ್ರಾಣ. ದೊಡ್ಡವರು ನಾಯಿ ಕರೆದುಕೊಂಡು ಕಾಡು ಹತ್ತುವುದನ್ನು ಅವರು ಎಂತಹ ಕರುಬಿನಿಂದ ನೋಡುತ್ತಿರುತ್ತಾರೆ? 'ನಾವೂ ನಾಯಿಗಳಾಗಿದ್ದಿದ್ದರೆ!' ಎಂದುಕೊಳ್ಳುವುದೂ ಉಂಟು. ಯಾವಾಗಲಾದರೂ ಒಮ್ಮೆ ಬೇಟೆ ನುಗ್ಗುವ ಕಾಡು ಅಂತಹ ಅಪಾಯಕರವಾದ ದುರ್ಗಮ ಪ್ರದೇಶವಲ್ಲದಿದ್ದಾಗ ಹುಡುಗರನ್ನೂ ಕರೆದುಕೊಂಡು ಹೋಗುವುದೂ ಉಂಟು. ಅಂತಹ ಕೃಪೆಗೆ ಪಾತ್ರರಾದಾಗ ಆ ಹುಡುಗರ ಆನಂದ ಹೇಳತೀರದು. ಬೇಟೆಯಲ್ಲಿ ಅವರ ಆಸಕ್ತಿ ಎಷ್ಟು ಎಂದರೆ ಬೇಟೆಯಾದ ಪ್ರಾಣಿಯನ್ನು ಹಸಿಗೆ ಮಾಡುವ ಮುನ್ನ ತೋರಿಸಿದರೂ ಸಾಕು, ಧನ್ಯರಾದೆವೆಂದು ಭಾವಿಸುತ್ತಾರೆ! ಎಷ್ಟೋ ಸಾರಿ ಮಧ್ಯರಾತ್ರಿಯಾಗಿದ್ದು ಅವರು ಗಾಢ ನಿದ್ರೆಯಲ್ಲಿದ್ದರೂ, ತಿಂಗಳ ಬೆಳಕಿನ ಬೇಟೆಯಲ್ಲಿ ಹೊಡೆದು ಮನೆಗೆ ತಂದ ಕಾಡು ಹಂದಿಯನ್ನು ಅವರನ್ನೆಬ್ಬಿಸಿ ತೋರಿಸದಿದ್ದರೆ ಮರುದಿನವೆಲ್ಲಾ ಅವರು ಆ ನಿರಾಶೆಯನ್ನನುಭವಿಸಿ ಸಂಕಟ ಪಡುತ್ತಾರೆ! ಬೇಟೆ ಅಂದರೆ ಅಂಥಾ ಹುಚ್ಚು![೨೫]

೧೦. ಅರಣ್ಯ ಮತ್ತು ಮನುಷ್ಯ

ಮಲೆನಾಡಿನ ಮನುಷ್ಯ ಸಮುದಾಯದ ಭಾವಕೋಶಗಳ ಚಿತ್ತವನ್ನೆಲ್ಲ ಆಕ್ರಮಿಸಿರುವ ಮಲೆ, ಕಾಡುಗಳ ಚಿತ್ರಗಳು ಬದುಕಿನ ಅವಿಭಾಜ್ಯ ಅಂಗವೆಂಬಂತೆ ಚಿತ್ರಿತಗೊಳ್ಳುತ್ತವೆ. ಅಂಥ ಚಿತ್ರಗಳಲ್ಲಿ ಜೀವವೈವಿಧ್ಯ ಹಾಗೂ ಪರಿಸರದ ನಿಗೂಢ ಲೋಕಗಳು ದರ್ಶನಗೊಳ್ಳುವುದನ್ನು ಕಾಣುತ್ತೇವೆ. ಈ ಕೆಳಗಿನ ಉಲ್ಲೇಖ ಅದಕ್ಕೆ ಸಾಕ್ಷಿಯಂತಿದೆ.

> ಅವನ ಚಿತ್ತವನ್ನೆಲ್ಲ 'ಆಕ್ರಮಿಸಿ ತುಂಬಿಬಿಟ್ಟಿದ್ದ ಮಹದ್ ವಸ್ತುವೆಂದರೆ ಮಲೆ, ಕಾಡು! ಅರಣ್ಯಾಚ್ಛಾದಿತವಾಗಿ ಮೇಘಚುಂಬಿಗಳಾಗಿ ನಿಂತಿರುವ ಗಿರಿಶಿಖರ ಶ್ರೇಣಿಗಳ ಮಲೆನಾಡಿನಲ್ಲಿ ಎಲ್ಲಿಯೋ ಕೆಳಗೆ ಒಂದು ಕಣಿವೆಯ ಮೂಲೆಯಲ್ಲಿ ಹೆದರಿ ಹದುಗಿನಂತೆ ಮರಗಳ ನಡುವೆ ಹುದುಗಿರುವ ಮನೆಗಳಲ್ಲಿ ಹುಟ್ಟಿ ಕಣ್ಣು ಬಿಡುವ ಮಕ್ಕಳ ಪಾಲಿಗೆ ಆಕಾಶ ಕೂಡ ಕಾಡಿನಷ್ಟು ವಿಸ್ತಾರಭೂಮವಾಗಿ ಕಾಣಿಸುವುದಿಲ್ಲ. ಆಕಾಶಕ್ಕಿಂತಲೂ ಕಾಡೆ ಸರ್ವವ್ಯಾಪಿಯಾಗಿ ತನ್ನ ಅಧಿಕಾರವನ್ನು ಸ್ಥಾಪಿಸಿ ಭೂಮಂಡಲವನ್ನೆಲ್ಲ

ವಶಪಡಿಸಿಕೊಂಡಂತಿರುತ್ತದೆ. ಪೃಥ್ವಿಯನ್ನೆಲ್ಲ ಹಬ್ಬಿ ತಬ್ಬಿ ಆಳುವ ಕಾಡಿನ ದುರ್ದಮ್ಯ ವಿಸ್ತೀರ್ಣದಲ್ಲಿ ಎಲ್ಲಿಯೊ ಒಂದಿನಿತಿನಿತೆ ಅಂಗೈಯಗಲದ ಪ್ರದೇಶವನ್ನು ಮನುಷ್ಯ ಗೆದ್ದುಕೊಂಡು ತನ್ನ ಗದ್ದೆ ತೋಟ ಮನೆಗಳನ್ನು ರಚಿಸಿಕೊಂಡಿದ್ದಾನೆ, ಅಷ್ಟೆ. ಅದೂ ಕೂಡ ಅವನು ನಿಚ್ಚವೂ ಜಾಗರೂಕನಾಗಿ ತಾನು ಗೆದ್ದುಕೊಂಡಿದ್ದನ್ನು ನಿರಂತರವೂ ರಕ್ಷಿಸಿಕೊಳ್ಳುತ್ತಾ ಹೋಗುವುದನ್ನು ಮರೆತನೆಂದರೆ, ಬಹುಬೇಗನೆ ಹಳುಬೆಳೆದು ಮತ್ತೆ ಅದು ಕಾಡಿನ ವಶವಾಗಿ ಬಿಡುತ್ತದೆ. ಮುಕುಂದಯ್ಯನಿಗಂತೂ ಕಾಡು ಎಂದರೆ ದೇವರಿಗೆ ಸರಿಸಮಾನವಾಗಿತ್ತು. ಅಷ್ಟೊಂದು ಭಯಮಿಶ್ರಿತ ಭಕ್ತಿ ಅದರಲ್ಲಿ. ಅವನಿಗೆ ಅದರ ಮುಳ್ಳು, ಕಲ್ಲು, ಕೊರಕಲು, ಏರು, ಇಳಿತ, ಹುಲಿ, ಹಂದಿ, ಹಾವು, ಚೇಳು, ನುಸಿ, ಇಂಬಳ ಇವೆಲ್ಲದರಿಂದ ಒದಗುವ ತೊಂದರೆಯ ಅನುಭವವಿತ್ತು. ಹಾಗೆಯೇ ಹಕ್ಕಿ, ಹೂವು, ಹಣ್ಣು, ಚಿಟ್ಟೆ, ಜೇನು, ಬೇಟೆ ಇತ್ಯಾದಿಗಳಿಂದ ಒದಗುವ ಆನಂದದ ಅರಿವೂ ಇತ್ತು. ಮಲೆ ಕಾಡಿನ ಭವ್ಯತೆಯ ಅವನ ಅನುಭವವನ್ನು ಹೆದರಿಕೆ ಎಂದು ವರ್ಣಿಸಲಾಗುತ್ತಿರಲಿಲ್ಲ. ಅವನು ಚಿಕ್ಕಂದಿನಲ್ಲಿ ಐತ ಮೊದಲಾದವರೊಡನೆ ಚಿಟ್ಟು ಬಿಲ್ಲು ಹಿಡಿದು ಕಾಡಿನಲ್ಲಿ ತಿರುಗುತ್ತಿದ್ದಂತೆ ತರುಣನಾದ ಮೇಲೆಯೂ ಕೋವಿ ಹಿಡಿದು ಒಬ್ಬನೆ ದಟ್ಟ ನಡುಗಾಡಿನಲ್ಲಿಯೂ ಧೈರ್ಯದಿಂದಲೆ ಅಲೆದಾಡಿದ್ದನು ಮತ್ತು ಅಲೆದಾಡುತ್ತಲೂ ಇದ್ದನು.[೨೬]

ವನ್ಯಮೃಗಗಳ, ಇನ್ನಿತರ ಜೀವಜಾಲಗಳ ಹಾಗು ಮನುಷ್ಯ ಲೋಕದ ಜೊತೆಜೊತೆಯಲ್ಲಿಯೇ ಪಕ್ಷಿಲೋಕವು ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ಚಿನ್ನಮ್ಮ ಅದುವರೆಗೂ ಗಮನಿಸಿಯೆ ಇರಲಿಲ್ಲ : ಗೊತ್ತು ಕೂರಲು ನೆರೆಯುತ್ತಿವೆ ಹಕ್ಕಿಹಿಂಡು ! ಎಷ್ಟು ಹಕ್ಕಿಗಳಿವೆ ಈ ಕಾಡಿನ ಸೆರಗಿನಲ್ಲಿ? ಯಾವ ಯಾವ ತರದ ಹಕ್ಕಿ? ಛೆ ಛೆ ಛೆ ಎಷ್ಟು ಬಣ್ಣ? ಒಂದೊಂದರ ಕೂಗೂ ಒಂದೊಂದು ತರ! ಆ ಸಿಳ್ಳು ಹಾಕುವ ನೇಲುಪುಕ್ಕದ ಕರಿಹಕ್ಕಿ? ಅವಳಿಗೆ ಗೊತ್ತು ; ಮುಕುಂದಯ್ಯ ತೋರಿಸಿದ್ದ ; ಅದು ಕಾಜಾಣ; **ಅದೆಂಥ ಹಕ್ಕಿಯೊ ಅದು, ಪಳಪಳ ಹೊಳೆಯುತ್ತಿದೆ. ಬಿಸಿಲು ಬಿದ್ದ ಬಳೆಯ ಕಣ್ಣು** ಹೊಳೆದ ಹಾಗೆ? ಈಗ ಹಾರಿ ಹೋಗಿದ್ದು : ಗಿಣಿ ಹಿಂಡು ! ಅಕ್ಕೋ ಅದೇ ಕಾಮಳ್ಳಿ ಹಿಂಡು! ಇದು ಪಿಕಳಾರ : ಆವೊತ್ತು ಕೋಣೂರಿನಲ್ಲಿ ಕಣದ ಹತ್ತಿರ ಮಟ್ಟಿನಲ್ಲಿ ಗೂಡುಕಟ್ಟಿ ಮರಿ ಮಾಡಿತ್ತಲ್ಲಾ ಅದೇ ! ಛೆ ಛೆ ಛೆ ಛೆ ಎಷ್ಟು ಹಕ್ಕಿ! ಅವೆಲ್ಲವೂ ಒಟ್ಟುಲಿದು ಕಾಡೆಲ್ಲಾ ಗಿಲಿಗಿಚ್ಚಿ ಆಡಿಸಿದ ಹಾಂಗಿದೆಯಲ್ಲಾ![೨೭]

ಮಲೆನಾಡಿನ ಸೌಂದರ್ಯ ಹಾಗು ಮನುಷ್ಯ ಪ್ರಜ್ಞೆಯ ರಸಾಸ್ವಾದನೆಗೆ ಸಾಕ್ಷಿಯಂತಿದೆ ಈ ಮೇಲಿನ ಉಲ್ಲೇಖ. ಕುವೆಂಪು ಸಂವೇದನೆ ಮಲೆನಾಡಿನಲ್ಲಿ ಕಂಡುಂಡ ಅನುಭವಕ್ಕೆ ಹಾಗೂ ತನ್ನ ರಸದೃಷ್ಟಿ, ರಸಸೃಷ್ಟಿಗೆ ಸಾಕ್ಷಿಯಂತೆ ಇಂಥ ನಿಸರ್ಗ ಚಿತ್ರಗಳು ಅಭಿವ್ಯಕ್ತಗೊಂಡಿವೆ. ಇಂಥ ಅನೇಕ ಪ್ರಕೃತಿ ವರ್ಣನೆಗಳು, ಜೀವ ಸಮೃದ್ಧಿಯ ಚಿತ್ರಗಳು, ನಿಸರ್ಗದ ವೈವಿಧ್ಯತೆಗಳು, ಮಳೆಯ ಭೀಕರಾನುಭವಗಳು, ಮನುಷ್ಯ ಜೀವನದ ಭಾಗವಾಗಿ ಪ್ರಕಟಗೊಂಡು ಕಾದಂಬರಿಯ ಅನನ್ಯತೆಗೆ ಸಹಕಾರಿಯಾಗುತ್ತದೆ.

ಮಳೆ ಕಾದಂಬರಿಯ ಕೇಂದ್ರ ಪ್ರತೀಕದಂತೆ ಚಿತ್ರಿಸಲ್ಪಟ್ಟಿದೆ. ಮನುಷ್ಯ ಮತ್ತು ಪರಿಸರದೊಂದಿಗಿನ ಸಂಘರ್ಷವನ್ನು ಈ ಪ್ರತಿಮೆ ಕಾಣಿಸುತ್ತದೆ. ಅಂದರೆ ಮನುಷ್ಯನ ಪರಿಸರದೊಂದಿಗಿನ ಹೋರಾಟ, ಅಸಹಾಯಕತೆ ಹಾಗೂ ಹೊಸ ಸೃಷ್ಟಿಯ ಸಾಧ್ಯತೆಗಳನ್ನು, ಸ್ಮೃತಿ ಅಸ್ಮೃತಿಗಳ ಕಥನಗಳನ್ನು ಧ್ವನಿಸುತ್ತದೆ. ಬದುಕಿನ ಸುಖ-ದುಃಖಗಳಿಗೂ, ಸಾವು - ನೋವುಗಳಿಗೂ ನಿರ್ಲಿಪ್ತವಾಗಿ ಆಶ್ರಯವಾಗಿ ಬದುಕಿನ ಎಲ್ಲ ನೆಲೆಗಳಲ್ಲಿಯೂ ಜೀವಚೈತನ್ಯವನ್ನು ತುಂಬುತ್ತದೆ.

> ಯಾರು ಬದುಕಲಿ, ಯಾರು ಸಾಯಲಿ, ಯಾರು ಹುಟ್ಟಲಿ, ಹುಟ್ಟದೆ ಹೋಗಲಿ, ಮಳೆಗಾಲ ನಿಲ್ಲುತ್ತದೆಯೆ? ಮಳೆ ಹಿಡಿದು ಕೂತಿತ್ತು. ನಾಲ್ಕು ಪಾದಗಳನ್ನೂ ಬಲವಾಗಿ ಊರಿ! ಮೋಡ ಸದಾ ಕವಿದು ಸೂರ್ಯದರ್ಶನವೆ ಅಪೂರ್ವವಾಯಿತು. ತನ್ನ ದುರ್ದಮ್ಯ ವ್ಯಾಪಾರಗಳನ್ನು ನಿರ್ಲಕ್ಷ್ಯವಾಗಿ ನಿರ್ದಾಕ್ಷಿಣ್ಯವಾಗಿ ಸಾಗಿಸಿತ್ತು ಬೃಹತ್ ಪ್ರಕೃತಿ. ಆ ಪ್ರಕೃತಿಯ ಪ್ರತಿರೂಪವಾದ ಸಹ್ಯಾದ್ರಿ ಪರ್ವತ ಕಾನನ ಶ್ರೇಣಿ ಮನುಷ್ಯರ ಅಲ್ಪ ಸುಖದುಃಖಗಳಿಗೆ ಸಂಪೂರ್ಣ ನಿಸ್ಸಂಗಿಯಾಗಿ ಭೀಷಣ ವರ್ಷಧಾರೆಯಲ್ಲಿ ತೊಪ್ಪನೆ ತೊಯ್ಯುತ್ತಾ ಹಬ್ಬಿ ಕೊಬ್ಬಿ ಉಬ್ಬಿ ನಿಂತಿತ್ತು.
>
> ಆ ಭೂಮ ನಿಸರ್ಗದ ಮುಂದೆ ಹಳೆಮನೆ, ಕೋಣೂರು, ಹೂವಳ್ಳಿ, ಬೆಟ್ಟಳ್ಳಿ ಮತ್ತು ಸಿಂಬಾವಿಯಂತಹ ಏಕಗೃಹ ಕ್ಷುದ್ರಗ್ರಾಮಗಳು ಬದುಕಿನ ಆಶೆ ನಿರಾಶೆ ಕಷ್ಟ ಸುಖ ಶೋಕ ತಾಪಾದಿಗಳು ಯಃಕಶ್ಚಿತಗಳಾಗಿದ್ದುದರಲ್ಲಿ ಆಶ್ಚರ್ಯವೇನು? ತಂದೆ ತಾಯಿಯರನ್ನು ಏಕಕಾಲದಲ್ಲಿ ಅನಿರೀಕ್ಷಿತವಾಗಿ ಕಳೆದುಕೊಂಡ ಧರ್ಮುವ ಮನಃಸ್ಥಿತಿಯಾಗಲಿ ; ತಾನು ಬಯಸಿದ ಹೆಣ್ಣು, ಆ ಹೆಣ್ಣಿನ ಇಚ್ಛೆಗೂ ವಿರುದ್ಧವಾಗಿ, ಮತ್ತೊಬ್ಬನ ಪಾಲಾಗುತ್ತದೆಯಲ್ಲಾ ಎಂಬ ಮುಕುಂದಯ್ಯನ ಹೃದಯ ವ್ಯಥೆಯಾಗಲಿ ; ತಾನು ಹಾರಿಸಿಕೊಂಡು ಬಂದು ಮದುವೆಯಾಗಿದ್ದ ಹುಡುಗಿಯನ್ನು ಮತ್ತೆ ತವರಿಗೊಯ್ದು ಬಲಾತ್ಕಾರವಾಗಿ ಮತ್ತೊಬ್ಬನಿಗೆ ಮದುವೆ ಮಾಡಿಸುತ್ತಾರೆ ಎಂಬ ವಾರ್ತೆಯ ಬಡಬಾಗ್ನಿಯನ್ನು ಹೊಟ್ಟೆಯೊಳಗಿಟ್ಟುಕೊಂಡು, ಹೇಗೋ ಉಪಾಯದಿಂದ ಪೋಲೀಸರ ಕೈಯಿಂದ ತಪ್ಪಿಸಿಕೊಂಡು ಮಳೆಗಾಲದ ಕಾಡಿನಲ್ಲಿ ತಲೆಮರೆಸಿಕೊಂಡು ಕಾಲ ಹಾಕುತ್ತಿರುವ ಗುತ್ತಿಯ ದಾರುಣಚಿತ್ತ ಸ್ಥಿತಿಯಾಗಲಿ ; ನಿರಂತರ ರೋಗಿಷ್ಠನಾಗಿದ್ದರೂ ತನ್ನನ್ನು ಒಲಿದು ಬದುಕು ಸಾಗಿಸುತ್ತಿದ್ದ ತನ್ನ ಹೆಂಡತಿ ಅಕ್ಕಣಿ ಮೆಲ್ಲಮೆಲ್ಲಗೆ ಜಾರಿ ಚೀಂಕ್ರನಿಗೆ ವಶವಾಗುತ್ತಿದ್ದಾಳಲ್ಲಾ ಎಂದು ಒಳಗೊಳಗೆ ಕೊರಗಲಾರಂಭಿಸಿರುವ ಪಿಜಿಣನ ಬಾಳಬೇಗೆಯಾಗಲಿ ; ಕಡೆಗೆ, ಪಾದ್ರಿಯಿಂದ ಅನೇಕಾನೇಕ ಪರಿತೋಷಗಳನ್ನು ಪಡೆದು, ಆತನಿಗೆ ತಾನು ಕ್ರೈಸ್ತಜಾತಿಗೆ ಸೇರುತ್ತೇನೆ ಎಂಬ ನಂಬುಗೆ ಬರುವಂತೆ ಮಾಡಿ, ಒಂದು ರೀತಿಯಲ್ಲಿ ಮಾತನ್ನೂ ಕೊಟ್ಟು, ಈಗ ಅದರಿಂದ ನುಣುಚಿಕೊಳ್ಳಲು ಹವಣಿಸುತ್ತಿರುವ ದೇವಯ್ಯನ ಹಾಸ್ಯಾಸ್ಪದವಾದ ಒಳತೋಟಿಯಾಗಲಿ - ಆ ಸಹ್ಯಾದ್ರಿಯ ಮಲೆ, ಕಾಡು, ಮಳೆ ಇವುಗಳ ಕಡೆಗಣ್ಣಿನ ಗಮನಕ್ಕಾದರೂ ಬರುತ್ತವೆಯೇ? ಮಲೆಯೋ? ಅಲೆಅಲೆಯಾಗಿ ಬಾನ್ಮುಟ್ಟಿ ತಲೆಯೆತ್ತಿ

ನಿಂತಿದೆ! ಕಾಡೋ? ದಿಗಂತವಿಶ್ರಾಂತವಾಗಿ, ದಟ್ಟವಾಗಿ, ವ್ಯಾಘ್ರಭೀಷಣವಾಗಿ, ವರಾಹಕಠೋರವಾಗಿ ಹಸರಿಸಿದೆ! ಮಳೆಯೋ? ಹಗಲೂ ಇರುಳೂ ಒಂದೇ ಸಮನೆ ಸುರಿಯುತ್ತಿದೆ, ಹೊಡೆಯುತ್ತಿದೆ, ಜಡಿಯುತ್ತಿದೆ![೨೮]

'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಮಲೆನಾಡಿನ ರಾಮಾಯಣವೆನ್ನಬಹುದು ಅಥವಾ ಹಾಗಲ್ಲ, ಸಮಂಜಸವಾಗಿ ಹೇಳುವುದಾದರೆ ಇದನ್ನು **'ಮಲೆನಾಡಿನ ಮಹಾಭಾರತ'** ಎನ್ನಬೇಕು. ಮಹಾಭಾರತವು ಒಂದು ಬೃಹತ್ ಕಥಾಕೋಶ, ವ್ಯಾಪಕವಾದ ಕಥಾಜಾಲ. ಅಲ್ಲಿ ಯಾವ ಕಥೆ ಮುಖ್ಯ, ಯಾವ ಸನ್ನಿವೇಶ ಮುಖ್ಯ, ಯಾವ ವ್ಯಕ್ತಿ ಮುಖ್ಯ, ಯಾವ ಆಶಯ ಮುಖ್ಯ, ಯಾವ ಚಿಂತನೆ ಮುಖ್ಯ ಇತ್ಯಾದಿ ಹೇಳಲಿಕ್ಕೆ ಬರುವುದಿಲ್ಲ.[೨೯]

ಈ ಮೇಲಿನ ಕೆ.ವಿ. ಸುಬ್ಬಣ್ಣನವರ ಮಾತುಗಳು ಕಾದಂಬರಿಯ ಅರ್ಥಸ್ಫೋಟಕ ಧ್ವನಿ ಸಾಧ್ಯತೆಗಳನ್ನು ಒಮ್ಮೆಗೆ ಪ್ರಕಟಿಸುತ್ತಿದೆ. ಹಾಗೆಯೇ ಇಂಥ ರಚನೆಯ ಸಾಂಸ್ಕೃತಿಕ ಮಹತ್ವವನ್ನು, ಅಖಂಡ ಭಾರತೀಯ ಆಧುನಿಕ ಸಂವೇದನೆಯ ಅನನ್ಯತೆಯನ್ನು ಸೂಚಿಸುತ್ತದೆ.

೧೧. ಮಲೆಗಳಲ್ಲಿ ಮದುಮಗಳು : ಜೀವ ಸಮಾನತೆಯ ಧೋರಣೆ

'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದುಮಗಳು' ಕೃತಿಗಳಲ್ಲಿ ಒಂದು ಪ್ರದೇಶದ ಜನಸಮುದಾಯ, ಅದರ ಬದುಕು, ಒಂದು ಕಾಲ ಮತ್ತು ಆ ಎಲ್ಲವುಗಳ ದರ್ಶನಗಳನ್ನು ಅಭಿವ್ಯಕ್ತಿಸಿ ಜೀವ ಕೇಂದ್ರಿತ ಬದುಕನ್ನಾಗಿ ಅಮರವಾಗಿಸಿದ್ದಾರೆ ಕುವೆಂಪು. ಇಲ್ಲಿನ ಸಂವೇದನೆ ಎಪಿಕ್ ಮಾದರಿಯದು. ಈ ಎರಡೂ ಕೃತಿಗಳು ಸಮಗ್ರ ಮಲೆನಾಡಿನ ಹೃದಯವನ್ನು ತನ್ನ ಕಾಲ ಮತ್ತು ನಾಡಿಗೆ ಭಾಷೆಯನ್ನು ಕೊಟ್ಟಿವೆ. ಹಾಗಾಗಿಯೇ ದಶಕಗಳು ಕಳೆದರೂ ಈ ಕೃತಿಗಳ ಕಾಂತಿ, ಶಕ್ತಿ, ಆಕರ್ಷಣೆ ಕಡಿಮೆಯಾಗಿಲ್ಲ. ಅಂದರೆ ಹಲವು ಶೋಷಿತ ಜನಾಂಗದ ಅನಧಿಕೃತ ಚರಿತ್ರೆಯ ಏರಿಳಿತಗಳೇ ಇಲ್ಲಿ ತಾತ್ವಿಕರಣಗೊಂಡಿವೆ. ಕೆಳವರ್ಗದ ಬಗೆಗೆ ಕುವೆಂಪು ಅವರ ಧೋರಣೆ, ಕಾಳಜಿ ಇಲ್ಲಿ ನಿಶ್ಚಲವಾಗಿ ಪ್ರಕಟಗೊಂಡಿದೆ. ಇದರ ಜೊತೆ ಜೊತೆಯಲ್ಲಿಯೇ ಎದುರಾಗುವ ಪ್ರಾಕೃತಿಕ ಪರಿಸರವೂ ಹೆಜ್ಜೆಹೆಜ್ಜೆಗೂ ಬದುಕಿನ ಅವಿಭಾಜ್ಯ ಅಂಗವಾಗಿ ಪ್ರದರ್ಶಿತವಾಗಿ ಈ ಕೃತಿಗಳಿಗೆ ವಿಶೇಷ ಅನನ್ಯತೆ ದತ್ತವಾಗಿದೆ. ಅಂಥ ಅನನ್ಯತೆಯೇ 'ಹಸಿರು ಓದಿಗೆ' ಬೀಜರೂಪದ ಭಿತ್ತಿಯನ್ನು ಒದಗಿಸುತ್ತದೆ.

ದಟ್ಟವಾದ ಹಾಗು ವಿಶಾಲವಾದ ಪರ್ವತ ಶ್ರೇಣಿಗಳು, ಅರಣ್ಯ, ಸಸ್ಯ, ಪ್ರಾಣಿ, ಕ್ರಿಮಿ, ಕೀಟಾದಿಗಳ ಪ್ರಪಂಚ ಕುವೆಂಪು ಅವರ ಎರಡೂ ಕಾದಂಬರಿಗಳಲ್ಲಿ ಅಭಿವ್ಯಕ್ತಗೊಂಡಿದೆ. ಅಂಥ ಪ್ರಪಂಚದೊಂದಿಗೆ ಮನುಷ್ಯನ ಒಡನಾಟ, ಕೃಷಿ, ಬೇಟೆ ಮೊದಲಾದ ಸಂಘರ್ಷಾತ್ಮಕ ಕ್ರಿಯೆಗಳು ಪ್ರಕೃತಿಯ ರೌದ್ರತೆ ಸೌಂದರ್ಯಗಳ ನಡುವೆ ಮನುಷ್ಯನ ಹೋರಾಟದ ಬದುಕು ಚಿತ್ರಣಗೊಂಡಿದೆ. ಸಮೃದ್ಧ ಜೀವರಾಶಿಗಳ ತಾಣವಾದ ಈ ಕಾದಂಬರಿಗಳಲ್ಲಿ ಪ್ರಾಕೃತಿಕ ಜಗತ್ತಿನಲ್ಲಿರುವ ಹುಲಿ, ಚಿರತೆ, ಕಾಡೆಮ್ಮೆ, ಹಂದಿ, ಕಾಡು ಕುರಿ ಮೊದಲಾದ ಜೀವ ಜಂತುಗಳ ಬೇಟೆಯ ಚಿತ್ರಗಳು ಇವೆ.

ಈ ಎರಡೂ ಕೃತಿಗಳು ಹತ್ತೊಂಬತ್ತನೇ ಶತಮಾನದ ಕೊನೆಯ ದಶಕಗಳ ಹಾಗೂ ೨೦ನೇ ಶತಮಾನದ ಮೊದಲ ದಶಕಗಳ ಪರಿಸರ ವಿಜ್ಞಾನದ ಚರಿತ್ರೆಗಳಂತೆ ಕಾಣುತ್ತವೆ. ಈ ಎರಡೂ ಕೃತಿಗಳ ನಿರೂಪಕನ ಪ್ರಜ್ಞೆ

ಸ್ಥಳೀಯ ಪರಿಸರದ ಮೇಲಿನ ಆಕ್ರಮಣಗಳಲ್ಲಿ ಭಾಗಿಯಾಗಿದ್ದು ಬದಲಾಗುತ್ತಿರುವ ಸೂಚನೆಗಳನ್ನು ಕಾಣುತ್ತೇವೆ. ಆಧುನಿಕ ಶಿಕ್ಷಣದ ಸಂಪರ್ಕ ಹಾಗೂ ಹೊಸ ಸಂಸ್ಕೃತಿಯ ಸಂಘರ್ಷದಿಂದ ನಿರ್ಮಾಣಗೊಂಡ ಈ ಕೃತಿಯ ನಿರೂಪಕನ ಸಂವೇದನೆ ಪರಿಸರ ದೃಷ್ಟಿಕೋನವಾಗಿ (Ecological view) ರೂಪುಗೊಳ್ಳುತ್ತಿರುವುದನ್ನು ಗುರುತಿಸಬಹುದಾಗಿದೆ.

ವಸಾಹತುಶಾಹಿ ಮತ್ತು ಪುರೋಹಿತಶಾಹಿ ಸಂಸ್ಕೃತಿಗಳಿಗೆ ಮುಖಾಮುಖಿಯಾಗುವ ಪ್ರಕ್ರಿಯೆಯನ್ನು - ಮದುಮಗಳು ಕಾದಂಬರಿ ಕೇಂದ್ರವಾಗಿಟ್ಟುಕೊಂಡಿದೆ. ಹಾಗೆಯೇ ಆ ಕಾಲದ ಮಲೆನಾಡಿನ ಪ್ರಾಕೃತಿಕ ಪ್ರಪಂಚ ಹಾಗೂ ಸಾಮಾಜಿಕ ಬದುಕನ್ನು ಕುವೆಂಪು ಈ ಕೃತಿಯಲ್ಲಿ ಕಟ್ಟಿಕೊಡುತ್ತಾರೆ. ತಳಸಂಸ್ಕೃತಿ, ಜನ ಸಮುದಾಯ, ಕಾಡು, ಗ್ರಾಮೀಣ ಪರಿಸರದಲ್ಲಿ ಸಮಾಜದ ಭಿನ್ನ ಸ್ತರಗಳು, ಮಾನವ ಸಮುದಾಯ, ಜೀವಸಮುದಾಯದ ಚಿತ್ರಗಳು ಕೃತಿಯಲ್ಲಿ ಸ್ಥಾನಪಡೆದಿವೆ. ಕೃಷಿ, ಬೇಟೆ, ಕಾಡಿನ ಪರಿಸರ ಹೀಗೆ ಅಸಂಖ್ಯ ವಿವರಗಳೊಂದಿಗೆ ಕಾದಂಬರಿ ಬೆಳೆಯುತ್ತದೆ.

ಗುತ್ತಿಯ ಪ್ರಯಾಣದ ಮೂಲಕ ಕಾದಂಬರಿ ಪರಿಸರ ವೈವಿಧ್ಯತೆಗಳನ್ನು, ಪ್ರಕೃತಿ ರಮ್ಯ ಹಾಗೂ ರೌದ್ರತೆಗಳ ವಿರಾಟ್ ದರ್ಶನವನ್ನು ಮುಂದಿಡುತ್ತದೆ. ಇಲ್ಲಿನ ಅನೇಕ ಮನುಷ್ಯ ಪಾತ್ರಗಳು ಮತ್ತು ಜೀವ ಸಮುದಾಯ ಪರಿಸರದ ಕೂಸುಗಳಂತೆ ವರ್ತಿಸುತ್ತವೆ.

ಕುವೆಂಪು ಅವರ ವಿಶ್ವಮಾನವ ಕಲ್ಪನೆ, ಅನಿಕೇತನ ಪ್ರಜ್ಞೆ ಇಂಥಲ್ಲಿ ಬೆಳೆಯುತ್ತಲೇ ಹೋಗುತ್ತದೆ. ಪ್ರಾಣಿ, ಪಕ್ಷಿ, ಕೀಟ, ಸಸ್ಯ ಲೋಕಗಳು ಪಾತ್ರಗಳಾಗಿ ಮೈಪಡೆಯುತ್ತವೆ. ಪೂರ್ಣದೃಷ್ಟಿ ಕೃತಿಯುದ್ದಕ್ಕೂ ಹರಿಯುತ್ತದೆ.

> ಕುವೆಂಪು ಅವರ ಮಾತುಗಳನ್ನೇ ಉದ್ಧರಿಸುವುದಾದರೆ ಶ್ರೀ ರಾಮಾಯಣದರ್ಶನದಲ್ಲಿ ಕಾಣುವ ದರ್ಶನವೇ ಈ ಕಾದಂಬರಿಯಲ್ಲಿಯೂ ಅಭಿವ್ಯಕ್ತಗೊಂಡಿದೆ. ಇಲ್ಲಿಯ ವಿರಾಡ್ ದೃಷ್ಟಿಗೆ ಮೇಲುಕೀಳುಗಳಿಲ್ಲ ; ಐತ - ಪೀಂಚಲು, ಮುಕುಂದಯ್ಯ ಚಿನ್ನಮ್ಮ, ಹುಲಿಯ, ಓಡುಹುಳು - ಎಲ್ಲ ಒಂದೇ. ಲೋಕ ಸಂಗ್ರಹಕ್ಕೆ ಇಂದಿರಾಗಾಂಧಿಯವರು ಎಸಗಿದ ಅಂತರರಾಷ್ಟ್ರೀಯ ಘಟನೆ ಎಷ್ಟು ಮುಖ್ಯವೋ ಓಡುಹುಳುವಿನ ಕಾರ್ಯವೂ ಅಷ್ಟೇ ಮುಖ್ಯ. ಆದ್ದರಿಂದಲೇ ಕಾದಂಬರಿಯ ಮೊದಲಲ್ಲಿ 'ಇಲ್ಲಿ ಯಾರೂ ಮುಖ್ಯರಲ್ಲ ; ಯಾರೂ ಅಮುಖ್ಯರಲ್ಲ ; ಯಾವುದೂ ಯಃಕಶ್ಚಿತವಲ್ಲ. ಇಲ್ಲಿ ಎಲ್ಲಕ್ಕೂ ಇದೆ ಅರ್ಥ ; ಯಾವುದೂ ಅಲ್ಲ ವ್ಯರ್ಥ ; ನೀರೆಲ್ಲ ಊ ತೀರ್ಥ' ಎಂದು ಓದುಗರನ್ನು ಎಚ್ಚರಿಸಲಾಗಿದೆ. ಪೂರ್ಣದೃಷ್ಟಿಯುಳ್ಳವರಿಗೆ ಇದೇನೆಂಬುದು ಅರ್ಥವಾಗುತ್ತದೆ. ಕಾವ್ಯದಲ್ಲಿ ಮಾತ್ರವಲ್ಲ, ನನ್ನ ಬದುಕಿನಲ್ಲಿಯೂ, ಪ್ರತಿ ಕ್ಷಣದಲ್ಲಿಯೂ ಹೀಗೆಯೇ ಬದುಕುತ್ತೇನೆ. ಇದು ನನಗೆ ಅತ್ಯಂತ ಸಹಜವಾಗಿ ಕಂಡಿದೆ.
>
> ನನಗರಿಯದಂತೆಯೇ ವಿಶ್ವಮಾನವ ತತ್ತ್ವ ಈ ಕಾದಂಬರಿಯನ್ನೆಲ್ಲ ವ್ಯಾಪಿಸಿಕೊಂಡಿದೆ. ಮದುವೆ ಮನೆಯಿಂದ ತಪ್ಪಿಸಿಕೊಂಡು ಚಿನ್ನಮ್ಮ ಪೀಂಚಲು ಜೊತೆಯಲ್ಲಿ ಮಾರಿಗುಡಿಗೆ ಹೋಗುತ್ತಾಳಷ್ಟೆ. ಆ ಗುಡಿಯಲ್ಲಿದ್ದದ್ದು ಒಂದು ಕಲ್ಲು

ಮಾತ್ರ. ಹಣತೆಯೊಂದು ಮಸುಕುಮಸಕಾಗಿ ನರಳುತ್ತಿದೆ. ಚಿನ್ನಮ್ಮ ಆ ಕಲ್ಲಿಗೆ ನಮಸ್ಕಾರ ಮಾಡಿ, ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತಾಳೆ. ಹೂವಳ್ಳಿಯ ಚಿನ್ನಮ್ಮನಿಗೆ ಮಾರಿಯಮ್ಮನಾದರೇನಂತೆ, ದಕ್ಷಿಣೇಶ್ವರದ ಭವತಾರಿಣಿಯಾದರೇನಂತೆ. ಭವತಾರಿಣಿ ಮುಖ್ಯ, ಮಾರಿಯಮ್ಮ ಅಮುಖ್ಯವೆಂಬ ಭಾವನೆ ಅವಳಲ್ಲಿಲ್ಲ. ದೇವರುಗಳಲ್ಲೆಂತು ಸಣ್ಣವರು ದೊಡ್ಡವರಿಲ್ಲವೋ, ಮನುಷ್ಯರಲ್ಲಿಯೂ ಅಂತೆಯೇ ಸಣ್ಣವರು ದೊಡ್ಡವರಿಲ್ಲ. ಈ ಬ್ರಾಹ್ಮೀಪ್ರಜ್ಞೆಯ ಪೂರ್ಣದೃಷ್ಟಿಗೆ."[೩೦]

ಮಲೆಗಳಲ್ಲಿ ಮದುಮಗಳು ಕೃತಿಯ ಮೂಲಕ ಕುವೆಂಪು ದರ್ಶನಪಡಿಸುವುದೇನೆಂದರೆ ಸರ್ವೋದಯ, ಸಮನ್ವಯ ಹಾಗೂ ಪೂರ್ಣದೃಷ್ಟಿಗಳನ್ನು ಇವುಗಳ ಮೂಲಕವೇ ತಾನು ನಂಬಿದ ಬದುಕನ್ನು ಕಟ್ಟಿದ್ದು, ಕಂಡದ್ದು, ಕಾಣಿಸಿದ್ದು. ಈ ಎಲ್ಲವುಗಳ ಹಿಂದೆ ಕುವೆಂಪು ತಮ್ಮ ಪರಿಸರ ದೃಷ್ಟಿಯೊಂದನ್ನು ಕಟ್ಟಿಕೊಂಡಿದ್ದಾರೆ. ಇಂಥ ದೃಷ್ಟಿಯಲ್ಲಿ ಜೀವ ಸಮಾನತೆಯ ಧೋರಣೆ ಮೇಳೈಸಿದೆ. ಇದು ಈ ಕಾದಂಬರಿಯ ಕೇಂದ್ರ ಆಶಯವಾಗಿದೆ.

ಈ ಮುಂದಿನ ಉಲ್ಲೇಖದಲ್ಲಿ ಕೆ.ಸಿ. ಶಿವಾರೆಡ್ಡಿ ಅವರು ಮದುಮಗಳು ಕಾದಂಬರಿಯ ಕುವೆಂಪು ಅವರ ಜೀವಸಮಾನತೆಯ ಧೋರಣೆಯನ್ನು ಬೀಜರೂಪದಲ್ಲಿ ಸಾಂದ್ರೀಕರಿಸಿರುವುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆಂದು ಕಾಣುತ್ತದೆ.

"ಮಲೆಗಳಲ್ಲಿ ಮದುಮಗಳು" ಕೃತಿಯಲ್ಲಿ ಪ್ರಕಟಗೊಳ್ಳುವ ಬದುಕು ಕೇವಲ ಮಾನವ ಸಮುದಾಯದ ಕಥೆಯಲ್ಲ. ಅಖಂಡ ಪರಿಸರ ಕಥನ. ಆಧುನಿಕ ಪರಿಸರ ಶಾಸ್ತ್ರದ ವ್ಯಾಖ್ಯೆಗೆ ಸಮರ್ಥ ಉದಾಹರಣೆ ಈ ಕೃತಿ. ಆಧುನಿಕ ಮನುಷ್ಯನ ಪರಿಸರ ಧೋರಣೆಗಳನ್ನು ಈ ಕಾದಂಬರಿ ಹಲವು ಮಜಲುಗಳಲ್ಲಿ ಪ್ರಶ್ನಿಸುತ್ತದೆ. ಕಾದಂಬರಿಯ ಆರಂಭದ ಪೀಠಿಕಾ ಪದ್ಯವೇ ಪರಿಸರದ ವ್ಯಾಖ್ಯೆ. ಇದು ಪರಿಸರದಲ್ಲಿ ಮನುಷ್ಯ ಮುಖ್ಯನಾಗುವ ಧೋರಣೆಯನ್ನೇ ನಿರಾಕರಿಸುತ್ತದೆ. ಮಾನ್ಯ - ಅಮಾನ್ಯ, ಮುಖ್ಯ - ಅಮುಖ್ಯ, ನಾಯಕ - ಸಾಮಾನ್ಯ, ಆದರ - ಅನಾದರ ಈ ಬಗೆಯ ಸ್ತರಗಳನ್ನು ನಿರಾಕರಿಸಿ ಪರಿಸರ ಸಿದ್ಧಾಂತಗಳಿಗೆ ಹೊಸ ಕಾಣ್ಕೆಯನ್ನು ಪ್ರಕಟಿಸುತ್ತದೆ. ಆಧುನಿಕ ಜಗತ್ತಿನ ಪರಿಸರವಾದಿಗಳು ಮಂಡಿಸುತ್ತಿರುವ "ಜೀವ ಸಮಾನತಾ ಧೋರಣೆ"ಯ ಪರಿಸರವಾದ, "ಮದುಮಗಳು" ಕಾದಂಬರಿಯ ಮುಖ್ಯ ಭಿತ್ತಿಯಾಗಿರುವುದು ಇದರ ಅನನ್ಯತೆಯಾಗಿದೆ.[೩೧]

ಇಲ್ಲಿ ಮದುಮಗಳು ಕಾದಂಬರಿಯ ಅಖಂಡ ಪರಿಸರ ಕಥನಗೊಳ್ಳುವ ಗ್ರಹಿಕೆಯನ್ನು ಕಾಣುತ್ತೇವೆ. ಪರಿಸರ ವಿಜ್ಞಾನೀಯ ದೃಷ್ಟಿಯಲ್ಲಿ ಈ ಕಥನವನ್ನು ಓದುವ ಮಾದರಿಗೆ ಇದು ಉದಾಹರಣೆಯಾಗಿದೆ.

ಕಾದಂಬರಿಯಲ್ಲಿ ಓದುಗರಿಗೆ ನೀಡುವ ಎಚ್ಚರಿಕೆಯಲ್ಲಿಯೇ ಕಾದಂಬರಿಯನ್ನು ಗ್ರಹಿಸಬೇಕಾದ ಕ್ರಮವನ್ನು ನಿರ್ದೇಶಿಸಿ ಬಿಟ್ಟಿದ್ದಾರೆ. ಪ್ರತಿಯೊಂದು ಪಾತ್ರ, ಘಟನೆ, ಸನ್ನಿವೇಶ, ಕಾದಂಬರಿಯ ನಡೆ ಎಲ್ಲವೂ ಈ ಕಾಣ್ಕೆಯಲ್ಲಿಯೇ ಮೈಪಡೆಯುತ್ತವೆ. ಈ ಮೂಲಕವೇ ಈ ಕೃತಿಗೆ ಸಾರ್ವತ್ರಿಕ ಹಾಗೂ ಸಾರ್ವಕಾಲಿಕ ಆಯಾಮ ಪ್ರಾಪ್ತವಾಗಿದೆ.

ಮದುಮಗಳು ಕಾದಂಬರಿಯ ಕಥನವೇ ವಿಶ್ವಮಾನವ ಬದುಕಿನ ಅರ್ಥವನ್ನು ಕಂಡುಕೊಳ್ಳುವ ಮಾದರಿಯದ್ದಾಗಿದೆ.

ಅಸಂಖ್ಯ ಪಾತ್ರಗಳನ್ನು, ದಟ್ಟ ಮಲೆನಾಡಿನ ಸಮೃದ್ಧ ಬದುಕನ್ನು ಕಟ್ಟಿಕೊಡುವ ಈ ಕೃತಿ ಸುಮಾರು ಸಾವಿರ ಪುಟಗಳಲ್ಲಿ ಚಿತ್ರಿತವಾಗಿದೆ. ಇದು

❖ ಸ್ಥಳೀಯ ಪುರೋಹಿತಶಾಹಿಯನ್ನು,
❖ ಭೂ ಮಾಲೀಕರ ದರ್ಪ - ದೌರ್ಜನ್ಯಗಳನ್ನು, ದೀನದಲಿತರಲ್ಲಿ ಅವರು ತೋರುವ ಕ್ರೌರ್ಯಾವಸ್ಥೆಗಳನ್ನು,
❖ ವಸಾಹತು ಸಂಸ್ಕೃತಿಯು ಮೆಲ್ಲಮೆಲ್ಲನೆ ತನ್ನ ಬೇರುಗಳನ್ನು ಬಿಡಲು ರೂಪಿಸುತ್ತಿರುವ ಹೂನ್ನಾರುಗಳನ್ನು,
❖ ಸ್ಥಳೀಯ ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಬದುಕಿನ ಅವನತಿಯ ಹೆಜ್ಜೆಗಳನ್ನು ನಿರೂಪಿಸುತ್ತದೆ. ಹಾಗೆಯೇ ಕುವೆಂಪು ಸಂವೇದನೆ ದೀನ ದಲಿತರ, ಸ್ತ್ರೀಯರ ದಮನಿತ ಕಥನಗಳೊಂದಿಗೆ ಅಂಥವರಲ್ಲಿ ಚಿಮ್ಮುವ ಜೀವ ಚೈತನ್ಯವನ್ನು ಈ ಕೃತಿಯಲ್ಲಿ ನಿರೂಪಿಸಿದ್ದಾರೆ.

ಮೊದಲೇ ಪ್ರಸ್ತಾಪಿಸಿದಂತೆ ಕುವೆಂಪು ಅವರಿಗೆ ಇದು ಕೇವಲ ಕಾದಂಬರಿಯಲ್ಲ, ಕಥನವೂ ಅಲ್ಲ. ಇದೊಂದು "ಬ್ರಾಹ್ಮೀಪ್ರಜ್ಞೆಯ ಪೂರ್ಣದೃಷ್ಟಿ"ಯ ಅಮೃತತತ್ವದ ವಿಶ್ವಮಾನವ ಸಂದೇಶ.

೧೯೦೪ರಲ್ಲಿ ಮಲೆನಾಡಿನಲ್ಲಿ ಹುಟ್ಟಿ, ತಮ್ಮ ಜೀವಿತಾವಧಿಯ ಬಹುಭಾಗವನ್ನು ಮೈಸೂರಿನಲ್ಲಿ ಕಳೆದ ಕುವೆಂಪು ಅವರು ತಮ್ಮ ಕೃತಿಗಳಲ್ಲಿ ಅಭಿವ್ಯಕ್ತಿಸಿದ್ದು ಬಾಲ್ಯ ಹಾಗೂ ಯೌವನದಲ್ಲಿ ತಾವು ಕಂಡುಂಡ ಮಲೆನಾಡಿನ ಪರಿಸರವನ್ನು. ಬಾಲ್ಯದಲ್ಲಿಯೇ ಸಾಹಿತ್ಯ ಮತ್ತು ತತ್ವಶಾಸ್ತ್ರದ ಆಕರ್ಷಣೆಗೆ ಒಳಗಾದ ಕುವೆಂಪು ಸಾಹಿತ್ಯವನ್ನು ಜೀವನದ ಪರಮ ಗುರಿ ಹಾಗೂ ಧ್ಯಾನವಾಗಿ ಸ್ವೀಕರಿಸಿದರು. ಆ ಸ್ವೀಕಾರದಲ್ಲಿ, ಧ್ಯಾನದಲ್ಲಿ ಕಟ್ಟಿದ್ದು ಪರಿಸರ ವೈವಿಧ್ಯಗಳ ಕಥನಗಳನ್ನು. ಸುಮಾರು ೧೫ ಸಾವಿರ ಪುಟಗಳಷ್ಟು ಇರುವ ಇವರ ಸಾಹಿತ್ಯದಲ್ಲಿ ಪರಿಸರವೇ ಅಗ್ರಸ್ಥಾನವನ್ನು ಪಡೆದುಕೊಂಡಿದೆ.

ಈ ಕಾದಂಬರಿಯ ಕಾಲ ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕ. ವಸಾಹತುಶಾಹಿ ಸಂಸ್ಕೃತಿಯು ರಾಜಕೀಯವಾಗಿ, ಧಾರ್ಮಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಎಲ್ಲ ಮಟ್ಟಗಳಲ್ಲಿಯೂ ತನ್ನ ನೆಲೆಯನ್ನು ಊರುತ್ತಿದ್ದ ಕಾಲ. ಸ್ಥಳೀಯ ಬದುಕಿನ ಆಚಾರ ವಿಚಾರಗಳ ಹಾಗೂ ಸಾಂಪ್ರದಾಯಿಕ ರೂಢಿಗತ ನಂಬಿಕೆಗಳ ಮತ್ತು ಜೀತ ಪದ್ಧತಿಯಂಥ ಅಮಾನವೀಯ ಕ್ರೌರ್ಯಗಳಿಗೆ ಒಳಗಾಗಿ ಗುತ್ತಿ ತನ್ನ ಪರಿಸರದಿಂದಲೇ ಪಲಾಯನಗೊಳ್ಳಬೇಕಾದ ಅನಿವಾರ್ಯತೆಯ ಕಥನವನ್ನು 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಬಿಡಿಸಿಡುತ್ತದೆ.

ಕುವೆಂಪು ಅವರ ಈ ಕಾದಂಬರಿಯ ಪರಿಸರ ಪ್ರತೀಕಗಳು ಇಂಥ ಪಾತ್ರಗಳ ಬದುಕು ಹಾಗೂ ಸನ್ನಿವೇಶಗಳ ಒಡನಾಟದಲ್ಲಿಯೇ ಚಲಿಸುತ್ತವೆ. ಮುಂಗಾರು ಮಳೆಯ ಆರಂಭ ಹಾಗೂ ತಿಮ್ಮಿಯನ್ನು ಹಾರಿಸಿಕೊಂಡು ಬರಲು ಹೊರಟ ಗುತ್ತಿಯ ಪ್ರಯಾಣದೊಂದಿಗೆ ಆರಂಭವಾಗುವ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕಥನ ಸಹ್ಯಾದ್ರಿಯ ಅಖಂಡ ಪರಿಸರವನ್ನು ತೆರೆದಿಡುತ್ತದೆ. ಮುಂಗಾರು ಮಳೆಯ ಆರ್ಭಟ, ಕಾರ್ಗತ್ತಲೆ, ಮಿಣುಕು ಹುಳುಗಳ ಮಿನುಗು, ಜೀರುಂಡೆಗಳ ಕರ್ಕಶ ಶಬ್ದ, ಇಂಬಳಗಳ ಕಾಟ, ಜೀರ್ದುಂಬಿಗಳ ಜೀರುದನಿಯ ಘೋರ ಪರಿಸರದಲ್ಲಿ ಎದುರಾಗುವ ಗುತ್ತಿ ಇಂಥ ರುದ್ರ ಪರಿಸರದ ಒಂದು ಅಂಗವಾಗಿಯೇ ಕಾಣುತ್ತಾನೆ. ಪರಿಸರ ಸ್ನೇಹಿ ಹಾಗೂ ಪರಿಸರದ ಅವಿನಾ ಸಂಬಂಧಿಯಂತೆ ಕಾಣುವ ಗುತ್ತಿ

> "....... ಆ ಪ್ರಕೃತಿಯ ಒಂದಂಶವಾಗಿದ್ದನು ; ಬೆಟ್ಟದಲ್ಲಿ ಬಂಡೆಯಂತೆ, ಕಾಡಿನಲ್ಲಿ ಮರದಂತೆ ಅದರ ಒಂದಂಗವಾಗಿದ್ದನು."[೩೨]

ಇಂಥ ಪರಿಸರದ ಒಂದು ಅಂಶ ಅಥವಾ ಒಂದು ಅಂಗದಂತಿರುವ ಗುತ್ತಿಯ ಈ ಚಿತ್ರ ಪರಿಸರ ವ್ಯಾಖ್ಯೆಯ ಹಾಗೂ ಅರ್ಥದ ಉತ್ತಮ ಉದಾಹರಣೆಯಾಗಿದೆ. ಪರಿಸರದೊಂದಿಗಿನ ಇವನ ಸಂಬಂಧ ನಾಗರೀಕ ಬದುಕು ಹಾಗೂ ಪರಿಸರದ ನಡುವಿನ ಸಂಬಂಧಗಳನ್ನು ಪರಿಚಯಿಸುತ್ತದೆ. ಪರಿಸರದ ಭೌತಿಕ ಸಂಬಂಧಗಳಂತೆಯೇ ನಾಯಿ ಮತ್ತು ನಾಯಿಗುತ್ತಿಯ ಸಂಬಂಧಗಳನ್ನು ಈ ಕೃತಿಯ ಉದ್ದಕ್ಕೂ ಕಾಣುತ್ತಾ ಹೋಗುತ್ತೇವೆ.

> ಹೋದ ರಾತ್ರಿಯ ಮಾರಿ ಮಳೆಯಲ್ಲಿ ತೇಲಿಬಂದು ಕುತ್ತುರೆಯಾದಂತಿದ್ದ ಹಲಸಿನ ತರಗಿನ ನಡುವೆ ಬಿದ್ದಿದ್ದ ಒಂದು ಸೆಗಣಿ ಮುದ್ದೆಯಿಂದ ಒಂದು ಓಡುಹುಳು ಸಣ್ಣದೊಂದು ಉಂಡೆಯನ್ನು ರಚಿಸಿ ಅದನ್ನು ಹಿಂದುಮುಂದಾಗಿ ತನ್ನ ಹಿಂಗಾಲುಗಳಿಂದ ನೂಕಿಕೊಂಡು ಹೋಗುತ್ತಿತ್ತು. ಅತ್ಯಮೂಲ್ಯವಾದ ಪದಾರ್ಥವನ್ನು ಅತಿಪ್ರಯಾಸದಿಂದ ಸಾಗಿಸುವ ಸಾಹಸದಲ್ಲಿ ತೊಡಗಿದಂತಿತ್ತು ಅದರ ದೃಢ ಪ್ರಯತ್ನ. ಆ ಉಂಡೆ ಒಂದು ಸಣ್ಣ ದಿಬ್ಬವನ್ನು ಹತ್ತಿ ಅದರ ನೆತ್ತಿಗೆ ಬಂದೊಡನೆ ಮತ್ತೆ ಕೆಳಕ್ಕುರುಳಿತು. ಓಡುಹುಳು ಮತ್ತೆ ಅದನ್ನು ಬಳಿಸಾರಿ ತನ್ನ ಹಿಂಗಾಲುಗಳಿಂದ ತಬ್ಬಿಹಿಡಿದು ದಬ್ಬತೊಡಗಿತು. ಹೀಗೆ ಒಂದೆರಡು ಗೇಣು ಹೋಗುವುದರೊಳಗಾಗಿ ನಾನಾ ಅಡಚಣೆಗಳಿಗೆ ಒಳಗಾದರೂ ಧೃತಿಗೆಡದೆ ನಿರಾಶವಾಗದೆ ಕಿನಿಸಿಕೊಳ್ಳದೆ ಪ್ರಶಾಂತವಾಗಿಯೆ ತನ್ನ ಕೆಲಸವನ್ನು ಸಾಗಿಸುತ್ತಿತ್ತು. ಗುತ್ತಿಯ ಕಣ್ಣೇನೋ ಅದನ್ನೆ ಕುತೂಹಲದಿಂದ ನೋಡುತ್ತಿತ್ತು. ಅವನ ಮನಸ್ಸಿನ ಹೊರ ಅಂಚು ಅದರ ದೃಢತೆಯ ವಿಚಾರವಾಗಿ ಚಿಂತಿಸಿ ಶ್ಲಾಘಿಸುತ್ತಲೂ ಇತ್ತು.[೩೩]

ಕಾದಂಬರಿಯ ಓಡುಹುಳುವಿನ ಪ್ರಸಂಗ ಆಲ್ಬರ್ಟ್ ಕಾಮುವಿನ 'ಮಿಥ್ ಆಫ್ ಸಿಸಿಫಸ್'ನ ತತ್ವವನ್ನು ನೆನಪಿಸುತ್ತದೆ. ಓಡುಹುಳು ತನ್ನ ದಾರಿಗೆ ಎದುರಾದ ಅಡಚಣೆಗಳನ್ನು ಲೆಕ್ಕಿಸದೆ ದೃಢತೆಯಿಂದ ಸೆಗಣಿ ಉಂಡೆಯನ್ನು ದೂಡುವ ಪ್ರಸಂಗ ಮನುಷ್ಯ ಮತ್ತು ಪರಿಸರದ ಅವಿನಾಭಾವ ಸಂಬಂಧವನ್ನು ಕಾಣಿಸುತ್ತದೆ. ಅನಾದಿಕಾಲದಿಂದ ಮನುಷ್ಯ ಪರಿಸರದೊಂದಿಗೆ ಮುಖಾಮುಖಿಯಾಗುವ, ಹತಾಶನಾಗುವ, ಸಾಹಸ ಹಾಗೂ ದೃಢತೆಗಳಿಂದ ಪರಿಸರದೊಂದಿಗೆ ರೂಢಿಸಿಕೊಂಡಿರುವ ಸಂಬಂಧಗಳನ್ನು ಈ ರೂಪಕ ಧ್ವನಿಸುತ್ತದೆ. ಇಂಥ ಎಲ್ಲ ಪ್ರಯತ್ನ ಹಾಗೂ ಸಾಹಸಗಳಿಂದ ತಿಮ್ಮಿಯನ್ನು ಹಾರಿಸಿಕೊಂಡು ಬರಲು ಹೊರಟ ಗುತ್ತಿಯ ಸಾಹಸದ ಕಥೆ ಮನುಷ್ಯ ಹಾಗು ಜೀವಕೇಂದ್ರಿತ ಸಂಬಂಧಗಳನ್ನು ಸ್ಪಷ್ಟಪಡಿಸುತ್ತದೆ. ಈ 'ಓಡುಹುಳುವಿನ ಸೆಗಣಿ ಉಂಡೆಯ ಸಾಹಸ ಒಳಗಿನ ಏಕಾಗ್ರತೆಗೆ ಆಲಂಬನ ರೂಪವಾದ ಬಹಿರಿಂದ್ರಿಯ ಘಟನೆ ಮಾತ್ರವಾಗಿತ್ತು. ಅವನ ಅಂತಃ ಕರಣವನ್ನೆಲ್ಲ ಆಕ್ರಮಿಸಿದ್ದ ವಿಚಾರವೆಂದರೆ ತಿಮ್ಮಿಯ ಅಪಹರಣ! ಅದರ ಸಾಧ್ಯಾಸಾಧ್ಯತೆ, ಅದರ ಅಪಾಯ, ಅದರಿಂದ ತಪ್ಪಿಸಿಕೊಳ್ಳುವ ಉಪಾಯ' -[೩೪]ಗಳ ವಿಚಾರವನ್ನೇ ಈ ಪ್ರಸಂಗ ಸೂಚಿಸುತ್ತದೆ.

ಕಾದಂಬರಿಯ ಎಲ್ಲ ಪಾತ್ರಗಳ ಹುಲಿಕಲ್ಲು ನೆತ್ತಿಯ ಏರುವಿಕೆಯ ಸಾಹಸ, ಸೋಲು, ದೃಢತೆಗಳು, ಮೇಲೆ ಸೂಚಿಸಿದ ಮನುಷ್ಯ ಮತ್ತು ಪರಿಸರದ ಸಂಬಂಧಾಂತರಗಳನ್ನು ಮುಂದಿಡುತ್ತದೆ. ಗುತ್ತಿಯ

ಪಯಣದೊಂದಿಗೆ ಎದುರಾಗುವ ಹುಲಿಕಲ್ಲು ಗುಡ್ಡದ ಕಾಡಿನ ಜೀವ ವೈವಿಧ್ಯತೆ ಹಾಗೂ ಮನುಷ್ಯ ಸಂಬಂಧಗಳನ್ನು ಕಾದಂಬರಿಯ ಈ ಕೆಳಗಿನ ಭಾಗ ಸ್ಪಷ್ಟಪಡಿಸುತ್ತದೆ.

ಬರಬರುತ್ತಾ ಮಳೆ ಏರತೊಡಗಿತು. ಕಾಡು ದಟ್ಟವಾಯಿತು. ಹಕ್ಕಿಪಕ್ಷಿಗಳ ಹಾರಾಟವೂ ಉಲಿಹವೂ ವಿರಳವಾಗಿ ಕಡೆಕಡೆಗೆ ನಿಂತೆ ಹೋಯಿತು. ಆ ಅರಣ್ಯ ನಿಬಿಡತೆಯಲ್ಲಿ ಬಿಸಿಲೂ ಅಡಗಿದಂತಾಗಿ ಮರಗತ್ತಲು ಹೆಚ್ಚಾಯಿತು.

....

ಆ 'ಹುಲಿಕಲ್ಲು' ಗುಡ್ಡದ ಕಾಡು ಆ ಕಡೆಯಲ್ಲೆಲ್ಲ ಅತ್ಯಂತ ದಟ್ಟವಾದುದೆಂದೂ ಜೀವಾದಿಗಳಿಗೆ ನೆಲೆಬೀಡೆಂದೂ ಹೆಸರುವಾಸಿಯಾಗಿತ್ತು. ಅದರ ಕಡಿಪೂ ನಿಬಿಡತೆಯೂ ಎಷ್ಟರಮಟ್ಟಿನದಾಗಿತ್ತೆಂದರೆ 'ದೊಡ್ಡ ಬೇಟೆಗೆ ಹೋಗುವವರೂ ಆ ಕಾಡಿಗೆ ಹೋಗಲು ಹಿಂಜರಿಯುತ್ತಿದ್ದರು. ಕಡಿದಾದ ದರಿಕಂದರಗಳಿಂದ ದುರ್ಗಮವಾಗಿದ್ದ ಅದನ್ನು ಸೋವಲು ಹಳುನುಗ್ಗಲಿಕ್ಕೇ ಕನಿಷ್ಠಪಕ್ಷ ನೂರು ನೂರೈವತ್ತು ಜನರಾದರೂ ಬೇಕಾಗುತ್ತಿತ್ತು. ಇನ್ನು ಬಿಲ್ಲಿಗೆ ಕೂರಲು ಕಡಿಮೆ ಎಂದರೆ ಐವತ್ತು ಅರವತ್ತು ಕೋವಿಗಾರರಾದರೂ ಬೇಕಿತ್ತು. ಎಲ್ಲಿಂದ ತರುವುದು ಅಷ್ಟು ಕೋವಿಗಳನ್ನು? ಆ ನಾಡಿನಲ್ಲೆಲ್ಲ ಕೇಪಿನ ಕೋವಿ ಇಟ್ಟುಕೊಂಡವರ ಸಂಖ್ಯೆಯೆ ಬೆರಳೆಣಿಸುವಷ್ಟಿತ್ತು. ಇನ್ನುಳಿದ ಕಂಡಿಗಳಿಗೆ ಹಂದಿ ಬಲೆ ಮಿಗದ ಬಲೆ ಮೊಲದ ಬಲೆಗಳೆ ಗತಿ! ಅದಕ್ಕಾಗಿಯೆ ವರುಷಕ್ಕೊಮ್ಮೆಯೊ ಎರಡು ವರುಷಕ್ಕೊಮ್ಮೆಯೊ ಹುಲಿಕಲ್ಲು ಕಾಡಿಗೆ 'ದೊಡ್ಡ ಬೇಟೆಗೆ' ಬಂದರೆ ಅದೇ ಹೆಚ್ಚು. ಬೆಟ್ಟಳ್ಳಿ ಸೇರೆಗಾರರು ಹಳೆಮನೆ ಸೇರೆಗಾರರು ತಮ್ಮ ಕಡೆಯ ಆಳುಗಳಿಗೆಲ್ಲ ಒಂದು ದಿನ ಉಳಿ ಕೊಟ್ಟು, ಅವರಿಗೆಲ್ಲ ಧೈರ್ಯ ಹೇಳಿ, ಹಳು ಹೊಡೆಯಲು ಕಳಿಸುತ್ತಿದ್ದರು. ಕೋಣೂರಿನ ಗಟ್ಟದ ತಗ್ಗಿನವರ ಬಿಡಾರಗಳಿಂದಲೂ ಸ್ವಲ್ಪ ಹಳುವಿನವರು ಒದಗುತ್ತಿದ್ದರು. ಇನ್ನು ಬೇಲರು, ಹೊಲೆಯರು, ಮಾದಿಗರು, ಕರಾದಿಯವರೂ ಆ ಸಾಹಸದಲ್ಲಿ ಭಾಗಿಯಾಗುತ್ತಿದ್ದರು. ಅಂತಹ ಸಮಯಗಳಲ್ಲಿ ಅನೇಕರಲ್ಲಿ ಜೀವದಾಸೆಯನ್ನು ಗೆಲ್ಲುತ್ತಿತ್ತು ಬಾಡಿನಾಸೆ ; ಕೆಲವರು ಬೇಟೆಯ ಸಾಹಸದ ಹುಚ್ಚಿನಿಂದಲೂ ಬಂದು ಸೇರುತ್ತಿದ್ದರು. ಬತ್ತಿಕೋವಿ, ಭರ್ಜಿ, ಈಟಿ, ಉದ್ದಗತ್ತಿ, ಬಿಲ್ಲುಬಾಣಗಳ ಸಾಹಸಿಗಳೂ ಅಲ್ಪಸ್ವಲ್ಪ ಇರುತ್ತಿದ್ದರು. ಕನ್ನಡ ಜಿಲ್ಲೆಯಿಂದ ದುಡಿಮೆಗಾಗಿಬಂದ ತಗ್ಗಿನವರಂತೂ ತಮ್ಮ ಮಕ್ಕಳನ್ನು ಹೆದರಿಸಿ ಸುಮ್ಮನಿರಿಸುವುದಕ್ಕೂ ಆ 'ಹುಲಿಮಲೆ'ಯ ಹೆಸರನ್ನೇ ಹೆಚ್ಚಾಗಿ ಬಳಸುತ್ತಿದ್ದರು.

....

ಗುತ್ತಿ ನೋಡುತ್ತಾನೆ, ನಾಯಿ ತುಸುದೂರವೆ ಹಳುವಿನಲ್ಲಿ ಬಿದ್ದಿರುವ ಒಂದು ಮರದ ದಿಮ್ಮಿಯ ಕಡೆ ನೋಡಿ ಬೊಗಳುತ್ತಿದೆ! ಹಾಗಾದರೆ ಆ ದಿಮ್ಮಿಯ ಹತ್ತಿರ ಯಾವುದಾದರು ಕಾಳಿಂಗನ ಹಾವೊ ಸರ್ಪನ ಹಾವೊ ಇರಬಹುದೆಂದು ಗುತ್ತಿ ನೆಲವನ್ನು ಪರೀಕ್ಷಿಸುತ್ತಾ ಮುಂದುವರಿಯುವಷ್ಟರಲ್ಲಿ ನಾಯಿ ಬೊಗಳಿ ಬೊಗಳಿ ಹಾರಿನೆಗೆದು ಆ

ದಿಮ್ಮಿಯನ್ನು ಕಚ್ಚಿಬಿಟ್ಟಿತು! ಅಯ್ಯಯ್ಯೊ! ನೋಡುತ್ತಾನೆ : ಆ ದಿಮ್ಮಿಯೆ ಜೀವಂತ ಹೆಬ್ಬಾವು ! ಚಲಿಸುತ್ತಿಲ್ಲ. ಮೊಲವೊ ಬರ್ಕವೊ ಅಥವಾ ಇನ್ನಾವ ಪ್ರಾಣಿಯನ್ನೋ ಇಡಿಯೆ ನುಂಗಿ ನಿಶ್ಚಲವಾಗಿ ಬಿದ್ದಿದೆ.[೩೫]

ತನ್ನ ಅನುಭವದಿಂದ ಪರಿಸರದ ಸೂಕ್ಷ್ಮತೆಗಳನ್ನೆಲ್ಲ ಚೆನ್ನಾಗಿ ಅರಿತಿದ್ದ ಗುತ್ತಿಯಂತೆಯೇ ಇಲ್ಲಿನ ಅನೇಕ ಪಾತ್ರಗಳು ಪರಿಸರದೊಂದಿಗೆ ವರ್ತಿಸುತ್ತವೆ. ಗುತ್ತಿ ಕಾಡಿನ ಅಪಾಯಕರ ಜಂತು ಹಾಗೂ ಇತರ ಜೀವಿಗಳೊಂದಿಗೆ ವರ್ತಿಸುವ ಕ್ರಮವೇ ಇದಕ್ಕೆ ಸಾಕ್ಷಿಯಾಗಿದೆ. ತನ್ನ ಪಯಣದಲ್ಲಿ ಗುತ್ತಿಗೆ ಎದುರಾಗುವ ಕಾಡಿನ ಜೀವಜಾಲ, ಪಕ್ಷಿ ಸಮೂಹ, ಕಾಡಿನ ಸಾಂದ್ರತೆ, ಭೀಕರ ಮಳೆ ಅವನ ಅನುಭವ ಪ್ರಪಂಚವೇ ಆಗಿದೆ. ಇಲ್ಲಿ ಎದುರಾಗುವ ಪರಿಸರದ ರೌದ್ರ ಹಾಗು ಭೀಕರತೆಗಳು ಅವನ ಜೀವನದ ಸಹಜ ವ್ಯಾಪಾರಗಳಂತೆ ಕಾಣುತ್ತವೆ. ಹಾಗಾಗಿಯೇ ಅವೆಲ್ಲವನ್ನು ಅವನು ತನ್ನ ಅನುಭವದಿಂದಲೇ ಎದುರಿಸುತ್ತಾ ನಡೆಯುತ್ತಾನೆ ಹಾಗೂ ವರ್ತಿಸುತ್ತಾನೆ. ಇಂಥ ಪರಿಸರದೊಂದಿಗಿನ ಸಂಬಂಧಗಳನ್ನು ಎಲ್ಲ ಪಾತ್ರಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲು ಸಾಧ್ಯವಿದೆ. ಈ ಬಗೆಯ ಅಭಿವ್ಯಕ್ತಾ ಕ್ರಮದಲ್ಲಿ ಹಾಗು ದೃಷ್ಟಿ ಧೋರಣೆಗಳಲ್ಲಿ ಕುವೆಂಪು ಅವರ ಪರಿಸರ ವಿಜ್ಞಾನೀಯ ದೃಷ್ಟಿ ತನ್ನ ಆಧ್ಯಾತ್ಮದ ಸ್ಪರ್ಶದೊಂದಿಗೆ ಕಾದಂಬರಿಯ ಎಲ್ಲ ಕಡೆಗಳಲ್ಲಿ ಮಡುಗಟ್ಟಿರುವುದನ್ನು ಗುರುತಿಸಬಹುದಾಗಿದೆ.

ಭಾರತೀಯ ಆಧ್ಯಾತ್ಮ ದೃಷ್ಟಿಕೋನವು ಹಾಗು ಪರಿಸರ ವಿಜ್ಞಾನೀಯ ಎಚ್ಚರವು ಏಕತ್ರಗೊಂಡು ಈ ಕೃತಿಯಲ್ಲಿ ಪ್ರಕಟಗೊಳ್ಳುವುದು ಒಂದು ಸಂಭ್ರಮದಂತೆ ಕಾಣುತ್ತದೆ. ಪರಿಸರ ವಿಜ್ಞಾನೀಯ ದೃಷ್ಟಿಯು ಇಂಥ ಕೃತಿಗಳಲ್ಲಿ ಸಾಂದ್ರಗೊಂಡಿರುವುದನ್ನು ಗುರುತಿಸಬಹುದಾಗಿದೆ. 'ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡಿರುವ - ಚರಾಚರ ಜಗತ್ತಿನ ಸಮಗ್ರ ದೃಷ್ಟಿ' ಈ ಕೃತಿಯ ಹಿಂದೆ ಕೆಲಸ ಮಾಡಿದೆ. ಈ ಮೊದಲೇ ಹೇಳಿದಂತೆ ಕುವೆಂಪು ಅವರ ಸಾಹಿತ್ಯ ಏಕಕಾಲಕ್ಕೆ ಪರಿಸರ ವಿಜ್ಞಾನೀಯವೂ, ಆಧ್ಯಾತ್ಮಿಕವೂ ಆಗುವ ಸಂಲಗ್ನತೆ ಈ ಕೃತಿಯ ಮತ್ತೊಂದು ವೈಶಿಷ್ಟ್ಯ.

೧೨. ಆಧ್ಯಾತ್ಮ ಮತ್ತು ಪರಿಸರ ದೃಷ್ಟಿ

ಭಾರತೀಯ ಶ್ರೇಣೀಕೃತ ಸಮಾಜದ ವ್ಯವಸ್ಥೆಯಲ್ಲಿನ ಕೊನೆಯ ಹಂತದ ಯಃಕಚಿತ್ ಎನಿಸುವ ಕ್ಷುದ್ರ ಸಮುದಾಯ ಆಧ್ಯಾತ್ಮದ ಹತ್ತಿರ ಸುಳಿಯಲು ಸಾಧ್ಯವಿಲ್ಲವೇನೊ. ಆದರೆ ಕುವೆಂಪು ಅವರ ಕೃತಿಗಳಲ್ಲಿ ಶೂದ್ರಾತಿ ಶೂದ್ರರು, ದಲಿತ ಸಮುದಾಯ ಹಾಗು ಸ್ತ್ರೀ ಸಮುದಾಯಗಳು ತಮ್ಮ ಸಹಜ ವರ್ತನೆಗಳಿಂದಲೇ ಬದುಕಿನ ಕ್ರಮಗಳಿಂದಲೇ ಆಧ್ಯಾತ್ಮದ ಹಂತವನ್ನು ತಲುಪುವ ಎಲ್ಲ ಸಾಧ್ಯತೆಗಳನ್ನು ಕುವೆಂಪು ಸೃಷ್ಟಿಕ್ರಿಯೆ ಅನುವು ಮಾಡಿಕೊಡುತ್ತದೆ. ದಲಿತಸಮುದಾಯದ ಹೆಣ್ಣು ಮಗಳಾದ ತಿಮ್ಮಿ ಹುಲಿಕಲ್ಲು ನೆತ್ತಿಯಲ್ಲಿ ಕಾಣುವ ಸೂರ್ಯೋದಯ, ರಾತ್ರಿ ಹಗಲು ಎನ್ನದೆ ಐಹಿಕ ಸಂಪತ್ತಿನ ಸಂಪಾದನೆ ಮತ್ತು ಸಂರಕ್ಷಣೆಯಲ್ಲಿಯೇ ಮನಸ್ಸನ್ನು ಕೇಂದ್ರೀಕರಿಸಿದ ಸುಬ್ಬಣ್ಣ ಹೆಗಡೆ ಕಾಣುವ ಸೂರ್ಯೋದಯ, ಅದರಿಂದ ಅನುಭವಿಸುವ ಆಧ್ಯಾತ್ಮದ ಅನುಭವ ಸ್ಪರ್ಶಗಳ ಸೃಷ್ಟಿ ಈ ಶತಮಾನದ ಕ್ರಾಂತಿಕಾರಿ ಘಟನೆಗಳಂತೆ ಕಾಣಿಸುತ್ತವೆ. ಇದಕ್ಕೆ ಉದಾಹರಣೆಯಾಗಿ ಕಾದಂಬರಿಯ ಈ ಕೆಳಗಿನ ಎರಡು ಉದಾಹರಣೆಗಳನ್ನು ನೋಡಬಹುದಾಗಿದೆ.

ಅಮಾವಾಸ್ಯೆಗೆ ಮುನ್ನಿನ ಕಮಾನಿನಾಕಾರದ ಹೊಗೆಗಂಪಿನ ಕ್ಷೀಣಚಂದ್ರನನ್ನು ಗಮನಿಸಿ "ಏ ಅದು ತಿಂಗಳು ಕಣೇ!" ಎಂದನು.

"ಅದನ್ನಲ್ಲ ನಾ ಹೇಳಿದ್ದು. ಅಲ್ಲಿ ನೋಡು, ಓ ಅಲ್ಲಿ, ಆ ಗುಡ್ಡದ ಹಿಂದಿನ ಗುಡ್ಡದ ಹಿಂದಿನ ಗುಡ್ಡದ ನೆತ್ತಿಸಾಲಿನ ಮ್ಯಾಲೆ. ಆಕಾಸ ಹೆಂಗೆ ಕೆಂಪಾಗ್ತಾ ಅದೆ!" ಅವರಿದ್ದ ಶಿಖರದೆತ್ತರದಿಂದ ಕಾಣುತ್ತಿದ್ದು. ಶ್ರೇಣಿಶ್ರೇಣಿಯಾಗಿ ಪೂರ್ವ ದಿಗಂತದವರೆಗೂ ಹಬ್ಬಿದ್ದ ಅರಣ್ಯಾವೃತ ಪರ್ವತ ಪಂಕ್ತಿಗಳ ಕಡೆ ಕೈ ತೋರಿಸಿದ್ದಳು ತಿಮ್ಮಿ.

....

ಪೂರ್ವ ದಿಗಂತದಿಂದ ಕೆಂಡದುಂಡೆಯಾಗಿ ಕಿರಣವಿಲ್ಲದ ಸೂರ್ಯ ಮೇಲೇಳುತ್ತಿದ್ದನು. ಕಣಿವೆಗಳನ್ನು ತುಂಬಿದ್ದ ಆ ಮಂಜಿನ ನೊರೆನೊರೆಯ ಸಮುದ್ರ. ಹಸುರು ದ್ವೀಪಗಳಂತೆ ನಡುನಡುವೆ ತಲೆಯೆತ್ತಿದ್ದ ಮಲೆನೆತ್ತಿಗಳು, ಮೂಡುಬಾನಿನಲ್ಲಿ ಸಾಗುತ್ತಿದ್ದ ಆ ಮೋಡಗಳ ವರ್ಣಲೀಲೆ, ಇವುಗಳ ಸುವಿಸ್ತೃತ ಭಿತ್ತಿವೇದಿಕೆಯಲ್ಲಿ ಆವಿರ್ಭವಿಸುತ್ತಿದ್ದ ಆ ಚೈತ್ರ ರವಿಯ ಸೌಂದರ್ಯವು ತಿಮ್ಮಿಯಂತಹಳಿಗೂ ಹೃದಯದಲ್ಲಿ ಭೂಮಾನುಭೂತಿ ಸಂಚಾರವಾಗುವಂತೆ ಮಾಡಿತ್ತು.

"ಅಃ, ಭಾವ, ನಮ್ಮ ಬಿಡಾರ ಇಲ್ಲೇ ಇದ್ದಿದ್ರೆ?" ಎಂದು ಮಾತ್ರ ಹೇಳಲು ಶಕ್ತವಾಗಿತ್ತು ಅವಳಿಗೆ ತಿಳಿದಿದ್ದ ಭಾಷೆ, ಅವಳ ಚೇತನದ ಅನುಭವದ ಅಭಿವ್ಯಕ್ತಿಗೆ ಪ್ರತೀಕವಾಗಿ ಮೂಡುತ್ತಿದ್ದ ದಿನ ಸ್ವಾಮಿಗೆ ಕೈ ಮುಗಿಯುತ್ತಾ ನಕ್ಕು ಹೇಳಿದನು ಗುತ್ತಿ : "ನಿಮ್ಮ ಬಿಡಾರ ಇಲ್ಲೇ ಇದ್ದಿದ್ರಾ? ನಿನ್ನ ಮಗ್ಗಲಾಗೆ ಮನಗ್ತಿತ್ತು.... ಹುಲಿ!"

ಮನುಷ್ಯನು ತಿಳಿದುಕೊಂಡಿರುವುದಕ್ಕಿಂತಲೂ ಹೆಚ್ಚಾಗಿಯೆ ಅವನ ಅಂತಃಪ್ರಕೃತಿ ಸೃಷ್ಟಿಯ ಬಹಿಃಪ್ರಕೃತಿಗೆ ಅನುಯಾಯಿಯಾಗಿರುತ್ತದೆ. ಆತನ ಆತ್ಮಕೋಶವು ಬಹುಜನ್ಮಗಳ ಸಂಸ್ಕಾರಗಳಿಂದ ತುಂಬಿರುವಂತೆ ಆತನ ಅನ್ನಮಯಕೋಶವೂ ಪೃಥ್ವಿಯಲ್ಲಿ ಪ್ರಾಣೋತ್ಪತ್ತಿಯಾದಂದಿನಿಂದ ಮೊದಲುಗೊಂಡು ಇಂದಿನವರೆಗೆ ಜೀವವು ಕೈಕೊಂಡ ನಾನಾ ರೂಪದ ನಾನಾ ಪ್ರಯೋಗದ ನಾನಾ ಕಷ್ಟ ಸಂಕಟಗಳ ನಾನಾ ಸುಖ ಸಂತೋಷಗಳ ಮಹಾ ಸಾಹಸಯಾತ್ರೆಯ ಸಮಗ್ರ ಪರಿಣಾಮ ಮುದ್ರೆಯನ್ನೂ 'ಅಸ್ಮೃತಿ' ರೂಪದಲ್ಲಿ ಪಡೆದಿರುತ್ತದೆ. ಆ ಅಪಾರ್ಥಿವ ಮತ್ತು ಪಾರ್ಥಿವ ಸಂಸ್ಕಾರ ಕೋಶಗಳೆರಡೂ ನಮ್ಮ ಬಾಳ್ವೆಯ ಹೃದಯದ ಇಕ್ಕೆಲಗಳಲ್ಲಿ ಶ್ವಾಸಕೋಶಗಳಂತಿವೆ. ಅಪ್ರಜ್ಞಾಸೀಮೆಯಲ್ಲಿರುವ ಆ ಸಂಸ್ಕಾರಗಳಲ್ಲಿ ಯಾವುದನ್ನಾದರೂ ಮುಟ್ಟಿ ಎಚ್ಚರಿಸುವಂತಹ ಸನ್ನಿವೇಶ ಒದಗಿದರೆ ನಮಗೆ ಅಹೇತುಕ ಆನಂದವೊ ಅಕಾರಣ ಸಂಕಟವೊ ಸಂಭವಿಸಿದಂತಾಗುತ್ತದೆ. ಅಲ್ಪ ಕಾರಣದಿಂದ ಮಹತ್ತಾದ ಅನುಭವವುಂಟಾದಂತೆ ಭಾಸವಾಗಿ ಆಶ್ಚರ್ಯವಾಗುತ್ತದೆ. ಎಳಬಿಸಿಲಿನಲ್ಲಿ ಹಸುರು ಗರಿಕೆಯ ಕುಡಿಯಲ್ಲಿ ಮಿರುಗುವ ದುಂಡು ಮುತ್ತಿನ ತೆರೆದ ಇಬ್ಬನಿ, ಪ್ರಾಣದ ಪ್ರಪ್ರಾಚೀನಾನುಭವದ ಮಹಾ ಸಾಗರದ 'ಅಸ್ಮೃತಿ'ಯನ್ನು ಕೆರಳಿಸಿ, ಸಮುದ್ರ ದರ್ಶನದ ಭೂಮಾನುಭೂತಿಯನ್ನುಂಟು ಮಾಡಬಹುದು. ಕಾಡಿನಂಚಿನಲ್ಲಿ, ಬೈಗುಗಪ್ಪಿನ

ಮಬ್ಬಿನಲ್ಲಿ, ಹೆಮ್ಮರದ ದಿಂಡಿನಲ್ಲಿರುವ ಮರಕುಟಿಗನ ಗೂಡಿನ ಪೊಟ್ಟರೆ, ಅತ್ಯಂತ ಪೂರ್ವಕಾಲದ ಬಾಳಿನ ಯಾವುದೊ ಒಂದು ಕಗ್ಗವಿಯನ್ನೊ ಪೆಡಂಭೂತದ ಕಣ್ಣನ್ನೊ 'ಅಸ್ಮೃತಿ'ಗೆ ತಂದು, ಅನಿರ್ವಚನೀಯವಾದ ಭೀತಿಯನ್ನುಂಟು ಮಾಡಬಹುದು. ಪರ್ವತಾರಣ್ಯಗಳ ಭಯಂಕರ ಪ್ರಕೃತಿಯ ಮಧ್ಯೆ ವಾಸಮಾಡುವವರಿಗೆ ಅರ್ಥವಾಗದ, ಆದ್ದರಿಂದ ಅರ್ಥವಿಲ್ಲದ, ಆ ಅನುಭವಗಳು ಪಿಶಾಚಿಗಳಂತೆಯೊ ದೆಯ್ಯ-ದ್ಯಾವರುಗಳಂತೆಯೊ ತೋರುತ್ತವೆ.

ಯಾವ ಯಾವ ಕಾಲದಲ್ಲಿ, ಯಾವ ಯಾವ ದೇಶದಲ್ಲಿ, ಯಾವ ಯಾವ ರೂಪದಲ್ಲಿ, ಯಾವ ಯಾವ ಸನ್ನಿವೇಶದಲ್ಲಿ, ಯಾವ ಸಾಗರ ತೀರದಲ್ಲಿ, ಯಾವ ಪರ್ವತ ಶಿಖರದಲ್ಲಿ, ಯಾವ ಅರಣ್ಯ ಕುಂಜ ಸೀಮೆಯಲ್ಲಿ ಅಂತಹ ಸೂರ್ಯೋದಯದ ಸೊಂಪನ್ನು ಹಿಂದೆ ಎನಿತು ಸಾರಿ ಅನುಭವಿಸಿದ್ದರೋ ಏನೋ? ಆ ಸಂಸ್ಕಾರ ಕೋಶದ ಖಜಾನೆಗೆ ಬೀಗದ ಕೈ ಮಾತ್ರವಾಗಿತ್ತು. ಆವೊತ್ತಿನ ಸೂರ್ಯೋದಯ! ಹಳೆಮನೆಯಾದರೇನಂತೆ? ಹಂದಿಯೊಡ್ಡಿಯ ಬಳಿಯಾದರೇನಂತೆ? ಅಕ್ಷರಹೀನ ಅಸಂಸ್ಕೃತ ಒಕ್ಕಲಿಗನಾದರೇನಂತೆ? ಮುಪ್ಪಡಿಸಿದ್ದರೇನಂತೆ? ಸುಬ್ಬಣ್ಣ ಹೆಗ್ಗಡೆಯೂ ವಿಶ್ವ ಪ್ರಜೆ!

ಲೋಕವೆಲ್ಲ ಅಶೋಕವಾಗಿ ಸುಖಮಯವಾಯಿತು. ಮನದಲ್ಲಿ ವಿಶ್ವ ಮೈತ್ರಿ ಮೂಡಿತು. ಹಂದಿ, ಕೋಳಿ, ಕುರಿ, ಮರ, ಕಾಡು, ಆಕಾಶ, ಹಾಡುತ್ತಿದ್ದ ಕಾಡು ಹಕ್ಕಿಗಳ ಹಿಂಡು, ನೆರೆಹೊರೆ - ಎಲ್ಲದರ ಮೇಲೆಯೂ ಅಕ್ಕರೆವುಕ್ಕಿತು. ಹೆಗ್ಗಡೆಯವರ ಜೀವಮಾನ ಕಟ್ಟಡದಲ್ಲಿ ಆ ಒಂದು ಕ್ಷಣದ ಬಾಳು ಗೋಪುರದ ತುದಿಯ ಕಳಸದ ಚಿನ್ನದ ಡೆಂಕಣಿಯಾಗಿ ಸ್ವರ್ಗದೊಡನೆ ಸರಸವಾಡಿತು.[೩೭]

ಈ ಮೇಲಿನ ಎರಡು ಉಲ್ಲೇಖಗಳಲ್ಲಿ ಮಲೆನಾಡಿನ ಕ್ಷುದ್ರ, ಅಲ್ಪಜಗತ್ತಿನ ಶ್ರೀ ಸಾಮಾನ್ಯರು ಇಂಥ ಅನುಭಾವಿಕ ನೆಲೆಗಳಿಂದ ವಿಶ್ವಪ್ರಜೆಯಾಗುವ ದೃಷ್ಟಿಕೋನದಲ್ಲಿಯೇ ಜೀವ ಸಮಾನತಾ ಧೋರಣೆಯನ್ನು ಗುರುತಿಸಬಹುದಾಗಿದೆ. ನಿಸರ್ಗಾನುಭವಗಳ ತನ್ಮಯತೆಗಳಲ್ಲಿ ಪ್ರತಿಯೊಂದು ಜೀವಿಯ "ಆ ಒಂದು ಕ್ಷಣದ ಬಾಳು ಗೋಪುರದ ತುದಿಯ ಕಳಶದ ಚಿನ್ನದ ಡೆಂಕಣಿಯಾಗಿ ಸ್ವರ್ಗದೊಡನೆ ಸರಸ"ವಾಡುವ ಅನುಭವವನ್ನು ಮುಟ್ಟಬಹುದಾಗಿದೆ. ಇಂಥ ಅಸಂಖ್ಯ ಸಾಧ್ಯತೆಗಳನ್ನು ಕುವೆಂಪು ತಮ್ಮ ಸಾಹಿತ್ಯದುದ್ದಕ್ಕೂ ಧ್ಯಾನಿಸಿದ್ದಾರೆ. ಈ ಬಗೆಯ ಧ್ಯಾನವೇ ಕುವೆಂಪು ಶೋಧಿತ ಪರಿಸರ ಕೇಂದ್ರಿತ ಚಿಂತನೆಯಾಗಿ ಗುರುತಿಸಿಕೊಳ್ಳಬಹುದಾಗಿದೆ.

೧೩. ಪರಿಸರ ಸ್ತ್ರೀವಾದ

ಇಕೊಫೆಮಿನಿಸಂ ಅಧ್ಯಯನದ ದೃಷ್ಟಿಯಿಂದ ಪರಾಮರ್ಶಿಸಿದಾಗ ಕುವೆಂಪು ಅವರ ಎರಡು ಕಾದಂಬರಿಗಳು ಸ್ತ್ರೀ ಸಮುದಾಯದ ಮೇಲೆ ಕುಟುಂಬ ಹಾಗೂ ಸಮಾಜ ನಡೆಸುವ ಶೋಷಣೆಯ ಅಸಂಖ್ಯ ಮುಖಗಳನ್ನು ಕೇಂದ್ರ ವಸ್ತುವಾಗಿಸಿಕೊಂಡಿವೆ. ಹಾಗೆಯೇ ಪಾರಂಪರಿಕ ಪುರುಷ ವ್ಯವಸ್ಥೆ ಪ್ರಕೃತಿ (ಪರಿಸರ) ಹಾಗೂ ಸ್ತ್ರೀ ಸಮುದಾಯದ ಮೇಲೆ ಸಾಧಿಸಿದ ಹಿಡಿತ ಮತ್ತು ಹಿಂಸೆಯ ಅವಸ್ಥೆಗಳನ್ನು ಈ ಕಥನಗಳು ತೆರೆದಿಡುತ್ತವೆ.

ಬೇಟೆ, ಲೈಂಗಿಕ ಹಿಂಸೆ, ಆಕ್ರಮಣ, ದಾಳಿ, ಸ್ವಾಧೀನ ಮತ್ತು ನಿಯಂತ್ರಣಗಳು ಒಂದು ವ್ಯವಸ್ಥೆಯಲ್ಲಿ ಅಂತರ್ಗತವಾಗಿರುವ ಅನೇಕ ಸ್ತರಗಳು ಇಲ್ಲಿ ಕಾಣಸಿಗುತ್ತವೆ. ಈ ಪ್ರಕ್ರಿಯೆಯು ಪುರುಷ ಕೇಂದ್ರಿತವೂ, ಪರಿಸರ ವಿರೋಧಿ ಚಟುವಟಿಕೆಯಾಗಿಯೂ ತೋರುತ್ತದೆ.

ಲಕ್ಕುಂದದ ಪುಟ್ಟನ ಅತ್ತೆ ಕಾಡಿ ಪುರುಷ ಕ್ರೌರ್ಯದ ಪ್ರತಿಬಿಂಬದಂತೆ ಕಾಣುತ್ತಾಳೆ. ಕಾಡಿ, ಸೀತಮ್ಮ, ಕಾವೇರಿ, ನಾಗಕ್ಕ, ನಾಗತ್ತೆ, ಅಂತಕ್ಕ ಸೆಟ್ತಿ, ದೇಯಿ, ಸೀತೆ, ಸುಬ್ಬಮ್ಮ ಹೆಗ್ಗಡಿತಿ - ಈ ಎಲ್ಲಾ ಪಾತ್ರಗಳು ಒಂದಲ್ಲ ಒಂದು ಬಗೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಕ್ರೌರ್ಯಕ್ಕೆ ಸಿಲುಕಿ ಹಲವು ಬಗೆಯ ಸಂಕಟಗಳನ್ನು ಅನುಭವಿಸುತ್ತವೆ.

ಕಾಡಿ ಕಳ್ಳ ಬಸಿರಿನಿಂದ, ಸಾಮಾಜಿಕ ಬಹಿಷ್ಕೃತತೆಯಿಂದ ಅನುಭವಿಸುವ ಸಂಕಟಗಳು -

ಸೀತಮ್ಮ ನಾಗರೀಕ ಪ್ರಪಂಚದ ಶುಚಿ ರುಚಿಗಳ ನಡುವೆಯೇ ತನ್ನ ಗಂಡ ಶಂಕರ ಹೆಗ್ಗಡೆಯ ದೇಹದಾಸೆಗೆ ಹಾಗು ನಿರಂತರ ಲೈಂಗಿಕ ಅತ್ಯಾಚಾರಕ್ಕೆ ಬಲಿಯಾಗಿ ಕೇವಲ ಮಕ್ಕಳನ್ನು ಹೆರುವ ಯಂತ್ರವಾಗಿ ಮಾನಸಿಕ ತೃಪ್ತಿ ಹಾಗೂ ಪ್ರೀತಿಯನ್ನು ಪಡೆಯದೆ ನಲುಗುವ ಸಂಕಟಗಳು -

ಸುಬ್ಬಣ್ಣ ಹೆಗ್ಗಡೆಯವರ ಮಗಳು ಮಂಜಮ್ಮ ತನ್ನ ಕೊಳಕು ಕೌಟುಂಬಿಕ ಪರಿಸರ ಹಾಗು ಸಂಸ್ಕೃತಿಯ ಪ್ರಬಲ ಹಿಡಿತದಲ್ಲಿಯೇ ಬಲಿಯಾದವಳು. ತನ್ನ ಆಸೆ ಆಕಾಂಕ್ಷೆಗಳಿಗೆ ವಿರುದ್ಧವಾಗಿ ಇಳಿವಯಸ್ಸಿನ ಭರಮೈ ಹೆಗ್ಗಡೆಯವರ ಎರಡನೇ ಹೆಂಡತಿಯಾಗುವ ಪ್ರಕ್ರಿಯೆ ಮತ್ತು ಮಂಜಮ್ಮ ಪುರುಷ ಪ್ರಧಾನ ವ್ಯವಸ್ಥೆಯ ವಿನಿಮಯದ ವಸ್ತುವಿನಂತೆ ವಿಕ್ರಯಗೊಳ್ಳುವ ಕ್ರಮಗಳು -

ಕುಲವಾಡಿ ಸಣ್ಣನ ಮಗಳು ಪುಟ್ಟಿ ತಾಯಿಯನ್ನು ಕಳೆದುಕೊಂಡು ತಮ್ಮನಾದ ಗಂಗ ಮತ್ತು ಅಪ್ಪನ ಆರೈಕೆಗಳಲ್ಲಿಯೇ ಬದುಕನ್ನು ಸವಿದವಳು. ಮೈನೆರೆದು ಮದುವೆ ವಯಸ್ಸಾದರೂ ಕೌಟುಂಬಿಕ ಕರ್ತವ್ಯ ಪಾಲನೆಯಲ್ಲಿಯೇ ಬದುಕನ್ನು ನಡೆಸುವ ಇವಳ ಸ್ಥಿತಿ -

ನಾಗಕ್ಕ ಮತ್ತು ನಾಗತ್ತೆಯರು ಸಮಾಜ ಬಾಹಿರ ಸಂಬಂಧಗಳಲ್ಲಿಯೆ ಜೀವನವನ್ನು ಬಲಿಕೊಡುವ ಕ್ರಮ -

ಸಾಮಾಜಿಕ ಅನಿಷ್ಟತೆಯ ಸಂಕೇತವಾದ ವೈಧವ್ಯಕ್ಕೆ ಸಿಕ್ಕಿ, ಅಂಥ ಪರಿಸ್ಥಿತಿಯಲ್ಲಿ ಜೀವನವನ್ನು ಹಸನುಮಾಡಿಕೊಳ್ಳಲು ತನ್ನ ಮಗಳು ಕಾವೇರಿಯನ್ನು ಲೈಂಗಿಕ ಸಂಬಂಧಗಳಿಗಾಗಿ ಪ್ರೇರೇಪಿಸುವ ಕ್ರಮ. ಈ ಕಾರಣದಿಂದ ಮುಗ್ಧ ಕಾವೇರಿ ಲೈಂಗಿಕ ಬಲಾತ್ಕಾರಕ್ಕೆ ಬಲಿಯಾಗುತ್ತಾಳೆ -

ಚೀಂಕ್ರನ ಹೆಂಡತಿ ದೇಯಿ ಗಂಡನ ಕ್ರೌರ್ಯದಲ್ಲಿಯೇ ನಲುಗಿದವಳು. ಕುಡುಕನೂ ಪಶುಪ್ರವೃತ್ತಿಯವನೂ ಆದ ತನ್ನ ಗಂಡನ ಲೈಂಗಿಕ ಬಲಾತ್ಕಾರದಿಂದ ಗರ್ಭಸ್ರಾವವಾಗಿ ಸಾವಿಗೀಡಾಗುವ ಬಗೆ -

ಪಿಜಿಣನ ಹೆಂಡತಿ ಅಕ್ಕಣಿ ಅನಾರೋಗ್ಯದಿಂದ ನರಳುವ ಗಂಡನ ಅಸಹಾಯಕತೆಗೆ ಬಲಿಯಾದವಳು -

ನಾಗಕ್ಕ, ನಾಗತ್ತೆ, ಗಂಗೆ, ಕಾಡಿ, ಅಂತಕ್ಕ ಸೆಟ್ತಿ ಮತ್ತು ಕಾವೇರಿಯಂಥ ಒಂಟಿ ಹೆಣ್ಣುಗಳ ಅಸಹಾಯಕತೆ ಪುರುಷ ವ್ಯವಸ್ಥೆಗೆ ಬಲಿಯಾದಂತೆಯೇ ಅಕ್ಕಣಿಯು ಚೀಂಕ್ರನ ಲೈಂಗಿಕ ಆಕರ್ಷಣೆಗೆ ಒಳಗಾಗುತ್ತಲೇ ಅಪರಾಧಿ ಪ್ರಜ್ಞೆಯಿಂದ ನರಳುತ್ತಾಳೆ -

ಮುತ್ತಳ್ಳಿ ಶ್ಯಾಮಯ್ಯಗೌಡರ ಮಗಳು ಸೀತೆ ತಾನು ಪ್ರೀತಿಸಿದ ಹೂವಯ್ಯನನ್ನುಪಡೆಯಲಾರದೆ ಅನುಭವಿಸುವ ದೈಹಿಕ ಹಾಗು ಮಾನಸಿಕ ತೊಳಲಾಟಗಳು -

ಕಾನೂರು ಸುಬ್ಬಮ್ಮ ಹೆಗ್ಗಡಿತಿಯು ಬಡತನದಲ್ಲಿ ಹುಟ್ಟಿದ ಕಾರಣಕ್ಕಾಗಿಯೇ ವಯಸ್ಸಾದ ಚಂದ್ರಯ್ಯಗೌಡರ ಮೂರನೇ ಹೆಂಡತಿಯಾಗಿ ಅನುಭವಿಸುವ ಸಂಕಟಗಳು. ಅಂಥ ಸಂಕಟಗಳ ನಡುವೆಯೇ ಪುರುಷ ಪ್ರಧಾನ ವ್ಯವಸ್ಥೆಯ ಹಲವು ಲೈಂಗಿಕ ವಾಂಛೆಗಳಿಗೆ ಬಲಿಯಾಗಿ ಪ್ರಾಣವನ್ನೇ ಕಳೆದುಕೊಳ್ಳುವ ಕ್ರಮ -

ಸೇರೆಗಾರ ರಂಗಪ್ಪಸೆಟ್ಟಿ ಗಟ್ಟದ ಕೆಳಗಿನಿಂದ ಹಾರಿಸಿಕೊಂಡು ಬಂದ ಗಂಗೆ ಬದುಕಿನ ಅನಿವಾರ್ಯತೆಗಾಗಿಯೇ ಹಲವಾರು ಗಂಡಸರ ಲೈಂಗಿಕ ವಿಷವರ್ತುಲಕ್ಕೆ ಸಿಕ್ಕಿ ನಲುಗಿದವಳು -

ಇಂಥ ಅಸಂಖ್ಯ ಸ್ತ್ರೀ ಸಂಕಟಗಳಲ್ಲಿಯೇ ಪುರುಷ ಪ್ರಧಾನ ವ್ಯವಸ್ಥೆಯ ದಮನಿತ ನೆಲೆಗಳು ತನ್ನ ಮೇಲಾಟವನ್ನು ನಡೆಸಿವೆ. ಈ ಮೇಲಾಟದಿಂದಾಗಿ ಕುವೆಂಪು ಅವರ ಈ ಎರಡೂ ಕಾದಂಬರಿಗಳು ಅಖಂಡ ಸ್ತ್ರೀ ಸಮುದಾಯದ ಸಂಕಟದ ಕಥನಗಳೊ ಎಂಬಂತೆ ಕಾಣಿಸುತ್ತವೆ. ಈ ಕಥನಗಳು ಮತ್ತೆ ಮತ್ತೆ ನಿಸರ್ಗದ ಮೇಲೆ ಮನುಷ್ಯ ನಡೆಸುವ ಬೇಟೆಯ ಪ್ರಕ್ರಿಯೆಯನ್ನು ನೆನಪಿಸುತ್ತವೆ. ಇಂಥ ಪ್ರಕ್ರಿಯೆ ಗಂಡು ಹೆಣ್ಣಿನ ನಡುವಿನ ಸಾಮರಸ್ಯವನ್ನು ಉಲ್ಲಂಘಿಸುತ್ತದೆ ಎನ್ನುತ್ತಾರೆ ಇಕೊಫೆಮಿನಿಸಂನ ಚಿಂತಕಿ ವಂದನಾ ಶಿವ.

ಹಾಗೆಯೇ ಕುವೆಂಪು ಕಥನಗಳಲ್ಲಿ ಮಹಿಳೆಯರ ಮೇಲಿನ ಹಿಂಸೆಯಲ್ಲಿ ಮಹಿಳೆಯರ ಪಾಲು, ಸ್ತ್ರೀ ಸಮುದಾಯದ ಮೇಲಿನ ವಸ್ತ್ರ ನೀತಿ, ಲಿಂಗ ತಾರತಮ್ಯ, ಸ್ತ್ರೀ ಸಮುದಾಯದ ಆಯ್ಕೆಯ ಹಕ್ಕುಗಳ ದಮನಿತ ನೆಲೆಗಳು, ಕುಟುಂಬ ವ್ಯವಸ್ಥೆಯಲ್ಲಿನ ವಿಭಿನ್ನ ಹಿಂಸೆಯ ಸ್ವರೂಪದ ನೆಲೆಗಳು, ಪರಿಸರ ಸ್ನೇಹಿ ಸ್ತ್ರೀ ಸಮುದಾಯದ ವಿಶ್ಲೇಷಣೆ ಮೊದಲಾದ ವಿಷಯಗಳನ್ನು ಕುರಿತು ಅಧ್ಯಯನವನ್ನು ಮುಂದುವರಿಸಲು ಕುವೆಂಪು ಕಾದಂಬರಿಗಳು ಅನೇಕ ಸಾಧ್ಯತೆಗಳನ್ನು ಒದಗಿಸುತ್ತವೆ. ಆದರೆ ಈ ಪ್ರಬಂಧಕ್ಕೆ ತನ್ನದೇ ಆದ ಮಿತಿಗಳಿರುವ ಹಿನ್ನೆಲೆಯಲ್ಲಿ ಮೇಲಿನ ವಿಷಯಗಳನ್ನು ಕುರಿತ ವಿಶ್ಲೇಷಣೆ ಸಾಧ್ಯವಾಗಿಲ್ಲ.

ಅಡಿಟಿಪ್ಪಣಿ :

೧. ಮಾಧವ ಐತಾಳ (ಅನು) ; ರಾಮಚಂದ್ರ ಗುಹಾ - ಜಾಗತಿಕ ಪರಿಸರ ಚರಿತ್ರೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯, ಪು. ೯೮.
೨. ಅಕ್ಷರ ಕೆ.ವಿ. (ಅನು) ; ಪ್ರತಿಭೆಯ ಒಂದು ಪ್ರವಾಹ, ಶಿವ ವಿಶ್ವನಾಥನ್, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೮, ಪು. ೩೫.
೩. - ಅದೇ -, ಪು. ೪೦.
೪. ಮಾಧವ ಐತಾಳ (ಅನು) ; ರಾಮಚಂದ್ರ ಗುಹಾ - ಜಾಗತಿಕ ಪರಿಸರ ಚರಿತ್ರೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯, ಪು. ೮೬.
೫. - ಅದೇ - ಪು. ೪೮.
೬. ಕುವೆಂಪು ; ಕಾನೂರು ಹೆಗ್ಗಡತಿ, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೬೦, ಅರಿಕೆ.
೭. - ಅದೇ -, ಪು. ೩೫-೩೬.
೮. - ಅದೇ -, ಪು. ೧೩೭-೧೩೮.
೯. - ಅದೇ -, ಪು. ೨೩೮.
೧೦. - ಅದೇ -, ಪು. ೨೩೮-೨೩೯
೧೧. - ಅದೇ -, ಪು. ೨೩೯-೨೪೦
೧೨. - ಅದೇ -, ಪು. ೨೯೪-೨೯೫

೧೩. - ಅದೇ -, ಪು. ೬೧೫

೧೪. ಸುಬ್ಬಣ್ಣ ಕೆ.ವಿ. ; ಕುವೆಂಪುಗೆ ಪುಟ್ಟ ಕನ್ನಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೫, ಪು. ೩೪

೧೫. ಸುಬ್ಬಣ್ಣ ಕೆ.ವಿ. ; ಕುವೆಂಪುಗೆ ಪುಟ್ಟ ಕನ್ನಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೫, ಪು. ೩೦-೩೨.

೧೬. ಫ್ರಿಜೋಕಾಪ್ರಾ ; ಸತ್ಯದ ನವದರ್ಶನ, ಅನು : ನಿ. ಮುರಾರಿ ಬಲ್ಲಾಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩, ಪು. ಮುನ್ನುಡಿ.

೧೭. - ಅದೇ -, ಪು. ೨-೩.

೧೮. ಸುಬ್ಬಣ್ಣ ಕೆ.ವಿ. ; ಕುವೆಂಪುಗೆ ಪುಟ್ಟ ಕನ್ನಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೫, ಪು. ೩೪.

೧೯. ಫ್ರಿಜೋ ಕಾಪ್ರಾ ; ಸತ್ಯದ ನವದರ್ಶನ, (ಅನು) ನಿ. ಮುರಾರಿ ಬಲ್ಲಾಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩, ಪು. ೭.

೨೦. ಕುವೆಂಪು ; ಕಾನೂರು ಹೆಗ್ಗಡಿತಿ, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೬೦, ಪು. ೧೭೩-೧೭೬.

೨೧. - ಅದೇ -, ಪು. ೪೮೦-೪೮೫.

೨೨. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಗದ್ಯ ಸಂಪುಟ - ೧, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೩, ಪು. ೨೮೯-೨೯೦.

೨೩. ಫ್ರಿಜೋ ಕಾಪ್ರಾ ; ಸತ್ಯದ ನವ ದರ್ಶನ, (ಅನು) ನಿ. ಮುರಾರಿ ಬಲ್ಲಾಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩, ಪು. ೬೭-೬೮

೨೪. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಗದ್ಯ ಸಂಪುಟ - ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೮೫೧-೮೫೨.

೨೫. ಕುವೆಂಪು ; ಮಲೆಗಳಲ್ಲಿ ಮದುಮಗಳು, ಉದಯ ರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೯೨, ಪು. ೪೩೬.

೨೬. - ಅದೇ -, ಪು. ೧೩೧-೧೩೨.

೨೭. - ಅದೇ -, ಪು. ೨೪೪.

೨೮. - ಅದೇ -, ಪು. ೪೯೨-೪೯೩.

೨೯. ಸುಬ್ಬಣ್ಣ ಕೆ.ವಿ. ; ಕುವೆಂಪುಗೆ ಪುಟ್ಟ ಕನ್ನಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೫, ಪು. ೬೪.

೩೦. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಗದ್ಯ, ಸಂಪುಟ - ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪, ಪು. ೯೫೫-೯೫೬.

೩೧. - ಅದೇ - ; ಶತಮಾನದ ಕನ್ನಡ ಕಾದಂಬರಿ ವಿಚಾರ ಸಂಕಿರಣ, ಚಕ್ರಪ್ರತಿಷ್ಠಾನ, ೨೦೦೦, ಕನ್ನಡ ಭವನ, ನಯನ, ಅಪ್ರಕಟಿತ ಲೇಖನ.

೩೨. ಕುವೆಂಪು ; ಮಲೆಗಳಲ್ಲಿ ಮದುಮಗಳು, ಉದಯ ರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ೧೯೯೨, ಪು. ೭.

೩೩. - ಅದೇ -, ಪು. ೫೩.

೩೪. - ಅದೇ -, ಪು. ೫೩.

೩೫. - ಅದೇ -, ಪು. ೬೦-೬೨.

೩೬. - ಅದೇ -, ಪು. ೨೩೦-೨೩೧.

೩೭. ಕುವೆಂಪು ; ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೧೯೯೨, ಪು. ೪೮-೪೯.

ಅಧ್ಯಾಯ – ೮

ಮಂತ್ರಮಾಂಗಲ್ಯ ಮತ್ತು ಪರಿಸರ ಚಿಂತನೆ

ನಿಮ್ಮ ಕನ್ನೆಯರಿಗೆ ಸೇರು ಬಂಗಾರದ ಕೊರಳ ಹಾರಕ್ಕಿಂತಲೂ ಮುದ್ದಾದ ಕನ್ನಡದ ಅಕ್ಷರಮಾಲೆಯ ರಮಣೀಯತರವಾದ ಅಲಂಕಾರವೆಂದೂ ನಾನು ಧೈರ್ಯವಾಗಿ ಹೇಳಬಲ್ಲೆ. ವಿದ್ಯೆಯ ಸೌಂದರ್ಯ ಸಜೀವ ಸೌಂದರ್ಯ, ಚಿನ್ನದ ಚೆಲುವು ಹೆಣದಂತೆ! ಬಣ್ಣಬಣ್ಣದ ಮಾರಂಚಿನ ಜರತಾರಿ ಸೀರೆಗಳು, ಸೇರು ಸೇರು ಚಿನ್ನ ಹೇರಿರುವ ನಯ ನಾಜೋಕುಗಳಿಲ್ಲದ ತೊಡಕಾದ ತೊಡವುಗಳು! ಇವುಗಳೆಲ್ಲಾ ಏಕೆ! ಯಾವ ಮೋಹಕ್ಕೆ? ಯಾವ ಶ್ರೇಯಸ್ಸಿಗೆ? ಯಾವ ದೇವರ ಪ್ರೀತಿಗೆ?

– ಕುವೆಂಪು

ಮಂತ್ರಮಾಂಗಲ್ಯ ಮತ್ತು ಪರಿಸರ ಚಿಂತನೆ

ಕುವೆಂಪು ಶೋಧಿತ 'ಮಂತ್ರಮಾಂಗಲ್ಯ'ದ ವಿವಾಹ ಪದ್ಧತಿಯೇ ಸರಳ ಜೀವನ ತತ್ವವನ್ನು ಪ್ರತಿಪಾದಿಸುತ್ತದೆ. ಅದ್ದೂರಿ ಹಾಗೂ ಆಡಂಬರದ ಪಾರಂಪರಿಕ ವೈವಾಹಿಕ ಪದ್ಧತಿಗಿಂತ ಭಿನ್ನವಾದ ಹಾಗೂ ಪರ್ಯಾಯ ವೈವಾಹಿಕ ಪದ್ಧತಿ ಇದಾಗಿದೆ. ಇಂಥ ಸರಳ ಜೀವನ ತತ್ವವನ್ನು ಪ್ರತಿಪಾದಿಸುವ 'ಮಂತ್ರ ಮಾಂಗಲ್ಯ'ದ ಧೋರಣೆಯಲ್ಲಿ ಪರಿಸರ ವಿಜ್ಞಾನೀಯ ತತ್ವವೂ, ದೃಷ್ಟಿಯೂ, ಪ್ರಜ್ಞೆಯೂ ಒಮ್ಮೆಗೆ ಮಿಳಿತಗೊಂಡಿದೆ.

ವರ ಮತ್ತು ವಧುವಿನ ಕೌಟುಂಬಿಕ ಶ್ರೀಮಂತಿಕೆಯ ಪ್ರದರ್ಶನಕ್ಕೆ ಮದುವೆಗಳು ವೇದಿಕೆಯಾಗುತ್ತಿರುವ ಸನ್ನಿವೇಶಗಳಲ್ಲಿ ನಾವಿದ್ದೇವೆ. ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ವರದಕ್ಷಿಣೆ ಹಾಗೂ ವಧುದಕ್ಷಿಣೆಗಳನ್ನು ನಿರಾಕರಿಸುವ, ಆಡಂಬರದ ಉಡುಗೊರೆಗಳ ಸ್ವೀಕರಣೆಗಳ ನಿರಾಕರಣೆ, ಸಾವಿರಗಳಗಟ್ಟಲೆ ಮದುವೆಗೆ ಜನರನ್ನು ಆಹ್ವಾನಿಸುವ ಹಾಗೂ ಸೇರಿಸುವುದರ ಮೇಲಿನ ನಿಷೇಧ ಮೊದಲಾದ ಕ್ರಮಗಳ ಪಾಲನೆಯಿಂದ ನಿಸರ್ಗದ ಮೇಲಿನ ಒತ್ತಡಗಳನ್ನು ಕಡಿಮೆಮಾಡಿದಂತಾಗುತ್ತದೆ. ಲಕ್ಷಾಂತರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ನೈಸರ್ಗಿಕ ಸಂಪನ್ಮೂಲಗಳ ದುಂದಿಗೆ ಕಾರಣವಾಗುವ ಪಾರಂಪರಿಕ ಮದುವೆಯ ಜಾಲಗಳಿಗೆ ಕುವೆಂಪು ಶೋಧಿತ 'ಮಂತ್ರ ಮಾಂಗಲ್ಯ' ವಿವಾಹ ಪದ್ಧತಿಯು ಮುಖಾಮುಖಿಯಾಗುತ್ತದೆ. ಅಂತೆಯೇ ಹೊಸ ಜೀವನಕ್ರಮವೊಂದನ್ನು ಯುವಜನತೆಯಲ್ಲಿ ಹುಟ್ಟುಹಾಕಲು ಪ್ರಯತ್ನಿಸುವ ಕ್ರಮದಲ್ಲಿಯೂ ಕುವೆಂಪು ನಿಸರ್ಗ ಪ್ರೀತಿಯ ನೆಲೆಗಳನ್ನು ಗುರುತಿಸಬಹುದು.

ಮಂತ್ರಮಾಂಗಲ್ಯದ ಸಂದರ್ಭದಲ್ಲಿ ವಧುವರರು ಸ್ವೀಕರಿಸುವ ಉಪನಿಷತ್ ಮೊದಲಾದ ತತ್ವಗಳಲ್ಲಿ ಜೀವಸಮಾನ ಧೋರಣೆಯ ವಿಚಾರಧಾರೆಯನ್ನು ಗುರುತಿಸಬಹುದು.

ಸಮಾನವಾಗಲಿ ನಿಮ್ಮ ಪ್ರಾರ್ಥನೆ
ಸಮಾನವಾಗಲಿ ನಿಮ್ಮ ಧ್ಯೇಯ
ಸಮಾನವಾಗಲಿ ಉದ್ದೇಶ
ಸಮಾನವಾಗಲಿ ಕೆಲಸ ಕಾರ್ಯ
ಸಮಾನವಾಗಲಿ ಆಶೋತ್ತರಗಳು
ಒಂದೇ ಆಗಲಿ ನಿಮ್ಮ ಹೃದಯ
ಒಂದೇ ಆಗಲಿ ನಿಮ್ಮ ಗುರಿಗತಿ
ಮತ್ತೆ
ಪೂರ್ಣವಾಗಲಿ ನಿಮ್ಮ ಈ ಶುಭದೈಕ್ಯ

ವರ ಮತ್ತು ವಧು, ಸ್ತ್ರೀ ಮತ್ತು ಪುರುಷ ಎಂಬ ಭೇದಗಳನ್ನು, ಅಂತರಗಳನ್ನು ತೊಡೆದು ಹಾಕಿ ಎಲ್ಲರೂ ಸಮಾನರೆಂಬ ಜೀವನ ಪ್ರೀತಿಯನ್ನು ಈ ವಿವಾಹ ಪದ್ಧತಿ ಪ್ರತಿಪಾದಿಸಲು ತುಡಿಯುತ್ತಿರುವುದನ್ನು ಕಾಣುತ್ತೇವೆ. ಹಾಗೆಯೇ ಬದುಕಿನ ಪೂರ್ಣತ್ವವನ್ನು ಸಾಧಿಸಲು ಹೊಸದರ್ಶನವನ್ನು ಮುಂಗಾಣಿಸುತ್ತದೆ.

ಅಡಿಟಿಪ್ಪಣಿ :

೧. ಕುವೆಂಪು ; ಮಂತ್ರಮಾಂಗಲ್ಯ, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು, ಪ್ರಥಮ ಆವೃತ್ತಿ, ಪು. ೧೭-೧೮.

ಅಧ್ಯಾಯ – ೯

ಸಮಾರೋಪ

ಬಾಂಧವ್ಯವು ಇದು ಬಂಧನವಾದರೆ
ಮುಕ್ತ ಜೀವನಕೆ ತೆರವಿಲ್ಲ.
ಸ್ವಭಾವ ಪರಿಪಾಕಕ್ಕಿಂಬಿದ್ದರೆ
ಸಾಮರಸ್ಯಕದು ಎರವಲ್ಲ.

ನಡೆದಷ್ಟಿದೆ ನೆಲ, ಹರಿದಷ್ಟಿದೆ ಜಲ,
ಏರಿದಷ್ಟು ಇದೆ ಹಿರಿಬಯಲು
ದುಡಿದಷ್ಟಿದೆ ಬಲ, ಪಡೆದಷ್ಟಿದೆ ಫಲ.
ಪಯರಿಗೆ ತಕ್ಕಷ್ಟಿದೆ ಕುಯಿಲು.

ಶಾಂತಿಯಿಂದ ಪರಿಪುಷ್ಟಿಗೊಂಡು ಸಂ-
ತುಷ್ಟವಾಗಲೀ ನಾಡ ಜನ.
ವಿಜಯ ಹೊಂದಿ, ಕಲ್ಯಾಣ ಪಡೆದು, ಸ್ವ-
ಸ್ವ-ಧರ್ಮ ಕಾಯಲಿ ಚಿರಂತನ.

– ಅಂಬಿಕಾತನಯದತ್ತ

ಸಮಾರೋಪ

ಕುವೆಂಪು ಮತ್ತು ಬೇಂದ್ರೆ ಅವರ ಮೊದಲ ಕೃತಿಗಳಾದ "ಅಮಲನ ಕಥೆ" ಮತ್ತು "ಕೃಷ್ಣಾಕುಮಾರಿ"ಗಳಲ್ಲಿ ಇವರ ಪರಿಸರ ಕಾಳಜಿಯ ನೆಲೆಗಳು ಕಾಣಿಸಿಕೊಳ್ಳುತ್ತವೆ. ಶ್ರೀ ಸಾಮಾನ್ಯನಾದ ಅಮಲನು ತನ್ನ ಬದುಕಿನ ನಿರ್ವಹಣೆಗಾಗಿ ಪ್ರತಿದಿನ ಒಣಕಟ್ಟಿಗೆಯನ್ನು ಕಡಿದು ಜೀವನವನ್ನು ಸಾಗಿಸುವವ. ಇಂಥ ಪರಿಸರ ಸ್ನೇಹಿ ವ್ಯಕ್ತಿತ್ವದಿಂದ ಅಮಲ ಇಪ್ಪತ್ತನೇ ಶತಮಾನದ ಮೊದಲ ಪರಿಸರವಾದಿಯಾಗಿ ಕಾಣಿಸಿಕೊಳ್ಳುತ್ತಾನೆ. ಅವನ ಬದುಕಿನ ದೈನಂದಿನ ವಿವರಗಳೊಂದಿಗೆ ಬಿಚ್ಚಿಕೊಳ್ಳುವ ನಿಸರ್ಗ, ಆ ನಿಸರ್ಗದೊಂದಿಗಿನ ಅವನ ಸಂಬಂಧಗಳು ಈ ಮೇಲಿನ ಮಾತನ್ನು ದೃಢಪಡಿಸುತ್ತವೆ. ಅತ್ಯಂತ ಸರಳ ಹಾಗೂ ನಿಷ್ಠಾವಂತ ಬದುಕಿನಿಂದ ದೈವ ಪ್ರೀತಿಗೆ ಪಾತ್ರನಾಗಿ ನಿರ್ಮಲ ಪದವಿಯನ್ನು ಪಡೆಯುವ ಅಮಲ ಕನ್ನಡ ಸಂಸ್ಕೃತಿಯ ಪುನರುಜ್ಜೀವನ ಕಾಲದಲ್ಲಿ ಹುಟ್ಟಿಕೊಂಡ ಮೊದಲ ಪರಿಸರ ಸ್ನೇಹಿ ವ್ಯಕ್ತಿತ್ವವಾಗಿ ಕಾಣಿಸುತ್ತಾನೆ. ಇಂಥ ವ್ಯಕ್ತಿತ್ವ ನಿರ್ಮಾಣದ ಹಿಂದೆ ಕುವೆಂಪು ಅವರ ಅಖಂಡ ಪರಿಸರ ವಿಜ್ಞಾನೀಯ ದೃಷ್ಟಿ ತಮ್ಮ ಬಾಲ್ಯದಲ್ಲಿಯೇ ಶೋಧಿತಗೊಂಡಿರುವುದು ಕನ್ನಡ ಸಾಹಿತ್ಯಕ್ಕೆ ಒದಗಿದ ಮುಂಬೆಳಗಾಗಿ ಕಾಣಿಸುತ್ತದೆ. ಅಂಥ ಮುಂಬೆಳಗು ಅವರ ಕೃತಿ ಸಮೂಹದಲ್ಲಿ ಗುಪ್ತಗಾಮಿನಿಯಾಗಿ ಬೇರೆ ಬೇರೆ ಮಟ್ಟಗಳಲ್ಲಿ, ನೆಲೆಗಳಲ್ಲಿ, ದೃಷ್ಟಿ ಧೋರಣೆಗಳಲ್ಲಿ ಕ್ರಿಯಾಶೀಲಗೊಂಡಿರುವುದನ್ನು ಈ ಅಧ್ಯಯನ ಮುಖ್ಯ ನೆಲೆಯಾಗಿಸಿಕೊಂಡಿದೆ.

"ಕೃಷ್ಣಾಕುಮಾರಿ" ಸುಂದರ ಹೆಣ್ಣು ಮಗಳ ಮೇಲೆ ನಡೆಸುವ ಕ್ರೌರ್ಯದ ಕಥನವನ್ನು ಒಳಗೊಂಡದ್ದು. ಆನಂದಕ್ಕೆ ಕಾರಣವಾಗಬೇಕಾಗಿದ್ದ ಸೌಂದರ್ಯವು ಕೃಷ್ಣಾಕುಮಾರಿಯ ದುರಂತಕ್ಕೆ ಕಾರಣವಾಗಿದೆ. ಸೌಂದರ್ಯ ಮೂರ್ತಿಯಾದ ಕೃಷ್ಣಾಕುಮಾರಿಯ ಮೇಲೆ ನಡೆಸುವ ಅತ್ಯಾಚಾರದ ಈ ಕಥನ ಮನುಷ್ಯ ಸಮುದಾಯ ತನ್ನೆಲ್ಲ ಅನ್ಯಾಕ್ರಮಣಗಳಿಂದ, ಲೋಭಗಳಿಂದ ಪ್ರಕೃತಿಯ ಮೇಲೆ ನಿರಂತರವಾಗಿ ನಡೆಸುವ ಕ್ರೌರ್ಯವನ್ನು ನೆನಪಿಸುತ್ತದೆ. ಈ ಕವಿತೆಯನ್ನು ಪರಿಸರ ದೃಷ್ಟಿಕೋನದಿಂದ ಓದಿದಾಗ ಈ ಅಂಶ ಧ್ವನಿತವಾಗುತ್ತದೆ. ಬೇಂದ್ರೆಯವರ ಸಮಗ್ರ ಕೃತಿಗಳಲ್ಲಿನ ಜೀವನಾನುಭವಗಳ ಜೊತೆಯಲ್ಲೇ ಚಿತ್ರಿತವಾಗಿರುವ ಸಮೃದ್ಧ ನಿಸರ್ಗದ ಮೇಲೆ ಮಾನವ ಸಮುದಾಯ ಅನಾದಿ ಕಾಲದಿಂದ ನಡೆಸಿದ ಆಕ್ರಮಣಗಳು ತನ್ನೆಲ್ಲ ಸೌಂದರ್ಯ ನೆಲೆಗಳಿಗೆ ಧಕ್ಕೆತಂದಿರುವ ವಿಚಾರವನ್ನು 'ಚಿಗರಿಗಂಗಳ ಚೆಲುವಿ' ಅಂಥ ಕವಿತೆ ಸ್ಪಷ್ಟಪಡಿಸುತ್ತದೆ.

ನಗರೀಕರಣ, ಆಧುನಿಕ ಕೃಷಿ ಚಟುವಟಿಕೆಗಳು, ಬೃಹತ್ ಅಣೆಕಟ್ಟುಗಳ ನಿರ್ಮಾಣ, ವಾಣಿಜ್ಯ ಬೆಳೆಗಳ ಬಗೆಗಿನ ವ್ಯಾಮೋಹ, ಗಣಿಗಾರಿಕೆ ಮೊದಲಾದ ಚಟುವಟಿಕೆಗಳಿಂದ ಭಗ್ನಗೊಂಡ ನಿಸರ್ಗ ಬೇಂದ್ರೆ ಕಾವ್ಯ ಕಂಡ ಪರಿಸರ ಸೌಂದರ್ಯದ ಚರ್ಯೆಗಳನ್ನು ಕಳೆದಿದೆ. ಬೇಂದ್ರೆ ಕಂಡ ಹಾಗೂ ಅಭಿವ್ಯಕ್ತಿಸಿದ ಪ್ರಕೃತಿ ಸೌಂದರ್ಯ ಹಾಗೂ ರೌದ್ರಾನುಭವಗಳ ವೈವಿಧ್ಯತೆಯನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಕುವೆಂಪುರವರ 'ನೆನಪಿನ ದೋಣಿಯಲ್ಲಿ' ಪರಿಸರವನ್ನು ಕುರಿತ ಅನೇಕ ಕವನಗಳು ಪ್ರಕಟಗೊಂಡಿವೆ. ಈ ಕವನಗಳನ್ನು ಕುರಿತು ಒಂದು ಅಧ್ಯಾಯವನ್ನು ಬರೆಯುವಷ್ಟು ಕವನಗಳು ಇಲ್ಲಿವೆ. ಈ ಪ್ರಬಂಧದ ಮಿತಿಯಿಂದ ಈ ಎಲ್ಲವುಗಳನ್ನು ಇಲ್ಲಿ ವಿಶ್ಲೇಷಣೆಗೊಳಪಡಿಸಿಲ್ಲ.

ನವೋದಯ ಸಂದರ್ಭ : ಬೇಂದ್ರೆ ಕುವೆಂಪು ಕೃತಿಗಳಲ್ಲಿ ಪರಿಸರದ ಪ್ರಶ್ನೆಗಳು ಎಂಬ ವಿಷಯವನ್ನು ಪರಿಸರ ಶಾಸ್ತ್ರದ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಗುರಿಪಡಿಸಲಾಗಿದೆ. ಪರಿಸರ ಮತ್ತು ಸಾಹಿತ್ಯವನ್ನು ಕುರಿತ ಅಧ್ಯಯನಗಳು ೨೦ನೇ ಶತಮಾನದ ಆದಿ ಭಾಗದಿಂದಲೂ ನಡೆದಿರುವುದನ್ನು ಕನ್ನಡ ಸಾಹಿತ್ಯ ವಿಮರ್ಶಾ ಚರಿತ್ರೆಯಲ್ಲಿ ಕಾಣುತ್ತೇವೆ. ಆದರೆ ಸಾಹಿತ್ಯವನ್ನು ಕುರಿತ ಪರಿಸರ ವಿಜ್ಞಾನೀಯ ದೃಷ್ಟಿಯ ಅಧ್ಯಯನಗಳು ಇತ್ತೀಚಿನ ದಶಕಗಳಲ್ಲಿ ಜಾಗತಿಕ ಮಟ್ಟದಲ್ಲಿ ತುಂಬಾ ತುರ್ತಿನಿಂದ ನಡೆಯುತ್ತಿವೆ. ಹಸಿರು ಓದು ಅಥವಾ 'ಇಕೊಕ್ರಿಟಿಸಿಸಂ' ಎಂಬ ವಿಮರ್ಶಾ ಶಾಖೆಯೊಂದು ರೂಪುಗೊಂಡು ಸಾಹಿತ್ಯ ಮತ್ತು ಪರಿಸರ ಸಂಬಂಧಗಳನ್ನು ಕುರಿತು ಅಧ್ಯಯನಗಳನ್ನು ನಡೆಸಲಾಗುತ್ತಿದೆ. ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ವಲಯದಲ್ಲಿಯೂ ಪರಿಸರ ವಿಜ್ಞಾನೀಯ ದೃಷ್ಟಿಯನ್ನು ಕುರಿತ ವಿಮರ್ಶೆ, ವಿಶ್ಲೇಷಣೆ, ಅಧ್ಯಯನಗಳು ಅಲ್ಲಲ್ಲಿ ನಡೆದಿವೆ. ಆದರೆ ಅನ್ಯಜ್ಞಾನ ಶಿಸ್ತಿನಿಂದ ಅಂದರೆ ಪರಿಸರ ವಿಜ್ಞಾನದ ನೆಲೆಯಿಂದ ಸಾಹಿತ್ಯ ಕೃತಿಗಳನ್ನು ಕೇಂದ್ರವಾಗಿಸಿಕೊಂಡು ಹೆಚ್ಚು ಅಧ್ಯಯನಗಳು ನಡೆದಿಲ್ಲ. ಈ ಪ್ರಬಂಧದಲ್ಲಿ ಬೇಂದ್ರೆ ಕುವೆಂಪು ಅವರ ಸಾಹಿತ್ಯ ಕೃತಿಗಳನ್ನು ಈ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಪರಿಸರವನ್ನು ಕುರಿತು ಜಾಗತಿಕ ಮಟ್ಟದಲ್ಲಿ ನಡೆದಿರುವ ಅಧ್ಯಯನಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಪರಿಶೀಲಿಸಲಾಗಿದೆ. ಪರಿಸರ ಹಾಗೂ ಪರಿಸರ ಅಧ್ಯಯನ, ಡೀಪ್ ಇಕಾಲಜಿ, ಪರಿಸರ ವಿಮರ್ಶೆ, ಇಕೊಫೆಮಿನಿಸಂ, ಪರಿಸರ ವಿಜ್ಞಾನೀಯ ದೃಷ್ಟಿಕೋನಗಳನ್ನು ಕುರಿತು ಪರಿಚಯಿಸಲಾಗಿದೆ ಹಾಗೂ ಈ ಮೇಲಿನ ಪರಿಸರ ವಿಮರ್ಶಾ ನೆಲೆಗಳಿಂದ ಬೇಂದ್ರೆ ಕುವೆಂಪು ಅವರ ಸಾಹಿತ್ಯ ಕೃತಿಗಳನ್ನು ವಿಶ್ಲೇಷಿಸಲಾಗಿದೆ.

ಸ್ವಾತಂತ್ರ್ಯಾನಂತರದ ಅಭಿವೃದ್ಧಿಯ ನೆಪದಲ್ಲಿ ವಿವೇಚನೆಯಿಲ್ಲದೆ ಅನುಸರಿಸಿದ ಅಭಿವೃದ್ಧಿ ನೀತಿಗಳಿಂದಾಗಿ ಅನೇಕ ಸಮಸ್ಯೆಗಳು ಇಂದು ಎದುರಾಗಿವೆ. ನವವಸಾಹತುಶಾಹಿ ಸಂಸ್ಕೃತಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಸಂಸ್ಕೃತಿಯಿಂದ ಭಾರತದ ಸಾಮಾಜಿಕ, ಸಾಂಸ್ಕೃತಿಕ, ಭೌತಿಕ ಹಾಗೂ ಪರಿಸರದ ನೆಲೆಗಳಲ್ಲಿ ತೀವ್ರಗತಿಯಲ್ಲಿ ಬದಲಾವಣೆಗಳು ಕಾಣಿಸಿಕೊಳ್ಳುತ್ತಿವೆ. ಈ ಬದಲಾವಣೆಗಳು ಈ ಹಿಂದಿನ ಸಮಸ್ಯೆಗಳನ್ನು ಪರಿಹರಿಸಲೆಂದೇ ಬಂದು ಆ ಸಮಸ್ಯೆಗಳ ಜೊತೆಗೆ ಹೊಸ ಸಮಸ್ಯೆಗಳನ್ನೂ ಹುಟ್ಟುಹಾಕಿವೆ. ಇದರಿಂದಾಗಿ ಆರ್ಥಿಕ ಹಾಗೂ ಪರಿಸರದ ವಿಪತ್ತುಗಳು ದಿನೇದಿನೇ ಅಧಿಕಗೊಳ್ಳುತ್ತಿವೆ. ಹಾಗೆಯೇ ನೈಸರ್ಗಿಕ ಸಂಪನ್ಮೂಲಗಳು ದಿನೇ ದಿನೇ ಕರಗಿಹೋಗುತ್ತಿವೆ. ಏಕೆಂದರೆ ಅಭಿವೃದ್ಧಿಯೆಂದರೆ ಮಾನವ ಸಮುದಾಯದ ಭೌತಿಕ ಅಗತ್ಯಗಳನ್ನು ಹೆಚ್ಚಿಸಿಕೊಳ್ಳುವುದು ಎಂಬ ಅವಿವೇಕಿತನದಿಂದಾಗಿ ಇಂಥ ಪರಿಸರ ನಿರ್ಮಾಣಗೊಂಡಿದೆ. ಜೊತೆಗೆ ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನ ಆರ್ಥಿಕ ಸ್ಥಿತಿಗತಿಗಳು ಏರುಪೇರಾಗಿ ಸಮಾಜದಲ್ಲಿ ಅಂತರಗಳು ಸೃಷ್ಟಿಯಾಗುತ್ತಿವೆ. ಆರ್ಥಿಕವಾಗಿ ಮುಂದುವರೆದ ಹಾಗೂ ತಂತ್ರಜ್ಞಾನ ವಲಯದ ಕೊಳ್ಳುವ ಶಕ್ತಿ ಅಧಿಕಗೊಂಡಂತೆ ಅವರ ಪದಾರ್ಥ ದಾಹವನ್ನು ತೀರಿಸಲು ಇಡೀ ಪರಿಸರವೇ ಬರಿದಾಗುವ ಹಂತವನ್ನು ತಲುಪುತ್ತದೊ ಎಂಬ ಭಾವನೆ ಬಾರದಿರದು.

ಈ ಬಗೆಯ ವ್ಯವಸ್ಥೆಯಿಂದ ಮುಕ್ತಿ ಪಡೆಯಲು ಪರಿಸರ ಚಿಂತಕರು ಅನೇಕ ವಿವೇಕಯುತ ಮಾರ್ಗಗಳನ್ನು ಸೂಚಿಸುತ್ತಲೇ ಬಂದಿದ್ದಾರೆ. ಈ ಚಿಂತಕರ ವಿಚಾರಗಳನ್ನು ಸರ್ಕಾರ ಹಾಗೂ ಅಭಿವೃದ್ಧಿ ಯೋಜನೆಗಳ ನಿರ್ಮಾಣಕಾರರು ಗಮನಿಸಲೇಬೇಕಾದ ಪರಿಸ್ಥಿತಿಯು ನಮ್ಮದಾಗಿದೆ. ಶಿವರಾಮಕಾರಂತರ ಈ ಕೆಳಗಿನ ಮಾತುಗಳು ಅಂಥ ಪರಿಸ್ಥಿತಿಯಿಂದ ಮುಕ್ತಿ ಪಡೆಯಲು ದಾರಿದೀಪಗಳಾಗುತ್ತವೆ ಎಂಬುದರಲ್ಲಿ ಸಂದೇಹವಿಲ್ಲ.

> ಸಾಮಾಜಿಕ ಮಟ್ಟದಲ್ಲಿ ನಾವು ಸ್ವಾವಲಂಬಿಗಳಾಗದೇ ಹೋದರೆ, ರಾಷ್ಟ್ರದ ಮಟ್ಟದಲ್ಲೂ ನಾವು ಸ್ವಾವಲಂಬಿಗಳಾಗಲಾರೆವು. ಆ ಬಗೆಯ ಸ್ವಾವಲಂಬನೆ ಗಳಿಸಲು, ಮಾನವರು ತಮ್ಮ ನಿತ್ಯ ಪರಿಸರದೊಡನೆ ಬೆರೆಯಬೇಕು. ಅದು ಸಾಧ್ಯವಾಗಲು ನಮ್ಮ ಶಿಕ್ಷಣ ಪದ್ಧತಿಯಲ್ಲಿ ವಿಶೇಷ ಬದಲಾವಣೆ ಆಗಬೇಕು. ನಮ್ಮ ಉತ್ಪನ್ನಗಳೂ ಅವುಗಳ ಬಳಕೆಯ ರೀತಿಯೂ ಬದಲಾಗಬೇಕು ; ನಾವು ನಮ್ಮ ಪರಿಸರವನ್ನು ನೋಡಿಕೊಳ್ಳುವ ರೀತಿ ಬದಲಿಸಬೇಕು ; ನಮ್ಮ ಸಾರ್ವಜನಿಕ ಸೇವಕರ ವರ್ತನೆ ಬದಲಿಸಬೇಕು. ಆಡಳಿತೆಯೂ, ಜನತೆಯೂ ಒಂದುಗೂಡಬೇಕು. ಯಾವತ್ತೂ ಸಮಾಜ ಸಹಭಾಗಿಯಾಗದೆ ನಾವು ದೇಶದಲ್ಲಿ ಆರೋಗ್ಯ ಮತ್ತು ಶುಚಿತ್ವವನ್ನು ಸಾಧಿಸಲಾರೆವು ; ಸಾಮಾಜಿಕ ಅರಣ್ಯಗಳಿಂದ ನಮಗೆ ಬೇಕಾಗುವ ಚೈತನ್ಯವನ್ನು ಪಡೆಯಲಾರೆವು ; ನಮ್ಮ ಆರೋಗ್ಯ ರಕ್ಷಣೆಗೆ ಬಹುರಾಷ್ಟ್ರೀಯ ರಾಸಾಯನಿಕ ಕಾರ್ಖಾನೆಗಳು ಮುಖ್ಯವಲ್ಲ. ಅಲ್ಲಲ್ಲಿನ ಪರಿಸರದ ಶುಚಿತ್ವ ನಿರ್ವಹಣೆ ಮುಖ್ಯ.
>
> ....
>
> ಹೀಗಾಗಿ - ಪರಿಸರವನ್ನು ಕುರಿತು ಹೆಚ್ಚಿನ ತಿಳುವಳಿಕೆಯುಳ್ಳ ಸಮಾಜದಲ್ಲಿ, ಅಭಿವೃದ್ಧಿ ಕಾರ್ಯಕ್ಕೆ ಹೊಸ ದೃಷ್ಟಿಯ ನಡವಳಿಕೆ ಅನಿವಾರ್ಯವಾಗುತ್ತದೆ -
>
> - ಅಲ್ಲಿ ಸಮಾನತೆಯಿದೆ ; ಬಡವ, ಶ್ರೀಮಂತರ ನಡುವಣ ಅಂತರ ಕಡಿಮೆ : ಅಧಿಕಾರದ ವಿಚಾರದಲ್ಲಿ ಸ್ತ್ರೀಯರು ಪುರುಷರೂ ಸರಿಸಮಾನರು.
> - ಸಂಪನ್ಮೂಲಕ್ಕೆ ಎಲ್ಲರೂ ಭಾಗಿಗಳು.
> - ಎಲ್ಲರೂ ಕೆಲಸ ನಿರ್ವಹಿಸಬೇಕಾದವರು.
> - ಇವತ್ತಿನ ಶ್ರೀಮಂತರು ದುಂದುಗಾರಿಕೆಯನ್ನು ಮರೆತು ಮಿತವ್ಯಯಿಗಳಾಗಬೇಕು.
> - ಜಗತ್ತಿನ ಯಾವತ್ತು ಜನರ ಮತ್ತು ಅನ್ಯ ಸಂಸ್ಕೃತಿಗಳ ಕಡೆಗೆ, ಜೀವನದ ಶೈಲಿಯ ಕಡೆಗೆ, ನಾವು ಗೌರವವುಳ್ಳವರಾಗಬೇಕು.
>
> ಇವತ್ತು ಯಾವತ್ತು ಪರಿಸರದ ಪಾಲಿಗೆ ಬಂದಿರುವ ವಿನಾಶಕಾರಿ ಪರಿಸ್ಥಿತಿಯು ಅಯೋಗ್ಯ ಅಭಿವೃದ್ಧಿಯ ಫಲವಾಗಿ ಬಂದದ್ದು, ಅದರ ಪರಿಣಾಮ ಜನ ತಿಳಿದ ಎಲ್ಲ ರಾಷ್ಟ್ರಗಳ ಮೇಲೆಯೂ ಹಂಚಿಬೀಳುವುದು ನಿಶ್ಚಯ.[೧]

ಈ ಮೇಲಿನ ಎಲ್ಲ ವಿಚಾರಗಳು ಎಲ್ಲ ಮಟ್ಟದ ಜನಸಮುದಾಯದ ಗಮನಕ್ಕೆ ಬಂದು ಕಾರ್ಯಗತಗೊಂಡಾಗ ಮಾತ್ರ ಅಖಂಡ ಜೀವ ಸಮುದಾಯ ನೆಮ್ಮದಿಯ ಬಾಳನ್ನು ನಡೆಸಲು ಸಾಧ್ಯ ಎಂಬ ವಿಚಾರ ಅರಿವಾಗುತ್ತದೆ. ಹಾಗಾಗಿಯೇ ಎಲ್ಲ ಜ್ಞಾನ ಶಾಖೆಗಳು ಜಗತ್ತಿನಾದ್ಯಂತ ಪರಿಸರದೊಂದಿಗಿನ ಸಂಬಂಧಗಳನ್ನು ಇಟ್ಟುಕೊಂಡೇ ಬೆಳೆಯಬೇಕಾದ ಅನಿವಾರ್ಯತೆ ಇಂದು ಹೆಚ್ಚಾಗುತ್ತಿದೆ. ಆದ್ದರಿಂದಲೇ ಸಾಹಿತ್ಯ ಮತ್ತು ಪರಿಸರದ ನಡುವಿನ ಸಂಬಂಧಗಳನ್ನು ಕುರಿತ ಅಧ್ಯಯನಗಳು ಮುಖ್ಯವಾಗಿ ಕಾಣಿಸುತ್ತಿವೆ. ಈ ಪ್ರಬಂಧದಲ್ಲಿ ಅಂಥ ಪ್ರಯತ್ನವನ್ನು ಮಾಡಲಾಗಿದೆ. ಸಮೃದ್ಧ ಹಾಗೂ ಸುಂದರ ಪರಿಸರವನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಿರುವ ಕುವೆಂಪು ಬೇಂದ್ರೆಯವರ ಸಾಹಿತ್ಯವನ್ನು ಈ ಪ್ರಬಂಧದಲ್ಲಿ ಇಂಥ ಧೋರಣೆಯಿಂದ ವಿಶ್ಲೇಷಿಸಲಾಗಿದೆ..

ಈ ಪ್ರಬಂಧದಲ್ಲಿ ಜಾಗತಿಕ ಪರಿಸರ ವಿಮರ್ಶೆಯ ಹಿನ್ನೆಲೆ ಮುನ್ನೆಲೆ, ಅದರ ಅಧ್ಯಯನ ಮಾದರಿಗಳು, ಅದರ ಧ್ಯೇಯೋದ್ದೇಶಗಳು ಹಾಗೂ ಕನ್ನಡ ಸಂದರ್ಭದ ಪರಿಸರ ವಿಮರ್ಶೆಯನ್ನು ಕುರಿತು ಚಿಂತಿಸಲಾಗಿದೆ.

ಬೇಂದ್ರೆ ಕಾವ್ಯವು ನೆಲ, ಜಲ, ಭೂಮಿ, ಆಕಾಶ ಹಾಗೂ ನಿಸರ್ಗ ಸೌಂದರ್ಯಾನುಭವಗಳ ನೆಲೆಯಲ್ಲಿ ಅಭಿವ್ಯಕ್ತಿಸಿರುವ ಪರಿಸರ ತತ್ವವನ್ನು ಶೋಧಿಸಿಕೊಳ್ಳಲು ಸಹಾಯಕವಾಗಿದೆ. ಯುದ್ಧ ಮತ್ತು ಪರಿಸರ, ಅಭಿವೃದ್ಧಿ ಮತ್ತು ಪರಿಸರ, ಸ್ಥಳೀಯ ಭೌಗೋಳಿಕ ನೆಲೆಗಳ ಮೇಲಿನ ಹಾಗೂ ಅದರ ಹಿಂದಿನ ನಿಸರ್ಗ ದೃಷ್ಟಿಯನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕುವೆಂಪು ಅವರ ಸಾಹಿತ್ಯದ ಪ್ರೇರಣಾ ನೆಲೆಗಳಾದ ಕಾವ್ಯ ಮತ್ತು ಪ್ರಕೃತಿಯೊಂದಿಗಿನ ಅವಿನಾಭಾವ ಸಂಬಂಧಿ ನೆಲೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಸ್ಥಳೀಯತೆ, ಪ್ರಕೃತಿ ಸೌಂದರ್ಯ, ನಿಸರ್ಗ ಹಾಗೂ ಸಾಂಪ್ರದಾಯಿಕ ಜಡ ಮೌಲ್ಯಗಳ ಪ್ರತಿರೋಧಿ ನೆಲೆಗಳನ್ನು ಗಮನಿಸಲಾಗಿದೆ. ಜೀವ ವಿಕಾಸ ಹಾಗೂ ಪರಿಸರ, ನಿಸರ್ಗ ಹಾಗೂ ಜೀವ ಸಂಘರ್ಷಣೆಯ ನೆಲೆಗಳು ಸಾಕಾರಗೊಂಡಿರುವುದನ್ನು ಅಧ್ಯಯನ ಮಾಡಲಾಗಿದೆ. ಆಧುನಿಕ ಭೋಗ ಜೀವನದ ಸ್ವರೂಪ, ನಗರೀಕರಣ ಮತ್ತು ಪರಿಸರ ಸಂಬಂಧಗಳು, ಜನಸಂಖ್ಯಾಸ್ಫೋಟ ಮತ್ತು ಪರಿಸರ - ಈ ವಿಷಯಗಳನ್ನು ಕುರಿತು ಅವರ ಭಾವಗೀತಾತ್ಮಕ ಕಾವ್ಯದ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಅಭಿವ್ಯಕ್ತಗೊಂಡಿರುವ ಪರಿಸರ ವಿಜ್ಞಾನೀಯ ದೃಷ್ಟಿ ನಿಸರ್ಗಾನುಭವ, ಜೀವವೈವಿಧ್ಯತೆ, ನಗರ ಹಾಗೂ ಅರಣ್ಯ ಸಂಸ್ಕೃತಿಗಳ ಸಂಘರ್ಷಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಕುವೆಂಪು ಅವರ ಪುರಾಣ ಪ್ರತಿಮಾ ನಾಟಕಗಳಲ್ಲಿ ಅನಾವರಣಗೊಂಡಿರುವ ಪರಿಸರ - ಸ್ನೇಹಿ ತತ್ವ, ಯುದ್ಧ ಹಾಗೂ ವಿನಾಶ, ಪರಿಸರ ಹೊಂದಾಣಿಕೆ, ಅಹಿಂಸೆ ಹಾಗೂ ಕರುಣೆಯ ತತ್ವಗಳು ಹಾಗೂ ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳನ್ನು ಕುರಿತು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಆಧುನಿಕ ಮಹಾ ಕಾವ್ಯಗಳೆಂದೇ ಖ್ಯಾತಿ ಪಡೆದಿರುವ 'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳಲ್ಲಿ ಚಿತ್ರಿತಗೊಂಡಿರುವ ನಿಸರ್ಗವನ್ನು ಸಮಕಾಲೀನ ಪರಿಸರದೊಂದಿಗೆ ಮುಖಾಮುಖಿಯಾಗಿಸಿ ವಿಶ್ಲೇಷಿಸಲಾಗಿದೆ. ಈ ಎರಡೂ ಕಾದಂಬರಿಗಳಲ್ಲಿನ ಚರಾಚರ ಜಗತ್ತಿನ ಮೇಲೆ ಪ್ರಭುತ್ವ

ನಡೆಸಿರುವ ಅನ್ಯಾಕ್ರಮಣಗಳನ್ನು ಕುರಿತ ವಿಶ್ಲೇಷಣೆಯನ್ನು ಮಾಡಲಾಗಿದೆ. ಪರಿಸರ ಹಾಗೂ ಆಧ್ಯಾತ್ಮ, ಜೀವ ಸಮಾನತಾ ಧೋರಣೆಯ ನೆಲೆಗಳು ಈ ಕಾದಂಬರಿಯಲ್ಲಿ ಅಭಿವ್ಯಕ್ತಗೊಂಡಿರುವ ಬಗೆಗಳನ್ನು ಪರಿಶೀಲಿಸಲಾಗಿದೆ.

ಈ ಅಧ್ಯಯನ ಬೇಂದ್ರೆ - ಕುವೆಂಪು ಅವರ ಸಾಹಿತ್ಯ ಕೃತಿಗಳನ್ನು ಕೇಂದ್ರವಾಗಿಸಿಕೊಂಡು ನಡೆದಿದೆ. ಇದೇ ಬಗೆಯ ಚರ್ಚೆಯನ್ನು ಕನ್ನಡದ ಇನ್ನಿತರ ಲೇಖಕರ ಸಾಹಿತ್ಯವನ್ನು ಕುರಿತು ಹಾಗೂ ಸಾಹಿತ್ಯಕ್ಕೆ ಅನ್ವಯಿಸಿ ನಡೆಸಬಹುದಾಗಿದೆ.

ಕವಿಶೈಲ, ನವಿಲುಕಲ್ಲು, ಸಿಬ್ಬಲುಗುಡ್ಡ, ತುಂಗಾ ನದಿ, ಸಾಧನಕೇರಿ, ಶಾಲ್ಮಲಿ ಪರಿಸರ ಕುವೆಂಪು ಮತ್ತು ಬೇಂದ್ರೆಯವರನ್ನು ಉನ್ಮತ್ತಗೊಳಿಸಿದ ತಾಣಗಳು. ಅಲ್ಲಿನ ಸೂರ್ಯೋದಯ, ಸೂರ್ಯಾಸ್ತಮ, ಚಂದ್ರೋದಯ, ಕ್ರಿಮಿಕೀಟಗಳ ಪ್ರಪಂಚ, ವನ್ಯ ಮೃಗಗಳ ಭಯಾನಕ ಹಾಗೂ ಕುತೂಹಲ ಜಗತ್ತು, ಪಕ್ಷಿ ಲೋಕ, ಹಸಿರಿನ ಸಮೃದ್ಧತೆ, ಮಳೆಯ ವರ್ಣನೆ, ಬೇಟೆ, ಕೃಷಿ ಚಟುವಟಿಕೆಗಳು - ಈ ಎರಡೂ ಸಂವೇದನೆಗಳ ಬಾಲ್ಯವನ್ನು ಸಂಮೋಹನಗೊಳಿಸಿದ್ದರಿಂದಲೇ ಅವರ ಕೃತಿಗಳಲ್ಲಿ ದಟ್ಟವಾದ ಪರಿಸರ ಕೇಂದ್ರೀಕೃತಗೊಂಡಿದೆ. ಆ ಸಂಮೋಹಕತೆ ಅವರಲ್ಲಿ ನಿಸರ್ಗದೊಂದಿಗೆ ತನ್ಮಯತೆ ಬೆಳೆಸಲು ಕಾರಣವಾದದ್ದನ್ನು ಅವರ ಅನೇಕ ಕೃತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಕುವೆಂಪು - ಬೇಂದ್ರೆ ಸಾಹಿತ್ಯ ಕೃತಿಗಳಲ್ಲಿ ಮನುಕುಲ ಇಡಬೇಕಾದ ಹೆಜ್ಜೆಗಳು ಮೂಡಿವೆ. ಈ ಹಿಂದೆ - ಮಾನವ ಸಮುದಾಯ ಇಟ್ಟ ಹೆಜ್ಜೆಗಳ ಫಲವಾಗಿ ಎದುರಾದ ಮನುಷ್ಯನ ಆತಂಕದ ಗುರುತುಗಳು ಇಲ್ಲಿವೆ. ಕೇವಲ ಮಾನವ ಸಮುದಾಯದ ಕ್ಷೇಮ ಹಾಗೂ ಬದುಕನ್ನು ಮಾತ್ರ ಕೇಂದ್ರೀಕರಿಸಿಕೊಂಡಿದ್ದರಿಂದಾಗಿ ಅಖಂಡಪರಿಸರ ಮಲಿನಗೊಂಡು ಮಾರಕವಾಗಿ ಪರಿಣಮಿಸಿದೆ. ಜಲ, ನೆಲ, ವಾಯು ಮಾಲಿನ್ಯ ಪರಿಸರದ ಆರೋಗ್ಯವನ್ನೇ ಹದಗೆಡಿಸಿದೆ. ಅಂದರೆ ಮಾನವ ತನ್ನ ಅನುಕೂಲಕ್ಕಾಗಿ ಅವನ ಸುತ್ತಣ ಪರಿಸರವನ್ನು ಅಭಿವೃದ್ಧಿಗೊಳಿಸುವ ನೆಪಗಳಲ್ಲಿ ಅಖಂಡ ಪರಿಸರದ ಚೈತನ್ಯವನ್ನು ಕುಂಠಿತಗೊಳಿಸಿದ್ದಲ್ಲದೆ ಪ್ರಾಕೃತಿಕ ಹಾಗೂ ಜೈವಿಕ ಸಂಪನ್ಮೂಲಗಳ ವಿನಾಶಕ್ಕೂ ಕಾರಣವಾಗಿ ಪರಿಣಮಿಸಿದ್ದಾನೆ. ಕುವೆಂಪು - ಬೇಂದ್ರೆಯವರ ಸಾಹಿತ್ಯ ಕೃತಿಗಳಲ್ಲಿ ಪ್ರಕಟಗೊಂಡಿರುವ ನಿಸರ್ಗ ತತ್ವಗಳು ಮಾನವ ಸಮುದಾಯದ ವಿವೇಕವನ್ನು ಎಚ್ಚರಿಸುತ್ತವೆಂಬ ವಿಶ್ವಾಸ, ನಂಬಿಕೆಯಿಂದ ಈ ಅಧ್ಯಯನವನ್ನು ಗಂಭೀರವಾಗಿ ಮಾಡಲಾಗಿದೆ.

ಅಡಿಟಿಪ್ಪಣಿ :

೧. ಭಾರತದ ಪರಿಸರದ ಪರಿಸ್ಥಿತಿ - ೧೯೮೨ರ ಸಂಗ್ರಹಕಾರರು, ಶಿವರಾಮ ಕಾರಂತ (ಅನು) ; ಭಾರತದ ಪರಿಸರದ ಪರಿಸ್ಥಿತಿ - ೧೯೮೨, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೨, ಪು. V - VII.

ಅನುಬಂಧಗಳು

೧. ಇಕಾಲಜಿ, ಪರಿಸರ ಅಥವಾ ಪ್ರಕೃತಿ ವ್ಯಾಖ್ಯೆಗಳು

೨. ಆಕರ ಗ್ರಂಥಗಳು

೩. ಪರಾಮರ್ಶನ ಗ್ರಂಥಗಳು

ಅಹಾ, ಈ ಪ್ರಕೃತಿಯೌದಾರ್ಯದೆದುರಿನಲಿ
ಮಾನವನ ನೀಚ ಕೃಪಣತೆ ಎನಿತು ಹೀನವಾಗಿ ತೋರುವುದು!

* * *

ಅಹ! ನಾಕವೆ ನಮ್ಮ ಲೋಕಕೆ ಕಳಚಿ ಬಿದ್ದಿದೆ ಬನ್ನಿರಿ!
ತುಂಬಿಕೊಳ್ಳಲು ನಿಮ್ಮ ಹೃದಯದ ಹೊನ್ನ ಬಟ್ಟಲ ತನ್ನಿರಿ.

– ಕುವೆಂಪು

ಅನುಬಂಧ – ೧

ಇಕಾಲಜಿ, ಪರಿಸರ ಅಥವಾ ಪ್ರಕೃತಿ ವ್ಯಾಖ್ಯೆಗಳು

ಪ್ರಸ್ತುತದಲ್ಲಿ ಪರಿಸರ ತೀವ್ರವಾದ ನಾಗರೀಕ ಚಟುವಟಿಕೆಗಳಿಂದ ಹೆಚ್ಚು ಘಾಸಿಗೊಳ್ಳುತ್ತಿದ್ದು, ಅದಕ್ಕೆ ಪರಿಹಾರವೇ ಇಲ್ಲದಂತಾಗುತ್ತಿದೆ. ಹಾಗಾಗಿ ಜಾಗತಿಕ ನೆಲೆಯಲ್ಲಿ ಪರಿಸರವು ಇಂದು ಪ್ರಮುಖವಾಗಿದೆ. ಆದ್ದರಿಂದ ಪ್ರಾಥಮಿಕವಾಗಿ ಇಕಾಲಜಿ ಅಥವಾ ಪರಿಸರವೆಂದರೇನು? ಎಂಬ ಪ್ರಶ್ನೆಯನ್ನು ಹಾಕಿಕೊಂಡು ಮುಂದುವರಿದರೆ ಹೆಚ್ಚು ಉಪಯುಕ್ತವಾಗುತ್ತದೆ. ೧೯೬೦ರ ದಶಕದಿಂದೀಚೆಗೆ ಪರಿಸರವನ್ನು ಕುರಿತಂತೆ ಸಾಕಷ್ಟು ವ್ಯಾಖ್ಯೆಗಳು ರೂಪುಗೊಂಡವು, ಅಷ್ಟೇ ವ್ಯಾಪಕವಾದ ಚರ್ಚೆಗಳು ಆರಂಭವಾದವು. ಪರಿಸರವನ್ನು ಕುರಿತಂತೆ ಇದುವರೆಗೂ ಹೊರಬಂದಿರುವ ವ್ಯಾಖ್ಯೆಗಳೆಲ್ಲವೂ ಸರಿಸುಮಾರಾಗಿ ಒಂದೇ ಅರ್ಥವನ್ನು ಕೊಡುತ್ತವೆ. ಹಾಗಾಗಿ ಅಧ್ಯಯನದ ಸಂದರ್ಭದಲ್ಲಿ ನಾನು ಗಮನಿಸಿದ ಎಲ್ಲ ವ್ಯಾಖ್ಯೆಗಳನ್ನು ಒಂದೆಡೆ ಕ್ರೋಢೀಕರಿಸಿದ್ದೇನೆ. ಇಕಾಲಜಿ, ಪರಿಸರ ಅಥವಾ ಪ್ರಕೃತಿ ಎಂದರೆ ಏನು? ಎಂಬ ಪ್ರಶ್ನೆಗೆ ಈ ವ್ಯಾಖ್ಯೆಗಳು ಮತ್ತು ಅರ್ಥಗಳು ಸಮಗ್ರ ಮಾಹಿತಿಯನ್ನು ಒದಗಿಸುತ್ತವೆ ಎಂಬ ಉದ್ದೇಶದಿಂದ ವ್ಯಾಖ್ಯೆಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಒಟ್ಟಾರೆಯಾಗಿ ಪರಿಸರ ಅಥವಾ ಇಕಾಲಜಿಯ ವ್ಯಾಖ್ಯೆಯನ್ನು ಯಾವ ನಿರ್ದಿಷ್ಟ ಅರ್ಥದಲ್ಲಿ ಬಳಸಲಾಗಿದೆ ಎಂಬುದು ಕೂಡ ಅಷ್ಟೇ ಮುಖ್ಯವಾದುದು.

೧. ಪ್ರಕೃತಿಯು ಜಗತ್ತಿನ ಸೃಷ್ಟಿಗೆ ಮೂಲದ್ರವ್ಯ. ಪ್ರಕೃತಿಯು ಕಲಾತತ್ತ್ವದ ವಾಸ್ತವಿಕ ಪರಿಣಾಮ. ಪ್ರಕೃತಿಯು ಮಹಾಕಾರಣ ಸ್ವರೂಪ. ಇದು ಜಡ ಚೇತನಗಳ ನಡುವಿನ ಸೇತುವೆ. ಪ್ರಕೃತಿಯು ಎರಡು ಅವಸ್ಥೆಗಳಲ್ಲಿರುತ್ತದೆ. ಒಂದು ಅವ್ಯಕ್ತ ಅಥವಾ ಪ್ರಕೃತಿ ಇನ್ನೊಂದು ವ್ಯಕ್ತ ಅಥವಾ ವಿಕೃತಿ.

೨. ಪ್ರಕೃತಿ - ಅಜಾ, ಅಜೆ, ಅಜ್ಞಾನ, ಅಂತ, ಉತ್ಪತ್ತಿ, ಜನಿ, ಜನುಮ, ಜನ್ಮ, ಧರ್ಮ, ನಿಸರ್ಗ, ಪ್ರಧಾನ, ಮೂಲ, ಸೃಷ್ಟಿ, ಮಾಯಾ, ಹುಟ್ಟು.

೩. ಪರಿಸರ - ಇದು ಸಂಸ್ಕೃತ ಶಬ್ದ. ಪರಿ + ಸರ ಎಂದು ವ್ಯುತ್ಪತ್ತಿ. 'ಪರಿಸರ : ಪ್ರಾಂತ ಭೂ :' ಎಂದು ಹೇಮಕೋಶವೆಂಬ ನಿಘಂಟಿನಲ್ಲಿದೆ. 'ಪರ್ಯಂತ ಭೂ : ಪರಿಸರ:' ಎಂದೂ ಅಮರದಲ್ಲಿದೆ. ಪರಿತಃ ಸರಂತ್ಯತ್ರ ಎಂದು ಟೀಕೆ. ಸೃ - ಗತೌ ಎಂದು ವಿವರಣೆ.

೪. ಪರಿಸರ - ಸುತ್ತುಮುತ್ತು, ಆವರಣ, ಸನ್ನಿವೇಶ

ಇಕಾಲಜಿ - ಪರಿಸರದ ಅಧ್ಯಯನ ಶಾಸ್ತ್ರ.

೫. ಪರಿಸರ - ಸುತ್ತುಮುತ್ತು, ಸನ್ನಿವೇಶ

೬. ಪರಿಸರ - ಹೊಳೆ, ಗುಡ್ಡದ ಹತ್ತಿರವಿರುವ ಭೂಮಿ.

೭. ಪರಿಸರ - ಸಮೀಪ, ಸುತ್ತುವರಿಯುವಿಕೆ.

೮. ಪರಿಸರ - ಸಮೀಪ, ನೆರೆಹೊರೆ.

೯. ಪರಿಸರ - Going round, standing place, positions, Environs, bounds, border, neighbourhood.

೧೦. ಇಕಾಲಜಿ - ಒಂದು ಪರಿಸರಕ್ಕೆ ಸಂಬಂಧಿಸಿದಂತೆ ಸಸ್ಯಗಳು, ಪ್ರಾಣಿಗಳು, ಜನರು ಅಥವಾ ಸಂಸ್ಥೆಗಳ ಅಭ್ಯಾಸ.

೧೧. ಇಕಾಲಜಿ - ಸಸ್ಯಶಾಸ್ತ್ರ ಮತ್ತು ಜೀವಶಾಸ್ತ್ರದ ಭಾಗವಾಗಿದೆ. ಸಸ್ಯಗಳು ಮತ್ತು ಪ್ರಾಣಿಗಳು ತಮ್ಮ ಸುತ್ತಣ ಪರಿಸರದೊಂದಿಗೆ ಪಡೆದಿರುವ ಸಂಬಂಧದ ಅಧ್ಯಯನವೇ ಇಕಾಲಜಿ. ಆಕೃತಿ ಮತ್ತು ರಚನೆಯನ್ನು ಒಳಗೊಂಡಂತೆ ಇಕಾಲಜಿ ಜೀವಶಾಸ್ತ್ರಕ್ಕೆ ಅಥವಾ ಶರೀರ ವಿಜ್ಞಾನಕ್ಕೆ ಸಂಬಂಧಿಸಿದ್ದನ್ನು ಸಹ ಒಳಗೊಂಡಿದೆ. ಅಂತೆಯೇ ಉಷ್ಣಮಾನ, ಬೆಳಕು, ಮಳೆ, ಭೌತಿಕ ಮತ್ತು ರಸಾಯನಿಕವಾದ ಮಣ್ಣಿನ ಪ್ರಕೃತಿ, ಬಗೆಬಗೆಯ ಸಸ್ಯಗಳು, ಪ್ರಾಣಿಗಳು ಹಾಗೂ ಮನುಷ್ಯನ ಪ್ರಭಾವವನ್ನು ಕುರಿತಂತೆ ಅಧ್ಯಯನ ಮಾಡುತ್ತದೆ.

೧೨. ಇಕಾಲಜಿ - ಜೀವಶಾಸ್ತ್ರದ ಭಾಗವಾಗಿ ಸೂಕ್ಷ್ಮಜೀವಿಗಳ ಮತ್ತು ಅವು ಜೀವಿಸುವ ಪರಿಸರದ ನಡುವಣ ಸಂಬಂಧವಾಗಿದೆ. ಸಮಾಜಶಾಸ್ತ್ರದ ಭಾಗವಾಗಿ ಜನ ಮತ್ತು ಸಂಸ್ಥೆಗಳ ನಡುವೆ ಏರ್ಪಡುವ ಅನ್ಯೋನ್ಯ ಸಂಬಂಧವಾಗಿದೆ.

೧೩. ಇಕಾಲಜಿ - ಜೀವಶಾಸ್ತ್ರದ ಭಾಗವಾಗಿ ಪರಿಗಣಿಸಲಾಗಿದೆ. ಜೀವಿಗಳು ಮತ್ತು ಅವು ಜೀವಿಸುವ ಪರಿಸರಕ್ಕೆ ಇರುವ ಸಂಬಂಧದ ಅಧ್ಯಯನವೇ ಇಕಾಲಜಿ. ಆದರೆ ಇತ್ತೀಚೆಗೆ ಇದನ್ನು ಮನುಷ್ಯ ಮತ್ತು ಆತನ ಸುತ್ತಲಿನ ಪರಿಸರ ಎಂದು ನೋಡಲಾಗಿದೆ. ಇಕಾಲಜಿ ಸಮಗ್ರತೆಯನ್ನು ಪಡೆದುಕೊಂಡ ಪ್ರಮುಖ ಶಿಸ್ತಾಗಿ ಭೌತಿಕ, ಜೈವಿಕ ಮತ್ತು ಸಮಾಜ ವಿಜ್ಞಾನಗಳ ಜೊತೆ ಸಂಬಂಧವನ್ನು ಕಲ್ಪಿಸಿಕೊಂಡಿದೆ. ಅಂತೆಯೇ ಸಸ್ಯಗಳ, ಪ್ರಾಣಿಗಳ, ಸೂಕ್ಷ್ಮಜೀವಿಗಳ ಹಾಗೂ ಮನುಷ್ಯರ ನಡುವಿನ ಬೆಸುಗೆಯಾಗಿದೆ. ಇಕಾಲಜಿ ಎನ್ನುವುದು ಕೇವಲ ಸೂಕ್ಷ್ಮ ಜೀವಿಗಳಿಗೆ ಮಾತ್ರ ಸಂಬಂಧಿಸಿರದೆ ಭೂಮಿ, ಸಮುದ್ರ, ಗಾಳಿ, ಶುದ್ಧವಾದ ನೀರು... ಇವುಗಳಲ್ಲಿ ಉಂಟಾಗುವ ಶಕ್ತಿ ಮತ್ತು ವಸ್ತುಗಳ ಚಲನೆಗೂ ಕೂಡ ಸಂಬಂಧಿಸಿದೆ. ಪರಿಸರವನ್ನು ರಚಿಸುವ ಲಕ್ಷಣವಾಗಿಯೂ ಇಕಾಲಜಿ ಕಾರ್ಯ ನಿರ್ವಹಿಸಿದೆ. ಅಭಿವೃದ್ಧಿ ಪರಿಕಲ್ಪನೆಗಳು ಆತಂಕಕಾರಿ ಏರಿಳಿತಗಳನ್ನು ಉಂಟು ಮಾಡುತ್ತಿದ್ದಾಗ, ಮನುಷ್ಯ ಪರಿಸರಕ್ಕೆ ಆಗುತ್ತಿದ್ದ ಆಘಾತಗಳನ್ನು ತಿಳಿದುಕೊಂಡಾಗ ಇಕಾಲಜಿ ಶಬ್ದದ ಅರ್ಥ ಮತ್ತಷ್ಟು ವಿಸ್ತಾರವಾಯಿತು. ಪರಿಸರವನ್ನು ಕುರಿತಂತೆ ಕಾಳಜಿ, ಚಳವಳಿಗಳು ಬೆಳಕಿಗೆ ಬಂದವು. ಹಾಗಾಗಿ ಇಕಾಲಜಿಯನ್ನು ಪರಿಸರ ಸಂಬಂಧಿ ಜೀವಶಾಸ್ತ್ರ ಎಂದು ಕರೆಯಲಾಗಿದೆ. ಜರ್ಮನ್ - ಮತ್ತು ರಷ್ಯನ್ ಸಾಹಿತ್ಯಗಳಲ್ಲಿ ಇಕಾಲಜಿಯನ್ನು 'ಬಯೋಜಿಯೋಶನೊಸಿಸ್' (Biogeocoenosis) ಎಂದು ಬಳಸಿದ್ದಾರೆ. ಜೀವ ಮತ್ತು ಜಗತ್ತು ಒಟ್ಟಾಗಿ ಕೆಲಸ ಮಾಡುವುದು ಎಂದರ್ಥ.

೧೪. ಇಕಾಲಜಿ - ಪ್ರಾಣಿಗಳ ಮತ್ತು ಸಸ್ಯಗಳ ನಡುವಿನ ಸಂಬಂಧಗಳ ಅಧ್ಯಯನವಾಗಿದೆ. ಅಂತೆಯೇ ಚೇತನಾಚೇತನ ವಸ್ತುಗಳ ಹಾಗು ಅವುಗಳ ಸುತ್ತಣ ಪರಿಸರದ ಅಧ್ಯಯನವೂ ಆಗಿದೆ.

೧೫. ಇಕಾಲಜಿ - ಜೀವ ಪರಿಸ್ಥಿತಿ ಶಾಸ್ತ್ರ. ಜೀವಿಗಳಿಗೂ ಹಾಗು ಅವುಗಳ ಸುತ್ತಣ ಸನ್ನಿವೇಶಗಳಿಗೂ ಇರುವ ಸಂಬಂಧವನ್ನೂ, ಅಂತೆಯೇ ಅವುಗಳ ಜೀವ ವಿಧಾನ ಮತ್ತು ಶೀಲ ಸ್ವಭಾವಾದಿಗಳನ್ನು ಕುರಿತ ಜೀವಶಾಸ್ತ್ರದ ಭಾಗವಾಗಿದೆ.

೧೬. ಇಕಾಲಜಿ - ಜೀವಶಾಸ್ತ್ರದ ಭಾಗವಾಗಿ ಸೂಕ್ಷ್ಮಜೀವಿಗಳು ಮತ್ತು ಅವುಗಳ ಪರಿಸರವನ್ನು ಅಧ್ಯಯನ ಮಾಡುವುದಾಗಿದೆ. ಹಾಗೆಯೇ ಅವುಗಳ ನಡುವೆ ಏರ್ಪಡುವ ಅಂತರ್ ಸಂಬಂಧಗಳ ಗ್ರಹಿಕೆಯೂ ಆಗಿದೆ. ಇಕಾಲಜಿ ಎಂಬ ಪದವನ್ನು ಮೊದಲು ಬಳಸಿದವರು ಹೆಕಲ್ ಎಂಬುವರು. ಈ ಪದವನ್ನು ಮೊದಲ ಬಾರಿ ೧೮೬೬ರಲ್ಲಿ ಬಳಸಲಾಯಿತು. ಸಮಾಜ ಮತ್ತು ಪರಿಸರದ ನಡುವೆ ಏರ್ಪಡುವ ಸಂಬಂಧವನ್ನು ಸೋಷಿಯಲ್ ಇಕಾಲಜಿ ಅಥವಾ ಸಾಮಾಜಿಕ ಪರಿಸರ ವಿಜ್ಞಾನ ಎಂದು ಕರೆಯಬಹುದು.

೧೭. ಇಕಾಲಜಿ - ಪರಿಸರ ವಿಜ್ಞಾನ - ಜೀವಿಗಳಿಗೂ ಅವುಗಳ ಪರಿಸರಕ್ಕೂ ಇರುವ ಪರಸ್ಪರ ಸಂಬಂಧವನ್ನು ಕುರಿತ ಜೀವವಿಜ್ಞಾನ ವಿಭಾಗ. ಪರಿಸರ ವೃತ್ತಾಂತ (ಯಾವುದೇ ಜೀವಿಗೆ ಸಂಬಂಧಿಸಿದಂತೆ) ಪರಿಸರ ವಿಜ್ಞಾನ ದೃಷ್ಟಿಯಿಂದ ಮಹತ್ವವುಳ್ಳ ಎಲ್ಲ ವಿಚಾರ. ಮಾನವ ಪರಿಸರ ವಿಜ್ಞಾನ : ಒಂದು ಮಾನವ ಸಮುದಾಯಕ್ಕೂ ಅದರ ಪರಿಸರಕ್ಕೂ ಇರುವ ಸಂಬಂಧವನ್ನು ಕುರಿತ ಸಮಾಜಶಾಸ್ತ್ರದ ವಿಭಾಗ.

೧೮. ಇಕಾಲಜಿ ಎಂದರೆ ಮಾನವನ ಎಲ್ಲ ಕ್ಷೇತ್ರದ ಎಲ್ಲ ತಿಳುವಳಿಕೆಗಳ ಕ್ರೋಢೀಕರಣ. ಜೀವಜಾಲದ ಅನ್ಯೋನ್ಯ ಸಂಬಂಧಗಳ ಅದೃಶ್ಯ ತಂತುಗಳನ್ನು ಅರಿಯುವುದು.

೧೯. ಜೀವ ಪರಿಸರ ವಿಜ್ಞಾನ (Ecology) - ಒಂದು ನಿರವಯದ ಭೌಗೋಳಿಕ ಪರಿಸರ ಮತ್ತು ಅಲ್ಲಿ ಜೀವಿಸುವ ಜೀವಿಗಳ ಸಂಬಂಧ, ಹೋರಾಟ, ಹೊಂದಾಣಿಕೆ ಮತ್ತು ಜೀವಜಾಲಗಳ ಸೂಕ್ಷ್ಮ ಅಧ್ಯಯನಕ್ಕೆ ಸಂಬಂಧಿಸಿದ ವಿಜ್ಞಾನ.

ಅಡಿಟಿಪ್ಪಣಿ :

೧. ಅ.ರಾ.ಸೇ. (ಪ್ರ.ಸಂ.) ; ಪರಮಾರ್ಥ ಪದಕೋಶ, Published by Sri S.M. Deepak for Kamadhenu, ೧೯೯೯, ಪು. ೨೩೫-೨೩೬.

೨. ಹನಸೋಗೆ ಜೆ.ಎಂ. ; ಕನ್ನಡ ಸಮನಾರ್ಥ ಕೋಶ, ನಭಶ್ರೀ ಪ್ರಕಾಶಕರು, ಮೈಸೂರು, ೧೯೭೪, ಪು. ೯೨.

೩. ವೆಂಕಟಸುಬ್ಬಯ್ಯ ಜಿ. ; ಇಗೋ ಕನ್ನಡ (ಸಾಮಾಜಿಕ ನಿಘಂಟು), ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೬, ಪು. ೨೭೦.

೪. ಶೇಷಗಿರಿರಾವ್ ಎಲ್.ಎಸ್. (ಸಂ) ; ಸುಭಾಷ್ ಕನ್ನಡ - ಕನ್ನಡ - ಇಂಗ್ಲಿಷ್ - ಇಂಗ್ಲಿಷ್ - ಕನ್ನಡ ನಿಘಂಟು, ಸುಭಾಷ್ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧, ಪು. ૩೧೨.

೫. ನಾಯಕ ಹಾ.ಮಾ. (ಪ್ರ.ಸಂ.) ; ಕನ್ನಡ ರತ್ನಕೋಶ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೯೪, ಪು. ೧೪೨.

೬. ಶ್ರೀನಿವಾಸ ಹಾವನೂರ (ಸಂ) ; ಗಂಗಾಧರ ಮಡಿವಾಳೇಶ್ವರ ತುರಮುರಿ ಅವರ ಸಕೀಟಿನ ಶಬ್ದಮಂಜರಿ ಕೋಶ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೧೯೯೯, ಪು. ೧೦೮.

೭. ಶಿವರಾಮ ಕಾರಂತ (ಸಂ) ; ಸಿರಿಗನ್ನಡ ಅರ್ಥಕೋಶ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೧, ಪು. ೩೨೨.

೮. ಸೇಡಿಯಾಪು ಕೃಷ್ಣಭಟ್ಟ (ಸಂ) ; ಕನ್ನಡ ನಿಘಂಟು, ದಿ ಮಂಗಳೂರು ಟ್ರೇಡಿಂಗ್ ಅಸೋಸಿಯೇಷನ್ ಲಿಮಿಟೆಡ್, ಮಂಗಳೂರು, ೧೯೫೧, ಪು. ೧೭೮.

೯. ಮರಿಯಪ್ಪ ಭಟ್ಟ ಎಂ. ; ಕಿಟಲ್‌ರ ಕನ್ನಡ - ಇಂಗ್ಲಿಷ್ ಡಿಕ್ಷನರಿ, ಮದರಾಸು ವಿಶ್ವವಿದ್ಯಾಲಯ, ೧೯೭೫, ಪು. ೧೦೦೮.

೧೦. ಭಾರದ್ವಾಜ ಡಿ.ಕೆ. (ಸಂ) ; ಸ್ಟ್ಯಾಂಡರ್ಡ್ ಡಿಕ್ಷನರಿ, ಬಿ.ಜಿ. ಸಂಕೇಶ್ವರ ಮತ್ತು ಕಂಪನಿ, ಗದಗ, ೧೯೯೮, ಪು. ೪೨೨.

೧೧. Parrish F.M. (Ed) ; The New Standard Encyclopaedia and World Atlas, The Times of India, Bombay, 1936, P-427.

೧೨. Laurence Urdang (Ed. in. Chief) ; The Randam House College Dictionary, The Random House dictionary of the English Language, College Education, U.S.A., 1968, P-418.

೧೩. Eugene P. Odum ; Ecology : The Link between the Natural and Social Sciences, Oxford and IBH Publishing Co., New Delhi, 1978, P. 1-13.

೧೪. Abercrombie M., Hickman C.J. and Johnson M.L. ; The Penguin dictionary of Biology, Penguin Books, 1980, P. 97.

೧೫. ನಾಯಕ ಹಾ.ಮಾ. ಪ್ರ.ಸಂ. ; ಶಿಕ್ಷಣ ಶಾಸ್ತ್ರದ ಪಾರಿಭಾಷಿಕ ನಿಘಂಟು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೧೯೮೧, ಪು. ૩೯೪.

೧೬. Frolov. I ; Dictionary of Philosophy, Progress Publishers, Moscow, 1984, P. 117.

೧೭. ಬಾಲಸುಬ್ರಮಣ್ಯ ಎನ್ (ಪ್ರ.ಸಂ.) ; ಸಂಪುಟ ೩, ಇಂಗ್ಲಿಷ್ - ಕನ್ನಡ ನಿಘಂಟು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೬, ಪು. ೧೬೨೫-೧೬೨೬.

೧೮. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಪ್ರದೀಪ ಕೆಂಜಿಗೆ ; ವಿಸ್ಮಯ (೧), ಪುಸ್ತಕ ಪ್ರಕಾಶನ, ಮೈಸೂರು, ೨೦೦೬, ಪು. ೯೯.

೧೯. ಪುಟ್ಟಸ್ವಾಮಿ ಕೆ. (ಅನು) ; ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೭, ಪು. ೧೧೧.

ಅನುಬಂಧ – ೨

ಆಕರ ಗ್ರಂಥಗಳು

೧. ಅಂಬಿಕಾತನಯದತ್ತ ; ಮರ್ಯಾದೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೬.

೨. -"- ; ನಮನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೮.

೩. -"- ; ಮುಗಿಲಮಲ್ಲಿಗೆ, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೬೧.

೪. -"- ; ಉತ್ತರಾಯಣ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೦.

೫. -"- ; ಸಖೀಗೀತ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೧.

೬. -"- ; ಉಯ್ಯಾಲೆ, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೫೦.

೭. -"- ; ಗಂಗಾವತರಣ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೧.

೮. -"- ; ನಾದಲೀಲೆ, ಮಾಧವ ಸನ್ಸ್, ಬೆಂಗಳೂರು, ೧೯೪೬.

೯. -"- ; ಮೂರ್ತಿ ಮತ್ತು ಕಾಮಕಸ್ತೂರಿ, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೪೬.

೧೦. -"- ; ಬಾಲಬೋಧೆ, ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೩.

೧೧. -"- ; ಇದು ನಭೋವಾಣಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೦.

೧೨. -"- ; ಗರಿ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೧.

೧೩. -"- ; ಅರಳು ಮರಳು, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ, ೧೯೬೯.

೧೪. -"- ; ಹಾಡುಪಾಡು, ಆನಂದ ಸಾಹಿತ್ಯ ಮಂದಿರ, ಗಲಗಲಿ, ೧೯೪೬.

೧೫. -"- ; ಕೃಷ್ಣಾಕುಮಾರಿ ಮತ್ತು ಹಾಡುಪಾಡು, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬.

೧೬. -"- ; ಮತ್ತೆ ಶ್ರಾವಣಾ ಬಂತು, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೩.

೧೭. -"- ; ಶ್ರೀಮಾತಾ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೮.

೧೮. -"- ; ಯಕ್ಷ-ಯಕ್ಷಿ, ಪ್ರತಿಭಾ ಗ್ರಂಥಮಾಲೆ, ಧಾರವಾಡ, ೧೯೬೨.

೧೯. -"- ; ಸಖೀಗೀತ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ, ೧೯೭೫.

೨೦. -"- ; ಕನ್ನಡ ಮೇಘದೂತ, ಬಳವಂತ ನಾರಾಯಣ, ಬಾಗಲವಾಡಿ, ಧಾರವಾಡ, ೧೯೪೩.

೨೧. ಬೇಂದ್ರೆ ದ.ರಾ. (ಅನು) ; ಭಾರತೀಯ ನವಜನ್ಮ, ಶ್ರೀ ಅರವಿಂದ ಗ್ರಂಥಾಲಯ, ಚಡಚಣ, ವಿಜಾಪುರ, ೧೯೭೪.

೨೨. -"- ; ಮಾತೆಲ್ಲ ಜ್ಯೋತಿ, ದ.ರಾ. ಬೇಂದ್ರೆ ಅವರ ಹತ್ತು ಉಪನ್ಯಾಸಗಳು, ಎಕಾಡಮಿ ಆಫ್ ಜನರಲ್ ಎಡ್ಯುಕೇಷನ್, ಮಣಿಪಾಲ, ೧೯೭೨.

೨೩. -"- ; ವಿನಯ, ಗೀತಾ ಬುಕ್ ಹೌಸ್, ಮೈಸೂರು, ೧೯೭೨.

೨೪. -"- ; ಸಾಹಿತ್ಯ - ಸಂಶೋಧನ, ಮನೋಹರ, ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೦.

೨೫. -"- ; ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮.

೨೬. -"- ; ವಿಚಾರಮಂಜರಿ, ಗೀತಾ ಬುಕ್ ಹೌಸ್, ಮೈಸೂರು, ೧೯೬೯.

೨೭. ವಾಮನಬೇಂದ್ರೆ (ಸಂ) ; ಅಂಬಿಕಾತನಯದತ್ತರ ಸಮಗ್ರ ಕಾವ್ಯ ನಮನ, ಸಂಪುಟ ೧, ವರಕವಿ ಡಾ|| ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ವಿಶ್ವ ಶ್ರಮ ಚೇತನ, ಹುಬ್ಬಳ್ಳಿ, ೨೦೦೩.

೨೮. -"- ; ಅಂಬಿಕಾತನಯದತ್ತರ ಸಮಗ್ರ ಕಾವ್ಯ ದರ್ಶನ, ಸಂಪುಟ ೨, ವರಕವಿ ಡಾ|| ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ವಿಶ್ವಶ್ರಮ ಚೇತನ, ಹುಬ್ಬಳ್ಳಿ, ೨೦೦೩.

೨೯. -"- ; ಅಂಬಿಕಾತನಯದತ್ತರ ಸಮಗ್ರ ಕಾವ್ಯ, ವಿಕಾಸ, ಸಂಪುಟ ೩, ವರಕವಿ ಡಾ|| ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ವಿಶ್ವಶ್ರಮ ಚೇತನ, ಹುಬ್ಬಳ್ಳಿ, ೨೦೦೩.

೩೦. -"- ; ಅಂಬಿಕಾತನಯದತ್ತರ ಸಮಗ್ರ ಕಾವ್ಯ ವಿನ್ಯಾಸ, ಸಂಪುಟ ೪, ವರಕವಿ ಡಾ|| ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ವಿಶ್ವಶ್ರಮ ಚೇತನ, ಹುಬ್ಬಳ್ಳಿ, ೨೦೦೩.

೩೧. -"- ; ಅಂಬಿಕಾತನಯದತ್ತರ ಸಮಗ್ರ ಕಾವ್ಯ, ತತ್ತ್ವ, ಸಂಪುಟ ೫, ವರಕವಿ ಡಾ|| ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ವಿಶ್ವಶ್ರಮ ಚೇತನ, ಹುಬ್ಬಳ್ಳಿ, ೨೦೦೩.

೩೨. -"- ; ಅಂಬಿಕಾತನಯದತ್ತರ ಸಮಗ್ರ ಕಾವ್ಯ ಸಿದ್ಧಾಂತ, ಸಂಪುಟ ೬, ವರಕವಿ ಡಾ|| ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, ೨೦೦೩.

೩೩. -"- ; ಔದುಂಬರ ಗಾಥೆ, ಅಂಬಿಕಾತನಯದತ್ತರ ಸಮಗ್ರ ಸಖೀಗೀತ, ಸಂಪುಟ ೮, ವರಕವಿ ಡಾ|| ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ವಿಶ್ವಶ್ರಮ ಚೇತನ, ಗೋಕುಲ ರಸ್ತೆ, ಹುಬ್ಬಳ್ಳಿ, ೨೦೦೬.

೩೪. ಶಿವಾರೆಡ್ಡಿ ಕೆ.ಸಿ. (ಸಂ) ; ಕುವೆಂಪು ಸಮಗ್ರ ಕಾವ್ಯ ಸಂಪುಟ - ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೦

೩೫. -"- ; ಕುವೆಂಪು ಸಮಗ್ರ ಕಾವ್ಯ ಸಂಪುಟ - ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೦.

೩೬. -"- ; ಕುವೆಂಪು ಸಮಗ್ರ ಗದ್ಯ, ಸಂಪುಟ - ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೩.

೩೭. -"- ; ಕುವೆಂಪು ಸಮಗ್ರ ಗದ್ಯ, ಸಂಪುಟ - ೨, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪.

೩೮. -"- ; ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕ.ವಿ.ವಿ, ಹಂಪಿ, ೨೦೦೪.

೩೯. ಕುವೆಂಪು ; ನೆನಪಿನ ದೋಣಿಯಲ್ಲಿ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ೧೯೮೦.

೪೦. ಕುವೆಂಪು ; ಶ್ರೀ ರಾಮಾಯಣ ದರ್ಶನಂ, ಉದಯರವಿ ಪ್ರಕಾಶನ, ಮೈಸೂರು.

ಅನುಬಂಧ – ೩

ಪರಾಮರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ ಮತ್ತು ನೀಲಗಿರಿ ತಳವಾರ ; ಕುವೆಂಪು : ಪುನರ್ಮನನ, ಪ್ರಸಾರಾಂಗ, ಮೈಸೂರು ವಿ.ವಿ., ಮಾನಸ ಗಂಗೋತ್ರಿ, ಮೈಸೂರು, ೨೦೦೪.

೨. ಅಡಿಗ ಗೋಪಾಲಕೃಷ್ಣ (ಅನು) ; ವಾಲ್ಟ್ ವಿಟ್‌ಮನ್ ಹುಲ್ಲಿನ ದಳಗಳು, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೯೬.

೩. ಅನಂತನಾರಾಯಣ ಎಸ್. ; ಕಾರಂತರ ಕಾದಂಬರಿಗಳಲ್ಲಿ ನಿಸರ್ಗ, ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ, ೧೯೯೧.

೪. ಅರವಿಂದ ಮಾಲಗತ್ತಿ (ಪ್ರ.ಸಂ.) ; ಕುವೆಂಪು ಕೃತಿ ವಿಮರ್ಶೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ., ಮಾನಸ ಗಂಗೋತ್ರಿ, ಮೈಸೂರು, ೨೦೦೬.

೫. ಅಶೋಕ ಟಿ.ಪಿ. ; ಕುವೆಂಪು ಕಾದಂಬರಿ ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೪.

೬. ಅಕ್ಷರ ಕೆ.ವಿ. (ಅನು) ; ಪ್ರತಿಭೆಯ ಒಂದು ಪ್ರವಾಹ, ಶಿವ ವಿಶ್ವನಾಥನ್ ಅವರ ಆಯ್ದ ಲೇಖನಗಳು ; ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೮.

೭. ಆನಂದ ಕೆ. ಕುಮಾರಸ್ವಾಮಿ, ಐ.ಬಿ. ಹಾರ್ನರ್ ; ಗೌತಮ ಬುದ್ಧ ; (ಅನು) ಜಿ. ಸಚ್ಚಿದಾನಂದನ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೧೯೭೮.

೮. ಆಮೂರ ಜಿ.ಎಸ್. ; ಭುವನದ ಭಾಗ್ಯ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೯೬.

೯. ಇನಾಂದಾರ್ ವಿ.ಎಂ. ; ಕುವೆಂಪು ಕಾದಂಬರಿಗಳು, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೯.

೧೦. ಈಶ್ವರ ಚಂದ್ರ ; ಮರಗಳು ಏಷಿಯಾ / ಪೆಸಿಫಿಕ್ ಮರಗಳನ್ನು ಕುರಿತು (ಅನುವಾದ), ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ನವದೆಹಲಿ, ೧೯೯೭.

೧೧. ಉದ್ದಂಡಯ್ಯ, ಕುವೆಂಪು ಕಥನ, ಅಧ್ಯಯನ ಮಂಡಲ, ಬೆಂಗಳೂರು, ೨೦೦೪.

೧೨. ಉಲ್ಲಾಸ ಕಾರಂತ ಕೆ. ; ಕಾಡು ಪ್ರಾಣಿಗಳ ಜಾಡಿನಲ್ಲಿ, ಅತ್ರಿ ಬುಕ್ ಸೆಂಟರಿನ ೩೩ನೇ ಪ್ರಕಟಣೆ, ೨೦೦೧.

೧೩. ಎಚ್ಚೆಸ್ಕೆ ; ಶ್ರೀ ಕುವೆಂಪು ಸಾಹಿತ್ಯದಲ್ಲಿ ವಿಶಿಷ್ಟಾದ್ವೈತದ ಸುಳುಹು ಹೊಳವುಗಳು, ಸಹ್ಯಾದ್ರಿ ಪ್ರಕಾಶನ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ೧೯೯೪.

೧೪. ಎನ್ಕೆ ; ಬಹುಮುಖ ಪ್ರತಿಭೆಯ ಬೇಂದ್ರೆ, ಶ್ರೀ ಪ್ರೇಮಸಾಯಿ ಪ್ರಕಾಶನ, ಶ್ರೀ ಗುರುಪ್ರಸಾದ, ೮೪೫, ೪ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು - ೪೦, ೨೦೦೪.

೧೫. ಕೀರ್ತಿನಾಥ ಕುರ್ತುಕೋಟಿ ; ನೂರು ಮರ ನೂರು ಸ್ವರ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೮.

೧೬. - „ - ; ಉರಿಯ ನಾಲಗೆ, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೩.

೧೭. - „ - ; ರೊಮ್ಯಾಂಟಿಸಿಜಮ್ ಕರ್ನಾಟಕ ಸಾಹಿತ್ಯ ಅಕಾಡೆಮಿ, ೨೦೦೧.

೧೮. - „ - ; ಜಿ.ಬಿ. ಜೋಶಿ (ಸಂ), ಪುಟ - ಬಂಗಾರ, ಸಂಪುಟ : ಐದು, ಶ್ರಾವಣ ಪ್ರತಿಭೆ, ಮನೋಹರ ಗ್ರಂಥಮಾಲಾ, ಧಾರವಾಡ, ೧೯೮೭.

೧೯. ಕುಮುದ ಪ್ರಿಯ ; ಕಾನೂರು ಹೆಗ್ಗಡಿತಿಯ ವಿಮರ್ಶೆ, ಸಾಹಿತ್ಯನಿಕೇತನ, ಬೆಂಗಳೂರು.

೨೦. ಕುಲಕರ್ಣಿ ಎನ್ಕೆ ; ಸಾವಿರದ ವರಕವಿ ಬೇಂದ್ರೆ, ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೮೨.

೨೧. -"- ; ದ.ರಾ. ಬೇಂದ್ರೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೧.

೨೨. ಕುಲಕರ್ಣಿ ಆರ್.ಜಿ. ; ಜೋಗಿಯ ನಾದಧ್ವನಿ, ಶ್ರೀ ಅರವಿಂದ ಮಂಡಳ ಪ್ರಕಾಶನ, ೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು, ೧೯೬೯.

೨೩. ಕೃಷ್ಣಕಟ್ಟೆ ; ಬೇಂದ್ರೆ ಮತ್ತು ಕನ್ನಡ ಭಾವಗೀತದ ಸ್ವರೂಪ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೬.

೨೪. ಕೃಷ್ಣಶಾಸ್ತ್ರಿ ಎ.ಆರ್ ; ರವೀಂದ್ರನಾಥ ಠಾಕೂರ್ ನಿಬಂಧ ಮಾಲಾ ಭಾಗ ೨, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೬೩.

೨೫. ಕೃಷ್ಣಮೂರ್ತಿ ಎಂ.ಜಿ. ; ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು, ಅಕ್ಷರ ಪ್ರಕಾಶನ, ಸಾಗರ, ೧೯೭೦.

೨೬. ಕೃಷ್ಣಮೂರ್ತಿ ಕೆ.ಎಸ್. ; ಉಪನಿಷತ್ತುಗಳ ಸಾರ, ಕಾವ್ಯಾಲಯ ಪ್ರಕಾಶನ, ಜಯನಗರ, ಮೈಸೂರು, ೨೦೦೪.

೨೭. ಕೃಷ್ಣಕುಮಾರ್ ಸಿ.ಪಿ. ; ಬೇಂದ್ರೆ: ನಾಲ್ಕು ನೋಟ, ಶಕ್ತಿ ಪ್ರಕಾಶನ, ಗೋಕುಲಂ, ೩ನೇ ಹಂತ, ಮೈಸೂರು, ೧೯೯೯.

೨೮. ಕೃಷ್ಣಪ್ಪ ಜಿ. ; ಹಾಡು ಹಕ್ಕಿ ಅಂಬಿಕಾತನಯದತ್ತ, ಶ್ರೀ ರಂಗ ಪ್ರಕಾಶನ, ಮೈಸೂರು, ೧೯೯೫.

೨೯. ಕೊಟ್ಟಲಗಿ ಮತ್ತು ಗದಗಕರ ; ಬೇಂದ್ರೆ ಸಾಹಿತ್ಯ ಸೌರಭ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೫.

೩೦. ಗಜೇಂದ್ರಗಡ್ ಎಸ್.ಬಿ. ; ಘೋರೋ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೯.

೩೧. ಗಿರಡ್ಡಿ ಗೋವಿಂದರಾಜ (ಸಂ), ಆಧುನಿಕ ಕನ್ನಡ ಕಾವ್ಯ ಉತ್ತರ ಕರ್ನಾಟಕದ ಕೊಡುಗೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯.

೩೨. ಗುರುಪಾದ ಮರಿಗುದ್ದಿ ; ಕುವೆಂಪು ಕಾದಂಬರಿಗಳಲ್ಲಿ ಪರಿಸರ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೯.

೩೩. -"- ; ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ, ಸಹ್ಯಾದ್ರಿ ಪ್ರಕಾಶನ, ಜಯಲಕ್ಷ್ಮೀಪುರಂ, ಮೈಸೂರು, ೧೯೮೯.

೩೪. ಗೊರೂರು ರಾಮಸ್ವಾಮಿ ಐಯ್ಯಂಗಾರ್ ; ಹಳ್ಳಿಯ ಬಾಳು, ಕಾವ್ಯಾಲಯ ಪ್ರಕಾಶನಕರು, ಜಯನಗರ, ಮೈಸೂರು, ೧೯೯೯.

೩೫. ಚಂದ್ರಪೂಜಾರಿ ಎಂ. ; ಪರಿಸರ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೮.

೩೬. ಚಂದ್ರಶೇಖರ ನಂಗಲಿ ವಿ. ; ಕುವೆಂಪು ಕಾದಂಬರಿಗಳಲ್ಲಿ ಜೈವಿಕ ಜಾಲ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೧.

೩೭. ಚನ್ನಪ್ಪ ಎಸ್. (ಸಂ) ; ಬೇಂದ್ರೆ ಸಾಹಿತ್ಯ ಚಿಂತನೆ, ಎಸ್.ಬಿ.ಎಸ್. ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ರೈಲ್ವೆ ಪ್ಯಾರಲಲ್ ರೋಡ್, ಕುಮಾರಪಾರ್ಕ್ ಈಸ್ಟ್, ಬೆಂಗಳೂರು, ೧೯೯೭.

೩೮. ಚಾರ್ಲ್ಸ್ ಡಾರ್ವಿನ್ ; ಜೀವಸಂಕುಲಗಳ ಉಗಮ, (ಅನು) ಪುಟ್ಟಸ್ವಾಮಿ ಕೆ., ಹಸಿರು ಪ್ರಕಾಶನ, ಬೆಂಗಳೂರು, ೧೯೯೧.

೩೯. ಜಯದೇವ ಜಿ.ಎಸ್. ; ಪರಿಸರ ವಿಜ್ಞಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩.

೪೦. 'ಜೀವಿ' ಕುಲಕರ್ಣಿ ; ನಾ ಕಂಡ ಬೇಂದ್ರೆ : ಜೀವನ ಮತ್ತು ಸಾಹಿತ್ಯ, ಹರ್ಷವರ್ಧನ ಪ್ರಕಾಶನ, ಮುಂಬಯಿ, ೧೯೯೭.

೪೧. ದೇಜಗೌ ; ಕುವೆಂಪು ದರ್ಶನ ಸಂಪುಟ ೧, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೬.

೪೨. -"- (ಪ್ರ.ಸಂ.) ; ಸಹ್ಯಾದ್ರಿ, ಕುವೆಂಪು ಅಭಿನಂದನಾ ಗ್ರಂಥ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ವಾಣಿವಿಲಾಸಪುರಂ, ಮೈಸೂರು, ೧೯೭೫.

೪೩. - " - ; ಕುವೆಂಪು ನಿಘಂಟು, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್, ಜಯಲಕ್ಷ್ಮೀಪುರಂ, ಮೈಸೂರು, ೨೦೦೧.

೪೪. - " - (ಪ್ರ.ಸಂ.) ; ಪುಸ್ತಕ ಪ್ರಪಂಚ, ಥಾಮಸ್ ಹಾರ್ಡಿ : ವಿಶೇಷ ಸಂಚಿಕೆ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೮೭.

೪೫. - " - (ಸಂ) ; ಗಂಗೋತ್ರಿ ಕುವೆಂಪು ಅಭಿನಂದನಾ ಗ್ರಂಥ, ಕುವೆಂಪು ಅಭಿನಂದನಾ ಸಮಿತಿ, ಗೀತಾ ಬುಕ್ ಹೌಸ್, ಮೈಸೂರು, ೧೯೬೮.

೪೬. - " - ; ರಾಷ್ಟ್ರಕವಿ ಕುವೆಂಪು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫.

೪೭. - " - (ಸಂ) ; ರಾಷ್ಟ್ರಕವಿ ಭಾಷಣಗಳು, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್ತು, ಮೈಸೂರು, ೧೯೮೬.

೪೮. - " - (ಸಂ) ; ಶ್ರೀ ರಾಮಾಯಣ ದರ್ಶನಂ ಉಪನ್ಯಾಸ ಮಾಲೆ, ಸಾಹಿತ್ಯ ದರ್ಶನ ಮಾಲೆ, ಗುರುಕೃಪ, ವಿ.ವಿ. ಮೊಹಲ್ಲ, ಮೈಸೂರು, ೧೯೫೪.

೪೯. - " - (ಸಂ) ; ಕುವೆಂಪು ನಮನ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ, ತೀರ್ಥಹಳ್ಳಿ ತಾಲ್ಲೂಕು, ೧೯೯೫.

೫೦. - " - ; ವಿಚಾರ ಕ್ರಾಂತಿಗೆ ಕುವೆಂಪು ಕರೆ, ಭಾರತ ಜನಜ್ಞಾನ ವಿಜ್ಞಾನ ಜಾಥ, C/o. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, ೧೯೯೩.

೫೧. ದೇವುಡು ನರಸಿಂಹ ಶಾಸ್ತ್ರಿ (ಅನು) ; ಹೆನ್ರಿ ಡೇವಿಡ್ ಥೋರೊ, ವಾಲ್ಡನ್, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೬೪.

೫೨. ನಟರಾಜ್ ಹುಳಿಯಾರ್ ; ಆಫ್ರಿಕನ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಆಧುನಿಕತೆ ಮತ್ತು ಪರಂಪರೆ ತೌಲನಿಕ ಅಧ್ಯಯನ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೪.

೫೩. ನರಸಿಂಹಸ್ವಾಮಿ ಕೆ.ಎಸ್. ; ಉಪವನ, ಕಾವ್ಯಾಲಯ ಪ್ರಕಾಶಕರು, ಮೈಸೂರು.

೫೪. ನರಸಿಂಹಾಚಾರ್ ಡಿ.ಎಲ್. (ಅನು) ; ಎಲ್ಲ ಮನುಷ್ಯರು ಸಹೋದರರು, ದಿ ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ ಲಿಮಿಟೆಡ್, ಬೆಂಗಳೂರು, ೧೯೬೪.

೫೫. ನಾಗಭೂಷಣ ಡಿ.ಎಸ್. ; ಕುವೆಂಪು : ಒಂದು ಪುನರನ್ವೇಷಣೆ, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೫.

೫೬. ನಾಗರಾಜ್ ಡಿ.ಆರ್. ; ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩.

೫೭. - " - ; ಅಮೃತ ಮತ್ತು ಗರುಡ, ಪುಸ್ತಕ ಚಂದನ, ವಿಜಯನಗರ, ಬೆಂಗಳೂರು, ೧೯೮೩.

೫೮. ನಾಗಭೂಷಣ ಸ್ವಾಮಿ ಓ.ಎಲ್. ; ವಿಮರ್ಶೆಯ ಪರಿಭಾಷೆ, ಅಂಕಿತ ಪ್ರಕಾಶನ, ಬೆಂಗಳೂರು, ೧೯೯೮.

೫೯. ನಾಗೇಶ ಹೆಗಡೆ ; ಪರಿಸರ ವಿಜ್ಞಾನ, ಪ್ರತಿದಿನ ಪರಿಸರ ದಿನ, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೦.

೬೦. - " - ; ಇರುವುದೊಂದೇ ಭೂಮಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೮.

೬೧. - " - (ಅನು) ; ಗಾಳಿಗೆ ವಿಷ ನೀರಿಗೆ ವಿಷ, ನ್ಯಾಷನಲ್ ಬುಕ್ ಟ್ರಸ್ಟ್, ೨೦೦೦.

೬೨. ಪರಮೇಶ್ವರಭಟ್ಟ ಎಸ್.ವಿ. ; ರಸ ಋಷಿ ಕುವೆಂಪು, ಮೂರನೆಯ ಸಂಪುಟ, ಪ್ರಸಾರಾಂಗ, ಮೈ.ವಿ.ವಿ., ಮೈಸೂರು, ೧೯೯೬.

೬೩. - " - ; ರಸ ಋಷಿ ಕುವೆಂಪು, ಮೊದಲ ಸಂಪುಟ, ಪ್ರಸಾರಾಂಗ, ಮೈ.ವಿ.ವಿ., ಮೈಸೂರು, ೧೯೯೫.

೬೪. ಪ್ರಭುಶಂಕರ ; ಹೀಗಿದ್ದರು ಕುವೆಂಪು, ಡಿ.ವಿ.ಕೆ. ಪ್ರಕಾಶಕರು, ಮೈಸೂರು, ೨೦೦೨.

೬೫. ಪೀಟರ್ ಫಾರ್ಬ್ ; ಜೀವಂತ ಭೂಮಿ, (ಅನು) ಡಿ.ಎಸ್. ಶಿವಪ್ಪ, ಗೀತಾ ಬುಕ್‌ಹೌಸ್, ಮೈಸೂರು, ೧೯೬೯.

೬೬. ಪಾಟೀಲ ಕಲ್ಲನಗೌಡ ; ಅರಣ್ಯ ಮತ್ತು ಮಾನವ, ಸೇವಾ ಕುಸುಮ ಮಾಲೆ, ಧಾರವಾಡ, ೧೯೭೬.

೬೭. ಪಾರ್ವತಿ ಎಚ್.ಎಸ್. ; ನವೋದಯ ಕಾವ್ಯದಲ್ಲಿ ಪ್ರಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೬.

೬೮. ಪುಟ್ಟಯ್ಯ ಈ.ಟಿ. ; ಪರಿಸರ ಮತ್ತು ಮಾನವ, ಸಂಕಲನ, ವಿದ್ಯಾರಣ್ಯಪುರ, ಮೈಸೂರು, ೧೯೮೮.

೬೯. ಪುಟ್ಟಸ್ವಾಮಿ ಕೆ (ಅನು) ; ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು, ಮೂಲ - ಸುನಿಲ್ ಸಹಸ್ರಬುಧೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೭.

೭೦. ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ ಕೆ., ಜೀವಜಾಲ, ಹಸಿರು ಪ್ರಕಾಶನ, ಬೆಂಗಳೂರು, ೧೯೯೯.

೭೧. ಪೂರ್ಣಚಂದ್ರ ತೇಜಸ್ವಿ ಕೆ.ಪಿ. ; ಅಣ್ಣನ ನೆನಪು, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು, ೧೯೯೯.

೭೨. ಫ್ರಿಜೋ ಕಾಪ್ರಾ ; ಸತ್ಯದ ನವದರ್ಶನ (ಭಾ), ನಿ. ಮುರಾರಿ ಬಲ್ಲಾಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೩.

೭೩. ಬಿರಾದಾರ ಎಂ.ಜಿ. ; ಶ್ರೀ ರಾಮಾಯಣ ದರ್ಶನದಲ್ಲಿ 'ಕುವೆಂಪು ಸೃಜಿಸಿದ ಮೂರು ಪಾತ್ರಗಳು', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೧.

೭೪. ಬುಚ್ ಎಂ.ಎನ್. ; ಪರಿಸರ ಪ್ರಜ್ಞೆ ನಗರ ನಿರ್ಮಾಣ, (ಅನು) ನಾಗೇಶ ಹೆಗಡೆ, ಓರಿಯಂಟ್ ಲಾಂಗ್‌ಮನ್, ಮದರಾಸ್, ೧೯೯೩.

೭೫. ಬುದ್ದಣ್ಣ ಹಿಂಗಮಿರೆ (ಸಂ) ; ಇಳಿದು ಬಾ ತಾಯಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೭.

೭೬. ಭಟ್ಟ ಜಿ.ಎಸ್. (ಸಂ) ; ಬೇಂದ್ರೆ ಸಾಹಿತ್ಯ ವಿಹಾರ, ಚೇತನ ಬುಕ್ ಹೌಸ್, ಮೈಸೂರು, ೧೯೯೯.

೭೭. ಭೈರಪ್ಪ ಕೆ. ; ಸುಂದರ ಪರಿಸರ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೭೮. -"- ; ಪರಿಸರ ಅಧ್ಯಯನ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೫.

೭೯. ಮರುಳಯ್ಯ ಸಾ.ಶಿ. (ಸಂ) ; ಅನಿಕೇತನ ಶ್ರೀ ಕುವೆಂಪು ಕುರಿತ ಮಹಾಸಂಪುಟ, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೫.

೮೦. ಮರುಳಸಿದ್ಧಯ್ಯ ಎಚ್.ಎಂ. (ಅನು) ; ಗಾಂಧೀಯ ಅರ್ಥಶಾಸ್ತ್ರ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ಮೂರನೇ ಮುದ್ರಣ, ೨೦೦೫.

೮೧. ಮಹೇಶನ್ ಎಂ. ; ಪರಿಸರ ಪ್ರಜ್ಞೆ ಕಥೆ - ವ್ಯಥೆ, ಪರಿಸರ ಪ್ರಕಾಶನ, ಬೆಂಗಳೂರು, ೧೯೯೮.

೮೨. ಮಾಧವ ಐತಾಳ್ (ಅನು) ; ಬತ್ತದ ಚಿಲುಮೆ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೨೦೦೫.

೮೩. ಮುಗಳಿ ರಂ.ಶ್ರೀ ; ಬೇಂದ್ರೆ ಕಾವ್ಯ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೮೬.

೮೪. ಮೋಹನಕೃಷ್ಣ ರೈ.ಕೆ. ; ನಗರೀಕರಣ, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೭.

೮೫. -"- ; ಪರಿಸರ ಚಳುವಳಿಗಳು, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೯.

೮೬. ಮೋ.ಕ. ಗಾಂಧಿ ; ಖಾದಿ - ಗ್ರಾಮೋದ್ಯೋಗ, ಗಾಂಧಿ ಸ್ಮಾರಕ ನಿಧಿ ಪ್ರಕಾಶನ, ಕನ್ನಡ ಗಾಂಧಿ ಗ್ರಂಥಮಾಲೆ (೭), ಕರ್ನಾಟಕ ಶಾಖೆ.

೮೭. -"- ; ಗಾಂಧಿ ಮತ್ತು ಠಾಕೂರ, ಗಾಂಧಿ ಸ್ಮಾರಕ ನಿಧಿ ಪ್ರಕಾಶನ, ಕನ್ನಡ ಗಾಂಧಿ ಗ್ರಂಥಮಾಲೆ (೧೩), ೧೯೬೦.

೮೮. -"- ; ನನ್ನ ಕನಸಿನ ಭಾರತ, ಗಾಂಧಿ ಸ್ಮಾರಕ ನಿಧಿ ಪ್ರಕಾಶನ, ಕನ್ನಡ ಗಾಂಧಿ ಗ್ರಂಥಮಾಲೆ (೧೧), ೧೯೬೦.

೮೯. -"- ; ಸರ್ವೋದಯ, ಗಾಂಧಿ ಸ್ಮಾರಕ ನಿಧಿ ಪ್ರಕಾಶನ, ಕರ್ನಾಟಕ ಶಾಖೆ, ೧೯೬೦.

೯೦. -"- ; ಸತ್ಯ, ಗಾಂಧಿ ಸ್ಮಾರಕ ನಿಧಿ ಪ್ರಕಾಶನ, ಕರ್ನಾಟಕ ಶಾಖೆ, ೧೯೬೦.

೯೧. ಯಶೋಧರಾ ಎಚ್.ಬಿ. ; ಕುವೆಂಪು ಸಾಹಿತ್ಯ ಚಿಂತನ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್ತು, ಮೈಸೂರು, ೧೯೭೮.

೯೨. ರಂಧಾವ ಎಂ.ಎಸ್. ; ಹೂವಿನ ಮರಗಳು, (ಅನು) ಎಸ್.ಎನ್. ರಾಮಸ್ವಾಮಿ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೧೯೭೩.

೯೩. ರಮಣ ಎಂ.ವಿ.ವಿ. ; ಭಾರತದ ಅಂತರ್‌ರಾಜ್ಯ ನದಿ ನೀರು ವಿವಾದಗಳು, (ಅನು) ಮುರಳೀಧರ ಖಜಾನೆ, ಓರಿಯಂಟ್ ಲಾಂಗ್ ಮನ್, ಮದರಾಸ್, ೧೯೯೩.

೯೪. ರಮಾನಂದ ಕೆ. ; ರಾಷ್ಟ್ರಕವಿ ಕುವೆಂಪು, ದಿವ್ಯಚಂದ್ರ ಪ್ರಕಾಶನ, ನಂ. ೪೫, ಪಾಪಣ್ಣನ ತೋಟ, ೧ನೇ ಮುಖ್ಯರಸ್ತೆ, ೨ನೇ ಅಡ್ಡರಸ್ತೆ, ಕ.ಹೌ.ಬೋರ್ಡ್ ಕಾಲೋನಿ ೩ನೇ ಹಂತ, ಬಸವೇಶ್ವರನಗರ, ಬೆಂಗಳೂರು, ೨೦೦೪.

೯೫. ರವಿಕುಮಾರ ನ. (ಸಂ) ; ದೇಶೀ ದರ್ಶನಗಳು, ಅಭಿನವ, ಸಂಖ್ಯೆ ೪೧೪೮/ಎ, ೩ನೇ ಮುಖ್ಯರಸ್ತೆ, 'ಬಿ' ವಿಭಾಗ, ರಾಜಾಜಿನಗರ ೨ನೇ ಹಂತ, ಬೆಂಗಳೂರು, ೧೯೯೯.

೯೬. ರವೀಂದ್ರನಾಥ ಟಾಗೋರ್, ಕಲೆಯ ಅರ್ಥ, (ಅನು) ಎಚ್.ಎಸ್. ಶ್ರೀಮತಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಂಗಳೂರು, ೧೯೮೮.

೯೭. ರಾಘವೇಂದ್ರರಾವ್ ಎಚ್.ಎಸ್. ; ಹಾಡೆಹಾದಿಯ ತೋರಿತು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು, ೧೯೯೫.

೯೮. ರಾಘವೇಂದ್ರ ರಾವ್ ಕೆ. (ಸಂ) ; ಬೇಂದ್ರೆ ಅನುಸಂಧಾನ, ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ, ೨೦೦೬.

೯೯. ರಾಜಶೇಖರ್ ನಿ. ; ಶ್ರೀ ರಾಮಾಯಣ ದರ್ಶನಂ ಸರಳ ಗದ್ಯಾನುವಾದ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೮.

೧೦೦. ರಾಜೇಂದ್ರ ಚೆನ್ನಿ ; ಕರುಳಬಳ್ಳಿಯ ಸೊಲ್ಲು, ಅಭಿನವ, ನಂ. ೪೧೪೮/ಎ, ೩ನೇ ಮುಖ್ಯರಸ್ತೆ, ರಾಜಾಜಿನಗರ ೨ನೇ ಹಂತ, 'ಬಿ' ವಿಭಾಗ, ಬೆಂಗಳೂರು - ೨೧, ೨೦೦೧.

೧೦೧. ರಾಮಚಂದ್ರ ಗುಹಾ ; ಜಾಗತಿಕ ಪರಿಸರ ಚರಿತ್ರೆ - ಪರಿಸರ ಸಿದ್ಧಾಂತಗಳ ಅಂತರ್ ಸಾಂಸ್ಕೃತಿಕ ಅಧ್ಯಯನ, (ಅನು) ಮಾಧವ ಐತಾಳ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯.

೧೦೨. ರಾಮಕೃಷ್ಣ ರಾ. ; ನಾದಲೀಲೆ, ಚೇತನ ಬುಕ್ ಹೌಸ್, ಚಾಮರಾಜ ಜೋಡಿ ರಸ್ತೆ, ಮೈಸೂರು, ೧೯೯೫.

೧೦೩. ರಾವ್ ಎಂ.ಎಸ್.ಎಸ್. ; ಜೀವಪರಿಸರ ವಿಜ್ಞಾನ, ಕನ್ನಡ ಅಧ್ಯಯನ ಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦೪. ಲತಾ ರಾಜಶೇಖರ್ ; ಕುವೆಂಪು ಕಾವ್ಯದಲ್ಲಿ ಪ್ರಕೃತಿ - ಒಂದು ಅಧ್ಯಯನ, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್, ಜಯಲಕ್ಷ್ಮೀಪುರಂ, ಮೈಸೂರು, ೨೦೦೩.

೧೦೫. ಲೀಲಾವತಿ ಎಂ.ಎನ್. ; ಸಖೀಗೀತ, ಚೇತನ ಬುಕ್ ಹೌಸ್, ಚಾಮರಾಜ ಜೋಡಿ ರಸ್ತೆ, ಮೈಸೂರು, ೧೯೯೫.

೧೦೬. ವಾಸುಕಿ ಕೆ.ಜಿ. (ಸಂ) ; ಕರ್ನಾಟಕದ ಪರಿಸರ, ಪ್ರಸಾರಾಂಗ, ಕ.ವಿ.ವಿ, ಹಂಪಿ, ೧೯೯೫.

೧೦೭. ವಿಜ್ಞಾನ ಮತ್ತು ಸಮಾಜ ; ಒಂದು ವಿಚಾರಧಾರೆ, ಪ್ರಸಾರಾಂಗ, ಬೆಂ.ವಿ.ವಿ., ಬೆಂಗಳೂರು, ೧೯೭೭.

೧೦೮. ವಿನಯಲಾಲ್ ಮತ್ತು ಅಶೀಶ್ ನಂದಿ (ಸಂ) ; ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೭.

೧೦೯. ವಿವಿಧ ಲೇಖಕರು ; ಕನ್ನಡ ಸಾಹಿತ್ಯದಲ್ಲಿ ನಿಸರ್ಗ ಮತ್ತು ಸಾಮಾಜಿಕ ಸ್ಥಿತ್ಯಂತರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

೧೧೦. ವಿವಿಧ ಲೇಖಕರು, ಕದಳೀವನ ಕರ್ಪೂರ, ಅಭಿನವ ಪ್ರಕಾಶನ, ಬೆಂಗಳೂರು, ೧೯೯೬.

೧೧೧. ವಿವೇಕಾನಂದ್ ಟಿ.ಎಸ್. ಮತ್ತು ಶೇಷಗಿರಿ ಜೋಡಿದಾರ್ ; ಪರಿಸರ ನಿಘಂಟು, ಇಂದ್ರಪ್ರಸ್ಥ ಪ್ರಕಾಶನ, ಬೆಂಗಳೂರು, ೨೦೦೨.

೧೧೨. ವೀರಪ್ಪ ಕೆ.ಎಂ. ; ಹಸಿರು ನಮ್ಮ ಉಸಿರು, ಶಾಕುಂತಲ ಪ್ರಕಾಶನ, ಸರಸ್ವತಿಪುರಂ, ಮೈಸೂರು, ೧೯೯೨.

೧೧೩. - " - ; ಪರಿಸರ ಸಂರಕ್ಷಣಾ ಕಾಯ್ದೆ ೧೯೮೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೧೧೪. ವೆಂಕಣ್ಣಯ್ಯ ಟಿ.ಎಸ್. ; ಪ್ರಾಚೀನ ಸಾಹಿತ್ಯ, ವಿಶ್ವ ಕನ್ನಡ ಸಮ್ಮೇಳನ, ಬೆಂಗಳೂರು, ೧೯೮೩.

೧೧೫. ವೆಂಕಟನಾರಾಯಣಪ್ಪ ಬೆಳ್ಳಾವೆ ; ಜೀವ ವಿಜ್ಞಾನ, ಬಿ.ಎಂ. ಶ್ರೀಕಂಠಯ್ಯ (ಸಂ), ಮೈಸೂರು ವಿ.ವಿ., ಮೈಸೂರು, ೧೯೩೯.

೧೧೬. ಶಂಕರ ಮೊಕಾಶಿ ಪುಣೇಕರ ; ಅಪೂರ್ಣ ವರ್ತಮಾನಕಾಲ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೫.

೧೧೭. -"- ; ಬೇಂದ್ರೆ ಕಾವ್ಯ ಮೀಮಾಂಸೆ, ಸಾಹಿತ್ಯ ಭಂಡಾರ, ಬೆಂಗಳೂರು, ಎರಡನೇ ಮುದ್ರಣ-೧೯೮೯.

೧೧೮. ಶಾರದಾ ಗೋಪಾಲ (ಅನು) ; ಪರಿಸರ ನ್ಯಾಯದ ತಕ್ಕಡಿಯಲ್ಲಿ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೧೧೯. ಶಿವರಾಮ ಕಾರಂತ (ಅನು) ; ನಮ್ಮ ಸುತ್ತಲಿನ ಕಡಲು, ಹರ್ಷ ಮುದ್ರಣ ಪ್ರಕಟಣಾಲಯ, ಪುತ್ತೂರು, ದ.ಕ., ೧೯೫೬.

೧೨೦. -"- (ಅನು), ಭಾರತದ ಪರಿಸರದ ಪರಿಸ್ಥಿತಿ - ೧೯೮೨, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೪.

೧೨೧. -"- : ಭಾರತದ ಪರಿಸರ, ದ್ವಿತೀಯ ಸಮೀಕ್ಷೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೬.

೧೨೨. -"- : ನಮ್ಮೆಲ್ಲರಿಗೂ ಒಂದೇ ಭವಿಷ್ಯ, ವಿಶ್ವ ಪರಿಸರ ಸಮೀಕ್ಷೆ (ಸಂಗ್ರಹಾನುವಾದ), ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೯.

೧೨೩. -"- ; ಕೀಟನಾಶಕಗಳ ಪಿಡುಗು ಬೆಳೆಯುತ್ತಿರುವ ಸಮಸ್ಯೆ (ಸಂಗ್ರಹ ಮತ್ತು ಅನುವಾದ), ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೩.

೧೨೪. -"- ; ನಮ್ಮ ಪರಮಾಣು ಚೈತನ್ಯ, ಅಕ್ಷರ ಪ್ರಕಾಶನ, ಸಾಗರ, ೧೯೮೬.

೧೨೫. ಶಿವರಾಮ ಪಡಿಕ್ಕಲ್ ; ನಾಡು - ನುಡಿಯ ರೂಪಕ, ಪ್ರಸಾರಾಂಗ, ಮಂಗಳೂರು ವಿ.ವಿ., ಮಂಗಳ ಗಂಗೋತ್ರಿ, ೨೦೦೧.

೧೨೬. ಶಿವರುದ್ರಪ್ಪ ಜಿ.ಎಸ್. ; ಕುವೆಂಪು : ಪುನರಾಲೋಕನ, ಅಂಕಿತ ಪುಸ್ತಕ, ಬೆಂಗಳೂರು, ೨೦೦೫.

೧೨೭. -"- ; ಶ್ರೀ ಕುವೆಂಪು : ರಸಚಿಂತನೆಯ ಮಿಂಚುಗಳು, ಸಹ್ಯಾದ್ರಿ ಪ್ರಕಾಶನ, ಕವಿಶೈಲ, ಶ್ರೀ ಕುವೆಂಪು ವಿದ್ಯಾಪರಿಷತ್ತು, ಮೈಸೂರು, ೧೯೮೭.

೧೨೮. -"- (ಸಂ) ; ಕವಿ ಬೇಂದ್ರೆ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂ.ವಿ.ವಿ., ಬೆಂಗಳೂರು, ೧೯೭೫.

೧೨೯. ಶಿವನಂಜಯ್ಯ ಮು. ; ಕುವೆಂಪು ವ್ಯಕ್ತಿತ್ವ ಮತ್ತು ಸಾಹಿತ್ಯ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, ೧೯೭೫.

೧೩೦. ಶಿವರಾಮ ಕಾರಂತ ಕೆ. ; ಸ್ವಾರ್ಥಿ ಮಾನವ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೮೧.

೧೩೧. ಶಿವರಾಮ ರೈ.ಪಿ. ; ಪರಿಸರ ಅಂದು - ಇಂದು, ಕಾವ್ಯಾಲಯ ಪ್ರಕಾಶಕರು, ಮೈಸೂರು, ೨೦೦೨.

೧೩೨. ಶಿವಾರೆಡ್ಡಿ ಕೆ.ಸಿ. ; ಕನ್ನಡದ ಹಾಡು ಪಾಡು, ಅಧ್ಯಯನ ಮಂಡಲ, ಬೆಂಗಳೂರು, ೨೦೦೩.

೧೩೩. -"- ; ಅಂಬಿಕಾತನಯನ ನಂಬಿಕೆಯ ಹಾಡು, ಪ್ರಸಾರಾಂಗ, ಕ.ವಿ.ವಿ., ಹಂಪಿ, ೧೯೯೯.

೧೩೪. ಶೈಲಜಾ ಆರ್ (ಸಂ) ; ವಿವರಣಾತ್ಮಕ ಪರಿಸರ ಅರ್ಥಕೋಶ, ಓರಿಯಂಟ್ ಲಾಂಗ್‌ಮನ್, ೨೦೦೨.

೧೩೫. ಶ್ರೀಕಂಠ ಕೂಡಿಗೆ ; ಕುವೆಂಪು ಕುರಿತು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, ೨೦೦೪.

೧೩೬. ಶ್ರೀ ಕೃಷ್ಣ ಆಲನಹಳ್ಳಿ ; ಅವಲೋಕನ, ಕುವೆಂಪು ಸನ್ಮಾನ ಸಮಿತಿ, ವಿದ್ಯಾರ್ಥಿ ಬಳಗ, ಗೀತಾ ಬುಕ್ ಹೌಸ್, ಮೈಸೂರು, ೧೯೭೬.

೧೩೭. ಶ್ರೀಧರ ಬಿ.ಎಚ್. ; ಬೇಂದ್ರೆ, ಮಹಾತ್ಮ ಗಾಂಧೀ ಮೆಮೋರಿಯಲ್ ಕಾಲೇಜು, ಉಡುಪಿ, ೧೯೫೬.

೧೩೮. ಶ್ರೀನಿವಾಸ ಎಸ್. ; ಪರಿಸರ ಸಂರಕ್ಷಣೆ, ಪುರಸಭಾ ಪ್ರಥಮದರ್ಜೆ ಕಾಲೇಜು, ಹುಣಸೂರು, ೧೯೮೪.

೧೩೯. ಶ್ರೀಪಾದ ಭಟ್ಟ ; ಮೇಘದೂತ - ಒಂದು ಅವಲೋಕನ, ಚೇತನ ಬುಕ್ ಹೌಸ್, ಚಾಮರಾಜ ಜೋಡಿ ರಸ್ತೆ, ಮೈಸೂರು, ೧೯೯೬.

೧೪೦. ಶ್ರೀಮಾತಾ ಅಮೃತಾನಂದಮಯೀದೇವಿ ; ಪ್ರಕೃತಿ ಮತ್ತು ಮಾನವ, ಮಾತಾ ಅಮೃತನಂದಮಯೀ ಮಿಷನ್ ಟ್ರಸ್ಟ್, ಅಮೃತಪುರಿ, ಕೊಲ್ಲಂ ಪೋಸ್ಟ್, ಕೇರಳ, ೧೯೯೬.

೧೪೧. ಶ್ರೀರಂಗ ; ಮಾನವನ ಮೃತ್ಯು ಪತ್ರ, ಹಂಪ ನಾಗರಾಜಯ್ಯ (ಸಂ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೪.

೧೪೨. ಸತೀಶ್ ಚಪ್ಪರಿಕೆ, ಆ.ನ. ಯಲ್ಲಪ್ಪರೆಡ್ಡಿ ; ಮತ್ತೊಂದು ಮೌನ ಕಣಿವೆ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೭.

೧೪೩. ಸತೀಶ್ ಚಪ್ಪರಿಕೆ (ನಿರೂ), ಆ.ನ. ಯಲ್ಲಪ್ಪರೆಡ್ಡಿ ಆತ್ಮ ಕಥೆ, ಹಸಿರು ಹಾದಿ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯.

೧೪೪. ಸ್ವಾಮಿ ಬಿ.ಜಿ.ಎಲ್. ; ಹಸುರು ಹೊನ್ನು, ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೭೬.

೧೪೫. ಸ್ವಾಮಿ ಶಂಕರಾನಂದ ಸರಸ್ವತಿ ; ರವೀಂದ್ರನಾಥ ಠಾಕೂರ್ ನಿಬಂಧಮಾಲಾ ಭಾಗ ೧, ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೬೬.

೧೪೬. ಸಿದ್ಧವನಹಳ್ಳಿ ಕೃಷ್ಣಶರ್ಮ (ಅನು) ; ಆತ್ಮಕಥೆ ಮತ್ತು ಹಿಂದ್ ಸ್ವರಾಜ್, ಗಾಂಧೀ ಸ್ಮಾರಕ ನಿಧಿ, ೧೯೫೮.

೧೪೭. ಸಿ.ಪಿ.ಕೆ. ; ಕುವೆಂಪು ಸಾಹಿತ್ಯ ಸಂಧಾನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು, ೧೯೯೫.

೧೪೮. ಸಿ.ಪಿ.ಕೆ. (ಸಂ) ; ಆಯ್ದ ಕುವೆಂಪು ಕವನಗಳು, ಬಾಪ್ಕೋ ಪ್ರಕಾಶನ, ಬೆಂಗಳೂರು, ೧೯೮೪.

೧೪೯. -"- ; ಕನ್ನಡ ಚತುರ್ಮುಖಿ, ಸುರುಚಿ ಪ್ರಕಾಶನ, ಮೈಸೂರು, ೧೯೬೫.

೧೫೦. ಸುಂದರಂ ಆರ್.ವಿ.ಎಸ್. (ಪ್ರ.ಸಂ.) ; ಕುವೆಂಪು ಕರ್ನಾಟಕ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು, ೨೦೦೭.

೧೫೧. ಸುಜನಾ ; ಪರಂಪರೆ ಮತ್ತು ಕುವೆಂಪು, ಸಹ್ಯಾದ್ರಿ ಪ್ರಕಾಶನ, ಶ್ರೀ ಕುವೆಂಪು ವಿದ್ಯಾ ಪರಿಷತ್ತು, ಜಯಲಕ್ಷ್ಮೀಪುರಂ, ಮೈಸೂರು, ೧೯೮೪.

೧೫೨. -"- ; ಕುವೆಂಪು, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ. ಕಾಲೇಜು, ಉಡುಪಿ, ೧೯೯೩.

೧೫೩. ಸುಮಿತ್ರಾ ಎಲ್.ಸಿ. ; ಕಾಡು... ಕಡಲು... ಕುವೆಂಪು ಮತ್ತು ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಪ್ರಕೃತಿ, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು, ೨೦೦೨.

೧೫೪. ಸುಬ್ಬಣ್ಣ ಕೆ.ವಿ. ; ಕುವೆಂಪುಗೆ ಪುಟ್ಟ ಕನ್ನಡಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೫.

೧೫೫. ಸೋಮಶೇಖರಗೌಡ ; ಕುವೆಂಪು ; ಅನುಸಂಧಾನ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪.

೧೫೬. ಸೋಮನಾಥಾನಂದ ; ಉಪನಿಷತ್ ಭಾವಧಾರೆ, ಶ್ರೀ ರಾಮಕೃಷ್ಣಾಶ್ರಮ, ಮೈಸೂರು, ೧೯೮೨.

೧೫೭. ಹಂಪನಾ ಮತ್ತು ಕಮಲಾ ಹಂಪನಾ ; ಕನ್ನಡದ ವಿಶ್ವಕವಿ ಕುವೆಂಪು ಮತ್ತು ಗುಜರಾತಿ ಮಹಾಕವಿ ಜೋಷಿ, ಹಿಂದ್ ವಿದ್ಯಾರ್ಥಿ ಯುವಕ ಸಮ್ಮೇಳನ ಪ್ರಕಟಣೆ, ೧೯೬೯.

೧೫೮. ಹನುಮಂತರಾವ್ ಜಿ. ; ವಿಜ್ಞಾನ, ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು, ೧೯೪೬.

೧೫೯. ಚಕ್ಕೆರೆ ಶಿವಶಂಕರ್ (ಸಂ) ; ಸಹ್ಯಾದ್ರಿಯ ಸೂರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, ೨೦೦೪.

೧೬೦. ನಾಯಕ ಹಾ.ಮಾ., ವೆಂಕಟೇಶಮೂರ್ತಿ ಎಂ.ವಿ. (ಸಂ) ; ಕಾದಂಬರಿ ಲೋಕ, ವಿ.ಎಂ. ಇನಾಂದಾರ್ ನೆನಪಿನ ಸಂಪುಟ, ಗೀತಾ ಬುಕ್ ಹೌಸ್, ಪ್ರಕಾಶಕರು, ಮೈಸೂರು, ೧೯೯೦.

೧೬೧. ವಿವಿಧ ಲೇಖಕರು ; ಮಹಾಕವಿ ಪಂಪ ಹಾಗೂ ಅವನ ಕೃತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೬.

೧೬೨. ಸಿ.ಪಿ.ಕೆ. ; ಕುವೆಂಪು ಕಿರಣಗಳು, ಚಿತ್ರಭಾನು ಪ್ರಕಾಶನ, ವಿನಾಯಕ ನಗರ, ಮೈಸೂರು, ೧೯೯೬.

೧೬೩. ಶಂಭಲಿಂಗ ಎಂ., ಶ್ರೀನಿವಾಸ ಜಿ. (ಸಂ) ; ಕನ್ನಡ ಸಾಹಿತ್ಯ : ಕುವೆಂಪು ಸಂಸ್ಕೃತಿ ಚಿಂತನೆ, ಪ್ರಕಾಶಕರು, ಸ್ವಾಯತ್ತ ಯುವರಾಜ ಕಾಲೇಜು, ಮೈಸೂರು,೨೦೦೬.

1. Brian Baxter : Ecologism an Introduction, Edinburgh University Press, 1999.
2. Campbell Creighton H. (Translation) ; Philosophy and the Ecological Problems of Civilisation, Progress Publishers, Moscow, 1983.
3. Christopher Key Chapple, Mary Evelyn Tucker ; (Ed) Hinduism and Ecology - The Intersection of Earth, Sky and Water, Oxford University Press, New Delhi, 2001.
4. David W. Orr ; The Nature of Design, Oxford University Press, 2002.
5. Engels Frederick ; Dialectics of Nature, Progress Publishers, Moscow, 1974.
6. Ernest Callen Bach ; Ecology A Pocket Guide, University Press, 1999.
7. Eugene P. Odum ; Ecology : The Link Between the Natural and the Social Sciences, Pearl Offset Press, New Delhi, 1978.
8. Fabian A.C. ; Evolution SOciety, Science and the Universe, Cambridge University Press, U.K., 1998.
9. Frank Kermode ; Romantic Image, Routledge Classics, London and Newyork, 2002.
10. George Sessions (Ed) ; Deep Ecology for the Twenty - First Century, Shambala, Boston and Londan, 1995.
11. Greg Garrard ; Ecocriticism, Routledge, London and Newyork, 2007.
12. Ian Hodge ; Environmental Economics, Macmillan Press Limited, London, 1995.
13. Jean - Jacques Rousseau ; The Confessions, Translator J.M. Cohen, Penguin Books, London, 1953.
14. Joe Moran ; Interdisciplinarity, Routledge, London and Newyork, 2002.
15. Jonathan Bate ; Romantic Ecology Wordsworth and the Environmental Tradition, Published in the USA and Canada by Routledge, 1991.
16. Joy A. Palmer (Ed) ; Fifty Great Thinkers on the Environment, Routledge, London and Newyork, 2004.
17. Kathleen Raine ; Blake and Antiquity Routledge Classics, London and Newyork, 2002.
18. Kathleen Raine ; Coleridge Poems and Prose (Selection), Penguin Books, Great Britain, 1957.
19. Kenneth Clark ; Ruskin Today, Penguin Books, London, 1964.
20. Laptev, I ; The World of Man in the World of Nature, Progress Publishers, 1979.
21. Madhav Gadgil, Ramachandra Guha ; The use and Abuse of Nature, Oxford University Press, New Delhi, 2000.
22. Manuel C. Molles, Jr ; Ecology Concepts and Applications, Univesity of New Mexico, 1999.

23. Martin Walters, Merilyn Holme ; Dictionary of Ecology and Plant life, Claremont Books, London, 1995.

24. Michael Bright ; Unlocking Nature's Secrets, Ariel Books, British Broad Casting Corporation, 1984.

25. Rachel Carson ; Silent Spring, Penguin Books, 2000.

26. Ramachandra Guha ; Environmentalism, Oxford University Press, 2000.

27. Ramachandra Guha (Ed) ; Social Ecology, Oxford University Press, 1994.

28. Rene Wellek Kenneth Dougles (Ed) ; World Master Pieces, W.W. Norton & Company, Newyork, 1973.

29. Richard J. Ordway ; Earth Science and the Environment, D. Van Nostrand Company, Newyork, 1974.

30. Robert Kimbrough ; Joseph Conrad Heart of Darkness, W.W. Norton and Company, Newyork, London, 1988.

31. Romila Thapar ; Sakuntala Texts, Readings, Histories, Kali for Women, New Delhi, 2000.

32. Samir Okasha ; Philosophy of Science A Very Short Introduction, Oxford University Press, United States, 2002.

33. Susan D. Lanier - Graham ; The Ecology of war, Walker and Company, Newyork, 1993.

34. Terry Gifford ; Green Voices, Understanding Contemporary Nature Poetry, Manchester University Press, 1995.

35. Vandana Shiva ; Water Wars Privatization, Pollution and Profit, Indian Research Press, New Delhi, 2002.

36. Vandana Shiva & Maria Mies ; Ecofeminism, Fernwood Publications, Halifox, Nova Scotia, 1993.

37. Vandana Shiva (Ed) ; Minding our lives, Kali for Women, New Delhi, 1993.

38. Walter J.A. ; The Human Home, Lion Publishing, England, 1982.

39. William J. Claxton ; Workers in Nature's Workshop, Tumbull and Spears, Printers, Edinburgh, 1913.

40. Williams Raymond ; The Country and the City Granade Publishing Limited, Great Britain, 1975.

41. Williams Raymond ; Keywords - A Vocabulary of Culture and Society, Fontana Press, 1976.

42. Wordsworth William ; The Prelude 1799, 1805, 1850, W.W. Norton and Company, Newyork, London, 2002.